ಮಲ್ಲರಸ ವಿರಚಿತ

ದಶಾವತಾರ ಚರಿತೆ

ಸಂಪಾದಕರು

ವೈ. ಸಿ. ಭಾನುಮತಿ

ಕನ್ನಡ ಅಧ್ಯಯನ ಸಂಸ್ಥೆ : : ಮೈಸೂರು ವಿಶ್ವವಿದ್ಯಾನಿಲಯ




275
580020

ಮಲ್ಲರಸ ವಿರಚಿತ

ದಶಾವತಾರ ಚರಿತೆ

ಸಂಪಾದಕರು

ವೈ. ಸಿ. ಭಾನುಮತಿ

ಕನ್ನಡ ಅಧ್ಯಯನ ಸಂಸ್ಥೆ

ಮೈಸೂರು ವಿಶ್ವವಿದ್ಯಾನಿಲಯ

1978

DASAVATARA CARITE by Mallarasa; edited by Y. C. Bhanumathi; published by The Institute of Kannada Studies, University of Mysore, Manasa Gangotri, Mysore-570 006. First edition 1978; Pp xxxviii + 299

All Rights Reserved

ಬೆಲೆ: ರೂ. 12-00

ಪ್ರಕಾಶಕರು: ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು- 570 006

ಮುದ್ರಣ: ಶ್ರೀ ರಾಘವೇಂದ್ರ ಪ್ರಿಂಟರ್ಸ್, ವಿ. ವಿ. ಮಾರ್ಕೆಟ್, ಮೈಸೂರು-570 004

ಮುನ್ನುಡಿ

ಕನ್ನಡ ಅಧ್ಯಯನಕ್ಕೆ ಸಂಬಂಧಪಟ್ಟ ಚಟುವಟಿಕೆಗಳೆಲ್ಲವನ್ನೂ ಕೇಂದ್ರೀಕರಿಸುವ ದೃಷ್ಟಿಯಿಂದ ೧೯೬೬ರ ಕೊನೆಯಲ್ಲಿ ಪ್ರಾಚ್ಯ ಸಂಶೋಧನಾಲಯದ ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಳಿಸಲಾಯಿತು. ಅಂದಿನಿಂದ ಈ ವಿಭಾಗವನ್ನು ಅಧ್ಯಯನ ಸಂಸ್ಥೆಯ 'ಸಂಪಾದನ ವಿಭಾಗ'ವೆಂದು ಹೆಸರಿಸಲಾಯಿತು. ಕ್ರಿ.ಶ. ೧೩೪೨ರಲ್ಲಿ ಪ್ರತಿಮಾಡಲಾಗಿರುವ ಹಾಗೂ ಅತ್ಯಂತ ಪ್ರಾಚೀನ ಉಪಲಬ್ಧ ಹಸ್ತಪ್ರತಿಯಾಗಿರುವ ರನ್ನನ ' ಗದಾಯುದ್ಧ 'ದ ಹಸ್ತಪ್ರತಿಯಿಂದ ಹಿಡಿದು ೧೮೫೦ ರಲ್ಲಿ ಪ್ರತಿಮಾಡಲಾಗಿರುವ ' ಪ್ರಭಾವತಿ ಪರಿಣಯದ ' ಹಸ್ತಪ್ರತಿಯವರೆಗೆ ಇಂದು ೫೦೦೦ ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಹೊಂದಿರುವ ' ಸಂಪಾದನ ವಿಭಾಗ ' ಅಧ್ಯಯನ ಸಂಸ್ಥೆಯ ಒಂದು ಪ್ರಧಾನ ಅಂಗವಾಗಿದೆ. ಕನ್ನಡ ಭಾಷಾಸಾಹಿತ್ಯಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಕೈಗೊಳ್ಳುವವರಿಗೆ, ಸಂಶೋಧಕರಿಗೆ, ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ ಇದು ಆಕರ ಗ್ರಂಥಗಳ ತವರಾಗಿದೆ, ಪ್ರೇರಣೆಯ ಸ್ರೋತವಾಗಿದೆ.

ಮುದ್ರಣದ ಸೌಲಭ್ಯ ಈಗ್ಗೆ ಕೆಲವು ಶತಮಾನಗಳಿಂದೀಚೆಗೆ, ಮಾನವ ಜನಾಂಗಕ್ಕೆ ದೊರೆತಿರುವ ವರ. ಈ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಓಲೆಗರಿ ಅಥವಾ ತಾಡಪತ್ರದ ಮೇಲೆ ಕಂಠದಿಂದ ಕೊರೆದು, ಅನನ್ಯಶ್ರದ್ಧೆಯಿಂದ ಆ ಸಾಹಿತ್ಯವನ್ನು ಅಭ್ಯಸಿಸಿ, ಅದನ್ನು ಕಾಯ್ದುಕೊಂಡು ಬಂದ ಹಿರಿಯರಿಂದ ಅಂದಿನ ಅಪೂರ್ವಸಾಹಿತ್ಯ ನಮ್ಮ ಸಂಪತ್ತಾಗಿ ಉಳಿದಿದೆ. ತಮಗೆ ಪ್ರಿಯವೆನಿಸಿದ ಸಾಹಿತ್ಯಕೃತಿಗಳನ್ನು ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದು ಆ ಕಾಲದ ಒಂದು ಬಗೆಯ ಹವ್ಯಾಸವೇ ಆಗಿತ್ತು. ಈ ಕಾರಣದಿಂದಾಗಿಯೇ, ಓಲೆಗರಿಯ ಒಂದು ಸಂಪುಟದಲ್ಲಿಯೇ ಅನೇಕ ಗ್ರಂಥಗಳನ್ನು, ಗ್ರಂಥಭಾಗಗಳನ್ನು ಪ್ರತಿಲಿಪೀಕರಿಸಿರುವುದನ್ನು ಕಾಣುತ್ತೇವೆ. ಹಸ್ತಪ್ರತಿಗಳ ಅನೇಕ ಪ್ರತಿಗಳನ್ನು ಸಿದ್ಧಪಡಿಸಿ ಹಂಚುವುದನ್ನು ಪುಣ್ಯಕಾರ್ಯವೆಂದು ಬಗೆದು ಆ ರೀತಿ ಮಾಡುತ್ತಿದ್ದುದಕ್ಕೂ ಉದಾಹರಣೆಗಳಿವೆ. ಪ್ರತಿಲಿಪೀಕರಣ ಹಲವರಿಗೆ ಜೀವನೋಪಾಯದ ಸಾಧನವಾಗಿಯೂ ಇತ್ತು. ಹಸ್ತಪ್ರತಿಗಳನ್ನು ಸುಂದರ ಸಂದರ್ಭೋಚಿತ ಚಿತ್ರಗಳಿಂದ ಅಲಂಕರಿಸುವ ವಾಡಿಕೆಯೂ ಇತ್ತು. ಇವು ನಮ್ಮ ಜನಗಳ ಸಾಹಿತ್ಯ-ಶಾಸ್ತ್ರ-ಕಲಾಭಿರುಚಿಯ ಪ್ರತೀಕವಾಗಿವೆ.

ಸಂಸ್ಕೃತಿ, ಇತಿಹಾಸ, ಭಾಷಾಚರಿತ್ರೆ—ಇವುಗಳ ಸಮಗ್ರ ಅರಿವಿಗೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯ ಅತ್ಯಾವಶ್ಯಕ. ಅಷ್ಟೇ ಅಲ್ಲ, ಕೋಶ ಅಥವಾ ನಿಘಂಟುಗಳ ರಚನೆಗೆ, ಅವುಗಳ ಮೂಲಘಟಕಗಳಾದ ಶಬ್ದಗಳ ಅರ್ಥನಿರ್ಧಾರಕ್ಕೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯಕೃತಿಗಳು ಅನಿವಾರ್ಯವಾಗುತ್ತವೆ. ಸಾಂಸ್ಕೃತಿಕ ಮತ್ತು ಐತಿಹಾಸಿಕ ಪುನರ್ರಚನೆಗೆ ಅಗತ್ಯವಾದ ಅನೇಕ ಗ್ರಂಥಗಳು ಇಂದಿಗೂ ಅನುಪಲಬ್ಧ

ವಾಗಿವೆ. ಶಾಸನಗಳಲ್ಲಿ, ಅನ್ಯಕವಿಗಳ ಕೃತಿಗಳಲ್ಲಿ ಉಕ್ತವಾಗಿರುವುದರಿಂದ ಮಾತ್ರ ಹಲವು ಕವಿಗಳ ಮತ್ತು ಗ್ರಂಥಗಳ ಹೆಸರುಗಳು ತಿಳಿದುಬರುತ್ತವೆ. 'ಕಾವ್ಯಪ್ರಯೋಗಪರಿಣತ ಮತಿ'ಗಳಾಗಿದ್ದ ಕನ್ನಡ ಜನತೆಯ ಬಳಿ ಒಂದು ಕಾಲದಲ್ಲಿ ಇವೆಲ್ಲ ಲಭ್ಯವಾಗಿದ್ದಿರಬೇಕು. ನಾಡಿನ ಹಲವೆಡೆಗಳಲ್ಲಿ ಓಲೆಗರಿಯ ಸಾಹಿತ್ಯ ಅನೇಕ ಶತಮಾನಗಳವರೆಗೆ ತನ್ನ ವೈಭವವನ್ನು ಮೆರೆದಿತ್ತು. ಕಾವ್ಯಪಾರಾಯಣ ಸಾಂಸ್ಕೃತಿಕ ಜೀವನದ ಅಂಗವಾಗಿ ಪರಿಣಮಿಸಿತ್ತು. ಕಾಲಕ್ರಮದಲ್ಲಿ ದೇಶ ಕಾಲ ಪರಿಸರಗಳ ಪ್ರಭಾವದಿಂದ, ಜನತೆಯ ಅಜ್ಞಾನ, ಅಶ್ರದ್ಧೆ ಮತ್ತು ಔದಾಸೀನ್ಯಗಳ ಫಲವಾಗಿ ಅವು ಮೂಲೆಗುಂಪಾಗುತ್ತ ಬಂದು ಕೀಟಗಳಿಗೆ ಆಹಾರವಾಗತೊಡಗಿದವು. ಅವುಗಳನ್ನು ಸಂರಕ್ಷಿಸಲಾರದೆ ನದಿಯ ಪಾಲೋ ಬೆಂಕಿಯ ಪಾಲೋ ಮಾಡುತ್ತಿದ್ದ ಉದಾಹರಣೆಗಳೂ ಅಸಂಖ್ಯವಾಗಿವೆ. ಮತ್ತೆ ಕೆಲವೆಡೆಗಳಲ್ಲಿ ನವರಾತ್ರಿಯೆಂದು ಬೆಳಕುಕಂಡು, ಪೂಜಾರ್ಹವಾಗಿ, ಹಾಲುಂಡು ಮತ್ತೆ ಕತ್ತಲಕೋಣೆಯ ಮೂಲೆ ಸೇರಬೇಕಾದ ದುಃಸ್ಥಿತಿ ಒದಗಿ ಹಲವಾರು ಅಮೂಲ್ಯ ಪ್ರತಿಗಳು ತ್ರುಟಿತವಾಗಿ ಹೋಗಿವೆ. ಇಂಥ ಮೌಢ್ಯವನ್ನು ದೂರಮಾಡಿ ಹಸ್ತಪ್ರತಿಗಳನ್ನು ಹೊರಗೆಳೆದು, ಅವುಗಳನ್ನು ಕೊಂಡು ಇಲ್ಲವೆ ಎರವಲಾಗಿ ಪಡೆದು, ಪರಿಷ್ಕರಿಸಿ ಸಂಪಾದಿಸುವ ಹೊಣೆಯನ್ನು ಹೊತ್ತಿದೆ ಈ ಸಂಸ್ಥೆಯ ಸಂಪಾದನ ವಿಭಾಗ.

ಅನುಪಲಬ್ಧವಾಗಿರುವ ಸಾಹಿತ್ಯರಾಶಿಯನ್ನು ಹೊರತರಲು, ಉಪಲಬ್ಧ ಸಾಹಿತ್ಯಕ್ಕೆ ಪರಿಷ್ಕಾರನೀಡಲು ಹಸ್ತಪ್ರತಿಗಳ ಸಂಗ್ರಹಕಾರ್ಯ ಸತತವಾಗಿ ನಡೆಯಬೇಕಾಗಿದೆ. ಸಾಹಿತ್ಯಕ ಚಟುವಟಿಕೆಯ ಕೇಂದ್ರಗಳಾಗಿದ್ದ ಎಡೆಗಳಲ್ಲಿ, ಕವಿಗಳ ಕೀರ್ತಿ ಹರಡಿದ್ದ ಪ್ರದೇಶಗಳಲ್ಲಿ, ಜ್ಞಾನಗಂಗೆಯನ್ನು ಮನೆಮನೆಯ ಬಾಗಿಲಿಗೆ ಕೊಂಡೊಯ್ದು ಶಿವಶರಣರು ಮತ್ತು ದಾಸರುಗಳು ಸಂಚರಿಸುತ್ತಿದ್ದ ಸ್ಥಳಗಳಲ್ಲಿ, ಅವರ ನೆನಪಿಗಾಗಿ ಮಠಗಳು, ಸ್ಮಾರಕಗಳು ನಿರ್ಮಿತವಾಗಿರುವ ಕಡೆಗಳಲ್ಲಿ, ಅನುಯಾಯಿಗಳ ಮತ್ತು ಭಕ್ತರ ಮನೆಗಳಲ್ಲಿ, ಸಾಹಿತ್ಯೋಪಾಸಕರ ಬಳಿಯಲ್ಲಿ ಹೇಗೋ ಎಂತೋ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ರಕ್ಷಿಸಬೇಕಾಗಿದೆ. ಈ ಸಂಸ್ಥೆಯ ಹಸ್ತಪ್ರತಿಯ ಭಂಡಾರವನ್ನು ಈ ದೃಷ್ಟಿಯಿಂದ ಬೆಳೆಸಿಕೊಂಡು ಬರುವತ್ತ ಆದ್ಯಗಮನ ಕೊಡಲಾಗಿದೆ.

ಸಂಗ್ರಹಿಸಿದ ಪ್ರತಿಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುವುದೂ ಅತ್ಯಂತ ಮುಖ್ಯವಾದ ಹೊಣೆ. ಕೀಟಗಳ ಹಾವಳಿಗೆ ಸಿಕ್ಕಿ ಪ್ರತಿಗಳು ಶಿಥಿಲವಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಸಾಧ್ಯವಾದಷ್ಟು ಸಲ ಅವುಗಳನ್ನು ಸ್ವಚ್ಛಗೊಳಿಸುವುದು, ಕೀಟನಿರೋಧಕತೈಲ ಲೇಪನಮಾಡುವುದು, ಮಯುನಿಯಂತ್ರಿತ ಕೊಠಡಿಯಲ್ಲಿಟ್ಟು ಪ್ರಧೂಮನ ಉಪಚಾರ ನೀಡುವುದು (fumigation treatment), ತೀರ ತ್ರುಟಿತವಾದ ಹಸ್ತಪ್ರತಿಗಳನ್ನು ಮೈಕ್ರೊಫಿಲಂಗಳಲ್ಲಿ ಶಾಶ್ವತಗೊಳಿಸುವುದು ಅಗತ್ಯವಾಗುತ್ತದೆ. ಈ ರೀತಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರುವುದು ವ್ಯಕ್ತಿಗಳಿಗೆ ಶ್ರಮಸಾಧ್ಯವಾದ ಹಾಗೂ ಆರ್ಥಿಕವಾಗಿ ಸುಲಭಸಾಧ್ಯವಲ್ಲದ ಕಾರ್ಯ. ಕನ್ನಡ

ಅಧ್ಯಯನ ಸಂಸ್ಥೆ ಹಸ್ತಪ್ರತಿಗಳ ಸಂರಕ್ಷಣೆಗೆ ಅಗತ್ಯವಾದ ಮೇಲ್ಕಂಡ ಎಲ್ಲ ಕ್ರಮಗಳನ್ನೂ ಕೈಗೊಂಡಿದೆ.

ಗ್ರಂಥಸಂಪಾದನೆ ಶ್ರಮಸಾಧ್ಯವಾದ ಕಾರ್ಯ. ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆ ಮೇಳವಿಸಿರುವ ಸಮರ್ಥರು ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯದಲ್ಲಿ ಹಲವಾರು ಭಾಷೆಗಳ, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಹಸ್ತಪ್ರತಿಗಳೂ ಕಾಲ, ದೇಶ ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾಭ್ಯಾಸಿಗಳು ಹಸ್ತಪ್ರತಿಗಳ ಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದುಬಿಡುತ್ತಿದ್ದುದೂ ಉಂಟು. ಕಾಲಕ್ರಮದಲ್ಲಿ ಅವು ಮೂಲದ ಅಂಗವೋ ಎಂಬಂತೆ ಸೇರಿಬಿಡುತ್ತಿದ್ದುದೂ ಸಹಜವೇ. ಪ್ರತಿಭಾವಂತರೂ ವ್ಯುತ್ಪನ್ನಮತಿಗಳೂ ಕಾವ್ಯರಚನಾಸಮರ್ಥರೂ ಮೂಲವನ್ನು ಕೆಲವು ವೇಳೆ ಉತ್ತಮಪಡಿಸಿ, ಕೆಲವು ವೇಳೆ ಕೆಡಿಸಿ, ಅರ್ಥಸೌಲಭ್ಯಕ್ಕಾಗಿ ಅರ್ಥವಾಗುವಂತಹ ಪಾಠಾಂತರಗಳನ್ನು ಕಲ್ಪಿಸಿ, ಅಲ್ಲಲ್ಲಿ ಮೂಲಧಾಟಿಗೆ ಭಂಗಬರದಂತೆ ತಮ್ಮ ಸ್ವಂತ ರಚನೆಗಳನ್ನು ಪ್ರಕ್ಷೇಪಿಸಿಬಿಟ್ಟಿರುವುದೂ ಉಂಟು. ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ ಸನ್ನಿವೇಶದ ಪ್ರಭಾವವನ್ನು ಹೆಚ್ಚಿಸಿರುವುದೂ ಉಂಟು. (ಒಂದು ವೇಳೆ ವಾಸ್ತವವಾಗಿ ಹಾಗಾಗದಿದ್ದರೂ ಪ್ರಕ್ಷೇಪಕರು ಹಾಗೆ ಭಾವಿಸಿಕೊಂಡದ್ದೂ ತಮ್ಮ ಚಪಲವನ್ನು ತೀರಿಸಿಕೊಂಡದ್ದೂ ಸತ್ಯ!) ; ಒಟ್ಟಿನಲ್ಲಿ ಅನಾವಶ್ಯಕ ವಿಸ್ತರಣಕ್ಕೆ ಕಾರಣವಾಗಿ ಕೃತಿಯ ಗಾತ್ರದ ಹೆಚ್ಚಳಕ್ಕೆ ಮಾತ್ರ ನೆರವಾಗಿರುವುದೂ ಉಂಟು. ಲಿಪಿಕಾರರೂ ಅನೇಕ ವೇಳೆ ತಮಗೆ ಸರಿದೋರಿದಂತೆ ಅಥವಾ ಸೂಕ್ತಕಂಡಂತೆ ಶಬ್ದರೂಪಗಳನ್ನು ಬದಲಾಯಿಸಿ ಅಥವಾ ಬೇರೆ ಶಬ್ದವನ್ನು ತಂದು ಗಿಡಿದು, ತಿಳಿದೋ ತಿಳಿಯದೆಯೋ ಮೂಲಕ್ಕೆ ತಿದ್ದುಪಡಿಗಳನ್ನು ತಂದುಬಿಡುತ್ತಿದ್ದುದುಂಟು. ಇಂತಹ ಅನೇಕ ಕಾರಣಗಳಿಂದಾಗಿ ಒಂದೇ ಕೃತಿಯ ಹಲವು ಪ್ರತಿಗಳಲ್ಲಿ ಪಾಠವ್ಯತ್ಯಾಸಗಳು ಕಂಡುಬರುತ್ತವೆ. ಒಂದೊಂದೇ ಪ್ರತಿಗಳು ದೊರಕಿದ್ದು ಅವೂ ತ್ರುಟಿತವಾಗಿರುವಂತಹ ಸಂದರ್ಭಗಳಲ್ಲಿ ಮೂಲಪ್ರತಿಯ ಪಾಠವನ್ನು ಪುನರ್ರಚಿಸಬೇಕಾಗುತ್ತದೆ. ಇದು ನಿಜಕ್ಕೂ ಪ್ರತಿಭೆಯ ಕೆಲಸವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಪಾದಕನ ಪರೀಕ್ಷೆಯೇ ನಡೆದುಹೋಗುತ್ತದೆ. ವಿದ್ವತ್ತಿನ ಹಿನ್ನೆಲೆಯಲ್ಲಿ ತಾಳ್ಮೆ, ಶ್ರಮಸಹಿಷ್ಣುತೆ ಇಲ್ಲವಾದರೆ ಈ ಕ್ಷೇತ್ರದಲ್ಲಿ ಯಶಸ್ಸು ಪಡೆಯುವುದು ಸಾಧ್ಯವಾಗುವುದಿಲ್ಲ. ಗ್ರಂಥಸಂಪಾದನೆ ಇಂದು ವಿಶಿಷ್ಟ ಶಾಸ್ತ್ರವಾಗಿಯೇ ಬೆಳೆದಿದೆ.

'ಸಂಪಾದನ ವಿಭಾಗ' ಹಲವಾರು ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿ, ಪಾಠಗಳನ್ನು ನಿರ್ಧರಿಸಿ, ಪಾಠಾಂತರಗಳನ್ನು ಒದಗಿಸಿ ವಿಸ್ತಾರವಾದ ಪೀಠಿಕೆಗಳನ್ನು ಬರೆದು, ಕವಿಯ ಕಾಲ, ದೇಶ, ಕೃತಿಗಳ ವಿಚಾರವನ್ನು ಚರ್ಚಿಸಿ, ಅವುಗಳ ಸಾಹಿತ್ಯಿಕ ಮೌಲ್ಯವನ್ನು ಪರಿಶೀಲಿಸಿ, ಅಗತ್ಯವಾದಲ್ಲಿ ಟಿಪ್ಪಣಿ ವ್ಯಾಖ್ಯಾನಗಳನ್ನು ನೀಡಿ, ಕೆಲವು ಸಂದರ್ಭಗಳಲ್ಲಿ ಗದ್ಯಾನುವಾದಗಳನ್ನು ಕೊಟ್ಟು ಅರ್ಥಕೋಶವನ್ನು ಒದಗಿಸಿ ಬೆಳಕಿಗೆ ತರುತ್ತಿದೆ. ಪ್ರಾಚ್ಯವಿದ್ಯಾಸಂಶೋಧನಾಲಯದ ಅಂಗವಾಗಿದ್ದಾಗ ಹೊರತಂದಿರುವ ೪೪ ಗ್ರಂಥಗಳ ಜೊತೆಗೆ ಅಧ್ಯಯನ ಸಂಸ್ಥೆಯಲ್ಲಿ

ಸೇರ್ಪಡೆಯಾದ ಮೇಲೆ 'ಪ್ರಾಚ್ಯಕಾವ್ಯಮಾಲೆ'ಯ ಹೆಸರಿನಲ್ಲಿ ಈಗಾಗಲೇ ೫೩ ಗ್ರಂಥಗಳನ್ನು ಹೊರತರಲಾಗಿದೆ. ಬೆಳಕುಕಾಣಲು ಹಾತೊರೆಯುತ್ತಿರುವ ಗ್ರಂಥಗಳನ್ನು ವ್ಯವಸ್ಥಿತ ರೀತಿಯಲ್ಲಿ ಹೊರತರಲು ಸತತವಾಗಿ ಶ್ರಮಿಸುತ್ತಿದೆ.

ಇದುವರೆಗೂ ಸಂಪಾದನ ವಿಭಾಗದ ಸಂಶೋಧನ ಸಹಾಯಕರು ಸಿದ್ಧಪಡಿಸಿದ್ದ ಕೃತಿಗಳನ್ನು ಮಾತ್ರ ಪ್ರಕಟಿಸಲಾಗುತ್ತಿತ್ತು. ಈಗ ಈ ವಿಭಾಗದಲ್ಲಿ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನುಪಯೋಗಿಸಿಕೊಂಡು ಹೊರಗಿನವರೂ ಸಂಪಾದಿಸಬಹುದಾದ ಗ್ರಂಥಗಳನ್ನು ಪ್ರಕಟಿಸಲು ಯೋಜಿಸಲಾಗಿದೆ. ಇದರಿಂದ ಪ್ರಕಟನೆಯ ಕೆಲಸ ತ್ವರಿತಗೊಳ್ಳುತ್ತದೆ. ಹಸ್ತಪ್ರತಿಗಳಲ್ಲೇ ಉಳಿದು ಸಾಮಾನ್ಯರ ಕೈಗೆಟುಕದ ಗ್ರಂಥಗಳನ್ನು ಸರ್ವರ ಸ್ವತ್ತಾಗಿಸುವ ಉದ್ದೇಶವೂ ತೀವ್ರಗೊಳ್ಳುತ್ತದೆ.

ಸಂಪಾದನ ವಿಭಾಗ ಸಂಕಲಿತ ಗ್ರಂಥಗಳನ್ನು ಹೊರತರುವಲ್ಲಿಯೂ ನಮಗೆ ನೆರವಾಗುತ್ತಿದೆ. ಎರಡು ಸಾವಿರ ವರ್ಷಗಳ ಸುದೀರ್ಘ ಪರಂಪರೆಯುಳ್ಳ ಕನ್ನಡ ಸಾಹಿತ್ಯದ ಸಿಂಹಾವಲೋಕನ ಮಾಡಿಸುವಂತಹ ಪ್ರಾತಿನಿಧಿಕ ಸಂಕಲನ ಗ್ರಂಥಗಳನ್ನು ಸಿದ್ಧಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲಾಗುತ್ತಿರುವ ಈ ಗ್ರಂಥಗಳು ಆಯಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಕನ್ನಡ ಸಾಹಿತ್ಯದ ಪರಿಚಯವನ್ನು ಬಯಸುವವರಿಗೂ ಉಪಯುಕ್ತವಾಗುತ್ತವೆ. ಇಂಥ ಸಂಕಲನಗಳನ್ನು ಸಿದ್ಧಪಡಿಸುವುದೂ ಸಂಪಾದನ ವಿಭಾಗದ ಒಂದು ಪ್ರಮುಖ ಹೊಣೆಯಾಗಿದೆ.

ಸಂಪಾದನ ವಿಭಾಗದ ಉಪನಿರ್ದೇಶಕರಾದ ಶ್ರೀ ಎನ್. ಬಸವಾರಾಧ್ಯ ಅವರ ನಿರ್ದೇಶನದಲ್ಲಿ ಅದೇ ವಿಭಾಗದಲ್ಲಿ ಸಂಶೋಧನ ಸಹಾಯಕರಾಗಿರುವ ಶ್ರೀಮತಿ ವೈ. ಸಿ. ಭಾನುಮತಿ ಅವರು ಮಲ್ಲರಸನ 'ದಶಾವತಾರ ಚರಿತೆ'ಯನ್ನು ಸಂಪಾದಿಸಿಕೊಟ್ಟಿದ್ದಾರೆ. ಅವರಿಗೂ, ಇದರ ಪ್ರಕಟನೆಯಲ್ಲಿ ಸಹಕರಿಸಿರುವ ಶ್ರೀ ಬಸವಾರಾಧ್ಯರಿಗೂ ನನ್ನ ವಂದನೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–6

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ವಿಭಾಗ ಸಂಪಾದಕರ ಮಾತು

ಅವತಾರಗಳ ಕಲ್ಪನೆ ಭರತಖಂಡದಲ್ಲಿ ಅನಾದಿಕಾಲದಿಂದಲೂ ಪ್ರಚಲಿತವಾಗಿದೆ. ರಾಮಾಯಣ ಭಾರತ ಭಾಗವತ ಮೊದಲಾದ ಗ್ರಂಥಗಳಿಗೆ ತೋರುವ ಭಕ್ತಿ ಶ್ರದ್ಧೆ ಗೌರವಗಳನ್ನು ಈ ಅವತಾರಗಳನ್ನು ನಿರೂಪಿಸುವ ಕೃತಿಗಳಿಗೂ ತೋರಲಾಗುತ್ತಿದೆ. ಭಾರತೀಯರ ಮನೋಭಾವದಲ್ಲಿ ಈ ಅವತಾರಗಳ ಕಲ್ಪನೆ ರೂಢಮೂಲವಾಗಿಬಿಟ್ಟಿದೆ. ಇಂದಿಗೂ ಕೂಡ ಯಾರಲ್ಲಾದರೂ ವಿಶೇಷವಾದ ದೈವೀಗುಣಗಳನ್ನು ಕಂಡರೆ ಅವರನ್ನು ಅವತಾರಪುರುಷರೆಂದೇ ನಮ್ಮ ಜನ ನಂಬುತ್ತಾರೆ.

ಅವತಾರ ಎಂದರೆ ಜಗತ್ತಿನ ಕಲ್ಯಾಣಕ್ಕಾಗಿ ದೇವತೆಗಳು ಭೂಮಿಯಲ್ಲಿ ಹುಟ್ಟುವುದು ಎಂದರ್ಥ. ನಿಗೂಢವೂ ಅವ್ಯಕ್ತವೂ ಆಗಿದ್ದುದು ವ್ಯಕ್ತವಾಗುವುದು ಅವತಾರ. ಲೋಕದಲ್ಲಿ ಧರ್ಮಕ್ಕೆ ಗ್ಲಾನಿಯುಂಟಾದಾಗ ಅಧರ್ಮ ತಾನೇತಾನಾಗಿ ಬೆಳೆದುನಿಂತಾಗ ಸಾಧುಸಜ್ಜನರನ್ನು ಕಾಪಾಡುವುದಕ್ಕಾಗಿಯೂ ಧರ್ಮವನ್ನು ಪುನರುಜ್ಜೀವನಗೊಳಿಸುವುದಕ್ಕಾಗಿಯೂ ಭಗವಂತನು ಭೂಲೋಕದಲ್ಲಿ ಅವತರಿಸುತ್ತಾನೆ. ದುಷ್ಕರ್ಮಗಳನ್ನು ನಿರ್ಮೂಲನಮಾಡಿ ಧರ್ಮಸಂಸ್ಥಾಪನೆ ಮಾಡುತ್ತಾನೆ. ಇದನ್ನೇ ಭಗವದ್ಗೀತೆ ಈ ರೀತಿ ಸಾರುತ್ತಿದೆ.

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಅವತಾರಗಳಲ್ಲಿ ದಶಾವತಾರಗಳು ಅತ್ಯಂತ ಪ್ರಖ್ಯಾತವೂ ಸಾರ್ವತ್ರಿಕವೂ ಪ್ರಚಲಿತವೂ ಆಗಿವೆ. ಇವು (1) ಮತ್ಸ್ಯ (2) ಕೂರ್ಮ (3) ವರಾಹ (4) ನೃಸಿಂಹ (5) ವಾಮನ (6) ಜಾಮದಗ್ನ್ಯ (7) ರಾಮ (8) ಕೃಷ್ಣ (9) ಬುದ್ಧ (10) ಕಲ್ಕಿ. ಈ ಎಲ್ಲ ಅವತಾರಗಳ ಒಂದು ಸುಂದರ ನಿರೂಪಣೆ ಜಯದೇವ ಕವಿಯ ಈ ಶ್ಲೋಕದಲ್ಲಿ ಪ್ರತಿಪಾದಿತವಾಗಿದೆ.

ವೇದಾನುದ್ಧರತೇ ಜಗನ್ನಿವಹತೇ ಭೂಗೋಲಮುದ್ಬಿಭ್ರತೇ ।
ದೈತ್ಯಂ ದಾರಯತೇ ಬಲಿಂ ಛಲಯತೇ ಕ್ಷತ್ರಕ್ಷಯಂ ಕುರ್ವತೇ ॥
ಪೌಲಸ್ತ್ಯಂ ಜಯತೇ ಹಲಂ ಕಲಯತೇ ಕಾರುಣ್ಯಮಾತನ್ವತೇ ।
ಮ್ಲೇಚ್ಛಾನ್ ಮೂರ್ಛಯತೇ ದಶಾಕೃತಿಕೃತೇ ಕೃಷ್ಣಾಯ ತುಭ್ಯಂ ನಮಃ ॥

ಲೋಕಕಲ್ಯಾಣಾರ್ಥವಾಗಿ ಭಗವಂತ ಕೇವಲ ಮಾನವರೂಪದಲ್ಲಿಯೋ ಅಲ್ಲದೆ ಬೇರೆ ಬೇರೆ ರೂಪಗಳಲ್ಲಿಯೂ ಅವತರಿಸುತ್ತಾನೆ ಎಂಬುದು ಮೇಲಿನ ಶ್ಲೋಕದಿಂದ ವ್ಯಕ್ತವಾಗುತ್ತದೆ. ಒಟ್ಟಿನಲ್ಲಿ ದುಷ್ಟಶಿಕ್ಷಣ ಶಿಷ್ಟಸಂರಕ್ಷಣಾರ್ಥವಾಗಿ ದೇವರು

ಆಗಿಂದಾಗ್ಗೆ ಭೂಲೋಕದಲ್ಲಿ ಒಂದಲ್ಲಒಂದು ರೂಪಿನಿಂದ ಹುಟ್ಟಬರುತ್ತಾನೆ. ಈ ಕಲ್ಪನೆಯಲ್ಲಿ ನಮ್ಮ ಜನಕ್ಕೆ ಇರುವ ಗಾಢವಾದ ನಂಬಿಕೆಯೇ ಇಂದಿಗೂ ಇದರ ಜೀವಂತತೆಗೆ ಸಾಕ್ಷಿಯಾಗಿದೆ.

ದಶಾವತಾರಗಳ ಪರಿಕಲ್ಪನೆಗಳನ್ನು ಕುರಿತು ಹಲವಾರು ಕೃತಿಗಳು ಭಾರತೀಯ ಭಾಷೆಗಳಲ್ಲಿ ರಚಿತವಾಗಿವೆ. ಕನ್ನಡದಲ್ಲಿ ಇಡಿಯಾಗಿ ದಶಾವತಾರ ಚರಿತೆಯನ್ನು ಕಾವ್ಯರೂಪದಲ್ಲಿ ಬರೆದವರಲ್ಲಿ ಪ್ರಸ್ತುತ ಕಾವ್ಯದ ಮಲ್ಲರಸನೇ ಮೊದಲಿಗನೆನ್ನಬಹುದು. ಮಲ್ಲರಸನ ಈ ಚಂಪೂಕಾವ್ಯದಲ್ಲಿ 11 ಆಶ್ವಾಸಗಳೂ 1179 ಪದ್ಯಗಳೂ ಇವೆ. ಈತನು ತನ್ನ ಪ್ರವರವನ್ನು ತಾನೇ ಹೇಳಿಕೊಂಡಿದ್ದಾನೆ: "ದ್ವಿಜವಂಶವಾರ್ಧಿವರ್ಧನ ಸಂಪೂರ್ಣಚಂದ್ರಮುಂ,ನಿರ್ಮಲಕಮ್ಮೆವಂಶಮಹಾಸೌಧರತ್ನಕಲಶನುಂ ಶ್ರೀವತ್ಸ ಗೋತ್ರ ಪವಿತ್ರಚರಿತ್ರನುಂ ತಿಮ್ಮರಸಮಂತ್ರಿಯುದರಾಬ್ಧಿ ಸುಧಾಸ್ವರೂಪನುಂ ತಿಪ್ಪಾಂಬಿಕಾ ಪುಣ್ಯೋದರಸಂಭವನುಂ ಗುರುಸದಾನಂದಪಾದಾರವಿಂದಮಕರಂದ ಷಟ್ಚರಣನುಂ ವಿದ್ವಜ್ಜನಬಂಧುವೆನಿಪ್ಪ,ನಾರವಂಗಲದ ಮಲ್ಲರಸಾಂಕನೊಪ್ಪುತಿರ್ದಂ"

ಪ್ರಾಚೀನ ಕವಿಮಾರ್ಗಪರಂಪರೆಯಲ್ಲಿ ಅಪರಿಮಿತಶ್ರದ್ಧೆ ಭಕ್ತಿ ಗೌರವಗಳನ್ನುಳ್ಳ ಮಲ್ಲರಸ ಒಬ್ಬ ಮಿಗಿಲಾದ ಭಕ್ತಕವಿ. ಶ್ರೀಕೃಷ್ಣಚರಿತೆಯನ್ನು ಹಾಡಿ ಹೊಗಳಿ ಈತನು ಕೃತಾರ್ಥನಾಗಿದ್ದಾನೆ. ಅದನ್ನೇ:

ಕಾರುಣ್ಯಮೂರ್ತಿ ಕೃಷ್ಣನ
ಚಾರಿತ್ರಮೆನಲ್ಕೆ ಮೆಚ್ಚಿ ಕೈಕೊಳ್ಳದರಾರ್
ಚಾರುತರ ಕುಸುಮಕೋಸುಗ
ನಾರಂ ಪಿಡಿವಂತಿರೆನ್ನ ಕೃತಿ ಸಲದಿಹುದೇ

ಎಂದು ಹೇಳಿದ್ದಾನೆ. ಹದಿನೇಳನೆಯ ಶತಮಾನದ ಚಂಪೂಕವಿಗಳಲ್ಲಿ ಮಲ್ಲರಸನೂ ಹೆಸರಿಸತಕ್ಕವನು. ಈತನ ಕಾವ್ಯರಚನಾಶಕ್ತಿ ಸಾಮರ್ಥ್ಯಗಳು ಏಕೈಕಕೃತಿಯಾದ ದಶಾವತಾರ ಚರಿತೆಯಲ್ಲಿ ಪ್ರಕರ್ಷಗೊಂಡಿವೆ. ಈ ಅಪ್ರಕಟಿತ ಕೃತಿಯು ಪ್ರಕಟನೆಯಿಂದ ಕನ್ನಡ ಸಾಹಿತ್ಯಪ್ರಿಯರಿಗೂ ಭಕ್ತಸಮೂಹಕ್ಕೂ ಪ್ರಯೋಜನವಾಗಬಹುವೆಂದು ಆಶಿಸಲಾಗಿದೆ.

ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
ತಾ|| 15-3-1978

ಎಸ್. ಬಸವಾರಾಧ್ಯ
ವಿಭಾಗ ಸಂಪಾದಕ

ವಿಷಯಾನುಕ್ರಮಣಿಕೆ

ಪ್ರಸ್ತಾವನೆ

ಪರಿತ್ರಾಣಾಯ ಸಾಧೂನಾಂ । ವಿನಾಶಾಯ ಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ । ಸಂಭವಾಮಿ ಯುಗೇ ಯುಗೇ

ಭಗವದ್ಗೀತೆಯ ಈ ಶ್ಲೋಕದಂತೆ ಮಾನವನ ಉದ್ಧಾರಕ್ಕಾಗಿ ಭಗವಂತನು ವಿವಿಧ ರೂಪಗಳನ್ನು ಧರಿಸಿ ಮಾನವಲೋಕಕ್ಕೆ ಬರುವುದು ಅವತಾರವೆನಿಸಿಕೊಳ್ಳುತ್ತದೆ. ಇಂಥ ಅವತಾರಗಳ ಸಂಖ್ಯೆ ಎಣಿಕೆಗೆ ಮೀರಿದ್ದು. ಆದ್ದರಿಂದ ಅವತಾರಗಳು ಅನಂತವೆಂದು ಹೇಳುತ್ತಾರೆ. ವಿಶ್ವದ ಎಲ್ಲ ಜನಾಂಗದಲ್ಲಿಯೂ ಎಲ್ಲ ದೇಶದಲ್ಲಿಯೂ ಈ ಅವತಾರಗಳ ಕಲ್ಪನೆ ಕಂಡುಬರುತ್ತದೆ*. ಆದರೆ ಧರ್ಮದ ಆಧಾರದ ಮೇಲೆ ಅವತಾರಪುರುಷರು ಭಿನ್ನರಾಗುತ್ತಾರೆ. ವೈಷ್ಣವರಿಗೆ ವಿಷ್ಣು ಅವತಾರಪುರುಷನಾದರೆ ಶೈವರಿಗೆ ಶಿವ ಹಾಗೂ ಕ್ರೈಸ್ತರಿಗೆ ಕ್ರಿಸ್ತ ಅವತಾರಪುರುಷರಾಗುತ್ತಾರೆ. ವಿಷ್ಣುವಿನ ಅವತಾರವಾದ ಕೃಷ್ಣನ ಲೀಲೆಗಳಿಗೆ ಸಂವಾದಿಯಾಗಿರುವ ಲೀಲೆಗಳು ಕ್ರೈಸ್ತರಲ್ಲಿಯೂ ಇರುವುದನ್ನು ಗಮನಿಸಿದಾಗ ಎಲ್ಲ ಅವತಾರಗಳ ಅಂತರ್ಯ ಒಂದೇ ಎಂಬುದು ಅರಿವಾಗುತ್ತದೆ. ಪ್ರಸ್ತುತ ದಶಾವತಾರ ಚರಿತೆ ವಿಷ್ಣುವಿನ ಹತ್ತು ಅವತಾರಗಳನ್ನು ತಿಳಿಸುವ ಒಂದು ಕಾವ್ಯ.

ಕವಿ ಕಾಲವಿಚಾರ

ದಶಾವತಾರ ಚರಿತೆಯ ಕರ್ತೃ ಮಲ್ಲರಸ. ಈತ ಭಾಗವತ ಸಂಪ್ರದಾಯಕ್ಕೆ ಸೇರಿದ ಕವಿ. ದಶಾವತಾರ ಚರಿತೆಯ ಪ್ರಾರಂಭದಲ್ಲಿ ತನ್ನ ಸ್ವಂತ ವಿಚಾರಗಳನ್ನು ಈ ರೀತಿ ಹೇಳಿಕೊಂಡಿದ್ದಾನೆ—

---

*ಅವತಾರ : ದೇವಾನಾಂ ವಿಶೇಷತೋ ವಿಷ್ಣೋರ್ಮೂರ್ತ್ಯಂತರೇಣ ಭೂಭಾರಂಶಾ ವೇಷರೂಪೇಣ ಪೃಥುವ್ಯಾಂ — ಅವತಾರಣಂ ಶಬ್ದಕಲ್ಪದ್ರುಮ ಭಾಗ ೧

Incarnation : The permanent assumption of human form or human nature by a divine personage. In the christian religion the incarnation signifies the assumption of human nature by god in Jesus christ.

* * *

In many different schools of thought the idea gains currency that the incarnation was an ethical, not a metaphysical, necessity of Gods nature, a necessity of His love and grace, and would have occurred in some form, even if sin had never entered the world.

The Encyclopedia Americana Vol. 14, P. 735

" ಮತ್ತಮಾತನಾರೆಂದೊಡೆ ದ್ವಿಜವಂಶವಾರ್ಧಿವರ್ಧನ ಸಂಪೂರ್ಣಚಂದ್ರನುಂ ನಿರ್ಮಲ ಕಮ್ಮೆವಂಶ ಮಹಾಸೌಧರತ್ನ ಕಲಶನುಂ ಶ್ರೀವತ್ಸಗೋತ್ರ ಪವಿತ್ರಚರಿತ್ರನುಂ ತಿಮ್ಮರಸಮಂತ್ರಿಯುದರಾಬ್ಧಿ ಸುಧಾಸ್ವರೂಪನುಂ ತಿಪ್ಪಾಂಬಿಕಾ ಪುಣ್ಯೋದರ ಸಂಭವನುಂ ಗುರು ಸದಾನಂದ ಪಾದಾರವಿಂದ ಮಕರಂದ ಷಟ್ಚರಣನುಂ ವಿದ್ವಜ್ಜನ ಬಂಧುವೆನಿಪ್ಪ ನಾರವಂಗಲದ ಮಲ್ಲರಸಾಂಕನೊಪ್ಪುತಿರ್ಪನಂತುಮಲ್ಲದೆಯುಂ " (೧-೨೧ವ)

ಈ ಮೇಲಿನ ವಚನಭಾಗದಿಂದ ತಿಳಿದು ಬರುವ ಅಂಶಗಳು ಹೀಗಿವೆ—

ಮಲ್ಲರಸ ಬ್ರಾಹ್ಮಣ ಕವಿ. ಕಮ್ಮೆ ವಂಶದ ಶ್ರೀವತ್ಸಗೋತ್ರದವನು. ಇವನ ತಂದೆ ತಿಮ್ಮರಸ ಮಂತ್ರಿ. ತಾಯಿ ತಿಪ್ಪಾಂಬಿಕಾ. ಗುರು ಸದಾನಂದ. ಸ್ಥಳ ನಾರವಂಗಲ. ಇದು ಈಗಿನ ತುಮಕೂರು ಜಿಲ್ಲೆಯಲ್ಲಿದ್ದು ಬೆಳ್ಳಾವಿ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ. ಇಲ್ಲಿ ಅಮಾನಿಕೆರೆಯಿದೆ. ನಾರವಂಗಲ ಹಿಂದೆ ಅಗ್ರಹಾರವಾಗಿತ್ತೆಂದು ಊಹಿಸಲು ಅವಕಾಶವಿದೆ.

ದಶಾವತಾರ ಚರಿತೆಯನ್ನು ರಚಿಸಬೇಕೆಂದು ಸಜ್ಜನರು "ಶ್ರೀಮದಾದಿನಾರಾಯಣಂ ಲೋಕಹಿತಾರ್ಥಮಾಗಿ ದಶಾವತಾರಮಾದ ಪವಿತ್ರಾಚಾರ ಗಂಭೀರಸಾರೋದ್ಧಾರಮಂ ವಿಸ್ತಾರಂಗೈಯವೇಳ್ಕೆಂದು ಸಜ್ಜನ ಸಮುದಯಂ ತಮ್ಮೊಳ್ ಪರಿಪತ್ತಿ ಚಿಂತರಾಗಿ" ಕೇಳಲು ತಾನು ಬರೆದುದಾಗಿ ಹೇಳಿಕೊಂಡಿದ್ದಾನೆ.

ಮಲ್ಲರಸನು ತನ್ನ ಕವಿತಾ ಸಾಮರ್ಥ್ಯದ ಬಗೆಗೆ :

ಹರಿಪದಪದ್ಮಭೃಂಗನವನೀಸುರ ಸದ್ಗುರು ಸೇವ್ಯ ನವ್ಯ ವಿ
ಸ್ತರ ಶುಭಚಿತ್ತನುತ್ತಮ ಚರಿತ್ರ ಲಸನ್ಮೃದುವಾಕ್ಯ ಭಾವ ಬಂ
ಧುರ ರಸ ರೀತಿ ಮಾರ್ಗ ವರಸಜ್ಜನ ಬಂಧು ವಿಲಾಸಮೂರ್ತಿ ಭಾ
ಸುರತರ ಕಲ್ಪಭೂರುಹ ಲಸತ್ ಕವಿ ಮಲ್ಲರಸಾಂಕ ಪಂಡಿತಂ (೧-೨೧)

ಎಸೆವ ಪದಂ ಸುಶಬ್ದಮಣಿನೂಪುರದಿಂ ಮಿಗೆ ತೋಱಿ ಭಾವದ
ಲ್ಲೆಸೆವತಿ ಜಾತಿ ವಸ್ತ್ರದೊಳೆ ವೃತ್ತಕುಚಂ ರಸಗಂಧದಿಂ ಸದಾ
ಪೊಸದೆನಿಪಾ ಕಚಂ ಸಕಲಕನ್ನಡವೂಗಳಿನೊಪ್ಪೆ ಕಬ್ಬಮೆಂ
ಬಸಿಯೊಳನಿಂತು ಸಿಂಗರಿಸಿ ರಾಜಿಸುವಂ ಕವಿರಾಜ ಮಲ್ಲಗಂ (೧-೨೨)

ಎಂಬ ಹೆಗ್ಗಳಿಕೆಯನ್ನು ವ್ಯಕ್ತಪಡಿಸಿದ್ದಾನೆ. ಜೊತೆಗೆ ತನ್ನ ಕಾವ್ಯವನ್ನು ಕುರಿತು

ಕಾರುಣ್ಯಮೂರ್ತಿ ಕೃಷ್ಣನ
ಚಾರಿತ್ರಮೆನಲ್ಕೆ ಮೆಚ್ಚಿ ಕೈಕೊಳ್ಳದರಾರ್
ಚಾರುತರ ಕುಸುಮಕೋಸುಗ
ನಾರಂ ಪಿಡಿವಂತಿರೆನ್ನ ಕೃತಿ ಸಲದಿಹುದೇ (೧-೨೬)

ಕೃತಿಗಭಿಧಾನಮಿಾ ಧರೆಗೆ ಸೇವ್ಯಮುದಾದ ದಶಾವತಾರಮಿಾ
ಕೃತಿಗಧಿನಾಯಕಂ ವಿಮಲವಾರಿಧಿಜಾತೆಯಧೀಶ ವಿಷ್ಣು ವೀ
ಕೃತಿಯ ನಿಮಿರ್ಚಿದಂ ಕ್ಷಿತಿಸುರಾತ್ಮಜ ಮಲ್ಲರಸಾಂಕನೆಂದೊಡೀ
ಕೃತಿಯನನಾರತಂ ಸಕಲ ಸತ್ಪುರುಷರ್ ಮಿಗೆ ಮೆಚ್ಚದಿರ್ಪರೇ (೧–೨೭)

ಎಂಬ ಆತ್ಮವಿಶ್ವಾಸದ ಮಾತುಗಳನ್ನಾಡಿದ್ದಾನೆ.

ಈತನು ಪೂರ್ವಕವಿಗಳಲ್ಲಿ ಕಾಳಿದಾಸ, ಹರಿಹರ, ರುದ್ರಭಟ್ಟ ಮತ್ತು ಕುಮಾರ ವ್ಯಾಸರನ್ನು ನೆನೆದಿದ್ದಾನೆ. ದುರ್ಜನರನ್ನೂ ಸ್ತುತಿಸಿದ್ದಾನೆ.

ಕೊಂಡಾಲರಿಯ........
ಕೊಂಡಾಡಿಸಿಕೊಂಬ ಸುಗುಣವೃತ್ತಿಯನಱಿಯದ
ಭಂಡಗೆ ಮೊದಲೆಱಗುವೆ ಭೂ
ಮಂಡಲಪತಿಯಿರಲು ವೇತ್ರಧರಗೆಱಗುವವೊಲ್ (೧–೧೭)

ಅದಱಿಂದೆ ದುರ್ಜನಾಳಿಗೆ
ಮೊದಲೊಳ್ ವಂದನೆಯ ಮಾಡಿ ಸುಹೃದಯರಾ ಸ
ತ್ಪದಕೆ ಮಗುಳೆಱಗಿ ಪೇೞ್ವೆಂ
ಸದಮಲ ಸತ್ಕೃತಿಯ ಹರಿಯ ಪದಪದ್ಧತಿಯಿಂ (೧–೧೯)

ಹೀಗೆ ದುರ್ಜನರನ್ನು ಸ್ತುತಿಸಿರುವುದರಲ್ಲಿಯೂ ತನ್ನ ವೈಶಿಷ್ಟ್ಯವನ್ನು ಮೆರೆದಿದ್ದಾನೆ. ಕಾವ್ಯದ ಪ್ರಾರಂಭದಲ್ಲಿ ವಿಷ್ಣು, ಮಹೇಶ್ವರ, ವೆಂಕಟೇಶ್ವರ, ವಿನಾಯಕ ಮೊದಲಾದ ದೇವತೆಗಳಿಗೆ ನಮಸ್ಕರಿಸಿದ್ದಾನೆ. ಪರಾಶರ, ಭೀಷ್ಮ, ವಿಭೀಷಣ, ನಾರದ, ರುಕ್ಮಾಂಗದ, ಸನಕ ಮೊದಲಾದವರಿಗೆ ವಂದಿಸಿದ್ದಾನೆ.

ಮಲ್ಲರಸ ತನ್ನ ಕಾಲವನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಆ ಬಳಿಕ ಬಂದ ಕವಿಗಳೂ ಸಹ ಈತನನ್ನು ಸ್ಮರಿಸಿರುವುದು ಸದ್ಯಕ್ಕೆ ಕಂಡುಬರುತ್ತಿಲ್ಲ. ಕರ್ಣಾಟಕ ಕವಿಚರಿತೆಕಾರರು ಇವನ ಕಾಲದ ಬಗೆಗೆ "ಪೂರ್ವಕವಿಗಳಲ್ಲಿ ಕುಮಾರವ್ಯಾಸನನ್ನು ಸ್ತುತಿಸುವುದರಿಂದ ಕವಿ ಅವನ ಕಾಲಕ್ಕೆ ಈಚೆಯವನೆಂಬುದು ವ್ಯಕ್ತವಾಗಿದೆ. ನಮಗೆ ದೊರೆತ ಪ್ರತಿಯಲ್ಲಿ ಗ್ರಂಥಾಂತ್ಯದ ಗದ್ಯಕ್ಕೆ ಹಿಂದೆ ಚಿಕ್ಕುಪಾಧ್ಯಾಯನ ಆಜ್ಞಾನುಸಾರ ವಾಗಿ ಗ್ರಂಥವು ಪ್ರತಿಮಾಡಲ್ಪಟ್ಟಿತೆಂದು ಹೇಳಿರುವುದರಿಂದ ಗ್ರಂಥವು ಬಹುಶಃ ಚಿಕ್ಕುಪಾಧ್ಯಾಯನ ಕಾಲದಲ್ಲಿ ಹುಟ್ಟಿರಬಹುದೆಂದು ತೋರುತ್ತದೆ. ಹಾಗಿದ್ದ ಪಕ್ಷದಲ್ಲಿ ಕವಿಯ ಕಾಲವು ಸುಮಾರು 1680 ಆಗಬಹುದು" ಎಂದು ಹೇಳಿದ್ದಾರೆ.

ಸಂಪಾದನೆಗೆ ಸಿಕ್ಕಿದ ಎರಡು ಪ್ರತಿಗಳ ಅಂತ್ಯದಲ್ಲಿ ಗದ್ಯಕ್ಕಿಂತ ಮೊದಲು—

ವರ ಚಿಕ್ಕುಪಾಧ್ಯರಾಯಂ
ಸಿರಿಸುರಸ ದಶಾವತಾರಚರಿತಮನೊಲವಿಂ

ಬರೆಯೆಂದಾಜ್ಞಾಪಿಸೆ ಕಾಂ
ಬರೆದಂ ಲಕ್ಷ್ಮೀನೃಸಿಂಹನುರೆ ಭಕ್ತಿಯೊಳುಂ

ಎಂಬ ಪದ್ಯವಿದೆ. ಈ ಪದ್ಯವನ್ನು ಚಿಕ್ಕುಪಾಧ್ಯಾಯ ಹೇಳಲಾಗಿ ಲಕ್ಷ್ಮೀನರಸಿಂಹನ ಮೇಲಿನ ಭಕ್ತಿಯಿಂದ ಬರೆದೆ ಎಂದೂ ಅರ್ಥಮಾಡುವ ಸಾಧ್ಯತೆಗಳಿವೆ. ಆದರೆ ಕವಿ ತನ್ನ ವಿಚಾರಗಳನ್ನು ವಿವರವಾಗಿ ಪ್ರಾರಂಭದಲ್ಲಿಯೇ ಹೇಳಿರುವುದರಿಂದ ಇಲ್ಲಿ ಪುನಃ ಪ್ರಸ್ತಾಪಿಸುವುದು ಅನವಶ್ಯಕ. ಅದೂ ಅಲ್ಲದೆ ಪ್ರತಿಆಶ್ವಾಸದ ಅಂತ್ಯದಲ್ಲಿ "ಧರಣೀ ಸೌಖ್ಯಕರಂ........ಎಂದು ಆರಂಭವಾಗುವ ವೃತ್ತ ಆ ಬಳಿಕ ಒಂದು ಗದ್ಯ ಬರುತ್ತದೆ. ಆದರೆ ಇಲ್ಲಿ ಮಾತ್ರ ಆ ಪದ್ಯಕ್ಕೂ ಗದ್ಯಕ್ಕೂ ನಡುವೆ "ವರಚಿಕ್ಕುಪಾಧ್ಯರಾಯಂ........" ಎಂಬ ಪದ್ಯವಿದೆ. ಆದ್ದರಿಂದ ಈ ಪದ್ಯ ಕವಿ ಬರೆದ ಪದ್ಯವಾಗಿರದೆ ಲಕ್ಷ್ಮೀನೃಸಿಂಹನೆಂಬ ಲಿಪಿಕಾರನದೆಂಬುದು ಸ್ಪಷ್ಟವಾಗಿದೆ. ದಶಾವತಾರಚರಿತೆ ರಚಿತವಾದ ತಾರುಣ್ಯದಲ್ಲಿಯೆ ಲಿಪಿಕಾರನು ಪ್ರತಿಮಾಡುವಾಗ ಬರೆದು ಸೇರಿಸಿದ ಈ ಪದ್ಯ ಕ್ರಮೇಣ ಕಾವ್ಯದ ಒಂದು ಭಾಗದಂತೆ ಉಳಿದ ಪ್ರತಿಗಳಲ್ಲಿ ಸೇರಿಕೊಂಡಿರಬಹುದು. ಈ ಪದ್ಯ ಮಲ್ಲರಸನ ಕಾಲದ ಬಗ್ಗೆ ಬೆಳಕು ಬೀರಬಲ್ಲ ಏಕೈಕ ಆಧಾರವಾಗಿರುವುದರಿಂದ ಇದನ್ನು ಹೆಚ್ಚು ಗಮನಿಸಬೇಕಾಗುತ್ತದೆ. ಚಿಕ್ಕುಪಾಧ್ಯಾಯನು ಹೇಳಲಾಗಿ ಲಕ್ಷ್ಮೀನೃಸಿಂಹನೆಂಬ ಲಿಪಿಕಾರನು ದಶಾವತಾರ ಚರಿತೆಯನ್ನು ಪ್ರತಿಮಾಡಿದ್ದಾನೆ. ಚಿಕ್ಕುಪಾಧ್ಯಾಯನ ಕಾಲ ಕ್ರಿ.ಶ. 1672. ಚಿಕ್ಕುಪಾಧ್ಯಾಯ ವಿಷ್ಣುಪುರಾಣವನ್ನು ಬರೆಯುವಾಗ ದಶಾವತಾರ ಚರಿತೆಯನ್ನು ಪರಿಶೀಲನೆಗಾಗಿ ಉಪಯೋಗಿಸಿಕೊಂಡಿರಬಹುದು. ಮಲ್ಲರಸನು ಚಿಕ್ಕುಪಾಧ್ಯಾಯನ ಹಿರಿಯ ಸಮಕಾಲೀನನಾಗಿರಬಹುದು. ಅಂದರೆ ಸುಮಾರು ಕ್ರಿ.ಶ. 1650ರ ಅವಧಿಯಲ್ಲಿ ಮಲ್ಲರಸನು ಬದುಕಿದ್ದನೆಂದು ಹೇಳಬಹುದು.

ಮಲ್ಲರಸನ ತಂದೆ ತಿಮ್ಮರಸಮಂತ್ರಿಯ ಕಾಲ ತಿಳಿದುಬಂದರೆ ಮಲ್ಲರಸನ ಕಾಲವನ್ನು ಖಚಿತವಾಗಿ ಹೇಳಬಹುದು. ತಿಮ್ಮರಸ ಎಂಬ ಹೆಸರಿನವರು ಶಾಸನಗಳಲ್ಲಿ ಅನೇಕರು ಸಿಕ್ಕುತ್ತಾರೆ. ಆದರೆ ಶಾಸನಗಳ ತಿಮ್ಮರಸ ಮಲ್ಲರಸನ ತಂದೆ ತಿಮ್ಮರಸನಿಗಿಂತ ಬೇರೆಯಾಗುತ್ತಾರೆ.

ಕಥಾಸಾರ

ಭೂಮಂಡಲದಲ್ಲಿ ದೇವತೆಗಳು ವಾಸಿಸುವಂಥ ಪೂಜ್ಯವಾದ ಮೇರುಪರ್ವತವಿದೆ. ಆ ಪರ್ವತವು ಅಮರಾವತಿ, ತೇಜೋವತಿ ಮೊದಲಾದ ಪಟ್ಟಣಗಳಿಂದ ದೇವಗಂಗೆ, ಗ್ರಹಮಾಲೆ ಮತ್ತು ನಕ್ಷತ್ರರಾಶಿಗಳಿಂದ ಚೆಲುವಾಗಿ ಒಪ್ಪುತ್ತಿದೆ. ಅಲ್ಲಿಯೆ ಲವಣಸಮುದ್ರವಿದೆ. ಆ ಸಮುದ್ರವು ತೆರೆಗಳ ಮಾಲೆಯಿಂದ, ವಿಷ್ಣುವಿನ ವಾಸಸ್ಥಾನದಿಂದ ಭಯಂಕರ ರವದಿಂದ ಮೆರೆಯುತ್ತಿದೆ. ಅಷ್ಟದಿಕ್ಕುಗಳಲ್ಲಿಯೂ ದಿಕ್ಕರಿಗಳಿವೆ. ದಿಕ್ಕರಿಗಳ ಮಧ್ಯದಲ್ಲಿ ಸಾವಿರ ಹೆಡೆಗಳುಳ್ಳ ಆದಿಶೇಷನಿದ್ದಾನೆ. ಆದಿಶೇಷನ ತಲೆಯ ಮೇಲೆ ಭೂತಾಯಿ ಭೂಮಿಯನ್ನು ಹೊತ್ತಿದ್ದಾಳೆ.

ಒಂದುದಿನ ನಾರದನು ಸಕಲ ದೇವತೆಗಳೊಡನೆ ಕ್ಷೀರಸಮುದ್ರಕ್ಕೆ ಬಂದು ವಿಷ್ಣು ವನ್ನು ಕುರಿತು—"ದೇವಾ, ಬ್ರಹ್ಮಾಂಡ ಬ್ರಹ್ಮಕೈವರ್ತ್ಯ ಆಜ್ಞೇಯ ಸ್ಕಾಂಧ ಮೊದಲಾದ ಪುರಾಣಗಳನ್ನು ವಿಚಾರ ಮಾಡೋಣವೆಂದರೆ ನಮ್ಮ ಪುರಾಣಮತಿ ಮುಂದವಾಯಿತು. ವೇದಶಾಸ್ತ್ರಗಳನ್ನು ಓದೋಣವೆಂದರೆ ಆಭಾಸವಾಯಿತು. ವ್ಯಾಕರಣ ಛಂದ ನಿರುಕ್ತ ಮೊದಲಾದ ಶಾಸ್ತ್ರಗಳನ್ನು ನೆನೆದರೆ ಶಾಸ್ತ್ರದ ಒಂದಕ್ಷರವೂ ಬರುತ್ತಿಲ್ಲ. ಬ್ರಹ್ಮಾದಿಗಳಿಗೆ ಹೇಳೋಣವೆಂದರೆ ಅವರೂ ಸಹ ನಿಮ್ಮಲ್ಲಿಗೆ ಬಿನ್ನಹಕ್ಕೆ ಬಂದಿದ್ದಾರೆ. ಆದ್ದರಿಂದ ಬ್ರಹ್ಮ ಇಂದ್ರಾದಿಗಳ ಮನಸ್ಸಿನ ಚಿಂತೆಯನ್ನು ಪರಿಹರಿಸಬೇಕೆಂದು" ಕೇಳಿಕೊಂಡನು. ಅದಕ್ಕೆ ವಿಷ್ಣು ದೇವತೆಗಳೆಲ್ಲರು ಜಪ ತಪಗಳಿಂದ ಯುದ್ಧದಲ್ಲಿ ಜಯಿಸುತ್ತಾರೆಂದು ತಮನೆಂಬ ರಾಕ್ಷಸನು ವೇದಮಾತೆಯನ್ನು ಕದ್ದೊಯ್ದಿರುವ ಸಂಗತಿಯನ್ನು ತಿಳಿಸಿ ತಮನನ್ನು ಗೆಲ್ಲಲು ತನಗೆ ಅಸಾಧ್ಯವೆಂದು ತಿಳಿಸಿದನು. ಆಗ ದೇವತೆಗಳೆಲ್ಲರು ದೈನ್ಯದಿಂದ ಬೇಡಿಕೊಂಡರು. ವಿಷ್ಣು ಪ್ರಸನ್ನನಾಗಿ ಮತ್ಸ್ಯಾವತಾರ ವನ್ನು ತಾಳಿ ಸಮುದ್ರವನ್ನು ಹೊಕ್ಕನು. ಅಲ್ಲಿ ತಮನನ್ನು ಹಿಡಿದು ಮೆಟ್ಟಿ ವಾಲದಂಡ ದಿಂದ ಹೊಡೆದು ಅವನ ಶರೀರವನ್ನು ಸೀಳಿ ವೇದವನ್ನು ತಂದು ಕೊಟ್ಟನು. ವೇದಾಂಗನೆ ಹರ್ಷದಿಂದ ವಿಷ್ಣುವನ್ನು ಸ್ತುತಿಸಿದಳು.

ಒಂದುದಿನ ಅಮರಾವತಿ ಪಟ್ಟಣದಲ್ಲಿ ಗಟ್ಟಿಯಾದ ಅಬ್ಬರವಾಯಿತು. ಇಂದ್ರನು ಸೈನ್ಯ ಸಮೇತ ಅಲ್ಲಿಗೆ ಹೊರಟನು. ಆಗ ನಾರದನು ಬಂದು ಇದು ವೃತ್ರಾಸುರನ ಸೈನ್ಯ. ಬರಿಯ ಮಾತಿನಲ್ಲಿ ನಿವೃತ್ತಿಯಾಗದೆಂದು ಇಂದ್ರನಿಗೆ ತಿಳಿಸಿ ವೃತ್ರಾಸುರನ ಚರಿತ್ರೆಯನ್ನು ಹೇಳತೊಡಗಿದನು. ಕೋಲಾಹಲಕ್ಕೆ ಆಗರವಾದ ಕಾಳಿಕೇಯವೆಂಬ ಪಟ್ಟಣವಿದೆ. ಆ ಪಟ್ಟಣವನ್ನು ಆಳುವವನು ಅತ್ಯಂತ ಪ್ರತಾಪಿಯಾದ ವೃತ್ರಾಸುರ. ಇವನು ತಪಸ್ಸಿನಿಂದ ವಿಷ್ಣುವನ್ನು ಮೆಚ್ಚಿಸಿ ಆತನಲ್ಲಿ ಬೆಟ್ಟದ ಆಕಾರದ ರೆಕ್ಕೆಗಳನ್ನೂ ದೇವತೆಗಳನ್ನು ಬಾಧಿಸುವ ಶಕ್ತಿಯನ್ನೂ ಬೇಡಿದನು. ವೃತ್ರಾಸುರನಿಗೆ ಈ ವರವನ್ನು ಕೊಟ್ಟರೆ ಲೋಕಕ್ಕೆ ಬಾಧೆಯೆಂದು ತಿಳಿದ ವಿಷ್ಣು ಆತನಿಗೆ ದಧೀಚಿಯ ಬೆನ್ನೆಲುಬಿನಿಂದ ಹುಟ್ಟಿ ಬರುವಂತೆ ತಿಳಿಸಿದನು. ವೃತ್ರಾಸುರ ಹಾಗೆ ಬಂದು ಈಗ ಲೋಕವನ್ನು ಬಾಧಿಸುತ್ತಿದ್ದಾನೆ. ಆದ್ದರಿಂದ ದಧೀಚಿಯ ಅಸ್ಥಿಯನ್ನು ಬೇಡಿದರೆ ವೃತ್ರಾಸುರನನ್ನು ಗೆಲ್ಲಬಹುದೆಂದು ನಾರದನು ಇಂದ್ರನಿಗೆ ಹೇಳಿದನು. ಅದರಂತೆ ಇಂದ್ರನು ದಧೀಚಿಯ ಅಸ್ಥಿಯನ್ನು ಬೇಡಿ ವೃತ್ರಾಸುರನನ್ನು ಗೆದ್ದನು.

ಹೀಗೆ ವೃತ್ರಾಸುರನನ್ನು ಗೆದ್ದು ವಿಜಯೋತ್ಸವದಲ್ಲಿ ಬರುತ್ತಿದ್ದ ಇಂದ್ರನಿಗೆ ದೂರ್ವಾಸಮುನಿ ಮಂದಾರ ಮಾಲೆಯನ್ನು ಕೊಟ್ಟನು. ಮದಾಂಧನಾಗಿದ್ದ ಇಂದ್ರನು ಆ ಮಾಲೆಯನ್ನು ಆನೆಯ ಕೊರಳಿಗೆ ಎಸೆಯಲು ಆನೆ ಅದನ್ನು ನೆಲಕ್ಕೆ ಹಾಕಿ ಉಜ್ಜಿತು. ಆಗ ಮುನಿ ಕೋಪದಿಂದ ಇಂದ್ರನ ಐಶ್ವರ್ಯವು ಸಮುದ್ರದಲ್ಲಿ ಅಡಗಲೆಂದು ಶಪಿಸಿದನು. ಇಂದ್ರ ದರಿದ್ರನಾದನು. ಆಗ ಇಂದ್ರನ ಪತ್ನಿ ಇಂದ್ರಾಣಿ ದೂರ್ವಾಸನನ್ನು ಸ್ತುತಿಸಿ

ಪತಿಯ ಐಶ್ವರ್ಯವನ್ನು ಬೇಡಿದಳು. ಹರಿ, ಹರ, ಬ್ರಹ್ಮರೂ ದೇವತೆಗಳೂ ರಾಕ್ಷಸರೂ ಸೇರಿ ಮಂದರಾದ್ರಿಯಿಂದ ಸಮುದ್ರವನ್ನು ಮಥಿಸಲು ಇಂದ್ರನ ಐಶ್ವರ್ಯವೆಲ್ಲವು ಬರುವು ದೆಂದು ದೂರ್ವಾಸನು ನುಡಿದನು. ಅದರಂತೆ ಅವರೆಲ್ಲರೂ ಸೇರಿ ಮಂದರಾದ್ರಿಯನ್ನೂ ಅದನ್ನು ಸುತ್ತಿ ತೆಗೆಯಲು ಆದಿಶೇಷನನ್ನೂ ತಂದರು. ದೇವತೆಗಳು, ರಾಕ್ಷಸರು ಜೊತೆಗೆ ವಾಲಿ, ಸುಗ್ರೀವರೂ ಸೇರಿ ಸಮುದ್ರವನ್ನು ಕಡೆಯತೊಡಗಿದರು. ಹೀಗೆ ಕಡೆಯುತ್ತಿರಲು ಮಂದರಾದ್ರಿ ಕೆಸರಿನಲ್ಲಿ ಹೂತು ಪಾತಾಳಕ್ಕೆ ಇಳಿಯತೊಡಗಿತು. ಆಗ ದೇವಾಸುರರೆಲ್ಲ ವಿಷ್ಣುವಿನ ಮೊರೆ ಹೊಕ್ಕರು. ಆ ಕ್ಷಣವೇ ವಿಷ್ಣು ಕೂರ್ಮಾವತಾರವನ್ನು ತಾಳಿ ಮಂದರ ಪರ್ವತವನ್ನು ಬೆನ್ನಿನ ಮೇಲೆ ಹೊತ್ತುಕೊಂಡನು. ಎಲ್ಲರೂ ಸಮುದ್ರಮಥನ ಮಾಡಿದರು. ಸಮುದ್ರದಿಂದ ಚಂದ್ರ, ಲಕ್ಷ್ಮಿ, ಜ್ಯೇಷ್ಠೆ, ತಾರಾ ಇವರುಗಳು ಹುಟ್ಟಿದರು. ಐರಾವತ, ಕಲ್ಪವೃಕ್ಷ ಮೊದಲಾದ ಇಂದ್ರನ ಐಶ್ವರ್ಯವೆಲ್ಲ ಹುಟ್ಟಿದವು. ಆ ಬಳಿಕ ಅಮೃತ ಮತ್ತು ಸುರೆಗಳ ಉದ್ಭವವಾಯಿತು. ಹೀಗೆಯೇ ಕಡೆಯುತ್ತಿರಲು ಆದಿಶೇಷನು ನೊಂದು ಘೋರವಾದ ವಿಷವನ್ನುಗುಳಿದನು. ಆ ವಿಷವನ್ನು ಶಿವನು ತನ್ನ ಕೊರಳಿನಲ್ಲಿ ಧರಿಸಿದನು. ವಿಷ್ಣು ಮಂದರಾದ್ರಿಯನ್ನು ಮೊದಲಿನ ಸ್ಥಾನದಲ್ಲಿಟ್ಟು ತಾರೆಯನ್ನು ವಾಲಿ ಮತ್ತು ಸುಗ್ರೀವರಿಗೆ ಕೊಟ್ಟನು. ಇಂದ್ರನಿಗೆ ಅವನ ಐಶ್ವರ್ಯವನ್ನಿತ್ತನು. ಆ ಬಳಿಕ ಅಮೃತವನ್ನು ದೇವತೆಗಳಿಗೂ ಸುರೆಯನ್ನು ರಾಕ್ಷಸರಿಗೂ ಹಂಚಿದನು.

ಒಮ್ಮೆ ಸನಕ ಸನಂದನರೆಂಬ ವೈಷ್ಣವ ಭಕ್ತರು ವಿಷ್ಣುವಿನ ದರ್ಶನಕ್ಕಾಗಿ ಬರಲು ದ್ವಾರರಕ್ಷಣೆ ಮಾಡುತ್ತಿದ್ದ ಜಯ ವಿಜಯರು ದೇವರಿಗೆ ಏಕಾಂತಸಮಯವೆಂದು ತಡೆದು ನಿಲ್ಲಿಸಿದರು. ಇದರಿಂದ ಕುಪಿತರಾದ ಸನಕ ಸನಂದನರು ಜಯ ವಿಜಯರಿಗೆ ರಾಕ್ಷಸತ್ವ ದಿಂದ ಭೂಮಿಯಲ್ಲಿ ಹುಟ್ಟುವಂತೆ ಶಪಿಸಿದರು. ಆ ಕ್ಷಣವೇ ಜಯ ವಿಜಯರಿಗೆ ರಾಕ್ಷಸತ್ವ ಪ್ರಾಪ್ತವಾಗಿ ಹೇಮನವರತ್ನವೆಂಬ ಗ್ರಾಮದಲ್ಲಿ ಹಿರಣ್ಯಕ ಮತ್ತು ಹಿರಣ್ಯಾಕ್ಷರೆಂಬ ಸಹೋದರರಾಗಿ ಹುಟ್ಟಿದರು. ಅವರು ತಮ್ಮ ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ಯಾರಿಂದಲೂ ಸಾಯದ ವರವನ್ನು ಪಡೆದರು. ಈ ವರಗಳ ಬಲದಿಂದ ದೇವತೆಗಳನ್ನು ಬಾಧಿಸತೊಡಗಿದರು. ವಿಷ್ಣುವನ್ನು ಗೆದ್ದರೆ ತಮಗೆ ಸುರ ನರರಲ್ಲಿ ಯಾರೂ ಸಾಟಿಯಿಲ್ಲ ವೆಂದುಕೊಂಡು ಯೋಚಿಸಿದ ಆ ರಾಕ್ಷಸರು ಸೈನ್ಯಸಮೇತ ವಿಷ್ಣುವನ್ನು ಗೆಲ್ಲಲ್ಲು ಹೊರಟರು. ಇದನ್ನರಿತ ವಿಷ್ಣು ಋಷಿರೂಪವನ್ನು ಕೈಕೊಂಡು ರಾಕ್ಷಸರು ಬರುವ ಹಾದಿ ಯಲ್ಲಿದ್ದು 'ವಿಷ್ಣು ನಿಮಗೆ ಹೆದರಿ ಭೂಮಿಯಲ್ಲಿ ಅಡಗಿದನೆಂದು' ರಾಕ್ಷಸರಿಗೆ ತಿಳಿ ಸಿದನು. ರಾಕ್ಷಸರು ಈ ಮಾತುಗಳನ್ನು ನಂಬಿದರು. ಭೂಮಿಯನ್ನು ತೆಗೆದುಕೊಂಡು ಹೋದರೆ ವಿಷ್ಣು ಶೌರ್ಯೋದಯದಿಂದ ಬರುತ್ತಾನೆಂದು ಎಣಿಸಿ ಹಿರಣ್ಯಾಕ್ಷನು ಭೂಮಿ ಯನ್ನು ಪಾತಾಳಕ್ಕೆ ಕೊಂಡೊಯ್ದನು. ಆಗ ವಿಷ್ಣು ಭೂಮಿಯನ್ನು ಬಿಡಿಸಿಕೊಂಡು ಬರಲು ವರಾಹಾವತಾರವನ್ನು ತಾಳಿದನು. ಹಂದಿಯ ರೂಪದಲ್ಲಿದ್ದ ವಿಷ್ಣು ಹಿರಣ್ಯಾಕ್ಷ ನನ್ನು ಕೋರೆಹಲ್ಲುಗಳಿಂದ ಎರಡು ತುಂಡು ಮಾಡಿ ಮರ್ದಿಸಿ ಧರಾಲಕ್ಷ್ಮಿಯನ್ನು ಕೂಡಿದನು. ಇದರ ಫಲವಾಗಿ ನರಕಾಸುರನ ಜನನವಾಯಿತು.

ಇತ್ತ ರತ್ನಾನಗರದಲ್ಲಿ ಹಿರಣ್ಯಕನು ತನ್ನ ತಮ್ಮ ಹಿರಣ್ಯಾಕ್ಷನನ್ನು ಸಂಹರಿಸಿದ ವಿಷ್ಣುವನ್ನು ಯಾವ ರೀತಿ ಕೊಲ್ಲಬೇಕೆಂದು ಯೋಚಿಸುತ್ತಿದ್ದನು. ಅಷ್ಟರಲ್ಲಿ ಕೆಸರಿನಲ್ಲಿ ತಾವರೆ ಹುಟ್ಟುವಂತೆ ಹಿರಣ್ಯಕನ ಪತ್ನಿ ರೂಪವತಿಯ ಗರ್ಭದಲ್ಲಿ ಪ್ರಹ್ಲಾದನು ಜನಿಸಿದನು. ಪ್ರಹ್ಲಾದನ ಜನನದಿಂದ ಆಹ್ಲಾದಗೊಂಡ ರಾಕ್ಷಸನು ವಿಷ್ಣುವಿನ ಮೇಲಿನ ಕೋಪವನ್ನು ತಾತ್ಕಾಲಿಕವಾಗಿ ಮರೆತನು. ಪ್ರಹ್ಲಾದನು ಬಾಲ್ಯದಿಂದಲೆ ಹರಿಯನ್ನು ಚಿಂತಿಸುತ್ತ ಬೆಳೆದನು. ಹೀಗಿರಲು ಆತನಿಗೆ ಏಳು ವರ್ಷಗಳಾದವು. ಹಿರಣ್ಯಕನು ಮಗನನ್ನು ವಿದ್ಯಾಭ್ಯಾಸಕ್ಕೆಂದು ಶ್ರೇಷ್ಠ ವಿದ್ವಾಂಸರ ಬಳಿಗೆ ಕಳಿಸಿದನು. ರಾಕ್ಷಸಂಗೆ ಪಂಚತ್ವವೆ ಸ್ಥಿರವೆಂದು ಆತನು ಪ್ರಹ್ಲಾದನಿಗೆ ಬರೆಯಲು ಹೇಳಿದನು. ಪ್ರಹ್ಲಾದನು ವಿಷ್ಣುವಿನ ಹೆಸರನ್ನೇ ಬರೆದು ಓದಿದನು. ಗುರು ಎಷ್ಟು ಬೋಧಿಸಿದರೂ ಪ್ರಹ್ಲಾದನು ವಿಷ್ಣುವೆಂಬುದನ್ನು ಬಿಡಲಿಲ್ಲ. ಹಿರಣ್ಯಕನೂ ಸಹ ಪ್ರಹ್ಲಾದನಿಗೆ ವಿಷ್ಣುವನ್ನು ಮರೆಯುವಂತೆ ತಿಳಿಯ ಹೇಳಿದನು. ಆದರೂ ಆತನು ವಿಷ್ಣುವೇ ದೈವವೆಂದು ಸಾರಿದನು. ಆಗ ಕೋಪಗೊಂಡ ಹಿರಣ್ಯಕನು ದೂತರನ್ನು ಕರೆದು ಪ್ರಹ್ಲಾದನನ್ನು ಕೊಲ್ಲುವಂತೆ ಆಜ್ಞಾಪಿಸಿದನು. ದೂತರು ಪ್ರಹ್ಲಾದನನ್ನು ಕೊಲ್ಲಲು ನಾನಾ ಪರೀಕ್ಷೆಗಳನ್ನು ಒಡ್ಡಿದರು. ಆತನನ್ನು ಮದಿಸಿದ ಆನೆಯ ಮುಂದೆ ಇರಿಸಿದರು. ಬೆಟ್ಟದಿಂದ ಉರುಳಿಸಿದರು. ಸಮುದ್ರದೊಳಕ್ಕೆ ನೂಕಿದರು. ಅಗ್ನಿಗೆ ಆಹುತಿ ಮಾಡಿದರು. ವಿಷಾನ್ನವನ್ನು ಉಣಿಸಿದರು. ಹೀಗೆ ಒಂದಾದ ಮೇಲೆ ಒಂದರಂತೆ ನಾನಾ ಉಪದ್ರವಗಳನ್ನು ಕೊಟ್ಟರೂ ಪ್ರಹ್ಲಾದನು ವಿಷ್ಣುವಿನ ಕೃಪೆಯಿಂದ ಅಪಾಯದಿಂದ ಪಾರಾಗಿ ಬದುಕಿದನು. ಆಗ ಹಿರಣ್ಯಕನು ಮತ್ತೊಂದು ಉಪಾಯವನ್ನು ಹೂಡಿ ಪ್ರಹ್ಲಾದನಿಗೆ ನಿನ್ನ ದೇವರನ್ನು ತೋರಿಸೆಂದನು. ಅದಕ್ಕೆ ಆತನು ನೀನು ಹೇಳಿದ ಕಡೆಯಲ್ಲಿ ತೋರಿಸುತ್ತೇನೆಂದನು. ಹಾಗಾದರೆ ಈ ವಜ್ರಮಾಣಿಕ್ಯದ ಕಂಬದಲ್ಲಿ ತೋರಿಸೆಂದು ಹಿರಣ್ಯಕನು ಹೇಳಲು ಪ್ರಹ್ಲಾದನು ಹಿರಣ್ಯಕಾಸುರಮರ್ದನ ಬಾಯೆಂದು ಕರೆದನು. ಕರೆದ ಕೂಡಲೆ ಕಂಬದಿಂದ ವಿಷ್ಣು ನರಸಿಂಹಾವತಾರದಲ್ಲಿ ಹೊರಬಂದನು. ರಾಕ್ಷಸ ಬಲವೆಲ್ಲ ನರಸಿಂಹನ ಮೇಲೆ ನುಗ್ಗಿತು. ನರಸಿಂಹನು ತನ್ನ ಅರವತ್ತಾರು ಬಾಹುಗಳಿಂದ ಹಿರಣ್ಯಕನ ಸೈನ್ಯವನ್ನು ನಾಶಗೊಳಿಸಿ, ಹಿರಣ್ಯಕನನ್ನು ಸೀಳಿ, ರಕ್ತವನ್ನು ಕುಡಿದು, ಕರುಳನ್ನು ಕಿತ್ತು ವನಮಾಲೆಯಾಗಿ ಧರಿಸಿಕೊಂಡನು.

ಹಲವು ವರ್ಷಗಳ ಬಳಿಕ ಪ್ರಹ್ಲಾದನ ವಂಶಪರಂಪರೆಯಲ್ಲಿ ಅತ್ಯಂತ ದಾನಿಯಾದ ಬಲೀಂದ್ರನು ಜನಿಸಿ ರಾಜ್ಯಭಾರ ಮಾಡುತ್ತಿದ್ದನು. ಒಮ್ಮೆ ನಾರದನು ಬಲಿಯ ಅರಮನೆಗೆ ಬಂದಾಗ ಬಲಿಚಕ್ರವರ್ತಿ ನಿದ್ರಿಸುತ್ತಿದ್ದನು. ಇದರಿಂದ ಕುಪಿತನಾದ ನಾರದನು ಬಲಿಯ ಸೌಭಾಗ್ಯವನ್ನು ನಾಶಮಾಡಲು ನಿಶ್ಚಯಿಸಿ ವಿಷ್ಣುವಿನ ಬಳಿಗೆ ಬಂದು 'ಬಲೀಂದ್ರನು ಹರಿಹರ ಬ್ರಹ್ಮರನ್ನೂ ಮರೆತು ಅಹಂಕಾರದಿಂದ ರಾಜ್ಯವಾಳುತ್ತಿದ್ದಾನೆ ಆತನನ್ನು ನೀವು ಶಿಕ್ಷಿಸಬೇಕು' ಎಂದು ಕೇಳಿಕೊಂಡನು. ವಿಷ್ಣು ಬಲಿಯನ್ನು ಶಿಕ್ಷಿಸಲು ವಾಮನಾವತಾರವನ್ನು ತಾಳಿ ಬಲೀಂದ್ರನ ಬಳಿಗೆ ಬಂದು ಮೂರು ಅಡಿ ಭೂಮಿಯನ್ನು

ಬೇಡಿದನು. ಬಲಿ ಸಂತೋಷದಿಂದ ಭೂಮಿಯನ್ನು ವಾಮನನಿಗೆ ಧಾರೆಯೆರೆದು ಅಳೆದು ಕೊಳ್ಳುವಂತೆ ಹೇಳಿದನು. ತಕ್ಷಣವೇ ವಾಮನನು ಆಕಾಶದುದ್ದಕ್ಕೆ ಬೆಳೆದು ತನ್ನ ಒಂದು ಪಾದದಿಂದ ಭೂಮಿಯನ್ನೂ ಮತ್ತೊಂದು ಪಾದದಿಂದ ಆಕಾಶವನ್ನೂ ಅಳೆದು ಕೊಂಡನು. ಇನ್ನು ಮೂರನೆಯ ಅಡಿ ಅಳೆದುಕೊಳ್ಳಲು ಭೂಮಿ ಇಲ್ಲದಿರಲು ವಾಮನ ತನ್ನ ಪಾದವನ್ನು ಬಲಿಯ ತಲೆಯ ಮೇಲಿಟ್ಟು ಆತನನ್ನು ಪಾತಾಳಕ್ಕೆ ಒತ್ತಿದನು. ಹೀಗೆ ಬಲಿಯ ಸಂಹಾರವಾಗಲು ದೇವತೆಗಳು ಪುಷ್ಪವೃಷ್ಟಿಕರೆದರು.

ವಿಷ್ಣು ಭೂಮಿಯಲ್ಲಿ ಕ್ಷತ್ರಿಯ ಭಾರವನ್ನು ಕಡಮೆ ಮಾಡಲು ಜಮದಗ್ನಿಯ ಪತ್ನಿ ರೇಣುಕೆಯ ಗರ್ಭದಲ್ಲಿ ಹುಟ್ಟಿದನು. ಆದಿವಿಷ್ಣು ತನ್ನ ಅಂಶದಿಂದ ಜನಿಸಿದುದ ರಿಂದ ಜಮದಗ್ನಿ ಮಗನಿಗೆ ಪರಶುರಾಮನೆಂದು ಹೆಸರಿಟ್ಟನು. ಪರಶುರಾಮನು ಪಿತೃ ಸೇವೆಯಲ್ಲಿ ಅಧಿಕನೆನ್ನಿಸಿಕೊಂಡಿದ್ದನು. ಒಂದು ದಿನ ರೇಣುಕೆ ನೀರನ್ನು ತರುತ್ತಿದ್ದಾಗ ಅಲ್ಲಿ ಗಂಧರ್ವಛಾಯೆ ಹೊಳೆದು ಪರಪುರುಷ ದೃಷ್ಟಿಯಿಂದ ಭಾಂಡವು ಭಿನ್ನವಾಯಿತು. ಇದರಿಂದ ಜಮದಗ್ನಿ ಕುಪಿತನಾಗಿ ರೇಣುಕೆಯ ತಲೆಯನ್ನು ಕತ್ತರಿಸುವಂತೆ ಮಗನಿಗೆ ಹೇಳಿದನು. ಪರಶುರಾಮನು ಪಿತೃವಾಕ್ಯವನ್ನು ಗುರುವಾಕ್ಯವೆಂದು ಭಾವಿಸಿ ತಾಯಿಯ ತಲೆಯನ್ನು ಕತ್ತರಿಸಿದನು. ಜಮದಗ್ನಿ ಮಗನನ್ನು ಸಂತೋಷದಿಂದ ಅಪ್ಪಿಕೊಂಡು ವರವನ್ನು ಬೇಡಿಕೋ ಎನಲು ಪರಶುರಾಮನು ತಾಯಿಯ ಪ್ರಾಣವನ್ನು ಬೇಡಿ ಪಡೆದನು. ಹಾಗೆಯೆ ಮೊದಲಿನ ಕೋಪವನ್ನು ಬಿಟ್ಟು ಫಲಹಬೇಕೆಂದೂ ತಂದೆಯಲ್ಲಿ ಕೇಳಿ ಕೊಂಡನು. ಮಗನ ಮಾತಿನಂತೆ ಜಮದಗ್ನಿ ಕೋಪವನ್ನು ಬಿಡಲು ಅದು ಬಡಬಾಗ್ನಿ ಯಾಗಿ ಸಮುದ್ರದಲ್ಲಿ ಸೇರಿಕೊಂಡಿತು.

ಒಮ್ಮೆ ಬೇಟೆಗೆಂದು ಹೋಗಿದ್ದ ಅಯೋಧ್ಯೆಯ ರಾಜ ಕಾರ್ತವೀರ್ಯನು ಜಮದಗ್ನಿಯ ಆಶ್ರಮಕ್ಕೆ ಬಂದನು. ಜಮದಗ್ನಿ ನಂದಿನಿಯೆಂಬ ಕಾಮಧೇನುವಿನಿಂದ ಬೇಕಾದ ವಸ್ತುಗಳನ್ನು ಪಡೆದು ಕಾರ್ತವೀರ್ಯನಿಗೆ ರಾಜೋಪಚಾರಗಳನ್ನು ಮಾಡಿದನು ಊರಿಗೆ ಮರಳಿದ ಕಾರ್ತವೀರ್ಯನು ಚಾಡಿಕೋರರಿಂದ ಪ್ರೇರಿತನಾಗಿ ನಂದಿನಿಯನ್ನು ಬಯಸಿ ಅದನ್ನು ಹಿಡಿದು ತರಲು ದೂತರನ್ನು ಅಟ್ಟಿದನು. ನಂದಿನಿ ದೇವಲೋಕದ ಕಾಮ ಧೇನುವೆಂದು ಅದು ಯಾರಲ್ಲಿಗೂ ಬರುವುದಿಲ್ಲವೆಂದು ಜಮದಗ್ನಿ ಪರಿಪರಿಯಾಗಿ ದೂತರಿಗೆ ಹೇಳಿದರೂ ಅವರು ಕೇಳಲಿಲ್ಲ. ದೂತರು ಚತುರಂಗ ಸೇನೆ ಸಮೇತ ಬಂದು ಮುನಿಯ ತಲೆಯನ್ನು ಕತ್ತರಿಸಿ ನಂದಿನಿಯ ಕೊರಳಿಗೆ ಕಟ್ಟಿದರು. ನಂದಿನಿ ಕಾರ್ತವೀರ್ಯನ ಸೈನ್ಯವನ್ನು ನಾಶಗೊಳಿಸಿ ತನ್ನ ನೆಲೆಗೆ ಹೊರಟುಹೋಯಿತು.

ಇತ್ತ ಪುಷ್ಪಗಳನ್ನು ತರಲು ಹೋಗಿ ಆಶ್ರಮಕ್ಕೆ ಮರಳಿದ ಪರಶುರಾಮನು ತಂದೆಯ ಘೋರ ಮರಣದ ವಾರ್ತೆಯನ್ನು ತಿಳಿದು ಕೋಪಗೊಂಡು ಇದಕ್ಕೆ ಕಾರಣರಾದ ಕ್ಷತ್ರಿಯರ ವಂಶವನ್ನೆಲ್ಲ ಭೂಮಿಯಲ್ಲಿ ಇಪ್ಪತ್ತೊಂದು ಬಾರಿ ಕೊಂದು ನಿರ್ನಾಮ ಗೊಳಿಸುತ್ತೇನೆಂದು 'ಪ್ರತಿಜ್ಞೆಮಾಡಿ ಸಹಸ್ರ ತೋಳುಗಳುಳ್ಳ ಕಾರ್ತವೀರ್ಯನಿಗೆ

ಎದುರಾದನು. ಇಬ್ಬರಿಗೂ ಯುದ್ಧವಾಯಿತು. ಪರಶುರಾಮನು ಕಾರ್ತವೀರ್ಯನ ತೋಳುಗಳನ್ನು ಕಡಿದು ಆತನ ತಲೆಯನ್ನು ಕತ್ತರಿಸಿದನು. ಹೀಗೆ ಪರಶುರಾಮನು ಭೂಮಿಯಲ್ಲಿ ಇಪ್ಪತ್ತೊಂದು ಬಾರಿ ಕ್ಷತ್ರಿಯರನ್ನು ಕೊಂದು ಅವರ ರಕ್ತದಿಂದ ತಂದೆಗೆ ಮತ್ತು ಬ್ರಾಹ್ಮಣರಿಗೆ ತರ್ಪಣಗಳನ್ನು ಕೊಟ್ಟನು.

ಶಾಪಗ್ರಸ್ಥರಾದ ಜಯ ವಿಜಯರು ತಮ್ಮ ಮತ್ತೊಂದು ಜನ್ಮದಲ್ಲಿ ರಾವಣ ಮತ್ತು ಕುಂಭಕರ್ಣರಾಗಿ ಹುಟ್ಟಿದರು. ರಾವಣನು ಶಿವನಿಂದ ವರಗಳನ್ನು ಪಡೆದು ಪರಾಕ್ರಮಿಯಾಗಿದ್ದನು. ರಾವಣನನ್ನು ಜಯಿಸದಿದ್ದರೆ ತ್ರಿಭುವನಕ್ಕೆ ಕೇಡೆಂದು ಎಣಿಸಿದ ವಿಷ್ಣು ರಾಮಾವತಾರಕ್ಕೆ ಸಿದ್ಧನಾದನು.

ಅಯೋಧ್ಯೆಯ ರಾಜ ದಶರಥ. ಈತನಿಗೆ ಮೂವರು ಪತ್ನಿಯರು. ಅವರಲ್ಲಿ ಕೌಸಲ್ಯೆಗೆ ರಾಮ, ಸುಮಿತ್ರೆಗೆ ಲಕ್ಷ್ಮಣ ಮತ್ತು ಶತ್ರುಘ್ನ, ಕೈಕೆಗೆ ಭರತನೆಂಬ ಮಕ್ಕಳಾದರು. ವಿಷ್ಣು ರಾವಣನ ಸಂಹಾರಕ್ಕಾಗಿ ಕೌಸಲ್ಯೆಯ ಮಗನಾಗಿ ಹುಟ್ಟಿದ್ದನು. ದಶರಥನ ಮಕ್ಕಳಿಗೆ ಎಂಟು ವರ್ಷಗಳಾಗಲು ಕೌಶಿಕಮುನಿ ಯಜ್ಞರಕ್ಷಣೆಗಾಗಿ ಅವರನ್ನು ಕರೆದುಕೊಂಡು ಹೋದನು. ರಾಮನು ಕೌಶಿಕನಿಂದ ಅಕ್ಷಯತೂಣೀರವೆಂಬ ಬಾಣವನ್ನು ಪಡೆದು ಮುನಿಗಳನ್ನು ಬಾಧಿಸುತ್ತಿದ್ದ ರಾಕ್ಷಸರನ್ನು ಕೊಂದು ಯಜ್ಞವನ್ನು ರಕ್ಷಿಸಿದನು. ಅಷ್ಟರಲ್ಲಿ ಮಿಥಿಲಾಪುರದ ಜನಕರಾಜನ ಮಗಳು ಸೀತೆಯ ಸ್ವಯಂವರದ ವಾರ್ತೆ ಹರಡಿತು. ವಸಿಷ್ಠ ವಿಶ್ವಾಮಿತ್ರರು ರಾಮಲಕ್ಷ್ಮಣರನ್ನು ಮಿಥಿಲೆಗೆ ಕರೆದುಕೊಂಡು ಹೊರಟರು. ದಾರಿಯಲ್ಲಿ ಗೌತಮನ ಆಶ್ರಮ ಸಿಕ್ಕಿತು. ಅಲ್ಲಿ ರಾಮನ ಪಾದಸ್ಪರ್ಶದಿಂದ ಕಲ್ಲಾಗಿದ್ದ ಗೌತಮನ ಪತ್ನಿ ಅಹಲ್ಯೆ ಮೋಕ್ಷವನ್ನು ಪಡೆದಳು. ಅಲ್ಲಿಂದ ಮುಂದೆ ರಾಮಲಕ್ಷ್ಮಣರು ಮಿಥಿಲೆಗೆ ಬಂದರು. ಅಲ್ಲಿ ಶ್ರೀರಾಮನು ಯಾರಿಂದಲೂ ಎತ್ತಲಾಗದ ಶಿವಧನುಸ್ಸನ್ನು ಎತ್ತಿ ಮೂರು ತುಂಡುಮಾಡಿ ಸೀತೆಯನ್ನು ವಿವಾಹವಾದನು. ರಾಮ ಲಕ್ಷ್ಮಣರೆಲ್ಲ ಅಯೋಧ್ಯೆಗೆ ಮರಳಲು ದಶರಥನು ಶ್ರೀರಾಮನಿಗೆ ರಾಜ್ಯಭಾರದ ಪಟ್ಟವನ್ನು ಕಟ್ಟಲು ಸಿದ್ಧತೆಗಳನ್ನು ನಡೆಸಿದನು. ಆಗ ಮಂಥರೆಯೆಂಬ ದಾಸಿಯಿಂದ ಪ್ರೇರಿತಳಾದ ಕೈಕೆ ಭರತನಿಗೆ ಪಟ್ಟಕಟ್ಟುವಂತೆ ಮತ್ತು ರಾಮನನ್ನು ಕಾಡಿಗೆ ಕಳಿಸುವಂತೆ ದಶರಥನನ್ನು ಕೇಳಿಕೊಂಡಳು. ಅದರಂತೆ ಶ್ರೀರಾಮನು ಸೀತೆಯೊಡನೆ ವನವಾಸಕ್ಕೆ ಹೊರಟನು. ಲಕ್ಷ್ಮಣನು ಸಹ ರಾಮನನ್ನು ಹಿಂಬಾಲಿಸಿದನು. ಇತ್ತ ದಶರಥನು ಪುತ್ರವಿಯೋಗದಿಂದ ಮರಣ ಹೊಂದಿದನು. ರಾಮ, ಲಕ್ಷ್ಮಣ ಮತ್ತು ಸೀತೆಯರು ಚಿತ್ರಕೂಟಕ್ಕೆ ಬಂದು ಅಲ್ಲಿ ಪರ್ಣಶಾಲೆಯನ್ನು ಕಟ್ಟಿಕೊಂಡು ಇರತೊಡಗಿದರು. ಭರತನು ಶ್ರೀರಾಮನ ಬಳಿಗೆ ಬಂದು ತಂದೆಯ ಮರಣ ವೃತ್ತಾಂತವನ್ನು ತಿಳಿಸಿ ರಾಜ್ಯಭಾರವನ್ನು ವಹಿಸಿಕೊಳ್ಳಬೇಕೆಂದು ಕೇಳಿಕೊಂಡನು. ರಾಮನು ತಂದೆಯ ಮರಣಕ್ಕೆ ಶೋಕಿಸಿ ಭರತನಿಗೆ ಹನ್ನೆರಡು ವರ್ಷಗಳವರೆಗೆ ರಾಜ್ಯವಾಳಬೇಕೆಂದು ಹೇಳಿಕಳಿಸಿದನು. ರಾಮಲಕ್ಷ್ಮಣ ಸೀತೆಯರು ಅಗಸ್ತ್ಯರ ಆಶ್ರಮಕ್ಕೆ ಬಂದರು. ಅಲ್ಲಿ ರಾಮನು ಆಶ್ರಮ

ಬಾಧಕರಾದ ರಾಕ್ಷಸರನ್ನೆಲ್ಲ ಕೊಂದನು. ಲಕ್ಷ್ಮಣನಿಂದ ಶಂಬುಕನು ಹತನಾದನು. ಶಂಬುಕನ ತಾಯಿ ಶೂರ್ಪನಖಿ ಸೇಡು ತೀರಿಸಿಕೊಳ್ಳಲು ಬಂದು ಲಕ್ಷ್ಮಣನಲ್ಲಿ ಆಕರ್ಷಿತಳಾದಳು. ಆಗ ಲಕ್ಷ್ಮಣನು ಅವಳ ಮೂಗನ್ನು ಕತ್ತರಿಸಿ ಕಳಿಸಿದನು. ಹೀಗಿರಲು ರಾವಣನು ಸೀತೆಯನ್ನು ಅಪಹರಿಸಲು ಸಂಚು ಹೂಡಿ ಮಾರೀಚನ ಸಹಕಾರದಿಂದ ರಾಮ ಲಕ್ಷ್ಮಣರು ಇಲ್ಲದ ವೇಳೆಯಲ್ಲಿ ಭಿಕ್ಷುಕನಾಗಿ ಬಂದು ಸೀತೆಯನ್ನು ಅಪಹರಿಸಿಕೊಂಡು ಹೋದನು. ಇತ್ತ ಆಶ್ರಮಕ್ಕೆ ಮರಳಿದ ರಾಮ ಲಕ್ಷ್ಮಣರು ಸೀತೆಯನ್ನು ಕಾಣದೆ ದುಃಖಗೊಂಡು ಆಕೆಯನ್ನು ಹುಡುಕಿಕೊಂಡು ಹೊರಟರು. ಜಟಾಯುವಿನಿಂದ ಅವರಿಗೆ ಸೀತೆಯ ಅಪಹರಣದ ಸುದ್ದಿ ತಿಳಿಯಿತು. ರಾಮ ಲಕ್ಷ್ಮಣರು ಶಬರಿಯ ಆಶ್ರಮವನ್ನು ಹೊಕ್ಕು ಪಂಪಾಕ್ಷೇತ್ರಕ್ಕೆ ಬಂದರು. ಅಲ್ಲಿ ರಾಮನಿಗೆ ಹನುಮಂತನ ಭೇಟಿಯಾಯಿತು. ಹನುಮಂತ ಅಂದಿನಿಂದ ರಾಮನ ಸೇವಕನಾದನು. ಆ ಬಳಿಕ ಅವರು ಕಿಷ್ಕಿಂಧಾಪಟ್ಟಣಕ್ಕೆ ಬಂದರು. ಅನಂತರ ರಾಮನಿಗೆ ಸುಗ್ರೀವನ ಸ್ನೇಹವಾಯಿತು. ರಾಮನು ವಾಲಿಯನ್ನು ಕೊಂದು ಸುಗ್ರೀವನಿಗೆ ತಾರೆಯನ್ನು ಕೊಡಿಸಿದನು. ವಾಲಿಯ ಮಗ ಅಂಗದ, ಜಾಂಬವ ಮೊದಲಾದವರು ರಾಮನ ಕಡೆಗೆ ಸೇರಿಕೊಂಡರು. ರಾಮನು ಕಪಿಸೈನ್ಯದೊಡನೆ ಸಮುದ್ರದ ಹತ್ತಿರ ಬೀಡುಬಿಟ್ಟನು. ರಾವಣನ ಸಹೋದರ ವಿಭೀಷಣ ಸಹ ರಾಮನ ಗುಂಪನ್ನು ಸೇರಿದನು. ರಾಮನು ಕಪಿಗಳ ಸಹಾಯದಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಲಂಕೆಯನ್ನು ಮುತ್ತಿದನು. ರಾಕ್ಷಸ ಬಲಕ್ಕೂ ಕಪಿಸೈನ್ಯಕ್ಕೂ ಯುದ್ಧವಾಯಿತು. ಲಕ್ಷ್ಮಣನು ರಾವಣನ ಮಗ ಇಂದ್ರಜಿತುವನ್ನೂ ರಾಮನು ಕುಂಭಕರ್ಣನನ್ನೂ ಕೊಂದನು. ರಾಕ್ಷಸ ಬಲವೆಲ್ಲಾ ನಾಶವಾದ ಮೇಲೆ ಸ್ವತಃ ರಾವಣನೇ ಯುದ್ಧಕ್ಕೆ ಬಂದನು. ರಾಮನ ಬಾಣ ಪ್ರಯೋಗದಿಂದ ರಾವಣನ ಬೆನ್ನಿಗೆ ನಾಟಿದ್ದ ಆನೆಯ ಕೋಡುಗಳೆಲ್ಲಾ ಹಾರಿಹೋದುವು. ಅನಂತರ ರಾಮನು ರಾವಣನ ತಲೆಗೆ ಬಾಣವನ್ನು ಹೂಡಿದನು. ರಾವಣನ ತಲೆಗಳು ಹರಿದು ಆಕಾಶವನ್ನೆಲ್ಲ ಆವರಿಸಿಕೊಂಡುವು. ಆಗ ರಾಮನು ವಿಭೀಷಣನಿಂದ ರಾವಣನ ಮರ್ಮಸ್ಥಾನವನ್ನರಿತುಕೊಂಡು ರಾವಣನನ್ನು ಕೊಂದು ಸೀತೆಯನ್ನು ಆತನ ಸೆರೆಯಿಂದ ಬಿಡಿಸಿದನು. ದೇವತೆಗಳೆಲ್ಲರೂ ಹರ್ಷೋದ್ಗಾರ ಮಾಡಿದರು.

ಜಗತ್ತೆಲ್ಲ ರಾಕ್ಷಸರ ಸೈನ್ಯದಿಂದ ಕುಸಿಯುತ್ತಿರಲು ವಿಷ್ಣು ಭೂಮಿಯ ಭಾರವನ್ನು ಕಡಮೆಮಾಡಲು ಕೃಷ್ಣಾವತಾರಕ್ಕೆ ಉದ್ಯುಕ್ತನಾದನು. ಮಧುರೆಯ ರಾಜ ಕಂಸನು ತನ ತಂಗಿಯಾದ ದೇವಕಿಯ ಮಕ್ಕಳಿಂದ ತನಗೆ ಕೇಡಾಗುವುದೆಂದು ತಿಳಿದು ವಸುದೇವ ಮತ್ತು ದೇವಕಿಯರನ್ನು ಸೆರೆಯಲ್ಲಿಟ್ಟು ಆಕೆಗೆ ಹುಟ್ಟಿದ ಮಕ್ಕಳನ್ನು ಕೊಲ್ಲುತ್ತಿದ್ದನು. ಹೀಗಿರಲು ವಿಷ್ಣು ಒಮ್ಮೆ ವಸುದೇವ ದೇವಕಿಯರ ಸ್ವಪ್ನದಲ್ಲಿ ಬಂದು ಕಂಸನನ್ನು ಮರ್ದಿಸಿ ಭೂಭಾರೋತ್ತಾರಣ ಮಾಡುವುದಕ್ಕಾಗಿ ನಿಮಗೆ ಮಗನಾಗಿ ಹುಟ್ಟುತ್ತೇನೆಂದು ಹೇಳಿದನು. ಅದರಂತೆ ದೇವಕಿಗೆ ಮಗನಾಗಿ ಹುಟ್ಟಿದನು. ಆ ಶಿಶು ತನ್ನನ್ನು ಗೋಕುಲದ ಯಶೋದೆಯ ಮಗ್ಗುಲಲ್ಲಿರಿಸಿ ಅವಳ ಹೆಣ್ಣುಮಗುವನ್ನು ದೇವಕಿಯ ಮಗ್ಗುಲಲ್ಲಿಡುವಂತೆ

ತಂದೆಗೆ ಹೇಳಿತು. ವಿಷ್ಣು ಮಹಿಮೆಯಿಂದ ಈ ಕಾರ್ಯವನ್ನು ವಸುದೇವನು ಸುಲಭವಾಗಿ ಮಾಡಿದನು. ವಸುದೇವನು ಯಶೋದೆಯ ಹೆಣ್ಣು ಮಗುವನ್ನು ದೇವಕಿಯ ಮಗ್ಗುಲಲ್ಲಿ ಇಟ್ಟ ಕೂಡಲೆ ಆ ಮಗು ಅಳತೊಡಗಿತು. ಗೃಹರಕ್ಷಕರು ಎಚ್ಚರವಾಗಿ ಕಂಸನಿಗೆ ತಿಳಿಸಿದರು. ಕಂಸನು ಆ ಮಗುವನ್ನು ದೇವಕಿಯ ಮಗುವೆಂದೆಣಿಸಿ ಕೊಲ್ಲುವುದಕ್ಕಾಗಿ ಬಂಡೆಯ ಮೇಲೆ ಅಪ್ಪಳಿಸಿದನು. ಮಗು ಕಂಸನನ್ನು ಒದ್ದು ಆಕಾಶಕ್ಕೆ ಜಿಗಿದು ನಿನ್ನನ್ನು ಕೊಲ್ಲಲು ನನ್ನ ಅಗ್ರಜನು ಮತ್ತೊಂದು ಸ್ಥಳದಲ್ಲಿ ಹುಟ್ಟಿದ್ದಾನೆಂದು ಹೇಳಿ ಯೋಗ ಪೀಠಕ್ಕೆ ಹಾರಿಹೋಯಿತು. ಇತ್ತ ದೇವಕಿಯ ಮಗನು ಕೃಷ್ಣನೆಂಬ ಹೆಸರಿನಿಂದ ಮತ್ತು ವಸುದೇವನ ಮೊದಲ ಪತ್ನಿ ರೋಹಿಣಿಯ ಮಗನು ಬಲರಾಮನೆಂಬ ಹೆಸರಿನಿಂದ ಯಶೋದೆಯ ಬಳಿ ಗೋಕುಲದಲ್ಲಿ ಬೆಳೆಯುತ್ತಿದ್ದರು. ಕಂಸನು ಕೃಷ್ಣನನ್ನು ಕೊಲ್ಲಲು ಅನೇಕ ರಾಕ್ಷಸರನ್ನು ಕಳಿಸಿದನು. ಅವರೆಲ್ಲರು ಬಂಡಿಯಂತೆ, ಗೂಳಿಗಳಂತೆ, ಕರುಗಳಂತೆ ವಿವಿಧ ವೇಷಗಳಲ್ಲಿ ಒಬ್ಬರಾದ ಮೇಲೆ ಒಬ್ಬರು ಬಂದು ಬಾಲಕೃಷ್ಣನಿಗೆ ಎದುರಾದರು. ಈ ರೀತಿ,ವೇಷ ಧರಿಸಿ ಬಂದ ಪೂತನಿ, ಶಕಟ, ಯಮಳಾರ್ಜುನ, ತೃಣವರ್ತ ವತ್ಸ, ಧೇನುಕ, ಬಕಾಸುರ, ನಾಗಾಸುರ ಮೊದಲಾದ ರಾಕ್ಷಸರನ್ನು ಕೃಷ್ಣನು ಕೊಂದನು. ಹೀಗೆ ಸಾಹಸವನ್ನು ಪ್ರಕಟಿಸುತ್ತ ಕೃಷ್ಣ ಮತ್ತು ಬಲರಾಮರು ಬೆಳೆಯುತ್ತಿದ್ದರು. ಕೃಷ್ಣನು ಪುಂಗವನನ್ನು ಕೊಂದು ಕುಂಭಕನ ಮಗಳಾದ ನೀಲಾದೇವಿಯನ್ನು ಮದುವೆಯಾದನು. ಪ್ರಲಂಬನನ್ನು ಕೊಂದು ಪ್ರಲಂಬಘ್ನನೆನಿಸಿಕೊಂಡನು. ವಿಷವಾಗಿದ್ದ ಕಾಳಿಂದಿಯ ಮಡುವನ್ನು ವಿಷದಿಂದ ಬಿಡಿಸಿದನು. ಶಂಖಚೂಡನನ್ನು ಕೊಂದು ಗೋಪಿಯೊಬ್ಬಳನ್ನು ರಕ್ಷಿಸಿದನು. ಹೀಗೆಯೆ ಭುಜಗ, ವ್ಯೋಮಾಸುರ ಮತ್ತು ಕೇಶಿಯೆಂಬ ರಾಕ್ಷಸರು ಕೃಷ್ಣನಿಂದ ಹತರಾದರು. ಕೃಷ್ಣನು ಯಾವ ರಾಕ್ಷಸರಿಂದಲೂ ಸಾಯದಿರಲು ಕಂಸನು ಚಿಂತೆಗೀಡಾದನು. ಅವನು ಕೃಷ್ಣನನ್ನು ಕಪಟೋಪಾಯದಿಂದ ಕೊಲ್ಲಲು ಯೋಚಿಸಿ ಆತನನ್ನು ಕರೆತರಲು ಅಕ್ರೂರನಿಗೆ ನೇಮಿಸಿದನು. ಕೃಷ್ಣಭಕ್ತನಾದ ಅಕ್ರೂರನು ಸಂತೋಷದಿಂದ ಒಪ್ಪಿಕೊಂಡು ಗೋಕುಲಕ್ಕೆ ಹೋಗಿ ಅಲ್ಲಿ ಕೃಷ್ಣನಿಗೆ ಕಂಸನ ಕಪಟ ತಂತ್ರವನ್ನು ತಿಳಿಸಿದನು. ಅಕ್ರೂರನ ಭಕ್ತಿಗೆ ಮೆಚ್ಚಿದ ಕೃಷ್ಣನು ಆತನಿಗೆ ವಿಶ್ವರೂಪವನ್ನು ತೋರಿಸಿ ಬಲರಾಮನ ಜೊತೆಯಲ್ಲಿ ಕಂಸನ ಪಟ್ಟಣಕ್ಕೆ ಹೊರಟನು. ದಾರಿಯಲ್ಲಿ ಬಲರಾಮ ಮತ್ತು ಕೃಷ್ಣರು ಕಂಸನ ಅರಮನೆಯ ಮಡಿವಾಳನನ್ನು ಕೊಂದು ಅವನಿಂದ ವಸ್ತ್ರಗಳನ್ನು ಪಡೆದರು. ಕುಬ್ಜೆಯೊಬ್ಬಳಿಂದ ಗಂಧವನ್ನು ಪಡೆದು ಅವಳನ್ನು ಸೌಮ್ಯಾಂಗಿಯಾಗಿ ಮಾಡಿದರು. ಅವರು ಸುಧಾಮನಿಂದ ಸತ್ಕಾರಗೊಂಡು ಕಂಸನ ಅರಮನೆಯನ್ನು ಹೊಕ್ಕರು. ಅಲ್ಲಿ ಕೃಷ್ಣನು ಸಿಂಹದಂತೆ ಕಂಸನ ಮೇಲೆರಗಿ ಆತನನ್ನು ಸೆಳೆದು ಕೊಂದು ಉಗ್ರಸೇನನಿಗೆ ಪಟ್ಟವನ್ನು ಕಟ್ಟಿದನು. ಆ ಬಳಿಕ ಬಲರಾಮ ಕೃಷ್ಣರು ಕಾಶಿಗೆ ಹೋಗಿ ಅಲ್ಲಿ ಸಾಂದೀಪನಿಂದ ಸಮಸ್ತ ವಿದ್ಯೆಗಳನ್ನು ಕಲಿತರು. ಕೃಷ್ಣನು ಶಂಖಚೂಡನನ್ನು ಕೊಂದು ಸಮುದ್ರಗತನಾಗಿದ್ದ ಸಾಂದೀಪನ ಮಗನನ್ನು ತಂದುಕೊಟ್ಟನು. ಅನಂತರ ಕೃಷ್ಣನು ಸಮುದ್ರ ತೀರದಲ್ಲಿ ದ್ವಾರಾವತಿ ನಗರವನ್ನು ಕಟ್ಟಿದನು. ಕಾಲಯವನನ್ನು

ಮುಚುಕುಂದನಿಂದ ಸಾಯುವಂತೆ ಮಾಡಿದನು. ಒಮ್ಮೆ ಕೃಷ್ಣನು ಅಡಗಿದ್ದ ಗಿರಿಗೆ ಮಾಗಧನು ಬೆಂಕಿ ಹಚ್ಚಿದಾಗ ಕೃಷ್ಣನು ವರುಣಾಸ್ತ್ರದಿಂದ ಅಲ್ಲಿಯ ಬೆಂಕಿಯನ್ನು ಆರಿಸಿದನು. ಮುಂದೆ ಕೃಷ್ಣನು ಭೀಷ್ಮಕನ ಪುತ್ರಿಯಾದ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಡುವುದನ್ನು ತಪ್ಪಿಸಿ ತಾನು ಮದುವೆಯಾದನು. ಆ ಬಳಿಕ ಸತ್ರಾಜಿತನ ಮಗಳು ಸತ್ಯಭಾಮೆಯನ್ನೂ ಮದುವೆಯಾದನು. ರುಕ್ಮಿಣಿಯ ಮಗನ ನಾಮಕರಣೋತ್ಸವ ಸಂದರ್ಭದಲ್ಲಿ ನಾರದನು ತಂದ ಪಾರಿಜಾತ ಪುಷ್ಪವನ್ನು ಕೃಷ್ಣನು ರುಕ್ಮಿಣಿಗೆ ಕೊಡಲು ಸತ್ಯಭಾಮೆಗೆ ಮತ್ಸರವುಂಟಾಯಿತು. ಆಗ ಕೃಷ್ಣನು ಅಮರಾವತಿಗೆ ಹೋಗಿ ಸತ್ಯಭಾಮೆಗೆ ಪಾರಿಜಾತದ ವೃಕ್ಷವನ್ನೇ ತಂದುಕೊಟ್ಟನು. ಅನಂತರ ನರಕಾಸುರನನ್ನು ಸಂಹರಿಸಿ ಅವನ ಸೆರೆಯಲ್ಲಿದ್ದ ಹದಿನಾರು ಸಾವಿರ ಯುವತಿಯರನ್ನು ವಿವಾಹವಾಗಿ ಹದಿನಾರು ಸಾವಿರ ಪುತ್ರರನ್ನು ಪಡೆದನು. ಷಟ್ಪುರವಾಸಿಯೆಂಬ ರಾಕ್ಷಸನನ್ನು ಕೊಂದು ಅರ್ಜುನನನ್ನು ಬಿಡಿಸಿದನು. ಧರ್ಮರಾಯನು ಮಾಡುತ್ತಿದ್ದ ರಾಜಸೂಯಯಾಗದಲ್ಲಿ ಈತ ಅಗ್ರಪೂಜೆಗೆ ಅರ್ಹನಾಗಲು ಶಿಶುಪಾಲನು ಕೃಷ್ಣನನ್ನು ಹೀಯಾಳಿಸಿದನು. ಆಗ ಕೃಷ್ಣನು ಶಿಶುಪಾಲನ ತಲೆಯನ್ನು ಕತ್ತರಿಸಿ ಅಗ್ರಪೂಜೆಯನ್ನು ಸ್ವೀಕರಿಸಿದನು. ಆ ಬಳಿಕ ಸಾಲ್ವ ಮೊದಲಾದ ಪ್ರಮುಖ ರಾಕ್ಷಸರನ್ನೂ ಬಾಣಾಸುರನನ್ನೂ ಕೊಂದನು. ಕೆಲವು ದಿನಗಳು ಕಳೆದು ಕೃಷ್ಣನು ಭಾರತವೆಂಬ ಕಥೆಯನ್ನು ಹುಟ್ಟಿಸಿ ಪಾಂಡವರಿಂದ ಹದಿನೆಂಟು ಅಕ್ಷೋಹಿಣಿ ಸೈನ್ಯವನ್ನು ಕೊಲ್ಲಿಸಿ ಭೂಮಿಯ ಭಾರವನ್ನು ಕಡಿಮೆ ಮಾಡಿದನು.

ತಾರಕಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿ ಎಂಬ ರಾಕ್ಷಸರು ಬ್ರಹ್ಮನಿಂದ ವರಗಳನ್ನು ಪಡೆದು, ಮೂರು ಮಾಯಾಪಟ್ಟಣಗಳನ್ನು ನಿರ್ಮಿಸಿಕೊಂಡು, ಅಲ್ಲಿ ವಾಸಮಾಡುತ್ತ ದೇವತೆಗಳನ್ನು ಬಾಧಿಸುತ್ತಿದ್ದರು. ಇವರ ಬಾಧೆಯನ್ನು ತಡೆಯಲಾರದೆ ನಾರದನು ವಿಷ್ಣುವಿನ ಬಳಿಗೆ ಬಂದು ದೇವತೆಗಳನ್ನು ರಕ್ಷಿಸಬೇಕೆಂದು ಕೇಳಿಕೊಂಡನು. ವಿಷ್ಣು ಶಿವನ ಸಹಾಯವಿಲ್ಲದೆ ಈ ಕೆಲಸ ಅಸಾಧ್ಯವೆಂದು ತಿಳಿಸಿ ಶಿವನನ್ನು ಕಾಣಲು ಹೇಳಿದನು. ದೇವತೆಗಳು ಶಿವನನ್ನು ಕಂಡು ವಿಷಯವನ್ನು ತಿಳಿಸಿ ರಕ್ಷಿಸಬೇಕೆಂದು ಕೇಳಿಕೊಂಡರು. ಶಿವನು ಒಪ್ಪಿ ಭೂಮಿಯನ್ನು ರಥವನ್ನಾಗಿ ಮಾಡಿಕೊಂಡನು. ನಾಲ್ಕು ವೇದಗಳನ್ನು ನಾಲ್ಕು ಕುದುರೆಗಳನ್ನಾಗಿ ಮಾಡಿದನು. ಹೇಮಪರ್ವತವನ್ನು ಬಿಲ್ಲನ್ನಾಗಿ ಮಾಡಿ, ಆದಿಶೇಷನನ್ನು ಹೆದೆಯಾಗಿಸಿ, ಬ್ರಹ್ಮನನ್ನು ಸಾರಥಿಯಾಗಿ, ವಿಷ್ಣುವನ್ನು ಬಾಣವಾಗಿ ಮಾಡಿಕೊಂಡು ದೇವತೆಗಳ ಸೈನ್ಯದೊಡನೆ ರಾಕ್ಷಸರ ಮೇಲೆ ಯುದ್ಧಕ್ಕೆ ಹೊರಟನು. ರಾಕ್ಷಸಬಲಕ್ಕೂ ದೇವಬಲಕ್ಕೂ ಯುದ್ಧವಾಗಿ ದೇವತೆಗಳು ರಾಕ್ಷಸಬಲವನ್ನು ಮುರಿದರು. ಆಗ ವಿಷ್ಣು ನಗ್ನನಾಗಿ ರಾಕ್ಷಸಸ್ತ್ರೀಯರ ಪಾತಿವ್ರತ್ಯವನ್ನು ನಾಶಮಾಡಿದನು. ಹೀಗೆ ವಿಷ್ಣು ಬೌದ್ಧಾವತಾರದಿಂದ ಕೋಟೆಯನ್ನು ಪ್ರವೇಶಿಸಿ ಬೌದ್ಧದರ್ಶನ ಮಾಡಿಸಿ ಹೊರಬಂದು ಪುನಃ ಬಿಲ್ಲಾದನು. ಶಿವನು ತ್ರಿಪುರಗಳು

ಕೊಡುವುದನ್ನೆ ನೋಡುತ್ತಿದ್ದು ಒಂದೇ ಬಾಣದಿಂದ ಆ ಪಟ್ಟಣಗಳನ್ನು ಭಸ್ಮ ಮಾಡಿದನು.

ಒಂದುದಿನ ಬ್ರಹ್ಮ ಮೊದಲಾದ ದೇವತೆಗಳು ವಿಷ್ಣುವಿನಲ್ಲಿ ಕಲಿಯುಗದ ಕಷ್ಟ ನಷ್ಟಗಳನ್ನೆಲ್ಲ ತಿಳಿಸಿ ಈ ಯುಗದ ಉಪದ್ರವಗಳನ್ನು ಪರಿಹರಿಸಬೇಕೆಂದು ಆತನನ್ನು ಬಹುವಾಗಿ ಸ್ತುತಿಸಿದರು. ಆಗ ವಿಷ್ಣು ಪ್ರಸನ್ನನಾಗಿ ಕಲ್ಕ್ಯವತಾರದಿಂದ ಕಲಿಯುಗದ ಕರ್ಮಬಾಧೆಗಳನ್ನು ಬಿಡಿಸಿ ನಿಮ್ಮನ್ನು ಖಂಡಿತವಾಗಿಯೂ ರಕ್ಷಿಸುತ್ತೇನೆಂದು ಅಭಯವನ್ನಿತ್ತನು.

ವೈಷ್ಣವೇತರ ದಶಾವತಾರಗಳು

ವಿಷ್ಣುವಿನ ಕೆಲವು ಅವತಾರಗಳನ್ನು ವೀರಶೈವರು ಮತ್ತು ಜೈನರು ತಮ್ಮ ಕಾವ್ಯದಲ್ಲಿ ಭಿನ್ನವಾದ ರೀತಿಯಲ್ಲಿ ಬಳಸಿಕೊಂಡಿದ್ದಾರೆ. ನಂಬಿದ ದೈವ, ಆಶ್ರಯಿಸಿದ ಧರ್ಮ ಇವುಗಳಿಗೆ ಅನುಗುಣವಾಗಿ ಅವತಾರಗಳ ಸೂತ್ರಧಾರಿಯೂ ಬದಲಾಗುತ್ತಾನೆ. ಇಲ್ಲಿ ನಿದರ್ಶನಕ್ಕಾಗಿ ಮತ್ಸ್ಯಾವತಾರವನ್ನು ನೋಡಬಹುದು.

ದಶಾವತಾರ ಚರಿತೆಯಲ್ಲಿ ತಮನು ವೇದವನ್ನು ಕದ್ದೊಯ್ದಾಗ ದೇವತೆಗಳು ವಿಷ್ಣುವಿಗೆ ಮೊರೆಯಿಡುತ್ತಾರೆ. ವಿಷ್ಣು ಮತ್ಸ್ಯಾವತಾರವನ್ನು ಧರಿಸಿ ತಮನನ್ನು ಸಂಹರಿಸಿ ವೇದವನ್ನು ತಂದುಕೊಡುತ್ತಾನೆ.

ಶಿವತತ್ತ್ವ ಚಿಂತಾಮಣಿ (ವೀರಶೈವಕಾವ್ಯ)ಯಲ್ಲಿ ತಮನು ವೇದವನ್ನು ಕದ್ದಾಗ ದೇವತೆಗಳು ಶಿವನಿಗೆ ಮೊರೆಯಿಡುತ್ತಾರೆ. ಆಗ ಶಿವನು ವೇದವನ್ನು ರಕ್ಷಿಸಲು 'ವಿಷ್ಣು ವಿಂಗಾಜ್ಞಾಪಿಸಿ'ದನು. ವಿಷ್ಣು ಮತ್ಸ್ಯರೂಪವನ್ನು ಧರಿಸಿ ತಮನನ್ನು ಕೊಂದು ಸಮುದ್ರದಲ್ಲಿ ಕ್ರೀಡಿಸುತ್ತಿರಲು ಶಿವನು ಆ ಮೀನಿನ ಬೆನ್ನೆಲುಬನ್ನು ಮುರಿದು ಅದನ್ನು ಕಂಕಾಳವನ್ನಾಗಿ ಮಾಡಿ ಧರಿಸಿದನು. ಇದೇ ವೀರಶೈವರಲ್ಲಿ ಕಂಕಾಳಧರಲೀಲೆ ಎಂದು ಹೆಸರಾಯಿತು.

ಇಲ್ಲಿ ಹಿರಣ್ಯಕಶಿಪುವನ್ನು ಸಂಹರಿಸಬೇಕೆಂದು ದೇವತೆಗಳೆಲ್ಲರೂ ಶಿವನನ್ನು ಸ್ತುತಿಸುತ್ತಾರೆ. ಶಿವನ ಅಪ್ಪಣೆಯಂತೆ ವಿಷ್ಣು ನರಸಿಂಹಾವತಾರದಿಂದ ಹಿರಣ್ಯಕಶಿಪುವನ್ನು ಕೊಂದು ದೇವತೆಗಳನ್ನು ಬಾಧಿಸುತ್ತಿರುತ್ತಾನೆ. ಶಿವನು ವೀರಭದ್ರನಿಗೆ ನರಸಿಂಹನನ್ನು ಕೊಲ್ಲುವಂತೆ ಹೇಳುತ್ತಾನೆ. ವೀರಭದ್ರನು ಶರಭಾವತಾರದಿಂದ ನರಸಿಂಹನನ್ನು ಕೊಂದು ಅವನ ಚರ್ಮವನ್ನೂ ಮುಖವನ್ನೂ ಈಶ್ವರನಿಗೆ ಅರ್ಪಿಸುತ್ತಾನೆ. ಇದು ಶರಭಾವತಾರ ಲೀಲೆ.

ಆದರೆ ದಶಾವತಾರ ಚರಿತೆಯಲ್ಲಿ ವಿಷ್ಣು ನರಸಿಂಹಾವತಾರದಿಂದ ದೇವತೆಗಳನ್ನು ಬಾಧಿಸುತ್ತಿದ್ದಾಗ ಅವರೆಲ್ಲರೂ ಮಹಾಲಕ್ಷ್ಮಿಯನ್ನು ಸ್ತುತಿಸುತ್ತಾರೆ. ಆಕೆ ದೇವತೆಗಳಿಗೆ ಸಿಂಹಮುಖವನ್ನು ಧರಿಸಿಕೊಳ್ಳಲು ಹೇಳುತ್ತಾಳೆ. ಅದರಂತೆ ದೇವತೆಗಳು ಸಿಂಹಮುಖವನ್ನು ಧರಿಸಲು ವಿಷ್ಣು ಪ್ರಸನ್ನನಾಗುತ್ತಾನೆ.

ಇದೇ ರೀತಿ ಬೌದ್ಧಾವತಾರ ವೀರಶೈವರಲ್ಲಿ ತ್ರಿಪುರದಹನಲೀಲೆಯಾಗಿದೆ. ಕೂರ್ಮಾವತಾರ ವಿಷಹರಣಲೀಲೆ ಮತ್ತು ಚಂದ್ರಕಲಾಧರಲೀಲೆಗಳಾಗುತ್ತವೆ.

ಹೀಗೆ ವಿಷ್ಣುವಿನ ಅವತಾರಗಳು ವೀರಶೈವರಲ್ಲಿ ಶಿವನ ಲೀಲೆಗಳಾಗಿವೆ. ವೀರಶೈವರಲ್ಲಿ ಶಿವ ಪ್ರಧಾನನಾಗಿದ್ದರೆ ವೈದಿಕರಲ್ಲಿ ವಿಷ್ಣು ಪ್ರಧಾನನಾಗಿದ್ದಾನೆ. ವಿಷ್ಣುವಿನ ಅವತಾರದ ಮುಂದುವರಿದ ಭಾಗದಂತೆ ಶಿವನ ಲೀಲೆಗಳು ಕಾಣಿಸಿಕೊಳ್ಳುತ್ತವೆ. ಕೆಲವು ವೀರಶೈವ ಕಾವ್ಯಗಳಲ್ಲಿ ವಿಡಂಬನೆಗಾಗಿ ವಿಷ್ಣುವಿನ ಅವತಾರಗಳನ್ನು ಬಳಸಿಕೊಂಡದ್ದೂ ಉಂಟು. ವೈದಿಕರ ಆಚಾರವಿಚಾರಗಳನ್ನು ಒಪ್ಪದ ಜೈನರಲ್ಲಿ ದಶಾವತಾರದ ಕಲ್ಪನೆಯನ್ನು ನೋಡಿ—

> ನಾರಾಯಣನವತಾರಂ
> ವಾರಾಹಂ ಮತ್ಸ್ಯ ಕೂರ್ಮವೆಂಬಿವೆ ದಿಟವೆಂ
> ದೋರಂತೆ ಪೇೞ್ವರವನೆ ವಿ
> ದಾರಿಸಿಯುಂ ತಿನಲಕ್ಕುಮೆಂಬರತರ್ಕ್ಯರ್

(ಸಮಯ ಪರೀಕ್ಷೆ ೧೪_೧೪೫)

ಜೈನರು ಕೃಷ್ಣನನ್ನು ದೇವರೆಂದು ಪೂಜಿಸದೆ ಸಾಮಾನ್ಯನಂತೆಯೆ ಪರಿಗಣಿಸುತ್ತಾರೆ. ಒಟ್ಟಿನಲ್ಲಿ ವೈಷ್ಣವೇತರರು ತಮ್ಮ ತಮ್ಮ ಮತದ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಉದ್ದೇಶದಿಂದ ದಶಾವತಾರಗಳನ್ನು ವಿಡಂಬನೆಗಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ.

ವಿಮರ್ಶೆ

ದಶಾವತಾರದ ಕಥೆಗಳು ಭಾರತದ ಎಲ್ಲ ಭಾಗಗಳಲ್ಲಿಯೂ ಕಂಡುಬರುತ್ತವೆ. ಜನಪ್ರಿಯತೆಯ ಜೊತೆಗೆ ರಾಮಾಯಣ ಮತ್ತು ಮಹಾಭಾರತಗಳಷ್ಟು ಪ್ರಾಚೀನವೂ ಆಗಿರುವ ಈ ಕಥೆಗಳಲ್ಲಿ ವಿಷ್ಣು ಪ್ರಾಚುರ್ಯ ಕಂಡುಬರುತ್ತದೆ. ಮೊಟ್ಟಮೊದಲಬಾರಿಗೆ ವೇದಗಳಲ್ಲಿಯೆ ವಿಷ್ಣುವಿನ ಕಲ್ಪನೆ ಕಂಡುಬರುತ್ತದೆ. ಆ ಬಳಿಕ ವಿಷ್ಣು ರಾಮಾಯಣ ಮತ್ತು ಮಹಾಭಾರತಗಳಲ್ಲಿ ರಾಮಾವತಾರ ಮತ್ತು ಕೃಷ್ಣಾವತಾರಗಳಿಂದ ಕಾಣಿಸುತ್ತಾನೆ. ಅಲ್ಲದೆ ವಿಷ್ಣು ಮತ್ತಷ್ಟು ಅವತಾರಗಳೊಡನೆ ಪುರಾಣಗಳಲ್ಲಿ ರೂಪುಗೊಂಡನು. ಹೀಗೆ ವಿಷ್ಣುವಿನ ಬೆಳವಣಿಗೆಯ ಜೊತೆಯಲ್ಲಿಯೆ ಅವತಾರಗಳ ಸಂಖ್ಯೆಯೂ ಏರುತ್ತಾ ಹೋಯಿತು. ವಿಷ್ಣುವಿನ ಅಸಂಖ್ಯಾತ ಅವತಾರಗಳಲ್ಲಿ ಹತ್ತು ಅವತಾರಗಳು ಪ್ರಸಿದ್ಧ. ಆ ಹತ್ತು ಅವತಾರಗಳೆ ದಶಾವತಾರ ಚರಿತೆಯ ಕಥಾವಸ್ತು.

ಕನ್ನಡದಲ್ಲಿ ಜಗನ್ನಾಥವಿಜಯ, ಭಾಗವತ ಮತ್ತು ಇತರ ಕೆಲವು ಕಾವ್ಯಗಳಲ್ಲಿ ದಶಾವತಾರದ ಕಥೆಗಳು ಕಂಡುಬಂದರೂ ಸಮಗ್ರಕಾವ್ಯಕ್ಕೆ ದಶಾವತಾರದ ಕಥೆ ವಸ್ತುವಾಗಿರುವುದು ಮಲ್ಲರಸನಲ್ಲಿಯೆ ಮೊದಲೆನ್ನಬಹುದು. ಮಲ್ಲರಸನ ಕಾವ್ಯಕ್ಕೆ ಸಂಸ್ಕೃತದ ವಿಷ್ಣುಪುರಾಣ ಮತ್ತು ಪಾಂಚರಾತ್ರಾಗಮಗಳು ಮುಖ್ಯ ಆಕರವಾಗಿವೆ. ಕೃಷ್ಣಾವತಾರದ

ಭಾಗ ಮಾತ್ರ ಭಾಗವತದ ದಶಮಸ್ಕಂಧವನ್ನು ಹೆಚ್ಚಾಗಿ ಅವಲಂಬಿಸಿದೆ. ಮಲ್ಲರಸನು ದಶಾವತಾರ ಚರಿತೆಯಲ್ಲಿ ಹತ್ತು ಅವತಾರಗಳನ್ನು ಹನ್ನೊಂದು ಆಶ್ವಾಸಗಳಲ್ಲಿ ಬಿತ್ತರಿಸಿದ್ದಾನೆ. ಅವುಗಳು ಹೀಗಿವೆ—ಮತ್ಸ್ಯಾವತಾರ, ಕೂರ್ಮಾವತಾರ, ವರಾಹಾವತಾರ, ನರಸಿಂಹಾವತಾರ, ವಾಮನಾವತಾರ, ಪರಶುರಾಮಾವತಾರ, ರಾಮಾವತಾರ, ಕೃಷ್ಣಾವತಾರ, ಬೌದ್ಧಾವತಾರ ಮತ್ತು ಕಲ್ಕ್ಯವತಾರ. ಮೊದಲನೆಯ ಆಶ್ವಾಸದಲ್ಲಿ ಲೋಕಾಕಾರ ವರ್ಣನೆಯಿದೆ. ಉಳಿದ ಒಂದೊಂದು ಆಶ್ವಾಸದಲ್ಲಿ ಒಂದೊಂದು ಅವತಾರದ ಕಥೆಯಿದೆ.

ಮಲ್ಲರಸನು ಯಾವ ಮಾರ್ಪಾಟುಗಳನ್ನೂ ಮಾಡಿಕೊಳ್ಳದೆ ಮೂಲದ ವಸ್ತುವನ್ನು ಯಥಾವತ್ತಾಗಿ ಸ್ವೀಕರಿಸಿದರೂ ದಶಾವತಾರ ಚರಿತೆ ಮೂಲದ ಪಡಿಯಚ್ಚಾಗಿಲ್ಲ. ಮೂಲ ಪುರಾಣವಾದರೆ ಇದು ಕಾವ್ಯವಾಗಿದೆ. ಮೂಲದಲ್ಲಿ ವಿಸ್ತಾರವಾಗಿ ಬರುವ ಕಥೆಗಳನ್ನು ಇಲ್ಲಿ ಸಾಕಷ್ಟು ಸಂಗ್ರಹವಾಗಿ ಹೇಳಲಾಗಿದೆ. ಕವಿ ರಾಮಾವತಾರ ಮತ್ತು ಕೃಷ್ಣಾವತಾರಗಳನ್ನು ಎಂದಿನಂತೆ ವಿಸ್ತಾರಗೊಳಿಸಿದ್ದಾನೆ. ಅವತಾರಗಳ ಜೊತೆಗೆ ಅವುಗಳಿಗೆ ಪೋಷಕವಾಗುವಂಥ ಕಥೆಗಳನ್ನು ಹೇಳಿರುವುದರಿಂದ ದಶಾವತಾರ ಚರಿತೆ ಒಂದು ಕಥಾಕೋಶವಾಗಿಯೂ ರಂಜನೀಯವಾಗಿದೆ.

ಮಲ್ಲರಸನಿಗೆ ತನ್ನ ಕಾವ್ಯ ಮಹಾಕಾವ್ಯವಾಗಬೇಕೆಂಬ ಅಭಿಲಾಷೆಯಿದೆ ಆದ್ದರಿಂದ

ಶರನಿಧಿ ಶೈಲ ಪತ್ತನ ನೃಪಾಲ ಸುತಂ ನಿಜಕೇಳಿ ನಂದನಂ
ಧುರಜಯ ಮಂತ್ರ ದೂತ ವಿರಹಂ ಋತು ಯಾನ ಸುಧಾಂಶು ಭಾಸ್ಕರಂ
ಪರಿಣಯ ಕಾಮುಕೇಳಿ ವಧುವೆಂದೆನಿಸಿಪ್ಪ ಹದಿನೆಂಟುವರ್ಣನಂ
ವಿರಚಿಸಿ ಪೇಳ್ವೆನೀಕೃತಿಯೊಳಾವದಿನಂ ನೆಲೆಗೊಂಡು ನಿಲ್ಪಿನಂ ೧–೫

ಎಂದು ಹೇಳಿ ಅಷ್ಟಾದಶವರ್ಣನೆಗಳನ್ನು ಕಾವ್ಯದಲ್ಲಿ ಬರಮಾಡಿಕೊಂಡಿದ್ದಾನೆ. ಈತನು ವರ್ಣನೆಗಳಲ್ಲಿ ಕೆಲವೆಡೆ ಕವಿಸಮಯವನ್ನು ಅನುಸರಿಸಿದರೂ ಉಳಿದೆಡೆಗಳಲ್ಲಿ ತನ್ನ ಪ್ರತಿಭೆಯನ್ನು ತೋರದೆ ಇಲ್ಲ.

ನಿದರ್ಶನಕ್ಕಾಗಿ ಕೆಲವು ಪದ್ಯಗಳನ್ನು ನೋಡಬಹುದು :

ತಳಿರಂ ಪೇೞ್ ತರುವ್ರಜಂ ಶಶಿಕರಂ ಬೆಳ್ಪೇೞ್ ಕಾಮಂಗೆ ದೋ
ರ್ವಲಮುಮ್ಮಿಕ್ಕೞ್ ಸಮಂತು ಕೋಕಿಲಗಲಂ ನುಣ್ಪೇೞ್ ಭೋಗಾಕುಲಂ
ತಲೆಯಂ ತೋೞ್ ಹಿಮರ್ತುವಾೞ್ ತೃಣಸಂದೋಹಂ ಕರಂ ಬೀೞ್ ನಿ
ರ್ಮಲಚಿತ್ತಂ ಮಿಗೆ ತೋೞ್ ಬಂದುದು ವಸಂತಂ ಸೌಖ್ಯ ವಿಶ್ರಾಂತದಿಂ
೬–೧೭

ಹೀಗೆ ವಸಂತೋದಯವನ್ನು ಮನೋಜ್ಞವಾಗಿ ಹೇಳಿದ ಕವಿಯ ಸೂರ್ಯೋದಯ ವರ್ಣನೆಯನ್ನು ನೋಡಿರಿ

ಹರಿಣಾಂಕಂ ಕಳೆಗುಂದೆ ಕೌಮುದಿಯ ಶುಭ್ರಂ ನಾಸೆ ಚಂದ್ರೋಪಲಂ
ವಿರಸಂಬೆತ್ತು ಚಕೋರಿಗಂ ವಿರಹತಾಪಂ ಪುಟ್ಟೆ ನಕ್ಷತ್ರಗಳ್
ಪರೆಯಲ್ ಕೈರವದುನ್ನತಂ ಕುಸಿಯಲಾ ಮಂದಾನಿಲಂ ಪೋಗಲ
ಚ್ಚರಿಯಾಯ್ತಂಬುಧಿ ತಗ್ಗಲಾಗಲರುಣಂ ತಾಂ ತೋಱಿದಂ ಪೂರ್ವದೊಳ್
೭-೭೭

ಇಲ್ಲಿ ಕ್ರಿಯೆಗಳನ್ನು ಬಿಡಿಬಿಡಿಯಾಗಿ ಹೇಳಿ ಸೂರ್ಯೋದಯದ ಚಿತ್ರಣವನ್ನು ಹೃದಯಂಗಮಗೊಳಿಸಿದ್ದಾನೆ.

ಕೆದರ್ದಲೆ ಕೆಂಡಮಂ ಕರೆವ ಕೆಂಗರಿಗಣ್ ಕಿವಿಗಾಂತ ಬಾಯಿಯು
ರ್ಬಿದ ತುಟಿ ಜೋಲ್ದ ಲಂಬಗಿವಿ ನೀವಿಗಳೆಲ್ಲ ಕರಂ ಸಡಿಲ್ದ ಕೊ
ರ್ಬಿದ ಬಸುಱುಂ ಕೆಲಕ್ಕೊಲೆವ ಪೆರ್ಮೊಲೆ ಕೊಂಕಿದ ಕೋರದಾಡೆ ಪೆ
ರ್ಚಿದ ನಗೆ ಬೆಳ್ಪನಾದ ಪೊಱಪಲ್ಗಳ ತಾಟಕಿ ಬಂದಳಾಕ್ಷಣಂ ೮-೯೫

ಈ ವರ್ಣನೆಯಲ್ಲಿ ಸಹಜತೆ ಇದ್ದು ವರ್ಣಿಸಿರುವ ಪಾತ್ರ ಚಿತ್ರಮಯವಾಗಿ ಕಣ್ಣಿಗೆ ಕಟ್ಟಿದಂತಿದೆ.

ಯುದ್ಧವರ್ಣನೆಯಲ್ಲಿ ಮಲ್ಲರಸ ಸಾಂಪ್ರದಾಯಿಕತೆಗೆ ಶರಣುಹೋಗದೆ ತನ್ನ ಸಮಕಾಲದ ಕೆಲವು ಅಪರೂಪದ ಚಿತ್ರಗಳನ್ನು ಕೊಟ್ಟಿದ್ದಾನೆ—

ಹರಿಗೆಯವರೆಲ್ಲಿ ಪಿಡಿ ಬ
ದ್ಧರಮಂ ಇಚ್ಚಣಿಯ ಹಾಯ್ಕು ಹೂಳಂಗಳ ಕಂ
ಡರಿಸು ನೆಲಗನ್ನವೆಂಬ
ಬ್ಬರ ಮುಸಗಿತು ಮಗಧನೃಪನ ಸೇನೆಯೊಳೆಲ್ಲಂ ೯-೧೪೧

ಪಡೆಮುಸೆದು ಮೊಱಿದು ಲಗೆಯ
ಬಿಡವೇಱಿತು ಕೋಂಟೆವೆನೆಗೆ ಎಸುವಂಬಿಗೆ ಮೋ
ಲಿಡುವೆತ್ತುಗಲ್ಗೆ ಸೂಸುವ
ಕಡುಗಾದಿಹ ಮಳಲ ಲೆಕ್ಕಿಸದ ರಿಪುಸ್ಸೈನ್ಯಂ ೯-೧೪೩

ಒಟ್ಟಿನಲ್ಲಿ ಮಲ್ಲರಸ ತನ್ನ ಅನುಭವದ ಅಭಿವ್ಯಕ್ತಿಯಲ್ಲಿ ಯಶಸ್ವಿಯಾಗಿದ್ದಾನೆ.

ಮಲ್ಲರಸ ಚಂಪೂಕಾವ್ಯ ಪ್ರಕಾರದಲ್ಲಿ ಕಾವ್ಯವನ್ನು ರಚಿಸಿದ್ದರೂ ಪ್ರಾರಂಭದ ಚಂಪೂಕಾವ್ಯಗಳಲ್ಲಿರುವ ಬಿಗುವು ಈತನಲ್ಲಿ ಕಂಡುಬರುವುದಿಲ್ಲ. ಕೆಲವು ಕಡೆ ಸಂಸ್ಕೃತ ಶಬ್ದಗಳು ತಲೆ ಹಾಕಿವೆ. ಆದರೆ ಈತನದು ದೇಸಿಮಿಶ್ರಿತ ಸರಳಶೈಲಿ. ಉತ್ತಮ ದೇಸಿಗೆ ಕೆಳಗಿನ ಪದ್ಯವನ್ನು ನೋಡಿ—

ಮುಱುವೆಲ್ಲಿ ಕಱುವ ಬಿಡು ಮಿಗೆ
ತುಱಿಸಾವಂ ಕಱಿತವರೇಳು ಬಿದಿರಂ ಪಿಡಿ ನೀಂ
ಸಿಱುವಾಯನೆನಿಪ್ಪಬ್ಬರ
ತುಱುಹಟ್ಟಿಯೊಳುರ್ಬಿ ಪರ್ಬುತಿರ್ಪವಸರದೊಳ್ ೯-೧೨೫

ಸರಳಶೈಲಿಯ ಜತೆಗೆ ಅನೇಕ ಹೊಸಗನ್ನಡ ಶಬ್ದಗಳು ಇಲ್ಲಿ ನುಸುಳಿವೆ. ಪದ್ಯ ಭಾಗದಲ್ಲಿ 'ರಥಚಕ್ರವನ್ನು ಕಂಡಳ್' 'ಆ ಸಮಯದಲ್ಲಿ' 'ಷೋಳಸಹಸ್ರವನ್ನು ನೆಲವಾಳಿಗೆಯೊಳ್' ಇತ್ಯಾದಿ ಪ್ರಯೋಗಗಳು ಸಿಕ್ಕುತ್ತವೆ.

ಮಲ್ಲರಸ ಶ್ರೇಷ್ಠದರ್ಜೆಯ ಸಂಗ್ರಹಕಾರ. ನಿದರ್ಶನಕ್ಕಾಗಿ ಕೃಷ್ಣಾವತಾರದ ಭಾಗವನ್ನು ಪರಿಶೀಲಿಸಬಹುದು. ಇಲ್ಲಿ ಕೃಷ್ಣನ ಬಾಲಲೀಲೆ, ರಾಕ್ಷಸರ ವಧೆ, ಪಾರಿಜಾತ ಪ್ರಸಂಗ, ಶಿಶುಪಾಲವಧೆ ಮೊದಲಾದ ಮುಖ್ಯ ಘಟನೆಗಳನ್ನು ಒಂದೂ ಬಿಡದಂತೆ ಒಂದೊಂದು ಕಂದಪದ್ಯದಲ್ಲಿ ನಿರೂಪಿಸುತ್ತ ಹೋಗಿದ್ದಾನೆ. ಕೃಷ್ಣನ ಅಗಲಿಕೆಯಿಂದ ಗೋಪಿಯರಿಗೆ ಉಂಟಾದ ಅವಸ್ಥೆ ಭಾಗವತ ಮೊದಲಾದೆಡೆಗಳಲ್ಲಿ ದೀರ್ಘವಾಗಿ ಬರುತ್ತದೆ. ಕವಿ ಒಂದೇ ಪದ್ಯದಲ್ಲಿ ಗೋಪಿಯರ ಅಳಲನ್ನು ಸಮರ್ಥವಾಗಿ ವ್ಯಕ್ತಪಡಿಸುವ ಧಾಟಿ ಹೀಗಿದೆ—

ಹರಿಯುಮನಗಲಿಸೆ ಬಂದಾ
ಸುರವೈರಿಯ ದೂತನೆನಿಸುವಕ್ರೂರಂಗಂ
ಬರೆದವರಾರೋ ಮೊದಲ
ಕ್ಕರಮಂ ತೊಡೆಯೆಂದು ಗೋಪಿಯರ್ ಕೋಪಿಸಿದರ್ ೯-೧೨೭

ಇಲ್ಲಿ ಮಲ್ಲರಸನ ದೃಷ್ಟಿಯೆಲ್ಲ ಕಥೆಯ ಓಟದ ಕಡೆಗೆ. ಅದರೊಡನೆ ಓದುಗನ ಪ್ರಜ್ಞೆ ಎಚ್ಚರದಿಂದಿರುವಂತೆ ಮಾಡಲು ಘಟನೆಗಳನ್ನು ನೆನಪಿಗೆ ತಂದು ಕೊಡುತ್ತಾನೆ. ಆದರೆ ಇದರ ಹಿಂದಿರುವ ಸಂಗ್ರಹಗುಣ ಮೆಚ್ಚುವಂತಹದು. ಸಾಮಾನ್ಯವಾಗಿ ಬಳಕೆಯಲ್ಲಿರುವ ಅಲಂಕಾರಗಳ ಜೊತೆಗೆ ಕೆಲವು ವಿರಳವಾದ ಅಲಂಕಾರಗಳ ಪ್ರಯೋಗವನ್ನೂ ಈತನ ಕಾವ್ಯದಲ್ಲಿ ಕಾಣಬಹುದು.

ಕರಿದಹುದಾನೆಯಿಂ ಧರಣಿಯಾನೆಗಳಿಂ ಧರೆಯಿಂದಲಂಜನಂ
ಕರಿದಹುದಾನೆಯಿಂ ಧರೆಯಿನಂಜನದಿಂ ನವನೀಲಮೇಘಮುಂ
ಕರಿದಹುದಾನೆಯಿಂ ಧರೆಯಿನಂಜನ ಮೇಘದೆ ದೇವಕೀಸುತಂ
ಕರಿದಹುದಾನೆಯಿಂ ಧರೆಯಿನಂಜನ ಮೇಘದಿ ಕೃಷ್ಣನಿಂ ತಮಂ ೬-೪೫

ಮೇಲಿನ ಪದ್ಯದಲ್ಲಿ "ಸಾರ" ಎಂಬ ಅಲಂಕಾರವನ್ನು ಕವಿ ಬಳಸಿದ್ದಾನೆ. ಈತ ಶ್ಲೇಷೆಗಳನ್ನು ಬಳಸುವುದರಲ್ಲಿಯೂ ಗಟ್ಟಿಗ.

ಕಮಲಂ ಕಮಲಂ ಕಮಲಂ
ಕುಮುದಂ ಕುಮುದಂಗಳೊಪ್ಪುವಾ ಕುಮುದಗಳಿಂ

ಭ್ರಮರಂ ಭ್ರಮರಂ ಭ್ರಮರಂ
ಭ್ರಮಿಸುವವಮುಮು ಕೊಳ ವಿರಾಜಿಸುತಿರ್ಕುಂ ೫_೩೩

ಹೀಗೆ ಈತನ ಶ್ಲೇಷೆಗಳು ನಾವೀನ್ಯದಿಂದಲೂ ಚಮತ್ಕಾರದಿಂದಲೂ ಕೂಡಿವೆ. ಈತನು ಅಲಂಕಾರಗಳ ಜತೆಗೆ ಕೆಲವು ನೀತಿಮಾತುಗಳನ್ನೂ ಗಾದೆಮಾತುಗಳನ್ನೂ ಔಚಿತ್ಯ ವರಿತು ಬಳಸಿದ್ದಾನೆ. ಉದಾಹರಣೆಗೆ—

ಒಂದೆಂದರೆಯೊಂಬತೆಂಬ
ಅತಿ ಮಥನಂ ಕೇಡಹುದು
ಪಿರಿದುಂ ಪಿಸುಣರ್ಗೆ ಬಾಧೆಯೇಂ ತಪ್ಪುಗುಮೇ
ಪಿಡಿದಜಿಸುವ ಬಳ್ಳಿಯೆ ಕಾಲ್ದೊಡಕಿತು
ದುಷ್ಟರ್ ದುರ್ಜನರಿಂದಂ ಸೃಷ್ಟೀಶ್ವರರಳಿದು ಪೋಪರೆಂಬುದು ಪುಸಿಯೇ
ಮಾಡಿದ ಲೇಸಂ ಮಱೆದು ಮರಣಮಂತ್ರಕ್ಕನುಗ್ರಹಂಗೊಂಬಂತೆ
ಕಡಲೆಯಂ ಬಿತ್ತಿದೊಡೆ ಕಳ್ಳಿ ಮೊಳೆವುದೆ

ಇವೇ ಮೊದಲಾದ ಪ್ರಯೋಗಗಳನ್ನು ನೋಡಬಹುದು. ಈ ರೀತಿಯ ಪ್ರಯೋಗಗಳಿಂದ ಕೃತಿ ಓದುಗರಿಗೆ ಹತ್ತಿರವಾಗುತ್ತದೆ.

ಮಲ್ಲರಸನು ಛಂದಸ್ಸಿಗಾಗಿ ಕೆಲವು ವ್ಯತ್ಯಾಸಗಳನ್ನು ಮಾಡಿಕೊಂಡಿದ್ದಾನೆ—

ಗಭೀರ	>	ಗಾಭೀರ	೧_೧೨
ಕೂರ್ಮಾವತಾರ	>	ಕೂರ್ಮವತಾರ	೩_೨
ಅಂಬರ	>	ಅಂಬಾರ	೫_೬
ಮಾಡುವುದೇನು	>	ಮಾಡೂದೇನು	೫_೧೯
ಪೇೞುವುದು	>	ಪೇೞೂದು	೫_೧೧೫
ಸೂರ್ಯೋದಯ	>	ಸೂರ್ಯುದಯ	೮_೬
ಕಾರ್ಯ	>	ಕಾರಿಯ	೮_೨೩೧

ಭಕ್ತಿ

ದಶಾವತಾರ ಚರಿತೆ ಭಕ್ತ ಕಾವ್ಯ. ಮಲ್ಲರಸ ಭಕ್ತಿ ಕವಿ. 'ಹರಿಯಂ ನೆನೆಯಲ್ ಭವಸಾಗರಮಂ ದಾಂಟುವದು' ಎಂಬ ದೃಢವಿಶ್ವಾಸ ಆತನಿಗಿದೆ. ಮಲ್ಲರಸನಿಗೆ ಜಗತ್ತೆಲ್ಲ ವಿಷ್ಣುಮಯ. 'ಜಲಮೊಳ್ ಮಾರುತನೊಳ್ ದಿವಾಕರನೊಳಂ ಶೀತಾಂಗನೊಳ್ ವಹ್ನಿಯೊಳ್ ಇಳೆಯೊಳ್ ಪುಷ್ಕರಮಾತ್ಮಮೂರ್ತಿಗಳೊಳಂ ಕುಲಶೈಲಂಗಳೊಳಬ್ಧಿಯೊಳ್ ಸಕಲ ಚೈತನ್ಯ ಸ್ವರೂಪಂಗಳೊಳ್'—ಹೀಗೆ ಎಲ್ಲೆಲ್ಲಿಯೂ ವಿಷ್ಣುವನ್ನು ಕಾಣುತ್ತಾನೆ. ಅಲ್ಲದೆ ಸಂದರ್ಭ ಸಿಕ್ಕಿದಾಗಲೆಲ್ಲ ವಿಷ್ಣುಸ್ತುತಿ ಮಾಡಿದ್ದು ಸಾಲದೆ ಕಾವ್ಯದ ಕಡೆಯಲ್ಲಿ ರಗಳೆಯಲ್ಲಿ ತೃಪ್ತಿಯಾಗುವಷ್ಟು ವಿಷ್ಣುವನ್ನು ಸ್ತುತಿಸಿದ್ದಾನೆ.

ಪಾತ್ರ

'ಕೃತಿಗಧಿನಾಯಕಂ ವಿಮಲವಾರಿಧಿಜಾತೆಯಧೀಶ ವಿಷ್ಣು' ಎಂಬ ಮಾತಿನಲ್ಲಿ ಈ ಕಾವ್ಯದ ನಾಯಕ ವಿಷ್ಣುವೆಂಬುದು ಸ್ಪಷ್ಟವಾಗುತ್ತದೆ. ಉಳಿದ ಪಾತ್ರಗಳು ವಿಷ್ಣುವಿನ ಪಾತ್ರಕ್ಕೆ ಪೋಷಕವಾಗಿ ಬಂದಿವೆ. ಮತ್ಸ್ಯ, ವರಾಹ, ಕೂರ್ಮ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬೌದ್ಧ, ಕಲ್ಕಿ ಹೀಗೆ ಹತ್ತು ಜನ್ಮಗಳಲ್ಲಿ ಹತ್ತು ರೂಪಗಳಲ್ಲಿ ಕಾಣಿಸಿಕೊಳ್ಳುವ ವಿಷ್ಣುವಿನ ಪಾತ್ರ ವೈವಿಧ್ಯತೆಯಿಂದ ಕೂಡಿದೆ. ಮತ್ಸ್ಯಾವತಾರದಿಂದ ಕಲ್ಕ್ಯಾವತಾರದವರೆಗಿನ ವಿಷ್ಣುವಿನ ಅವತಾರಗಳು ಡಾರ್ವಿನ್‌ನ ವಿಕಾಸವಾದವನ್ನು ನೆನಪಿಗೆ ತರುತ್ತವೆ. ವಿಷ್ಣು ಎಲ್ಲರ ಕಷ್ಟಗಳನ್ನು ಪರಿಹರಿಸುವವನು; ಅತ್ಯಂತ ಪರಾಕ್ರಮಿ; ಮಹಾ ಸಾಹಸಿ. ದೇವತೆಗಳ ತೊಂದರೆಯನ್ನೂ ಸಹ ನಿವಾರಿಸಬಲ್ಲವನಾಗಿರುವುದರಿಂದ ಈತ ದೇವತೆಗಳಿಂದ ಪೂಜ್ಯನು.

ಈ ಕಾವ್ಯದಲ್ಲಿ ಇನ್ನೂ ಹಲವಾರು ಪಾತ್ರಗಳು ಕಂಡುಬರುತ್ತವೆ. ರಾಕ್ಷಸರು, ದೇವತೆಗಳು, ಕ್ಷತ್ರಿಯರು ಹೀಗೆ ಹತ್ತಾರು ಪಾತ್ರಗಳಿವೆ. ಅವುಗಳಲ್ಲಿ ಸ್ವಲ್ಪಮಟ್ಟಿಗೆ ಸ್ಪಷ್ಟವಾಗುವ ಪಾತ್ರಗಳೆಂದರೆ ಪ್ರಹ್ಲಾದ, ಬಲಿ, ಹಿರಣ್ಯಕ, ಹಿರಣ್ಯಾಕ್ಷ, ಕಾರ್ತವೀರ್ಯ, ರಾವಣ ಮತ್ತು ಕಂಸ. ಎಲ್ಲ ಪಾತ್ರಗಳು ಮೊದಲು ಲೌಕಿಕವಾಗಿ ಕಾಣಿಸಿಕೊಂಡು ಆ ಬಳಿಕ ವಿಷ್ಣುವಿನಲ್ಲಿ ಐಕ್ಯವಾಗುತ್ತವೆ.

ಪ್ರಾಚೀನ ಕಾವ್ಯಗಳ ಪ್ರಭಾವ

ಮಲ್ಲರಸ ಜೈನ ಕಾವ್ಯಗಳನ್ನು ಚೆನ್ನಾಗಿ ಓದಿಕೊಂಡಿದ್ದನೆಂಬುದಕ್ಕೆ ಆತನ ಕಾವ್ಯದಲ್ಲಿ ಅನೇಕ ದೃಷ್ಟಾಂತಗಳು ಸಿಕ್ಕುತ್ತವೆ. ಉದಾಹರಣೆಗೆ ಮಗು ಹುಟ್ಟುವ ಮೊದಲು ಜಿನಜನನಿ ಕನಸುಗಳನ್ನು ಕಾಣುವುದು ಜೈನಕಾವ್ಯಗಳಲ್ಲಿ ವಿಶೇಷವಾಗಿ ವರ್ಣಿತವಾಗಿದೆ.

ಸುರಗಿರಿಯ ಸುರಭಿಯಂ ಕೇ
ಸರಿಯಂ ಮಂದಾರತರುವನಜ್ಜೇಶ್ವರನಂ
ವರ ರೇಣುಕೆ ತಾಂ ಬೆಳಗ
ಪ್ಪರೆ ಜಾವಮಿರಲ್ಕೆ ಕಂಡಳೊಪ್ಪುವ ಕನಸಂ ೭—೩೦

ಪಂಪನ ಆದಿಪುರಾಣದಲ್ಲಿ ಜಿನಶಿಶುವಿಗೆ ಗರ್ಭಧರಿಸಿದ ತಾಯಿಯಲ್ಲಾಗುವ ಬದಲಾವಣೆಯನ್ನು ತಿಳಿಸುವ ಪದ್ಯ ಹೀಗಿದೆ :

ಬಸಿಱ ತೆಳ್ಪಳಿದತ್ತೆ ಮೊಗಂ ಬೆಳ್ಪೇಱದುದೇ ಕುಚಚೂಚುಕಂ
ಮಸುಳ್ದುವೇ ತ್ರಿವಳೀರುಚಿ ಪೇಳ್ ಕುಂದಿರ್ದುದೆ ಮುನ್ನಿನ ಚೆಲ್ವನ
ಪ್ಪಸಿಯ ಜಾಸೆಗೆ ಕರ್ಪೆಸೆದತ್ತೇ ಚೋದ್ಯಮಿದೆಂದು ಮಗುಳ್ದು ಬ
ಣ್ಣಿಸಿದರಿಂದ್ರನ ಕಾಂತೆಯರಂತರ್ವತ್ನಿಯನಾ ನೃಪಪತ್ನಿಯಂ

ಇದೇ ಭಾವವನ್ನು ಹೇಳುವ ಪದ್ಯ ದಶಾವತಾರ ಚರಿತೆಯಲ್ಲಿಯೂ ಬರುತ್ತದೆ.

ಎಸೆವ ಬಟಲ್ಕಚಂ ನಯನದೊಳ್ ಶ್ರಮವಾ ಬಿಳುಪೇಱ ದಾನನಂ
ಮಿಸುಪ ಘನಸ್ತನದ್ವಯದ ಚೂಚುಕದಲ್ಲಿಯ ಕಪ್ಪು ಬೆಣ್ಪೆನಿಂ
ದೆಸೆವ ಸುಮಧ್ಯ ನೇರಿತಹ ಬಾಸೆ ನಿವಾರಿಸಿದಾ ತ್ರಿರೇಖೆ ಪೂ
ಣ್ದ ಸಿಯಳನಾಭಿ ಮಾಂದ್ಯಗತಿ ರೇಣುಕೆಗೊಪ್ಪಿತು ಗರ್ಭದೇಳ್ಗೆಯೊಳ್
೭—೩೩

ದಶಾವತಾರ ಚರಿತೆಯಲ್ಲಿ ಕೃಷ್ಣನ ಜನನ ಸಂದರ್ಭದಲ್ಲಿಯೂ ಸಹ ದೇವಕಿ ಇದೇ ರೀತಿಯ ಕನಸು ಕಾಣುತ್ತಾಳೆ. ಈ ಬಗೆಯ ಸನ್ನಿವೇಶ ವೈದಿಕ ಕಾವ್ಯಗಳಲ್ಲಿಯೇ ವಿರಳ· ಇದು ಮಲ್ಲರಸನ ವಿಶಿಷ್ಟ ಕೊಡುಗೆ.

ಹೀಗೆಯೆ ರಾಮನು ಕಾಡಿಗೆ ಹೋಗುವಾಗ ದಶರಥನಿಗೆ ಹೇಳುವ—

ತನುವಿದು ಮೇಘದೊಡ್ಡು ಧನಮೆಂಬುದು ಸಂಜೆಯ ಕೆಂಪು ಕಾಮಿನೀ
ಜನ ಸುತರೆಂಬುದಿಬ್ಬನಿಯ ಮುಂಬನಿ ಭೂಮಿಯೆ ನೀರಿನಕ್ಕರಂ
ಅನುದಿನ ಬಿಟ್ಟು ಪೋಗದ ಮಹಾಘನ ಸತ್ಯವೆ ನಿತ್ಯಮೆಂಬುದಂ
ಮನದೊಳೆ ತಂದೆ ನೀಂ ತಿಳಿವುದೆಂದನು ರಾಮನದೇಂ ಮಹಾತ್ಮನೋ
೮—೧೯೩

ಎಂಬ ಮಾತುಗಳೂ ಸಹ ಜೈನವಾತಾವರಣವನ್ನು ಮೂಡಿಸುತ್ತವೆ.

ಮಲ್ಲರಸ ಜೈನ ಕಾವ್ಯಗಳಲ್ಲದೆ ಉಳಿದ ಪ್ರಾಚೀನ ಕಾವ್ಯಗಳನ್ನೂ ಆಳವಾಗಿ ಅಭ್ಯಾಸ ಮಾಡಿದ್ದಂತೆ ತೋರುತ್ತದೆ. ಆದ್ದರಿಂದ ಅರಿತೊ ಅರಿಯದೆಯೊ ಆತನಲ್ಲಿ ಪ್ರಾಚೀನ ಕಾವ್ಯಗಳ ಪ್ರಭಾವವನ್ನು ಕಾಣಬಹುದು. ನಿದರ್ಶನಕ್ಕಾಗಿ ಇಲ್ಲಿ ಕೆಲವು ಪ್ರಸಂಗಗಳನ್ನು ಗಮನಿಸಬಹುದು.

ದಶಾವತಾರ ಚರಿತೆಯಲ್ಲಿ ರತ್ನಾವತೀನಗರ ವರ್ಣನೆಯ ಸಂದರ್ಭದ ಪದ್ಯಗಳು ಗಿರಿಜಾ ಕಲ್ಯಾಣದಲ್ಲಿ ಗಿರಿರಾಜ ದೇಶದ ವರ್ಣನೆಯ ಪದ್ಯಗಳನ್ನು ಹೋಲುತ್ತವೆ.

1· ಗಿರಿಜಾ ಕಲ್ಯಾಣ :

ಸೊಗಯಿಪದೇಶಮಚ್ಚರಿಯದೇಶಮದುತ್ತಮ ದೇಶಮಾರ್ಗೆಯುಂ
ಬಗೆದುದನೀವದೇಶಮತಿ ಮಂಗಳದೇಶಮನೂನದೇಶಮು
ರ್ವಿಗೆ ಸುಖಮಪ್ಪದೇಶ ಮುದಿತೋದಯ ದೇಶಮಪಾರ ಪುಣ್ಯಕಾ
ರಿಗಳನುಕೂಲದೇಶಮಮೃತೋದಯದೇಶಮದೆಂತು ಬಣ್ಣಿಪೆಂ ೨-೩

ದಶಾವತಾರ ಚರಿತೆ :

ಪರಮಪ್ರಭಾವದೇಶ ಪರಮಾತ್ಮ ಕೃಪಾಳುಗಳಿರ್ಪದೇಶವ
ಚ್ಚರಿ ದಯೆಗೈವ ದೇಶವತಿ ಮಂಗಳದೇಶ ಸುಖಪ್ರದೈಕ ಬಂ
ಧುರ ವರ ಪುಣ್ಯದೇಶ ಸುಕೃತೋದಯದೇಶ ವಿಭೂಷಮಾವಗಂ
ಸಿರಿನೆಲೆಯಾಗಿ ತೋರ್ಪ ಸಲೆದೇಶ ವಿಶಾಲವನೆಂತು ಬಣ್ಣಿಪೆಂ ೫-೪

2. ಗಿರಿಜಾಕಲ್ಯಾಣ :

ತೀರ್ದುದು ನೀರ್ ತೀರ್ದುದು ತೃಷೆ
ತೀರ್ದುದು ಕಡುಸೇದೆ ತೀರ್ದೊಡೇಂ ಪಥಿಕಂ ತಾ
ನಿರ್ದಂತಿರ್ದಂ ಸ್ತ್ರೀಮುಖ
ಮಿರ್ದಿರವಂ ನೋಡುವಾಸೆ ತೀರದೆ ಮನದೊಳ್ ೨-೨೪

ದಶಾವತಾರ ಚರಿತೆ :

ಬಳಲಿಕೆ ತೀರಿತು ಪರಿಮಳ
ಜಳತೀರಿತ್ತಂಗದಾಸಱಿಲ್ಲಂ ಪೋಯ್ತಾ
ಲಳನೆಯ ವಿಭ್ರಮರೂಪಂ
ಸಲೆ ನೋಡುವ ಪಥಿಕರಾಸೆ ತೀರದು ಮನದೊಳ್ ೫-೧೬

ಹೀಗೆ ಗಿರಿಜಾಕಲ್ಯಾಣದ ಪ್ರಭಾವವಿರುವ ಅನೇಕ ಪದ್ಯಗಳು ದಶಾವತಾರ ಚರಿತೆಯಲ್ಲಿ ಕಂಡುಬರುತ್ತವೆ.

ಸೀತೆಯನ್ನು ಕಳೆದುಕೊಂಡ ರಾಮನ ಶೋಕವನ್ನು ಅಭಿವ್ಯಕ್ತಿಸುವ ಪದ್ಯದಲ್ಲಿ ನಾಗಚಂದ್ರನ ಪಂಪರಾಮಾಯಣದ ಛಾಯೆಯಿದೆ.

3. ಪಂಪರಾಮಾಯಣ :

ಕಳಹಂಸಾಲಸಯಾನೆಯುಂ ಮೃಗಮದಾಮೋದಾಸ್ಯ ನಿಶ್ವಾಸೆಯುಂ
ತಳಿರೇ ತಾವರೆಯೇ ಮದಾಳಿಕುಲಮೇ ಕನ್ನೈದಿಲೇ ಮತ್ತಕೋ
ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗ ಕುಂ
ತಳೆಯಂ ಕೈರವ ನೇತ್ರೆಯಂ ಪಿಕರವ ಪ್ರಖ್ಯಾತೆಯಂ ಸೀತೆಯಂ
ಪಂಪರಾಮಾಯಣ ಸಂಗ್ರಹ : ಪುಟ ೫೭ ಪದ್ಯ ೭೪

ದಶಾವತಾರ ಚರಿತೆ :

ಸಸಿಯೇ ಸಂಪಗೆಯೇ ತಮಾಲಲತೆಯೇ ಬೆಳ್ದಿಂಗಳೇ ಮುಗ್ಧಸಾ
ರಸಮೇ ಕಾಣಿರೆ ಪೂರ್ಣಚಂದ್ರಮುಖಿಯಂ ಸಚ್ಚಂಪಕಾಮೋದವಾ
ನಸೆಯಂ ದಿವ್ಯಲತಾಂಗಿಯಂ ಧವಳನೇತ್ರಾಪಾಂಗೆಯಂ ಪಂಕಜೋ
ಲ್ಲಸದತ್ಯುನ್ನತ ಕುಟ್ಮಲಸ್ತನಭರ ಪ್ರಖ್ಯಾತೆಯಂ ಸೀತೆಯಂ ೮-೨೨೪

ಪ್ರಹ್ಲಾದನ ಜನನ ಸಂದರ್ಭದಲ್ಲಿ ಬರುವ ಪದ್ಯ ವಿಜಯನಗರದ ಕಾಲದ ಒಂದು ಶಾಸನ ಪದ್ಯವನ್ನು ನೆನಪಿಗೆ ತರುತ್ತದೆ.

4. ಶಾಸನ ಪದ್ಯ

ಕೆಱೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಂ ಮಾಡಿಸ
ಜ್ಜೆಱೆಯಿಂ ಪೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ

ಗೆಱೆಱೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ
ಯೆಱದಲ್ಪಾಲೆಱೆವಂದುತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ[1]

ದಶಾವತಾರ ಚರಿತೆ

ಗುಡಿಯಂ ಕಟ್ಟಿಸು ಭೇರಿಯಂ ಪೊಡೆಸು ಕಾರಾಗಾರ ಗೀರ್ವಾಣರಂ
ಬಿಡಿಸುರ್ವೀ ಸುರ ಸಂಪ್ರದಾಯರ ಸುವರ್ಣಾಗಾರಮಂ ಕೂಡುಮೆ
ಲ್ನುಡಿಯಿಂ ಸತ್ಕವಿಗಾಯಕರ್ಗೆ ಹಣಮಂ ಚೆಲ್ಲಕ್ಕಱಿಂ ಪುತ್ರನಂ
ಪಡೆದಳ್ ದೇವರರಾಣಿಯೆಂದೊದಱಿದರ್ ಕೈಸೂರೆಯಿಂ ಸೇವಕರ್

೫-೯೦

ಸಮಕಾಲೀನ ಜನಜೀವನ

ಮಲ್ಲರಸನ ಕಾವ್ಯದ ವಸ್ತು ಪ್ರಾಚೀನವಾದರೂ ಆತನ ಕಾವ್ಯದಲ್ಲಿ ಸಮಕಾಲೀನ ಜನಜೀವನದ ಹೊಳಹುಗಳನ್ನು ಕಾಣಬಹುದು. ರತ್ನಾವತೀ ಪಟ್ಟಣದ ಬೀದಿಗಳಲ್ಲಿನ ಅಂಗಡಿಗಳ ಚಿತ್ರ ಹೀಗಿತ್ತು—

ಪಟ್ಟಾವಳಿ ದೂವಟ ಬೆ
ಳ್ವಟ್ಟೆಗಳುಂ ಸಾಲಿ ಚಿತ್ರವಸ್ತ್ರಂಗಳ್ ಪೊಂ
ಬಟ್ಟೆ ದೇವಾಂಗಗಳ್ ಸಾ
ಲಿಟ್ಟಾವಗ ಮಾಱುವಂಬರಗಳ ಪಸರಂ ೫-೪೭

ನವರತ್ನ ಮಾಱುವಂಗಡಿ
ಯವನೇನಂ ಪೇಳ್ವೆನೊಗೆದ ವಸ್ತುವೆ ಪಿರಿದಾ
ಲವಣಾಬ್ಧಿಯಂತಿರೀ ಭೂ
ಭುವನಕ್ಕಾಶ್ಚರ್ಯಮಾಗಿ ಕಣ್ಗೆಸೆದಿರ್ಕುಂ ೫—೪೮

ಸುರಗಿ ಸುರಹೊನ್ನೆ ಸಂಪಗೆ
ಯಿರವಂತಿಗೆ ಜಾಜಿ ವಕುಳ ಮಲ್ಲಿಗೆ ಕೇತಕಿ
ಸರಸಿರುಹ ಕುಮುದ ಪಾದರಿ
ಯುರುಸೇವಂತಿಗೆಯ ಹೂವಿನಂಗಡಿಯೆಸೆಗುಂ ೫ – ೫೨

ಮೇಲಿನ ಪದ್ಯಗಳಲ್ಲಿ ಕಂಡು ಬರುವ ಬಟ್ಟೆ ಅಂಗಡಿ, ನವರತ್ನದ ಅಂಗಡಿ ಮತ್ತು ಹೂವಿನಂಗಡಿಗಳ ಚಿತ್ರಗಳು ವಿಜಯನಗರದ ವೈಭವವನ್ನು ನೆನಪಿಗೆ ತರುತ್ತವೆ.

ಕವಿ ತನ್ನ ಕಾಲದಲ್ಲಿ ಮಾರುತ್ತಿದ್ದ ವಿವಿಧ ಬಗೆಯ ಮದ್ಯ ಮಾಂಸಗಳ ಬಗ್ಗೆ ಬರೆಯುತ್ತಾನೆ—

---

1 South Indian Inscriptions Vol. IV No. 267.

ತಾಳೀಚಲ್ಮರಗಳ್ವುಂ
ಬೇಲಂ ಬೆಲ್ಲದಲಿ ಸಮೆದ ಸಾರಾಯಮುಮಂ
ಶಾಲಿ ರಾಗಿಗಳ ನಾನಾ
ಮೂಲಿಕೆಗಳ ಹೆಂಡವೆಂಬಿವಂ ವಿಕ್ರಯಿಪರ್ ೫—೬೧

ಅರಳಂ ಸೂಸಲುಮಂ ಸಮಂತಪಿನಿಯಂ ಭಂಗೀಪುಡೀ ಬೆಲ್ಲಮಂ
ಬೆರಸಿರ್ದಾ ತಿಲಪಿಷ್ಟಮಂ ಘನತರಂ ನೀರುಳ್ಳಿ ಬೆಳ್ಳುಳ್ಳಿಯುಂ
ತರದಿಂದಂ ಸಿಶಿತಂಗಳಂ ಕಡಲೆಯಂ ನಾನಾಪರೀಚೀಲಮಂ
ಬೆರಸುಂ ಮದ್ಯವ ಮಾಱುವರ್ ಪ್ರತಿದಿನಂ ಮದ್ಯರ್ಪಿಗಳ್ ಸಂತತಂ
೫—೬೨

ನಾನಾ ಖಗಮಾಂಸಗಳಂ
ನಾನಾ ಮೃಗಮಾಂಸ ಮೇಷಮಾಂಸಂಗಳುಮಂ
ನಾನಾ ಮತ್ಸ್ಯದ ಮಾಂಸಮ
ನಾನಾ ತೆಱದಿಂದೆ ಮಾಱುತಿರ್ಪರ್ ಕಟುಕರ್ ೫—೬೩

ಮೇಲಿನ ಪದ್ಯಗಳನ್ನು ನೋಡಿದಾಗ ಮಲ್ಲರಸನು ಸಮಕಾಲೀನ ಜನಜೀವನವನ್ನು ಹೇಗೆ ಸಂದರ್ಭೋಚಿತವಾಗಿ ಬಳಸಿಕೊಂಡಿದ್ದಾನೆಂಬುದು ತಿಳಿದುಬರುತ್ತದೆ.

ಛಂದಸ್ಸು

ಮಲ್ಲರಸನು ಖ್ಯಾತವಾದ ಆರುವೃತ್ತಗಳಿಂದ ಮಾತ್ರ ತೃಪ್ತನಾಗದೆ ಈ ವುಟ್ಟ ಕಾವ್ಯದಲ್ಲಿ ವಿವಿಧ ವೃತ್ತಗಳ ಪ್ರಯೋಗಗಳನ್ನು ನಡೆಸಿ ಪ್ರಯೋಗಶೀಲ ಕವಿಯಾಗಿದ್ದಾನೆ. ಈತನು ಬಳಸಿರುವ ವೃತ್ತಗಳು—

ವೃತ್ತದ ಹೆಸರು	ಮೊದಲ ಪ್ರಯೋಗ	ವೃತ್ತದ ಹೆಸರು	ಮೊದಲ ಪ್ರಯೋಗ
ಅನಂತ	೧—೬	ಮಣಿರಂಗ	೯—೫೭
ಇಂದ್ರವಜ್ರಾ	೬—೧೦೬	ಮತ್ತೇಭವಿಕ್ರೀಡಿತ	೧—೩೦
ಉತ್ಪಲ	೧—೧	ಮಹಾಸ್ರಗ್ಧರೆ	೨—೨೪
ಉಪೇಂದ್ರವಜ್ರಾ	೬—೧೦೭	ಮಾಲಿನೀ	೫—೪೯
ಚಂಪಕ	೧—೮	ರಥೋದ್ಧತ	೮—೨೯
ಚಕ್ರಾವಲೋಕನ	೬—೭	ಲಲಿತ	೧—೪
ತೋಟಕ	೮—೧೨೪	ಲಲಿತಪದ	೯—೫೬
ದೋಧಕ	೫—೧೨೮	ವಸಂತತಿಲಕ	೫—೩೨
ಪಂಚಪಾದ	೧—೧೫	ಶಾರ್ದೂಲವಿಕ್ರೀಡಿತ	೧—೧೨
ಬಂಧು	೧—೫	ಸಿಂಹಾವಲೋಕನ	೬—೮

ಭುಜಂಗಪ್ರಯಾತ	೩—೫೬	ಸ್ರೈನಿಕ	೮—೫೦
ಮಂದಹಾಸ	೧—೩	ಸ್ರಗ್ಧರೆ	೧—೧

ಇವುಗಳ ಜೊತೆಗೆ ತ್ರಿಪದಿ, ಕಂದ, ರಗಳೆ, ವಚನ ಮತ್ತು ಗದ್ಯಗಳನ್ನೂ ಬಳಸಿದ್ದಾನೆ. ಕಂದದಲ್ಲಿ 3+5 ಮತ್ತು 5+3 ಮಾತ್ರಾಗಣಗಳನ್ನು ತಂದು ಛಂದಸ್ಸಿನಲ್ಲಿ ಸ್ವಚ್ಛಂದಪ್ರವೃತ್ತಿಯನ್ನು ಮೆರೆದಿದ್ದಾನೆ. ಛಂದಸ್ಸಿಗಾಗಿ ಕೆಲವು ಕಡೆ ಗುರುವನ್ನು ಲಘುವನ್ನಾಗಿ ಮಾಡಿಕೊಂಡಿದ್ದಾನೆ. ಒಟ್ಟಿನಲ್ಲಿ ವಿಶಿಷ್ಟವಾದ ವೃತ್ತಗಳನ್ನು ಬಳಸಿರುವುದರಿಂದ ಕನ್ನಡ ಛಂದೋಪ್ರಪಂಚದಲ್ಲಿ ಮಲ್ಲರಸನಿಗೂ ಒಂದು ಸ್ಥಾನವಿದೆ.

ಕಾವ್ಯದ ಉದ್ದೇಶ

ದಶಾವತಾರ ಚರಿತೆಯಲ್ಲಿ ದುಷ್ಟ ಶಿಕ್ಷಣ ಮತ್ತು ಶಿಷ್ಟರಕ್ಷಣ ಎಂಬ ಎರಡು ಮುಖ್ಯವಾದ ಅಂಶಗಳನ್ನು ಗಮನಿಸಬಹುದು. ಇಡೀ ಕಾವ್ಯ ಈ ಹಂದರದ ಮೇಲೆ ರಚಿತವಾಗಿದೆ. ಜೊತೆಗೆ ದಶಾವತಾರ ಚರಿತೆ ಅನೇಕ ಮೌಲ್ಯಗಳನ್ನೊಳಗೊಂಡಿದೆ. ಮತ್ಸ್ಯಾವತಾರದ ಕಥೆಯಲ್ಲಿ ಕತ್ತಲೆ ಮತ್ತು ಬೆಳಕುಗಳ ಹೋರಾಟವಿದೆ. ಇಲ್ಲಿ ಬರುವ ತಮನೆಂಬ ರಾಕ್ಷಸನು ಅಜ್ಞಾನದ ಪ್ರತೀಕವಾಗಿದ್ದಾನೆ. ವೇದಮಾತೆ ಜ್ಞಾನದ ಪ್ರತೀಕವಾಗಿದ್ದಾಳೆ. ಕತ್ತಲೆ ಬೆಳಕುಗಳ ಹೋರಾಟದಲ್ಲಿ ವಿಷ್ಣು ಬೆಳಕಿನಿಂದ ಕತ್ತಲೆಯನ್ನು ನಿವಾರಿಸುತ್ತಾನೆ. ಸಮುದ್ರ ಮಥನದ ಕಥೆ ಸ್ವಾರ್ಥದ ಹೋರಾಟದ ಸಂಕೇತವಾಗಿದೆ. ವರಾಹಾವತಾರ, ಕೃಷ್ಣಾವತಾರ, ನರಸಿಂಹಾವತಾರ ಮತ್ತು ಬೌದ್ಧಾವತಾರಗಳ ಕಥೆಗಳು ಆಸುರೀಶಕ್ತಿ ಮತ್ತು ದೈವೀಶಕ್ತಿಗಳ ಹೋರಾಟವನ್ನು ಪ್ರತಿಬಿಂಬಿಸುತ್ತವೆ. ಅಹಂಕಾರದ ನಾಶ ಬಲಿಯ ಕಥೆಯಲ್ಲಿದೆ. ಹೀಗೆ ದುಷ್ಟಶಿಕ್ಷಣ ಮತ್ತು ಶಿಷ್ಟರಕ್ಷಣದ ತಳಹದಿಯ ಮೇಲೆ ನಿಂತ ಈ ಕಾವ್ಯ ಸಾರ್ವಕಾಲಿಕ ಮೌಲ್ಯಗಳ ಅಭಿವ್ಯಕ್ತಿಯಾಗಿದೆ. ಇಲ್ಲಿ ಬರುವ ಅನೇಕ ಕಥೆಗಳು ಕಟ್ಟುಕಥೆಗಳಂತೆ ಕಂಡುಬಂದರೂ ಅವುಗಳ ಹುಟ್ಟು ಕಾಲ್ಪನಿಕವಲ್ಲ. ಮಾನವನು ತನ್ನ ರಾಕ್ಷಸಪ್ರವೃತ್ತಿಯನ್ನು ಬಿಟ್ಟು ದೇವತ್ವಕ್ಕೆ ಏರುವ ಮಜಲುಗಳಲ್ಲಿ ಇಂಥ ಕಥೆಗಳು ದಾರಿ ದೀಪಗಳಾಗಿವೆ.

ಉಪಸಂಹಾರ

ಕವಿಗಳ ಕರ್ಣರಸಾಯನ
ಮವಿರಳ ವಿದ್ವಾಂಸರಾನನಾಬ್ಜ ದಿನೇಶಂ
ನವರಸಿಕರ ಜಿಹ್ವಾಮೃತ
ಮವನಿಯೊಳೀಕಾವ್ಯಮೆಂಬುದಿದು ತಾಂ ಲೋಕಂ ೧—೨೩

ಎಂಬ ಆತ್ಮವಿಶ್ವಾಸದ ಮಾತುಗಳನ್ನು ಕವಿ ತನ್ನ ಕಾವ್ಯದ ಬಗ್ಗೆ ಆಡಿದ್ದಾನೆ. ಮಲ್ಲರಸ ಮಹಾಕವಿಯಲ್ಲ. ಈತನ ಕಾವ್ಯದ ವಸ್ತುವಿನಲ್ಲಿ ನಾವೀನ್ಯವಿಲ್ಲ. ಆದರೆ ದಶಾವತಾರದ ಕಥೆಯನ್ನು ಸಮಗ್ರ ಕಾವ್ಯಕ್ಕೆ ವಸ್ತುವಾಗಿಟ್ಟುಕೊಂಡು ಬರೆದ ಕೀರ್ತಿ

ಈತನಿಗೆ ಸಲ್ಲುತ್ತದೆ. ಈತನ ಸರಳ ನಿರೂಪಣೆಯಿಂದಾಗಿ ವಿವಿಧ ಛಂದಸ್ಸುಗಳ ಪ್ರಯೋಗದಿಂದಾಗಿ ದಶಾವತಾರ ಚರಿತೆ ಒಂದು ವಿಶಿಷ್ಟ ಚಂಪೂಕೃತಿಯಾಗಿದೆ. ಮಲ್ಲರಸ ಗಮನಾರ್ಹಕವಿಯಾಗುತ್ತಾನೆ.

ಗ್ರಂಥಸಂಪಾದನೆ

ಕ ಕನ್ನಡ ಅಧ್ಯಯನ ಸಂಸ್ಥೆಯ ಕೆ.ಬಿ. ೯೮ ನೆಯ ನಂಬರಿನ ಕಾಗದದ ಪ್ರತಿ. ಇದರ ಉದ್ದ ೮.೧." ಅಗಲ ೬.೪." ಇದರಲ್ಲಿ ೧ ರಿಂದ ೧೧೬ ಪುಟಗಳಿವೆ. ಪ್ರತಿ ಪುಟದಲ್ಲಿ ೨೨ ಪಂಕ್ತಿಗಳಿವೆ ಪ್ರತಿ ಪಂಕ್ತಿಯಲ್ಲಿ ೧೮ ಅಕ್ಷರಗಳಿವೆ. ಅಕ್ಷರಗಳು ಸುಂದರ ವಾಗಿವೆ. ಅಸಮಗ್ರ. ಶುದ್ಧ ಪ್ರತಿ. ಶಕಟರೇಫದ ಪ್ರಯೋಗವಿದೆ ಪದ್ಯಗಳಿಗೆ ಪಾದ ವಿಂಗಡಣೆ ಇದೆ. ಪ್ರತಿ ಸ್ವಲ್ಪ ಶಿಥಿಲವಾಗಿದೆ. ಇದೇ ಪ್ರತಿಯಿಂದ ಮುದ್ರಣಪ್ರತಿಯನ್ನು ಸಿದ್ಧಪಡಿಸಲಾಗಿದೆ.

ಗ ಪ್ರತಿ ಕೆ. ಎ. ೪೦೨ ನೆಯ ನಂಬರಿನ ಕನ್ನಡ ಅಧ್ಯಯನ ಸಂಸ್ಥೆಯ ಕಾಗದದ ಪ್ರತಿ. ಇದರ ಉದ್ದಗಲಗಳು ೧೦.೬" ×೯.೧". ಇದರಲ್ಲಿ ೧ ರಿಂದ ೩೧೫ ಪುಟ ಗಳಿವೆ. ಪ್ರತಿ ಪುಟದಲ್ಲಿ ೧೯ ಪಂಕ್ತಿಗಳಿವೆ. ಪ್ರತಿಪಂಕ್ತಿಯಲ್ಲಿ ೧೨ ಅಕ್ಷರಗಳಿವೆ. ಪ್ರತಿ ತೀರಾ ಅಸಮಗ್ರವಾಗಿದ್ದು ಯಾವ ಪದ್ಯಗಳೂ ಶುದ್ಧವಾಗಿಲ್ಲ ಮತ್ತು ಸಮಗ್ರವಾಗಿಲ್ಲ.

'ಚ' ಪ್ರತಿ ಬೆಂಗಳೂರು ಅಧ್ಯಯನ ಕೇಂದ್ರದ ಓಲೆ ಪ್ರತಿ. ಇದರ ಉದ್ದ ೧೮.೨" ಅಗಲ ೨." ಇದರಲ್ಲಿ ೧ ರಿಂದ ೯೦ ಪತ್ರಗಳಿವೆ. ಪ್ರತಿ ಪತ್ರದಲ್ಲಿ ೯ ಪಂಕ್ತಿಗಳಿವೆ. ಪ್ರತಿ ಪಂಕ್ತಿಯಲ್ಲಿ ೬೫ ಅಕ್ಷರಗಳಿವೆ. ಅಕ್ಷರಗಳು ಸ್ಫುಟವಾಗಿವೆ. ಪ್ರತಿ ಅಸಮಗ್ರ ವಾಗಿದ್ದು ಶಿಥಿಲವಾಗಿದೆ. ಮೊದಲನೆಯ ಮತ್ತು ಕಡೆಯ ಓಲೆಯ ಬಹುಭಾಗ ಮುರಿದು ಹೋಗಿದೆ. ಉಳಿದ ಓಲೆಗಳ ಅಂಚು ಮುರಿದು ಗ್ರಂಥ ಲುಪ್ತವಾಗಿದೆ.

ಕ ಗ ಮತ್ತು ಚ ಪ್ರತಿಗಳಲ್ಲಿ ಕ ಮತ್ತು ಚ ಪ್ರತಿಗಳು ಒಂದೇ ಮಾತೃಕೆಯಿಂದ ಬಂದಂತೆ ತೋರುತ್ತದೆ. ಏಕೆಂದರೆ ಎರಡೂ ಪ್ರತಿಗಳಲ್ಲಿ

ವರ ಚಿಕ್ಕಪಾರ್ಥ್ಯರಾಯಂ
ಸಿರಿಯರಸ ದಶಾವತಾರಚರಿತವನೊಲವಿಂ
ಬರೆಯೆಂದಾಜ್ಞಾಪಿಸೆ ತಾಂ
ಬರೆದಂ ಲಕ್ಷ್ಮೀನೃಸಿಂಹನುರೆ ಭಕ್ತಿಯೊಳುಂ

ಎಂಬ ಮೂಲದ ಲಿಪಿಕಾರನ ಪದ್ಯ ಸಿಕ್ಕುತ್ತದೆ. ಜೊತೆಗೆ ಕ ಪ್ರತಿಯಲ್ಲಿ ಯಾವ ಪದ್ಯಗಳಿಲ್ಲವೊ ಚ ಪ್ರತಿಯಲ್ಲಿಯೂ ಅವೇ ಪದ್ಯಗಳಿಲ್ಲ. ಆದರೆ ಚ ಪ್ರತಿಯಲ್ಲಿ ಕೆಲವು ಹೆಚ್ಚಿನ ಪಾಠಗಳು ಸಿಕ್ಕುತ್ತವೆ. ಈ ರೀತಿಯಲ್ಲಿ ಚ ಪ್ರತಿ ಕ ಪ್ರತಿಯಿಂದ ಭಿನ್ನವಾಗಿದೆ. ಹೀಗೆ ಒಂದೇ ಮೂಲದ ಎರಡು ಅಸಮಗ್ರ ಪ್ರತಿಗಳ ಸಹಾಯದಿಂದ ದಶಾವತಾರ ಚರಿತೆಯನ್ನು ಸಂಪಾದಿಸಬೇಕಾಯಿತು. ಸಿಕ್ಕಿರುವ ಪ್ರತಿಗಳಿಂದಲೆ

ಗ್ರಂಥಸಂಪಾದನ ಶಾಸ್ತ್ರದ ತತ್ತ್ವಕ್ಕನುಗುಣವಾಗಿ ಕ ಪ್ರತಿಯ ಸಂಗ್ರಹ ಪಾಠವನ್ನು ಸ್ವೀಕರಿಸಿ ಚ ಪ್ರತಿಯವಿಸ್ತೃತ ಪಾಠಗಳನ್ನು ಅಡಿಟಿಪ್ಪಣಿಯಾಗಿ ಕೊಟ್ಟಿದೆ.

ಕಾವ್ಯದ ಆರಂಭದಲ್ಲಿ ಕವಿ—

ಇದು ಹರಿಪದ ಸಂಕೀರ್ತನೆ
ಯದಱಿಂದಂ ಱಟಿಕುಳ ಕ್ಷಳದ ನೇಮಗಳಂ
ಸದಲಂಕಾರ ರಸಂಗಳ
ನೊದವಿಸಿತಿಲ್ಲೆನ್ನಬೇಡ ಸುಪ್ರೌಢಜನಂ ೧–೨೮

ಎಂದು ಹೇಳಿಕೊಂಡಿರುವುದರಿಂದ ಱಟಿವನ್ನು ಉಳಿಸಿಕೊಳ್ಳಲಾಗಿದೆ.

ಅನುಬಂಧದಲ್ಲಿ 'ಅಖಿಲಕರ್ನಾಟಕ ಶ್ರೀ ಪುರಂದರದಾಸರ ೪೦೦ನೇ ವರ್ಷದ ಉತ್ಸವ ಮಂಡಳ ಧಾರವಾಡ' ಇವರ ಶ್ರೀಪುರಂದರದಾಸರ ಸಾಹಿತ್ಯ ಸಂಪುಟವನ್ನು ಬಳಸಿಕೊಂಡಿದ್ದೇನೆ. ಇವರಿಗೂ ದಶಾವತಾರ ಚರಿತ್ರೆಯ ಒಂದು ಹಸ್ತಪತ್ರಿಕೆಯನ್ನು ಕಳಿಸಿಕೊಟ್ಟ ಬೆಂಗಳೂರು ಅಧ್ಯಯನ ಕೇಂದ್ರದವರಿಗೂ ನನ್ನ ವಂದನೆಗಳು.

ಕನ್ನಡ ಅಧ್ಯಯನ ಸಂಸ್ಥೆ **ವೈ. ಸಿ. ಭಾನುಮತಿ**
30-12-1976

ದಶಾವತಾರ ಚರಿತೆ

ಪ್ರಥಮಾಶ್ವಾಸಂ

ಉತ್ಪಲಮಾಲೆ

ಶ್ರೀಪದಸೇವಕೋನ್ನತಯಶೋಜ್ವಲ ನಿರ್ಮಲನಬ್ಜನೇತ್ರ ಸ
ಲ್ಲಾಪ ಕಲಾಪ ಸಾಧುಜನಹೃನ್ಮಯನೀಶ ವಿನಾಯಕೋತ್ಸವ
ವ್ಯಾಪಿತ ಗೋತ್ರ ಧರ್ಮಯುತ ಭೋಗಿವಿಲಾಸ ಸುರೇಂದ್ರವಂದ್ಯ ನಿ
ರ್ಲೇಪನುಮಾಧವಂ ಕೃಪೆಯಿನಾವಗ ರಕ್ಷಿಸುವಂ ಧರಿತ್ರಿಯಂ ೧

ಸ್ರಗ್ಧರೆ

ಶ್ರೀಮತ್ ಪೀಯೂಷ ಪಾರಾವರ ನಿಜತನಯಾಸ್ಯಾಂಬುಜಾತೋವಗಂಧ
ಸ್ತೋಮಾಸಕ್ತೋಕ್ತ..................ನವರತ ಸೌಭಾಗ್ಯಚಕ್ರಂ ,ಜಗದ್ವಿ
ಶ್ವಾಮೋದ್ಯತ್ ಪೂ..................ಜಲಧರ ನೈರ್ಮಲ್ಯ ನೀಲಪ್ರಭಾಂಗಂ
ವ್ಯೋಮಪ್ರಸ್ಫೂರ್ತಿಮೂರ್ತಂ ಸಲಹುಗೆ ಜಗಮಂ ವಿಶ್ವವಂದ್ಯಂ ಮುಕುಂದಂ ೨

ಮಂದಹಾಸ

ಹಿಂಡು ಹಿಂಡು ದೈತ್ಯತಂಡ ತಂಡಖಂಡ ಖಂಡಿತೋ
ದ್ದಂಡ ದಂಡಧಾರ........................ವಿಕ್ರಮಾ
ಜಾಂಡಜಾಂಡನಾಯಕ ಪ್ರಕಾಂಡಕಾಂಡಿಳಾಧಿಪಾ
ಪುಂಡ್ರ ಪುಂಡರೀಕ ನೇತ್ರದ್ವಂದ್ವ ವೆಂಕಟೇಶ್ವರಾ ೩

ಲಲಿತ

ಇಂಗಡಲ ವಾಸನೆ ಭುಜಂಗರಿಪುವಾಹನನನಂಗಪಿತನುಂಗುಟವೆ ಗಂಗೆಯನು ಪೆತ್ತಾ
ಮಂಗಳಮಯಾಂಗ ತ್ರಿಜಗಂಗಳಧಿನಾಯಕನಭಂಗ ವನಮಾಲಿ
ಮಹಿಯಂಗನೆಯಧೀಶಂ
ತಿಂಗಳನುಜಾವರ ನಗಂಗಳನು ತಾಳ್ದ ಸಿರಿರಂಗನಸುರಾರಿ ದುರಿತಂಗಳಪಹಾರೀ
ತುಂಗಬಲಶೌರಿ ಮಹಿಮಂ ಗಜನ ರಕ್ಷಿಸಿದ ಶಾರ್ಙ್ಗ ಸಲಹೆನ್ನ
ತಿರುವೆಂಕಟಗಿರೀಶಾ ೪

*ಬಂಧು

ಗರುಡಗಮನನಾಗಿ ನೀ
ನುರಗಶಯನನಾದೆ ಸೌ
ಕರಿಯನೆನಿಸಿ ಬಾಟಿದ್ದ ಲ
ಕ್ಷ್ಮಿಯರಸ ವೆಂಕಟೇಶ್ವರಾ ? ೫

---

* ಇದಕ್ಕೆ ವಿಸುತ ವೃತ್ತ ಉಪಚ್ಯುತ ಎಂಬ ಪರ್ಯಾಯ ನಾಮಗಳಿವೆ.
ಕನ್ನಡ ಛಂದಸ್ಸುಂ ಪುಟ : ಪುಟ 35

ಅನಂತ

ಭೂತಲಾಧೀಶನತ್ಯಂತಂ
ಪ್ರೀತಿಯಿಂದೆನ್ನನಶ್ರಾಂತಂ
ಓತು ರಕ್ಷಿಕ್ಕೆ ಶ್ರೀಕಾಂತಂ
ಖ್ಯಾತನ್ಪೆ ವೆಂಕಟಾನಾಥಂ ೬

ಕಂದ : ನೆನೆವವರುಗಳೆರ್ದೆಗೊಳದೊಳ್
ಜನಿಯಿಸಿ ಸದ್ಗುಣಮುನಾಂತು ಸದ್ಧರ್ಮದ ವಾ
ಸನೆಯಿಂ ರಾಜಿಪ ಲಕ್ಷ್ಮೀ
ಶನ ಪದಪದ್ಮಂಗಳೊಲಿಗೆ ಮನ್ಮನದಳಿಗಂ ೭

ಚಂಪಕಮಾಲೆ

ಸರಸಿಜ ಕುಟ್ಮಲಾಯತ ಕುಚದ್ವಯೆ ವಾರಿರುಹಾಕ್ಷಿ ಪದ್ಮಬಂ
ಧುರಕರೆ ಹೇಮಪಂಕಜಲಸನ್ಮುಖಿ ತಾಮರಸಾಂಘ್ರಿಯುಗ್ಮೆ ನೀ
ರರುಹಸುಗಂಧಿ ಕೋಕನದ ಸದ್ಗುಣಮಧ್ಯೆ ಮತಂಗಯಾನೆ ಭಾ
ಸುರಕರೆ ಸಿದ್ಧಲಕ್ಷ್ಮಿ ಕುಡುಗಾವಗ[1]ಸಿದ್ಧ[1]ಪದಾರ್ಥಸಿದ್ಧಿಯಂ ೮

ಸ್ರಗ್ಧರೆ

ಶ್ರೀಮತ್ ಕಾರುಣ್ಯಪಾರಾವರ [ರವಿ] ರಜನೀನಾಥರಾನಂದಯೂಥಂ
ಭೂ[2]ವಿಭ್ಭ್ರ[2]ತ್ಕನ್ಯಕಾಲಿಂಗನ ಸುಖಭರಿತಂ ಭೋಗಿಭೂಷಂ ಮಹೇಶಂ
ವ್ಯೋಮಾದ್ಯಷ್ಟಾಂಗಮೂರ್ತಂ ಹರಿಯಜಸುರಸಂರಕ್ಷಶೀಲಂ ವಿಶಾಲಂ
ಪ್ರೇಮಂಬೆತ್ತರ್ತಿಯಿಂದಂ ಸಲಹುಗೆ ಜಗಮಂ ಪಾರ್ವತೀಶಂ ಗಿರೀಶಂ ೯

ಚಂಪಕಮಾಲೆ

ಸುರಮುನಿವಂದಿತಾಂಘ್ರಿಯುಗ ಭಾಸುರತೇಜವಿಲಾಸ ಪಾರ್ವತೀ
ವರನಹಿಭೂಷಣಂ ಪರಮಪಾವನಪುಣ್ಯಚರಿತ್ರನೀಶ್ವರಂ
ಧರೆ ಜಲ ವಹ್ನಿ ವಾಯು ಶಶಿ ಸೂರ್ಯ ನಭಾತ್ಮಸರೂಪನಾದೆ ನೀ
ನುರುತರ ಸೌಖ್ಯವಿತ್ತು ಸಲಹೆನ್ನುಮನಾವದಿನಂ ಸದಾಶಿವಾ ೧೦

ಸ್ರಗ್ಧರೆ

ಶ್ರೀಮದ್ ಗೌರೀಮುಖಾಬ್ಜೋಜ್ವಲ ಮಧುರಸ............ತುಷ್ಟ ಸೌಖ್ಯ
ಶ್ರೀಮದ್ಯುದ್ಯಚ್ಚಕೋರಂ ಶುಭಕರ ಘನತದ್ಗಂಧಸಂಸೇವ್ಯಭೃಂಗಂ
ಶ್ರೀಮತ್ ಪಾದದ್ವಯೊಭ್ಯರ್ಚಿತಮುನಿಹೃದಯಾನಂದವಾರಾಸಿಚಂದ್ರಂ
ಪ್ರೇಮಂ ಸೂಸುತ್ತೆ ರಕ್ಷಿಕ್ಕವನಿಯನೊಲವಿಂ ದೇವಗಂಗಾಧರೇಶಂ ೧೧

---

[1] ದಿವ್ಯ (ಚ) [2] ವಿಭ್ರು (ಚ)

ಶಾರ್ದೂಲವಿಕ್ರೀಡಿತ

ಭೂಭೃದ್ರಾಜತನೂಜೆಯಂ ಲಲಿತವಕ್ತ್ರಾಂಭೋಜೆಯುಂ ಪೂಜೆಯಂ
ಶೋಭಾಸೌಮ್ಯಸಮುದ್ರೆಯಂ ಸುವಿಮಲೇಕೋಭದ್ರೆಯಂ ರುದ್ರೆಯಂ
ಗಾಭೀರೋನ್ನತದಾತೆಯಂ ಸಕಲದೀನಾನಾಥೆಯಂ ಖ್ಯಾತೆಯಂ
ಶ್ರೀಭೂತೇಶನ ರಾಣಿಯಂ ನಮಿಸುವೆಂ ಶರ್ವಾಣಿಯಂ ಜಾಣೆಯಂ ೧೨

ಚಂಪಕಮಾಲೆ

ಉಮೆಯ ತನೂಭವಂ ಸುರಮುನಿವ್ರಜ ಕಿನ್ನರಲೋಲ ದೇವತಾ
ಸಮುದಯ ಸಿದ್ಧವಂದಿತಪದದ್ವಿತಯಂ ಮಣಿಮೌಳಿ ಮೂಷಕೋ
ದ್ಗಮನ ಭುಜಂಗಭೂಷಣ ವರಾಂಕುಶಪಾಣಿ ಸುಮೋದಕಪ್ರಿಯಂ
ವಿಮಲಗುಣಾತ್ಮ ಭಕ್ತಪರಿಪಾಲಕ ರಕ್ಷಿಸು ವಿಘ್ನನಾಯಕಾ ೧೩

ಕಂದ : ಗುರುಚರಣಮೆ ಸಚ್ಚರಣಂ
ಗುರುಚರಣಮೆ ಸಕಲತೀರ್ಥ ಪುಣ್ಯಕ್ಷೇತ್ರಂ
ಗುರುಚರಣಮೆ ಸನ್ಮಂತ್ರಂ
ಗುರುಚರಣಮೆ ಕುಡುಗುಮುನ್ನತಪ್ರದಪದಮಂ ೧೪

ಪಂಚಪಾದ

ಸದಮಲಯೋಗಸಿದ್ಧರ ಮನೋಮುದಸಿಂಧುವಿನಲ್ಲಿ ತೋರ್ಪ ನೀ
ರದ ಬಹುನೀಲವರ್ಣನ ಪದದ್ವಯ ಪಂಕಜಪುಷ್ಪದಿಂದಲು
[1]ಬ್ಬಿ[1]ದ ಮಕರಂದದಂಜನದೆ ಮುಕ್ತಿನಿಧಾನವ ಕಂಡು ಕೀರ್ತಿಗಾ
ಸ್ಪದವೆನೆ ರಾಜಿಸುತ್ತಿಹ ಪರಾಶರ ಭೀಷ್ಮ ವಿಭೀಷಣಾಖ್ಯ ನಾ
ರದ ರುಕುಮಾಂ[2]ಗದರ್ ಸನಕರಂಘ್ರಿಯುಗಂಗಳಿಗ್ಗೈದೆ[2] ವಂದಿಪೆಂ ೧೫

ಚಂಪಕಮಾಲೆ

ಕವಿಕುಲಕಾಂ ನಮಸ್ಕರಿಪೆ ಯುಕ್ತಿನಿವಾಸಗೆ ಕಾಳಿದಾಸಗಂ
ನವರಸಭೂಷ ಹಂಪೆಯ ಹರೀಶಗೆ ಕೀರ್ತಿಲಸತ್ಪ್ರಕಾಶಗಂ
ಭುವನ..................ಭದ್ರಗೆ ಸತ್ಕವಿರಾಯ ರುದ್ರಗಂ
ತವೆ......................ಕವಿಸಾರ್ವಭೌಮ ಶುಕರೂಪಗೆ ೧೬

ಕಂದ : ಕೊಂಡಾಡಲಱಿಯ...........
ಕೊಂಡಾಡಿಸಿಕೊಂಬ ಸುಗುಣವೃತ್ತಿಯನಱಿಯದ
ಭಂಡಗೆ ಮೊದಲೆಱಗುವೆ ಭೂ
ಮಂಡಲಪತಿಯಿರಲು ವೇತ್ರಧರಗೆಱಗುವವೊಲ್ ೧೭

---

[1] ಬಿ್ (ಕ) [2] ದಾದಿ ಸನಕಾದಿಗಳಂಘ್ರಿಯುಗಕ್ಕೆ (ಚ)

ಮಾಡಲದೇಂ ಸ್ತೋತ್ರ[1]ವ[1] ಸು
ಪ್ರೌಢರಿರಲ್ ದುರ್ಜನರ್ಗಮೆಂದಂಜಿಸಿ ಮಾ
ತಾಡದಿರಿ ದೇವತಾರ್ಚನೆ
ಮಾಡುವುದಕೆ ಮುಂದೆ ಕಾಲ ತೊಳೆಯಲ್ ಕುಂದೇ ೧೮

ಕಂದ: ಅದಱಿಂದೆ ದುರ್ಜನಾಳಿಗೆ
ಮೊದಲೊಳ್ ವಂದನೆಯ ಮಾಡಿ [2]ಸುಹೃದಯರಾ[2] ಸ
ತ್ಪದಕೆ ಮುಗುಟ[3]ಙಿಗಿ ಪೇೞ್ವೆಂ
ಸದಮಲಸತ್ಕೃತಿಯ ಹರಿಯ ಪದಪದ್ಧತಿಯುಂ ೧೯

ಸ್ರಗ್ಧರೆ

ಶ್ರೀಮನ್ಮತ್ಸ್ಯಂ ಕತಸ್ಥಂ ಪದಕಮಠಲಸತ್ಕ್ರೋಢ ಚರ್ಮಾದಿನಾಥ
ಪ್ರೇಮಂ ಸಾಕ್ಷಾನ್ನೃಸಿಂಹಂ ಘನತರಕುಬುಜಂ ವಾಮನಾಂಕಂ ಶುಭಾತ್ಮಾ
ರಾಮಂ ಪ್ರೇಮಾಭಿರಾಮಂ ಬಲಕರನುತಗೀರ್ವಾಣ ಕಾರುಣ್ಯಸಾರ
ಪ್ರೇಮಂ ಪೂರ್ವಾಮರೋದ್ಯತ್ಕಲಿಹರ ಕೃಪೆಯಿಂ ಪಾಲಿ[3]ಕೆ[3]ಮ್ಮಂ ಮುಕುಂದಂ ೨೦

ವಚನ: ಇಂತೆಸೆವ ಶ್ರೀಮದಾದಿನಾರಾಯಣಂ [4]ಲೋಕಹಿ[4]ತಾರ್ಥಮಾಗಿ ದಶಾವತಾರ ಮಾದ ಪವಿತ್ರಾಚಾರ ಗಂಭೀರ ಸಾರೋದ್ಧಾರಮಂ ವಿಸ್ತಾರಂಗೆಯ್ಯೆವೇೞ್ಕೆಂದು ಸಜ್ಜನ ಸಮುದಯಂ ತಮ್ಮೊಳ್ ಪರಿಪತ್ತಿಚಿಂತರಾಗಿ

ಚಂಪಕಮಾಲೆ

ಹರಿಪದಪದ್ಮಭೃಂಗನವನೀಸುರ ಸದ್ಗುರು ಸೇವ್ಯ ನವ್ಯ ವಿ
ಸ್ತರ ಶುಭಚಿತ್ತಸುತ್ತಮಚರಿತ್ರ ಲಸನ್ಮೃದುವಾಕ್ಯಭಾವ ಬಂ
ಧುರರಸ ರೀತಿ ಮಾರ್ಗ ವರಸಜ್ಜನ ಬಂಧು ವಿಲಾಸಮೂರ್ತಿ ಭಾ
ಸುರತರಕಲ್ಪ ಭೂರುಹಲಸತ್ ಕವಿಮಲ್ಲರಸಾಂಕ ಪಂಡಿತಂ ೨೧

ವಚನ: ಮತ್ತಮಾತನಾರೆಂದೊಡೆ ದ್ವಿಜವಂಶವಾರ್ಧಿವರ್ಧನ ಸಂಪೂರ್ಣಚಂದ್ರಮಂ ನಿರ್ಮಲ ಕಮ್ಮೆವಂಶ ಮಹಾಸೌಧರತ್ನಕಲಶನುಂ ಶ್ರೀವತ್ಸಗೋತ್ರ ಪವಿತ್ರಚರಿತ್ರನುಂ ತಿಮ್ಮರಸಮಂತ್ರಿಯುದರಾಬ್ಧಿ ಸುಧಾಸ್ವರೂಪನುಂ ತಿಪ್ಪಾಂಬಿಕಾ ಪುಣ್ಯೋದರ ಸಂಭವನುಂ ಗುರುಸದಾನಂದ ಪಾದಾರವಿಂದಮಕರಂದಷಟ್ಚರಣನುಂ ವಿದ್ವಜ್ಜನಬಂಧುವೆನಿಪ್ಪ ನಾರವಂಗಲದ ಮಲ್ಲರಸಾಂಕನೊಪ್ಪುತಿರ್ಪನಂತುಮಲ್ಲದೆಯುಂ

---

1 ಮ (ಚ) 2 ಸದುಹೃದಂಬರ (ಚ) 3 ಸೆ (ಚ) 4 ಜಗದ್ಧಿ (ಚ)

ಚಂಪಕಮಾಲೆ

ಎಸೆವ ಪದಂ ಸುಶಬ್ದಮಣಿನೂಪುರದಿಂ ಮಿಗೆ ತೋಱಿ ಭಾವದ
ಲ್ಲೆಸೆವತಿ ಜಾತಿವಸ್ತ್ರದೊಳೆ ವೃತ್ತಕುಚಂ ರಸಗಂಧದಿಂ ಸದಾ
ಪೊಸದೆನಿಪಾ ಕಚಂ ಸಕಲಕನ್ನಡ[1]ವೂಗಳಿನೊಪ್ಪೆ[1] ಕಬ್ಬಮೆಂ
ಬಸಿಯುಳನಿಂತು ಸಿಂಗರಿಸಿ ರಾಜಿಸುನಂ ಕವಿರಾಜಮಲ್ಲಗಂ ೨೨

ಕಂದ : ಕವಿಗಳ ಕರ್ಣರಸಾಯನ
ಮವಿರಳ ವಿದ್ವಾಂಸರಾನನಾಬ್ಜ ದಿನೇಶಂ
ನವರಸಿಕರ ಜಿಹ್ವಾಮೃತ
ಮವನಿಯೊಳೀ[2]ಕಾವ್ಯಮೆಂಬುದಿದು ತಾಂ[3] ಲೋಕಂ ೨೩

ಎಂದಿಂತೆಲ್ಲ ಬುಧರ್ ಕವಿ
ವೃಂದಂ ಕೊಂಡಾಡೆ ಭುವನ ನುತಿಸಲ್ ಪದಪಿಂ
ಛಂದ ರಸ ಭಾವ ಶಬ್ದಂ
ಮುಂದ್ದೈಸಿರೆ ಪೇೞ್ದನೊಲವಿನಿಂದೀ ಕೃತಿಯೊಳ್ ೨೪

ವಚನ : ಇಂತೆಂದೆಲ್ಲರ್ ಸಲ್ಲಾಪಂಗೆಯ್ದೆನ್ನ ಲಲ್ಲೆವಾತಿಗೊಡಂಬಟ್ಟು ಅಲ್ಪಮತಿಯೆನ್ನದೆ ಕೈವಿಡಿದು ನಿರೂಪಿಸಿದ ಸುವಚನಕೆ ಹಸಾದಮೆಂದವರನುಜ್ಞೆಯಂ ಶಿರಸಾ ವಹಿಸಿಕೊಂಡು

ಕಂದ : ಖಗರಾಜಂ ತಿರುಗುವ ದಾ
ರಿಗಳೊಳ್ ಶುಕಶಿಶು ತಳರ್ವ ತೆಱದಿಂದೆನ್ನ
ಲ್ಪಗವಿತೆಯೆನ್ನದೆ ಹರಿಪದ
ಯುಗ ಚಾರಿತ್ರಮನೆ ಪೇೞ್ವೆನೆಂಬುದಿದೆಂತೋ ೨೫

ಕಾರುಣ್ಯಮೂರ್ತಿ ಕೃಷ್ಣನ
ಚಾರಿತ್ರಮೆನಲ್ಕೆ ಮೆಚ್ಚಿ ಕೈಕೊಳ್ಳದರಾರ್
ಚಾರುತರ ಕುಸುಮಕೋ[3]ಸುಗ[3]
ನಾರಂ ಪಿಡಿವಂತಿರೆನ್ನ ಕೃತಿ ಸಲದಿಹುದೇ ೨೬

ಚಂಪಕಮಾಲೆ

ಕೃತಿಗಭಿಧಾನಮೀ ಧರೆಗೆ ಸೇವ್ಯಮುದಾದ ದಶಾವತಾರಮೀ
ಕೃತಿಗಧಿನಾಯಕಂ ವಿಮಲವಾರಿಧಿಜಾತೆಯಧೀಶ ವಿಷ್ಣುವೀ
ಕೃತಿಯ ನಿಮಿರ್ಚಿದಂ ಕ್ಷಿತಿಸುರಾತ್ಮಜ ಮಲ್ಲರಸಾಂಕನೆಂದೊಡೀ
ಕೃತಿಯನನಾರತಂ ಸಕಲಸತ್ಪುರುಷರ್ ಮಿಗೆ ಮೆಚ್ಚದಿರ್ಪರೇ ೨೭

---

[1] ಪುಷ್ಪದಿನೊಪ್ಪೆ (ಚ) [2] ಕೃತಿಯೆಂಬುದು (ಚ) [3] ಸ್ವರ (ಚ)

ಕಂದ : ಇದು ಹರಿಪದ ಸಂಕೀರ್ತನೆ
ಯದಱಿಂದಂ ಜಟಿ ಕುಳ ಕ್ಷಳದ ನೇಮುಗಳಂ
ಸದಲಂಕಾರ ರಸಂಗಳ
ನೊದವಿಸಿತಿಲ್ಲೆನ್ನಬೇಡ ಸುಪ್ರೌಢಜನಂ ೨೮

ಚಂಪಕಮಾಲೆ

ಶರನಿಧಿ ಶೈಲ [1]ಪತ್ತನ[1] ನೃಪಾಲ ಸುತಂ ನಿಜಕೇಳಿ ನಂದನಂ
ಧುರಜಯ ಮಂತ್ರ ದೂತ ವಿರಹಂ ಋತು ಯಾನ ಸುಧಾಂಶು ಭಾಸ್ಕರಂ
ಪರಿಣಯ ಕಾಮಕೇಳಿ ಮಧುವೆಂದೆನಿಸೀ ಹದಿನೆಂಟುವರ್ಣನಂ
ವಿರಚಿಸಿ ಪೇಟ್ವನೀಕೃತಿಯೊಳಾವದಿನಂ ನೆಲೆಗೊಂಡು ನಿಲ್ವಿನಂ ೨೯

ಮತ್ತೇಭವಿಕ್ರೀಡಿತ

ರಸಮುಧ್ಯಸ್ಥಿತವಾದ ಹೇಮರುಚಿ ನೈಸರ್ಗತ್ವಮಿಲ್ಲಪ್ಪುದೀ
ರಸಮುಧ್ಯಸ್ಥಿತವಾಗಿ ಹೇಮರುಚಿ ನೈಸರ್ಗತ್ವಮಾಗಿರ್ದುದೊ
ಪ್ಪೆ ಸುರಾಧೀಶ್ವರ ಮುಖ್ಯವಾದ ವಿಬುಧಾನೀಕಂಗಳಂ ಸಾರ್ದು ಸಂ
ತಸದಿಂ ಮೇರುನಗೇಂದ್ರಮೆಂದೆನಲದೇಂ ಸತ್ಸಂಗವೋ ಪೂಜ್ಯವೋ ೩೦

ವಚನ : ಆ ಮಹಾಸುರನಗದ ಮೇಲೆ ಅಮರಾವತಿ ತೇಜೋವತಿ ಚಂದ್ರವತಿ ಕೃಷ್ಣವತಿ ಜಲಾವತಿ ಗಂಧವತಿ ಅಲಕಾವತಿ ಯಶೋವತಿಯೆಂಬ ಅಷ್ಟದಿಗ್ವರಪಟ್ಟಣಂಗಳ್ ಪ್ರಾಗ್ದಕ್ಷಿಣ ಪ್ರತೀಚ್ಯೋತ್ತರದಿಂದೊಪ್ಪೆ ಮಧ್ಯದಲ್ಲಿ ಸತ್ಯವತಿ ವೈಕುಂಠ ಕೈಲಾಸವೆಂಬ ತ್ರೈಮೂರ್ತಿಗಳ ಪಟ್ಟಣಗಳಿಂ ಮೇಲೆ ಪುಷ್ಕರಾವರ್ತ ಸ್ವರ್ನದಿ ಮಂದಾಕಿನಿಯೆಂದು ಮೂಱುಮುಖವಾಗಿ ಇಳಿದು ತ್ರಿಪದೆಯೆನಿಸಿಕೊಂಡ ದೇವಗಂಗೆಯಿಂ ಶನಿ ಗುರು ಮಂಗಳಾದಿತ್ಯ ಶುಕ್ರ ಬುಧ ಸೋಮ ಮುಖ್ಯಮಾದ ಗ್ರಹಮಾಲೆಯಿಂ ಮರೀಚ್ಯತ್ರಿ ವಸಿಷ್ಠಮು[2]ಖ್ಯ[2]ರಾದ ಸಪ್ತ[3]ರ್ಷಿಯ[3]ರಾದಿಯಾಗಿ ದೇವಋಷಿ ಪಿತೃಋಷಿ ನಕ್ಷತ್ರರಾಶಿ ವಸು ರುದ್ರರ್ಗೆ ನೆಲೆಯಾದ ಭೂರ್ಭುವಸ್ಸುವರ್ತಪೋಲೋಕ ಮುಂತಾದ ಧ್ರುವ ಶಿಂಶುಮಾರ ಚಕ್ರದಿಂದೊಪ್ಪುತಿ[4]ರ್ದು[4]ದಂತುಮಲ್ಲದೆಯುಂ

ಚಂಪಕಮಾಲೆ

ಪರಿಷದ ಕೋಡುಗಲ್ ಪರಿವ ಸಿದ್ಧರಸೋರ್ಜರ ಪಾಡುತಿರ್ಪ ಕಿ
ನ್ನರಮಿಥುನಾಳಿ ಕಲ್ಪಲತೆ ಸುತ್ತಿದ ದೇವಮಹೀಜ ಶಾಸ್ತ್ರದು
ಚ್ಚರಣೆಯೊಳಾಡುತಿರ್ಪ ಶುಕಸಾರಿಕೆ ತೋಱುವ ಕಾಮಧೇನು ಸಿ
ದ್ಧರ ಪರಿಪಂಕ್ತಿಯೊಪ್ಪುವ ಮುನೀಶ್ವರರಿಂ ಕನಕಾದ್ರಿ ರಂಜಿಕುಂ ೩೧

---

[1] ಪಟ್ಟಣ (ಚ) [2] ಖ (ಕ) [3] ಋಷಿಯ (ಚ) [4] ರ್ಪು (ಚ)

ಕಂದ : ಬಳಸಿದ ಕೀಲಕಗಿರಿಯೊಳ್
ಬೆಳೆದಿರ್ಪುವು ಜಂಬು ಜಟಿ ಕುಶಾಶ್ವತ್ಥಂಗಳ್
ತಳತಳಿಸುತ್ತಂ ಬಜ್ಜರ
ವೆಳೆಮಾಣಿಕ ಪುಷ್ಯರಾಗ ಕಿಕ್ಕಿಱಿದಿರ್ಕುಂ ೩೨

ವಚನ : ಮತ್ತಮಾ ಮೇರುಪರ್ವತಂ ದ್ರೂಷಣ ಮಹಿಮೆಯಂತೆ ಜಾಂಬೂನದ ಗಾಂಭೀರ ಗರ್ವಮುಂ ಇಂದ್ರಾವರಜನಂತೆ ಉತ್ಕಟಪ್ರಭಾಮಣಿಯು[1]ಕ್ತ[1]ಮುಂ ಪ್ರಾಚೀನ ಬರ್ಹಿಯಂತೆ ನನಖಂಡಗೋತ್ರಾವಲಂಬಿಯುಂ ರುದ್ರನಂತೆ ವಿಭೂತಿವಿಲಸಿತಮುಂ ಪುಣ್ಯಾರಣ್ಯದಂತೆ ಅಷ್ಟಾಪದತೇಜಪರಿವೇಷ್ಟಿತಮುಂ ಕಾಷ್ಠವಿಷ್ಟಂಬರದಂತೆ ಸುರದೂತ ಕಿನ್ನರ ಸೇವ್ಯಮೆನಿಸಿಪ್ಪುದಂತುಮಲ್ಲದೆಯುಂ

ಕಂದ : ಸುಮನಸ ರೋಲಂಬಗಳಿಂ
ಸಮನಿಸಿದಾ ಕೀಲಕಾದ್ರಿಗಳ ಪರಿಯೆಸಳಿಂ
ರಮಣೀಯಮೆ ಹರಿನಾಭೀ
ಕಮಲದವೊಲ್ ಮೆಱೆ[3]ವುತಿರ್ಕುಮಾ ಮೇರುನಗಂ ೩೩

ವಚನ : ಮತ್ತಮಾ ಕನಕಾದ್ರಿಯಂ ಬಳಸಿ ಹರಿ ಭಾರತ ಭದ್ರಾಶ್ವ ಮಾಲ್ಯವಂತ ಕೇತುಮಾಲ ಹಿರಣ್ಯ ಕಿಂಪುರುಷ ಸುರ ಇಳಾವೃತಮೆಂಬ ವರ್ಷಖಂಡಂಗಳಿಂ ಚೌವೀಸ ಚಪ್ಪನ್ನ ಚತ್ತಾಳ ದೇಶಂಗಳಿಂ ಸ್ವೇದಜ ಉ[2]ದ್ಭಿ[2]ಜ ಜರಾಯುಜ ಅಂಡಜ ಮೊದಲಾದ ದೇವಯೋನಿ ಮರ್ತ್ಯಯೋನಿಗಳಿಂ ಬದರಿಕ ಕಿಂಶುಕ ಆಪಂಚಕ ಮೊದಲಾದ ಅಗಣ್ಯಾರಣ್ಯಂಗಳಿಂ ಮಂದರ ಮಲಯಾಚಲ ಮೈನಾಕ ಹಿಮವಂತ ಪಾರಿಯಾತ್ರ ಅಂಜನ ವಿಂಧ್ಯ ಮಾಲ್ಯವಂತ ನಿಷಧ ಗಂಧಮಾದನ ಗೋಮಂತ ಕಾಳಾಂಜನ ದ್ರೋಣ ರೋಹಣ ಚಿತ್ರಕೂಟ ತ್ರಿಕೂಟ ಹೇಮಕೂಟ ಮೊದಲಾದ ನಗಂಗಳಿಂ ಮಾನಸಾದಿ ಸರೋವರಂಗಳಿಂ ಸೀತೆ ತಾಮ್ರಪರ್ಣಿ ಜಾಹ್ನವಿ ಗಂಗೆ ಗೋದಾವರಿ ತುಂಗಭದ್ರೆ ಮೊದಲಾದ ಮಹಾನದಿಗಳಿಂ ಲಂಕೆ ಸಿದ್ಧಪುರಿ ಯಮಕೋಟಿ ರೋಮಕವೆಂಬ ಮಹಾಪಟ್ಟಣಂಗಳಿಂ ಭೂಮಂಡಲಮೊಪ್ಪುತಿರ್ಪುದಂತುಮಲ್ಲದೆಯುಂ

ಕಂದ : ಅಂತೊಪ್ಪಂಬೆತ್ತಿಹ ಭೂ
ಕಾಂತೆಯ ಮಣಿಕಾಂಚಿಯಂತೆ ಬಳಸಿರ್ಪುದೋ
ರಂತೆಯಪಾರೋ[3]ತ್ಕ[3]ರದಿಂ
ಸಂತತ ಗಂಭೀರಮುದ್ರ ಲವಣಸಮುದ್ರಂ ೩೪

---

[1] ತ್ತ (ಚ) [2] ದ್ಭ (ಚ) [3] ತ್ತ (ಚ)

ಚಂಪಕಮಾಲೆ

ತೆರೆಗಳ ಮಾಲೆಯಿಂ ಹರಿಯ ಶಯ್ಯನಿಕೇತನ ಶಂಖಚಕ್ರದಿಂ
ಸಿರಿ ಶಶಿಯಾನೆ ಕಲ್ಪಕುಜ ಮೌಕ್ತಿಕ ವಾಜಿ ಸುವಸ್ತು ಜನ್ಮದಿಂ
ಗಿರಿಕುಲಪೂರದಿಂ ಜಲಚರೌಘವ ವಾಡಬವಹ್ನಿಯಿಂ ಭಯಂ
ಕರ ಘನಘೋಷದಿಂ ಮೆಱೆ[1]ಗುಮಾ[1]ವಗ ವಾರಿಧಿಯತ್ಯುದಾರದಿಂ ೩೫

ವಚನ: ಮತ್ತಮಾ ವಾರಿಧಿಯಪಾರಮಹಿಮೆಯಿಂ ಅತ್ಯುದಾರತೆಯಿಂ ಅನಂತರತ್ನ ಪ್ರಕರಂಗಳಿಂ ಕಮಠ ಕರ್ಕಟಕಸ್ತೋಮಂಗಳಿಂ ಮತ್ತಮನೇಕ ಜಲಚರಂಗಳಿಂಮೊಪ್ಪುಗು ಮಂತುಮಲ್ಲದೆಯುಂ

ಕಂದ: ವಿಳಸನ್ಮಣಿಮೌಕ್ತಿಕದಿಂ
ಸುಳಿ[2]ಯಿಂ[2] ಘೋರ್ಗರೆವುಸುರ್ಗಳಿಂ ಫೇನಗಳಿಂ
ಕೆಲಸಿಡಿವ ತುಂತುರುಗಳಿಂ
ಜಲಪೂರದಿನೆಸೆವುದಲ್ಲಿ ಪಾರಾವಾರಂ ೩೬

ವಚನ: ಮತ್ತಂ ಲವಣೇಕ್ಷು ಸು[3]ರಾ[3] ಸರ್ಪಿ ದಧಿ ಕ್ಷೀರ ಸ್ವಾ[4]ದೂ[4]ದಕ ಸಮುದ್ರಂಗಳ ಮಧ್ಯದೊಳಿರ್ಪ ಮಹಾದ್ವೀಪಗಳಿಂದೊಪ್ಪುವ ಭೂಮಿಯಿಂ ಕೆಳಗೆ ತುಂಬಿರ್ದತಿಪೂರ ಮಾದ ಮಹಾಜಲಸೃಷ್ಟಿಯಿಂ ಮೇಲೆ ಕೂರ್ಮನೊಪ್ಪುವುದಂತುಮಲ್ಲದೆಯುಂ

ಕಂದ: ಉರುತರಮೈರಾವತ ಪುಂ
ಡರಿಕಂ ವಾಮನ ಬಿಲೋಕ್ತ ಕುಮುದಾಂಜನ ಬಂ
ಧುರ ಪುಷ್ಪದಂತನೆನೆ ದಿ
ಕ್ಕರಿಯೆಂಟೊಪ್ಪುವವು ಸಾರ್ವಭೌಮ ಸಮೇತಂ ೩೭

ಆ ಕರಿಗಳ ಮಧ್ಯದಿನತಿ
ಭೀಕರದಿಂ ಫಣ ಸಹಸ್ರಮಣಿದೀಧಿತಿಯಿಂ
ಶ್ರೀಕರಮೆನಿಸುವ ಶೇಷನ
ನೇಕ ಮಹಾಮಹಿಮೆಯಿಂವೆ ರಾಜಿಸುತಿರ್ಪಂ ೩೮

ಫಣಿಪನ ಮಸ್ತಕದ ಲಸ
ನ್ಮಣಿಪೀಠದ ಮೇಲೆ ನಿಂದು ಸಂತಸದಿಂ ಧಾ
ರಿಣಿಯಂ ತಾಳ್ದಿರ್ಪಳ್ ಸ
ದ್ಗುಣಿಯಹ ಭೂಶಕ್ತಿ ಹರಿಯ ಪದಚಿಂತನೆಯಿಂ ೩೯

---

[1] ಪುದಾ (ಚ) [2] ವಿಂ (ಚ) [3] ರೆ (ಚ) [4] ದೋ (ಚ)

ಬಳಸಿದ ಬಣ್ಣಂ ವಾರ್ಧಿಗ
ಳೊಲವಿಂ ನಡುವಿರ್ಪ ಮೇರು ಪೆರ್ಚೊಡರ್ವರಿದು
ಜ್ವಲಿಸುವ ರವಿವೆಳಗಾರತಿ
ದಳಿಗೆ ಮುಕುಂದಂಗೆ ಧಾತ್ರಿಯೆನೆ ರಾಜಿಸುಗುಂ ೪೦

ಮತ್ತೇಭವಿಕ್ರೀಡಿತ

ಧರಣೀ ಸೌಖ್ಯಕರಂ ಗದಾಯುಧಧರಂ ಶ್ರೀಶಾರ್ಙ್ಗಚಕ್ರೋಧರಂ
ವರಪೀತಾಂಬರದಿವ್ಯಕೌಸ್ತುಭಧರಂ ಲಕ್ಷ್ಮೀವರಂ ಭೂಧರಂ
ಸುರಸಂದೋಹ ಪುರಂದರೋನ್ನತಪರಂ ಸೌಖ್ಯಾಕರಂ ನಿರ್ಮಲಂ
ಪರಮಾನಂದಕರಂ ಜಗತ್ರ್ಪಕರಮುಂ ರಕ್ಷಿಕ್ಕೆ ನಾರಾಯಣಂ ೪೧

ಗದ್ಯ : ಇದು ವೃಂದಾರಕವೃಂದ ಪರಿಮಣಿಖಚಿತ ಮಕುಟರಂಜಿತ ಶ್ರೀಮದಾದಿ
ನಾರಾಯಣ ಶ್ರೀಚರಣಸರಸಿರುಹ ಮಕರಂದಷಟ್ಚರಣಸಲ್ಲಲಿತ
ಮಲ್ಲರಸಾಂಕ ವಿರಚಿತಮಪ್ಪ ದಶಾವತಾರ ಚರಿತ್ರ ಮಹಾ
ಪ್ರಬಂಧದೊಳ್ ಲೋಕಾಕಾರವರ್ಣನಂ

ಪ್ರಥಮಾಶ್ವಾಸಂ

ದ್ವಿತೀಯಾಶ್ವಾಸಂ

ಕಂದ : ಶ್ರೀಯರಸನನುಪಮಾತ್ಮಂ
ತೋಯಜಭವಮುಖ್ಯ ಸುರನತಾಂಘ್ರಿದ್ವಿತಯಂ
ಮಾಯಾವಿಯುಕ್ತ ಭಕ್ತನಿ
ಕಾಯಂ ಸಲಹಾದಿನಾ[1]ರ[1]ಯಣನೊಲವಿಂದಂ ೧

ಅನಿಮಿಷರೊಡನಾಡುತ್ತುಂ
ಕೊನೆ ನೋಡದೆ ನಂಬಿದವರನುಱ[3] ಪಾಲಿಸುತುಂ
ಘನತರಮೆನಿಸುವ ಲಕ್ಷ್ಮೀ
ಶನ ಪದಪದ್ಮಂಗಳೊಲಿಗೆ ಸುಜನಸ್ತುತಿಗಂ ೨

ಮತ್ತೇಭವಿಕ್ರೀಡಿತ

ಧರೆಯೊಳ್ ತೂಗುವ ಶುಕ್ತಿಕಾನಿಕರಮೊಳ್ ಸೂರ್ಯೇಂದುಬಿಂಬಂಗಳೊ
ಪ್ಪಿರೆ ಸೂಸುತ್ತಿಹ ಬಿಂದುಜಾಲತತಿಯೊಳ್ ನಕ್ಷತ್ರಗಳ್ ನಾಡೆ ಬೆ
ಳ್ನೊರೆಯೊಳ್ ಪಲ್ಲಟಮಾಗೆ ರೌಪ್ಯಶಿಖರಂ ಕಂಬುಪ್ರತಾನಂಗಳೊಳ್
ಸುರರಾಜೇಭ ಸಮಂತುಗೂಡೆ ಮೆಱೆದತ್ತಾ ಕ್ಷೀರರತ್ನಾಕರಂ ೩

ವಚನ : ಅಂತೆಸೆವ ಕ್ಷೀರಾಬ್ಧಿಯೊಳೊಪ್ಪುವ ಶ್ವೇತದ್ವೀಪ ಮಧ್ಯದಲ್ಲಿ

ಕಂದ : ವಾರಿಜನೇತ್ರಂ ಸತ್ಕರು
ಣಾರಂಭಂ ವಿಶ್ವರೂಪನಮಲಬ್ರಹ್ಮಂ
ಕಾರಣಮೂರುತಿ ಸಾಕ್ಷಾ
ನ್ನಾರಾಯಣನೊಪ್ಪುತಿರ್ದನತಿಸಂಭ್ರಮದಿಂ ೪

ವಚನ : ಅಂತೆಸೆವ ಶ್ರೀಮದಾದಿನಾರಾಯಣನೊಡ್ಡೋಲಗಕ್ಕೆಂದು ಚಿತ್ತೈಸಿ ಮೂರ್ತಿಗೊಂಬುದುಂ

ಚಂಪಕಮಾಲೆ

ಕಮಲಜನಂಚೆಯಂ ಸುರಪನಾನೆಯ ಮಾರುತಬಂಧು ಮೇಷಮಂ
ಶಮನ ಲುಲಾಯಮಂ ನಿರುತಿ ಮಾ[2]ನಿಸ[2]ನಂ ನೆಗಟಿಂ ಜಲೇಶ್ವರಂ
ಶ್ರಮಹರನೇಣನಂ ಧನದ ಪುಷ್ಪಕಮಂ ಗಿರಿಶಂ ವೃಷೇಂದ್ರನಂ
ಮಮತೆಯೊಳೇಱಿ ಪಾಲ್ಗಡಲ ಸಾರಿದರಂದು ಮಹಾವಿಭೂತಿಯಿಂ ೫

---

1 ರಾ (ಚ) 2 ಮಷ (ಚ)

ಮತ್ತೇಭವಿಕ್ರೀಡಿತ

ಸನಕಂ ಕಶ್ಯಪನತ್ರಿ ಕೌಶಿಕನಗಸ್ತ್ಯಂ ವ್ಯಾಸ ಜಾಬಾಲಿ ಜೈ
ಮಿನಿಯಾ ಶೌನಕನೈತರೇಯ ಶುಕ ಭಾರದ್ವಾಜ ಗಾರ್ಗ್ಯಂ ಸನಂ
ದನ ಪಾರಾಶರ ಕೃಭ್ರ ರೋಮಶ ವಸಿಷ್ಟಂ ನಾರದಾದಿ ಕ್ಷಮಾ
ಜನ ಯೋಗಿವ್ರಜ ಬಂದುದಭ್ರಗತಿಯಿಂದಾನಂದದಿಂದಾಕ್ಷಣಂ ೬

ಕಂದ : ಮನುಮುನಿಗಳಷ್ಟವಸುಗಳ್
ವನಜಾತೋದ್ಭವರು ರುದ್ರರಪ್ಸರ ನಿಕರಂ
ಘನದಿಕ್ಪಾಲ ನವಗ್ರಹ
ರನುನಯದಿಂದೈದಿ ಬಂದರತಿಸಂಭ್ರಮದಿಂ ೭

ವಚನ : ಅಂತು ರಾಜಪ್ರಾಂಗಣಕವತರಿಸಿದ ಸಮಸ್ತ ಸುರಸಮುದಯಮಂ ದೌವಾರಿಕಂ ಕಂಡು

ಉತ್ಪಲಮಾಲೆ

ಶ್ರೀವನಿತಾಧಿನಾಥ ಕರುಣಾಕರ ಬಿನ್ನಹ ದೇವವಂದಿತಾ
ದೇವ ಪರೀವೃಢಾಗ್ನಿ ಯಮ ನೈರುತಿಯಬ್ಧಿಪ ವಾಯು ವಿತ್ತಪಂ
ಪಾವಕಲೋಚನಾದಿ ಸುರಮುಖ್ಯ ಮುನಿವ್ರಜ ಬಂದುದೆಂದು ರಾ
ಜೀವವಿಲೋಚನಂಗೆ ಸದುಬಿನ್ನಪಮಂ ನೆಱಿಮಾಡಲಾಕ್ಷಣಂ ೮

ಕಂದ : ಬರಿಸಮರೇಂದ್ರಾದಿಗಳಂ
ಬರವೇತಕ್ಕೆಂದು ಕೇಳ್ವೆವೆಂದಾ ಲಕ್ಷ್ಮೀ
ವರನ ನಿರೂಪಂಗೇಳ್ದಾ
ಚರನೈದಿ ಸುಧರ್ಮನೋಲಗಕೆ ಬರವೇಳ್ದಂ ೯

ವಚನ : ಅಂತು ಬಂದು ಸಕಲಸುರಸಮುದಯಂ ನಿಯಮಸ್ಥಾನಮನಱಿಪಿದಲ್ಲಿ ಸಾಲ್ಗೊಂಡ ಮಿಸುನಿಗಂಭದ ಕೀಲಣೆಯ ದಿವ್ಯರತ್ನಂಗಳೊಳ್ ಪೊಳೆವ ಪ್ರತಿರೂಪಂಗಂಡೆಮ್ಮಿಂ ಮುನ್ನಮಿಾ ಸಮ್ಯಜ್ಞಾನಿಯ ಚಿತ್ತಂಬಡೆಯಬಂದರಿದಾವಲೋಕಪಾಲಕರೆಂದು ಬೆರ್ಚಿನೋಡುವ ಮುಗ್ಧದೇವರಂ ಕಂಡು ಕೈವೊಯ್ದು ನಗುವ *ಕಾಂತೆಯರ ದರಹಾಸ ವೆಳ್ದಿಂಗಳಿಂ ಮಂತ್ರಸುಂದಣಿಯ ಸಂಭ್ರಮರೆನಲು ನಿಲ್ಲಿಸಿದ ಕಾಂತೆಯರ ಕಂಠಮಾಲೆಗಳ ಕಟ್ಟಾಣಿ ಮುತ್ತುಗಳ್ ಕೆಲಕ್ಕೆ ಸಿಡಿದುದುರಿ ಪುಷ್ಪಪರಿಮಳಂ ಪರಿಯೆ ಮಲ್ಲಿಗೆಯರಳ್ಗಳೆಂದು ಮುಸುರ್ವ ತುಂಬಿಗಳ ಬಂಬಲ್ಗಪ್ಪಂ ಕಣ್ಣಿಟ್ಟು ನೋಡುವ ಕಾಂತೆಯರ ಕಡೆಗಣ್ಣ

---

* ಗ ಪ್ರತಿ ಇಲ್ಲಿಂದ ಪ್ರಾರಂಭವಾಗುತ್ತದೆ.

ಬೆಳಗಿಂ ಪರೆಯಿಸಲುಂ ಮತ್ತಂ ಹರಿಯ ಚರಣಸೇವೆಗೆಂದು ಭರದಿಂ ಪರಿತರ್ಪ ಗರುಡನ ಗಱಿಯ ಗಾಳಿಯಿಂದುಱುಗಿದ ಮಕುಟಂಗಳಂ ಸಸಿನೆಗೆಯ್ವ ಮಹಾಮಹಿಮರ ಕೈಯ ನಖಕಾಂತಿ ನೀಲದ ನೆಲಗಟ್ಟಿನೊಳ್ ಪೊಳೆಯೆ ಕಂಡು ಕೊರಳ ತ್ರಿಸರಂ ಸರಿದು ಬಿದ್ದವೆಂದಱಿಸಿ ಪಿಡಿವ ಮುಗ್ಧಕಾಂತೆಯರ ಸಂದಣಿಯಿಂದೊಪ್ಪುತಿರ್ಪುದಂತುಮಲ್ಲದೆಯುಂ

ಚಂಪಕಮಾಲೆ

ಸುರಜನವೆಲ್ಲಿಯಲ್ಲಿಯಧಿನಾಯಕ ಸಂಚಯವೆಲ್ಲಿಯಲ್ಲಿಯ
ಪ್ಸರಗಣವೆಲ್ಲಿಯಲ್ಲಿ ಭುಜಗಾಧಿಪ ಸಂಚಯವೆಲ್ಲಿಯಲ್ಲಿ ಕಿ
ನ್ನರಜನವೆಲ್ಲಿಯಲ್ಲಿ ವರದೇವ ಋಷೀಶ್ವರರೆಲ್ಲಿಯಲ್ಲಿ ಮಾ
ವರನ ಕಟಾಕ್ಷಸಾರರಸ ಸೂಸುತಲಿರ್ದುದದೇಂ ಕೃಪಾಳುವೋ ೧೦

ವಚನ : ಮತ್ತಮಾ ಮಹಾಸ್ಥಾನದಲ್ಲಿ ತಾರ ಮಧುರ ಮಂ[1]ದ್ರ[1]ತ್ರಯಂಗಳಂ ನಾಭಿ ಉದರ ಕಂಠಮೆಂಬ ತ್ರಿಸ್ಥಾನಮಱಿದು ನಿಷಾ[2]ದರ್ಷ[2]ಭ ಸ್ವರಂಗಳಲ್ಲಿ ಪಂಚಮಸ್ವರಂ ದೋಱ[3] ಕಂಪಿತಾನುನಾಸಿಕವೋಸರಂ ಮೊದಲಾದ ದೋಷಂಗಳಂ ಕಳೆದು ಅಮೃತದ ಸೋನೆಯೆನಿಸಿ ಶುದ್ಧಸಾಳಗ ಸಂಕೀರ್ಣದಿಂ ದೇವಗಾನಮುಂತರ್ಗಾನಮುಂ ಪಾಡುವ ಗಾಯಕೋತ್ತಮರಿಂ ಮತ್ತಂ ಆದಿ ಅನಾದಿ ಸಮ ವಿಷಮಗ್ರಹಮಱಿತು ಕಾಲ ಕ್ರಿಯ ಅಂಗಜಾತಿ ಮುಂತಾದ ಪ್ರಾಣಂಗಳಿಂ ಧ್ರುವ ಮಟ್ಟೆಯ ಚಚ್ಚಪುಟ [3]ಚಾಚಪುಟ[3] ಮೊದಲಾದ ತಾಳಂಗಳಿಂ ಮತ್ತಮನೇಕ ಕುವಾಡಗಳಿಂದೊತ್ತಿ ತೋಱುವ ಸಲಕ್ಷಣ ತಾಳಧಾರಿಗಳಿಂ ಮತ್ತಂ ಅಚ್ಚು [4]ವೈಶಿಕ[4] ನೇಮ ವ್ಯಾಪ್ತಿ ಬೊಟ್ಟು ಮೋಹರ ಅರಿದೆಂಬಿವಂತದಿರಾ ಎಂಬ ಕೂಱು ತಪ್ಪದೆ ಶುದ್ಧಭಾರಿ ಠವಣೆಯೆಂಬ ಮದ್ದಳೆಗಳಂ ಬಾರಿಸುವ ಮದ್ದಳೆಕಾಱರಿಂ ಮತ್ತಂ ಅಂಗ ಪ್ರತ್ಯಂಗ ಉಪಾಂಗವೆಂಬ ಆಂಗಿಕದಲ್ಲಿ ರಸಭಾವಂ ತುಳ್ಕುವಂತೆ ಗೀತ ಶಬ್ದ ನೇಮ ಉರುಪು ಪದ ಪಟ್ಟೆ ದರುಗಳಂ ತೋಱಿಸುವ ಪೇರಣ ಪೆಕ್ಕಣ ಗುಂಡಲಂಗಳಂ ಬಲ್ಲ ಸಾತ್ವಿಕ ಆ[5]ರ[5]ಭಟ ಕೌ[6]ಶಿಕೆ[6]ಯೆಂಬ ಪಾತ್ರಂಗಳಿಂ ಮತ್ತಮನೇಕ ವಿದ್ಯಾಪ್ರವೀಣರಿಂದೊಪ್ಪುತಿರ್ಪುದಂತುಮಲ್ಲದೆಯುಂ

ಉತ್ಪಲಮಾಲೆ

ಅಂಬುಜನೇತ್ರ ದಿವ್ಯಮಣಿಕುಂಡಲ ಕೌಸ್ತುಭ ರತ್ನಹಾರ ಪೀ
ತಾಂಬರ ಶಂಖ ಚಕ್ರ ಗದೆ ಶಾರ್ಙ್ಗ ಚತುರ್ಭುಜಮೊಪ್ಪೆ ಸರ್ವಲೋ
ಕಾಂಬೆಯೆನಿಪ್ಪ ಲಕ್ಷ್ಮಿಸಹಿತಂ ಪುರುಷೋತ್ತಮನಚ್ಯುತಂ ಕೃಪಾ
ರಂಭನನಂತ ವಿಶ್ವಭರಿತಂ ಪರಮಾತ್ಮಕ ಮೂರ್ತಿಗೊಳ್ವಿನಂ ೧೧

---

1 ದರ (ಚ) 2 ದ ವೃಷ (ಚ) 3 ಟಂ (ಚ) 4 ವೈಸಿಕೆ (ಚ) 5 ರು (ಚ) 6 ಶಕಿ (ಕ)

ಕಂದ : ಮಂದೈಸಿದಜಾಂಡಕುಳಂ
..............................ತಾಳ್ದಿಹ ಗೋ
ವಿಂದ ಜಯ ಜಯ ಎನುತ್ತುಂ
ವಂದಿಸಿದರ್ ಸಕಲಮುನಿಗಳತಿಸಂತಸದಿಂ ೧೨

ವಚನ : ಅಂತು ನಮಸ್ಕಾರಂಗೈದ ಮುನಿಮುಖ್ಯರಂ ಲಕ್ಷ್ಮೀಕಾಂತಂ ಕೃಪಾದೃಷ್ಟಿಯಿಂ ನೋಡಿ ಕರುಣಾರಸಂಗೂಡಿ ಕುಳ್ಳಿರಲ್ವೇಳ್ವುದುಂ

ಕಂದ : ತರವಿಡಿದೆಲ್ಲರ್ ಕಿಱಿಯರ್
ಸಿರಿಯರ್ಕಳನಱಿತು ಕುಳ್ಳಿರಲ್ ಮೆಲ್ಲನೆ ಸ
ತ್ಕರಮಂ ಮುಗಿದುಱಿ ಲಕ್ಷ್ಮೀ
ವರ ಬಿನ್ನಹವೆನುತೆ ನಾರದಂ ಮಿಗೆ ನುಡಿದಂ ೧೩

ವಚನ : ದೇವಾ ಭೂತ ಭವಿಷ್ಯದ್ವರ್ತಮಾನ ವ್ರತ ಕಾಲ ನೇಮ ಕ್ರಿಯೆ ಲೋಕಾಚಾರ ಧರ್ಮಕರ್ಮಂಗಳಂ ಪೇಳ್ವ ಬ್ರಹ್ಮಾಂಡ ಬ್ರಹ್ಮಕೈವರ್ತ್ಯ ಅಗ್ನೇಯ ಸ್ಕಾಂದ ಮೊದಲಾದ ಪೌರಾಣಂಗಳಂ ವಿಚಾರಿಪೆವೆಂದೊಡೆಮ್ಮ ಪುರಾಣಮತಿ ಮಂದವಾಯಿತು ಉದಾತ್ತ ಅನುದಾತ್ತ ಸ್ವರಿತ ಪ್ರಚಯ ಪಾಟಿ ಪದ ಕ್ರಮ ಜಟಿ ಚರ್ಚೆಯೆಂಬ ಋಗ್ಯಜುಸ್ಸಾಮಾಭಿಧಾನಮುಳ್ಳ ವೇದ ಶಾಸ್ತ್ರಂಗಳಂ ವಚಿಸುವೆವೆಂಬಡಾಭಾಸರೂಪನಾದವು ವ್ಯಾಕರಣ ಛಂದ ನಿರುಕ್ತ ಅಲಂಕಾರ ವೃತ್ತಿ ನ್ಯಾಸ ಭಾಟ್ಟ ಪ್ರಭಾಕರ ಭಾಷ್ಯ ವೇದಾಂತ ಮೊದಲಾದ ಶಾಸ್ತ್ರಂಗಳಂ ನೆನೆದೊಡೆ ಶಾಸ್ತ್ರಕ್ಕೊಂದಕ್ಕರಂ ಬಾರದು ಬ್ರಹ್ಮಾದ್ಯರಿಗೆ ಪೇಱಿಪ್ಪೊಡೆ ತಾವು ಸಹಾ ಬಿನ್ನಹಕ್ಕೆ ಬಂದರೆಂದು ಬ್ರಹ್ಮೇಂದ್ರಾದಿಗಳ ಮನದ ಚಿಂತೆಯುಂ ಪರಿಹರಿಸಬೇಕೆಂದು ನಾರದಮುನಿಮುಖ್ಯ ಬ್ರಹ್ಮೇಂದ್ರಾದಿಗಳ್ ಬಿನ್ನೈಸೆ[1]ಲಮಂ[1] ನಾರಾಯಣಂ ನಿಜಾತ್ಮ[2]ದೊಳ್[2] ತಿಳಿದು ನೋಡಿ

ಕಂದ : ಹೃದಯಾಬ್ಜದ ಕರುಣರಸಾಂ
ಬುಧಿ ಮೇಲ್ ಸೂಸಿತ್ತೆನಲ್ಕೆ ಲಕ್ಷ್ಮೀರಮಣಂ
ಮುದದಿಂದಜ ಮುನಿ ಸುರಪ
ರ್ಗೊದವಿಸಿ ಸಂತಸಮನುಱಿ ನಿರೂಪಿಸುತಿರ್ದಂ ೧೪

ಮತ್ತೇಭವಿಕ್ರೀಡಿತ

ತಮನೆಂಬೊರ್ವ ಸುರದ್ವಿಷಂ ಸಕಲಲೋಕಾಧೀಶ ದಿಕ್ಪಾಲರೊಳ್
.... ೧೫

---

1 ಲೆಲ್ಲಮಂ (ಚ) 2 ದಲ್ಲಿ (ಚ)

ಕಂದ : ಸುರರೆಲ್ಲರ್ ಜಪತಪದಿಂ
ಧುರನುಂ ಜಯಿಸುವರು ತಮ್ಮ ಮಂತ್ರಾದಿಯ ತ
ಸ್ಕರಿಸಿಃವೆನೆನುತಂ ಪೂರ್ವಾ
ಮರನೊಯ್ದಂ ವೇದಮಾತೆಯುಂ ಕಮಲಭ[1][ವಂ][1] ೧೬

ತಮನೆಂಬವನತ್ಯಧಿಕ
ಕ್ರಮಕುದ್ಯಮನೆಮಗಸಾಧ್ಯವಹನೆಲೆ ದೇವೋ
ತ್ತಮರಿರ ಎನಲಂಜುತ್ತಂ
ಭ್ರಮೆಯಿಂದಿಂದ್ರಾದಿ ಮುನಿಗಳೆಲ್ಲರ್ ನುಡಿದರ್ ೧೭

ಲೋಕಾವಸಾನಕಾಲದೊ
ಳೇಕಾರ್ಣವಮಾಗಲಿಂದ್ರ ಬ್ರಹ್ಮಾದ್ಯರನ
ವ್ಯಾಕುಲದೆ ನಿನ್ನ ದೇಹದೊ
ಳೇಕಾರಣವಿರಿಸಿ ಹೊರವೆ ಇದು ನಿನಗರಿದೇ ೧೮

ಒಂದೊಂದು ರೋಮಕೂಪದ
ಸಂದಣಿ[2]ಯೊಳ[2]ಜಾಂಡಕೋಟಿ ತುಱುಗಿರ್ಪುವೆನಲ್
ಮಂದಬಲ ತನುನು ನಿನಗಿದಿ
ರೆಂದೊಡೆ ಕಡುಚೋದ್ಯಮಾದುದೆನಗಸುರಾರಿ ೧೯

ಮತ್ತೇಭವಿಕ್ರೀಡಿತ

ಜಲದೊಳ್ ಮಾರುತನೊಳ್ ದಿವಾಕರನೊಳಂ ಶೀತಾಂಗನೊಳ್ ವಹ್ನಿಯೊಳ್
ಇಳೆಯೊಳ್ ಪುಷ್ಕರಮಾತ್ಮಮೂರ್ತಿಗಳೊಳಂ ನೀನಲ್ಲದನ್ಯತ್ರಮೇ
ಕುಲಶೈಲಂಗಳೊಳಬ್ಧಿಯೊಳ್ ಸಕಲ ಚೈತನ್ಯಸ್ವರೂಪಂಗಳೊಳ್
ಜಲಜಾಕ್ಷಾ ತಮನೆಂಬ ರಾಕ್ಷಸನೊಳೇಂ ನೀನಿಲ್ಲವೇ ಶ್ರೀವರಾ ೨೦

ವಚನ : ಇಂತೆಂದು ನಾರದಮುನಿಮುಖ್ಯರ್ ಬ್ರಹ್ಮೇಂದ್ರರ್ ದೈನ್ಯಭಾವದಿಂ ಬಿನ್ನೈಸೆ ಕೇಳ್ದು ಕರುಣಾ[3]ಳುಗಳೆಱೆಯಂ[3] ಭಕ್ತವಾಂಛಿತ ದಿವ್ಯಪುರುಷಂ ದಿವ್ಯ[4]ರ್ಷಿಸಮೂಹ[4]ಕ್ಕೆ ಭಯಮಿತ್ತು ತಮಂ ಪೊಕ್ಕ ಮಹಾಜಲಸ್ಥಲಕ್ಕೈದೆನಂದು

---

[1] ವ (ಕ ಚ) [2] ಯಿಂದ (ಗ) [3] ಯುಲ (ಚ) [4] ಳ್ಗಳರಸಂ (ಗ ಚ)
[5] ಋಷಿಸಮುದಯ (ಚ)

ಕಂದ : ಕುಡುವುದು ತಮನಂ ನಿನ್ನೊಳ
ಗಡಗಿರ್ದಪನೆಲೆ ಸಮುದ್ರ ದುಷ್ಟನ ನೀಂ ಪಿಂ
ತಿಡುವರೆ ಈ ಕತನವೆ ನೀಂ
ಕೆಡದಿರ್ ಸಾಱಿದೆನೆನುತ್ತೆ ಹರಿ ಮಿಗೆ ನುಡಿದಂ ೨೧

ಎಂದೊಡೆ ಸಮುದ್ರ ಕೈಮುಗಿ
ದಿಂದಿರೆ[1]ಯರಸಾ[1] ಸುರೇಂದ್ರ ಬ್ರಹ್ಮಾದ್ಯರ[2]ದೇ[2]
ನೆಂದಱಿಯದ ತಮನಂ ಪಿಡಿ
ತಂದೀಯಲ್ಕೆನಗಸಾಧ್ಯ ನೀನಱಿಯದುದೇ ೨೨

ವಚನ : ಎಂದು ಬಿನ್ನಪಂಗೈದ ಸಿಂಧುರಾಜನಂ ದೈತ್ಯಾರಾತಿ ಸಂತೈಸಿ ಮುಂತಪ್ಪ ಕಾರ್ಯಕೆಂತುಟೆನಲು ದೇವಾ ನೀಂ ಪೊಕ್ಕೊಡೆ ತೆಱಪುಗೊಡದಿರಬಾರದು ದೇವರೆನ್ನನ ಪಾರವೆಂದು ಪಾಲಿಸಿದಿರದು ನಿಮಿತ್ತಂ ಮತ್ಸ್ಯಾವತಾರವಾಗಿ ಪುಗುವುದೆ ಕಜ್ಜವೆಂದು ನುಡಿದ ಸಮುದ್ರನ ವಾಕ್ಯಕೊಡಂಬಟ್ಟು

ಮತ್ತೇಭವಿಕ್ರೀಡಿತ

ಭರದಿಂದಾ ಗಿರಿರಾಜ[3]ನೊಲ್ದು[3] ಗಱ[4]ಯಾವೊಲ್[4] ತಾಂ ಮಹಾಮೇರು ಭೀ
ಕರ ದಂತಾಕೃತಿಯಾದವೊಲ್ ಧರಣಿಯುಂ ತಾಳ್ದಾ ಮಹಾಶೇಷನಾ
ದರದಿಂದೇಕಶರೀರ[5]ನಾ[5]ದವೊಲು ಮತ್ಸ್ಯಾನೀಕದೊಳ್ ಮಾಧವಂ
ಭರದಿಂದುರ್ಬಿ ಸಹಸ್ರದಂಷ್ಟ್ರವೆಸರಿಂ ಮೈಗೊಂಡು ಮುಮ್ಮಿಱಿದಂ ೨೩

ಮಹಾಸ್ರಗ್ಧರೆ

ಇದೆ ನೋಡಿಂದ್ರಾದಿ ಪದ್ಮೋದ್ಭವರ ಪೊರೆವ ಕಾರುಣ್ಯರೂಪಾಂತುದೆಂದು
ಬ್ಬಿದ ಸಂತೋಷಾಬ್ಧಿಯೊಳ್ ನಾದದನುಲಿಯೆ ಧರಾಮಂಡಲಂ ಕೂಗೆ ದಿಕ್ಕುಂ
ಭಿದಟಂ ಮೆಯ್ವೆರ್ಚೆ ಗೋತ್ರಾದಿಗಳೊಲೆಯೆ ಮಹಾಮತ್ಸ್ಯರೂಪಾಂತು ಧುಮ್ಮಿ
ಕ್ಕಿದನಾ ವಾರಾಶಿಯೊಳ್ ಘೂರ್ಮಿಸುತ[6]ಮ[6]ಸುರಸಂಹಾರ ಕಾಲಾಗ್ನಿರುದ್ರಂ
೨೪

ಕಂದ : ಪೊಕ್ಕ ಭರಕ್ಕಂಭೋನಿಧಿ
[7]ತೆಕ್ಕಾಡಿ[7]ತ್ತೊ ದಳಿವೊಯ್ದು ತಾಯ್ಮಳಲುಂ ಕೂ
ಡುಕ್ಕಿ ಸೂಸಿತ್ತು ಕದಡಿ
ತ್ತ ಕ್ಕಾಡಿತ್ತುರ್ಬಿತಿ[8]ರ್ತ[8]ಡಿಗೆ ನೀರ್ ಮಸಗಲ್ ೨೫

---

[1] ವರಭವ (ಚ) [2] ನೇ (ಚ) [3] ನೆದ್ದು (ಗ) [4] ಯೊಯಿದಂ (ಗ) [5] ವಾ (ಚ)
[6] ಲ (ಗ) [7] ತುಳ್ಕಾಡೆ (ಗ) [8] ತ್ತ (ಚ)

ಉತ್ಪಲಮಾಲೆ

ವೇದವ ಕ[1]ದ್ದು[1] ತಂದ ಖಳನೆಲ್ಲಿದನೆಲ್ಲಿದನೆಂದು ವಾರ್ಧಿಯಂ
ಶೋಧಿಸಿ ತುಳ್ಕಿ ಕಂಡು ತಮನೊಳ್ ಮಿಗೆ ಘೂರ್ಮಿಸಿ ಬೊಬ್ಬಿಡುತ್ತೆ ನೀಂ
ಕಾದಿದಿರಾಗು ಹೋಗದಿರು ಹೋಗದಿರೆಂದೆನುತುಂ ವಿರೋಧಿಯಂ
ಮೂದಲಿಸುತ್ತುಮಾದಿತಿಮಿರಂ ತಮನಂ ಪಿಡಿದಿಕ್ಕಿ ಮೆಟ್ಟಿದಂ ೨೬

ವಚನ : ಅಂತು ಮೆಟ್ಟಲೊಡಂ ವೀರಾವೇಶನಾಗಿ

ಉತ್ಪಲಮಾಲೆ

ಅಕ್ಕಟ ತೆಪ್ಪವೆಲ್ಲಿ ತೆಗೆ ಕಂಡಲೆಯಂ ಪೊಸಗಾಣವೆಲ್ಲಿ ಹೋ
ಸಿಕ್ಕಿತು ಕೊಳಿಯಿಂದಿಱಿಯಿ ಕಂಡಲೆಯಂ ಬಿಡು ಸೂಸು ಬೇಗದಿಂ
ಸೊಕ್ಕಿನ ಕೂಟಿ ಹೋ ಚಿಲುಕು ತಾ ಚಿಲುಕಿಂ ತಿವಿ ಮೀನು ಬಂದು ಮೇ
ಲಿಕ್ಕಿತು ನೋಡೆನುತ್ತೆ ಕೂ[2]ಬು[2]ಬಿಟ್ಟ[3]ನು[3] ರಕ್ಕಸ ಸಿಂಹನಾದದಿಂ ೨೭

ವಚನ : ಎಂದೊಡೆಮುಱಿದು ಗರ್ಜಿಸಿ ಯುದ್ಧಕಾಸನ್ನನಾಗಿ ಭುಜಾಸ್ಫಾಲನಂಗೆಯ್ವುದುಂ ಮಹಾಮತ್ಸ್ಯಂ ಮೇಲ್ವಾಯ್ದು ಹೆಂಗಳ್ಳ ಹೋಗದಿರೆಂದು ವಾಲದಂಡದಿಂದೆ ಪೊಯ್ವುದುಂ ಮುಂಗಯ್ಯ ದಂಡೆಯಿಂ ಕಳೆದು ರಕ್ಕಸಂ [4]ಮೇಲಿಕ್ಕಿ[4] ಪೊಯ್ವುದುಂ

ಕಂದ : ಘುಡುಘುಡಿಸಿ ಹಗೆಯ ಕಲ್ಲೆ[5]ದೆ[5]
ವೊಡೆವಂತಿರೆ ಪೊಯ್ದು ವಾಲದಂಡದೆ ಮತ್ತಂ
ಬಿಡದೆತ್ತಿ ಹೊಯ್ದು ಕೆಸಱಿಒಳ್
ಕೆಡೆಮೆಟ್ಟಿದನಮನು ತಮನನದ್ಭುತ ತಿಮಿರಂ ೨೮

ವಚನ : ಅಂತು ರಕ್ಕಸನ ತನು ಸಿಕ್ಕನೆ ಸೀಳ್ವಂತೆ ಪೊಯ್ದೊರಸಿ ಕೊಂದು ವೇದಮಾತೃಕೆಯಂ ತಂದು ಮುನ್ನಿನಂತೆ ಮತ್ಸ್ಯರೂಪಮ[6]ನು[6]ೞಿದು ವಿಶ್ವರೂಪನಾಗಿ ಕ್ಷೀರಾಬ್ಧಿಗೈದಿ ಬ್ರಹ್ಮಾದಿಗಳಂ ಕರಸೆ

ಕಂದ : ಎನ್ನಂ ಸೆಱೆಯಿಂ ಬಿಡಿಸಿದೆ
ಬನ್ನಂಬಡೆದುಳಿದೆನೆಂದು ಹರಿಚರಣಕ್ಕಂ
ಬಿನ್ನಪಗೈಯುತ್ತಂ ಶ್ರುತಿ
ಕನ್ನಿಕೆ ಮಾಧವನ ಹರ್ಷದಿಂ ನುತಿಯಿಸಿದಳ್ ೨೯

---

[1] ಳ್ದು (ಚ) [2] ಬಿ (ಚ) [3] ನಂ (ಕ) [4] ಮೈಯಿಕ್ಕಿ (ಗ) [5] ರ್ದೆ (ಕ)
[6] ನ (ಚ)

ವಚನ : ಅಂತು ವೇದಾಂಗನೆ ಸಂತಸಂಬಟ್ಟು ಹರಿಯ ಚರಣಾರವಿಂದಮಂ ಶಿರದಿನಾಂತು ಎನ್ನಂ ಬಿಡಿಸಿದೆ ದೇವಾ ಪುರಾಣಪುರುಷೋತ್ತಮಾ ಎಂದು ಶಾಸ್ತ್ರವಾಚಿಯಿಂ ಸಹಸ್ರ ನಾಮದಿಂ ಪೊಗಟ್ದು ಬಣ್ಣಿಸಲ್ ಬ್ರಹ್ಮದೇವರಂ ಕರೆದಾ ಶ್ರುತಿಯಂ ಕೈವರ್ತಿಸಿ ಕುಡುವುದುಂ

ಕಂದ : ದೇವದುಂದುಭಿಯ ರವದಿಂ
ದಾ ವಿಬುಧಾನೀಕ ಹರಿಯ ಚರಣದ್ವಯದೊಳ್
ಪೂವಿನ ಮಱೆಯಂ ಕಱೆಯಲ್
ಭೂವಲಯಂ ಮೆಚ್ಚಿ ಹೆಚ್ಚಿತತಿಸಂತಸದಿಂ ೩೦

ವಚನ : ಅಂತು ತಮನೆಂಬ ಅಜ್ಞಾನಮಂ ಮುಱಿಯಿಟ್ಟು ಶ್ರುತಿಕ[1]ನ್ಯ[1]ಕೆಯೆಂಬ ಜ್ಞಾನ ಸ್ವರೂಪಮಪ್ಪ ಮಂತ್ರಮಾತೆಯಂ ಕೈವರ್ತಿಸಿ ಕುಡುವುದುಂ

ಮತ್ತೇಭವಿಕ್ರೀಡಿತ

ಅರವಿಂದೋದ್ಭವನುಂ ಬಲಾಂತಕನುಮಾ ಲೋಕೇಶ ದಿಕ್ಪಾಲರುಂ
ಸುರಸಂದೋಹ ಮುನೀಂದ್ರರೈದೆ ನಲಿದತ್ಯಾನಂದದಿಂ ನೋಡಿ ಮಾ
ವರ ಪಾದಾಂಬುಜಯುಗ್ಮದೊಳ್ ಮಣಿದು ನಮ್ಮಂ ಸಂತತಂ ರಕ್ಷಿಪಾ
ಕರುಣೋದ್ಯೋಗದೆ ಬಾಳುಗೆಂದು ಪೊಗಟ್ದರ್ ಸಂತೋಷದಿಂ ವಿಷ್ಣುವಂ ೩೧

ಕಂದ : ಬಂದೆಱಗಿದ ಮನುಮುನಿಸುರ
ವೃಂದವ ದಿಕ್ಪಾಲರಷ್ಟವಸುಗಳನಾ ದೇ
ವೇಂದ್ರ ಮೊದಲಾದರಂ ಮುದ
ದಿಂದಂ ಬೀಳ್ಕೊಟ್ಟನಸುರಮರ್ದನನೊಲವಿಂ ೩೨

ಮಹಾಸ್ರಗ್ಧರೆ

ಹರಿಯಂ ಬೀಳ್ಕೊಂಡು ಸಂತೋಷದೆ ಮನುಮುನಿಗಳ್ ಬ್ರಹ್ಮನಿಂದ್ರಾದಿ ದೇವರ್
ಭರದಿಂದಂ ರಾಗ[2]ದಿಂದಂ ಮಿ[2]ಗೆ ನಿ[3]ಜ[3]ಪುರಮಂ ಪೊಕ್ಕ[4]ರುಲ್ಲಾಸ[4] ಸೂಸು
ತ್ತಿರಲಿತ್ತಂ ವಿಷ್ಣು ಪಂಕೇರುಹದಳನಯನಂ ರಕ್ಷೆಯೊಳ್ ಸರ್ವಸೌಖ್ಯೋ
ತ್ಕರದಿಂ ಕ್ಷೀರಾಬ್ಧಿಯೊಳ್ಪೊಪ್ಪಿದನಹಿಶಯನಂ ಭಕ್ತವಾರಾಶಿಚಂದ್ರಂ ೩೩

---

[1] ನ್ನಿ (ಗ) [2] ಮಿ (ಗ) [3] ಜರ (ಗ) [4] ರು ಸಂತೋಷಂ (ಗ)

ಮತ್ತೇಭವಿಕ್ರೀಡಿತ

ಧರಣೀ ಸೌಖ್ಯಕರಂ ಗದಾಯುಧಧರಂ ಶ್ರೀಶಾರ್ಙ್ಗಚಕ್ರೋಧರಂ
ವರಪೀತಾಂಬರ[1]ದಿವ್ಯಕೌ[1]ಸ್ತುಭಧರಂ ಲಕ್ಷ್ಮೀ[2]ವ[2]ರಂ ಭೂಧರಂ
ಸುರಸಂಪೋಹ ಪುರಂದರೋನ್ನತಪರಂ [3]ಸೌಖ್ಯಾ[3]ಕರಂ ನಿರ್ಮಲಂ
ಪರಮಾನಂದಕರಂ ಜಗತ್ತ್ರಕರನುಂ ರಕ್ಷಿಕ್ಕೆ ನಾರಾಯಣಂ ೩೪

ಗದ್ಯ: ಇದು ವೃಂದಾರಕವೃಂದ ಪರಿಮಣಿಖಚಿತ ಮಕುಟರಂಜಿತ ಶ್ರೀಮದಾದಿನಾರಾಯಣ ಶ್ರೀಚರಣಸರಸೀರುಹ ಮಕರಂದಷಟ್ಚರಣಸಲ್ಲಲಿತ ಮಲ್ಲರಸಾಂಕ ವಿರಚಿತಮಪ್ಪ ದಶಾವತಾರಚರಿತ್ರ ಮಹಾಪ್ರಬಂಧದೊಳ್ ಕ್ಷೀರಾಬ್ಧಿ ವರ್ಣನ ಹರಿಯೋಲಗ ನಾರದಾದಿಮುನೀಂದ್ರರ ಗಮನ ಮತ್ಸ್ಯಾವತಾರ ತಮಾಸುರವಿಜಯ ಸಮಸ್ತ ಸುರಸಂತೋಷಂ **ದ್ವಿತೀಯಾಶ್ವಾಸಂ**

---

[1] ಕಾ (ಗ) [2] ಧ (ಗ ಚ) [3] ಶೋಭಾ (ಚ)

ತೃತೀಯಾಶ್ವಾಸಂ

ಕಂದ : ಶ್ರೀ ಲಕ್ಷ್ಮೀಕಾಂತಂ ಘನ
ನೀಲಾಂಗಂ ನಾರದಾದಿಮುನಿನುತಪಾತ್ರಂ
ಮೂಲೋಕರಕ್ಷ ಭಕ್ತರ
ಲೀಲೆ ಮಿಗಲ್ ಪೊರೆವುದಾದಿನಾರಾಯಣನೇ ೧

ಓರಂತವನ್ಯುತಸ್ಥಿತವಿ
ಸ್ತಾರಂ ನೆನಹಿಂಪೆ ತನ್ನವರ ರಕ್ಷಿಸುವಂ
ಚಾರುಗತಿಯೆನಿಸ ಕೂರ್ಮನ
ತಾರಂ ರಕ್ಷಿಸುಗೆ ಶರಣಗೋತ್ರೋನ್ನತಿಯಂ ೨

ಭೂವನಿತೆಯಿಟ್ಟ ಮಕುಟಾ
ಗ್ರಾವಾಸದ ರತ್ನದಂತೆ ಹೇಮಾದ್ರಿಯ ಮೇ
ಲಾವದಿನಂ ಸೊಗಸಿಂದನು
ರಾವತಿಯೊಪ್ಪಿದುದು ಸಕಲಸುಖದಾಗಾರಂ ೩

ಪರಳೆಲ್ಲಂ ಚಿಂತಾಮಣಿ
ತರುವೆಲ್ಲಂ ಕಲ್ಪಭೂಜ ಜಲವೆಲ್ಲಂ[1] ಸಿ
ದ್ಧರಸಂ ಪಶುಕುಲವೆಲ್ಲಂ
ಸುರಭಿ ಶಿಲಾನಿಕರವೆಲ್ಲ ಪರುಷವೆನಿಕ್ಕುಂ ೪

ಅಂತೆಸೆವ ಪಟ್ಟಣದೆ ಸುರ
ಕಾಂತಂ ಸುಖಸಂಕಥಾವಿನೋದದಿನಿರಲೋ
ರಂತೊಂದು ದಿನದೆ ಸೀಮಾ
ಪ್ರಾಂತದೊಳುಬ್ಬೆದ್ದು ಹುಯ್ಯಲಾದುದವೋಘಂ ೫

ಎಲ್ಲಿಯದಬ್ಬ[2]ರವೆನುತ
ಲ್ಲಲ್ಲಿಗೆ ಪಟುಭಟರು ಪರಿದು ಸುರರಾಜನ ಬಳಿ
ಗೆಲ್ಲರು ಬಂದೇಳು ಧರಾ
ವಲ್ಲಭ ವೃತ್ರಕನ ಧಾಳಿ ಬರುತಿದೆಯೆಂದರ್ ೬

---

[1] ಲ್ಲಾ (ಗ), [2] ರಜ (ಗ)

ವಚನ : ಎಂದು ಗಜಬಜಂ ಮಸಗಿ ಕಾಲಾಳು ಕೈದುಗೊಂಡು ಗಜಂ ಜಿ೩ಂಜೆಯೊತ್ತು ತುರಗಂ ಪಕ್ಕರವಿಕ್ಕಿ ರಥವಾಳಂಗೊಂಡು ಮಸಗುವುದಂ ನಾರದಂ ಕಂಡು ಎಲೆ ಸುರನಾಥ ಬಱಿಯ ಮಾತಿನಲ್ಲಿ ಪಱಿವ ಹುಯ್ಯಲಲ್ಲ ಇದು ವೃತ್ರಾಸುರನ ಥಟ್ಟು ಬಱಿದೆ ನಿವೃತ್ತಿಯಾಗದು ಅವನ ಚಾರಿತ್ರಮುಂ ಕೇಳೆಂದಿಂತೆಂದಂ

ಕಂದ : ಭಾಳಲೋಚನದ ಗವಸಣಿ
ಕಾಳನ ಕೈತವದ ದುರ್ಗ ಭಯದ ಕೊಠಾರಂ
ಕೋಳಾಹಳದಾಗರ ಜಯ
ತೊಳದ ವಃಠ ಕಾಳಿಕೇಯಪುರವೆಸೆದಿರ್ಕುಂ ೭

ಆ ಪುರವನಾಳುವಂ ಜಯ
ಚಾಪಂ ರಿಪುರೌದ್ರರೂಪನಿಳೆಪರಿತಾಪಂ
ಕಾಪಥ ಪಾಪ ಕಲಾಪಂ
ಭೂಪಂ ವೃ[1]ತ್ರಾ[1]ಸುರೇಶ[2]ನಧಿಕ[2]ಪ್ರತಾಪಂ ೮

ಆ ಸುರಸುಖದಲ್ಲಿರುತ
ತ್ರ್ಯಾಸುರದಿಂ ಕಮಲಭವನ ಕುರಿತು ತಪೋ ವಿ
ನ್ಯಾಸದೆ ಮೆಚ್ಚಿಸಲಾ ಲೋ
ಕೇಶಂ ನಿಜರೂಪ ತೋಱಿದಂ [3]ರಕ್ಕಸ[3]ಗಂ ೯

ಮೆಚ್ಚಿದೆನು ಬೇಡು ಮುನಿಪತಿ
ಯೊಚ್ಚತ ವರವೀವೆನೆಂದು ನುಡಿದಬ್ಜಜಗಂ
ಕುಚ್ಚಿತನೊಯ್ಯನೆ ನುಡಿ[4]ದನ
ದ[4]ಚ್ಚಿಗವುಂ ಲೋಕಬಾ[5]ಧಕ[5]ತ್ವದ ವರಮುಂ ೧೦

ಓರಂತೆ ಎ[6]ನಗೆ[6] ಗಿರಿಯಾ
[7]ಕಾರದ[7] ಪಕ್ಷಮುನೆ ಕೊಟ್ಟು ದೇವಾದಿಗ[8]ಳಂ[8]
[9]ಬಾರಿ[9]ಸುವ ಬಲುಹನೆನ್ನೊಳ
ಗೋರಂತಿರೆ ಪಾಲಿಸೆಂದು ಪದಕೆಱಗಿರ್ದಂ ೧೧

---

1 ತ್ರಾ (ಚ) 2 ರಿಸಿವ (ಗ) ನೆನಿಪ (ಚ) 3 ರಾಕ್ಷಸ (ಚ) 4 ದಂಅ (ಚ) 5 ವಿತ (ಕ) 6 ನ್ನ (ಗ) 7 ತರತೆ (ಗ) ಕಾರಕೆ (ಚ) 8 ಳವಿ (ಚ) 9 ಚಾರಿ (ಚ)

ಚಂಪಕಮಾಲೆ

ಶಿವ ಶಿವ ರಕ್ಕಸಂ ಗಡ ಮುಗುಟ್ಟಿದಱಿತೂಳ್ ಬಲುಬೆಟ್ಟದಂತೆ ಪ
ಕ್ಷವ ನೆಱೆ[1]ಕೊಟ್ಟೊಡೀಗ ಜಗ[1]ಕಚ್ಚಿಗವಾಗದೆ ನಿನ್ನ ಬಾೞ್ಗುಂ
ತವೆ ಪುಸಿಯಾದುವೆಂದೆನೆ ದಧೀಚಿಯ ಬೆನ್ನೆಲುವಿಂದ [2]ಬಪ್ರ್ಪ[2]ದೆಂ
ದು ವನ[3]ಜ[3]ನಂಪ್ರಿಯೊಳ್ ಕೆಡೆದು ಬಂದು ಜಗಂಗಳ ಬಾಧೆಮಾಡುವಂ ೧೨

ಕಂದ : ಇದಕೆಂತುಟೆನಲು ಕೀರ್ತ್ಯಾ
ಸ್ಪದನೆನಿಸುವನಾ ದಧೀಚಿ ವಿದ್ವದ್ಬಲ ಸಂ
ಪದದಿಂ ಬೇಡಲ್ಕೀವಂ
ಸದಮಲದ[4]ಸ್ಥಿಯನೆ[4]ನುತ್ತೆ ಮುನಿಪತಿ ನುಡಿದಂ ೧೩

ವಚನ : ಅಂತೆಗೆಯ್ವೆವೆಂದು ನಾರ[5]ದಂ ಸುರನಾಥನೊಡನೆ[5] ನೀರದಪಥದಿಂದವನೀತಳಕ್ಕವ ತರಿಸಿ ವಿದ್ವಾಂಸರೂಪದಿಂ ದಧೀಚಿಯಂ ಕಂಡು

ಕಂದ : ವಿಜಯೀಭವ ವಿಜಯೀಭವ
ಸುಜನಜನೋತ್ತಮ ದರಿದ್ರವಿದ್ರಾವಣ ಸೂ
ರಿಜನ ಸುರಧೇನು ಕೀರ್ತಿ
ವ್ರಜ ಭಾಪುರೆ ಎಂದು ಕೀರ್ತಿಸಿದರಾಕ್ಷಣದಿಂ ೧೪

ವಚನ : ಎಂದು ಕೀರ್ತಿಸುವುದುಂ ದಧೀಚಿ ವಿದ್ವಾಂಸಾಲಾಪೇಕ್ಷಣಂಗೈದು ಏನಾರ್ಥ ಮೆನೆ ನಿಚ್ಚಟ [6]ಚಾ[6]ಗಿಯಪ್ಪಡೆ ಬೇಡಿ[7]ದುದಂ[7] ಕೊಟ್ಟು ಕೀರ್ತಿವಡೆಯೆನಲಂತೆ ಗೈವೆನೆಂಬುದುಂ

ಕಂದ : ಕೋಡದೆ ಕೊಂಕದೆ ಕೊಡುವಡೆ
ನೀಡೀಗಲೆ ನಿನ್ನ ಬೆನ್ನಿನಸ್ಥಿಯುಮಂ ತಡ
ಮಾಡದೆ ತಾ ಎನುತಿ[8]ರ್ದರ್[8]
ಬೇಡುವ[9]ರುಗಳಲ್ಲಿ[9] ಗುಣಮನಱಿಸ[10]ಲ್ಕೊಳವೇ[10] ೧೫

ವಚನ : ಎಂದೊಡೆ ಕೊಟ್ಟೆಂ ನೀವಾರೆಂದು ಕೇಳೆ ಇಂದ್ರ ನಾರದರ್ ನಿಜಮಂ ತೋಱಿ ವೃತ್ರಾಸುರ ವೃತ್ತಾಂತಮಂ ಪೇೞೆ ಜಗದ್ಧಿತಾರ್ಥಮ್ಮೆಸೆ ಕೊಟ್ಟೆಂ ನೀವು ಗೋಸ್ವರೂಪ ದಿಂದೆನ್ನಂಗಮಂ ಲೇಹನಂಗೈದು ಕೊಂಡೊಯ್ಯುದೆಂದು ಪೇೞಲದಕೊಡಂಬಟ್ಟು ಗೋಸ್ವರೂಪದಿಂ ಕಜ್ಜಮುಂ ನಿಮಿರ್ಚಿದ ದಧೀಚಿಗಮುರತ್ನಮಂ ಕೊಟ್ಟು ಗೋಮುಖಕ್ಕೆ ದೋಷಾಪ[11]ನಾದನುಂ[11] ನಿಲಿಸಿ ಪುರಮಂ ಪೊಕ್ಕು ಐರಾವತಾರೂಢನಾಗಿ [12]ಭೇರಿ[12]ಯಂ ಹೊಡೆಯಿಸೆ

---

1 ಕೋಟಿಜನ (ಗ) 2 ಪಟ್ಟು (ಗ) ಪ್ಪು (ಚ) 3 ಜಭನ (ಗ) 4 ಸ್ತುಯೆ (ಗ) 5 ಜಸನಾರದ ಸಹಾ (ಚ) 6 ತ್ಯಾ (ಚ) 7 ತಂ (ಚ) 8 ರ್ದಂ (ಗ) 9 ನರರಲ್ಲಿ (ಚ) 10 ಲ್ಸಂಟೇ (ಗ ಚ) 11 ಮಾನಮುಂ (ಗ) 12 ರಣಭೇರಿ (ಗ)

ಕಂದ : ಬಂದು [1]ಚ[1]ತುರಂಗ[2]ಬಲದೊಳ್[2]
ನಿಂದು ಸುರಾಧೀ[3]ಶ[3] ಸಮರಭೇರಿಯ [4]ಪೊಯ್ಸಲ್[4]
ಸಿಂಧು ತುಳ್ಕಾಡಿತಾ ಉಡು
ವೃಂದಂ ನೆಲಕುದುರಿತದ್ಭುತಂ ಸೂಸುವಿನಂ ೧೬

ಸುರ[5]ಪಂ[5] ಕೋಪದೆ ವೃ[6]ತ್ರಾ[6]
ಸುರನಂ ನೆಱೆಗೆಲ್ವೆನೆಂದು ಕರೆಸಿದ ಗಂಧ
ರ್ವರ ಗರುಡರ ಸಿದ್ಧರ ಯ
ಕ್ಷರ ದಿಕ್ಪಾಲಕರನಾಹವಕ್ಕಾಕ್ಷಣದಿಂ ೧೭

ವಚನ : ಅಂತು ಕರೆಸಿ ಮುನ್ನಂ ಸನ್ನಾಹಮಾಗಿರ್ದ ಚಾತುರಂಗಬಲಂಗೂಡಿ ಪುರದ್ವಾರಮಂ ಪೊಱಮಟ್ಟು ಪರಿದುಬರ್ಪ ವೃತ್ರಾಸುರನ ಬಲದೊಳ್ ಬೆರಸಿ ಗೀರ್ವಾಣಬಲಂ ಪರಿದು ಪಳಂಚಿ

ಉತ್ಪಲಮಾಲೆ

ಮೀಱಿದವಾ ಗಜಾಳಿ ರಥನೂಕಿದವಬ್ಬರಮುಬ್ಬಿ [7]ಸೂಠಿ[7]ಯ
ಲ್ಲೇಱಿದುವಾ ತುರಂಗಭಟರೊಬ್ಬುಳಿಮುಂ ಕವಿದೆಚ್ಚು ಭೀತಿಯಂ
ಬೀಱಿ ಸುರಾಳಿ ಚೂಣಿಯೊಳೆ ಹೊಕ್ಕಿಱಿದರ್ ಕಡಿಖಂಡಮಾಡುತಂ
.... ೧೮

ಕಂದ : ಇದು ಚಿತ್ರ[8]ಮಿಂದ್ರ[8]ನೆಮ್ಮೊಳ
ಗಿದಿರಾಗಿರ್ದಪನೆನುತ್ತೆ ವೃತ್ರಾಸುರನ
ತ್ಯಧಿಕತರ ಬಲನು ಕೋಪಾ
ಸ್ಪದನಮರರ ಬಲವ ಹ[9]ಳಚ[9]ಲನುವಾಗಿರ್ದಂ ೧೯

ಮತ್ತೇಭವಿಕ್ರೀಡಿತ

ಕಲಿವೃತ್ರಾಸುರನುನ್ನತಪ್ರಬಲಸತ್ವಂ ರಾಕ್ಷಸಾನೀಕದೊಳ್
ಬಲನಿಂ ಶೂರ್ಪಕನಿಂ ಗಜಾಸುರ[10]ನಿ[10]ಕುಂಭಂ ಕುಂಭನಿಂ ಜಂಭನಿಂ
ಬಲದೊಳ್ ಸೊರ್ಕಿನೊಳುರ್ಕಿನೊಳ್ ಮಹಿಮೆಯೊಳ್ ತೀವ್ರತ್ವದೊಳ್ ಬೀರದೊಳ್
ಸಲೆಸಂದಾ ದನುಜೇಂದ್ರನಾಹವದೊಳಾ ಮಾಱಾಂಡ್ಡಿನೋಳ್ ಕಾದಿದಂ ೨೦

---

1 ದು (ಗ) 2 ಚಯದೊಳು (ಗ) 3 ಶ್ವರ (ಗ) 4 ಪೊಡಯಿಸಿ (ಚ) 5 ಪತಿ (ಗ) 6 ತ್ರಾ (ಚ) 7 ಸುಟ್ಟೆ (ಚ) 8 ತ್ರಂ ಸುರಪಂ (ಗ) ತ್ರಸುರಪ (ಚ) 9 ಳಂಚ (ಗ) 10 ನಿಂ (ಗ)

ಚಂಪಕಮಾಲೆ

ತನತನಗೋಡಿ ಬಪ್ಪ ಬಲಮಂ ನೆಱೆಕಾಣುತೆ [1]ರಾಕ್ಷ[1]ಸೇಶ್ವರಂ
ಬಿನುಗು ಸುರಾಳಿ ಹೊಕ್ಕಿಱಿದು ಹೋದುದೆ ಲೇಸೆನುತೆದ್ದು ಯುದ್ಧದ
ಲ್ಲೆನಗಿದಿರಾಗಿ ಜೀವಸಹ ಪೋಪವನಾವನೆನುತ್ತೆ ಕೋಪದಿಂ
ಧನುವ ತುಡುಂಕಿ ಬೀಱಿಲೆಸುತುಂ ಮುಱಿಯಿಕ್ಕಿದನಾ ಸುರಾಳಿಯಂ ೨೧

ವಚನ : ಅಂತು ಕವಿದೊತ್ತುವ ಸುರಬಲಮಂ ಹರೆಗಡಿದು ಮದದಂತಿಯ ಸಮೂಹಮಂ ಕೆದ[2]ಱಿ[2] ರಥವ್ರಾತಮಂ ವಿರಥಂಮಾಡಿ ಹಯನಿಕರಮಂ ಭಯರಸದೊಳದ್ದಿ ಅರಸು ಪೌಜಿನೊಳ್ ಬೆರಸಲೊಡಂ

ಕಂದ : ಮುಱಿದುಬಹ ಸೇನೆಗಭಯದ
ಸೆಱಗಂ ಬೀಸುತ್ತೆ ಗಜವ ತೂಳಿಸಿ ಸರಳಂ
ಕಱೆವುತೆ ವೃತ್ರಾಸುರನಂ
[3]ತ[3]ಱುಬಿದನಮರೇಂದ್ರ ವೀರವಾರಿಧಿಚಂದ್ರಂ ೨೨

ಹೊಕ್ಕು ಬಳಿಸಲಿಸಿ ಸುರಪತಿ
ಎಕ್ಕತುಳದೆ ವಜ್ರದಿಂದೆ ವೃತ್ರಾಸುರನಂ
ಮುಕ್ಕಡಿಯ ಮಾಡಿ ದನುಜರ
[4]ಸಿ[4]ಕ್ಕನೆ ಸೀಳಿದನು ಗೆಲಿದನಸುರರ ಬಲಮಂ ೨೩

ವಚನ : ಅಂತು ವಿಜಯೋತ್ಸವಂ ನೆಗೞೆ ಕೂಟಕ್ಕೈತಂದ ಗಿರಿಗಳೆಱಂಕೆಗಳನಿಕ್ಕಡಿಗೈದು ಸಮುದ್ರಾಂತಕ್ಕಂ ಕೆಡಹಿ ವಿಜಯಲಕ್ಷ್ಮಿಯನಪ್ಪುಕೆಯ್ದು ಬೀಸುವ ಬಿಜ್ಜ[5]ಣದ[5] ಸೂಸುವ ಚಾಮರದ ಎತ್ತಿದ ಪಲ್ಲವ ಸತ್ತಿಗೆಯ ಮೊೞಗುವ ಮಂಗಳವಾದ್ಯದ ನಡುವೆ

ಕಂದ : ಗರುಡರ ಗಂಧರ್ವರ ಯ
ಕ್ಷರ ಸಿದ್ಧರ ಸು[6]ರರ[6] ಕಿನ್ನ[6]ರರ[6] ಖೇಚರರ
ಪ್ಸರರ ಭುಜಂಗರ ಮಧ್ಯ[7]ದೆ[7]
ಬರುತಿರ್ದನಮರೇಂದ್ರಗಾದುದತಿವಿಷ್ಣೈಕರಂ ೨೪

ವಚನ : ಅದೆಂತೆಂದೊಡೆ

ಕಂದ : ವೃತ್ರಾಸುರನ ಸುರೇಂದ್ರಂ
ಕತ್ತರಿಸಿ ಬಿಸಾಟು ಜಯಸಮುದ್ರದೊಳೋಲಾ
ಡುತ್ತತಿಲೀಲೆಯೊಳ್ಕೈತರು
ತರ್ತಂಯೊಳಾ ಸೂರ್ಯವೀಧಿಯೊಳ್ ಬರುತಿರ್ದಂ ೨೫

---

1 ರಕ್ಕ (ಚ) 2 ಱಿ ಬಡಿದು (ಗ) 3 ಕ (ಚ) 4 ಸೊ (ಗ) 5 ಣೆಗರ (ಗ) 6 ರ (ಗ) 7 ದೊಳಂ (ಗ)

ವಚನ : ಅಂತು ಮಹೋತ್ಸವ[1]ದೊಳಮರೇಂದ್ರಂ[1] ಬರುತಿರಲತ್ತಲ್ ದೂರ್ವಾಸಮುನೀಶ್ವರಂ ಸುರೇಶ್ವರನವರೋಧಾನುಗಮನನಾಗಲದಂ ಊರ್ವಶಿ ಕಂಡು ಸತ್ಕಾರಂಗೈದು ಮಂದಾರದಲರಮಾಲೆಯುಂ ಪಾದಾರ್ಪಣಂಗೈಯೆ ಮುನಿಮುಖ್ಯನದಂ ನೋಡಿ [2]ಲೋಕಹಿತಾರ್ಥಮಂ[2] ಮಾಡಿ ಬರುತಿರ್ದಪನಮರೇಂದ್ರನಾಥಂಗಾಶೀರ್ವಾದಮುಖದಿಂ ಕೊಡುವೆನೆಂದು ಮನಸಂದು

ಕಂದ : ಕೊರ್ವಿದತಿ ಹರಿಸದಿಂದಂ
ದೂರ್ವಾಸಮುನೀಶ ಮಂದರದ ಮಾಲೆಯನಾ
ಗೀರ್ವಾಣಪತಿಗೆ ಕುಡಲೆಂ
ದುರ್ವಿದ [3]ಕಾರುಣ್ಯ[3]ದಿಂದಲನುವಾಗಿರ್ದಂ ೨೬

ಇರಲಾ ಮುನಿಪನನೀತಂ
ಪರಿಕಿಸದತ್ಯಧಿಕತರ ಮದಾಂಧತೆಯಿಂದಂ
ಧುರವಿಜಯ ಗರ್ವದಿಂದತಿ
ಸಿರಿಯಿಂದಂ ಪೋಗೆ ಕಾಣುತ್ತೈದಿದ ಮುನಿಪಂ ೨೭

ಶಾರ್ದೂಲವಿಕ್ರೀಡಿತ

ಆ ದೂರ್ವಾಸಮುನೀಶ್ವರಂ ಹರಿಸದಿಂ ಮಂದಾರಪೂಮಾಲೆಯುಂ
ವೇದೋ[4]ಕ್ತಂ[4] ವಿಧಿಯಿಂದಲೀವೆನೆನುತಂ ಸಂತೋಸದಿಂ[5]ದೈದ[5]ಲಾ
ಭೂದೇವಾಗ್ರಣಿಯುಂ ವಿಚಾರಿಸದದೆಂತಾಂ ನೋಡದಾನಂದ[6]ದಾ[6]
ಮೋದಜ್ಞಾನದಲಿಂದ್ರ ಪೋಗುತಿರಲಾ ಸಂತಾಪದಿಂ ಕೋಪದಿಂ ೨೮

ಕಂದ : ಆ ಮುನಿಪತಿ ಮಂದಾರದ
ಪೂಮಾಲೆಯನಂದು ದಂತಿಯಿಂ[7]ದೈದುವ ಸು[7]
ತ್ರಾಮಂಗೀಯಲ್ ಧರಿಯಿಸ
ದಾ ಮದಗಜಮಸ್ತಕಾಗ್ರದಲ್ಲಿರಿಸಲೊಡಂ ೨೯

ಚಂಪಕಮಾಲೆ

ಸುರಪತಿಯೆಂಬ ಪೆರ್ಮೆ ದೆಸೆಯಾಣ್ಮರನಾಳ್ದಪೆನೆಂಬ ಹಮ್ಮು ದು
ರ್ಧರ [8]ದಿತಿಜೇಂದ್ರನಂ[8] ಜಯಿಸಿದಾಳ್ತನ ಮುಪ್ಪುರಿಗೊಂಡು ಗರ್ವದಿಂ
ವರಮುನಿನಾಥನಿತ್ತಲರಮಾಲೆಯನಂಕುಶದಿಂದಲಾಂತು ಸಿಂ
ಧುರದ ಶಿರಸ್ಸಿನೊಳ್ ಬಿಸುಟ ಕೇಡಿಗೆ ಬುದ್ಧಿ ಸಹಾಯಮಲ್ಲವೇ ೩೦

---

1 ದಿಂ (ಗ) 2 ಜಗದ್ಧಿತಾರ್ಥಮಂ (ಗ ಚ) 3 ಕಡುಕರುಣ (ಗ) 4 ಕ್ತ(ಗ)
5 ದಿರ (ಗ) 6 ದಿಂ (ಕ) 7 ದಯಿಡುವಸೂ (ಗ ಚ) 8 ದೈತ್ಯನ (ಗ)

ಕಂದ : ಕರಿ ಕರದಿಂದಂ ಪೂವಿನ
ಸರಮಂ ಪಿಡಿದೆತ್ತಿ ಧರೆಯೊಳೀಡಾಡೆ ಮುನೀ
ಶ್ವರನತಿಕೋಪದೊಳಿಂದ್ರನ
ಸಿರಿಯಬ್ಧಿಯೊಳಡಗಲೆಂದು ಶಾಪಮನಿತ್ತಂ ೩೧

ಸ್ರಗ್ಧರೆ
ಆ ಶಾಪಂ ಬಂದೊಡಿಂದ್ರಂಗತಿಘನತರದಾರಿದ್ರಮಾಗಲ್ಕೆಯಾ ದೂ
ರ್ವಾಸಂಗಿಂದ್ರಾ[1]ಣಿ[1] ದಂಡಪ್ರಣುತನಿಯುತದಿಂ ಸ್ತೋತ್ರಮಂ ಮಾಡೆ ತಾಂ ಸಂ
ತೋಷಂಬೆತ್ತಾಗ ಪೌಲೋಮಿಯನತಿಕೃಪೆಯಿಂದೆತ್ತಿ [2]ಸಂತೈಸಿ ಮತ್ತಂ
ನೀ[2] ಸಂದೇಹಂಗಳಂ ಮಾಡದೆ ನಿಜವರಮಂ ಬೇಡುಬೇಡೆಂದನಾಗಳ್ ೩೨

ಕಂದ : ಬೇಡುವೆನು ಮನದಭೀಷ್ಟವ
ನೀಡಾಗದೆ ಕುಡುವುದೆನ್ನ ಪತಿಯೈಶ್ವರ್ಯಂ
ಕೂಡಿತ್ತಬ್ಧಿಯನದ ಕೃಪೆ
ಮಾಡೆನೆ ದೂರ್ವಾಸನನುರಸತಿಗಿಂತೆಂದಂ ೩೩

ಹರಿ ಹರ ಸರಸಿಜಭವರುಂ
ಸುರರಸುರರ್ ಭರದೆ ಮಂದರಾದ್ರಿಯ ತಂದಾ
ಶರಧಿ[3]ಯ[3] ಮಥಿ[4]ಸಲ್[4] ನಿಮ್ಮಯ
ಸಿರಿಯೆಲ್ಲಂ ಬರ್ಪುದೆಂದು ಮುನಿಪತಿ ನುಡಿದಂ ೩೪

ಎನೆ ಹೃಹಸಾದವೆನುತುಂ
ವನಜಾನನೆ ಬೀಳುಕೊಂಡಳಿತ್ತಲ್ ಮುನಿಪಂ
ಘನ[5]ತರ ತಪಸ್ಸಿಗೈದಲ್[5]
ವನಧಿಯ ಮಂದರದೆ ಮಥಿಸಲುದ್ಯೋಗಿಸಿದರ್ ೩೫

ವಚನ : ಅದೆಂತೆಂದೊಡೆ ತ್ರಿದಶೇಶ್ವರಂ ತನ್ನೈಶ್ವರ್ಯಮೆಲ್ಲಂ ಭಿನ್ನಮಾಗಿ ಪೋದುದಂ ತಾಪಸನಿಂ ಬಂದ ಶಾಪಂಗಳಂ ಹರಿ ಹರ ವಿರಂಚಿಗಳ್ಗೆ [6]ಬಿನ್ನಹಂಗೈಯಲಾ[6] ಮೂವರುಂ ಮನದೆಗೊಂಡು ದೇವಾಸುರರಂ ಕರೆಯಿಸಲವರ್ ತಂತಮ್ಮ ಬಲಮೆಲ್ಲಮಂ ಕೂಡಿಕೊಂಡು

---

[1] ದಿ (ಗ) [2] ನೀವೆನ್ನೀ (ಚ) [3] ಯನು (ಗ) [4] ಸೆ (ಗ ಚ) [5] ತಪೋವನವನೆಯ್ದಲ್ (ಚ) [6] ವಿರಚಿಸಿ ಬಿನ್ನಹಂ ಮಾಡಲಾ (ಚ)

ಕಂದ : ಮದನಹರ ವಿಷ್ಣು [1]ವಿಧಿಗಳ್[1]
ಮೊದಲಾಗಿರ್ದಮರರಸುರರೆಲ್ಲರ್ ನೆಜ[2]ದಂ
ದುದಧಿಯ[2] ಮಥಿಸಲ್ಕೆನುತುಂ
ಮುದದಿಂದಂ ಬಂದು ಮಂದರಾದ್ರಿಯ ತಂದರ್ ೩೬

ವಚನ : ಆ ಮಂದರಾದ್ರಿಯಂ ಸುತ್ತಿ ತೆಗೆವ ಪಾಶಕ್ಕೆ ವಾಸುಗಿಯುಂ ತರಲೆಂದು ದಿಗ್ಗಜದ ಕೋಡಿನ ಮೇಲೆಯುಂ ಕುಲಪರ್ವತದ ಪೆಗಲಲ್ಲಿಯುಂ ಭೂಮಿಯಂನಿರಿಸಿ ಮಹಾಶೇಷನಂ ತಂದು

ಕಂದ : ಮಂದರಗಿರಿಯಂ ತಂದಹಿ
ವೃಂದೇಶನ ಸುತ್ತಿ ತೆಗೆವ ನೇಣಂ ಮಾ[3]ಡು
ತ್ತಂ[3]ದಮರಾಸುರರೆ[4]ಲ್ಲರ್[4]
ಸಿಂಧುವ ಮಥಿಯಿಸಲು ಹರಿಯನುಜ್ಞೆಯ ಪಡೆದರ್ ೩೭

ವಚನ : ಅಂತು ಹರಿಯನುಜ್ಞೆಯಂ ಶಿರಸಾವಹಿಸಿಕೊಂಡು ಸುರಾಸುರರ್ ಕಡೆಯುವುದ [5]ಕುಜ್ಜುಗಿಸಿ[5] ದೇವೇಂದ್ರಕುಮಾರನಾದ ವಾಲಿಯುಂ ಸೂರ್ಯಪುತ್ರನಾದ ಸುಗ್ರೀವನಂ ಕರೆಯಿಸಿ [6]ಮೊದಲೊಳ್ ಜನ್ಮಿಸಿದ[6] ವಸ್ತು ನಿಮ್ಮದೆಂಮೊಡಂಬಡಿಕೆಯಿತ್ತು ಕಡೆವುದಂ ಗಿರಿ ಕೆಸಱೊಳ್ ಕೀಲಿಸೆ

ಮಹಾಸ್ರಗ್ಧರೆ
ಗಿರಿಯುಂ ಪಾತಳಲೋಕಕ್ಕೆ ಇಳಿವುತಿರಲಾ ಬ್ರಹ್ಮರುದ್ರಾದಿ ದೇವಾ
ಸುರರೆಲ್ಲಂ ಬಂದು ಚಿಂತಾತುರವೆ ಮುಖರಸಗುಂದಿ ಬೆಳ್ಪಾಗಿ ವಿಘ್ನಂ
ದೊರೆಕೊಂಡತ್ತೀ ಮಹಾವಕ್ರತೆಯನು ಬಿಡಿಸಲ್ ಬಲ್ಲರಿನ್ನಾರೆಲೇ ಶ್ರೀ
ಹರಿಯೇ ನೀಂ ಕಾಯೆನುತ್ತಂ ಕರುಣವ ನುಡಿಯಲ್ ವಿಷ್ಣುವಿಂತೆಂದನಾಗಳ್ ೩೮

ಕಂದ : ನೀವೆಲ್ಲ ಬಂದು ಪೇಟಲಿ
ದಾವುದು ಘನಕಾರ್ಯವಿದನು ಸಂತೋಷದೊಳಿ
ನ್ನಾವು ಗಿರಿಯಿಳಿಯದಂತಿರೆ
ಭಾವದೆ ನಿಲಿಸುವೆವೆನುತ್ತಲಭಯುವನಿತ್ತಂ ೩೯

ಕರುಣಾಳ್ಗಳರಸನಭ[7]ಯವ[7]
ಸುರರೆಲ್ಲರ್ಗಿತ್ತು ಮಂದರಾದ್ರಿಯನತ್ಯಾ
ದರದಿಂದುದ್ಧರಿಸುವೆನೆನು
ತ್ತುರವಣಿಸುತ್ತಾದಿ ಕೂರ್ಮರೂಪಂ ತಾಳ್ದಂ ೪೦

---

[1] ಬ್ರಹ್ಮರ್ (ಗ ಚ) [2] ದಿರ್ದುದಧಿಯನು (ಗ) [3] ಡಿದರಂ (ಗ ಚ) [4] ಲ್ಲಂ (ಚ)
[5] ಕ್ಕೆ ಪ್ರಾರಂಭವಂ ಮಾಡಿ (ಚ) [6] ಪ್ರಥಮದಲ್ಲಿ ಹುಟ್ಟಿದ (ಚ) [7] ಯಂ (ಗ)

ಶ್ರೀಕೂರ್ಮರೂಪಿನಿಂದಾ
ಶ್ರೀಕಾಂತಂ ಕ್ಷೀರವಾ[1]ರಿಧಿಯೊಳಂ[1] ನೆಱೆಪೊ
ಕ್ಕಾ ಕುಧರಮನೆತ್ತಲ್ಕಾ
ಲೋಕೇಶಂ ಶಂಭು ಸುರಪರೇಂ ಮೆಚ್ಚಿದರೋ ೪೧

ಕೂರ್ಮಾವತಾರದಿಂದಂ
ಶ್ರೀಮಾನಿನಿಯರಸ ಮಂದರಾದ್ರಿಯ ಬೆನ್ನಿಂ
ಪ್ರೇಮದಿನಾಂತಂ ನಲವಿಂ
ಹೇಮೋದರ ರುದ್ರಮುಖ್ಯರುಘೆಯೆನಲಾಗಳ್ ೪೨

ಚಂಪಕಮಾಲೆ

ಶರನಿಧಿಯೊಳ್ ವಿರಾಜಿಸುವ ಕೂರ್ಮವತಾರದೆ ನಿಂದು ಕೂಡೆ ಭೂ
ಧರಮನೆ ಬೆನ್ನೊಳಾಂತುದಧಿಯುಂ ಮಥಿಸೆಂದಸುರಾಳಿ ವಾಲಿಗಂ
ಹರಿ ಬೆಸನೀಯೆ ಮುಂಬರಿದು ನೀಂ ಪಿಡಿ ತಾಂ ಪಿಡಿಯೆಂದು ವಾರ್ಧಿ ಭೋ
ಗರೆಯಲು ಸಾಹಸೋನ್ನತಿಕೆಯಿಂ ಕಡೆದರ್ ನೆಱೆದಂಬುರಾಶಿಯಂ ೪೩

ಕಂದ : ತೆಗೆ ನೂಕು ಸಡಿಲಬಿಡದಿರ್
ಬಿಗಿ [2]ವಾಲಿಯ[2] ದೆಸೆಯೆ ತಿರುಗುತಿದೆ ಖೋ ಎನುತುಂ
ಮಿಗೆಪೊಕ್ಕು ಬಾಹುಬಲದಿಂ
ದಿಗಧೀಶರ್ ಮುಖ್ಯವಾಗಿ ಕಡೆಯುತ್ತಿರ್ದರ್ ೪೪

ವಚನ : ಅಂತಾಸ್ಫೋಟಿಸಿ ಕಡೆಯುವುದುಂ

ಕಂದ : ಸಿಂಧುವನು ಮಥಿಸಲಾಕ್ಷಣ
[3]ಇಂದು[3] ಮಹಾಲಕ್ಷ್ಮಿ ಜೇಷ್ಠೆ ತಾರಾ[4]ಸತಿಯುಂ[4]
ವೃಂದಾವನ ಧನ್ವಂತರಿ
ಯೊಂದಾಗಿಯೆ ಜನಿಸೆ ಮತ್ತೆ ಕಡೆಯುತ್ತಿರ್ದರ್ ೪೫

ಮಥಿಸುತಿರಲಮೃತಮೈರಾ
ವತಮುಚ್ಚೈಶ್ರವವು ಕಲ್ಪಕುಜ ಚಿಂತಾಮಣಿ
ನುತ ಕಾಮಧೇನುವಿಂದ್ರಂ
ಗತಿಶಯದೈಶ್ವರ್ಯವೆಲ್ಲ ಜನಿಸಿದವಾಗಳ್ ೪೬

---

1 ಧಿಯೊಳ್ (ಗ) 2 ಶರಧಿಯ (ಗ) 3 ಚಂದ್ರ (ಚ) 4 ದೇವಿಯು (ಚ)

ಕಡಲಂ ಮಂದರದಿಂದಂ
ಕಡೆಯುತ್ತಿರಲಮರರಸುರರಶ್ರಮದಿಂದಂ
ಬಿಡದಮೃತಮುದಿಸಲಾಕ್ಷಣ
ಕಡುಸೊಕ್ಕಿ[1]ದ[1] ಮದ್ಯದುದ್ಭವಂ ತಾನಾಗಲ್ ೪೭

ಉತ್ಪಲಮಾಲೆ

ಆ ಸುರೆ ಪುಟ್ಟಲಿನ್ನಖಿಲವಸ್ತುಚಯಂಗಳು ಬರ್ಪುವೆಂದು ದೇ
ವಾಸುರರೊಲ್ದು ಮಂದರದೊಳಿಂಗಡಲಂ [2]ಕಡೆಯುತ್ತ[2]ಮಿರ್ಪಿನಂ
ವಾಸುಗಿ ನೊಂದು ಘೋರತರ ದುಷ್ಟ ಮಹಾವಿಷಮನ್ನುಗುಳ್ದಿ[3]ನ[3]
ತ್ಯಾಸುರ ಕರ್ಮದಿಂ ಗರಳ [4]ತಾಂ ದಹಿಸುತ್ತಮೆಯಿರ್ದು[4]ದದ್ಭುತಂ ೪೮

ಕಂದ : ಅತಿಮಥನದಿಂದೆ ಕೇಡಹು
ದತಿಮಥನಂ ಪೊಲ್ಲಮೆಂಬ ನುಡಿಸಿದ್ಧಾಂತಂ
ಅತಿಮಥನದಿಂದೆ ವಿಷ ಬಂ
ದತಿಮಥನವ ಮಾಡುತಾಲುತಿದೆ ಸರ್ವೇಶಾ ೪೯

ವಚನ : ಅದು ಹೇಗೆಂದೊಡೆ

ಕಂದ : ಅತಿನೊಂದು ಶೇಷ ವಿಷಸಂ
ಗತ[5]ಮುಮನು[5]ಗುಱಿಲ್ಕೆ ಸುಡುತಲಿರ್ದುದು ಜಗಮಂ
ಅತಿಮಥನದಿಂದೆ ಕೇಡೆಂ
ಬಿತಱ ಪುರಾಣಗಳ ವಾಕ್ಯಮೇಂ ಪುಸಿಯಹುದೇ ೫೦

ವಚನ : ಅಂತೆಂದು ವಿಷಜ್ವಾಲೆ ಮಸಗಿ

ಮಹಾಸ್ರಗ್ಧರೆ

ಎಱಗಿತ್ತೊತ್ತಿತ್ತು ಪೊಯ್ದಿತ್ತಡಸಿ ತುಱುಬಿತುಬ್ಬಿತ್ತು ಮೆಟ್ಟಿತ್ತು ಸುಟ್ಟಿ
ತ್ತಱಿಯಟ್ಟಿತ್ತೆತ್ತಿ ಮುತ್ತಿತ್ತರಸಿತೊರಲಿಸಿತ್ತಾಲಿಸಿತ್ತಂಬಿಸಿತ್ತಾ
ಮಱಹಂ ಸೂಸಿತ್ತು ದೇವಾಸುರ ಮನುಮುನಿ ಲೋಕೇಶರಂ ಸುತ್ತಿ ಕಿಚ್ಚಂ
ಕಱಿಯಿತ್ತೇನೆಂಬೆ ಭೋಭೋರ್ಭುಗಿಲು ಸಿಮಿ ಸಿಮಿಧ್ವಾನದಿಂ ಕಾಲಕೂಟಂ ೫೧

ವಚನ : ಅಂತು ವಿಷಜ್ವಾಲೆ ಲೀಲೆಗೆಡಿಸೆ ಸುರಜಾಲಮೆಲ್ಲಂ ಮುಂದುಗೆಟ್ಟು

---

[1] ನ (ಚ) [2] ಮಥಿಸುತ್ತ (ಚ) [3] ರ (ಚ) [4] ದಹ್ಯಮ ಮಾಡುತಮಿರ್ದು (ಚ)
[5] ಮನ್ನು (ಗ)

ಕಂದ : ಹರನೆ ದಯಾಕರ ಗಿರಿಜಾ
ವರನೆ ಮಹೇಶ್ವರನೆ ತ್ರಿಪುರಹರನೆ ಸುಭಕ್ತೋ
ದ್ಧರನೆ ಸಲಹೆಂದು ಗಂಗಾ
ಧರನಂ ಮಱಿವೊಕ್ಕುದಖಿಲದೇವವ್ರಾತಂ ೫೨

ಮತ್ತೇಭವಿಕ್ರೀಡಿತ

ಹರಿ ಕೆಟ್ಟೋಡೆ ಕೃಶಾನು ಮುಂಗೆಡೆ [1]ಯಮಂ[1] ಬೆಂಬೀೞೆ ನೈರುತ್ಯನುಂ
ದೊರೆಗೆಟ್ಟಂಬುಧಿನಾ[2]ಥ[2] ಗುಂಪಡಗೆ ಲೋಕಪ್ರಾಣನಂಜಲ್ ಧನೇ
ಶ್ವರ ನ್ಬೆಯಂ ಮಱಿಯಲ್ ತ್ರಿಶೂಲಿ ಹೆದಱಿಲ್ ಬರ್ಪ ವಿಷಜ್ವಾಲೆಯಂ
ಕೊರಲೊಳ್ ತಾಳ್ದು ಸುರರ್ ನಿಶಾಚರರುಮಂ ನೀ ಕಾಯ್ದೆ ಗಂಗಾಧರಾ ೫೩

ಕಂದ : ಆ ವಿಷದುರಿಯಂ ಗರಳ
ಗ್ರೀವಂ ಪರಿಹರಿಸೆ ಮಂದರಾದ್ರಿಯನೆಂದಿನ
ಠಾವಿನೊಳಿರಿಸಿದರಹಿಸನ
ದೇವರ್ಕಳ್ ಕಳುಪಿ ತಿರುಗಿದರ್ ಸಂತಸದಿಂ ೫೪

ವಚನ : ಅಂತು ಗರಲಜ್ವಾಲೆಯಂ ಪರಿಹರಿಸಿ ಮಂದರಗಿರಿಯಂ ಎಂದಿನ ಠಾವಿ[3]ನೊಳಿರಿಸಿ[3] ಉರಗಾಧೀಶನಂ ಧರೆಯ ಕೆಳಗಿರಿಸಿ ಸಮಸ್ತ ಸುಪರ್ವರಂ ಕೃಪಾದೃಷ್ಟಿಯಿಂ ನೋಡಿ ಮೊನ್ನೆ ದಶಮಿ ಏಕಭುಕ್ತಂ ನಿನ್ನೆ ವಿಷಜ್ವಾಲೆಯಿಂ ಏಕಾದ[4]ಶಿಯುಪೋಷ್ಯಂ[4] ಇಂದ ಮೃತದಿಂ ದ್ವಾದಶಿ ಪಾರಣೆಯಾದುದೀ ಪುಣ್ಯತಿಥಿಯಿದು ನಿನಗರ್ಪಿತಮಿದು ನಮಗಂ ನಿಮಗಂ ಕ್ಷೀರೋದಕನ್ಯಾಯಮೆಂದಂಬುಜಾಕ್ಷಂ ಈಶ್ವರನಂ ಬೀೞ್ಕೊಡೆ ಪೋದನಿತ್ತಂ ಲಕ್ಷ್ಮೀಕಾಂತಂ ದೇವೇಂದ್ರನಂ ಕರೆಸಿ

ತ್ರಿಪದಿ : ತಾರಾದೇವಿಯರನು ವಾರಿಜಾಕ್ಷಂ ಕರೆಸಿ
ಕಾರುಣ್ಯದಿಂ [5]ವಾಲಿ ಸು[5]ಗ್ರೀವರ್ಗೊಲಿದಿತ್ತು
ಭೋರನೆಯವರ ಕಳುಹಿದಂ ೫೫

ಭುಜಂಗಪ್ರಯಾತ

ವನೇಜಾಕ್ಷ ಕಾರುಣ್ಯಸಿಂಧು ಪ್ರಸನ್ನಂ
ಘನಶ್ಯಾಮಲಂ ವಿಷ್ಣು ಸಂತೋಷದಿಂದಂ
ಮನಂಗೊಂಡು ದೇವೇಂದ್ರನಾನಂದದಿಂದಂ
ಘನಶ್ರೀಯನಿತ್ತಾತನಂ ಬೀಳುಗೊಟ್ಟಂ ೫೬

---

1 ಯಿ (ಗ) 2 ಥಂ (ಗ) 3 ನಲ್ಲಿರಿಸಿ (ಚ) 4 ಶಿವುಪವಾಸ್ಯಂ (ಚ) 5 ಸು (ಗ)

ಕಂದ : ಪವಿಯೈರಾವತಮುಚ್ಚೈ
ಶ್ರವಮಮೃತಂ ಕಲ್ಪವೃಕ್ಷ ಚಿಂತಾಮಣಿಯಂ
ನವ ಕಾಮಧೇನು ಮೊದಲಾ
ದುವನಿಂದ್ರಂಗಿತ್ತು ಕಳುಹಿದಂ ಮುರಮಥನಂ ೫೭

ಸುರ[1]ರಂ[1] ಪೂರ್ವಾಸುರ[1]ರಂ[1]
ಎರಡುತೆಱಂ ಮಾಡಿಯೊಂದೆ ಕರಗದೊ[2]ಳಗೆ[2] ತಾಂ
ಸುರೆಯಮೃತವ ಕೂಡಿಸಿ ಮಾ
ವರನೆಱವುತಿರ್ದನೇನು ವಿಶ್ವಾತ್ಮಕನೋ ೫೮

ವಚನ : ಅಂತೆಱವುತಿರಲೊರ್ವ ಪೂರ್ವಾಮರಂ ಮೆಯ್ಯಂ ಮಱಸಿ ದೇವಪಂಕ್ತಿಯೊಳ್ ನಿಲೆ ಚಂದ್ರಾದಿತ್ಯರ್ ಮುಂದರಧರಂಗೆ ತೋರ್ಪುದುಂ ಚಕ್ರಧರಂ ರಕ್ಕಸನನಿಕ್ಕಡಿ ಮಾಡಲಾ ತುಂಡೆರಡುಂ ರಾಹು ಕೇತುಗಳೆಂಬ ಹಾವಾಗಿ ಬಾಧಿಸುತ್ತಿರ್ದಪರದಱಿಂ

ಕಂದ : ಸುರವೈರಿಗಳಮೃತಾನ್ನದೆ
ಚಿರಕಾಲಂ ಬಾಳ್ವರೆಂದು ಪೇೞಲ್ಕಂದಿಂ
ಮಱೆಯಾದುದದು ನಿಮಿತ್ತಂ
ಪಿರಿದುಂ ಪಿಸುಣರ್ಗೆ ಬಾಧೆಯೇಂ ತಪ್ಪುಗುಮೇ ೫೯

ಚಂಪಕಮಾಲೆ

ಸುರರ ಸಮೂಹಮಂ ಕರೆಸಿ ಮಂದರ[3]ಧಾರಿ[3] ಸಮುದ್ರಶಾಯಿಯ
ತ್ಯುರುತರ [4]ಮೋದದಿಂ[4]ದಮೃತಮಿತ್ತು ಸುರರ್ಕಳಿಗಾಗ ಮುದ್ಯಮಂ
ಸುರಿಯಿಸಿ ಬೇಗದಿಂ ಕಳುಹಿದಂ ಕರುಣಾಳ್ಗಳ ದೇವನಿತ್ತಲುಂ
ಸಿರಿಯ ವಿವಾಹಮಾಗಲನುಗೈವುತಮಿರ್ದನತಿಪ್ರಮೋದದಿಂ ೬೦

ಉತ್ಪಲಮಾಲೆ

ಶ್ರೀ ಮಹಲಕ್ಷ್ಮಿಯಂ ವಿಮಲತಾಮರಸಾಕ್ಷಿಯ ಕೋಮಲಾಂಗಿಯಂ
ಸಾಮಜಯಾನೆಯಂ ಸಕಲಸಂಸ್ತುತೆಯಂ ಶತಪತ್ರಹಸ್ತೆಯಂ
ಪ್ರೇಮದೊಳೊಲ್ದು ವಿಷ್ಣುವತಿಸಂಪದದಿಂದೆ ವಿವಾಹವಾದ ನೀ
ಕಾಮಪಿತಂ ಮಹೋತ್ಸವದೊಳಂದುಱೆ ಭಕ್ತನಿಕಾಯವತ್ಸಲಂ ೬೧

---

[1] ಗರ್ಂ (ಚ) [2] ಳುಂ (ಗ) [3] ಧರ (ಗ) [4] ಪ್ರೇಮದಿಂ (ಗ ಚ)

ವಚನ : ಅಂತು ಶ್ರೀಮಹಾ[1]ಲಕ್ಷ್ಮಿಯಂ[1] ಸಂತೋಷದಿಂವೆ ವಿವಾಹವಾಗೆ ದೇವ ದುಂದುಭಿಗಳಂ ಮೊಳಗಿ ಹೂವಿನ ಮಳೆಯಂ ಕಱೆದು ಕಮಲಾಕ್ಷ[2]ನಾ[2]ನಂದದಿಂ ಸುಮನಸರ್ ಕೊಂಡಾಡುತಿರಲಾ ಪ್ರಸ್ತಾವದೊಳ್

ಕಂದ : [3]ಅಮೆಯರೂಪಿಂದಂ ತಾಂ[3]
ಶ್ರೀಮಾನಿನಿಯರಸನಖಿಲ ಸುರ[4]ಸಮಿತಿಗೆ ತ[4]
ತ್ಕಾಮಿತವನಿತ್ತು [5]ಪೊರೆದಂ[5]
ಪ್ರೇಮದೊಳಖಿಳೈಕತಾತನತಿವಿಖ್ಯಾತಂ ೬೧

ಮತ್ತೇಭವಿಕ್ರೀಡಿತ
ಧರಣೀಸೌಖ್ಯಕರಂ ಗದಾಯುಧಧರಂ ಶ್ರೀಶಾಙ್ಗ್ರಚಕ್ರೋಗ್ರಧರಂ
ವರಪೀತಾಂಬರ ದಿವ್ಯ ಕೌಸ್ತುಭಧರಂ ಲಕ್ಷ್ಮೀ[6]ವ[6]ರಂ ಭೂಧರಂ
ಸುರಸಂದೋಹ ಪುರಂದರೋನ್ನತಪರಂ ಸೌಖ್ಯಾಕರಂ ನಿರ್ಮಲಂ
ಪರಮಾನಂದಕರಂ ಜಗತ್ರಯಕರಮುಂ ರಕ್ಷಿಕ್ಕೆ ನಾರಾಯಣಂ ೬೨

ಗದ್ಯ: ಇದು ವೃಂದಾರಕವೃಂದ ಪರಿಮಣಿಖಚಿತಮಕುಟರಂಜಿತ ಶ್ರೀಮದಾದಿನಾರಾಯಣ ಶ್ರೀಚರಣ ಸರಸೀರುಹ ಮಕರಂದ ಷಟ್ಚರಣಸುಲ್ಲಲಿತ ಮಲ್ಲರಸಾಂಕ ವಿರಚಿತಮಪ್ಪ ದಶಾವತಾರ ಚರಿತದೊಳ್ ಅಮರಾವತೀ ವರ್ಣನೆ ವೃ[7]ತ್ರಾ[7]ಸುರ [8]ಚರಿತ[8] ದಧೀಚಿ ತ್ಯಾಗ ದೂರ್ವಾಸ ಶಾಪ ಅಮೃತಮಥನ ರಾಹು ಕೇತುಗಳ ಜನನ ಲಕ್ಷ್ಮೀಸ್ವಯಂವರ ವಿಷಪರಿಹರಣ ಏಕಾದಶೀ ಮಾಹಾತ್ಮ್ಯ [9]ಕೂ[9]ರ್ಮಾವತಾರ ಕಥಾಪ್ರಪಂಚಂ

ತೃತೀಯಾಶ್ವಾಸಂ

---

[1] ಲಕ್ಷ್ಮೀದೇವಿಯರಂ (ಚ) [2] ನಸಾ (ಚ) [3] ಕೂರ್ಮಾವತಾರದಿಂದಂ (ಗ ಚ)
[4] ರ ಸಮೂಹಕೆ (ಗ ಚ) [5] ಸಲಹಿದ (ಗ ಚ) [6] ಧ (ಚ) [7] ತ್ರಾ (ಚ) [8] ಚಾರಿತ್ರ (ಚ)
[9] ಮುಖ್ಯವಾದ ಕೂ (ಚ)

ಚತುರ್ಥಾಶ್ವಾಸಂ

ಕಂದ : ಶ್ರೀ ವಾಗ್ದೇವಿಯರಸ ಸಂ
ಸೇವಿತನಿಂದ್ರಾದಿ ವಂದಿತಾಂಘ್ರಿದ್ವಿ[1]ತ[1]ಯಂ
ಆವದಿನಂ ಭಜಕರುಮಂ
ಕಾವ್ರದು ಕೃಪೆಯಿಂದ[2]ಮಾ[2]ದಿನಾರಾಯಣನೇ ೧

ಸಾರತರ ವನಸಮೂಹವಿ
ಹಾರಂ ಕೋಡುಳ್ಳ ನಿಜಚರಿತ್ರಂ ಮು[3]ಕ್ತ್ಯಾ[3]
ಧಾರವೆನಿಪ್ಪ ವರಾಹವ
ತಾರಂ ಸದ್ಭಕ್ತಭವ [4]ತೃಣಚ್ಛೇ[4]ದಕರಂ ೨

ಮತ್ತೇಭವಿಕ್ರೀಡಿತ

ಮನೆಯೇ ಕ್ಷೀರಸಮುದ್ರ ಗೇಹಿನಿಯೆ ಲಕ್ಷ್ಮೀದೇವಿ ಸತ್ಪುತ್ರನೇ
ವನ[5]ಜಾತೋ[5]ದ್ಭವ ಮಾತುಳಂ ಶರಧಿ ಪೀಯೂಷಾಂಗನೇ [6]ಶ್ಯಾ[6]ಲಕಂ
ಸನಕಾದಿ ವ್ರತಿಸಂಕುಲಂ ಚರಣಸೇವಾಸಕ್ತರೆಂದೆಂಬಿನಂ
ಘನಸೌಭಾಗ್ಯದೊಳೊ[7]ಪ್ಪುವಂ[7] ಜಯಕರಂ ಸರ್ವಜ್ಞನಾರಾಯಣಂ ೩

ಕಂದ : ಸ್ಮರನಂ ಮುದ್ದಾಡಿಸುತುಂ
ಸಿರಿಯೊಳ್ ಸರಸಾನುಭಾವದಿಂ ನುಡಿ[8]ಯುತ್ತುಂ[8]
ಗರುಡನೊಳಾಲಾಪಿಸುತುಂ
ಸರಸಿ[9]ಜದಳನೇತ್ರ[9]ನಿರ್ದ ಸುಖಸಂಕಥದಿಂ ೪

ವಚನ : ಅಂತು ಸುಖಸಂಕಥಾವಿನೋದದಿಂದಿರಲ್ ಮುಂದೆ

ಚಂಪಕಮಾಲೆ

ತೆರೆ ಸುಟಿಯಿಂದೆ ಬುದ್ಬುದ[10]ಗಳಿಂ[10]ದೆ ಮಹಾಧ್ವನಿಯಿಂದೆ ಸೀಕರೋ
ತ್ಕರದ ಸಮೂಹದಿಂದೆಸೆವ ವಿಷ್ಣುನಿಕೇತನದಿಂದಮಾವಗಂ
ಪರಮಗಭೀರದಿಂದೆ ನವರತ್ನಚಯಂಗಳ ರಾಶಿಯಿಂದಮ
ತ್ಯುರುತರಸೌಖ್ಯದಿಂದೆಸೆವುತಿರ್ದುದು ದುಗ್ಧಸಮುದ್ರಮಾವಗಂ ೫

---

[1] ತಿ (ಗ) [2] ಮಾಲಾ (ಗ) [3] ತ್ತಾ (ಚ) [4] ತೃಣೋತ್ಸೇ (ಗ) [5] ಜೋ (ಗ)
[6] ಶಾ (ಚ) [7] ಪ್ಪಿದಂ (ಚ) [8] ಪ್ರತ್ತಂ (ಚ) [9] ರುಪಪಳಾಕ್ಷ (ಗ ಚ) [10] ದಿಂ (ಗ)

ವಚನ: ಅಂತೊಪ್ಪುವ ದುಗ್ಧವಾರ್ಧಿಯಿಂ ಮುಂತತಿಶಯಮಪ್ಪ ಶ್ವೇತದ್ವೀಪಮುಂಟದಱ ಖ್ಯಾತಿಯೆಂತೆಂದೊಡೆ

ಕಂದ : ಚಂದನ ಬೆಳ್ಪಿಂದಂ ಸುಧೆ
ಯಿಂದಂ ನವಮೌಕ್ತಿಕೋನ್ನತದ್ಯುತಿಯಿಂದಂ
ಸಂದ ಘನಕೀರ್ತಿ ಧವಳಿಮ
ದಿಂದಂ ರಾಜಿಪುದು ಶ್ವೇತದ್ವೀಪಪ್ರತಾಪಂ (?) ೬

ಆ ಶ್ವೇತದ್ವೀಪದಿನಾ
ಶ್ರೀಶನನತಿಭಕ್ತಿಯಿಂದ ಪೂಜಿಪ ಭರದಿಂ
ದಾ ಸನಕ ಸನಂದನರೊ
ಲ್ದೋಸರಿಸದೆ ಕ್ಷೀರವಾರ್ಧಿಗೈತರುತಿರ್ದರ್ ೭

ಚಂಪಕಮಾಲೆ

ಸನಕ ಸನಂದನರ್ ಕರುಣವಾರಿಧಿಗಂ ಕಮನೀಯಮೂರ್ತಿಗಂ
ಮನುಮುನಿವಂದ್ಯಗಂ ಪರಮಪಾವನಗಂ ಪರಮೇಷ್ಠಿಯೈಯ್ಯಗಂ
ವನಜದಳಾಕ್ಷಗಂ ಗರುಡವಾಹನಗಂ ಶತಮನ್ಯುಪೂಜ್ಯಗಂ
ಅನುದಿನ ವಾರಿಯಿಂ ನಡೆದು ಬರ್ಪರು [1]ದುಗ್ಧ[1]ಸಮುದ್ರಕಾವಗಂ ೮

ವಚನ: ಅಂತು ಬಂದು ವೈಷ್ಣವೋತ್ತಮರ್ ವಿಷ್ಣುದ್ವಾರೋಪಕಂಠದಿಂದೊಳಗೆ ಪುಗುವುದುಂ

ಕಂದ : ಸ್ಫುರಿಸುವ ಮಣಿವಾಗಿಲ ಪುದಿ
ಯೆರಡಱಕೂಳೆ ವಿಲಾಸದಿಂದೆ ಮನುಮುನಿ ಬ್ರಹ್ಮಾ
ದ್ಯರ ಕಡ್ಡಿಗೆಣಿಸದಿರ್ಪರ್
ನಿರುತಂ ಜಯ ವಿಜಯರೆಂಬ ವೇತ್ರಧರರ್ಕಳ್ ೯

ಇರಲಾ ಸನಕ ಸನಂದನ
ರುರವಣಿಸುತೆ ಬಾಗಿಲೊಳಗೆ ಬರುತಿರೆ ಜಯ ವಿಜ
ಯೆರು ಸಮಯವಿಲ್ಲೆನುತ್ತ
ತ್ಯುರುದಂಡಮನಡ್ಡಲಿಕ್ಕಿ ನಿಲಿಸಿದರಾಗಳ್ ೧೦

---

1 ಕ್ಷೀರ (ಗ ಚ)

ವಚನ: ಅಂತಿರ್ಪ ಜಯ ವಿಜಯರೊಳಪುಗುವ ಸನಕ ಸನಂದನರಂ ಕಂಡು

ಕಂದ: ಎಷ್ಟೊಂದು ಸಲಿಗೆಯಿನಿತಂ
ಕೊಟ್ಟವರಾರ್ ನಿಮಗೆ ನಮ್ಮ ಕೇಳದೆ ಪೋಪಾ
ಘಟ್ಟ[1]ಗ[1]ತನವೇಕೆನುತುಂ
ತೊಟ್ಟನೆ ತಡೆಯಿಟ್ಟರವರ ಕೈ[2]ಯಂ[2] ಕೋಲಿಂ ೧೧

ವಚನ: ಅಂತು ತಡೆಯಿಟ್ಟು ದೇವಂಗೇಕಾಂತಸಮಯಂ ಪೋಗಲ್ಪೇೞೆಯಿಲ್ಲವೆಂದು ಸನಕ ಸನಂದನರಂ ಜಯ ವಿಜಯರ್ ತಡೆಯಲವರ್ ಕುಪಿತರಾಗಿ

ಕಂದ: ಘುಡುಘುಡಿಸಿ ಹರಿಯ ಸೇವೆಗೆ
ತಡೆದಿರಿ ನೀವೆಮ್ಮ ನಿಮಗೆ ಹರಿಯೋಲಗ ಬ
ಲ್ತಡೆಯಾಗಿ ರಾಕ್ಷಸತ್ವದೆ
ಪೊಡವಿಯೊಳುದಯಿಸುವವೆಂದು ಶಾಪವನಿತ್ತರ್ ೧೨

ವಚನ: ಅಂತು ಶಾಪಮನೀಯಲೊಡಂ ನಡನಡುಗಿ ಕಾಲ್ಗೆಱಗಿ ವಿಶಾಪಮೆಂದು ಕರುಣಿಸಿಮೆನೆ ಹರಿ[3]ಯೊಳ್[3] ಸ್ನೇ[4]ಹ[4]ದಿಂದೇೞುಜನ್ಮಮಲ್ಲದೊಡೆ ವೈರದಿಂ ಮೂಱು ಜನ್ಮಂಬರಂ ಬಂದು ಕೂಡಿರೆಂದವರತ್ತಲ್ ಪೋ[5]ದರ್ ಇ[5]ತ್ತ ಜಯ ವಿಜಯರಬ್ಜನಾಭನ ಸಮೀಪಕ್ಕೆ ಬಂದು ಮುಕುಳಿತಾಂಜಲಿಯಾಗಿ ತತ್ಪ್ರಪಂಚಮಂ ಬಿನ್ನೈಪುದುಂ [6]ಶ್ರೀಕಾಂತನಿಂ[6]ತೆಂದಂ

ಕಂದ: ಕೊರಳ ಬಲುಹಱಿಯದಕ್ಕಟ
ಗಿರಿಯಂ ಪೊತ್ತಪರೆ ಸುರಪಮುಖ್ಯಾಮರರಂ
ಪರಿಕಿಸದ ವೀರವೈಷ್ಣವ
ಪರಮಾರಾಧ್ಯರನು ತಡೆನರೇ ಮರುಳರಿರಾ ೧೩

ಧರಣಿ ಗಗನಕ್ಕೆ ಪಾ[7]ಱಲ್[7]
ಶರಧಿಯ [8]ಕಲ್ಲೋಲದಲ್ಲಿ ತೇಲಲ್ ಗಿರಿಗಳ್[8]
ಭರದಿಂ [9]ತಾರೆಗಳುದುರಲ್[9]
ಹರಿಶರಣರ ಮಾತು ತಪ್ಪುವುದೆ ಮರು[10]ಳ[10]ರಿರಾ ೧೪

---

[1] ಯ (ಚ) [2] ಯೞ (ಚ) [3] ಯಲ್ಲಿ (ಚ) [4] ಹಿತ (ಚ) [5] ದರಿವರಿ (ಚ) [6] ಲಕ್ಷ್ಮೀಕಾಂತ ಕೇಳ್ದಿಂ (ಗ ಚ) [7] ಱು (ಗ) [8] ಬತ್ತೆರೆಗಳಲ್ಲಿ ಗಿರಿಗಳ್ ತೇಲಲ್ (ಚ) [9] ತಾರಕಿಯುದುರಲ್ (ಚ) [10] ಳ್ಗ (ಗ ಚ)

ಕಂದ : ಆ ಮುನಿಗಳಿತ್ತ ಶಾಪವ
ನಾ ಮನ್ನಿಸಲಳವೆ ನನಗೆ ತೀರದೆನುತ್ತುಂ
ತಾಮರಸಾಕ್ಷಂ ಕಳುಪೆ ಸ
ನಾಮರ್ ಮುದವುಡುಗಿ ಬಾಗಿದರ್ ನಿಜಶಿರಮಂ ೧೫

ನೊಂದು ನಿಜಶಿರವ ಬಾಗೆ ಮು
ಕುಂದಂ ಜಯ ವಿಜಯರಾನನವ ನೋಡುತ್ತಿಂ
ತೆಂದನವರಿತ್ತ ಶಾಪವ
ಹಿಂದುಟಿಸಲ್ ಬಾರದನುಭವಿಸಬೇಕೆಂದಂ ೧೬

ವಚನ : ಎಂದು ನುಡಿದ ಹ[1]ರಿ[1]ನಿರೂಪಕ್ಕೆಯವರ್ ಹಸಾದವೆಂದು

ಕಂದ : ಹೇಮುನವರತ್ನವೆಂಬಾ
ಗ್ರಾಮದೊಳಂ ಪುಟ್ಟ ನೀವು ಹೋಗಿಯೆನುತ್ತುಂ
ಕಾಮಪಿತ ಕಳುಪಲಾಕ್ಷಣ
ವಾ ಮುನಿಗಳ್ ಕೊಟ್ಟ ಶಾಪ ಮುಟ್ಟಿತ್ತವರಂ ೧೭

ಸ್ರಗ್ಧರೆ
ಬಂದಾ ಶಾಪಂಗಳಾ[2]ಗಳ್[2] ಜಯ ವಿಜಯರುಮಂ [3]ಮು[3]ಟ್ಟಿತಿರ್ಪಲ್ಲಿ ಸೂರ್ಯಂ
ಚಂದ್ರಂ[4]ಗಂ[4] ರಾಹು ಬರ್ಪಂದದಲಹಿಗಳಿಗಂ ವೈನತೇಯಂ ಕರಂ ಬ
ರ್ಪಂದಂ ಮಾತಂಗಕಂ ಕೇ[5]ಸರಿ ಪರಿತಹ[5]ವೊಲ್ ವ್ಯಾಘ್ರನೇಣಂಗಳಂ ಪೊ
ಯ್ವಂದಂ ತಾನಾಗಲಾ ದ್ವಾರಕರನಲೆದುದತ್ಯುಗ್ರದಿಂ ರಾಕ್ಷಸತ್ವಂ ೧೮

ವಚನ : ಅಂತು ಬಂದ ರಾಕ್ಷಸತ್ವದಿಂ ಮುಂದುಗಾಣದೆ ಹೇಮನವರತ್ನಮೆಂಬ ಗ್ರಾಮ[6]ದಲ್ಲಿ[6] ಹಿರಣ್ಯಾ[7]ಕ[7] ಹಿರಣ್ಯಾಕ್ಷರೆಂಬ ನಾಮದಿಂ ಪುಟ್ಟ ಭೂಮಿಯನಂಡಲೆಯುತ್ತುಂ ಹಿಂದಣ ಜನ್ಮಮಂ ಮಱೆದು ಮುಂದೆ ರಾಕ್ಷಸತ್ವಮೇ ತಮಗೆ ಸುಖಮಾಗಿ ಹರಿಸ್ಮರಣೆಯಂ ಬಿಟ್ಟು ಸರಸಿಜೋದ್ಭವನಂ ಕೂರ್ತು ಕುಹಕೋಪಾಯಂಗಳಿಂ ಮಹಾತಪಂಗೈದು ದುರ್ಮತಿಗಳಪ್ಪ ದನುಜರ್ [8]ವಿರಂಚಿಯಂ[8] ಮೆಚ್ಚಿಸಿ ವರಮಂ ಬೇಡುತಿರ್ದರದೆಂತೆಂದೊಡೆ

ಕಂದ : ಇರುಳುಂ ಪಗಲುಂ ಸಾಯದ
ಸುರನರ[9]ರಾ ಸುಪ್ರ[9]ತಾಪದಿಂ ಕೈದುಗಳಿಂ
ಹರಿಯೆಜರುಗಳಿಂ ಸಾಯದ
ವರಮಂ ಕುಡು ಎಂದು ಮತ್ತೆ ಬೇಡುತ್ತಿರ್ದರ್ ೧೯

---

[1] ರಿಯ (ಚ) [2] ಗಂ (ಚ) [3] ಪು (ಚ) [4] ಗಾ (ಚ) [5] ಸರಿತಹ (ಕ) [6] ದೊಳ್ (ಚ) [7] ಕಶಿಪು (ಗ) [8] ಬ್ರಹ್ಮದೇವರಂ (ಚ) [9] ರುಗಳ ಪ್ರ (ಚ)

ಭೂಮಿಯೊಳಚಲದೆ ಸಾಯದ
ವ್ಯೋಮಂ ಜಲ ವಹ್ನಿ ವಾಯು[1]ವಿಂ[1] ಸಾಯದ [2]ತ
ತ್ಕಾ[2]ಮಾರಿಯಿಂದೆ ಸಾಯದ
ಈ ಮೂವರವಿತ್ತು ಸಲಹಬೇಕೆನುತಿರ್ದರ್ ೨೦

ಎನೆ ಕೇಳ್ದಾ [3]ಬೊಮ್ಮಂ[3] ದು
ರ್ಜನ[4]ರಿವರೆಂದ[4]ಱಿಯದವರು ಬೇಡಿದ ವರಮಂ
ಮನವೊಲ್ದು ಕೊಟ್ಟು [5]ನೀಂ[5] ಪೋ
ಗೆನುತವರಂ ಕಳುಹಿದಂ ವಿಧಾತ್ರನುಮಿತ್ತಲ್ ೨೧

ಪಗಲೊಡೆಯನ [6]ಪರಿದ[6]ಟ್ಟುವ
[7]ದಿಗಿಭಗಳಂ[7] ಪಿಡಿದು ತರ್ಪ ನಾಗಾಶಿಗಳಂ
ಮೊಗೆವ ಸುರಸತಿಯರಂ ತಹ
ಜಗತಿಯನಂಡಲೆವ ಬುದ್ಧಿಯಂ ಕೈಕೊಂಡರ್ ೨೨

ಬೊಮ್ಮಾದ್ಯರ ದೇಶಗಳೊಳ್
ತಮ್ಮಯ ಠಾಣೆಗಳನಿಟ್ಟರುಳಿದವರೆ[8]ಲ್ಲರ್[8]
ಕಮ್ಮತಿಗರಾದರಾಣೆಗ
ಳಮ್ಮಾಱುವರಿಲ್ಲಮವರ ಸುರ ನರ ಜನರೊಳ್ ೨೩

ವಚನ : ಇಂತು ರಾಕ್ಷಸೇಶ್ವರರ್ ಸಿರಿಯಿಂ ಬಲದಿಂ ಬಲು[9]ಹಿಂ [9]ಬಾಱುತ್ತೆ

ಕಂದ : ಸಿರಿಯುಂಟು ಶಂಖ ಚಕ್ರಂ
ವರ ಕೌಸ್ತುಭಮುಂಟು ಪೋಗಿ ಭರದಿಂ ಲಕ್ಷ್ಮೀ
ವರನಂ ಪಿಡಿದರೆ ನಮಗೀ
ಸುರ ನರರೊಳ್ ಸಾಟಿಯಿಲ್ಲವೆಂದರ್ ದನುಜರ್ ೨೪

ವಚನ : ಎಂದು ಪ್ರಸ್ಥಾನಭೇರಿಯಂ ಪೊಡೆಯಿಸೆ

ಚಂಪಕಮಾಲೆ

ಜಲಸಿಧಿಯೇಱಿಱಿತರೊಳ್ ಘುಱುಘುಱುಧ್ವನಿ ಘೂರ್ಮಿಸೆ ಮೇರು ಮಂದರಂ
ಗಳ ಗುಹೆಯೊಳ್ ಪ್ರತಿಧ್ವನಿ ಪಳಂಚೆ ರಸಾತಲ ಸತ್ಯಲೋಕಮುಂ
ಬಳಯಿಸೆ ಹೇಮಕೋಣಹತಿಯಿಂ ರಣಭೇರಿಯ ಸನ್ನೆ ಧಂ ಧಱಿಂ
ಧಱಿರೆನೆಯಾ ಸ್ವನಂ ಪರಿದು ತುಂಬಿತಜಾಂಡಕಟಾಹಕೋಟಿಯುಂ ೨೫

---

[1] ವಿಂದಂ (ಚ) [2] ಕಾ (ಚ) [3] ಬ್ರಹ್ಮನಿವರ್ (ಚ) [4] ರೆಂಬುದನ (ಚ) [5] ನೀನು (ಚ) [6] ನ (ಗ) ಹರಿಯು (ಚ) [7] ದಿಗುದಂತಿಯ (ಚ) [8] ಲ್ಲಂ (ಚ) [9] ಹಿಂ ಬಲ್ಪಿಂ (ಗ)

ವಚನ : ಅಂತು ಸಮರಭೇರಿಯಂ ಪೊಡೆಯಿಸಿ ಚತುರಂಗಬಲಂ ಬೆರಸು ನಡೆಯುವುದುಂ

ಮತ್ತೇಭವಿಕ್ರೀಡಿತ

ಧರೆಯೆಲ್ಲಂ ಕುಸಿಯಿತ್ತೆನಲ್ ಶರಧಿಯೇಱುಂ ಕೂಡೆ ತುಳ್ಕಾಡೆ ಮಂ
ದರ ಮೈನಾಕ ಸುಮೇರುಶೈಲ ನಿಖಿಲಾಶಾಭೇದಮಿಲ್ಲಾದುದಾ
ಹರಿದಶ್ವಂ ಶಶಿ ತಾರಕಾನಿವಹಮೆಲ್ಲಂ ತೂರ್ಯಮೆಂಬಂತಿರ
ಲ್ಕುರುಮೈತ್ಯೇಂದ್ರ ಹಿರಣ್ಯಕಾಕ್ಷರ ಬಲಂ ತೀವಿತ್ತು ಮೂಲೋಕಮಂ ೨೬

ವಚನ : ಅಂತು ಅಸಂಖ್ಯಾತ ಬಲಂ ಬೆರಸು[1] ಹಿರಣ್ಯಕ ಹಿರಣ್ಯಾಕ್ಷರ್ ಕೂಡಿಕೊಂಡು ಶರಧಿತಲ್ಪನಂ ಭರದಿಂ ಪಿಡಿತಪ್ಪೆವೆಂದು ಬರ್ಪುದಂ ವನಜಾಕ್ಷಂ ಮನದೊಳಱಿತು ಈರ್ವರುಂ ಕೂಡಿ ಬಂದ ಪರಿವಾರಮುಂ ಬೇಱೆ[3]ವೇಱೆ[3] ಕೊಲ[2]ವೇಟ್ಕುಮೆಂ[2]ದು ಅವರ ಸೇನೆಯಂ ತಿರುಗಿಸಲ್ಕುಪಾಯಂ ಕಂಡು ಮುರಹರಂ ಋಷಿರೂಪಂ ಕೈಕೊಂಡು ರಾಕ್ಷಸರ್ [3]ಬರುತಿರ್ದ[3] ಪಥಮೊಳ್ ತಪಂಗೈಯುತಿರ್ದ ಸಮಯದಲ್ಲಿ

ಚಂಪಕಮಾಲೆ

ಅಸುರ ಹಿರಣ್ಯಕಂ ಕನಕಲೋಚನರೆಂಬನುಜಾಗ್ರಜರ್ ಸುರ
ದ್ವಿಷರತಿವಿಕ್ರಮರ್ ಪ್ರಬಲಸತ್ವರು ದೀರ್ಘಶರೀರಿಗಳ್ ಚತು
ರ್ದಶಭುವನಂಗಳಂ ಹಿಟ್ಟಿದು ರತ್ನಪುರಕ್ಕಿರದೈದಿ ಬೇಗದಿಂ
ಬಿಸರುಹನಾಭನಂ ಪಿಡಿವೆನೆಂದು ಖಳರ್ ಬರುತಿರ್ದರುರ್ಕಿನಿಂ ೨೭

ಕಂದ : ಬರುತಿರಲಾ ಪಥದೊಳ್ ಶ್ರೀ
ಹರಿ ತಾಪಸವೇಷದಿಂದೆ ತಪವಂ ಮಾಡು[4][ತೆ][4]
ಹಿರಣ್ಯಕ ಹಿರಣ್ಯಾಕ್ಷರ್
ವರಮುನಿಪದಯುಗಕೆ ನಮಿಸಲವರ್ಗಿಂತೆಂದಂ ೨೮

ಎ[5]ತ್ತಲ್ ಬಹುಸೈನ್ಯಮಿದ[5]ಸು
ರೋತ್ತಮರಧಿಕಪ್ರತಾಪಿಗಳ್ ನೀವೆನೆ ಪುರು
ಷೋತ್ತಮನ ಪಿಡಿದು[6]ತರ್ಪು[6]
ದ್ಯುಕ್ತಂ ಪೋದಪೆವು ಮುನಿಪ ಚಿತ್ತೈಸೆಂದರ್ ೨೯

---

[1] ಸಿ (ಙ) [2] ಲ್ವೇಳ್ಕೆಂ (ಶ) [3] ಬರ್ಪ (ಚ) [4] ತ್ತಿರೆ (ಕ ಙ)
[5] ತ್ತಲಿ ಬಹಳ ಬಲವ (ಚ) [6] ತಹುದು (ಚ)

ಅದೊ[1]ಡೆ ವಿಷ್ಣು[1]ವು ನಿಲ್ಲದೆ
ಪೋದಂ ನಿಮುಗಳ್ಕಿ ಭುವನದೊಳಗಡಗಿದನೆಂ
ದಾದಿಮುನಿ ಪೇೞ್ವ ಮನದೊಳ್
ಖೇದಂಬಡುತಿರ್ದರಸುರರಿನ್ನೇನೆನುತಂ ೩೦

ಎನಲಾ ಮುನಿಪನ ಮಾತಂ
ದನುಜೇಂದ್ರರ್ ಕೇಳ್ದು ಜೀಯ ತಿರುಗುವೆವಾವಿಂ
ದೆನುತ[2]ಂ ಬೀೞ್ಕೊಂಡಾತನ[2]
ಕನಕಂ ನವರತ್ನಪುರಿಯನ್ನೈದಿದರಾಗಳ್ ೩೧

ವಚನ : ಎಂದು [3]ಸಮಸ್ತ ಸನ್ನಾಹದಿಂ[3] ತಿರುಗಿಬಂದು ಪುರಮಂ ಪೊಕ್ಕು ಸಮಸ್ತ ಮುಂಡಳಿಕರಂ ದಂಡನಾಥರಂ ಸಾವಂತ ಸೇನಾಪತಿಗಳಂ ಬೀೞ್ಕೊಟ್ಟು ಮಂತಣಾಗಾರಮಂ ಸಾರ್ದು

ಕಂದ : ಏಗೈವೆವಿದಕೆ ಹರಿಯೊಳ
ಗಾಗದೆ ಧರಣಿಯೊಳಡಂಗಿ ಪೋದನೆನುತ್ತುಂ
ತೂಗಿ ಮಣಿಶಿರವ ಚಿಂತಿಸಿ
ಯಾ[4]ಗಳ್[4] ಮತ್ತೊಂದುಪಾಯಮಂ ಯೋಚಿಸಿದರ್ ೩೨

ಈ ಧರೆಯನೊಯ್ದೊಡಾಕ್ಷಣ
ಭೇದಿಸಿ ಪರಿತಂದು ವಿಷ್ಣು ಮುಂದಱಿಯವೆ ಶಾ
ಯ್ರ್ೋದಯದೆ ಬರ್ಪನೈತರೆ[5]
ಕಾದದೆ ಪಿಡಿತಂದು ಸಕಲವಸ್ತುವ ಕೊಂಬಂ ೩೩

ಧರೆ[6]ಯುತ್ಪತ್ತಿಯವೆಲ್ಲಂ[6]
ಸರಸಿಜಭವನದು ಹರಂ [7]ಗಡಾ ಶಿ[7]ಕ್ಷಿಸುವಂ
ಹರಿಯ[8]ದ[8] ಪೊರೆ[9]ಯುವ[9]ನದಱಿಂ
ದಿರದೀ ಭೂಮಿಯನೆ ಕೊಂಡುಪೋಪುದು ಕಜ್ಜಂ ೩೪

---

[1] ಡಾ ವಿಷ್ಣು (ಜ) [2] ಯೆನುತವರ್ ಬೀಳುಕೊಂಡಾ (ಚ) ತಂತುಮುವರ್ ಬೀಳ್ಕೊಂಡಾತನ (ಗ) [3] ಸರ್ವ ಸನ್ನಾಹಂ ಸಹ (ಚ) [4] ಗಂ (ಜ) [5] ಪ್ಪ ಬಂದೊಡೆ (ಗ ಚ) [6] ಣಿಯುತ್ಪತ್ತ್ಯವೆಲ್ಲಂ (ಜ) [7] ಶಿ (ಚ) [8] ದಂ (ಚ) [9] ವ (ಜ)

ಎಂದು ತಮ್ಮೊಳಗೆ ತಿಳಿದು ಪು
ರಂದರವೈರಿಗಳು ತಮ್ಮ ಬುದ್ಧಿಗೆ ತಾಂ ಹ
ರ್ಷಂದಳೆದು ಮೆಚ್ಚಿ ಮಹಿಯಂ
ಹಿಂದುಳಿಯದೆ ಕೊಂಡುಪೋಗಲುದ್ಯೋಗಿಸಿದರ್ ೩೫

ವಚನ : ಇಂತೆಂದು ಹಿರಣ್ಯಕ ಹಿರಣ್ಯಾಕ್ಷರ್ ತಮ್ಮೊಳಾಲೋಚನೆಯಂಗೈದು

ಮತ್ತೇಭವಿಕ್ರೀಡಿತ

ಧರೆಯಂ ಶ್ರೀಮದನಂತೆಯಂ ರಸೆಯನಾ ವಿಶ್ವಂಭರಾದೇವಿಯಂ
ಹರಿಯರ್ಧಾಂಗಿಯೆನಿಪ್ಪಳಂ ಸಕಲರತ್ನೋದ್ಗರ್ಭೆಯಂ ಭೂಮಿಯಂ
ಪರಮಪ್ರೀತಿಯನೀವಳತ್ಯಧಿಕಸದ್ಯೋಜಾತೆಯಂ ಖ್ಯಾತೆಯಂ
ಭರದಿಂದುರ್ಬಿ ಹಿರಣ್ಯನೇತ್ರ ದಿತಿಜಂ ಕೊಂಡೊಯ್ದು ದೋರ್ದರ್ಪದಿಂ ೩೬

ವಚನ : ಅಂತು ಹಿರಣ್ಯಾಕ್ಷಂ ಭರ[1]ದಿಂ[1] ಪಾತಾಳಲೋಕಕ್ಕೆ ಭೂತಳಮಂ ಕೊಂಡೊಯ್ಯಲಖಿಲಾಂಡ ಬ್ರಹ್ಮಾಂಡಮೆಲ್ಲಂ ಚಕಿತಮನರಾಗಿ ಬ್ರಹ್ಮಾದಿ ದೇವರ್ಕಳೆಲ್ಲಂ ಸುಮ್ಮಾನವಳಿದಿರಲ್ ನಾರದನದಂ ಕಂಡು ಶ್ರೀರಮಣನಲ್ಲಿಗೆ ಬಂದು ನ್ಯೆಯಿಕ್ಕಿ ಕೈಯಂ ಮುಗಿದು ಬಿನ್ನಪಂಗೈವುತಿರ್ದನದೆಂತೆಂದೊಡೆ

ಚಂಪಕಮಾಲೆ

ಎಲೆಲೆ ಧರಾತಳಂ ಜಲದೊಳಾಳ್ದುದು ಸರ್ವಚರಾಚರಕ್ಕೆ ಬಂ
ತಳಿವಕಟಾ ಸುರೇಂದ್ರ ಜಲಜೋದ್ಭವ ರುದ್ರ ಮುಕುಂದ ಭೂಮಿಯಂ
ಸಲಹುವರಾ[2]ರದ[2]ಯ್ಯೊ ಗತಿಯಾರಿದಕಕ್ಕಟ ಪೋಯ್ತೆನುತ್ತಲುಂ
ಪಲುಬುತೆ ದೇವತಾಳಿ ದೆಸೆಗೆಟ್ಟುದು ಬಾಯ್ವಿಡುತುಬ್ಬಲುಬ್ಬೆಗಂ ೩೭

ಉತ್ಪಲಮಾಲೆ

ಹಿಂದೆ ದಯಾಳುವಾಗಿ ನಿಗಮಾಂಗನೆಯಂ ವರಮತ್ಸ್ಯರೂಪದಿಂ
ಕಂದ ಮುಕುಂದ ಪಾಲಿಸು ಸುರೇಶ್ವರನೈಶ್ವರಿಯಾಭಿವೃದ್ಧಿಗಂ
ಮಂದರ[3]ವೆತ್ತ[3] ಕೂರ್ಮ ನೆಱೆ ಪಾಲಿಸು ಪೋದುದು ಧಾತ್ರಿಯಿಾಗ ಗೋ
ವಿಂದ ದಯಾಳುವಾಗೆನುತಲಪ್ಸರರಬ್ಬರ ಹಬ್ಬಿತೆತ್ತಲುಂ ೩೮

ಕಂದ : ರೂಢಿಯ ಹಿರಣ್ಯಕಾಕ್ಷಂ
ಗಾಢನೆ ಕಕ್ಷದೊಳವುಂಚಿ ಪಾತಾಳತಳ
ಕ್ಕೋಡಿದನವನಂ ಶಿಕ್ಷೆಯ
ಮಾಡಿಯೆ ಭೂತಲವ ತರ್ಪುದಸುರವಿರೋಧೀ ೩೯

---

1 ದಿಂದಂ (ಚ) 2 ವರ (ಚ) 3 ವಾಂತ (ಚ)

ಎಂದಾ ನಾರದನೀ ಗೋ
ವಿಂದಂಗತಿದೈನ್ಯದಿಂದೆ ಬಿನ್ನೈಸುತಿರಲ್
ಇಂದಿರೆಯರಸಂ ಭೂಮಿಯ
ತಂದಪೆನೆಂದಾ ಮುನೀಂದ್ರನಂ ಮನ್ನಿಸಿದಂ ೪೦

ಮತ್ತೇಭವಿಕ್ರೀಡಿತ

ಮುನಿಯಂ ಮನ್ನಿಸಿ ಶ್ರೀವರಂ ಕರುಣಿ ಧಾತ್ರೀಕಾಂತೆಯಂ ತರ್ಪೆನಾ
ನೆನುತುಂ ಕ್ಷೀರಸಮುದ್ರಶಾಯಿ ಕರುಣಾಂಭೋರಾಶಿಯತ್ಯಂತ ಗ
ಮ್ಮನೆ ಪಾತಾಳಕೆ ಪೋಗಿ ಕಳ್ತು ಮಹಿಯಂ ಕೊಂಡೊಯ್ದ ದೈತ್ಯೇಂದ್ರನಂ
ವನಜಾಕ್ಷಂ ಕಡುಪಿಂದೆ ಕೊಲ್ವೆನೆನುತಂ ಬಂದಂ ಮಹಾಕೋಪದಿಂ ೪೧

ವಚನ : ಅಂತು ಬಂದು ಶಾಂತದಿಂ ತಿಳಿದು ಪೂರ್ವ[1]ದೊಳ್[1] ದ್ವಾರಪಾಲಕರಿವರ್ ಸನಕ ಸನಂದ[2]ರ[2] ಶಾಪದಿಂ ದನುಜರಾಗಿ ಪುಟ್ಟಿ [3]ವಿಧಾತ್ರನಲ್ಲಿ[3] ವರಮಂ ಪಡೆದ ಪರಿಯನಱಿದು ಅದಕ್ಕೆ ತಕ್ಕ ಪ್ರತ್ಯುಪಾಯ[4]ಮನಱಿದು[4] ವರಹಾವತಾರಕುದ್ಯುಕ್ತನಾಗಿ

ಕಂದ : ಎಳೆವೆಱೆಯ ಕರ್ಚಿ ನೀಲಾ
ಚಲ ನಡೆಯಲ್ ಕಲ್ತುದೆಂಬ ತೆಱದಿಂ ದೇವರ್
ನಲಿಯೆ ಸುರರುಲಿಯೆ ಬಾಹಾ
ಬಲದಿಂ ವರಹಾವತಾರನುಂ [5]ಹರಿ[5] ತಾಳ್ದಂ ೪೨

ಕಡುಗೋಪದಿಂದೆ [6]ಕಿಟಿಯಾ[6]
ಪೊಡವಿಯನೊಯ್ವಾ ಹಿರಣ್ಯಕಾಕ್ಷನ ಬೆನ್ನಂ
ಬಿಡದೈದಿ ನಿಲ್ಲು ಹೋದಡೆ
ಬಿಡೆನೆನುತುಂ ಮತ್ತೆ ರಕ್ಕಸ[ಂ]ಗಿಂತೆಂದಂ ೪೩

ಚಂಪಕಮಾಲೆ

ಬಿಡು ಬಿಡು ಮೇದಿನೀವಧುವ ರಕ್ಕಸಕುನ್ನಿಯವೆತ್ತ ನಿನ್ನುಮಂ
ಪಡೆದಳ ಗರ್ಭಮಲ್ಪ ಮಗುೞ್ಪೆತೆಯಂ ನೆಱೆ ಸಾರ್ವೆ ನಿನ್ನ ಹಿಂ
ದಿಡುವರದಾರೊ [7]ಕಾಂಬೆ[7] ಕರೆ ಹೋಗದಿರೆಂದು ಮಹೋಗ್ರಕೋಪದಿಂ
ಘುಡುಘುಡಿಸುತ್ತೆ ಬೆಂಬಿಡದೆ ದಾನವನಂ ಒಡಹಾಯಿಮೊತ್ತಿದಂ ೪೪

---

[1] ದಲ್ಲಿ (ಚ) .[2] ನ ಮುನಿಗಳ (ಗ ಚ) [3] ವನಜೋದ್ಭವನಲ್ಲಿ (ಚ) [4] ಮಪ್ಪ (ಚ)
[5] ನೆರೆ (ಗ ಚ) [6] ಕ್ರೋಡಂ (ಚ) [7] ಕಾಪ್ಪೆ (ಚ)

ಕಂದ : ಅಂತಂತೆ [1]ಸೂಕರನ[1] ಮಿಗೆ
ಭ್ರಾಂತ ಹಿರಣ್ಯಾಕ್ಷ[2]ನಾದಿವರಹನ ತನ್ನಾ[2]
ಕುಂತದಿ ಹೊಯ್ಯಲ್ ದನುಜನ
ತಾಂ ತಡೆಯುವೆ ಹೊಯ್ಯಲಾಗಲವನಿಂತೆಂದಂ ೪೫

ಪಿಡಿದಲಿಸುವ ಬಳ್ಳಿಯಿ ಕಾ
ಲ್ದೊಡಕಿತು ಬಲುಪಂದಿಯಾದೊಡೇಂ ಬಿಟ್ಟಪೆನೇ
ಕೆಡೆಯೆನುತಸಿಯಂ ಕಿತ್ತಾ
ದೊರ್ಡನೆಜಗಿದನವುಮು ಧರಣಿ ಕಂಪಿಸುವಿನೆಗಂ ೪೬

ರಕ್ಕಸನ ಗಾಯುಮಂ ಪಿರಿ
ದೆಕ್ಕಲನಣವೃತ್ತೆ ದಾಡೆಯಿಂದಾ ಖಳನಂ
ಹೊಕ್ಕಿತ್ತಿತ್ತಲಿಯಟ್ಟಿ
ತ್ತಿಕ್ಕಡಿಯಂ ಮಾಡಿ ಮೆಟ್ಟಿ ಸೀಳ್ದಿತು ರಿಪುವಂ ೪೭

ವಚನ : ಅಂತು [3]ಶ್ರೀಹರಿ[3] ವರಾಹಾವತಾರದಿಂದಂ ಹಿರಣ್ಯಾಕ್ಷನಂ ಮರ್ದಿಸಿ ಧರಾಲಕ್ಷ್ಮಿ ಯೊಳ್ ನೆರೆದು ನರಕಾಸುರನಂ ಪಡೆದು ಆತಂಗೆ ಪಾತಾಳಲೋಕದೊಳ್ ಪಟ್ಟಮಂ ಕಟ್ಟಿ ಪ್ರೀತಿಯಿಂದಂಕುಶಮಂ ಕೊಟ್ಟು ಪೃಥ್ವಿಯಂ ಯಥಾಪೂರ್ವಕಂ ಕಲ್ಪಿಸಿ ಸಕಲ ಲೋಕಂಗಳಂ ಸುಖದಿಂದಿರ್ಪಂತೆ ಮಾಡಿ

ಕಂದ : ಲಕ್ಷ್ಮೀಧವಳಿಮು ದಿವ್ಯಕ
ಟಾಕ್ಷ ಸುಧಾಸಾರಪೂರ ಘನಗಂಭೀರಂ
ಸಾಕ್ಷಾನ್ನಾರಾಯಣ ಮಿಗೆ
ರಕ್ಷಿಸುತಿರ್ದಂ ಜಗತ್ರಯಂಗಳನೊಲವಿಂ ೪೮

ವಚನ : ಅಂತು ಭೂವಲಯಮಂ ಸಂತತಂ ರಕ್ಷಿಸು[4]ತಿರ್ದ[4] ಪ್ರಸ್ತಾವದಲ್ಲಿ

---

[1] ಕ್ರೋಡನಸಂ (ಗ ಚ) [2] ತಿರುಗಿಯೂದಿ ವರಾಹನ (ಗ ಚ) [3] ಶ್ರೀ (ಕ)
[4] ತ್ತಿರ್ಪ (ಚ)

ಮತ್ತೇಭವಿಕ್ರೀಡಿತ

ಧರಣೀಸೌಖ್ಯಕರಂ ಗಾದಾಯುಧಧರಂ ಶ್ರೀಶಾರ್ಙ್ಗಚಕ್ರೈಕಧರಂ
ವರಪೀತಾಂಬರ ದಿವ್ಯಕೌಸ್ತುಭಧರಂ ಲಕ್ಷ್ಮೀ[1]ವ[1]ರಂ ಭೂಧರಂ
ಸುರಸಂದೋಹ ಪುರಂದರೋನ್ನತಪರಂ ಸೌಖ್ಯಾಕರಂ ನಿರ್ಮಲಂ
ಪರಮಾನಂದಕರಂ ಜಗತ್ಪ್ರಕರಮುಂ ರಕ್ಷಿಕ್ಕೆ ನಾರಾಯಣಂ ೪೯

ಗದ್ಯ : ಇದು ವೃದಾಂರಕರವೃಂದ ಪರಿಮಣಿಖಚಿತಮಕುಟರಂಜಿತ ಶ್ರೀಮದಾದಿ ನಾರಾಯಣ ಶ್ರೀಚರಣ ಸರಸೀರುಹಮಕರಂದಷಟ್ಚರಣಸಲ್ಲಲಿತ ಮಲ್ಲರಸಾಂಕ ವಿರಚಿತಮಪ್ಪ ದಶಾವತಾರ ಚರಿತದೊಳ್ ಸನಕ ಸನಂದನ ಗಮನ ಜಯ ವಿಜಯರ ಶಾಪ ಹಿರಣ್ಯಕ ಹಿರಣ್ಯಾಕ್ಷರ ಜನನ ಮತ್ತಮವರ ದಂಡಯಾತ್ರೆ [2]ಧಾತ್ರೀಹರಣ[2] ಹಿರಣ್ಯಾಕ್ಷವಧೆ ನರಕಾಸುರ ಜನನ ಮುಖ್ಯಮಾದ ವರಹಾವತಾರ ಕಥನಂ

ಚತುರ್ಥಾಶ್ವಾಸಂ

---

[1] ಧ (ಚ) [2] ಧಾರಿಣೀಪ್ರಹರಣ (ಚ)

ಪಂಚಮಾಶ್ವಾಸಂ

ಕಂದ : ಶ್ರೀ ರಮಣನುರಗಶಯನಂ
ವಾರಿಜದಳನಯನನಿಂದ್ರವಂದಿತ ಚರಣಂ
ಕಾರುಣ್ಯಸಿಂಧು ಭಕ್ತರ
ನೋರಂತಿರೆ ಪೊರೆವುದಾದಿನಾರಾಯಣನೇ ೧

ಚಾರುವನಸ್ಥಿತ ಭವ ಮದ
ವಾರಣ ಮಸ್ತಕ ವಿದಳನ ಹರಿ ವೀರಕರಂ
ಬೀರತರವಹ ನೃಸಿಂಹವ
ತಾರಂ ಶರಣರ್ಗೆ ಕುಡುಗೆ ಲಕ್ಷ್ಮೀಕರಮಂ ೨

ಚಂಪಕಮಾಲೆ

ಜಲನಿಧಿಮುದ್ರಿತಾವನಿಯ ಮಧ್ಯದೊಳೊಪ್ಪುವ ಮೇರುವಿಂದೆ ಮೂ
ಡಲುಮೆಸೆವುತ್ತಮಿಪ್ಪ ವರಕೈವಶವಾ ಗಿರಿ ದಕ್ಷಿಣಾಶೆಯೊಳ್
ಸುಲಲಿತಸಿಂಧುದೇಶವದಱೊಳ್ ರತಿಕಾಮರ ಬೀಡು ಭಾರತೀ
ನೆಲೆವನೆಯಾಗಿ ತೋಱಿ ಸಲೆರಂಜಿಸುಗುಂ ಸತತಂ ವಿಭೂತಿಯಿಂ ೩

ವಚನ : ಅದೆಂತೆನೆ

ಚಂಪಕಮಾಲೆ

ಪರಮಪ್ರಭಾವದೇಶ ಪರಮಾತ್ಮ ಕೃಪಾಳುಗಳಿರ್ಪದೇಶವ
ಚ್ಚರಿ ದಯೆಗೈವದೇಶವತಿಮಂಗಳದೇಶ ಸುಖಪ್ರದೈಕ ಬಂ
ಧುರವರ ಪುಣ್ಯದೇಶ ಸುಕೃತೋದಯದೇಶ ವಿಭೂಷವಾವಗಂ
ಸಿರಿನೆಲೆಯಾಗಿ ತೋರ್ಪ ಸಲೆದೇಶ ವಿಶಾಲವನೆಂತು ಬಣ್ಣಿಪೆಂ ೪

ಕಂದ : ಗ್ರಾಮಂ ನಗರಂ ಖೇಡಂ
ಮಾಮಾ ಖರ್ವಡ ಮಡಂಬ [1]ಪತ್ತನಮಂ[1] ದ್ರೋ
ಣಾಮುಖ ಮುಂತಾದೂರುಗ
ಳಾ [2]ಮಾ[2]ನಾಡೊಳಗೆ ರಂಜಿಸುವುವನವರತಂ ೫

---

1 ಪಟ್ಟಣಮಂ (ಚ) 2 ಮಹಾ (ಗ) ಮಹ (ಚ)

ಜಲದುರ್ಗಂಗಳ್ ಸತತಂ
ಕುಲಗಿರಿದುರ್ಗಂಗಳೊದವಿ ರಂಜಿಸುತಿರ್ಪಾ
ಸುಲಲಿತ ವನದುರ್ಗಂಗಳ್
ಸಲೆ ಪುರದುರ್ಗಂಗಳೆಸೆವುವಂತಾ ನಾಡೊಳ್ ೬

ಭೂಸುರರಗ್ರಾರಗಳಿಂ
ಭೂಸುರ ಪುರವರ್ಗ ಮಾ[1]ನ್ಯದೂರು[1]ಗಳಿಂದೆ ವಿ
ಲಾಸದಿನೊಪ್ಪುತ್ತಿಹವಾ
ದೇಶದೊಳನವರತ ಸಲೆ ಸುಖಾವಹದಿಂದಂ ೭

ಮಾನನಿಧಿಗಳ್ ಮಹಾತ್ಮರ
ನೂನ ದಯಾಳುಗಳ್ ಸತ್ಯಧರ್ಮರ್ ಸತತಂ
ಜ್ಞಾನಾಧಿಕ್ಯರ್ ಸುಜನರ್
ಸಾನಂದದ ಸುಖಿಗಳಲ್ಲದಿಲ್ಲಾ ನಾಡೊಳ್ ೮

ಬೆಳೆಯಿಲ್ಲದಿಳೆಗಳಿಲ್ಲಂ
ಫಳಮಿಲ್ಲದ ತರುಗಳಿಲ್ಲ ಸತತಂ ಪರಿವಾ
ಹೊಳೆ ಹುಗದ ಕೆಱೆಗಳಿಲ್ಲಂ
ಜಳಮಿಲ್ಲದ ಕೊಳಗಳಿಲ್ಲ[2]ವಂತಾ[2] ನಾಡೊಳ್ ೯

ಬಡತನ[3]ಮಬಲಾ[3]ಮಧ್ಯದೊ
ಳಡಸಿದ ದೋಷಂ ಹಿಮಾಂಶುಮಂಡಲದೊಳ್ ಸಂ
ಗಡಿಸಿದ ಕಂಟಕ ಕೇತಕಿ
ಯೆಡೆಯೊಳ್ ತಾನಲ್ಲದಾ ಸುದೇಶದೊಳುಂಟೇ ೧೦

ವಂಶಚ್ಛೇದಂ ಮೇದರೊ
ಳೋಸರಿಸದ ಮಾಕುತಾಕುವೀಥಿಗಳೊಳಗಳಿ
ಯಾಸೆ ಪೂವಾಟದೊಳಗ
ತ್ಯಾಸುರ [4]ದೈತ್ಯ[4]ರೊಳಗಲ್ಲದಿಲ್ಲಾ ನಾಡೊಳ್ ೧೧

---

1 ನ್ಯ (ಕ) 2 ದಿಲ್ಲಾ (ಗ) 3 ವ ಬಲ್ಲ (ಗ) ವ ಬಲಾ (ಚ) 4 ದನುಜ (ಚ)

ಚಂಪಕಮಾಲೆ

ಕುಟಿಲತೆ ಬಾಲಕೀವ್ರಜದ ಕುಂತಳದಲ್ಲಿ ಮದತ್ವ ಸಾಮಜೋ
ತ್ಕಟದ ಸಮೂಹದಲ್ಲಿ ಕಡುಗಾಯ್ಪು ದಿವಾಕರನಲ್ಲಿ ಬಂಧನಂ
ಚಟುಳ ಕದಂಬಪುಷ್ಪದೊಳು ಘೋರತೆಯಾ ನವಚಿತ್ರಶಾಲೆಯೊಳ್
ಪಟುತರ ವಕ್ರ[1]ಮಾ ನವಗರಂ[1]ಗಳೊಳಲ್ಲದೆಯಿಲ್ಲ ನಾಡಿನೊಳ್ ೧೨

ವಚನ : ಮತ್ತಮಾ ದೇಶದೊಳಂ

ಕಂದ : ದೇವಾನ್ನಂ ಪರಮಾನ್ನಂ
ಭಾವಿಪೊಡಮೃತಾನ್ನ ಭಕ್ಷಭೋಜ್ಯಾನ್ನಂಗಳ್
ಆವಾಗಂ ಮೃಷ್ಟಾನ್ನಗ
ಳೀವೊಗಟಿಪ್ಪಂ ಛತ್ರಮಾ ಸುದೇಶದೊಳೆಲ್ಲಂ ೧೩

ವಚನ : ಅನಂತರಂ ಮುಂದೆ ಅಱವಟಿಕಾಮಂಟಪಂ ಮೆಱೆವುತಿರ್ಪುವಲ್ಲಿ ಪಥಿಕರ್ಗೆ ನೀರ್ಗುಡಿಯಲೆಱೆಯುತಿರ್ಪ ಲೋಲಲೋಚನೆಯರಾದ ಬಾಲಕೀವ್ರಜಂ ನಿರತಿಶಯ ರೂಪಿಂ ಕರಂ ಶೋಭಿಸುತಿರ್ದರದೆಂ[2]ತೆನೆ[2]

ಮತ್ತೇಭವಿಕ್ರೀಡಿತ

ಸೊಬಗೆಲ್ಲಂ ನೆರೆದೊಂದುಗೂಡಿ ವನಿತಾರೂ[3]ಪಾಂತು[3]ದೋ ಸೌಖ್ಯಮೇ
ಯಬಲಾಕಾರಮನಾಂತುದೋ ಪರಿಮಳಂ ಸ್ತ್ರೀರೂಪಮಂ ತಾಳ್ದುದೋ
ಕಬರೀಭಾರದೊಳಾ ಸ್ತನದ್ವಯದ ಕೊರ್ಬಿಂ ಬಿಣ್ಪು ನೈತಂಬದಿಂ
ದಬುಜಾಕ್ಷೀನಿಕರಂ ಪ್ರಪಾರವೆಯೊಳಿಂತೊಪ್ಪಿರ್ಪರಂತಾವಗಂ ೧೪

ಕಂದ : ಇರಲಲ್ಲಿಗೊರ್ವ ಪಥಿಕಂ
ಬರುತಂ ಬಳಲಿಕೆಯನಲ್ಲಿ ತೀರ್ಚುವೆನೆನುತಾ
ತರುಣಿಯ ರೂಪಂ ನೋಡು
ತ್ತಿರಳುತ್ತುಣ್ಕುತ್ತೆ ಸಲಿಲವೀಂಟುತ್ತಿರ್ದಂ ೧೫

ವಚನ : ಮತ್ತಂ ಮತ್ತೊಂದಱವಟ್ಟಿಗೆಯಲ್ಲಿಗೊರ್ವ ಪಥಿಕಂ ಬಳಲ್ದು ಬಂದು [4]ಬಳಲಿಕೆಯಂ[4] ತೀರ್ಚುವೆನೆಂದುದಕವನೀಂಟುವಲ್ಲಿ

ಕಂದ : ಬಳಲಿಕೆ ತೀರಿತು ಪರಿಮಳ
ಜಳತೀರಿತ್ತಂಗದಾಸಱೆಲ್ಲಂ [5]ಪೋಯ್ತಾ[5]
ಲಳನೆಯ ವಿಭ್ರಮರೂಪಂ
ಸಲೆ ನೋಡುವ ಪಥಿಕರಾಸೆ ತೀರದು ಮನದೊಳ್ ೧೬

---

[1] ಮಾನವರಂ (ಚ) [2] ತೆಂದೊಡೆ (ಚ) [3] ಖಾದು (ಚ) [4] ಪಥಶ್ರಮಮಂ (ಗ)
[5] ತೀರಿತು (ಚ)

ಅಂತಲ್ಲದೆ ಮತ್ತೊಂದು ಪ್ರ
ಪಾಂತರದೊಳ್ ರೂಪುರೇಖೆ ಕೋಮಲ[1]ತೆಯಿನಾ[1]
ನಂತ ಸೊಬಗಿಂದಲೆಸೆವಾ
ಕಾಂತೆಯತೀವ ಪ್ರಮೋದದಿಂದಿರುತಿರ್ದಳ್ ೧೬

ಚಂಪಕಮಾಲೆ

ಇರುತ್ತಿರಲಲ್ಲಿಗೊರ್ವ ಪಥಿಕಂ ಶ್ರಮಮಂ ನೆಱ[3]ನೋಡದಿರ್ಪರ
ತ್ಯುರುತರ ಶೈತ್ಯಸೌರಭಮನಾಂತುದಕಂಗಳನೀಂಟುವಲ್ಲಿಯಾ
ತರುಣಿಯರಂಗಃವ[2]ಟ್ಟಗಳ ನೋಡುವ [3]ದಿಟ್ಟಿ[3]ಯದಲ್ಲದೆಲ್ಲಿಯುಂ
ಚಲಿಸದೆ ಚಿತ್ರದೊಳ್ ಬರೆದ ಪುತ್ತಳಿಯಂದದಿ[4]ನಿ[4]ರ್ಪರಾವಗಂ ೧೭

ಕಂದ: ಇಂತಿರ್ಪಱವಟ್ಟೆಗೆಗ[5]ಳ[5]
ಮುಂತತಿವಿಸ್ಮಯದೆ ಪರಿವ ನದಿಯೊಪ್ಪಿ[6]ರ್ಕುಂ[6]
ಸಂತಂ ಮುನಿವರರುಗಳಿನ
ನಂತ ಮಹೀಜಾತದಿಂದೆ ಭಾರತಿವೆಸರಿಂ ೧೮

ಗೋದಾವರಿ ಜಾಹ್ನವಿಯು
ತ್ಯಾದರದಿಂ ಕೃಷ್ಣವೇಣಿ ಭಾಗೀರಥಿಯಿಂ
ಮೇದಿನಿಯೊಳುಳ್ಳ ನದಿಗಳಿ
ನ್ನೈದಾಱಿಳೆಂಟು ಮಡಿಯ ಪುಣ್ಯಕ್ಷೇತ್ರಂ ೨೦

ಆ ನದಿಯುಭಯ ತಟಂಗಳ
ನೇನಂ ಬಿತ್ತರಿಪೆ ಫಲಿತವೃಕ್ಷಾವಳಿಯಿಂ
ಧ್ಯಾನ ಜಪ ಮೌನ ಯೋಗ
ಧ್ಯಾನದ ಭೂಸುರವಿತಾನದಿಂ ರಂಜಿಸುಗುಂ ೨೧

ವಸಂತತಿಲಕ

ಆ ಭಾರತೀನದಿ ಮಹಾಜಲಪೂರಸಾರಂ
ಶೋಭಾವಹಂ ಕ್ಷಿತಿಸುರಸ್ತವ ಮುಖ್ಯಭೂಜಂ
ಜಾಬಾಲಿ [7]ಕೃಷ್ಣ[7] ಶುಕ ಶೌನಕ ಗಾರ್ಗ್ಯ ಸಂಗಂ
ಏ ಬಣ್ಣಿಪೆಂ ದಿವಿತರಂಗಿಣಿಯಂತೆ ತೋರ್ಕುಂ ೨೨

---

[1] ತರದಿನ (ಚ) [2] ಧಿ (ಗ) [3] ದೃಷ್ಟಿ (ಚ) [4] ಲಿ (ಚ) [5] ಳಿಂ (ಗ) [6] ರ್ಪುದು (ಗ ಚ) [7] ವ್ಯಾಸ (ಚ)

ವಚನ : ಅಂತಾ ಭಾರತೀನದಿಯಿಂ ಮುಂತತಿಶಯಮಾಗಿರ್ದುದ್ಯಾನವನಂ ಕರಂ ಶೋಭಿಸುತಿರ್ದುದದೆಂತೆನೆ

ಶಾರ್ದೂಲವಿಕ್ರೀಡಿತ

ಜಂಬೂವೃಕ್ಷ ಕವುಂಗು ತೆಂಗು ಪನಸಂ ಚೂತಂ ಮಹಾಚಂಪಕಂ
ಜಂಬೀರಂ ಘನನಿಂಬ ಮಾದಲ[1]ಮ[1]ಶೋಕಂ ಪೂಗ ಸಂಘಾತಮುಂ
ರಂಭಾಷಂಡ ಕಪಿತ್ಥ ಬಿಲ್ವ ನಿಚಯಂ ಹೇರಿಳೆ ಕಿತ್ತಿಳೆ ದಾ
ಳಿಂಬಂ ಇಕ್ಷುಸಮೂಹ ಸತ್ಫಲಗಳಿಂ ಸರ್ವರ್ತುಕೋದ್ಯಾನಮುಂ ೨೩

ವಚನ : ಅಂತು [2]ಸರ್ವರ್ತುಕ[2]ಮಾದ [3]ಉದ್ಯಾನದೊಳ್[3] ಉರ್ವಿಗಭಿನವವೆನಿಸಿ ಪೂವಾಡಿಗರೋವಿದ ಪೂವಾಟವೊಪ್ಪುತಿರ್ಪುದದೆಂತೆನೆ

ಉತ್ಪಲಮಾಲೆ

ಕಾಮನ ಬಾಣದಾಡುಬೊಲನೋ ಝಷಕೇತನ ಚಾಪದಿರ್ಕೆಯೋ
ತಾಮರಸಾಲಯಾತ್ಮಜನ ಸಾರಸ ಸಿಂಜಿನಿಯಿರ್ಪ ತಾಣವೋ
ಆ ಮಕರಧ್ವಜಾಂಕನೆಸೆದಿರ್ದಿಹ ಮೋಹನ ಶಸ್ತ್ರಶಾಲೆಯೋ
ಕೋಮಲ ದಿವ್ಯಸೌರಭಮನಾಂತೆಡೆಯೋ ಸಲೆ ಪುಷ್ಪವಾಟಿಯೋ ೨೪

ವಚನ : ಮತ್ತಮಲ್ಲಿಂ ಮುಂದೆ

ಕಂದ : ಮದನನ ಭದ್ರಗಜಂಗಳೊ
ಸದಮಳವಳಿ ಗಿಳಿ ಪಿಕಂಗಳಿಹ ನೆಲೆವನೆಯೋ
ಮಧು ಸಕ್ಕರೆಯಮೃತಂಗಳ
ನೊದವಿಸ ಮಾಮರಗಳಿರವ ಬಣ್ಣಿಪರಳವೇ ೨೫

ಇಂದ್ರವಜ್ರ

ಜಂಬೂತರೂಪೂರಿತ ಸತ್ಫಲಂಗಳಿಂ
ದಂಬಾರಮಂ ಚುಂಬಿಸುತಲ್ಲಿ ಯಾವಗಂ
ರಂಭಾದಿ ದೇವಾಂಗನೆಯರ್ ವಿಲಾಸದಿಂ
ದಂ ಬಂದು ಚೆಲ್ವಾಗಿಹರೊಪ್ಪಿ ಸಂತತಂ ೨೬

ಕಂದ : ಇಂಪಿಂದೆ ಗಾತ್ರತರದಿಂ
ದಂ ಪರಿಮಳ ಭಾರದಿಂದೆ ಬೇರಿಂದವೆಯು
ಗ್ರಂ ಪರಿಪೂರಿತ ಸತ್ಫಲ
ದಿಂ ಪನಸದ್ರುಮಗಳೆಸೆ[4]ಗುಮಾ[4] ನಂದನದೊಳ್ ೨೭

---

[1] ವ (ಚ) [2] ರಮ್ಯ (ಗ) [3] ದುದ್ಯಾನಸಲ್ಲಿ (ಚ) [4] ವಮಾ (ಚ)

ಈಶ್ವರನಂತಿರಲೆಸೆವ ಮು
ನೀಶ್ವರರ ಸಮೂಹದಂತಿರೊಪ್ಪುತ್ತಿ[1]ರ್ಪಂ[1]
ಈಶ್ವರನದಿಯಂತಾ ರಾ
ಮೇಶ್ವರನೊಸೆದಿಟ್ಟ ನಾಳಿಕೇರಂ ವನದೊಳ್ ೨೮

ಭೂದೇವಿಯೊಲವಿನಿಂದಂ
ಮಾಧವಗೆ ಸುವರ್ಣಕಲಶದಿಂದಮೃತವನೊ
ಲ್ದಾದರದೊಳೀವಳೆಂಬೊಲ್
ಮಾದಲ ತನಿವ[2]ಣ್ಗಳಿಂದಮೆಸೆದುವು[2] ವನದೊಳ್ ೨೯

ತುಂಬಿಹವಾ ವನದೊಳ್ ದಾ
ಳಿಂಬಂ ಸಲೆ ಬೀಗಿ [3]ಬಿರಿ[3]ದು ಗಾತ್ರದ [4]ಪಣ್ಣಿಂ
ದಂ ಬಹು[4]ಳವಾಗಿ ಶುಕನಿಕು
ರುಂಬದೆ ಶೋಭಿಸುವವಾವಗಂ ನಂದನದೊಳ್ ೩೦

ಕೋಗಿಲೆಯರಗಿಳಿ ಪಾರಿವ
ರಾಗಿಪ ಮುತ್ತಾಳಿ[5]ಯಂಚೆ ಚಾತಕನಿಕರಂ[5]
ಸೋಗೆನವಿಲೆಸೆವ ಕೊಂಚೆಗ
ಳಾಗಲ್ ಶೋಭಿಸುತಮಿರ್ಪುವಾ ನಂದನದೊಳ್ ೩೧

ಎಳನೀರ ರಸದೆ ಬಾಳೆಗ
ಳೆಳೆವಾಳೆಯ ಪಣ್ಣರಸದೆ ಪುಂಡ್ರೇಕ್ಷುಗಳಾ
ಲಳಿತೇಕ್ಷುರಸದಿನೆಸೆವಾ
ಕಳವೆಗಳಾ ಕಳ[6]ವೆ[6]ಯುಂ ಶುಕಂ [7]ಸೊಗ[7]ಯಿಸುಗುಂ ೩೨

ವಚನ : ಅಂತು ಸಂತಸಂ ನೋಟ್ಪರ ಕಣ್ಗೆ ಮಂಗಳಾಕಾರಮಾಗಿರ್ದ ಉದ್ಯಾನಮಧ್ಯದಲ್ಲಿ ರಾಜಿಸುತಿರ್ದ ಕೊಳಂಗಳ ಬಿಲ್ಗಾಜರ ಕಲಾಪದಂತೆ [8]ಶಿಲೀ[8]ಮುಖವ್ರಾತಮುಂ ಅಮರಾವತಿಯಂತನಿಮಿಷಸಮೂಹಮುಂ ಆಕಾಶಮಂಡಲದಂತೆ ಅನೇಕಾಬ್ಜಸಂಕುಲಮುಂ ಭೋಜನ ಆಸ್ಥಾನದಂತೆ ರಾಜಹಂಸಪ್ರತಾನಮುಂ ರಥಚಕ್ರದಂತೆ ರಥಾಂಗಯೂಥಮುಂ ರವಿಯ [9]ಕೆಳದಿ[9]ಯಂತೆ ಭುವನಾಶ್ರಯಮಾಗಿರ್ದುದಂತುಮಲ್ಲದೆಯುಂ

---

1 ರ್ಪುದೂ (ಚ) 2 ಣ್ಣಿಂದಲೆಸದಾ (ಗ) 3 ಬಲಿ (ಗ) 4 ಪಣ್ಣುಗಳಿಂ ಬಹ (ಚ)
5 ಪಂಸೆ ಚಾತಕ ಪ್ರಕರಗಳಿಂ (ಚ) 6 ಮೆ (ಚ) 7 ಸುಖಿ (ಚ) 8 ಸಿಳೀ (ಚ) 9 ಸ್ನೇಹಿತೆ (ಚ)

ಕಂದ : ಕಮಲಂ ಕಮಲಂ ಕಮಲಂ
ಕುಮುದಂ ಕುಮುದಂಗಳೊಪ್ಪುವಾ ಕುಮುದಗಳಿಂ
ಭ್ರಮರಂ ಭ್ರಮರಂ ಭ್ರಮರಂ
ಭ್ರಮಿಸುವವಮುಮುಮು ಕೊಳ ವಿರಾಜಿಸುತಿರ್ಕುಂ ೩೩

ವಚನ : ಅಲ್ಲಿ ಮಂದಮಾರುತಂ [1]ಬಂಧುರಮಾಗಿರ್ದುದೆಂ[1]ತೆಂದೊಡೆ

ಕಂದ : ತರುಗಳನಲ್ಲಾಡಿಸುತುಂ
ಸರಸಿಗಳಂ ಪೊಕ್ಕು ತೆರೆಗಳುಮನೊತ್ತುತ್ತುಂ
ವರ ಪುಷ್ಪಾಮೋದವ ಸಲೆ
ಧರಿಸುತ್ತುಂ ಸುೞಿವ ಮಾರುತಂ ನಂದನದೊಳ್ ೩೪

ಚಂಪಕಮಾಲೆ
ಪೊಸಪಲಸೆಲ್ಲ ಬಕ್ಕೆವಲಸಿಕ್ಷುಗಳಾ ಧವಳೇಕ್ಷು ಮಾಮರಂ
ಮಿಸುಪಿನಿಮಾ[2]ವು ತಾಂ[2] ಕೊಳಗಳೆಲ್ಲವು ಪೂಗೊಳ ಮಾರುತಂ ವಿರಾ
ಜಿಸುತಿಹ ಮಂದಮಾರುತನು ತುಂಬಿಗಳಾ ಮೞಿದುಂಬಿ ಹಂಸವಿಂ
ಡೆಸೆದಿಹ ರಾಜಹಂಸಕುಳವಾ ವನನಂದನ ನಂದನಂಗಳೊಳ್ ೩೫

ವಚನ : ಅಂತೆಸೆವ ನಂದನದ ಮುಂದತಿಶಯವಾಗಿ ಬಳಸಿ ಬಂದ ಕಳಮಕ್ಷೇತ್ರಂಗಳಿಂದೊಪ್ಪುವಲ್ಲಿ

ಕಂದ : ಅಂಕುರದಿಂ ಪಸುರಿಂ ಮಿಗಿ
ಲುಂ ಕಡುನಳನಳಿಸಿ ಪಾಯ್ವ ಪೊಡೆಯಿಂದಂ ದು
ಗ್ಧಂ ಕರ ತೀವ್ರತ್ತುಂ ನಯ
ದಿಂ ಕೊರಲ್ವಾಗುತ್ತೆ ಶಾಲಿವನಮೆಸೆದಿರ್ಕುಂ ೩೬

ಆ ಕಳಮಕ್ಷೇತ್ರಂಗಳ
ನಾ ಕುಟಿಲಾಳಕೆಯರೊಲ್ದು ಕಾಯ್ವ ಪೆಡೆಯೊಳ್
ಭೀಕರಮಿಲ್ಲದೆ ರಾಜಿಸು
ವಾ ಕಲಕಂಠಂ ಶುಕಾಳಿಗಳ್ [3]ಸೊಗಯಿಸುಗುಂ[3] ೩೭

---

[1] ಬಂಧುರದೆಂ (ಗ) [2] ಮರಂ (ಚ) [3] ಶೋಭಿಸುಗುಂ (ಚ)

ವಚನ : ಅದೆಂತೆಂದೊಡೆ ಶಾಲೀವನನಮಂ ಸಾಲಿಟ್ಟು ಕಾಯ್ದಿರ್ಪ ಬಾಲಕೀವ್ರಜದ ನಡೆಗೆ ಮರಾಳಂಗಳ್ ನುಡಿಗೆ ಶುಕನಿಕಾಯಂಗಳ್ ದನಿಗೆ ನವಕೋಕಿಲಂಗಳ್ ಮನಂಗೊಂಡಂಜದೆ ಅಳ್ಕದೆ ಬಳ್ಕದೆ ಕಳವೆಗಳಂ ಮೆಲುತಿರ್ಪು[1]ವೇ[1]ಗ್ಯೆವೆವೆಂದು ಚಿಂತಿಸುತಿರ್ಪ ಪಾಮರ [2]ಕಾಮಿನಿ[2]ಯರಂ ಪಾಂ[3]ಥರ್[3] ಕಂಡು ಅವರ ಮನದಿಂಗಿತಮನರಿದು ಆ ಪಕ್ಷಿಗಳಂ ನಿವಾರಿಸಿ ಆ [4]ಮಾನವತಿ[4]ಯರಂ ಪ್ರೇಮದಿಂ ನೆರೆದು ಸುಖಿಯಾಗಿರ್ಪರಲ್ಲಿಂ ಮುಂದೆ

ಕಂದ : ಚಪ್ಪನ್ನದೇಶಮದರೊಳ
ಗೊಪ್ಪುವುದಾ ಸಿಂಧುದೇಶಮಾ ದೇಶದೊಳುಂ
ದಪ್ಪಗನಾಡುಂಬೊಲಮೆನಿ
ಸಿಪ್ಪುದುಮತಿಗಾಡಿಯಿಂದೆ ರತ್ನಾನಗರಂ ೩೮

ಮಧುರೆಗವಂತಿಗೆ ಮಾಯೆಗೆ
ಒದವಿದ ಕಾಶೀಪುರ[5]ಕ್ಕಯೋಧ್ಯೆಗೆ ಕಾಂಚಿಗೆ[5]
ಸದಮಲ ದ್ವಾರಾವತಿಗ
ತ್ಯಧಿಕತರಂ ಮುಕ್ತಿದಾಯಿಯದನೇವೊಗಳ್ವೆಂ ೩೯

ಜಳರುಹನಾಭನ ಪಟ್ಟಣ
ಕಳಕಾವತಿಗಿಂದ್ರಗೊಪ್ಪುವಮರಾವತಿಗಂ
ಸಲೆ ರಂಜಿಸುತಿರ್ಪುದು ಕಂ
ಗೊಳಿಸುವ ಜಸದಿಂದೆ ಸಿರಿಯೊಳಾ ಸೊಬಗಿಂದಂ ೪೦

ಆ ನಗರದಗಟಿನದನಾ
ನೇವಣ್ಣಿಪೆ ಚಲುವೆಯಿಂದೆ ತೀವಿದ ನೀರಂ
ಭೋನಿಧಿಯಂತೆ ಗಭೀರದಿ
ನಾ ನಳಿನಂ ಕುಮುದವಲ್ಲಿ ಸಂಜನಿಸಿರ್ಕುಂ ೪೧

ಜೀಮೂತಮೊಡನೆ ತಮನಿ
ನ್ನೇಮಾತೋ ಪಥವದಲ್ಲಿಗೆಂಬಂತೊಪ್ಪುವು
ದಾ [6]ಮಾ[6]ಪಟ್ಟಣದಲ್ಲಿಯ
ಹೇಮದ ಕೋಟೆಗಳ ರನ್ನದೆನೆಗಳಜಸ್ರಂ ೪೨

---

[1] ವಿನ್ನೇ (ಚ) [2] ಕಾಂತೆ (ಗ) [3] ಥರ್ಕಳ್ (ಚ) [4] ಕಾಮಿನಿ (ಗ ಚ) [5] ಕ್ಕೆ ಕಾಂಚಿಗಯೋಧೆಗೆ (ಚ) [6] ಮಹ (ಚ)

ಅಷ್ಟದಿಕ್ಕುಗಳ ಕೊತ್ತಳ
ದಟ್ಟಣೆಗಳ ಪಟಗಳಾಳುವೇರಿಯ ಸರಿಸಕೆ
ನೆಟ್ಟ ಡೆಂಕಣಿಗಳಭ್ರಮು
ಮುಟ್ಟುತ್ತಿಹವೇನನೆಂಬೆನಾ ಪುರದಿರವಂ ೪೩

ಆವೂರ ಬಾಗಿಲುಗಳವ
ನೇವೊಗಟಿಪ್ಪೆಂ ವಜ್ರಗದಗಳುಪ್ಪರಿಗೆಗ[1]ಳುಂ[1]
ತಾವಾಗಂ ಸಲೆ ರಂಜಿಸಿ
ಮಾವಧು ತುಳ್ಕಾಡುತಿರ್ಸಳಾ ಪುರವೆಡೆಯೊಳ್ ೪೪

ಶಾರ್ದೂಲವಿಕ್ರೀಡಿತ

ಇಂತಿರ್ಪಾ ಸುಖಸೌಖ್ಯದಿಂ ಪುರವರಂ ರತ್ನಾವತೀ ನಾಮದಿಂ
ದಂತೊಪ್ಪಂಬಡೆದಿರ್ದ ದೇವಗೃಹದಿಂದಾ ರಾಜಹರ್ಮ್ಯಂಗಳಿಂ
ಸಂತಂ ಭೂಸುರಗೇಹದಿಂ ಪ್ರಜೆಗಳಿರ್ಪಾಗಾರದಿಂ ವೈಶ್ಯರಾ
ನಂತೀ ಮಂದಿರದಿಂದ ವಾರತರುಣೀಸೌಧಂಗಳಿಂ ರಂಜಿಕುಂ ೪೫

ಕಂದ : ಆ ಪುರಮಧ್ಯದೊಳೊಪ್ಪುವ
ವೇ ಪೊಗಟಿಪ್ಪೆಂ ಸೋಮಸೂರ್ಯವೀಥಿ ಸುರಾಲಯ
ವಾ ಪಟಧ್ವಜದಿನೊಪ್ಪುವ
ಗೋಪುರಗಳನಂತ ರನ್ನಗಳಸಗಳಿಂದಂ ೪೬

ವಚನ : ಆ ಮಹಾಪತ್ತನದ ಸೋಮಸೂರ್ಯವೀಥಿಗಳಲ್ಲಿ ಕಾಮಿತ ವ[2]ಸ್ತ್ರ[2]ಂಗಳಂ ಪ್ರೇಮದಿಂ ಮಾಱುವ ವಣಿಗ್ವರರಂಗಡಿಗಳ್ ಕಂಗೊಳಿಸಿರ್ಪುವವೆಂತೆಂದೊಡೆ

ಕಂದ : ಪಟ್ಟಾವಳಿ ದೂವ[3]ಟ[3] ಬೆ
ಳ್ವಟ್ಟೆಗಳುಂ ಸಾಲಿ ಚಿತ್ರವಸ್ತ್ರಂಗಳ್ ಪೊಂ
ಬಟ್ಟೆ ದೇವಾಂಗಗಳ್ ಸಾ
ಲಿಟ್ಟಾವಗ ಮಾಱುವಂಬರಂಗಳ ಪಸರಂ ೪೭

ನವರತ್ನ ಮಾಱುವಂಗಡಿ
ಯವನೇನಂ ಪೇಟಿಪ್ಪೆನೊಗೆದ ವಸ್ತುವೆ ಪಿರಿದಾ
ಲವಣಾಬ್ಧಿಯೆಂತಿರೀ ಭೂ
ಭುವನಕ್ಕಾಶ್ಚರ್ಯಮಾಗಿ ಕಣ್ಗೆಸೆದಿರ್ಕುಂ ೪೮

---

[1] ಳಂ (ಜ) [2] ಸ್ತು (ಜ) [3] ಟ (ಗ)

ಮಾಲಿನೀ

ಧನಕನಕಸಮೇತಂ ಯಕ್ಷರಾಜೇಶನಂದಂ
ಜನನುತದೆ ನಿತಾಂತಂ ರಾಜಿಸುತ್ತಿರ್ಪ ಚಂದಂ
ವಿನಯಗುಣ ಮಹಾಂತಂ ಮಚ್ಚ ಸತ್ಪ್ರಾಸಿನಿಂದಂ
ಜಿನವರದರನಂತಂ ಶೋಭಿಸರ್ ಸೌಖ್ಯದಿಂದಂ ೪೯

ಕಂದ : ಕ[1]ಸ್ತೂ[1]ರೀ ಹಿಮ[1]ಕುಂಕುಮ
ವಿಸ್ತಾರದ ಧೂಪ ತೈಲ ಪುಣುಗು ಜವಾದಿ ಸು
ವಸ್ತು ಘನಸಾರ ಸಾದು ಸ
ಮಸ್ತಂ ಪರಿಮಳವ ಮಾಱುತಿಹರಂಗಡಿಗರ್ ೫೦

ಚಂಪಕಮಾಲೆ

ಸುಲಲಿತ ದಿವ್ಯವಸ್ತ್ರಗಳನುಟ್ಟು ಸುಭೂಷಣದೊಟ್ಟು ಭಾಳದೊಳ್
ತಿಲಕಮನಿಟ್ಟು ಮಲ್ಲಿಗೆಯ ಮಾಲ[2]ತಿ[2]ಯಂ ಮುಡಿಯಿಟ್ಟು ನಲ್ಮೆಯಿಂ
ಮಲಯಜ ಸಾದು ಕುಂಕುಮ ಹಿಮವ್ರಜಮುಂ ಪನಿನೀರ್ಗಳಿಂದೆ ಸಂ
ಗೊಳಿಸಿ ಸುಗಂಧಮಂ ನಲಿದು ಮಾ[3]ಡು[3]ವರಲ್ಲಿಯ ಘಟ್ಟ[4]ವ[4]ಳ್ತಿಯರ್ ೫೧

ಕಂದ : ಸುರಗಿ ಸುರಹೊನ್ನೆ ಸಂಪಗೆ
ಇರವಂತಿಗೆ ಜಾಜಿ ವಕುಳ ಮಲ್ಲಿಗೆ ಕೇತಕಿ
ಸರಸಿರುಹ ಕುಮುದ ಪಾದರಿ
ನಱುಸೇವಂತಿಗೆಯ ಹೂವಿನಂಗಡಿಯೆಸೆಗುಂ ೫೨

ಕ್ರಮುಕಂ ವರ್ಣಗಳತ್ಯು
ತ್ತಮ ಚೂರ್ಣಂ ಬೆರಸಿ ಮಾಱುವಂಗಡಿಗಳ್ ಸಂ
ಭ್ರಮದಿಂ ವಾಣಿಜ್ಯರ್ ಸ
ತ್ಕ್ರಮದಿಂದೊಪ್ಪಿರ್ಪರಾವಗಂ ಪುರವೆಡೆಯೊಳ್ ೫೩

ಬೊಮ್ಮನ ವಿಷ್ಣು ಮಹೇಶ್ವರ
ರಮ್ಮಾಜಿಕೆಯಿಸುತಿರ್ಪರುದ್ಭವ ಸ್ಥಿತಿಲಯಗಳ್
ತಮ್ಮಿಂದಾದವೆನುತ್ತುಂ
ನಿರ್ಮಲವೆನಿಸಿದುದು ಕಂಚುಗಾಜರ ಪಸರಂ ೫೪

---

[1] ಸ್ತೂರಿ ಕಪ್ಪೂರ (ಗ ಚ) [2] ತೆ (ಚ) [3] ಜು (ಚ) [4] ವಾ (ಚ)

ಅಕ್ಕಸಾಲೆಗಳ ಕಮ್ಮಟ
ವಿಕ್ಕೆಲದಿಹ ಕರ್ಮಗಾರ ಕಲ್ಕುಟಿಗರ್ ಸಾ
ಲಿಕ್ಕಿಹ ಬಡಗಿಗಳಿಂದಂ
ಸಕ್ಕಜದತಿ ಕುಶಲರಿರ್ಪರಾ ಪುರದೆಡೆಯೊಳ್ ೫೫

ವಚನ : ಅನಂತರಂ ಮುಂಪೆ

ಕಂದ : ಕವಿ ಗಮಕಿ ವಾದಿ ವಾಗ್ಮಿ
ಪ್ರವರಂ ಧರ್ಮಾಧಿಕಾರಿಗಳ್ ಜೋಯಿಸರೊ
ಪ್ಪುವ ಪೌರಾಣಿಕರಾ ಶಕು
ನವ ಪೇಳುವ ವೇದವಿತ್ತುಗಳ್ ರಂಜಿಸಿದರ್ ೫೬

ತ್ರಿವಿಧ ಗೀತಂಗಳಿಂದೊ
ಪ್ಪುವ ಚಾತುರ್ವಾದ್ಯದಿಂದ ನೃತ್ಯಂ ಪದಿ ಮೂ
ಱವಕೊಪ್ಪುವವೇನಂ ಪೇ
ಳುವೆ ತೂರ್ಯತ್ರಯದ ಮೇಳವದ ಸಂಭ್ರಮಮಂ ೫೭

ವೈದ್ಯರ ಸಂದೋಹದಿನಾ
ವಾದಿಗಳ ಸಮೂಹದಿಂದ ವಂಚಕರಿಂದಂ
ಭೇದಾಭೇ[1]ದ[1]ದವಶ್ಯವ
ದಾದಿಯ ಜೂಜುಗರು ತಂಡತಂಡ[2]ದೊಳಿ[2]ರ್ಕುಂ ೫೮

ಶಿಲ್ಪದ ಶಾಸ್ತ್ರದವರ್ ಸಲೆ
ಚಿಪ್ಪಿಗರತಿಕುಶಲ ಬರಹದರ್ ಚಿತ್ರಿಗರುಂ
ಒಪ್ಪುವರಾ ಪುರಮಧ್ಯದ
ಲಿಪ್ಪರ್ ನಾನಾವಿಶಾರದರ್ ಸಂತಸದಿಂ ೫೯

ರಜಕರ್ ಕ್ಷೌರಕರೊಪ್ಪುವ
ಧ್ವಜಿಗಳ್ ಚಕ್ರಿಗಳು ಚರ್ಮಕಾರರ್ ಕಟುಕರ್
ವ್ರಜ ಸೂನೆಗಾಱ ಮಲ್ಲರ್
ವಿಜಯರ್ ಮಾಸಾಳುಗಳ್ ಸಮಂತಿರುತಿರ್ಪರ್ ೬೦

ವಚನ : ಅಲ್ಲಿಂದಂ ಮುಂದೊಂದೆಡೆಯಲ್ಲಿ

---

[1] ದ್ಯ (ಚ) [2] ದಲಿ (ಚ)

ಕಂದ : ತಾಳೀಚಲ್ಕ್ರಗಳ್ಪುಂ
ಬೇಲಂ ಬೆಲ್ಲದಲಿ ಸಮೆದ ಸಾರಾಯಮುಮಂ
ಶಾಲಿ ರಾಗಿಗಳ ನಾನಾ
ಮೂಲಿಕೆಗಳ ಹೆಂಡವೆಂಬಿವಂ ವಿಕ್ರಯಿಸರ್ ೬೧

ಮತ್ತೇಭವಿಕ್ರೀಡಿತ

ಅರಳಂ ಸೂಸಲುಮಂ ಸಮುಂತಪಿಸಿಯುಂ ಭಂಗೀಪುಡೀ ಬೆಲ್ಲಮಂ
ಬೆರಸಿರ್ದಾ ತಿಲಪಿಷ್ಟಮಂ ಘನತರಂ ನೀರುಳ್ಳಿ ಬೆಳ್ಳುಳ್ಳಿಯುಂ
ತರದಿಂದಂ [1]ಪಿಶಿತಂಗಳಂ[1] ಕಡಲೆಯುಂ ನಾನಾಪರೀ ಚೀಲಮಂ
ಬೆರಸುಂ ಮದ್ಯವ ಮಾಱುವರ್ ಪ್ರತಿದಿನಂ ಮದ್ಯರ್ಪಿಸಳ್ ಸಂತತಂ ೬೨

ಕಂದ : ನಾನಾ ಖಗಮಾಂಸಗಳಂ
ನಾನಾ ಮೃಗಮಾಂಸ ಮೇಷಮಾಂಸಂಗಳುಮಂ
ನಾನಾ ಮತ್ಸ್ಯದ ಮಾಂಸಮ
ನಾನಾ ತೆಱದಿಂದೆ ಮಾಱುತಿರ್ಪರ್ ಕಟುಕರ್ ೬೩

ವಚನ : ಅಂತು ಪಿಶಿತ ಮದ್ಯಮಂ ಮಾಱುವ ಕೇರಿಯಿಂ ಮುಂದೆ ಭೂಲೋಕಕ್ಕಾಶ್ಚರ್ಯಮಾಗಿ ಸೂಳೆಗೇರಿಯೊಪ್ಪುತಿರ್ದುದದೆಂತೆಂನೊಡೆ

ಚಂಪಕಮಾಲೆ

ರತಿ ನೆಲೆವೀಡೊ ಕಾ[2]ವ[2] ಸತತಂ ಸಲೆಸಂದಿಹ ರಾಜಧಾನಿಯೋ
ಚತುರವಿಟರ್ಕಳೆಂಬ ಮೃಗಸಂಕುಳಮಂ ತೆಗೆದಿರ್ಪ ತಾಣವೋ
ಪ್ರತಿಗಳ ಚಿತ್ತದಾಕರುಷಣಂಗಳ ಮಾಟಪ್ಪಿಡೆಯೋ ನಿರಂತರಂ
ಕ್ಷಿತಿಗೆ ವಿಲಾಸವಿಭ್ರಮದ ರೂಪೆಸೆವಲ್ಲಿಯ ಸೂಳೆಗೇರಿಗಳ್[3] ೬೪

ಕಂದ : ಆ ಕೇರಿಯೊಪ್ಪುತಿರ್ಪವ
ನೇಕಂ ಬಹುರತ್ನಕಳಶ ಕನ್ನಡಿ ತೋರಣ
ದಾ ಕುಶಲ ಭದ್ರಮಂಟಪ
ಲೋಕೋತ್ತಮವೆನಿಸಿ ಪಟ್ಟಸಾಲೆಗಳಿಂದಂ ೬೫

ಚೌರಿಗೆಯುಪ್ಪರಿಗೆಗಳಾ
ಗಾರಂ ಘನಶೈತ್ಯಶಾಲೆಯಾ ತೊಟ್ಟಿಗಳಿಂ
ಚಾರುತರ ಗೃಹರಾಜಿಗ
ಳೋರಣದಿಂ ವಾರನಾರಿಯರ ನೆಲೆವನೆಗಳ್ ೬೬

---

[1] ಶ್ರೀತಂಗಳಂ (ಚ) [2] ಮ (ಚ) [3] ಯೋ (ಚ)

ಬಾವನ್ನದ ಹಾಸಿಗೆಯಿಂ
ದಾವಗ ಕತ್ತುರಿಯ ಸಾರಣೆಗಳಿಂ ಕುಂಕುಮ
ಹೂವಿನ ಕಾರಣೆಯೊಪ್ಪುವ
ದೇವಾಂಗದ ಮೇಲುಕಟ್ಟು ಸೆಜ್ಜೆಯ ಮನೆಯೊಳ್ ೬೭

ಸೆಳೆಮಂಚ ತೂಗುಮಂಚಂ
ಸುಲಲಿತ ಮಣಿಮಂಚ ಶಕುನಿಮಂಚಂ ಪೊಳೆವಾ
ಎಳೆಯಂಜೆವಾಸು ಕುಂಕುಮ
ಗಳ ಪಾಸುಂ ತೂಲವಾಸು ಕಪ್ಪುರವಾಸುಂ ೬೮

ವಚನ : ಅಂತೊಪ್ಪುವ ಕೇರಿಗಳಲ್ಲಿ

ಕಂದ : ಅಂಬುಜವದನೆಯರಾ ಶಶಿ
ಬಿಂಬವ ಪೋಲ್ದಾನನೆಯರು ಮುಖರಸವೆಸೆವ ನಿ
ತಂಬಿನಿಯರುಗಳ್ ಗಾಡಿಗ
ಳಿಂ ಬರಸೆಳೆಯುತ್ತಲಿರ್ಪರಾ ವಿಟಜನಮಂ ೬೯

ಜಲಜನಯನೆಯರು ಕನ್ನೈ
ದಿಲೆಯೆಸಳಂ ಪೋಲ್ವ ನಯನೆಯರ್ ಮಱಿವಿಾ[1]ನಾ[1]
ಹೊಳಹುಗಳ ಪೋಲ್ವ ನಯನೆಯ
ರೆಳೆಮಿಂಚಿನೊಲೆಸೆವ ನಯನದಾ ಬಾಲಕಿಯರ್ ೭೦

ಮುತ್ತಿನ ಮುಡಿಯರ್ ಸಲೆ ನವ
ರತ್ನದ ಮುಡಿಯವರು ನೀಲಕುಂತಲದೊಳ್ ತಾಂ
ಸುತ್ತಿದ ಹೂವಿನ ಮುಡಿಯವ
ರಿತ್ತರದೊಳ್ ನಿಂದು ವಿಟರನೊಲಿಸುತ್ತಿರ್ಪರ್ ೭೧

ಎಲಚಿಯ ಫಲ ಸಾದೃಶ್ಯದ
ಮೊಲೆಯರ್ ನೀರಜದ ಮೊಗ್ಗೆ ಮೊಲೆಯರ್ ಬೆಳಗಾಯ್
ಮೊಲೆಯರ್ ಕಂತುಕ ಮೊಲೆಯರ್
ವಿಲಸಿತ ತೆಂಗಾಯ ಮೊಲೆಯ ಸೊಬಗಿಯರೆಸೆದರ್ ೭೨

ಪರಿಮಳಿಪ ಬೊಂಬೆಗಳಿಗಾ
ಭರಣಂಗಳ ತೊಡಿಸಿ ದೇಸಿ ಮಿಗೆ ಪರಿಪರಿಯಂ
ಬರಗಳ ನುಡಿಸಿದರೆನಲಾ
ತರುಣಿಯರೋರಂತೆ ವಿಟರನೊಲಿಸುತ್ತಿರ್ಪರ್ ೭೩

---

[1] ನ್ಗಳ (ಚ)

ಅರಸಂಚೆಗೆ ನಡೆಗಲಿಸುವ
ಪರಪುಟ್ಟಗೆ ಸರವನಜುಪುವರಗಿಳಿಗಳ್ಗಾ
ದರದೆ ಮೃದುನುಡಿಯ ಪೇಳುವ
ಹರಿಣಾಕ್ಷಿಯರಿರ್ಪರೊಲಿದು ವಿಟಜನಸಹಿತಂ ೭೪

ವಚನ : ಅಂತು ನೋಡುವರ ಕಣ್ಗೆ ಮಂಗಳವಾಗಿ ಶೃಂಗಾರಕ್ಕೆ ಬಂಗಾರಮಾದ ಬಾಲಕೀವ್ರಜಮಿರ್ಪ ಸೂಳೆಗೇರಿಯಿಂ ಮುಂಪೆ

ಕಂದ : ಗಜಯೂಥದ ಶಾಲೆಗಳಿಂ
ವಿಜಯಾಶ್ವ ಸಮೂಹಮಿರ್ಪ ಲಾಯುಗಳಿಂದಂ
ಧ್ವಜದ ಕಾಲಾಳ ರಥಿಕ
ವ್ರಜಮಿರ್ಪಾಗಾರದಿಂದೆ ಕಂಗೊಳಿಸಿರ್ಕುಂ ೭೫

ಕರಣಿಕರ ತಿಂತಿಣಿಯು ಶಿ
ಷ್ಟರ ತಂಡದ ಮಂತ್ರಿದಂಡನಾಥರ ಯೂಥದ
ವರ ಸಚಿವ ರಾಜಪುತ್ರರ
ನೆರವಿಗಳಿಂದಾವಗಂ ವಿರಾಜಿಸುತಿರ್ಕುಂ ೭೬

ಮಣಿಪದ ಮಹಾಪದಂಗಳ
ವೆಣಿಕೆಯ ಪದಿನೆಂಟು ತೆಱದ ಧಾನ್ಯಗಳಿರ್ಪಾ
ಕಣಜಂಗಳ ಸಾಲುಗಳಿಂ
ಗಣಿಸುವ[1]ಡ[1]ರಿದೆನಿಸಿ ಮೆಱೆವವಾ ಪುರವೆಡೆಯೊಳ್ ೭೭

ವಚನ : ಮತ್ತಮಾ ರತ್ನಾವತೀ ಪುರಮಧ್ಯದೊಳಿರ್ಪರಮನೆ ಭುವನಕ್ಕಭಿನವಮೆನಿಸಿರ್ದುದ ದೆಂ[2]ತೆನೆ[2]

ಕಂದ : ಚಂದ್ರಗೆ ಪರಿವೇಷಂ ತಾಂ
ಬಂದಿರ್ಪವೊಲರಸುಗೃಹದ ಪೌಳಿಯ ಕೋಟೆಯ
ಚಂದಮನೇನಂ ಪೇಳ್ವೆಂ
ನಿಂದಿರೆಯೊಲಿದಿರ್ಪ ಪದ್ಮದಂತೆಸೆದಿರ್ಕುಂ ೭೮

ಆ ರಾಜಭವನ ಮಧ್ಯದೊ
ಳಾರಾಜಿಪವಖಿಲ ಗೃಹಗಳುಪ್ಪರಿಗೆಗಳಿಂ
ದಾ ರಾಜರತ್ನಖಚಿತದ
ಲಾ ರಾಜಾಧೀಶಗೆಸೆವ ಸಜ್ಜೆಯ ಮನೆಗಳ್ ೭೯

---

[1] ರ (ಚ) [2] ತೆಂದೊಡೆ (ಚ)

ಅರಮನೆವಾಗಿಲ ಚಾವಡಿ
ಯುರುತರ ನವರತ್ನ ಕಳಶ ಕನ್ನಡಿ ತೋರಣ
ವರಸಚಿವ ರಾಜಪುತ್ರರ
ನೆರವಿಗಳಿಂದಾವಗಂ ವಿರಾಜಿಸುತಿರ್ಕುಂ ೮೦

ನವನಿಧಿಗಳಿಪ್ಪ ಭಂಡಾ
ರವನುಗ್ರಾಣಗಳ ಬೊಕ್ಕಸಂಗಳ ಮನೆ[1]ಗಳ್
ಅ[1]ವನೇನ ಪೇಟಿಪ್ಪನೀ ಭೂ
[2]ಭು[2]ವನಕ್ಕಾಶ್ಚರ್ಯವಾಗಿ ಕಣ್ಗೆಸೆದಿರ್ಕುಂ ೮೧

ನಾಟಕಶಾಲೆಯು ಮೋಹನ
ದಾಟದ ಮೇಳವದ ಗೀತವಾದ್ಯದ ನೃತ್ಯದ
ಚಾಟದ ರೂಪಿನ ಸೊಬಗಿನ
ಕೂಟದ ಬಾಲಕಿಯರಲ್ಲಿ [3]ಕೆಂ[3]ಗೊಳಿಸಿ[4]ಪ್ಪರ್[4] ೮೨

ಶಾರ್ದೂಲವಿಕ್ರೀಡಿತ

ಅಂತೊಪ್ಪಂಬಡೆದಿರ್ದ ರಾಜಗೃಹದೊಳ್ ಸಂದಿರ್ದನಾ ರಾಕ್ಷಸಂ
ಸಂತಂ ದೈತ್ಯಹಿರಣ್ಯಕಂ ಮುದದಿನುದ್ವಾಹಾರ್ಥದಿಂ ಪ್ರೇಮದಿಂ
ಸಂತೋಷಂಬಡೆದಿರ್ದು ರೂಪವತಿಯಪ್ಪಾ ಬಾಲೆಯಂ ಲೀಲೆಯಿಂ
ದಂ ತಾನೊಲ್ದು ವಿವಾಹವಾಗಿ ಸುಖದಿಂದಿರ್ದಂ ಮನೋರಾಗದಿಂ ೮೩

ವಚನ : ಅಂತು ಹಿರಣ್ಯಕಶಿಪು ಸಂತೋಷದಿಂದಿರುತಂ ತನ್ನ ತಮ್ಮ ಹಿರಣ್ಯಾಕ್ಷನಂ ಕಮಲಾಕ್ಷಂ ವರಹಾವತಾರದಿಂ ಕೊಂದುದಂ ನೆನೆದು ಇನ್ನಾವ ಪರಿಯಿಂ ಪನ್ನಗ ಶಾಯಿಯಂ ಕೊಲ್ವೆನೆಂದು ಆ ಹರಿಧ್ಯಾನದಿಂದಿರೆಯಿರೆ

ಕಂದ : ತರುಣೀ[5]ಕುಲಮಣಿಯತಿ ಸುಂ[5]
ದರಿ [6]ರಕ್ಕಸ[6]ನರಸಿ ರೂಪವತಿ ಸೂತಕಮಿಂ
ದಿರ[7]ಲವಳೊಡ[7]ನಾ ದನುಜಂ
ನೆರೆಯಲ್ ನಿಜಗರ್ಭದುದಯಮಾದತ್ತಾಗಳ್ ೮೪

ವಚನ : ತದನಂತರಂ ಮುಂದೆ

---

[1] ಗಳಸ (ಚ) [2] ಭ (ಚ) [3] ಸಂ (ಗ) [4] ಹರ್ (ಗ ಚ) [5] ಕುಲೋತ್ತಮೆ ಕಡು ಸೌಂ (ಚ) [6] ಹಿರಣ್ಯಕ (ಚ) [7] ಲಾಕೆಯ (ಚ)

ಕಂದ : ಲೋಕಾಲೋಕವನೆಲ್ಲವ
ನಾಕರಿಸಿಯೆ ಕೊಂಡ [1]ರಾಕ್ಷಸಪತಿಗೆ ಮರ್ದ್ದಂ[1]
ಶ್ರೀಕಾಂತಂ ಮರ್ದಿಸಲು
ದ್ರೇಕಿ ಹಿರಣ್ಯಕನುಮವನ ಹರಿಬ[2]ಕ್ಕಾಗಲ್[2] ೮೫

ಮತ್ತೇಭವಿಕ್ರೀಡಿತ
ಹರಿಯೊಳ್ ಪಂಕಜಜಾತನೊಳ್ ಸುರಪನೊಳ್ ದೇವಾದಿದೇವರ್ಕಳೊಳ್
ಧುರದೊಳ್ ಕಾದುವೆ ಸೀಳುವೆಂ ಮಡುಹುವೆಂ ದಂಡಂಗಳಂ ಮಾಱ್ಪೆನೆಂ
ದುರುದೈತ್ಯೇಂದ್ರ ಹಿರಣ್ಯಕಂ ಧಗಧಗಿಲ್ ಭೋರೆಂಬ ಕೋಪಾಗ್ನಿಯಿಂ
ದುರಿದೆದ್ದಾಗ ಜಗಂಗಳಂ ಸುಡುವೆನೆಂದಾಟೋಪಮಂ ಮಾಡಿದಂ ೮೬

ವಚನ : ಮತ್ತಮಲ್ಲದೆ

ಮತ್ತೇಭವಿಕ್ರೀಡಿತ
ಪರಿದಾಂ ಪೋಗಿ ಮುಕುಂದನೂರ ತುಡುಕಲ್ ಮೇಲೆತ್ತುವೆಂ ಮುತ್ತುವೆಂ
ಹರಿ ಮುಂ ಪೊಕ್ಕಿಹ ಹಾಲಹಳ್ಳದೆಡೆಯಂ ನಾಂ ಸಾರುವೆಂ ಪೀರುವೆಂ
ಮುರವಿಧ್ವಂಸಕ ಮತ್ತೆ ಹಂದಿಯೆನಿಸಲ್ಕಾಂ ತೂಳುವೆಂ ಸೀಳುವೆಂ
ಇರಲಲ್ಲಿಂ ತೆಗದೋಡಿ ಪೋದಡೊದಗಿಂ ಬೆಂಬತ್ತುವೆಂ ಸುತ್ತುವೆಂ ೮೭

ವಚನ : ಮತ್ತಮದಲ್ಲದೆ ನಾರಾಯಣನು

ಮತ್ತೇಭವಿಕ್ರೀಡಿತ
ಇದಿರಾಗಲ್ ಚತುರಂಗಮಂ ತುಳಿಸುವೆಂ ಕೈದೋಱುವೆಂ ಮೀಱುವೆಂ
ಅಧಟಂ ತೋಱಿದೊಡ್ಡೈದೆ ಮೇಣ್ ತಲೆಗಳಂ ಸಾಲಿಕ್ಕುವೆಂ ಮುಕ್ಕುವೆಂ
ಬೆದಱುತ್ತೆನ್ನನೆ ಬಂದು ಸಾರೆ ಸೆಱೆಯಿಟ್ಟಾನಾಳುವೆಂ ತೂಳುವೆಂ
ಕದನೋತ್ತಂಸಕ ತಮ್ಮನಂ ಹರಿಯು ಸೀಳ್ದಾಂ ನೋಡುವೆಂ ಕೂಡುವೆಂ ೮೮

ವಚನ : ಅಂತಾಸ್ಫೋಟಿಸಿ ಗದ್ದುಗೆಯಂ ಹೊಯ್ದೆದ್ದು ಸೇನಾಸನ್ನಾಹವಂ ಕರೆಯೆಂ ಬನಿತಱೊಳೆ

ಕಂದ : ಕೆಸಱೊಳ್ ತಾವರೆ ಮೂಡಣ
ದೆಸೆಯೊಳಗಿನಬಿಂಬಮುದಧಿಯೊಳ್ ಕೌಸ್ತುಭಮಿಂ
ತೊಸೆದುದಿಸಿದಂತಿರಾ ರ
ಕ್ಕಸಿಯುದರದೊಳೈದೆ ಜನಿಸಿದಂ ಪ್ರಹ್ಲಾದಂ ೮೯

---

1 ಹಿರಣ್ಯಕಾಕ್ಷಗೆ ಮದ್ದಂ (ಚ) 2 ಕ್ಕೋಸುಗ (ಚ)

ವಚನ : ಅಂತು ಜನಿಯಿಸಲೊಡಂ

ಮತ್ತೇಭವಿಕ್ರೀಡಿತ

ಗುಡಿಯಂ ಕಟ್ಟಿಸು ಭೇರಿಯಂ ಪೊಡೆಸು ಕಾರಾಗಾರ ಗೀರ್ವಾಣರಂ
ಬಿಡಿಸುರ್ವೀ ಸುರಸಂಪ್ರದಾಯರ ಸುವರ್ಣಾಗಾರಮಂ ಕೂಡು ಮೆ
ಲ್ನುಡಿಯಿಂ ಸತ್ಕವಿ ಗಾಯಕರ್ಗೆ ಹಣಮಂ ಚೆಲ್ಲಕ್ಕಱಿಂ ಪುತ್ರನಂ
ಪಡೆದಳ್ ದೇವರ ರಾಣಿಯೆಂದೊದಱಿದರ್ ಕೈಸೂಱೆಯಿಂ ಸೇವಕರ್ ೯೦

ಕಂದ : ಎಂದೆನಿಪ ನುಡಿಯ ಕೇಳ್ದಾ
ನಂದರಸಂ ರಕ್ಕಸಂಗೆ ಸೂಸುತ್ತಿರೆ ಗೋ
ವಿಂದನ ಮುಳಿಸಂ ಮುಱಿದಂ
ಕಂದನ ಸಂತೋಷವಾರ್ತೆ ಬಿಡಿಸದೆ ಪೇಱ್ತಂ ೯೧

ವಚನ : ಅಂತು ಸಂತೋಷವಾರ್ತೆಯಿಂ [1]ಸಂತುಷ್ಟಚಿತ್ತನಾಗಿ[1] ಬೇಡಿದವರ್ಗೆ ಬೇಡಿದುದುಂ ಕೊಟ್ಟು ದೈವಜ್ಞರಂ ಕರೆಸಿ ಶಿರೋದಯಕಾಲಮಂ ಪೇಱ್ವುದುಂ

ಕಂದ : ನವದಶತಾರೆ ವಿಷಂ ಪಾ
ತವಿದರ್ಭಕನೆಡೆಗೆ ಲೇಸು ಪಿತೃಗಂಡಂ ಪೇ
ಱುವಡಿವ ಮೂರ್ಖನೆನುತ್ತುಂ
ಜವ ವಾರ್ತೆಯ ಪೇಱೆ ಗುಣಿಕರತ್ತಲ್ ಸರಿದರ್ ೯೨

ವಚನ : ಅಂತವರತ್ತಲ್ ಪೋಗಲಿತ್ತಲ್

ಕಂದ : ಪ್ರಹ್ಲಾದನುದಿಸೆ ಲೋಕ
ಕ್ಕಾಹ್ಲಾದವಿದಾಯ್ತು ಸಕಲಸುರಮುನಿನಿಕರ
ಕ್ಕಾಹ್ಲಾದಮಿದಾಯ್ತು ಭಕ್ತರಿ
ಗಾಹ್ಲಾದಂ ಪರಮಃ ಭಾಗವತತತಿಗೆಲ್ಲಂ ೯೩

ಹರಿಯಂ [2]ಜಾ[2]ನಿಸುತಿರ್ಪಂ
ಹರಿಯಂ ಚಿಂತನೆಯ ಮಾಡುತಿರ್ಪನಜಸ್ರಂ
ಹರಿಯ ಕೊಂಡಾಡಿ ಪಾಡುವ
ಹರಿಯಂ ನೆನೆವುತ್ತೆ ಬೆಳೆದನಾ ಪ್ರಹ್ಲಾದಂ ೯೪

---

1 ಸಂತೋಷಾರ್ಥ ಹೃದಯನಾಗಿ (ಚ) 2 ಧ್ಯಾ (ಚ)

ಚಂಪಕಮಾಲೆ

ಪೊಡೆಮಗುಳ್ವಂಬೆಗಾಲ್ ಮಿಸುಪ ದಟ್ಟಡಿ ಮುಂಪರಿದಾಟವಾ ತೊದ
ಳ್ನುಡಿ ಮಱೆಗುಮ್ಮ ಚಂಡುಗುಳಿಯಾಟವನಾಡುತಲಾಱುವತ್ಸರಂ
ನಡೆದುದು ಸಂತತಂ ಕುಮುದಶೇಖರ ವಿಷ್ಣುಪದಾಬ್ಜಭೃಂಗ ಪೊ
ನ್ನುಡೆ ಕಿಱುಗೆಜ್ಜೆಯಿಂಚರದ ಪಂಚಸರಂ ಪ್ರಹಲಾದದೇವಗಂ ೯೫

ಉತ್ಪಲಮಾಲೆ

ಈ ತೆಱದಿಂ[1]ದಲಾ[1] ಹರಿಪರಾಯಣನಾ ಪ್ರಹಲಾದದೇವನು
ರ್ವೀತಳದಲ್ಲಿ ಶೈಶವದೊಳಾಡುತಮಿರ್ದವಗೇೞುವತ್ಸರಂ
ಪ್ರೀತಿಯೊಳಾಗಲಾತಗುಪದೇಶಿಸಲೆಂದು ಹಿರಣ್ಯಕಂ ಮಹಾ
ಖ್ಯಾತರೆನಿಪ್ಪ ದಿಮ್ಮಿದರಿಗಟ್ಟಿದನಾ ಚರರಂ ಜವೋ[2]ಥ[2]ದಿಂ ೯೬

ಕಂದ : ಪರಿತಂದು ಚರರು ಹಿರಿಯರ
ಚರಣಕ್ಕಭಿನಮಿಸಿ ನಿಂದು ಕೈಮುಗಿಯುತ್ತುಂ
[3]ಸುರವೈರಿ[3] ನಿಮ್ಮನೀ[4]ಗಳೆ[4]
ಬರ[5]ವೇೞ್ದನೆಂ[5]ದು ಪೇೞ್ದರಾಚಾರ್ಯರ್ಗಂ ೯೭

ಪೇೞಲವರುತ್ತರೋತ್ತರ
ವೇಳೆಯಿದೆಂ[6]ದೞಿ[6]ದು ಶಕುನಮಂ ನೋಡುತ ಸ
ಲ್ಲೀಲೆಯೊಳೈತರಲಾ ಜಯ
ಲೋಲ ಹಿರಣ್ಯಕನು ಹಿರಿಯರಂ ಮನ್ನಿಸಿದಂ ೯೮

ವಚನ : ಅಂತಾಚಾರ್ಯರಂ ಮನ್ನಿಸಿ ಪ್ರಹ್ಲಾದದೇವಂಗೆ ವಿದ್ಯಾಭ್ಯಾಸಮಂ ಮಾಡಿ[7]ಸಿ
ಯೆ[7]ನಲು ಮಹಾಪ್ರಸಾದವೆಂದು

ಕಂದ : ಸುರವೈರಿಗೆ ಪಂಚತ್ವಂ
ಸ್ಥಿರಮೆಂದೆಂಬೈದುವರ್ಣಮಂ ನೆಲದೊಳುಪಾ
ಧ್ಯರು ಬರೆದು ಕುವರ ಬಾ ನೀಂ
ಬರೆಯೆನೆ ನಾರಾಯಣಾ ಎನುತ್ತಂ ಬರೆದಂ ೯೯

[8]ಆನೇನ[8] ಬರೆಯ[9]ವೇೞ್ದಿಡೆ[9]
ನೀನೇನಂ ಬರೆದೆಯೆಂದು ಶಿಕ್ಷಕರೆನಲಂ
ಭೋನಿಧಿಶಾಯಿಯೆ ಕೃಷ್ಣನೆ
ದಾನವಕುಲವೈರಿಯೆಂಬುದನೆ ಪೇೞ್ದಂದಂ ೧೦೦

---

[1] ದೆ ಶ್ರೀ (ಚ) [2] ಥ (ಚ) [3] ಹಿರಣ್ಯಕ (ಚ) [4] ಕ್ಷಣ (ಚ) [5] ಹೇೞ್ವನೆಂ (ಚ) [6] ದೆನುತ (ಚ) [7] ಯೆ (ಚ) [8] ಏನನಾಂ (ಗ ಚ) [9] ಪೇೞ್ದರೆ (ಚ)

ವಚನ : ಅಂತಲ್ಲಮೆಂದುಪಾಧ್ಯರ್ [1]ಪೇೞ್ದು[1]

ಕಂದ : ಮೇಲುಪಂತಿಯನು ಬರೆದರ್
ಲೀಲೆಯೊಳೆ ನಮಃಶಿವಾಯ ಎಂಬಕ್ಕರಮಂ
ಬಾಲ ಪ್ರಹ್ಲಾದ[2]ನೀ[2]ನಿದ
ನಾಲೋಕಂ ಮಾಡಿ ಬರೆದು ಪೇೞನುತಿ[3]ರ್ದರ್[3] ೧೦೧

ಎನಲಾ ಪ್ರಹ್ಲಾ[4]ದಂ ತಾಂ[4]
ಘನಮಹಿಮಾಸುರವಿಮರ್ದನಾ ಜಲಶಯನಾ
ಘನಮಹಿಮ ವಿಷ್ಣು ಹರಿಹರಿ
ಎನುತುಂ ಬರೆದೋದಿದಂ ವಿವೇಕಿಗಳರಸಂ ೧೦೨

ವಚನ : ಎನಲಾ ಉಪಾಧ್ಯರ್ ಪ್ರಹ್ಲಾದನಂ ಕೋಪಿಸಿ ರಾಜಕುಮಾರನೆಂದು ಕೊಲಲಂಜಿ

ಕಂದ : ಬೇಡ[5]ವಿದ[5]ಮಾತನೆಮ್ಮೊಡ
ನಾಡುವರೇ ಸೆಣಸನೆಲೆ ಕುಮಾರಕ ಎನಲಾ
ನಾಡಿದುದಾವುದು ಪೇೞನೆ
ನಾಡಱಿಯಲು ವಿಷ್ಣುವೇ ಜಗನ್ಮಯನೆಂದೆಂ ೧೦೩

ಹರಿಯೆಂಬಂ ಸುಕುಮಾರಂ
ಹರನೆಂಬನುಪಾಧ್ಯನಿಂತಿರಿರ್ವರ ನುಡಿಯುಂ
ಹರಿಹರ ಹರಿಹರಯೆನಿಪ
ಬ್ಬರ ಮಸಗಿತ್ತಾಗಳಲ್ಲಿ ಮಠದೊಳಗೆಲ್ಲಂ ೧೦೪

ಎನಲುಃ ಗುರುವೀ ಪ್ರಹಲ್ಲಾ
ದನಮೇಲತಿನೊಂದಿವೆಲ್ಲಮಂ ವಿಸ್ತರದಿಂ
ದನುಜೇಂದ್ರಗೆ ಪೇೞುವೆ[6]ನೆಂ
ಪೆನು[6]ತ್ತೆ ಕೋಪಮೊಳೆ ತನ್ನೊಳಗೆ ತಾಂ ತಿಳಿದಂ ೧೦೫

ಇದಱಿಂ ಕೇಡಪ್ಪುದು ತ
ಪ್ಪದು ಮೊದಲಾಂ ಪೋಗಿ ರಾಕ್ಷಸೇಶ್ವ[7]ರನಿಗೆ[7] ಪೇ
ೞ್ವುದು ನೀತಿಯೆನುತೆ ಬಾಗಿಲ
ನೆಪಿಹಾಱುಗೊಳುತ್ತೆ ಸಾರ್ದನಕ್ಕರಪೋಜಂ ೧೦೬

---

[1] ಪೇೞ್ದಂ (ಚ) [2] ಯೋ (ಕ) [3] ರ್ದಂ (ಕ) [4] ದ ದೇವಂ (ಚ) [5] ವೀ (ಚ) [6] ನೆನು (ಚ) [7] ರಗಂ (ಚ)

ವಚನ : ಅಂತು ಬಾಗಿಲಂ ತಳರ್ದು ಪೋಪನಿತಱೊಳೆ ಹಿರಣ್ಯಕಂ ತನ್ನ ತರುಣನಪ್ಪ ಪ್ರಹ್ಲಾದದೇವನೋದುಮಂ ಕೇಳ್ವೆನೆಂದು ಮಠಕ್ಕೆ ಬರುತಿರ್ದನವೆಂತೆಂದೊಡೆ

ಚಂಪಕಮಾಲೆ

ಗರುಡ ನಿವಾಸಕಂ ಫಣಿ ಮೃಗೇಶ್ವರನಲ್ಲಿಗೆ ಸಾಮಜಂ ಕರಂ
ಹರಿಣ ತರಕ್ಷುವಿರ್ದೆಡೆಗೆ ಭಾಸ್ಕರನಲ್ಲಿಗೆ ಮೇಣ್ ತಮಂಧಮುಂ
ಮರುತನಿಹಲ್ಲಿಗಭ್ರನಿಚಯಂ ಬರುತಿರ್ಪವೊಲಾ ಹಿರಣ್ಯಕಂ
ವರಪ್ರಹಲಾದನೋದುವ ನಿಕೇತನಕಂ ಬರುತಿರ್ದನಬ್ಬರಿಂ ೧೦೭

ಉತ್ಪಲಮಾಲೆ

ಬಂದು ಹಿರಣ್ಯಕಾಸುರನು ಶಿಕ್ಷಕರಂಘ್ರಿಸರೋಜಯುಗ್ಮ[1]ದೊಳ್[1]
ವಂದಿಸಿ [2]ಮು[2]ತ್ತುಮಾರನಿರಮೋದುವನೇ ಎನಲಾ ಉಪಾಧ್ಯನಿಂ
ತೆಂದೆನು ಬಾಲಕಂಗಱುಹಲಮ್ಮೆವು ಪೇೞ್ದುದ ಕೇಳನಾತ ಗೋ
ವಿಂದ ಮುರಾಂತಕಾಸುರವಿಮರ್ದನ ಶ್ರೀಹರಿಯೆಂಬನಾವಗಂ ೧೦೮

ಶಾರ್ದೂಲವಿಕ್ರೀಡಿತ

ಬೇಡೀ ಮಾತು ಕುಮಾರಕಾ ನಿನಗೆ ಸಾಂಗತ್ಯಂಗಳಲ್ಲಿಂದೆನಲ್
ಮಾಡೂದೇನೆನುತಾವಗಂ ಸೆಣಸುವಂ ನಮ್ಮಲ್ಲಿ ದುಶ್ಚೇಷ್ಟೆಯಂ
ಮಾಡುತ್ತಂಜದೆ ಪೇೞ್ದುದಂ ಮುಱಿ[3]ಯು[3]ತುಂ ತಾನೊಂದನೆಂದೋದುತುಂ
ಱೋಡಾಡುತ್ತಿಹನಾತನಿಂದೆಮಗಸಾಧ್ಯಂ ಕೇ[4]ಳ್ ದನುಪ್ರೋ[4]ದ್ಭವಾ ೧೦೯

ಕಂದ : ಸುರಕುಲವನ ದಾವಾನಲ
ಬರಸಲ್ಕಳವಲ್ಲ ನಿನ್ನ ಕುವರನನೊಂದೆಂ
ದರೆಯೊಂಬತೆಂಬನಾತನ
ಹರಿಯೆಂ[5]ಬಾ[5] ಗ್ರಹವೆ ಪಿಡಿದುದಂಜುವೆನೆಂದಂ ೧೧೦

ವಚನ : ಎಂದ ನುಡಿಯಂ ವೃಂದಾರಕಾರಾತಿ ಕೇಳ್ದು ಕೋಪಮಂ ತಾಳ್ದು

ಕಂದ : ಕರೆ ಎಲ್ಲಿಯ ಮಾತೆನುತುಂ
ಬರವೇೞ್ಕಱಿಂದೆನಲು ಬಂದನಾ ಪ್ರಹ್ಲಾದಂ
ಬರೆಯೆಂದೆನೆ ಹರಿಯೆಂದೇ
ಬರೆದಂ ರಕ್ಕಸನ ಮರಣಮಂತ್ರಮ ಬರೆವೊಲ್ ೧೧೧

---

[1] ಕಂ (ಚ) [2] ಸ (ಚ) [3] ವು (ಚ) [4] ಳದನುಜೋ (ಚ) [5] ಬ (ಚ)

ಬರೆಸಿದರಾರಿದ ನೀನೆಃ
ಬರೆವೆಯೊ ಬಡಪಾರ್ವ ಬರೆಸಿದನೊ ಪೇೞನೆ ಮುಂ
ಬರೆದಂ ಪಣೆಯೊಳ್ ಕೃಷ್ಣಂ
ಽ ರೆಸುವ ಜಡಮತಿಗಳಿಚ್ಛೆಗಾಂ ಬರೆದಪೆನೇ ೧೧೨

[1]ಎಂದಾತಂ ಪೇೞಲ್[1] ದನು
ಜೇಂದ್ರಂ ಕಡುಗೋಪದಿಂದ[2]ಲಾ[2] ಪ್ರಹ್ಲಾದಂ
ಗೆಂದನೆಲೆ ಮಗನೆ ನೀನೇ
ನೆಂದೋದುವೆ ಏನಬರೆಪೆನೆ ಱುೞನುತಿರ್ದಂ ೧೧೩

ಎನ[3]ಲಾ[3] ಪ್ರಹ್ಲಾ[4]ದಂ ತಾಂ[4]
ದನುಜೇಂದ್ರಂಗೆಂದನೇನನೋದುವೆ ಎಂದೆ
ನ್ನನೆ ಕೇಳ್ವೆ ದಿವ್ಯಮನುಮುನಿ
ಜನನಱಿಯದ ವಸ್ತುವದನು ನೀನೆಂತಱಿವೈ ೧೧೪

ಎಂ[5]ದೆನೆ[5] ಹಿರಣ್ಯಕಾಸುರ
ಕಂದನ ನೀನಱಿವ ವಸ್ತುವಾವುದು ಪೇೞಾ
ದೆಂದೆನಲು ಕೃಷ್ಣ ಹರಿ ಗೋ
ವಿಂದಾ ಎಂದೋದುತಿರ್ದನಾ ಪ್ರಹ್ಲಾದಂ ೧೧೫

ಮಗನೇ ನೀಂ ಪೇೞ್ದ[6]ತಂ[6]
ಪಗೆಯುವನಂ ಪೆಸರುಗೊಂಬರೇ ಬೇಡೆನಲೀ
ಜಗಕೆಲ್ಲ ವಿಷ್ಣುವಲ್ಲದೆ
ಮಗುೞ[7]ರ್ವ[7]ಂ ನಾಸ್ತಿ ಎಂದನಾ ಪ್ರಹ್ಲಾದಂ ೧೧೬

ಒಡ್ಡಾರವೇಕೆ ನವ್ಮೊಳು
ಕಡ್ಡತನಂ ಬೇಡ ವಿಷ್ಣುವೆಂಬುದ ಮಱೆ ಈ
ಗೊಡ್ಡಾಟದಿಂದ ಕಿಡದಿರು
ಕಡ್ಡಿಯ ಪಿಡಿದೀಗ ಸಾಱ[8]ವೆಂ ನಿನಗೆಂದಂ[8] ೧೧೭

---

1 ಎಂದು ಪೇಳ್ದ್ಸೆಯಾ (ಚ) 2 ವಾ (ಚ) 3 ಲು (ಚ) 4 ದ ದೇವು (ಚ)
5 ದಡೆ (ಚ) 6 ವಂ ಕುಲ (ಚ) 7 ಬ್ಬಂ (ಚ) 8 ದೆನೆಂದಂ (ಚ)

ಆ ಕಡಿ ಪಿಡಿದು ಸಾಱುವೆ
ನಾ ಕಾಂತಗೆ ನಿನಗೆಯುಪ್ಪುದಿದು ಸಿದ್ಧಾಂತಂ
ನಾ ಕೆಡುವುದಿಲ್ಲ ಲೋಕಕೆ
ಶ್ರೀಕಾಂತನೆ ದೈವವೆಂದನಾ ಪ್ರಹ್ಲಾದಂ ೧೧೮

ಎನಲು ಛಿಟಿಲ್ ಛುಗಿಲೆನುತುಂ
ದನುಜ ಹಿರಣ್ಯಕನು ಕೋಪದಿಂದುರಿದೆದ್ದೀ
ತನು ಮಗನೆ ನಮಗೆ ಹಗೆಯೆಂ
ದೆನುತಾಕ್ಷಣ ಶಿಕ್ಷೆಗೈಯಲೀಕ್ಷಿಸುತಿರ್ದಂ ೧೧೯

ಬಿನುಗುನುಡಿಯೇತಕೆಲೊ ಲೋ
ಕನಿಕಾಯಕ್ಕಿವನು ದೇವನೇ ಬಿಡು ಮಾತಂ
ತನಯನೆನುತ್ತುಂ ಸೈರಿಸಿ
ದೆನು ಮಗುಚಾಡಿದರೆ ರಸನ ವಿರಸನಗೈವೆಂ ೧೨೦

ವಚನ : ಅಂತು ಕೋಪಿಸಿ ನೋಡಿ ಮುಂದಿರ್ದ ದೂತರಂ ಕರೆದು

ಕಂದ : ಕಡುಗೋಪದಿಂ ಹಿರಣ್ಯಕ
ಕಿಡಿಕಿಡಿಯಾಗುತ್ತೆ ಪಗೆಯುಮಂ ಸಾಮಜಕೀ
ಗಡಗೆಡಹಿದಪೆನೆನುತ್ತುಂ
ನುಡಿಯಲ್ಕಾ ದೂತರೀತನಂ ಪಿಡಿತಂದರ್ ೧೨೧

[1]ತಂದಿವನಂ ಮದದಾನೆಯ[1]
ಮುಂದಿರಿಸಲ್ ನರಹರೀ ಕೃಪಾಳುಗಳರಸಾ
ಅಂದು [2]ನೀ ಗಜವ[2] ಸಲಹಿದೆ
ಇಂದೆನ್ನಂ ಕಾ[3]ವು[3]ದೆಂದನಾ ಪ್ರಹ್ಲಾದಂ ೧೨೨

ಎನ[4]ಲಾ ಗಜವೀ[4] ಪ್ರ[5]ಹ್ಲಾ[5]
ದನ ನುಡಿಯಂ ಕೇಳ್ದು ನಮ್ಮ ಪೂರ್ವದ ಗಜರಾ
ಜನ ಸಲಹಿದಾದಿಮೂಲನ
ನೆನೆದಪನೀ ಪರಮವೈಷ್ಣವನ ಕೊಲಬಹುದೇ ೧೨೩

---

1 ತಂದು ಮದಸೊಕ್ಕಿದಾನೆಯ (ಚ) 2 ಯೂಥಪನ (ಕ) 3 ಯ್ಯು (ಚ) 4 ಲಾನೆಯಿಃ (ಚ) 5 ಹಲ್ಲಾ (ಚ)

ಉತ್ಪಲಮಾಲೆ

ಎಂದಿಭರಾಜನೀ ಪರಮುನ್ಯೆಷ್ಣವನಂ ಕೊಲಲಂಜಿ ಬೇಗದಿಂ
ಸಿಂದಕೆ ಸಾರ್ದು ಪೋಗಲದ ಕಂಡು ಹಿರಣ್ಯಕದೂತರೀತನಂ
ತಂದು ನಗಾಗ್ರದಿಂದುರುಳ ನೂಕಿದೊಡಾ ಪ್ರಹಲಾದನೇವ ಗೋ
ವಿಂದ ಖಗೇಶವಾಹನನೆ ಕಾಯೆನಲಾ ಉರಗಾರಿಯೈದಿದಂ ೧೨೪

ವಚನ : ಅದೆಂತೆಂದೊಡೆ

ಕಂದ : ಆ ಗರುಡ ಬಂದು ಹರುಷದ
ಲಾ ಗಿರಿಯಿಂದುರುಳಿಬಿಟ್ಟ ಬಾಲಕ[1]ನ ಕರಂ[1]
ಬೇಗ[2]ದಿನಾನುತೆ[2] ಬೆನ್ನಿನೊ
ಳಾಗಂ ಮಹಿಯಲ್ಲಿಗಿಳುಹಿ[3]ದಂ[3] ವಿಸ್ಮಯ[4]ದಿಂ[4] ೧೨೫

ದೂತರಿದ ಕಂಡು ಬಾಲಕ
ನೀತಜಿತೂಳಂ ಸಾಯನೆಂದು ವಿಭುಗಱುಹಿದೊಡಂ
ದಾತನಿಂತೆಂದ ಶರಧಿಯೊ
ಳೀ ತರುಣನ ನೂಕಿ ಬೆಟ್ಟಮಂ ಹೇಱಿತಂದಂ ೧೨೬

ಎನೆ [5]ದಡಿಗ[5]ರಕ್ಕಸರ್. [6]ಬಾ[6]
[7]ಲನನಬುಧಿ[7]ಯೊಳದ್ದಿ ಶೈಲಮಂ ಹೇಱಿಲ್ಕಂ
ವನಧಿಶಯ [8]ಕಮಲ[8]ಲೋಚನ
ಘನ ಮಂದರಧಾರಿ ಎನಲು ಹರಿ ರಕ್ಷಿಸಿದಂ ೧೨೭

ದೋಧಕ

ಶ್ರೀ ಹರಿನಾರಯಣಾ ಕಮಲಾಕ್ಷಾ
ರೌಹಿಣೆಯಾನುಜ ಕೃಷ್ಣನೆ ನೀ ವೈ
ದೇಹಿಯ ವಲ್ಲಭನಂಬುಜನಾಭಾ
ಪಾಹಿ ಕೃಪಾಕರ ತ್ರೈಜಗದೀಶಾ ೧೨೮

---

1 ಸಂ ಕರ (ಚ) 2 ದಿಂದಾತುಂ (ಚ) 3 ದ (ಚ) 4 ದಿ (ಚ) 5 ಸಱಿಂಗ (ಚ)
6 ವಿಾ (ಚ) 7 ತನನಬ್ಧಿ (ಚ) 8 ಸಬ್ಜ (ಚ)

ಕಂದ : ಮಂದರಧರ ಜಲಶಯನಾ
ಎಂದೆನಲಾ ಶೈಲ ತೇಲಿತಾ [1]ಬಾಲಕನಂ[1]
[2]ಅಂ[2]ದುದಧಿ ಪಾರವೇ[3]ಱಿ[3]ಸಿ
ತೆಂದೆನಲಾ ವಿಷ್ಣುಭಕ್ತ[4]ರಿಂಗಿದಿ[4]ರುಂಟೇ ೧೨೯

ಇದನಱಿದು ಮಱಿಯದಾ [5]ಸ[5]ಱಿ
ಹೃದ[6]ಯಂ ರಕ್ಕಸ[6]ನು ಮುಂದುಗಾಣದೆ ಕೋಪಾ
ಸ್ಪದನಾ ಪ್ರಹ್ಲಾದ[7]ನನಾ[7]
ಗದಗದಿಸುವ ವೀತಿಹೋತ್ರನೊಳ್ ನೂಕೆಂದಂ ೧೩೦

ಹಿರಣ್ಯಕನಿಂಧನತತಿಯಂ
ಭರ[8]ದಿಂ[8] ತಂದೊಟ್ಟೆ ಹವ್ಯವಾಹನನಂ ತಂ
ದುರುಹಿಯೆನಲಸುರರಾಕ್ಷಣ
ಗಿರಿಯುದ್ದಕೆ ವಿಶ್ವದಾನಿಗಳನಿರಿಸುತ್ತಂ ೧೩೧

ಲೋಹಿತಾಶ್ವಂಗೆ ಶುಷ್ಕಮ
ನಾಹುತಿಯಂ ಕೊಟ್ಟಡುರಿ ಛಿಟಿಲ್ ಛಿಟಿ[9]ಲೆನ್ನು[9]
ತ್ತಾ ಹವ್ಯವಾಹನಂ ಮಿಗೆ
ಮೋಹಿಸಿತಾ ವ್ಯೋಮಮಂಡಲವನದ್ಭುತದಿಂ ೧೩೨

ಮತ್ತೇಭವಿಕ್ರೀಡಿತ

ಉರಿಯಂ ಕಂಡು ಹಿರಣ್ಯಕಂ ತನುಜನಂ ಕೊಂಡೊಯ್ದು ಪೋಗೆಂದೊಡಾ
ಚರರಂದಾ ಪ್ರಹಲಾದನಂ ಪಿಡಿದುತಂದಾ ವಹ್ನಿಯೊಳ್ [10]ನೂಂಕಲುಂ[10]
ಹರಿಯೇ ಭಕ್ತಕೃಪಾವಪಾರಮಹಿಮಾ ಕ್ಷೀರಾಬ್ಧಿವಾಸಾ ಎನಲ್
ಉರಿಯೇ ಚಂದನಶೀತಲಂ ತರುಣಸಿಂಗಾಯಿತ್ತದೇಂ ಬಣ್ಣಿಪೆಂ ೧೩೩

ವಚನ : ಅಂತು ನಾನಾ ಉಪದ್ರವಗಳೆಲ್ಲಂ ಪ್ರಹ್ಲಾದಂಗುಪಕಾರಿಗಳಪ್ಪುದಂ ರಾಕ್ಷಸೇಶ್ವ[11]ರಂ[11] ಕಂಡು ವಿಷಪ್ರಯೋಗಮಂ ಮಾಡುವೆನೆಂದು ವಿಷಭೋಜನಂಗಳಂ ಕುಡಲುದ್ಯುಕ್ತನಾಗಿ

---

[1] ಪ್ರಹ್ಲಾದನ (ಗ ಚ) [2] ನಂ (ಗ ಚ) [3] ದಿ (ಚ) [4] ಜನಕಿಬಿ (ಚ) [5] ಪ (ಗ) [6] ಯ ಹಿರಣ್ಯಕ (ಗ ಚ) [7] ದೇವನ (ಗ ಚ) [8] ದಿಂದಂ (ಗ) [9] ಶಂದೆನು (ಚ) [10] ನೂಂಕಲು (ಗ) [11] ರನದಂ (ಚ)

ಕಂದ: ನಾನಾ ವಿಷಸಮ್ಮಿಶ್ರದ
ನಾನಾ ತೆಱದಡಿಗೆಯಡಿಸಿ ನಾನಾ ಮುಖದಿಂ
ನಾನಾ ಬಗೆಯಿಂ [1]ತಿನಿಸಲ್[1]
ತಾನಾ[2]ಗಳ್[2] ಹರಿಯ ಪೊಗಟುತುಂಡಂ ಕುವರಂ ೧೩೪

ಶರನಿಧಿಶಯನಾಚ್ಯುತ ಮುರ
ಹರ ಕೌಸ್ತುಭರತ್ನಭೂಷ ಹರನಮಿತಪದಾ
ಗರುಡಧ್ವಜ ಎಂದೆನುತುಂ
ಗರಳಾನ್ನಮನುಂಡೊಡಮೃತನಾದುದಲಂಪಿಂ ೧೩೫

ವಿಷವಮೃತಮುಷ್ಣಶೈತ್ಯಂ
ಮುಸಗಿದ ಪಗೆ ಮಿತ್ರ ದುಸ್ಥಿರಂ ಸ್ಥಿರತರಮಾ
ಗೆಸೆವುದು ವೈಷ್ಣವರಿಂಗಿದು
ಪುಸಿಯೇ ದೃಷ್ಟಾಂತಮಲ್ಲವೇ ಪ್ರಹ್ಲಾದಂ ೧೩೬

ವಚನ: ಅಂತು ಸಮಸ್ತಮಾದ ಅಪಾಯುಂಗಳೆಲ್ಲಂ ಉಪಕಾರಂಗಳಪ್ಪುದುಂ ಹಿರಣ್ಯಕಾ[3]ಸುರಂ[3] ಕಂಡು ಮಾತಾಡಿಸಿ ನೋಡುವೆನೆಂದು ಪ್ರಹ್ಲಾ[4]ದಂಗಿಂ[4]ತೆಂದಂ

ಶಾರ್ದೂಲವಿಕ್ರೀಡಿತ
ತೋಱಿಸ್ಸ ನಿನ್ನಯ [5]ದೇವರಂ[5] ಮಗನೆ ನೀಂ ಕೌಟಿಲ್ಯಮಂ ಮಾಡುತಂ
ಜಾಱಲ್ ಬೇಡೆನಲಾನು ಕೇಳ್ ಕುಟಿಲನೇ ನೀನೆಂದೊಡೇನಾದುದೈ
ಬೇಱಿಲ್ಲಂದಿಜ್ಞಾನುರೇಣಿನೊಳ್ ಭರಿತನೀ ಶ್ರೀವಿಷ್ಣುವೆಂದೀಗ ನಾಂ
ಸಾಱುತ್ತಿರ್ದಪೆ ನೋಡು ನಿನ್ನ ಮನಮುಂ ಬಂದಲ್ಲಿಯೆನ್ನಾಳ್ದನಂ ೧೩೭

ಮತ್ತೇಭವಿಕ್ರೀಡಿತ
ಧರೆಯೊಳ್ ವ್ಯೋಮದೊಳಬ್ಧಿಯೊಳ್ ದೆಸೆಗಳೊಳ್ ಕಾಂತಾರದೊಳ್ ಕಾಷ್ಠದೊಳ್
[6]ದ[6]ರಿಯೊಳ್ ವೃಕ್ಷಸುಗುಲ್ಮದೊಳ್ ಲತೆಗಳೊಳ್ ಪಕ್ಷೀ ಮೃಗೌಘಂಗಳೊಳ್
ಪರಮಾ[ಣೊಳ್] ತೃಣರೇಣು[7]ಗಳ್[7] ಸಕಲದೊಳ್ ತೋಱುತಿಂಬನೋ ಎಂದು ಶ್ರೀ
ಹರಿ ವಿಶ್ವಾತ್ಮಕನಾಗಿ ವಿಷ್ಣುಮಯಮುಂ ತಾನಾದನೆಲ್ಲೆಲ್ಲಿಯುಂ ೧೩೮

---

[1] ಪಣಿಸಲ್ (ಚ) [2] ಗಂ (ಚ) [3] ಸುರನದಂ (ಚ) [4] ದ ನೋಳಿಂ (ಚ)
[5] ಸ್ವಾಮಿಯಂ (ಚ) [6] ಧು (ಗ) [7] ಗಳೊಳ್ (ಗ)

ವಚನ : ಅಂತು ಜಗತ್ರಯಮೆಲ್ಲಂ ಸಂತತಂ ವಿಷ್ಣುಮಯಮಾಗಿ ಎಲ್ಲಿ ನೋಡಿದನೆಂದರೆ ಅಲ್ಲಿ ತೋಱುವೆನೆಂದು ಫುಲ್ಲನಾಭಂ ಸಲ್ಲೀಲೆಯೊಳಿರ್ಪ ಸಮಯದೊಳ್ ಹಿರಣ್ಯಾಸುರಂ ನಿನ್ನೊಡೆಯನಂ ತೋಱೆಂದು ಪ್ರಹ್ಲಾದದೇವನೊಳಹರ್ನಿಶಂ ಸೆಣಸುತ್ತಿರ್ದನಪ್ಪಂ[1]ತೆನೆ[1]

ಮತ್ತೇಭವಿಕ್ರೀಡಿತ

ಅಣುರೇ[ಣೊಳ್] ತೃಣಕಾಷ್ಠದೊಳ್ ಭರಿತನೇ ನಿನ್ನಾಳ್ದನೀಗಂ ಸುರಾ
ಗ್ರಣಿಯೆಂದಾಡುವೆಯಾತನಂ ನಿಮಿಷದೊಳ್ ನೀಂ ತೋಱುಬಾಯೆಂದೊಡೀ
ಕ್ಷಣದೊಳ್ ತೋಱುವೆ ನೋಡು ನಿನ್ನ ಮನಮುಂ ಬಂದಲ್ಲಿ ಎಂದೆನ್ನಲೀ
ಮಣಿ[2]ಯ ಸ್ತಂಭ[2]ದೊಳಿರ್ಪನೇ ಹರಿಯೆನಲ್ಕಲ್ಲಿರ್ದಪಂ ನಿಶ್ಚಯಂ ೧೪೯

ಕಂದ : ಇರ್ದೊಡೆ ತೋಱೀಗಂ ನಿ
ನ್ನಾಳ್ದನನೀ ವಜ್ರಮಾಣಿಕದ ಕಂಬದೊಳೆನ
ಲಧ್ವಯ ಹಿರಣ್ಯಕಾಸುರ
ಮರ್ದನ ಬಾ[3]ರೆಂ[3]ದು ಕರೆದನಾ ಪ್ರಹ್ಲಾದಂ ೧೫೦

ಕರೆಯಲ್ ಕಂಬದೆ ಭೋರ್ ಭುಗಿ
ಲುರಿ ಛಿಳಿ ಛಿಟಿಲೆಂದು ಧೂ[4]ಮಮಂ[4]ಬರ ತಳಕಂ
ದುರವಣಿಸೆ ಸಿಡಿಲ ಬಳಗಂ
ಮೊರೆವಂತಾ ನಾರಸಿಂಹನುದಯಂಗೈದಂ ೧೫೧

ವಚನ : ಅದೆಂತೆಂದೊಡೆ

ಕಂದ : ಪೊಡವಿ ನಡನಡುಗಲೇೞುಂ
ಕಡಲೆಲ್ಲಂ ತುಳ್ಕಿ ಮೇರೆಯಂ ದಾಂಟಲ್ಕಂ
[5]ದು[5]ಡುಗಣಮುದುರಲ್ ಮೇರುವೆ
ಯಡಿಗಡಿಗಲ್ಲಾಡೆ ಕಂಬದಿಂ ಪೊಱಮಟ್ಟಂ ೧೫೨

ಪ್ರಹಲಾದಾ ನೀಂ ಕರೆವೊಡೆ
ಬಱ ನಿನ್ನಯ ದೇವನಿವನೆಯಾನೆಯ ತಿಂಬಾ
ಸಹಸಿಯಿವ ದೇವನೇ [6]ಅಹು
ದ[6]ಹಹಾ ಹಾ ಎನುತಲಟ್ಟಹಾಸವೆ ನಕ್ಕಂ ೧೫೩

---

[1] ತೆಂದೊಡೆ (ಗ ಚ) [2] ಂ'ಬಾ ಕಂಬ (ಗ ಚ) [3] ಯೆಂ (ಚ) [4] ಮ್ರವಂ (ಚ)
[5] ಉ (ಚ) [6] ಯಹುದ್ಯೆಯ (ಗ)

ಎಲೆಲೆ ಕೈಮಾಡದಿರಿ ಪಿಡಿ
ಬಳೆಯಂ ತಂದೊಡ್ಡಿ ನಮ್ಮ ಕ್ರೀಡಾವನದೊಳ್
[1]ನಲಿದಾಡುತಿರಲಿ[1] ಮೃಗಮಿದು
ನೆಲಕಚ್ಚರಿಯೆಂದು ರಕ್ಕಸಂ ನಗುತಿರ್ದಂ ೧೪೪

ಸ್ರಗ್ಧರೆ

ಅಂತಾಗಳ್ ನಕ್ಕು ದೈತ್ಯಂ ಪಿಡಿಪಿಡಿಯಿವನಂ ತಂದು ನೇಣಿಂದೆ ಕಟ್ಟಿ
ನ್ನೆಂತಾನುಂ ಸಿಲ್ಕಿದಂ ತಮ್ಮಯ ಹಗೆಯೆನುತುಂ ಸುತ್ತುಮುತ್ತೆಂದೆನಲ್ಕಾ
ಭ್ರಾಂತರ್ ಕೈಕೊಂಡು ಚಾತುರ್ಬಲ ಕವಿತ[1]ರೆಯಾ[1] ದೇವದೇವೇಶ ಲಕ್ಷ್ಮೀ
ಕಾಂತಂ ತಾಂ ದೈತ್ಯರಂ ಸಂಹರಿಸುವೆನೆನುತುಂ ಬಂದನಾ ನಾರಸಿಂಹಂ ೧೪೫

ವಚನ : ಅಂತು ಬರಲ್ ಪ್ರಹ್ಲಾದನಿಂತೆಂದಂ

ಮಹಾಸ್ರಗ್ಧರೆ

ಅದೆಕೋ ದೈತ್ಯೇಂದ್ರಮತ್ತದ್ವಿರದನಘನ ಕುಂಭಸ್ಥಳಾಸ್ಫೋಟರಾವ
ಪ್ರದ ಮಗ್ನೋತ್ತುಂಗ ಮುಕ್ತಾವ್ರಜನಿಗಳ ಲಸತ್ಪಾದಪಂಚಾನನಂ ನೋ
ಡದೆಕೋ ದೋರ್ದಂಡ ವೀರಾವರಣ ದಿತಿಸುತವ್ರಾತ ಚಂದ್ರ ದ್ವಿಜಿಹ್ವಂ
ಅದೆಕೋ ಸಾತ್ವೀಕ ಸೈನ್ಯಂ ನಯನಶಿಖಿ ಹಿರಣ್ಯಾಕ್ಷ[2]ದಹ್ಯಂ[2] ನೃಸಿಂಹಂ ೧೪೬

ವಚನ : ಎಂಬಾ ಪ್ರಹ್ಲಾದನ ನುಡಿಯಂ ಕೇಳಿ ಹಿರಣ್ಯಕಂ ಕೋಪಾಸ್ಪ[3]ದ ದಂ[3]ದಹ್ಯ ಹೃದಯನಾಗಿ

ಕಂದ : ಇವನ ನಿಟ್ಟೆಲು[ವಂ] ಮುಱಿ ಮ
ತ್ತಿವನೊಡೆಯನ ಮೊಗದ ಕೇಶಗಳುಮಂ ಕೀಳಿಂ
ದವಗಡಿಸಿ ಕೋಟಿರಕ್ಕಸ
ನಿವಹಕ್ಕಬ್ಬರಿಸಿ ಕೈಯ ಬೀಸಿದನಸುರಂ ೧೪೭

ವಚನ : ಅಂತು ನೇಮಿಸುವುದುಂ ಬಿಗಿದ ಬಿಲ್ಲಿನ ನೆಗಹಿದ ಸಬಳದ ಸೇರಿಸಿದ ಹರಿಗೆಯ ಚೂರಿಪ ಕಠಾರಿಯ ಹೊದಱಿದ್ದ ಝಲ್ಲಿಯ ಕದುಬುವ ಬಾಣದ ತಿರುಗುವ ಚಕ್ರದ ಮೊರೆವ ಬರಸಿಡಿಲ ತುಡುಕುವ ಲೌಡಿಯ ಮಿಡುಕುವಬ್ಬಣದ ಬೀಸುವ ಕೊಂತದ ಸೂಸುವ [4]ಭಿಂ[4]ಡಿವಾಳದ ಕಿತ್ತ ವಂಕಿಯ ಸುತ್ತಿದ ಜಡೆಯ ಕಡಿವ ಕತ್ತಿಯ ಜಡಿವ ಖಂಡೆಯದ ಉಟ್ಟ ಕಾಸೆಯ ಕಟ್ಟಿದ ಠೌಳಿಯ ತೊಟ್ಟ ಕವಚದ ಜೆನ್ನ [5]ಕವಚದ[5] ಮನೆಯ ಸಿಂಗದ ಕಾಲ ಕಡೆಯದ ಮೇಲುಚ್ಚಾರಿಯ ಹಗಲು ಸಂಜೆನ ಬಿಗಿದ ಕನ್ನಡಿಯ

---

1 ರಲಾ (ಚ) 2 ದೇಹಂ (ಗ) 3 ದ (ಗ ಚ) 4 ಖಿಂ (ಚ) 5 ಕನ್ನಡಿಯ (ಚ)

ಹುಲಿಯ ಬಾಲದ ಒಲೆಯ ಕಟ್ಟಿನ ಮುಂಗೈಯ ಮಿಾಸೆಯ ಕೈಯ ಖಂಡೆಯದ ತೋಳ್ಳ ವರೆಗಳ ತುಡುಕುವ ಜೋಹದ ಹಿಡಿದ ಜವಸಿಕೆಯ ಹೊಡೆವ ಡೌಡೆಯ ತಿರು[1]ಗದ[1] ಭಾಷೆಯ ಕರದ ಚಬುಕಿನ ತೊ[2]ಗಲ[2] ಕಂಬಡ ಒಲದ ಭೇರುಂಡನ ಹರಿಪು ದಾಡೆಯ ತಲೆಯ ಬಾಸಿಗದ ಉಲಿವ ಗಂಟೆಯ ಬಿರುದಿನಂಕದ [3]ಭಟರು[3] ಭೋರೆಂದು ಬೊಬ್ಬೆಗೈದು ಲಾಗಿಸಿ ಲವಣಿಸಿ ವಂಚಿಸಿ ಮಸಗಿ ಮುಸುಱಿ ಪುಲತು ತಱಿಯೆತ್ತಿ ಅಟ್ಟಿ ಹಿಮ್ಮೆಟ್ಟಿ ಬೊಗರಿದಿರುಗಿ ಮುತ್ತಿ ಕಾದುವಲ್ಲಿ

ಮತ್ತೇಭವಿಕ್ರೀಡಿತ

ಅರರೇ ರಾವುತುರಾಯ ಲೇಸು ಮಝುರೇ ಮಾವಂತು ಬಿಲ್ಲಾಳು ಭಾ
ಪುರೆ ಮಜ್ಜೈಯ ಗದಾಯುಧೋದ್ಧವ ಭಲಾ ನೂಕೊತ್ತು ಹೊಯ್ ನಿಲ್ಲು ವಿ
ಸ್ತರಿಸಲ್ಲಾಡದಿರೋಡದಿರ್ ಪಿಡಿಯೆನುತ್ತಾರ್ದೊತ್ತಿ ಮುತ್ತಿತ್ತು ಭೀ
ಕರ ದೋರ್ದರ್ಪದೊಳಬ್ಬರಂ ಮಸಗಲಾ ದೈತೇಯ ಚಾತುರ್ಬಲಂ ೧೪೮

ವಚನ: ಅಂತು ಮುತ್ತುವ ಚಾತುರ್ಬಲಮಂ ನಾರಸಿಂಹಂ ಕಂಡು

ಮತ್ತೇಭವಿಕ್ರೀಡಿತ

ಅಱುವತ್ತಾಱುಸಹಸ್ರಬಾಹುಸಹಿತಂ ಶ್ರೀನಾರಸಿಂಹಂ ಕರಂ
ತಱುಬುತ್ತುಂ ಬರಲಾ ಹಿರಣ್ಯಕಬಲಂ ಕಂಡೀತನೀ ತೋಳ್ಗಳಂ
ತಱಿದೊಟ್ಟೀತನ ರಕ್ತಮಂ ಕುಡಿಯೆನುತ್ತಾ ದೈತ್ಯರೊಂದಾಗಿ ಬೊ
ಬ್ಬಿಱಿ[4]ಯುತ್ತುಂ[4] ಶತಕೋಟಿ ಸಂಖ್ಯ ದಿತಿಜರ್ ಮುತ್ತಿತ್ತು ದೈತ್ಯಾರಿಯಂ ೧೪೯

ವಚನ: ಅದೆಂತೆನೆ

ಕಂದ: ಬಡಬಾನಲನಂ ತುಂತುರ್
ಕಡುಪಿಂದೆ ಮುಸುಂಕುವಂತಿರಾ ಕುಲಗಿರಿಯಂ
ಒಡಬಿಂದು ಮುಸುಱುವಂತಿರೆ
ದಡಿಗರ್ ದಿತಿಸುತರು ಮುತ್ತಿದರ್ ನರಹರಿಯಂ ೧೫೦

---

[1] ಗುವ (ಗ) [2] ಲಗದ (ಗ ಚ) [3] ಬಂಟರು (ಚ) [4] ವೃತ್ತಂ (ಚ)

ಚಂಪಕಮಾಲೆ

ಸುರಗಿ ಕಠಾರಿ ಖಡ್ಗ ಧ[1]ನು ಬಾ[1]ಣ ಮುಸುಂಡಿ ಸುಭಿಂಡಿವಾಳದಿಂ
ಪರಿಘೆಸಿಮುದ್ಗರಂ ಪರಶು ತೋಮರ ಭಲ್ಲಿ[2]ಯ[2] ಸೆಲ್ಲೆ ಹಂಗಳಿಂ
ಹರಿಗೆ [3]ಲ[3]ವ್ರಂಡಿಯುಬ್ಬಣ ತ್ರಿಶೂಲ ಗದಾ ಸಬಳಂಗಳಿಂದಲೀ
ಪರಿಪರಿಯಾಯುಧಂಗಳಲಿ [4]ಮು[4]ತ್ತಿದರಾ [5]ಹರಿಯಂ ದುರಾತ್ಮಕರ್[5] ೧೫೧

ಕಂದ : ಓಹೋ ದಾನವಬಲರ‌ಿ
ಸಾಹಸರ[6]ಹ[6]ರೆನುತಲಱುವತಾಱುಸಹ[7]ಸ್ರಂ[7]
ಬಾಹುಗಳ ಬೀಸಿ ಬೇಗದೊ
ಳಾ ಹಿರಣ್ಯಕ ಬಲವ ಕೇಣಿಗೊಂಡ ನೃಸಿಂಹಂ ೧೫೨

ವಚನ : ಅವೆಂ[8]ತೆನೆ[8]

ಕಂದ : ಮುಱಿ[8]ದೊಟ್ಟೆ ರಥನಿಕಾಯವ
ತಱಿ[8]ದಿಕ್ಕಿಯೆ ಗಜಸಮೂಹವಂ ಕಾಲಾ[9]ಳಂ[9]
ಬಱಿ[8]ಕ್ಕೈದು ಹಯಚಯಂಗಳ
ನಱಿ[8]ಯುಟ್ಟಿದ ನಾರಸಿಂ[10]ಹ[10]ನೇಂ ವಿಕ್ರಮನೋ ೧೫೩

ಚಂಪಕಮಾಲೆ

ತರಹರವಾಂತು ನಿಂದವರನಟ್ಟಿದ ಮೆಟ್ಟಿದ ಕಟ್ಟಿದಂ ಭಯಂ
ಕರ ರಸವಾರ್ಧಿಯೊಳ್ ಕೆಡಹಿ [11]ಪ್ರೊ[11]ಬ್ಬಿ ಕೆರಳ್ಚಿ ಮರಳ್ದು ಸೀಳ್ದೊಡಂ
ಬಿರುದ ಬಿಸಾಟು ಗಾಯಮೊಳಬಿಲ್ದು ಬಬಿಲ್ದು ಪೊರಳ್ದು ಸರ್ವವೀ
ರರು ಮಱವಟ್ಟು ಬಿಟ್ಟಸುವ ಕೆಟ್ಟುದು ರಕ್ಕಸರಾಯಮೋಹರಂ ೧೫೪

ಕಂದ : ಆ ಕೊಳುಗುಳದೊಳಗತಿಘನ
ಭೀಕರ[12]ವಾಯಿತ್ತು[12] ಭೂತವೇತಾ[13]ಳಂಗಳ್[13]
ಶಾಕಿನಿ ಡಾಕಿನಿಯರ ಜಂ
ಬೂಕಗಳಾ ಗೃಧ್ರ ಕಾಗೆಯಟ್ಟೆಗಳಿಂದಂ ೧೫೫

---

1 ಸುಬಾರ್ಣ (ಗ) 2 ಪ (ಚ) 3 ಯ (ಗ) 4 ಮೆ (ಚ) 5 ದಿತಿಜರ್ ಮುರಾರಿಯಂ (ಚ)
6 ದಿ (ಚ) 7 ಸ್ರಸು (ಚ) 8 ತೆಂದೊಡೆ (ಚ) 9 ಳ್ಗಳ (ಚ) 10 ಹ್ಯ (ಚ) 11 ಯಾ (ಗ)
12 ವಾಂತು (ಗ) 13 ಳರಬಲು (ಚ)

ಉತ್ಪಲಮಾಲೆ

ನೆತ್ತರನೀಂಟಿ ಸೊಕ್ಕಿ ನಲಿದಾಡುವ ಶಾಕಿನಿ ಡಾಕಿ[1]ನೀ[1] ಜನಂ
ಮತ್ತೆ[1] ಕರುಳ್ಗಳಂ ತಿನುತೆ ಬೊಬ್ಬಿಱಿಯುತ್ತಿಹ ಭೂತಯೂಥದಿಂ
[2]ಮತ್ತೆ[2] ನಗುತ್ತಲುಂ ಮರುಳ್ಗಳಾಡುತಲಾ ತಲೆಯಣ್ಣೆಗಲ್ಗಳಂ
ಸುತ್ತಲದೆತ್ತಲುಂ ಭಯಮೊಳಾಹವಭೂಮಿಯೊಳಾದುದದ್ಭುತಂ ೧೫೬

ವಚನ : ಅದಂ ಕಂಡು ಮದಮುಖನಪ್ಪ ಹಿರಣ್ಯಕಾಸುರಂ ನರಹರಿಯೊಳ್ ಕಾದುವೆನೆಂದು ಸಿಡಿಲಗರ್ಜನೆಯಂತೆ ಘುಡುಘುಡಿಸುತಂ ಹಲಗೆ ಖಂಡೆಯಮಂ ಕೆಳೆದುಕೊಂಡು ಜಲಜಾಕ್ಷನಂ ಕೋಪದಿಂ ನೋಡಿ

ಕಂದ : ಘಡಘಡ ವಿಕಾರವೇತಕೊ
ಬಡಹಂದಿಯ ರೂಪ ತಾಳ್ದು ತಮ್ಮನ ಗೆಲಿದಾ
ಕಡುಪಿಂ ಮೃಗರೂಪಾಗಲ್
ಬಿಡುವೆನೆ ಹೋಗದಿರೆನುತ್ತೆ ಜ[3]ಡಿ[3]ದಂ ಹರಿಯಂ ೧೫೭

ಮತ್ತೇಭವಿಕ್ರೀಡಿತ

ಅಱುವತ್ತಾಱುಸಹಸ್ರಬಾಹು ನಿನಗುಂಟೆಂಬೊಂದಹಂಕಾರ[4]ಮೇ[4]
ತಱಿವೆಂ ನಿನ್ನ ಕರಂಗಳೆಂಬಡವಿಯಂ ನೀಂ ಸಾರು ಸಾರೆಂದೆನಲ್
ಬಱಿಮಾತಿಂದಲದೇನು ನಿನ್ನ ಕೊಲಲಿಷ್ಟ್ಂ ತೋಳ್[5]ಳಿಂದೇನೆನು[5]
ತ್ತುಱುಬುತ್ತಿರ್ದನು ನಾರಸಿಂಹನಱುವತ್ತಾಸರ್ಗಸಿರಂ ತೋಳ್ಗಳಿಂ ೧೫೮

ಕಂದ : ಮುಷ್ಟಿಯ ಬಲಿದೆತ್ತಿದ ಷಟ್
ಷಷ್ಟಿಕರಂಗಳಲಿ ಸಿಂಹಗರ್ಜನೆಯಿಂದಾ
ದುಷ್ಟ ಹಿರಣ್ಯಕನಂ ಕಡು
ಕಷ್ಟನ ಸಿಡಿಲೆಱಗಿ ಪೊಡೆವವೊಲ್ ಕಮಲಾಕ್ಷಂ ೧೫೯

ಮತ್ತೇಭವಿಕ್ರೀಡಿತ

ಎಱಗಲ್ ಗಾಯವ ಮನ್ನಿಸುತ್ತಲಸುರಂ ಕೊಂಡಾಡುತುಂ ಖಡ್ಗದಿಂ
ತಱಿಯಲ್ಕಾ ಕಮಲಾಕ್ಷನುಗ್ರತರ ಕೋಪಾಟೋಪದಿಂ ದೈತ್ಯನಂ
ಮುಱಿಯುತ್ತಾತನ ಕಾಲ್ಗಳಂ ಪಿಡಿದು ವ್ಯೋಮಕ್ಕಿಟ್ಟನಂತಾಗ ಬೊ
ಬ್ಬಿಱಿಯುತ್ತುಂ ಖಳ ಬೀಳಲಸ್ತ್ರಭುಜದಿಂದಾಂತು ನೃಸಿಂ[6]ಹಂ[6] ಕ್ಷಣಂ ೧೬೦

---

[1] ನಿಯರಿಂದಲ್ದೆ (ಚ) [2] ದಕ್ತ (ಚ) [3] ಜು (ಚ) [4] ವೇಂ (ಕ) [5] ಳೆಂಕೆಂದೆನು (ಚ)
[6] ಹಾ (ಚ)

ಕಂದ : ಗುಂಜಿ ಹಿರಣ್ಯಕನಂ ಎಡೆ
ಸಂಜೆಯೊಳೆಡೆಹೊಸ್ತಿಲಲ್ಲಿಯೂರುದ್ವಯ[1]ದೊಳ್
ಅಂ[1]ಜದೆ ಕೆಡಹಿ ನಖಾಗ್ರದೆ
ಭಂಜಿಸಿ ನವರುಧಿರವೀಂಟುತಿರ್ದ ನೃಸಿಂಹಂ ೧೬೧

ಹಿರಣ್ಯಕನೊಡಲಂ ಬಗಿದಾ
ಕರು[2]ಳಂ[2] ನೆಱೆ[3] ಕಿತ್ತು ಕಿತ್ತು ವನಮಾಲೆಗಳಂ
ಕೊರಳಲ್ಲಿ ತಾಳ್ದು ವೀರಾ
ವರಣದಳುರ್ಕೆ ಹೆರ್ಚ್ಚಿ ಲೋಕಮಂ ಸುಡುತಿರ್ದಂ ೧೬೨

ವಚನ : ಅಂತು ವೀರೋದ್ರೇಕದಿಂ ಮುಂದುಗಾಣದೆ ಸಮಸ್ತಸುರಾಸುರರಂ ಕೋಪಾಗ್ನಿಯಿಂ ಬೆನ್ನಟ್ಟಿ ಸುಡುತಿರ್ದ[3]ನವೆಂ[3]ತೆಂದೊಡೆ

ಕಂದ : ಸುರರನಱಿಯಟ್ಟೆ ಸುರರುಂ
ಸರಸಿಜಭವನಲ್ಲಿಗೈದಲಾ ಸುರರಜ ಶಂ
ಕರನ ಮಱಿಯೊಗೆ ಸು[4]ರ[4]ರ್ ವಿಧಿ
ಹರಸಹಿತಂ ಪೊಕ್ಕರಂದು ಜ್ಯೋತಿರ್ಲೋಕಂ ೧೬೩

ವಚನ : ಅಂತತಿಖ್ಯಾತಮಪ್ಪ ಜ್ಯೋತಿರ್ಲೋಕಮಂ ಪೊಕ್ಕು ಶ್ರೀಮಹಾಲಕ್ಷ್ಮಿ[5]ಯಂ[5] ಸ್ತೋತ್ರಂಗೈಯಲೊಡನೆ ಪ್ರಸನ್ನೆಯಾಗಿ ಅಭಯಮಂ ಕುಡುತಿರ್ದಳದೆಂತೆನೆ

ಕಂದ : ಅಂಜದಿರಂಜದಿರೆನುತುಂ
ಕಂಜಾಲಯೆಯಭಯಮಿತ್ತು ನೀಮೆಲ್ಲರ್ ಮದ
ಕುಂಜರ ವೈರಿಯ ಮುಖಮಂ
ರಂಜಿಸಿಕೊ[6]ಳಿರೆಂ[6]ದು ಬುದ್ಧಿವೇೞ್ದಳಾಗಳ್ ೧೬೪

ಸಿರಿ[7]ಯರಸಿ ಪೇೞ್ದಂದದೆ[7]
ಸುರಪತಿ ಪರಮೇಷ್ಠಿ ಯಿಂದುಶೇಖರರಾ ಕೇ
ಸರಿಯಾನನಮಂ ಧರಿಸಲ್
ನರಹರಿಯುದ ಕೆಂಡು ಶಾಂತಮಂ ಕೈಕೊಂಡಂ ೧೬೫

---

1 ದೊಳಗಂ (ಚ) 2 ಳ್ಗಳ (ಚ) 3 ಸೆಂ (ಕ) 4 ರಂ (ಕ) 5 ದೇವಿಯರಂ (ಚ)
6 ಳ್ವಂ (ಚ) 7 ಸತಿ ಪೇಳ್ದಂದದೊಳುಂ (ಚ)

ಆಗ ಮಹಲಕ್ಷ್ಮಿದೇವಿಯು
ನಾ ಗಂಗಾಪಿತನು ಕಂಡು ವರಿಸಲ್ಕಮರರ್
ಪೂಗಳ ಮೞೆಯಂ ಸುರಿಯಲ್
ಯೋಗಾಂಗದೆ ನಾರಸಿಂಹ ಸಂತಸನಾದಂ ೧೬೬

ಕರೆದು ಪ್ರಹ್ಲಾದದೇವನ
ಕರ ಬಳಲಿಪೆ ಮಗನೆ ಎನುತೆ ಮೈದಡ[1]ವು[1]ತ್ತುಂ
ವರವಂ ಬೇಡೆನೆ ನಿಮ್ಮಯ
ಚರಣದೊಳಿರಿಸೆಮ್ಮ ತಂದೆಯಂ ಲಕ್ಷ್ಮೀಶಾ ೧೬೭

ಎಂದು ಪ್ರಹ್ಲಾದದೇವಂ
ಕಂದರ್ಪನಪಿತಗೆ ವಂದಿಸಲ್ ವರವಿತ್ತಾ
ನಂದದೆ ಕಳು[2]ಪಿದನಿತ್ತಲ್[2]
ಸಂದಣಿಸಿದ ದೇವನಿಕರಕಂದಿಂತೆಂದಂ ೧೬೮

ನೀವೀ ಸಿಂಹಾಸನಮಂ
ದೇವಾಲಯದಲ್ಲಿ ನಿಲಿಸಿಕೊಂಡಿರಿಯೆನುತುಂ
ದೇವರ ದೇ[3]ವಂ ನರಹರಿ[3]
ದೇ[4]ವೇಶ[4] ಬ್ರಹ್ಮರುದ್ರರಂ ಬೀೞ್ಕೊಟ್ಟಂ ೧೬೯

ಮಹಾಸ್ರಗ್ಧರೆ

ಭರದಿಂ ಬೀೞ್ಕೊಂಡು ದೇವಪ್ರಜನತಿಹರುಷಂಬೆತ್ತು ತಂತಮ್ಮ ಲೋಕ
ಕ್ಕಿರದೈತಂದಾವಗಂ ತತ್ಪುರದೊಳೆ ಸುಖದಿಂದಿರ್ದ[5]ರಿತ್ತಲ್[5] ನೃಸಿಂಹಂ
ಸಿರಿಯಂ ತಕ್ಕೈಸುತಂ ಭೋರೆನೆ ಗರುಡನನೇಱುತ್ತು ಬಂದಾ ಸುಧಾಸಾ
ಗರಮಂ ಪೊಕ್ಕರ್ತಿಯಿಂದಂ ಸುಖಸೊಳಿಸಿದನಾ ಭಕ್ತಸಂತೋಷಭೂಷಂ ೧೭೦

---

[1] ಹು (ಚ) [2] ಪುತಲಿಕ್ತಂ (ಚ) [3] ವನೃಸಿಂಹಂ (ಚ) [4] ವೇಂದ್ರ (ಚ)
[5] ರತ್ತಂ (ಚ)

ಮತ್ತೇಭವಿಕ್ರೀಡಿತ

ಧರಣೀ ಸೌಖ್ಯಕರಂ ಗದಾಯುಧಧರಂ ಶ್ರೀ ಶಾರ್ಙ್ಗಚಕ್ರೋಧರಂ
ವರ ಪೀತಾಂಬರಂ ದಿವ್ಯಕೌಸ್ತುಭಧರಂ ಲಕ್ಷ್ಮೀ[1]ವ[1]ರಂ ಭೂಧರಂ
ಸುರಸಂಮೋಹ ಪುರಂದರೋನ್ನತಪರಂ ಸೌಖ್ಯಾಕರಂ ನಿರ್ಮಲಂ
ಪರಮಾನಂದಕರಂ ಜಗತ್ತ್ರಕರಮುಂ ರಕ್ಷಿಕ್ಕೆ ನಾರಾಯಣಂ ೧೭೧

ಗದ್ಯ : ಇದು ವೃಂದಾರಕವೃಂದ ಪರಿಮಣಿಖಚಿತಮುಕುಟರಂಜಿತ ಶ್ರೀಮದಾದಿ ನಾರಾಯಣ ಶ್ರೀಚರಣಸರಸೀರುಹಮಕರಂದಷಟ್ಚರಣ ಸಲ್ಲಲಿತ ಮಲ್ಲರಸಾಂಕ ವಿರಚಿತಮಪ್ಪ ದಶಾವತಾರ [2]ಚರಿತ್ರ[2] ಮಹಾಪ್ರಬಂಧದೊಳ್ ಹಿರಣ್ಯಕ ಕ್ರೋಧ ಪ್ರಹ್ಲಾದ ವಿದ್ಯಾಭ್ಯಾಸ [3]ಪ್ರ[3]ಹ್ಲಾದ ದಂಡ[4]ನಂ[4] ಮಹಾ ಯುದ್ಧಂ ಹಿರಣ್ಯಕ ಭಂಜನ ದೇವತಾಜನ ಸಿಂಹಮುಖಧಾರಣ ಲಕ್ಷ್ಮೀದೇವಿಯರಾಗಮನ ಪ್ರಹ್ಲಾದಪ್ರಸಾದಮುಖವಾದ ಲಕ್ಷ್ಮೀನರಸಿಂಹಾವತಾ[5]ರಂ[5]

ಪಂಚಮಾಶ್ವಾಸಂ

---

1 ಧ (ಚ) 2 ಚಾರಿತ್ರ (ಚ) 3 ತತ್ಪ್ರ (ಚ) 4 ಣೆ (ಚ) 5 ರ ಮೆಂಬ (ಕ)

ಷಷ್ಠಮಾಶ್ವಾಸಂ

ಕಂದ : ಶ್ರೀಧರ ನಗಧರ ವನಮಾ
ಲಾಧರ ಕಮಲೋದರಂ ಧರಾಧರನಾ ಧಾ
ರಾಧರಶಾಮಂ ಭಕ್ತರ
ನಾದರದಿಂ ಪೊರೆವುದಾದಿನಾರಾಯಣನೇ ೧

ಭಯಹರನಜೇಂದ್ರದಾನ
ಪ್ರಿಯನಂಬುಜಜಾತ ಕರಕಮುಂಡಲುಹಸ್ತಂ
ಜಯಲೋಲನಪ್ರಮಾಣಂ
ಪ್ರಿಯದಿಂ ಸಲಹುತ್ತಲಿ[1]ರ್ಕೆ[1] ವಾಮನನೆಂದುಂ ೨

ಸಿರಿಯಿಂ ಜಸದಿಂ ಸೌಖ್ಯದಿ
ನುರುತರ ಗಂಭೀರದಿಂದೆ ಸೊಬಗಿಂ ರತ್ನಾ
ಪುರಿಯೊಳ್ ಹರಿ[2]ಪದ[2]ಪದ್ಮ
ಸ್ಮರಣೆಯೊಳೊಪ್ಪುತ್ತ[3]ಲಿರ್ದನಾ[3] ಪ್ರಹ್ಲಾದಂ ೩

ವಚನ : ಅಂತು ಪ್ರಹ್ಲಾದಂ ಕೆಲವುದಿನದಿಂ ಮೇಲೆ ಸೌಭಾಗ್ಯಮೊಡನೆ ಹರಿಚರಣ ಸಾಯುಜ್ಯಮನೈದಲಾತನ ಪುತ್ರಪೌತ್ರ ಪರಂಪರೆಯಲ್ಲಿ·

ಕಂದ : ಘನ ಸಂಪದತರ ರಾಕ್ಷಸ
ವನವರ್ಧನ ಚೈತ್ರ ರಿಪು ಘನಾಘನನಾದಂ
ವಿನಯ ವಿಶಾರದ ಯಾಚಕ
ಜನ ಚಿಂತಾರತ್ನನೊಗೆದ ಬಲಿಚಕ್ರೇಶಂ ೪

ಚಂಪಕಮಾಲೆ

ಇಳೆಯೊಳಗೊಪ್ಪುತಿರ್ದುದು ಬಲೀಂದ್ರನ ಪಟ್ಟಣದಲ್ಲಿಯಾವಗಂ
ಕಳಮೆಯ [4]ಕೈಗಳಿಂದೆ[4] ನವನಂದನದಿಂ ತೊಱೆಯಿಂ ತಟಾಕದಿಂ
ಸುಲಲಿತ ದೇವತಾಲಯದೆ ಸಜ್ಜನಯೂಥ ನಿಕೇತನಂಗಳಿಂ
ಸಲೆ ನೆಲೆಯಾಗಿ ಶೋಭಿಪುದು ರತ್ನವತೀವೆಸರಿಂದ[5] ಲಾ[5] ಪುರಂ ೫

---

[1] ಪ್ಪ (ಚ) [2] ಪರ (ಗ) [3] ಮಿಪ್ಪ (ಚ) [4] ಕ್ಷೇತ್ರದಿಂವ (ಗ ಚ) [5] ವಾ (ಚ)

ಶಾರ್ದೂಲವಿಕ್ರೀಡಿತ

ಆ ರತ್ನಾವತಿಯೆಂಬ ಪಟ್ಟಣದಧೀಶಂ ಸರ್ವಸಂಪನ್ನನುಂ
ಧೀರೋದಾರಕನಾಗಿ ತೋರ್ಪ ಸತತಂ ದಾರಿದ್ರ ವಿದ್ರಾವಣಂ
ಓರಂತೀ ಧರೆಯಾಳುತಿರ್ಪನವನೀ ವಿಖ್ಯಾತ ಕೀರ್ತ್ಯಾಸ್ಪದಂ
ಪಾರಾವಾರ ಗಭೀರನಾ ಬಲಿನೃಪಂ ಸಂತೋಷದಿಂದೊಪ್ಪುವಂ ೬

ವಚನ : ಅದೆಂ[1]ತೆನೆ[1]

ಚಕ್ರಾವಲೋಕನ

ಸಿರಿಯಲ್ಲಿಂದ್ರನುಮಿಂದ್ರನಿಂ ಸಿರಿಯೊಳಾ ಯಕ್ಷೇಶನಿಂದ್ರ್ಯಕ್ಷರಿಂ
ಸಿರಿವಂತಂ ಕಮಲೋದ್ಭವಂ ಸುರಪನಿಂ [2]ಯ[2]ಕ್ಷೇಶನಿಂ ಬ್ರಹ್ಮನಿಂ
ಸಿರಿವಂತಂ ಹರಿಯಿಂದ್ರನಿಂ ಧನದನಿಂದಾ ಬ್ರಹ್ಮನಿಂ ವಿಷ್ಣುವಿಂ
ಸಿರಿವಂತಂ ಬಲಿಚಕ್ರವರ್ತಿಯೆಸೆದಂ ಕೀರ್ತ್ಯಂಗನಾ ವಲ್ಲಭಂ ೭

ಸಿಂಹಾವಲೋಕನ

ಸುರರೊಳಗಿಂದ್ರನಿಂದ್ರಗೆ ದಿಶಾಧಿ[3]ಪರಾ ದಿ[3]ಸೆಯಾಣ್ಮರಿಂದ[4]ಲಾ[4]
ಸರಸಿಜಜಾತನಾ ಸರಸಿಜೋದ್ಭವನಿಂದತಿಪೆರ್ಮೆಯುಳ್ಳವಂ
ಹರಿ ಹರಿಯಿಂದಮಾ ಶಿವನುಮಾ ಶಿವನಿಂ ಬಲಿಯೇ ಬಲಿಂದ್ರನುಂ
ಖರ ಖರ ಹಮ್ಮು ಹಮ್ಮಿನೊಳೆ ಭೂಮಿಯನಾಳ್ದನದೇನ ಬಣ್ಣಿಪೆಂ ೮

ಕಂದ : ಸುರತರು ಬೇಡಿದೊಡೀವುದು
ಸುರಭಿ[5]ಯು[5] ತಾಂ ಬಯಸೆ ಕೊಡುವುದೀ ಬಲಿಭೂಪಂ
ಕರೆದೀವನಿರದೆ ಕೊಡುವಂ
ಸುರತ[6]ರು[6] ಸುರ[7]ಭಿಗಳು[7] ನಾಚುವಂತಿರೆ ಸತತಂ ೯

ಚಂಪಕಮಾಲೆ

ಒಡೆಯರದುಂಟು ಓಲಗಿಪ ಜೀತಮನಾನುವರಿಲ್ಲ ದಾನಮುಂ
ಕುಡುವವರುಂಟು ಬೇಡುವರೆ ಯಾಚಕರಿಲ್ಲ ಧನಾಢ್ಯರೆಲ್ಲರುಂ
ಬಡತನವಿಲ್ಲ ಲೋಕದೊಳಗೈಶ್ವರಿಯಂ ಪಿರಿದುಂಟು ನೋಳ್ಪೊಡೀ
ಪೊಡವಿಯೊಳೆಲ್ಲರುಂ ಬಲಿನೃಪಾಲಗೆ ಪಾಸಟಿಯೆಂಬರಾವಗಂ ೧೦

---

1 ತೆಂದೊಡೆ (ಚ) 2 ದೆ (ಗ ಚ) 3 ಪದೆ (ಚ), 4 ಮಾ (ಚ) 5 ಯ (ಕ)
6 ರುವುಂ (ಚ) 7 ಭಿ (ಗ ಚ)

ಚಂಪಕಮಾಲೆ

ಒಡವೆ ಯಥೇಷ್ಟಮುಂ ಪಡೆದರುಂಟು ಕಡಕ್ಕೆಳಸಿರ್ಪರಿಲ್ಲ ಮುಂ
ಕೊಡುವವರುಂಟು ಯಾಚಕರಮರ್ತಿಯಪೂರ್ವಮನಾರತಂ ಸಮುಂ
ತುಡಲುಣಲಿತ್ತು ರಕ್ಷಿಸುವರುಂಟೊಲವಿಂ ನೆಱ ಸಾರ್ದರ್ಸಿಲ್ಲರಿ
ಲ್ಲಿಡೆವಿಡದಿರ್ಪರಾವ ದಿನದೊಳ್ ಬಲಿರಾಜ್ಯಮದೇಂ ಸುಭಾಗ್ಯಮೋ ೧೧

ಮತ್ತೇಭವಿಕ್ರೀಡಿತ

ಕನಕಂ ಗೋತ್ರಚಯಂಗಳಾ ತರುಗಳೆಲ್ಲಂ ರತ್ನಸಂದೋಹಮಾ
ಘನ ಗುಲ್ಮಾದಿಗಳೆಲ್ಲಮುಂ ಸಕಲಸಂಜೀವೀಕುಲಂ ಸಂತತಂ
ಮನವೊಲ್ದೀವವು ಬೇಡಿದಿಷ್ಟಸುಖಮಂ ನಾನಾ ನದೀವ್ರಾತಮುಂ
ಜನನಾಥಂ ಬಲಿಭೂಪನಾಳ್ವ ಧರೆಯೊಳ್ ಸಂತೋಷಮೆಲ್ಲಾವಗಂ ೧೨

ಮತ್ತೇಭವಿಕ್ರೀಡಿತ

ವನಮೋ ಪುಷ್ಪಫಲಾಭಿವೃದ್ಧಿ ನೆಲನೇ ಸುಕ್ಷೇತ್ರಸಂದೋಹ ಭೂ
ಜನಮೋ ಕಲ್ಪಮಹೀಜ ಸಿಂಧುಕುಲಮೋ ಕುಲ್ಯಪ್ರದಾನೇಕ ಜೀ
ವನಮೋ ಕ್ಷಾರ ವಿಶೂನ್ಯ ದಂಪತಿಗಳೇ ಸದ್ಯೌವನಂ ಕಾಮ ಸಂ
ಜನಿತಂ ತದ್ಬಲಿರಾಜ್ಯದೊಳ್ ಸುಖಮಯಂ ದುಶ್ಚಿಂತೆಯಿಲ್ಲಾವಗಂ ೧೩

ಉತ್ಪಲಮಾಲೆ

ಭೋಗಮೊಳೆಲ್ಲರಿಂದ್ರಗೆ ಸಮಾನದವರ್ ಧನಸಂಗ್ರಹಂಗಳಿಂ
ದಾಗ ತ್ರಿಯಂಬಕಾಪ್ತಗೆ ಮಿಗಿಲ್ ಸರಿಯೆಂಬ ಜನಂಗಳೆಲ್ಲರುಂ
ತ್ಯಾಗದೊಳಾ ದಧೀಚಿ ಶಿಬಿ ಚಂದ್ರಗೆ ತಾಂ ಪಡಿಯೆಂಬ ದಾನಿಗಳ್
ಶ್ರೀಗಧಿನಾಥನೀ ಬಲಿನೃಪಾಲನ ರಾಜ್ಯದೊಳೆತ್ತ ನೋಡಿಪ್ಪಡಂ ೧೪

ಕಂದ : ಆ ಶೀತಮಯೂಖಾಂಭೋ
ರಾಶಿಯು ಮಾಂಧಾತ ಶಿಬಿಯೆನಿಪ್ಪರ್ ನಿತ್ಯೋ
ಲ್ಲಾಸಂಬಡೆವರೆ ಬಲಿಚ
ಕ್ರೇಶಂ ಪುಟ್ಟಿದ ಮುಹೂರ್ತದೊಳ್ ಪುಟ್ಟಿದರೇ ೧೫

ವಚನ : ಅಂತು ಕೀರ್ತಿದಿಗ್ಭರಿತಮಪ್ಪಿನಂ ರಾಜ್ಯಂಗೆಯ್ಯುತ್ತ ಮಿರೆಯಿರೆ

ಮತ್ತೇಭವಿಕ್ರೀಡಿತ

ತಳಿರಿಂ ಪೇಱಿ ತರುವ್ರಜಂ ಶಶಿಕರಂ ಬೆಳ್ಪೇಱಿ ಕಾಮಂಗೆ ದೋ
ರ್ವಲಮುಂ ಮೀಱಿ ಸಮಂತು ಕೋಕಿಲ[1]ಗಲಂ[1] ನುಣ್ಪೇಱಿ ಭೋಗಾಕುಲಂ
ತಲೆಯುಂ ತೋಱಿ ಹಿಮರ್ತುವಾಱಿ ತೃಣಸಂದೋಹಂ ಕರಂ ಬೀಱಿ ನಿ
ರ್ಮಲ ಚಿತ್ತಂ ಮಿಗೆ ತೋಱಿ ಬಂದುದು ವಸಂತಂ ಸೌಖ್ಯವಿಶ್ರಾಂತದಿಂ ೧೬

ವಚನ : ಅಂತು ಬಂದ ವಸಂತೋದಯ ಸಮಯಮನಱಿತು ವನಪಾಲಕಂ

ಕಂದ : ತಳಿರೆಲೆ ಮೊಗ್ಗೆಯರಲ್ ಸ
ತ್ಫಲ ಪಣ್ ಗೇರ್ ಗೆಣಸು ದಂಟು ಸಹಿತಂ ಬಂದಾ
ಬಲಿಚಕ್ರೇಶ್ವರನೋಲಗ
ನಿಲಯಮನೈದಿದರು ತೋಂಟಮಂ ರಕ್ಷಿಸುವರ್ ೧೭

ವಚನ : ಅಂತು ಬರ್ಪಿನಂ ಮುಂದೆ

ಬಾಹತ್ತರ ವಿನಿಯೋಗ
ವ್ಯೂಹದ ಪೇಶಾಧಿನಾಥ[2]ಯೂಥದ[2] ಸೊಬಗಿನ
ಮೋಹನ ಬಾಲಕಿಯರ ಸ
ನ್ನಾಹದೊಳೊಪ್ಪಿರ್ದುದೋಲಗಂ ಬಲಿನೃಪನಾ ೧೮

ಸ್ರಗ್ಧರೆ

ಅಂತಿರ್ಪಾಸ್ಥಾನಮೆಂಬಾ ಶರನಿಧಿಯೊಳೆ ಸಂತೋಷದಿಂದಿರ್ಪ ಪೃಥ್ವೀ
ಕಾಂತಂಗುದ್ಯಾನಕಾರಂ ಕುಸುಮಫಲಗಳಂ ಕೊಟ್ಟು ಪ್ಪ್ರಯಿಕ್ಕಿದೇ ನಾ
ಸಂತಂ ಸಂತುಷ್ಟಿಯಿಂ ನಂದನವನಸಿರಿ ನಿಮ್ಮಂಘ್ರಿಯಂ ಪ್ರೀತಿಯಿಂ ಬ
ಪ್ಪಂತುಂ ಮಾಡೆಂದು ನನ್ನಂ ಕಳುಪಲೊಲವಿನಿಂ ಬಂದೆ ಚಿತ್ತೈಪುದೆಂದಂ ೧೯

ಮಹಾಸ್ರಗ್ಧರೆ

ಎನೆ ಕೈಕೊಂಡಾಗಲಾ ತೋಂಟಿಗಗುಡುಗೊಱೆಯಂ ಕೊಟ್ಟು ನಾಂ ಬರ್ಪೆನೆಂದಾ
ತನ ಬೀೞ್ಕೊಟ್ಟಲ್ಲಿಯಾಸ್ಥಾನವ ಕಳುಪುತಲ್ಕೈತಂದು ಧಾತ್ರೀತಳೇಶಂ
ಪನಿನೀರಂ ಮಿಂದು ಗಂಧಾಂಕಿತವಸೆವಸ್ತ್ರತಾರೋಗಣಂಗೆಯ್ದು ಮುದ್ಯ
ದ್ವನಿತಾ ಸಂಘಂ ಸಮೇತಂ ವನವಿಹರಣಕೆಂ[3]ದೆಟ್ದಿ[3]ಸಾನಂದದಿಂದಂ ೨೦

---

1 ಕೊರಳ್ (ಗ ಚ) 2 ಯೋಥದ (ಗ) 3 ದೆದ್ದ (ಚ)

ವಚನ : ಅಂತೆದ್ದು ನಿಂದು ಬಲಿಚಕ್ರೇಶ್ವರಂ ವಿಲಸಿತ ತಾಂಬೂಲ ಮುಖನುಂ ಸರ್ವಾಭರಣ ಭೂಷಿ[1]ತನಾಗಿ[1] ಉರ್ವಿ[2]ಗತಿಶಯಮಾ[2]ದ ಪಲ್ಲಕ್ಕಿಯನೇಱಿ ತನ್ನ ಸ್ನೇಹಿತರಪ್ಪ ಮನ್ನಣೆಯ ವಿಟ ವಿದೂಷಕ ನಾಗರಿಕ ಪೀಠವರ್ಧನ[3]ರೆಂಬ[3] ನಾಲ್ವರ್ ಸಖರಂ ಹಸ್ತಿನಿ ಚಿತ್ತಿನಿ ಶಂಖಿನಿ ಪದ್ಮಿನಿಯರೆನಿ[4]ಪ[4] ನಾಲ್ಕು ತೆಱದ ಸಖಿಯರುಂ ಬಾಲೆ ಯೌವನೆ ಪ್ರೌಢೆ ಲೋಲೆಯರೆನಿಪ ನಾಲ್ಕು ಬಗೆಯ ಸ್ತ್ರೀ ಸಮೂಹಮುಂ ಹಸ್ತ್ಯಶ್ವ ರಥ ಪದಾತಿಯೆಂಬ ಚಾತುರ್ಬಲಮುಂ ಪ್ರಧಾನ ದಂಡನಾಥ ಸಾಮಂತ ಮಂಡಲಿಕರೆಂಬ ಬಾಹತ್ತರ ವಿನಿಯೋಗರ್ವೆರಸಿಯುರಮನೆಯಂ ಪೊಱಮಟ್ಟು ಪುರವೀಥಿಗಳಂ ನಿರೀಕ್ಷಿಸುತುಂ ಅಂಗಡಿ ಕೇರಿಗಳ ಶೃಂಗಾರಮಂ ನೋಡುತ್ತುಂ ಸೂಳೆಗೇರಿಗಳನಾಲಿಸುತ್ತುಂ ನಂದನವನಕ್ಕೆ ಬರುತಿರ್ಪಲ್ಲಿ

ಮತ್ತೇಭವಿಕ್ರೀಡಿತ

ವಿಲಸನ್ನೂಪುರಸಿಂಜಿತಂ ಜಿತಮರಾಳಂ ಭಾಳವಿಶ್ರಾಂತ ನಿ
ರ್ಮಲಚೂರ್ಣಾಳಿವಿಡಂಬನಂ ಭುವನಜನ್ಮಾಕ್ರಾಂತರೋಚಿರ್ಮಯೋ
ಜ್ವಲಗಂಧೋಗ್ಧವ ಬಾಣದೂರ ತನುಸೌರಭ್ಯಂ ಲಸತ್ಸೇವ್ಯ ಕಿಂ
ಜಲುಕೋನ್ನತ್ಯವೆನಲ್ಕೆ ತೇಜವೆಸೆಯಲ್ ಬಂದತ್ತು ಕಾಂತಾಜನಂ ೨೧

[5][ಕುಸುಮೋಷಂ][5] ವಿರಹೀಜನಕ್ಕೆ ವರುಷಂ ಬಾಡಿರ್ದ ಸಸ್ಯಾಳಿಗಂ
ವಸುಧಾ [6]ಚಕ್ರಕೆ[6]ಯಾ ಶರತ್ಸಮಯಮುಂ ಹೇಮಂತ ವೃಕ್ಷಾಳಿಗಂ
ಶಿಶಿರಂ ಪಕ್ಷಿಸಮೂಹಕಂ ವನಕೆ ಚೈತ್ರಂ ಕೂಡೆ ಬಪ್ಪಂದದಿಂ
ಕುಸುಮಾಸ್ತ್ರಂಗೆ ಬಲೀಂದ್ರ ನಂದನವನಕ್ಕೈತಂದನುತ್ಸಾಹದಿಂ ೨೨

ವಚನ : ಅಂತು ಬಂದು ವನಮಂ ಪುಗುವಲ್ಲಿ

ಮತ್ತೇಭವಿಕ್ರೀಡಿತ

ಅಳಕಂ ತುಂಬಿಗಳಾನನಂ ಸರಸಿಜಂ ಚೆನ್ನೈದಿ[7]ಲೇ ಲೋಚನಂ
ಗಳು ನಾಸಂ ಬಹು[7]ಚಂಪಕಂ [8]ತುಟಿಗಳೇ ಬಿಂಬೋಷ್ಠಮಾ[8] ಶಾಖೆಗಳ್
ನಳಿತೋಳ್ಗಳ್ ಪೊಲೆ ಚಕ್ರವಾಕಯುಗಳಂ ಗಂಭೀರ ನಾಭೀಸರಂ
ಲಳಿತೋರುದ್ವಯ ಬಾಟಿಕೆಯೆಂಬಿ ತಳಿ[9]ರಂ[9] ಸ್ತ್ರೀಯಂತಿ[10]ರಲ್[10] ನಂದನಂ ೨೩

---

1 ತಂ (ಚ) 2 ಗಚ್ಚರಿಯಮಾ (ಚ) 3 ರೆನಿಪ (ಚ) 4 ಪ್ಪ (ಚ) 5...ದಪ್ಪಂ (ಕ ಗ ಚ)
6 ಜನಕ್ಕೆ (ಗ) 7 ಲಕ್ಷ್ಮಿಯುಗಂ ವಿಲಸನ್ನಾಸಿಕ (ಚ) 8 ಅಧರಮಾ ಬಿಂಬಾಫಲಂ (ಚ)
9 ರಂ (ಗ ಚ) 10 ರಾ (ಚ)

ಕಂದ : ಬಂದು ವನಲಕ್ಷ್ಮಿಯುತ್ಸವ
ದಿಂದಂ ಬಲಿನೃಪನನಿದಿರುಗೊಂಡೊಲವಿಂದಾ
ನಂದ ಮಿಗೆ ಪರಸಿ ಕೈವಿಡಿ
ದಂದೊಪ್ಪುವ ಚೈತ್ಯಮಂಟಪವನ್ನೆದುವುದುಂ ೨೪

ಲಾಮಚದ ನೆರಕೆ ಪಿರಿದ
ಪ್ಪಾ ಮುಡಿವಾಳಗಳ ಮೇಲು[1]ಕಟ್ಟೊಪ್ಪಿರ್ಪಾ
ಅ[1] ಮಲ್ಲಿಗೆಯಲರ್ವಾಸಿನ
ಲಾ [2]ಮಾ[2] ಘನಚೈತ್ಯಶಾಲೆ ಕಂಗೊಳಿಸಿರ್ಕುಂ ೨೫

ಪೊಂಬಾಳೆಯ ಚಾಮರವಾ
ರಂಭಾದಳದಾಲವಟ್ಟಲೊಪ್ಪುತ್ತಿಹ ದಾ
ಳಿಂಬದಲರ ಜಂಬುಗಳಿಂ
ತಂಬೆಲರಿಂ ಚೈತ್ಯಶಾಲೆಯತಿಮೋಹಿಸುಗುಂ ೨೬

ವಚನ : ಅಂತೊಪ್ಪು[3]ತ್ತಿ[3]ರ್ಪ ಚೈತ್ಯಮಂಟಪದೊಳಗೆ ತಳಿರ್ವಸೆಯ ಮೇಲೆ ಬಲಿಭೂಪನಂ ನಿಲಿಸಿ ಬಂದುಗೆಯುಲರಾರತಿಯನೆತ್ತಿ ಮುಂದಗಮುನೆಯುರ್ವೆರಸಿ ಜಲಕ್ರೀಡೆಗೆಂದು ಲಲನೆಯುಹಾನನಮುಂ ನೋಡುತಿರ್ಪಲ್ಲಿ ಪೂಗೊಳಂ ರಾಜಿಸುತಿರ್ದುದೆಂ[4]ತೆನೆ[4]

ಕಂದ : ಎಸೆವ ಷಡುರುತುಗಳಂತಾ
ಗಸದಂ[ತಂ]ಬೋಧಿಯಂತೆಯುಮರಾವತಿಯುಂ
ತಸಮಾಕ್ಷನಂತೆ ರಾಜಿಪ
ಶಶಿಯಂತಾ ಸಾರಪೂರ ನವಕಾಸಾರಂ ೨೭

ತಾವರೆಯಿಂ ನೈದಿಲೆಯಿಂ
ಗಾವರಿಸುವ ತುಂಬಿವಿಂಡು ಹಂಸಾಳಿಗಳಿಂ
ದಾವ[5]ಗಮುಂ ಭೋಗಿಪ[5] ಚ
ಕ್ರಾವಳಿಯಿಂ ನಿರ್ಮಲೋದಕವೆ ಕೊಳನೆಸೆಗುಂ ೨೮

---

1 ಗಳೊಪ್ಪಿಪ್ಪಾ (ಗ ಚ) 2 ಮಹ (ಚ) 3 ತ್ರಪು (ಚ) 4 ತೆಂದೊಡೆ (ಚ)
5 ಗಂ ಭೋಗಿಪಾ (ಚ)

ಅಂತೊಪ್ಪುತಿರ್ಪ ಕೊಳದೊಳ್
ಸಂತಂ ಮೃಗಮದವ ಕುಂಕುಮವ ಕಲಸುತ್ತುಂ
ಕಾಂತೆಯರತಿಮುದದಿಂ ಭೂ
ಕಾಂತನ ನೇಮ[1]ದೊಳೆಯಾಟವಾಡುತಲಿರ್ದರ್[1] ೧೯

ವಚನ : ಅದೆಂತೆನೆ

ಕಂದ : ಕುರುಳ್ಗಳಳಿಕುಲದಿನಾನನ
ಸರಸಿಜದಿಂ ಲೋಚನೋತ್ಪಲ ಸ್ತನಚ[2]ಕ್ರ
ಸ್ಫುರಿತರುಚಿ[2]ಯುದಕದಿಂದಾ
ಸರಸಿಯೊಳಾ ಸರಸಿಯಾಡುವಂತಾಯ್ತಾಗಳ್ ೨೦

ಆ ಜಲ[3]ಕೇಳಿಯ[3]ನಾಡಿ ಸ
ರೋಜಾನನೆಯರ್ ದುಕೂಲ [4]ವಸ್ತ್ರಂಗಳೊಳಾ[4]
ರಾಜಿಸಿ ಮಲ್ಲಿಗೆ ಮೊಲ್ಲೆಯ
ಜಾಜಿಯ ಪೂದುಱುಬಿ ಚಂದನದ ಬೊಟ್ಟ[5]ಟ್ಟರ್[5] ೨೧

ವಚನ : ಅಂತು ಕಾಂತೆಯರ್ ಸಂತೋಷದಿಂ ಜಲಕ್ರೀಡೆಯಂ ಸಲವಿಂದಾಡಿಯೊಪ್ಪದಿಂ ಸಿಂಗರಿಸಿಕೊಂಡು ಪುಷ್ಪಾಪಚಯಕ್ಕೆ ಪೋಪಲ್ಲಿ

ಚಂಪಕಮಾಲೆ

ಸರಸಿಜ ಚಂಪಕಂ ಬಕುಳ ನೈದಿಲೆ ಮಲ್ಲಿಗೆ ಮೊಲ್ಲೆ ಜಾಜಿ ಪಾ
ದರಿ ಸುರಹೊನ್ನೆ ಕೇತಕಿಕುಲಂ ಮರುಗಂ ಮುಡಿವಾಳ ಪಚ್ಚೆ ಬಂ
ಧುರದವನಂ ಸುಗಂಧಿಬಗೆ ಬಂದುಗೆ ಭೂಪಥಿಕ್ಕೆರವನ್ರಜಂ
ಸುರಗಿ ಸಮೂಹಮಿರ್ಪ ಸುಮವೀಥಿಯೊಳೊಯ್ಯನೆ ಬಂದನಾ ನೃಪಂ ೨೨

ವಚನ : ಅಂತು ಬಂದು ಕುಸುಮಾಯುಧರೂಪನಪ್ಪ ಭೂಪಾಲಂ ಕುಸುಮವೀಥಿಯೊಳ್ ಸುಳಿವ ಕುಸುಮಗಂಧಿಯರ್ ಕುಸುಮಂಗಳನಾಯ್ದು ಕೊಯ್ವಲ್ಲಿ

ಕಂದ : ತರುಣಿ[6]ಯರೇ[6] ಸುಮಬಾಣನ
ಸರಳುಗ[7]ಳೇ[7] ವನವ ತೀವಿದೊಲ್ ಪರಿದರ್ ಪರಿ
ಪರಿಯ ಪರಿಮಳದ ಬಿರಿಮುಗು
ಳರಳುಗಳಂ ಕೊಯ್ಯುತಿರ್ದರತಿಮುದದಿಂದಂ ೨೩

---

[1] ದಲಿಕ್ರೀಡೆಯಾಡುತಮಿರ್ದರ್ (ಚ) [2] ಕ್ರದಿಯುರುಕಾಂತಿ (ಚ) [3] ಕ್ರೀಡೆಯ (ಚ)
[4] ವಸ್ತ್ರಾಭರಣದಿ (ಗ ಚ) [5] ಟ್ಟಂ (ಕ) [6] ಯರ್ ಕು (ಚ) [7] ಳಾ (ಚ)

ಕಮಲಾವಸಥಮೆನಿಪ್ಪಾ
ಕಮಲಾನನೆಯರ್ ವಿಲಾಸದಿಂದಂ ಕರಸ
ತ್ಕಮಲದ ಕಮಲಾಕರದೊಳ್
ಕಮಲ ಲತಾಂತಗಳ ಕೊಯ್ವರ[1]ಬ್ಜಾನನೆಯರ್[1] ೩೪

ಮಲ್ಲಿಗೆ ಘನಸುಖಿಯೆನೆ ನಿ
ಮ್ಮಲ್ಲಿಗೆ ನಾವ್ಬೆನೆಬಂದೆವೆನುತಳಿಗಳ್ ತ
ಮ್ಮಲ್ಲಿಗೆ ಕವಿಯಲ್ ಪೂಗಳ
ಮಲ್ಲಿಗೆಯೊಳ್ ಕೊಯ್ವರಧಿಕ ಮಲ್ಲಿಗೆಮುಡಿಯರ್ ೩೫

ಜಾ[2]ತೀ[2]ಸುಮಗಳೊಳುತ್ತಮ
ಜಾತಿಯೆ ನೀವೆನುತೆ ಬಂದು ಸ್ತ್ರೀಯರೊಳುತ್ತಮ
ಜಾತಿ ಕಾಮಿನಿಯರೊಲ್ದಾ
ಜಾ[3]ತೀ ಸುಮಗಳನು[3] ಕೊಯ್ವರಬ್ಜಾನನೆಯರ್ ೩೬

ಸೇವಂತಿಯ ತೋಂಟದೆ ಬಲು
ಸೇವಂತಿಯ ಹೂವ ಕಂಡು ಸಂತಸದಿಂದಂ
[4]ಸೇವಂತಿ[4]ನಿಯರ್ ಗಾತ್ರದ
ಸೇವಂತಿಗೆಯಲರ ತಿರಿದರತಿಮುದದಿಂದಂ ೩೭

ಬೇರಂ ಬಲ್ಲರಿಗೆಲೆಯುಂ
ತೋಱುವೆ ನೀನೆನುತೆ ಬಂದು ಮುಡಿವಾಳದ ಬಲ್
ಬೇರಂ ಪರಿಮಳಗಳ ನಿಡು
ಬೇರಂ ತೆಗೆವಂತೆ ತೆಗೆದರಾ ಕೋಮಲೆಯರ್ ೩೮

ವಚನ : ಅಂತು ಪುಷ್ಪಾಪಚಯಮಂ ಮಾಡಿ [5]ತ[6]ಮ್ಮ ವಿಲಾಸದಿಂದಾ ವನತರುಕುಲಮಂ ಮರುಳ್ಮಾಡಿ ಪೂವಾಗಿಸುತಿರ್ದರದೆಂತೆ[6]ನೆ[5]

---

[1] ಬುಜಾಂಬಕಿಯರ್ (ಚ) [2] ತಿಕು (ಚ) [3] ತಿಯಹೂವುಗಳ (ಚ)
[4] ಸೀಮಂತಿ (ಗ) [5] ಲಲನೆಯರ್ ತ (ಗ) [6] ತೆಂದೊಡೆ (ಗ ಚ)

ಕಂದ : ಕರಸೋಂಕಿನಿಂ ಪ್ರಿಯಂಗು
ಸ್ತರುಗಳನನವದ್ಯದಿಂದೆ ಪೊಂಪೋಜಿಸುವಾ
ಕರಸೊಬಗಿನ ತರುಣಿಯರೀ
ಪುರುಷರ್ಕಳನೇನ ಮಾಡರೇನಾಗಿಸರೋ ೩೯

ಮ[1]ದ್ಯ[1]ಗಂಡೂಷದಿಂದಂ
ಲೋಧ್ರಮನಾಗಿರ್ದ ವಕುಳ ವೃಕ್ಷಂಗಳನನ
ವದ್ಯಂ ಪೂವಾಗಿಪ ಹರಿ
ಮಧ್ಯೆಯರೊಲಿದಿರ್ಪ[2]ರಾವಗಂ[2] ನಂದನದೊಳ್ ೪೦

ಶೋಕಮ ನೀನಱಿಯದೆ ರತಿ
ಶೋಕವ ಕಂಡರಿಗೆ ಕರೆದು ಮದನಾಗಮದಾ
ಶೋಕಸ್ವರೂಪವೆನಿಸುವ
ಶೋಕೆಯ ಪೆರ್ಮರನನೊದೆದು ತಳಿರಾಗಿಸುವರ್ ೪೧

ತಿಲಕದ ವೃಕ್ಷ[3]ವ[3] ತಮ್ಮಯ
ಸುಲಲಿತಲೋಚನಗಳಿಂದೆ ನೋಡಿಯದಲ್ಲಳ
ನೆಲೆಗೊಳಿಪರೊಲಿದು ನಲಿದಾ
ಲಲನೆಯರಿದಿ[4]ರೊಳಗೆ[4] ನಿಲುವ ಧೃತಯುತರೊಳರೇ ೪೨

ತರುಣಿಯದೊರ್ವಳ್ ನೋಡುತೆ
ತರುಗಳೊಳುತ್ತಮವಿದೆಂದು ತ[5]ಬ್ಬಿಕ್ಕೆ[5]ಸಲ್ಕಂ
ದುರು[6]ಕುಚಯುಗ್ಮದ[6] ಸೋಂಕಿಗೆ
ಕುರವಕ ಪುಳಕಿಸಿತು ನರರು ಪುಳಕಿಸದಿಹರೇ ೪೩

ಮಂದಗಮನೆಯರು ವನದೊಳ್
ಮಂದೈಸಿದ ಹರುಷದಿಂದೆ ಸಮ್ಮೇಳದೊಳಂ
ಮಂದಹಾಸದ ವಿಲಾಸದೆ
ಮಂದಾರದ ಮರದೊಳಾಗಿಸಿದರರಲುಗಳಂ ೪೪

---

1 ದ್ಯಂ (ಗ) 2 ರಾ (ಚ) 3 ಗಳ (ಚ) 4 ಂನಲಿ (ಚ) 5 ಕ್ಕೈ (ಚ)
6 ಪಯೋಧರದ (ಚ)

ಮಧುಘೃತವನು ನೆಱೆ ಪೀರ್ದಾ
ಮುದದಿಂದಂ ಸೊರ್ಕಿ ವಕ್ತ್ರಕಾವ್ಯದ ಸವಿಯುಂ
ಮದವೇಱಿಸಿ ಸಂಪಗೆಯಂ
ಮುದದಿಂ ಪುಷ್ಪಗಳನಾಗಿಸರ್ ಭಾಮಿನಿಯರ್ ೮೫

ಗಾನರಸ ಮಿಗಿಲು ಪಾಡುತೆ
ಮಾನಿನಿಯರ್ ಚೂತವೃಕ್ಷಗಳ ಪೂವಾಗಿಸಿ
ಯಾ ನಂದನವನದೊಳಗ
ತ್ಯಾನಂದಮೊಳಾಡುತಿರ್ದರಾ ಕೋಮಲೆಯರ್ ೮೬

ಕೊಂಡಾಡಿ ಕರ್ಣಿಕಾರದ
ತಂಡವ [1]ದಟ್ಟೈಸಿ[1] ಕುಸುಮನಾಗಿಸು[2]ತಾ ವನ[2]
ಮಂಡಲ ಮಧ್ಯದೊಳಾಡುತ
ಖಂಡಿತ ತರುಣಿಯರು ರೂಪವಿಭ್ರಮದಿಂದಂ ೮೭

ಆ ವನದೊಳಗತಿಚೆಲ್ವಿನ
ಭಾವಕಿಯರ್ ಸುತ್ತಿ ಸುಳಿದು ಸುರಹೊನ್ನೆಗಳಂ
ಪೂವಾಗಿಸಿ ನಲಿದಾಡುವ
ಲಾವಣ್ಯದ ಸಿರಿಯನೊರ್ವನೇಂ ಬಣ್ಣಿಪನೇ ೮೮

ವಚನ: ಅಂತು ಸಕಲಸ್ತ್ರೀಯರು ಸುಕುಮಾರತೆಯಿಂ ಪುಷ್ಪಂಗಳನೊಪ್ಪಂಬಡಿಸೆ ಭೂಪಾಲಕಂ ವನಿತೆಯರ್ ಸಹ ವನವಿಹಾರಂಗೈದು ಪೂದೊಡವುಗಳು ಮಲ್ಲಿಕಾಮುಕುಳ ಗ್ರೈವೇಯಕಂ ಸುರಹೊನ್ನೆಕೋರಕ ಲಲಂತಿಕಂ ಬಂಧುಕಾಕುಸುಮ ಬಂಧುರಬಾಹುಪೂರಂ ಹೇಮಪುಷ್ಪಾರ್ಪಿತ ಕರ್ಣಪೂರಂ ನಾರಂಗಪ್ರಸೂನಸಂಘ ಮಂಜೀರಂ ಲತಾಳಿ ಲತಾಂತದ ಚಿಂಚಪತ್ರಂ ವಲ್ಲರೀವೇಲ್ಲಿತ ಸಹಸನತೋದ್ಗದ ಮೇಖಲಂ ಸುಗಂಧಶಾಕ ರೋಲಂಬ ಘನಛತ್ರವೆರಸಿದ ಕಾಂತಾಜನಂ ಬೆರಸು ಕಡೆಗಣ್ಣಕಾಂತಿಯಿಂ ನುಡಿಯ ಬೆಳಗಿನಿಂ ತೊಡವಿನ ಪಜ್ಜಳಿಕೆಯಿಂ ಬಿಜಯಂಗೈದು ಬರ್ಪ ಮನ್ಮಥನ ಪೌಜಿನಂತೆ [3]ಪು[3]ರಾಂಗನೆಯರ್ವೆರಸಿ ಧರಾಧೀಶ್ವರಂ ಪು[4]ರಾಭಿಮುಖನಾಗಿ ಬರ್ಪ ಸಮಯದೊಳ್ ಸೂರ್ಯನಸ್ತಂಗತನಾದನದೆಂತೆನಲ್[4]

---

[1] ದೃಷ್ಟಿಯಿಸಿ (ಗ) [2] ವಾತನ (ಗ) [3] ವ(ಚ) [4] ರ ಕಭಿಮುಖವಾಗಿ ಬರುತಿರ್ಪ ಸಮಯದಲ್ಲಿ ಸೂರ್ಯನಸ್ತಾಚಲಕ್ಕೆ ಬಂದನದೆಂತೆಂದೊಡೆ (ಚ)

ಕಂದ : ಮಾಣದೆ ಪ್ರಾಗಂಗನೆ ಬಲು
ಮಾಣಿಕ್ಯದ ಚೆಂಡನಿಡಲು [1]ಚವಿಯಿಂ[1] ಪಶ್ಚಿಮ
ದೇಣಾಕ್ಷಿಯನಲೆ[2]ಯುತ್ತುಂ[2]
ಕ್ಷೋಣಿಗೆ ಬೀಱ್ಪಂತಿರಿರ್ದುದರ್ಕನ ಬಿಂಬಂ ೪೯

ಜ್ಞಾನಕೃತದಿಂದೆ ಪದ್ಮಿನಿ
ಮಾನಿನಿಯಂ ಪುಷ್ಪವತಿಯ ಸೋಂಕಿನೊಳೆ ಜಲ
ಸ್ನಾನಂಗೈವೊಲು ರವಿ ದಿವ
ಸಾನಂದವನುಳಿವುತಿಳಿವ ಪಡುಗಡಲೆಡೆಯೊಳ್ ೫೦

ವಚನ : ಆಗಳ್

ಕಂದ : ಮುಗಿವಬ್ಜ[3]ಮು[3]ರಳ್ವ ಕೈರವ
ವಗಲು[4]ತಲಿ[4]ಹ ಚಕ್ರಮಿಥುನ ಕೋಟರ[5]ಮುಂ ತಾಂ[5]
ಪುಗುತಿಹ ವಿಹಗಸಮೂಹಂ
ಮಿಗೆ ನಸುಸುಳಿಗಾಳಿಯೆಸೆವ ಸಂಧ್ಯಾರಾಗಂ ೫೧

ವಚನ : ಅಂ[6]ತಪ್ಪ[6] ಸಂಧ್ಯಾಕಾಲ[7]ದೊಳ್[7] ಸತ್ಕ್ರಿಯೆಗಳಂ [8]ತೀರ್ಚಿ ಸಂತಸಂ ಮಿಗೆ[8] ಬಂದು ಪುರಮಂ ಪುಗು[9]ವಾಗಳ್[9] ಸಮಸ್ತ ದೇವಾ[10]ಯತನಂಗಳೊಳಮರ್ಚಕರ್[10] ದೇವಪೂಜೆಯುಂ ಭಾವಶುದ್ಧಿಯಿಂ ಮಾಡಿ ಭೇರೀ ಮೃದಂಗ ಶಂಖಧ್ವಾ[11]ನಂಗಳಿಂ[11] ಧೂಪ ದೀಪಂಗಳಿಂ ಷೋಡಶೋಪಚಾರಂಗಳಂ ಮಾಡಿ ಗೀತ ವಾದ್ಯ ನೃತ್ಯಂಗಳಿಂವಾಡಿ ಪಾಡಿ ನಮಸ್ಕಾರಂಗಳಂ ಮಾಡಿ ತಂತಮ್ಮ ನಿಳ[12]ಯಮಂ ಸಾರ್ದರಿತ್ತಲ್ ಮಹಾಂಧ ಕಾರಂ[12] ಲೋಕಮೆಲ್ಲ[13]ಮನಾವರಿಸು[13]ತಿರ್ದುದದೆಂತೆನೆ

ಚಂಪಕಮಾಲೆ
ಕರಿದು ಮಹೇಂದ್ರನೀಲ ಹರಿಸೀಲದಿನಂಜನಪರ್ವತಂ ಮಹಾ
ಕರಿದು ಮಹೇಂದ್ರನೀಲಮಣಿಯುಂ ಮಿಸುಪಂಜನಶೈಲದಿಂ ದಿವಾ
ಕರರಿಪುವಿಂದ್ರನೀಲಪೆ [ಮ]ಹಾಂಜನಶೈಲವಿ[14]ದುಂತುಪರ್ಕಳಿಂ[14]
ಕರಿದೆನೆ ಭೂತಳಾಂಬರಮ ತೆಕ್ಕನೆ ತೀವಿತು ವಿಭ್ರಮಂ ತಮಂ ೫೨

---

1 ದ್ಯುತಿಯಿಂ (ಚ) 2 ವೃತ್ತಂ (ಚ) 3 ವ (ಚ) 4 ತ್ತಿ (ಚ) 5 ಗೂಡಂ (ಚ) 6 ತಾದ (ಚ) 7 ದಲ್ಲ (ಚ) 8 ಮಾಡಿ ಪರುಷದಿಂ (ಚ) 9 ವಲ್ಲಿ (ಗ ಚ) 10 ತಾ ಗೃಹದೊಳು ಪೂಜಾಕಾರರು (ಚ) 11 ನದಿಂ (ಚ) 12 ಯಕ್ಕೆ ಪೋಪರಿತ್ತಲು ಮಹತ್ತಾದ ಕತ್ತಲೆ (ಚ) 13 ಮಂ ಸುತ್ತಿಮುತ್ತು (ಚ) 14 ದಂತದಂಗೆ ಬಲ್ (ಚ)

ಕಂದ : ಕತ್ತಲೆಯ ನೋಡಲಂಬರ
ನೇತ್ರಂಗಳ ಪಲವ ಪಡೆದ ತೆಱದಿಂದಾಗೊ
ತ್ತೊತ್ತೆಯಿನಿರ್ದವು ತಾರಕಿ
ಸುತ್ತುಂ ಶೋಭಿಸುತ ಪರೆದನಾಕಾಶ[1]ನೊಳಂ[1] ೫೩

ವಚನ : ಅಂತಾದ ನಕ್ಷತ್ರವೀಥಿಯಂ ಮೀಱಿ ಕತ್ತಲೆ ಮಹಾಂಧಕಾರಮಾಗಿರ್ದುದದೆಂತೆಂದೊಡೆ

ಚಂಪಕಮಾಲೆ

ಕರಿದಹುದಾನೆಯಿಂ ಧರಣಿಯಾನೆಗಳಿಂ ಧರೆಯಿಂದಲಂಜನಂ
ಕರಿದಹುದಾನೆಯಿಂ ಧರೆಯಿನಂಜನದಿಂ ನವನೀಲಮೇಘಮುಂ
ಕರಿದಹುದಾನೆಯಿಂ ಧರೆಯಿನಂಜನ ಮೇಘದೆ ದೇವಕೀಸುತಂ
ಕರಿದಹುದಾನೆಯಿಂ ಧರೆಯಿನಂಜನ ಮೇಘದಿ ಕೃಷ್ಣನಿಂ ತಮಂ ೫೪

ವಚನ : ಮತ್ತಮಾ [2]ಮಹಾಂಧ[2]ಕಾರದೊಳ್

ಕಂದ : ಕತ್ತಲೆ ರವಿಕಿರ[3]ಣಗಳಂ[3]
ಕತ್ತರಿಸುತೆ ಸೆಱೆಯನಿಟ್ಟ ತೆಱದಿಂ ಮನೆಯೊಳ್
ಪೊತ್ತಿಸಿ[4]ದ[4] ದೀವಿಗೆಗಳೊ
[5]ತ್ತೊ[5]ತ್ತೆಯಲೆಸೆದಿರ್ದವುಜ್ಜ್ವಲ ಪ್ರಭೆಯಿಂದಂ ೫೫

ವಚನ : ಅಂತೊಪ್ಪುವ ದೀಪ್ತಿಕಾ ನಿಕಾಯಂಗಳನೆಂತೆಂ[6]ದುಂ[6] ಕೈಕೊಳದೆ ದಿಗ್ಭ್ರಮೆಯಂ ಮಾಡುತ್ತುಂ ಒಗುಮಿಗೆಯ ಕತ್ತಲೆ ಸುತ್ತ ಕವಿದಿರ್ದುದೆಂ[7]ತೆನಲ್[7]

ಚಂಪಕಮಾಲೆ

ಧರೆಯೊಳು ತುಂಬಿಗಳ್ ಕರಿದು ತುಂಬಿಗಳಿಂ ಪರಪು[8]ಷ್ಟ[8]ಯೂಥಮುಂ
ಕರಿದಳಿಯಿಂ ಪಿಕಂಗಳ ಸಮೂಹಗಳಿಂ ದಿತಿಜಾತರುಂ ಮಹಾ
ಕರಿದಳಿಯಿಂ ಪಿಕಾಳಿಗಳಿನಾ ದಿತಿಜಾತರಿನಭ್ರಮಂಡಲಂ
ಕರಿದಳಿಯಿಂಪೆ ಕೋಗಿಲೆಯಿನಾ ದಿತಿಜಾತರಿನಭ್ರದಿಂ ತಮಂ ೫೬

---

[1] ದೊಳ್ (ಕ) [2] ಅಂಧ (ಚ) [3] ಣಂಗಳ (ಗ) [4] ದಾ (ಕ) [5] ಳೊ (ಕ) [6] ಮು (ಚ) [7] ತೆಂದೊಡೆ (ಚ) [8] ಟ್ಟ (ಚ)

ವಚನ : ಅಂತು ಕತ್ತಲೆಯಾಗಲೊಡಂ ಸಕಲಜನಂ ತಂತಮ್ಮ ನಿಕೇತನಂಗಳ್ಗೆ ಪೋಗಿ[1]ಲೊಡನುಭಿಸಾರಿಕಾ ನಿಕಾಯಮನುಭಯದಿಂ ಪೊಱಮಟ್ಟು ತಂತಮ್ಮ ವಲ್ಲಭರೊಳ್ ಕ್ರೀಡಿಸುತಿರ್ದರದೆಂ[2]ತೆನಲ್[2]

ಕಂದ : ಮನೆಯಾಣ್ಮರಱಿಯದಂತಿರೆ
ಘನಕತ್ತಲೆಯಲ್ಲಿ[3] ಕುಹಕಗತಿಯಿಂ ಪೊಱಮ
ಟ್ಟನುನಯದಿಂದುಪವಲ್ಲಭ
ರನುಭವಕೇಳಿಯೊಳ್[4] ಸುಖಿಸಿದರ್ ಭಾವಕಿಯರ್ ೫೭

ಈ ತೆಱದೆ ಪಾಣ್ಬ ಪಾಣ್ಬೆಯ
ರೋತು ಸುಖಾವಹಮೊಳಿರ್ದು ತಮ್ಮಯ ನಿಳಯ
ಕ್ಕಾತುರದೆ ಪೋಗೆ ಸುಜನ
ಪ್ರೀತಿಕರಂ ಚಂದ್ರನುದಯವಾಗುತ್ತಿರ್ದಂ ೫೮

ವಚನ : ಆ ವೇಳೆಯಲ್ಲಿ

ಕಂದ : ಅರಳುತಿರೆ ಕುಮುದನಿಚಯಂ
ಕರಗುತ್ತಿರೆ ಚಂದ್ರಕಾಂತಮುಂಬುಧಿ ಪೆರ್ಚು
ತ್ತಿರಲು[5] ಚಕೋರೌಘಕ್ಕಂ
ಹರುಷಂ ಮಿಗಿಲಾಗಲಿಂದು ಉದಯಂಗೈದಂ ೫೯

ವಚನ : ಅಂತು ಚಂದ್ರೋದಯವಾಗಲೊಡನೆ ಸಂದಣಿಸಿದ ಬೆಳುದಿಂಗಳಂಧಕಾರಮಂ ಪರೆಯಿಸುತತಿ ಶುಭ್ರದಿಂ ವಿರಾಜಿಸುತಿರ್ದುದವೆಂ[6]ತೆನೆ[6]

ಮತ್ತೇಭವಿಕ್ರೀಡಿತ
ಧವಳಂ ಶಂಖಕೆ ಮೌಕ್ತಿಕಂ ಧವಳಮಾ ಶಂಖಕ್ಕೆ ಮುಕ್ತಾಳಿಗಂ
ಧವಳಂ ಶಕ್ರನನೇಭ ಶಂಖಚಯಕಂ ಮುಕ್ತಾಳಿ ಶಕ್ರೇಭಕಂ
ಧವಳಂ ಕ್ಷೀರ ಸುಶಂಖ ಮೌಕ್ತಿಕಚಯಂ ಶಕ್ರೇಭಕಂ[7] ಕ್ಷೀರಕಂ
ಧವಳಂ ತಾನೆನೆ ತೀವಿದತ್ತು ಜಗಮಂ ವಿಖ್ಯಾತ ಚಂದ್ರಾತಪಂ ೬೦

---

[1] ಲಭಿ (ಗ) [2] ತೆನೆ (ಚ) [3] ಯೊಳಗೆ (ಚ) [4] ಯಲಿ (ಚ) [5] ಲ್ಲಿ (ಗ)
[6] ತೆಂದೊಡೆ (ಚ) [7] ತಾಂ (ಚ)

ವಚನ : ಅಂತು ಸಂದಣಿಸಿರ್ದ ಚಂದ್ರನ ಬೆಳುದಿಂಗಳಂ ನಾಗರಿಕಂ ಕಂಡು ಬೇಗದಿಂ ಪರಿತಂದು ಧರಣೀಪಾಲಂಗೆ ಹರ್ಷದಿಂ ಮೈಯಿಕ್ಕಿ ಕೈಮುಗಿದು ದೇವಾ ಭಾಸ್ಕರನ ಪರಾಂಭೋಧಿಯೊಳಿಳಿದಂ ದೆಸೆಯಂ ತೀವಿರ್ದ ಪೊಸಕತ್ತಲೆಯ ಮೊತ್ತಂ ಪಱಿಯಿತ್ತು ಚಂದ್ರನ ಬೆಳುದಿಂಗಳ್ ಪುಂಜೈಸಿತು ಭಾವಜನಾರ್ಪಿಂ ಪೂ[1]ಪುಣುಂಬಂ[1] ಪೂಡಿದಂ ವಿರಹಿ[2]ವ್ರಾತಂ[2]ಗಳೆಲ್ಲಂ ತರುಣಿಯರ ಮಱೆಯಂ [3]ಪೊಕ್ಕುದು[3] ಅಮೃತಾಂಶುದೀಧಿತಿ ಸುಮನೋಹರಮಾಗಿರ್ದುದಿಂದು ರಾತ್ರೀವಿಹಾರಮಂ ಪ್ರೀತಿಯಿಂ ಮಾಡುವುದರ್ತಿಯೆಂದು ಬಿನ್ನಪಂಗೆಯ್ವ ಮನ್ನಣೆಯಗೆ ಪ್ರಸಾದನಮನಿತ್ತು ನಿರ್ಮಲೀಕೃತಾವಯವಂ ಸರ್ವಾಭರಣ ಭೂಷಿತಂ ಪರಿಮಳಪೂರಿತಶರೀರನುಂ ಪೀತಾಂಬರ ವಸ್ತ್ರಾಭರಣನುಂ ಜಾತೀಕುಸುಮಾವತಂಸಂ ತಾಂಬೂಲಮುಖಪರಿಶೋಭಿತಂ ನವರತ್ನಖಚಿತಹಿರ[4]ಣ್ಮಯಮಾದ[4] ಅಂದೋಳಾರೂಢಂ ಇಂದ್ರದಿಶಾಭಿಮುಖನಾಗಿ ಚಂದ್ರನ ನಿರ್ಮಲಾಕಾರಮಂ ನೋಡುತುಂ ಪುರವೀಥಿಯೊಳ್ [5]ಮುಂದೆ[5]

ಕಂದ : ಸುರತಸುಖಾಬ್ಧಿಯೊಳುರ್ಬಿದ
ನೊರೆವಿಂಡಿನ ತೆಱವೆ ಚಂದ್ರಕಾಂತದಿನೆಸೆವಾ
ಕರುಮಾಡದ ಸಂದಣಿಯಿಂ
ಸುರುಚಿರವಹ ಸೂಳೆಗೇರಿಯುಂ ಮಿಗೆ ಕಂಡಂ ೬೧

ವಚನ : ಮತ್ತಮಲ್ಲಿ

ಕಂದ : ಕೆಂದಾವರೆವೊಲ್ ಸಂಪೂ
ರ್ಣೇಂದುಕರಂ ಪೊಳೆವಮೊಗದ ಬಿಂಬಾಧರೆಯರ್
ಮಂದಗಮನೆಯರ್ ಸೊಬಗಿಂ
ನಿಂದಿರ್ದರ್ ತಮಗೆವೊತ್ತೆಯಿತ್ತವರೆಡೆಯೊಳ್ ೬೨

ಬಳಲುಮುಡಿ ಬಟ್ಟಮುಡಿಯರ್
ಸುಲಲಿತಮಪ್ಪಡ್ಡಮುಡಿಯವರ್ ಸೋರ್ಮುಡಿಯರ್
ವಿಲಸಿತ ಕೊನೆಮುಡಿಯರ್ ಕಂ
ಗೊಳಿಪೊಳ್ಮುಡಿ ಎಣ್ಣೆಗಂಟಿನಬಲೆಯರೆಸೆದರ್ ೬೩

ಕಲಶಕುಚ ಕುಂಭಕುಚಮು
ಜ್ವಲಘಟಕುಚ ನಾಳಿಕೇರ ವೃತ್ತಕುಚಂಗಳ್
ನಲಿನೀ ಕುಟ್ಮಲಕುಚ ನಿ
ರ್ಮಲ ಪೀನೋತ್ತುಂಗಕುಚದ ಸೊಬಗಿಯರೆಸೆದರ್ ೬೪

---

1 ವಿನಂಬಂ (ಚ) 2 ಜನಂ (ಚ) 3 ಪೊಕ್ಕರು (ಚ) 4 ಣ್ಯಮಯದ (ಚ) ಬರಲ್ಬಂದೆ (ಚ)

ವಚನ : ಮತ್ತಮಲ್ಲಿ ದೀನನಂ ತ್ಯಾಗಿಯೆನಿಸಿ ಕುರೂಪಿಯಂ ಮದನನೆನಿಸಿ ಜಿಗುಳೆಯಂತೆ ಹೀರಿ ಪಶುವಿನಂತೆ ತುಳಿದು ಕಪಿಯಂತಿರಪ್ಪಿ ಹಾವ್ರಮೆಕ್ಕೆಯಂತೆ ರೂಪುದೋಱಿ ಹಂಸೆಯಂತಾಕಾರವಾಗಿ ಹಂದಿಯಂತೆ ತಗದು ಮಂಜಿನ ಹೊಳೆಯಂತೆ ಆಸೆದೋಱಿ ಆಗಸದಂತೆ ಸಮಿಪಪವಾಗಿ ಬಕನಂತೆ ನೆನೆದು ಭಂಡಿಯಂತೆ ತಿರುಗಿ ದೀಹದಂತೆ ಕರೆದು ಲತೆಯಂತೆ ಅಪ್ಪಿ ಭೃಂಗದಂ[1]ತೊಂ[1]ದೆನಿಸಿ ಕನ್ನಡಿಯ ನೆಳಲಂತೆ ಕೈಸೇರಿ ಬಾಟ್ಪಿ ವಾರನಾರಿಯರಂ ನೋಡುತುಂ ಬರೆವರೆ ಮುಂದಿರ್ದ ಕೇಳೀವನಮಂ ಪುಗುತಿರ್ಪಲ್ಲಿ

ಕಂದ : ಅಗಲುವ ಪೊಣರ್ವಕ್ಕಿಯುಮಂ
ಮುಗಿವಬ್ಜಮ ವಿರಹದಿಂದೆ ವಿಕಳತೆಗೊಂಬಾ
ಮುಗುದೆಯರ ತಂಡಮಂ ಮಿಗೆ
ನಗುವಂತಿರೆ ನೈದಿಲ್ಸೈದಿದುವ್ರ ವಿಕಸನಮಂ ೬೫

ವಚನ : ಮತ್ತಮಾ ವನದೊಳಗೆ ಅರ್ತಿಯಿಂ ಸ್ತ್ರೀಪುರುಷರ್ ಪ್ರೌಢಿಯಿಂ ಕ್ರೀಡಿಸುತಿರ್ದರದೆಂತೆನೆ

ಉತ್ಪಲಮಾಲೆ

ಚೂತ ಕುಜಾತ ಛಾಯೆಯೊಳು ಮಲ್ಲಿಗೆ ಮೊಲ್ಲೆಯ ಹೂದುಱುಂ[2]ಬಿನೊಳ್[2]
ಜಾತಿ ಲತಾ ವಿತಾನನೊಳು ಕೆಂಪಳಿರೊಪ್ಪುವಶೋಕೆಯೊತ್ತಿನೊಳ್
ಕಾತತಿ ನಾಳಿಕೇರವನ ಗುಂಪಿನೊಳಾ ಪನಸದ್ರುಮಂಗಳೊಳ್
ಪ್ರೀತಿಯಿನೊತ್ತುಗೊಂಡು ನೆರೆದಿರ್ದುದು [3]ಶ್ರೀ[3]ವರರುತ್ಸವಂಗಳಿಂ ೬೬

ಕಂದ : ಇಂತಿರ್ದ ಕಾಮುಕೇಳಿಯ
ನಂತವ ನೋಡುತ್ತೆ ಬರುತ ಮತ್ತೊಂವೆಡೆಯೊಳ್
ಕಾಂ[4]ತರ[4] ವಿಯೋಗದಿಂದಂ
ಕಾಂತೆಯರತಿ ವಿರಹತಾಪದಿಂದಂ ಪೊರಳ್ದರ್ ೬೭

ವಚನ : ಅದೆಂತೆಂದೊಡೆ

ಕಂದ : ಮುಗುದಾಂಗನೆಯರ ವಿರಹದೊ
ಳೊಗುಮಿಗೆಯುನದೇನನೆಂಬೆ ಶಶಿ ವಿಷ ಕುಸುಮಂ
ಪಗೆಯನಿಲನನಲ ಮೃಗಮದ
ವಿಗಡಂ ಶಿಶಿರೋಪಚಾರವತ್ಯಭಿಚಾರಂ ೬೮

---

[1] ತಿವೊಂ (ಚ) [2] ಬಿಗಳೊ (ಚ) [3] ಸ್ತ್ರೀ (ಕ) [4] ತಾ (ಗ)

ಇಂತಾದ ವಿರಹತಾಪದ
ಕಾಂತೆಯರಿಗೆಯಮೃತವರ್ಷಗಳವೊಲ್ ತ[1]ಮ್ಮಾ[1]
ಕಾಂತರ್ ಬರಲಮರ್ದಪ್ಪುತೆ
ಸಂತೋಷದಿ ನೆರೆದು ಸುರತಸುಖದಿಂದಿರ್ದರ್ ೧೯

ಆ ಸುರತಸುಖದೊಳಿರ್ದ ವಿ
ಲಾಸಿನಿಯರ್ ಶ್ರಮದ ಸ್ವೇದಬಿಂದುವ ಕಳೆಯ
ಲ್ಕೋಸುಗ[2]ಮೆಲ್ಲರ್[2] ಸಹಿತ ವಿ
ಲಾಸದಿ ಪವಮಾನನರ್ಥದಿಂದಿರಲಾ[3]ಗಳ್[3] ೨೦

ಚಂಪಕಮಾಲೆ

ಉರವಣಿಸುತ್ತೆ ಬಂದು ನವಪೂಗೊಳದಲ್ಲಿ ಪೊರಳ್ದು ಶೈತ್ಯಮಂ
ಧರಿಸುತೆ ಪುಷ್ಪವಾಟಗಳಿಗೈದಿಯರಲ್ಗಳ ಸೌರಭಂಗಳಿಂ
ಪೊರೆವೃತಶೋಕವೃಕ್ಷಗಳ ಶಾಖೆಗಳೊಳ್ ನಿಲುತಲ್ಲಿ ಮಾಂದ್ಯದಿಂ
ಸುರತ[4]ದಬಿಲ್ಗಳಂ[4] ತವಿಸಿತಾ ವನದೊಳ್ ಸಲೆ ಮಂದಮಾರುತಂ ೨೧

ವಚನ : ಅಂತು ತೀಡುವ ಮಂದಾನಿಲನಿಂ ಸುರತಶ್ರಮಮಂ ಕಳೆವ ತರುಣೀನಿವಹಮಂ ನೋಡುತ್ತುಂ ಬರೆವರೆ ಮುಂದೆ ನವೀನಾಂದೋಳನಮಂ ಯುವತೀಜನ[5]ವಾ[5]ಡುತಿರ್ದುದದೆಂತೆನೆ

ಕಂದ : ತೆತ್ತಿಸಿ[6]ದಿತ್ತೆರ[6]ದುಯ್ಯಲ
ವೃತ್ತಸ್ತನೆಯರ್ ವಿಲಾಸದಿಂದೇಱಿದರ
ತ್ಯುತ್ತಮ ಸೌಖ್ಯದೊಳಂದುಂ
ಮುತ್ತಿ ಮುಸುಂಕುವವೊಲಾಡಿದರ್ ಭರದಿಂದಂ ೨೨

ವಚನ : ಅಂತು ನವೀನಾಂದೋಳನಮನಾಡುವಲ್ಲಿಂ ಮುಂದೆ

ಕಂದ : ಮುನಿಸಿಲ್ಲದೆ ನೆವವಿಲ್ಲದೆ
ವನಿತೆಯರತಿಮೋಹದಿಂದೆ [7]ತಮ್ಮಯ ನಲ್ಲರ[7]
ಮನ[8]ಮೆಲ್ಲಮ[8] ಸೆಳೆವಿಡಿದಿಹ
ರನುನಯದಿಂ ನೋಟ ಬೇಟ ಕೂಟದೊಳಾಗಳ್ ೨೩

---

1 ಮ್ಮಯ (ಚ) 2 ಮೆಲ್ಲರು (ಚ) 3 ಗಂ (ಚ) 4 ಶ್ರಮಂಗಳಂ (ಚ)
5 ಮಾ (ಕ) 6 ದೀಘರೆ (ಗ) 7 ತಮ್ಮಪ್ರಿಯರಾ (ಕ) 8 ನೆಲ್ಲವ (ಚ)

ವಚನ : ಅಂತು ನಾನಾ ವಿನೋದಗಳನಾನಂದದಿಂ ನೋಡುತಿರ್ಪ ಸಮಯದಲ್ಲಿ ಸೂರ್ಯನಾರಾಯಣನುದಯ ಸಾರೆಯಪ್ಪುದಂ ನಾಗರಿಕನಱಿದು ಭೋಗರೂಪನಪ್ಪ ಧರಾಧೀಶ್ವ[1]ರನಡಿಗೆ[1] ಕರಯುಗಮಂ ಮುಗಿದು ಬಿನ್ನಪಂಗೆಯ್ಯುತಿರ್ದನದೆಂ[2]ತೆನೆ[2]

ಚಂಪಕಮಾಲೆ

ಅಡಿಗಳ ಕೋಮಲಾಂಬುಜವನುನ್ನತಹರ್ಷದಿ ನಾಗರೀಕನುಂ
ಪಿಡಿದು ಕೃಪಾವಲೋಕನನೆ ಪೂರ್ವನಗಕ್ಕಿನನೈದಿಬರ್ಪ ಪೊ
ತ್ತಡಸಿತು ರಾಜಮಂದಿರಕೆ ಪೋಗಲೆವೇಟ್ಕುನೆ ಹೈ ಎನುತ್ತೆ ಸಂ
ಗಡಿಸಿದ ಭೂಪರಂ ಕಳು[3]ಹಿ ಭೂಮಿಪ[3]ನೈದಿದ ರಾಜಗೇಹ[4]ಮಂ[4] ೭೪

ಕಂದ : ಕಳುಪುವರ ಕಳುಪಿ ಕಾಂತಾ
ವಳಯಂ ಸಹಮಾ ಬಲೀಂದ್ರಸುಖದಿಂದಂ ಬಂ
ದೊಳಗಂ ಪೊಕ್ಕಿರಲೊಯ್ಯನೆ
ಬೆಳಗಂ ಸೂಚಿಸಿದುವಾಗ ಚರಣಾಯುಧಗಳ್ ೭೫

ವಚನ : ಆಗಳ್

ಮತ್ತೇಭವಿಕ್ರೀಡಿತ

ಹರಿಣಾಂಕಂ ಕಳೆಗುಂದೆ ಕೌಮುದಿಯ ಸಂಭ್ರಂ ಮಾಸೆ ಚಂದ್ರೋಪಲಂ
ವಿರಸಂಬೆತ್ತು ಚಕೋರಿಗಂ ವಿರಹತಾಪಂ ಪುಟ್ಟೆ ನಕ್ಷತ್ರಗಳ್
ಪರೆಯಲ್ ಕೈರವದುನ್ನತಂ ಕುಸಿಯಲಾ ಮಂದಾನಿಲಂ ಪೋಗಲ
ಚ್ಚರಿಯಾಯ್ತಂಬುಧಿ ತಗ್ಗಲಾಗಲರುಣಂ [5]ತಾಂ ತೋಱಿದಂ
ಪೂರ್ವದೊಳ್[5] ೭೬

ಕಂದ : ಅರುಣೋದಯಮಾಗಲೊಡಂ
ಭರದಿಂದೆಣೆವಕ್ಕಿ [6]ಸುಖಲನನುಭವಿಸಿದುವಾಂ
ಸರಸಿಜ ವಿಕಾಸಮಾದವು
ಧರೆಯ ಜನಕ್ಕೆಲ್ಲ ನಿದ್ರೆ ತಿಳಿದತ್ತಾಗಳ್ ೭೭

ಶಾರ್ದೂಲವಿಕ್ರೀಡಿತ

ಆದಿತ್ಯಂ ತಮಹರ್ತೃವಂಬುರುಹಮಿತ್ರಂ ಭಾನುಮಬ್ಜಪ್ರಿಯಂ
ಮಾರ್ವೋತ್ತಮನುನ್ನತ ಪ್ರಬಲತೇಜಃಪುಂಜ ಪದ್ಮಾಂಕಿತಂ
ವೇದಾಂತಂ ಜಗದೇಕಚಕ್ಷು ನಿಗಮಾಲಂಕಾರನಗ್ನಾಪಹಂ
ಭೇದಾಭೇದ್ಯ ದಿನೇಶನಂದುದಯಮಂ ಪೂರ್ವಾದ್ರಿಯೊಳ್ ತೋಱಿದಂ ೭೮

---

1 ರಂಗೆ (ಕ) 2 ತೆಂದೊಡೆ (ಚ) 3 ಪುತ್ರುಂನೃಪ (ಚ) 4 ಕಂ (ಚ)
5 ಮುಂಬಂಪ ಪೂರ್ವಾದ್ರಿಗಂ (ಗ ಚ) 6 ಸುರತ ಸುಖದಿಂದಾರ್ (ಚ)

ಆ ಸೂರ್ಯೋದಯವಾಗಲಾಕ್ಷಣಕೆ ನಾನಾ ದೇವತಾ[1]ಗೇ[1]ಹದೊಳ್
ವಾಸಂ ಶಂಖ ಮೃದಂಗ ಭೇರೀರವಮುಂ ಭೂಮೀಸುರಾಮ್ನಾಯದಾ
ಘೋಷಂ ಮಂಗಳಪಾಠಕರ್ ನಿನವಗೀತಂ ವಾದ್ಯ ನೃತ್ಯಂಗಳಿಂ
ದಾ ಸೌರಂಭ ನಿನಾದ ಪೊಣ್ಮಿತೊದವಿರ್ದಾ ಪ್ರಾತರಂ ಕಾಲದೊಳ್ ೭೯

ವಚನ : ಆ ಸಮಯ[2]ದೊಳ್[2]

ಕಂದ : ಸುರಲೋಕದಿಂದಲತ್ತಾ
ದರದಿಂ ಬಲಿನೃಪನ ರಾಜ್ಯಮುಂ ನೋಡುತ್ತಂ
ವರಮುನಿಪನ್ನೆದೆ ರತ್ನಾ
ಪುರಕತಿ[3]ಮುದದಿಂದೆ ನಾರದಂ ತಾಂ ಬಂದಂ[3] ೮೦

ವಚನ : ಅಂತು ನಾರದಮುನೀಶ್ವರಂ ನೀರದಪಥದಿಂದಿಳಿದು ರಾಜದ್ವಾರಕ್ಕೆ ಬರ್ಪುದುಂ ಬಲೀಂದ್ರಂಗೆ ಉಪ್ಪವಡಮಿಲ್ಲೆಂದು ಮಂತ್ರಿಗಳ್ ವಿನಯದಿಂ ಬಿನ್ನೈಸೆ ಮುನೀಂದ್ರಂ ಕೋಪಮುಂ ತಾಳ್ದು ರಕ್ಕಸನ ಸೌಭಾಗ್ಯಮನಿಕ್ಕಡಿಗಳೆದು ನಿಶ್ಶೇಷಮುಂ ಮಾಳ್ಪೆನೆಂದು ಕ್ಷೀರಾಬ್ಧಿಗೆಬಂದು

ಕಂದ : ಆ [4]ಪಯದ[4] ವಾರ್ಧಿಗೊಪ್ಪುವ
ಗೋಪುರವ ಶರಾಭ್ರಸನ್ನಿಭಂ ನೋಡುತ್ತ ಗು
ಣೋಪೇತಂ ಮುನಿ[5]ಮುಖ್ಯಂ[5]
ಶ್ರೀಪತಿಯೋಲಗಮನ್ನೆದೆ ಪೊ[6]ಕ್ಕಂ ಮುದದಿಂ[6] ೮೧

ಬಂ[7]ದಾಗಳೆ ಹರಿ[7]ಚರಣ
ದ್ವಂದ್ವಕ್ಕಭಿನಮಿಸಿ ನುತಿಸುತಂ ನಿಂದಿರ್ದಂ
ನಿಂದಿರ್ದ ನಾರದನನೊಲ
ವಿಂದಂ ಕುಳ್ಳಿರಿಸಿಕೊಂಡು ಸಂತಸದಿಂದಂ ೮೨

ಆತಿಥ್ಯಪೂಜೆಮಾಡಿಯೆ
ನಾಥಾಧಿಪನೆಲೆ ಮುನೀಂದ್ರ ಬಳಲಿಪೆ ನೀಂ ಬಂ
ದಾತುರವ ಪೇಳಿ[8]ನುತ್ತುಂ
ಪ್ರೀತಿಯೊಳರವಿಂದನಾಭ ಶಾಂತಪೊಳೆಂದಂ ೮೩

---

[1] ಗೃ (ಗ) [2] ದೊಳಿತ್ತ್ರಾ (ಚ) [3] ಭರಬಂದೆ ಬಂದನಾ ನಾರಂದಂ (ಚ)
[4] ಪಯೋ (ಚ) [5] ಪುಂಗವ (ಚ) [6] ಕ್ಕನಧಿಕ್ಕಂ (ಚ) [7] ದು ಶ್ರೀಪರಿಯ (ಚ)

ವಚನ : ಅದೇನೆಂದೊಡೆ

ಕಂದ : ಆವಗ ಪೊಯ್ದಾಡಿಪುದೇ
ದೇವಾರ್ಚನೆ ಚಹಡ[1]ವೀಗ[1] ಜಪಕಲಹಗಳಿಂ
ತೀವುವುದೇ ಸ್ನಾನ ಜಪಂ
ಕೋವಿದರರಸಂಗೆ ನಾರದಂಗಿದು ಸಹಜಂ ೮೪

ವಚನ : ಎಂದು ನಾರಾಯಣಂ ಮುಗುಳ್ನಗೆಯಂ ನಕ್ಕು ನಾರದನ ಕೂಡೆ ನೀಂ ಬಂದ ಕಾರ್ಯಮೇನೆಂಬುದುಂ ಮುನೀಶ್ವರನಿಂತೆಂದಂ

ಕಂದ : ಪ್ರಹಲಾದನನ್ವಯದ ಬಲಿ
ಬಹುಭಕ್ತಿಯೊಳೀಶ್ವರಾರ್ಚನೆಯನುಱ[3] ಮಾಡ
ಲ್ಕಹಿಭೂಷನಾತಗೊಲಿದತಿ
ಬಹಳೈಶ್ವರ್ಯಗಳನಿತ್ತ ಡಾ ಹಮ್ಮಿಕೆಯಿಂ ೮೫

ಉತ್ಪಲಮಾಲೆ

ಪೇಱಲದೇನು ದೇವ ಬಲಿಭೂಪತಿಯಾಳುವ ನಾಡೊಳೆಲ್ಲಿಯುಂ
ಕಾಳಗವಿಲ್ಲ ವೈರಿನೃಪರಿಲ್ಲ ದರಿದ್ರತೆಯಿಲ್ಲವಾವಗಂ
ಬೇಳುವ ಕೈತವಂ ಕಳವು ಹಾದರವಿಲ್ಲನೃತಂಗಳಿಲ್ಲ ದು
ರ್ಮೇಳವದಿಲ್ಲ ಹಿಂಸೆ ಪರನಿಂದೆಗಳಿಲ್ಲದನೇನುಸಿರ್ದಪೆಂ ೮೬

ಈ ತೆಱದಿಂದಲಾತನಿರದಾಳುವ ರಾಜ್ಯಮೊಳಾವ ತಾವಿನೊಳ್
ಜಾತಿ ಕುಜಾತಿಯಿಲ್ಲಧಿಕ ಕ್ಷೀಣಗಳಿಲ್ಲತಿಕೀಳು ಮೇಲು ಮೇಣ್
ನೀತಿಯನೀತಿಯೆಂಬ ಬಗೆಯಿಲ್ಲ ದಯಂ ಪಿರಿದಿಲ್ಲವಾವಗಂ
ಪ್ರೀತಿಯೊಳಾ ಬಲೀಂದ್ರನೃಪನಿರ್ಪಿಳೆಯೊಳ್ ಸಲೆಸಂದ ಹಮ್ಮಿನಿಂ ೮೭

ಸ್ರಗ್ಧರೆ

ಆ ಹಮ್ಮಿಂದಾ ಬಲೀಂದ್ರಂ ಹರಿಹರನಜನಿಂದ್ರಾದಿ ದಿಕ್ಪಾಲರಂ ತಾ
ನಾಹಂಕಾರಂಗಳಿಂದೇನಱಿಯದೆ ಧರೆಯಂ ಗರ್ವದಿಂದಾಳ್ವಪಂ ಸಂ
ದೇಹಂ ಬೇಡಿನ್ನು ನಿಮ್ಮಂ ಬಗೆಯುನುಮವನಂ ಶಿಕ್ಷಿಸಲ್ಬೇಕೆನುತ್ತು
ಗ್ರಾಹೀಶಲ್ಪಂಗೆ ನಾರಂದನುಮತಿಭಯದಿಂ ಬಿನ್ನ[2]ಪಂಗೈಯುತ್ತಿರ್ದಂ ೮೮

---

[1] ವ (ಗ) [2] ಹಂ ಮಾಡು (ಚ)

ಕಂದ : *ದೇ[1]ವ[1] ನೀವಾ [2]ಬಲೀಂದ್ರನ[2]
ಭೂವಲಯಮನಾಳ್ವುದುಚಿತಮೆಂದು ಮುನೀಂದ್ರಂ
ಶ್ರೀವನಿತೆಯರಸಗಱುಪಲ್
ದೇವ[3]ಋಷೀ[3]ಶ್ವರನ ವಾಕ್ಯಮಂ ಕೈಕೊಂಡಂ ೮೯

ಶಿಕ್ಷಿಸುವೆವಾ ಬಲೀಂದ್ರನ
ನೀಕ್ಷಣ[4]ದೊಳ್[4] ನೀವು ಪೋಪುದೆಂದುಱೆ ಮು[5]ನಿಯಂ[5]
[6]ಆ[6]ಕ್ಷಣದೆ ಕಳುಪಿದಂ ಕಮ
ಲಾಕ್ಷಂ ಸಂತೋಷದಿಂದಲಮರಾವತಿ[7]ಗಂ[7] ೯೦

ಮುನಿ[8]ಯತ್ತ[8] ಪೋಗಲಿ[9]ತ್ತಲ್[9]
ವನಜಾಕ್ಷಂ ಬಲಿಗೆ ಶಿಕ್ಷೆಮಾಡುವ ತೆಱನೇ
ನೆನುತೆ ಮನದೊಳಗೆ ಯೋಚಿಸಿ
ಘನವಟುವೇಷದಲಿ ಧರೆಯ ಬೇಡುವೆನೀಗಂ ೯೧

ಎಂದು ಹರಿ [10]ವಾಮನ[10]ವತಾ
ರಂದಳೆವುತೆ ವಿಪ್ರವೇಷಮಂ ಕೈಕೊಂಡಾ
ನಂದದೊಳಾತಗೆ ನುಡಿದಂ
ಬಂದೆವು ನೀಂ ದಾನಿಯೆಂಬುದಂ ಕೇಳ್ದರಸಾ ೯೨

ಎನೆ ಕನಕ ವಸ್ತು ವಾಹನ
ವನಿತಾಜನ ದುರ್ಗ ದೇಶ ಪುರ ಪ[11]ತ್ತನ[11]ದೊಳ್
ನಿನಗಿಚ್ಛೆಯಾದುದಂ ಬೇ
ಡನುವಱಿದಿತ್ತಪೆನು ಭೂಸುರೋತ್ತಮ ಎಂದಂ ೯೩

---

[1] ವಾ (ಕ) [2] ಬಲಿಯಾ (ಕ) [3] ರ್ಷಿ (ಕ) [4] ದಲಿ (ಚ) [5] ನೀಂದ್ರನ (ಗ ಚ)
[6] ನಾ (ಗ ಚ) [7] ಗೆ (ಕ) [8] ನಾಥ (ಚ) [9] ತ್ತಂ (ಚ) [10] ವಟುವಿನ (ಕ)
[11] ಟ್ಟಣ (ಚ)

*ಚ ಪ್ರತಿಯಲ್ಲಿ ೮೬ನೆಯ ಪದ್ಯಕ್ಕೆ ಮೊದಲು ಈ ಕೆಳಗಿನ ಭಾಗ ಹೆಚ್ಚಾಗಿ ಸಿಗುತ್ತದೆ.
ವಚನ : ಅದೆಂತೆನೆ ದೇವಾ ಹಿರಣ್ಯಾಕ್ಷನ ವಂಶದಲ್ಲಿ ಬಲಿಯೆಂಬ ಕ್ರೂರ ರಾಕ್ಷಸಂ ಪುಟ್ಟಿ ಭೂಮಿಯನೆಲ್ಲಮಂ ತಾನೇಕಚ್ಛತ್ರವಾಗಿ ಜಾತಿಸಂಕರಂ ಬಲುಹು ಹವ್ಯಕವ್ಯಾದಿಗಳ ಪೂರ್ವ ಮಾಗಿ ಕ್ರೂರಕರ್ಮಗಳ್ ಮಿಗಿಲಾಗಿ ಹಮ್ಮಿನಿಂ ಸಮ್ಮದಂಬೋಗಿ ಭೂಮಿಯನಾಳುತಿರ್ದಪ-ನಿಂತು ನಿಮ್ಮಡಿಗೆ ದ್ವೇಷಿಯಪ್ಪ ರಾಕ್ಷಸವಂಶ ಹೆಚ್ಚಿ ದೇವಮಾರ್ಗವಿಲ್ಲವಾಯಿತು ಅವನಂ ಕೆಡಿಸು ಉಪಾಯಮಂ ಚಿತ್ತದೊಳ್ ಧರಿಸಿಮೆಂದುಂ ನಾರದಂ ಮತ್ತಮಿಂತೆಂದಂ

ಚಂಪಕಮಾಲೆ

ಘನತರ [1]ಮೋದದಿಂದೆ[1] ಬಲಿ ಭೂಸುರನೇನನು ಬೇಡಿದಿಷ್ಟಮಂ
ಮನವೊಲಿದೀವೆನೆಂದು ವರವಿಪ್ರಗೆ ಪೇೞಲಿಕಾಗ ವಾಮನಂ
ಧನ ಕನಕಂಗಳಾಭರಣ ವಸ್ತ್ರವಿಲೇಪನವಾನೆಯಶ್ವಮಂ
ವನಿತೆಯರೇನುಮಂ ಬಯಸೆ ಮೂಱಡಿ ಧಾತ್ರಿಯನೀವುದೆಂಬುದುಂ ೯೪

ಕಂದ : ಎಂದೊಡೆಲೆಯತಿಥಿ ಬೞಲ್ದು
ಬಂದೀ ಮೂಱಡಿಯ ಭೂಮಿಯಿಂ ನಿನಗಹುದೇ
ನಿಂದೀಗಳಧಿಕವಸ್ತುವ
ಸಂದೇಹಂ ಮಾಡದೀವೆನೆನಲಿಂತೆಂದಂ ೯೫

ನಾಡು ದೇಶಗಳನೊಲ್ಲೆನು
ಕೂಡಿರ್ದೈಶ್ವರ್ಯವೇನುಮಂ ನಾನೊಲ್ಲೆಂ
ನೀಡುವರೆನ್ನಯ ಪದದಲಿ
ರೂಢಿಯ ಮೂಱಡಿಯ ಧಾರೆಯೆಱೆ ಸಾಕೆಂದಂ ೯೬

ಎನಲು ಬಲಿಭೂಪನೀ ವಾ
ಮನಗೆಂದನು ಜನನದಲ್ಲಿಯಬ್ಜಾಸನನೀ
ತನಿತಲ್ಲದುಂಟೆ ನೀಂ ಬೇ
ೞ್ಪಿನಿತಂ ನಿನಗೊಲವಿನಿಂದೆ ಧಾರೆಯನೆಱೆವೆಂ ೯೭

ವಚನ : ಎಂದ ಮಾತಿಗೆ ವಾಮನಂ ಮೆಚ್ಚಿ ಈತಂಗೆ ಪಾತಾಳಲೋಕದಲ್ಲಿರ್ಪಂತೆ ನಿತ್ಯ ಪದವಿಯಂ ಕುಡುವೆನೆಂದು ಮನದೊಳ್ ನಿಶ್ಚೈಸಿ ಎಲೆ ಬಲೀಂದ್ರ ಎನ್ನ ಪದದಲ್ಲಿ ಮೂಱಡಿ [2]ಭೂಮಿಯಂ[2] ಧಾರೆಯೆಱೆದಿತ್ತಡೆ ತುಲಸಿಯುಂ ಬಿತ್ತಿ ನಾರಾಯಣಂಗರ್ಪಿಸಿಕೊಂಡು ನಿನ್ನಂ ಪರಸುತಿರ್ದಪೆನೆಂಬುದುಂ ಬಲೀಂದ್ರಂ ವಿಸ್ಮಿತನಾಗಿ ಧಾರೆಯನೆಱೆವೆನೆಂದು ಸುವರ್ಣಜಲಪಾತ್ರೆಯನೆತ್ತೆ ಶುಕ್ರಾಚಾರ್ಯಂ ರಾಕ್ಷಸಗುರುವಪ್ಪುದಱಿಂ ಜೂಳಿಗಡ್ಡಂ ನಿಲೆ ಕೃಷ್ಣಂ ತತ್ಪ್ರಪಂಚಮನಱಿದು ದರ್ಭೆಯಿಂದಿಱಿಯಲೊಂದು ನೇತ್ರಂ ಮಸೆಗಾಂಬುದುಂ

ಕಂದ : ಶಕ್ರನತ ವಾಮನಗೆ ಭೂ
ಚಕ್ರವ ಬಲಿನೃಪತಿ ಧಾರೆಯೆಱೆಯ[3]ಲ್ಕದಱೊಳ್[3]
ಶುಕ್ರಂ ಬಂದಡ್ಡ[4]ಮಿರಲ್[4]
ನಕ್ರಿಯ ನಯನವನು ದರ್ಭೆಯಿಂ ಹರಿ [5]ತಿ[5]ವಿದಂ ೯೮

---

[1] ಪ್ರೀತಿಯಿಂದೆ (ಗ ಚ) [2] ಯಂ (ಕ) [3] ಲ್ ಧಾರೆಗೆ (ಚ) [4] ಬೀಳಲು (ಗ ಚ) [6] ತೀ (ಕ)

ಆತನನಿತಱಲಿ ಮರಳಲ್
ಪ್ರೀತಿಯೊಳಾ ಬಲಿನೃಪಾಲನೀ ವಾಮನಗಂ
ಭೂತಲವ ಧಾರೆಯೆಱೆದಂ
ಭೂತೇಶ ಬ್ರಹ್ಮಮುಖ್ಯರುಘೆ[1]ಯೆನಲಾಗಳ್[1] ೯೯

ಸುರರುಂ ನುತಿ[2]ಸಲ್[2] ವಿಶ್ವಂ
ಭರೆ ಹೆಚ್ಚಲ್ ನಾರದಪ್ರತೀಂದ್ರಂ ಮೆಚ್ಚಲ್
ವರ [3]ಪೊಂಗಿಂಡಿಯ ಜಲದಿಂ[3]
ಹರಿಗವನಿಯನಾ ಬಲೀಂದ್ರ ಧಾರೆಯನೆಱೆದಂ ೧೦೦

ಮನಬಂದೆಡೆಯೊಳ್ ನಿನ್ನಯ
ಕೊನೆಗಾಲಿಂದೆಳೆದುಕೊಂಡು ಮೂಱಡಿ[4]ಯಿಳೆ[4]ಯಂ
ಘನಸುಖದಿಂದಿರು ನೀಂ ಪೋ
ಗೆನುತುಂ ಬಲಿಭೂಪ ಹರಿಗೆ ಮತ್ತಿಂತೆಂದಂ ೧೦೧

[5]ಅಳೆಯೈ ನಿನ್ನಯ ಪದದೊಳ್[5]
ನೆಲನಂ ಮೂಱಡಿಯನೆಂದು ಬಲಿನೃಪ ಪೇೞಲ್
ಬೆಳೆದನಾಕಾಶದುದ್ದಕೆ
ಜಲಶಯನಂ ಧ್ರುವನ ಮಂಡಲವ ಮಿಱುತ್ತುಂ ೧೦೨

ಮಹಾಸ್ರಗ್ಧರೆ
ಬೆಳೆಯಲ್ಕಾಕಾಶಕಂ ಭಾಸ್ಕರ ಶಶಿ ಗ್ರಹ ನಕ್ಷತ್ರಮೀ ಪೇವನಂ ಕಂ
ಗೊಳಿಪೂರುದ್ವಂದ್ವದೊಳ್ ರಂಜಿಸಿದುವು ಧ್ರುವನಂ ಮಿಱಿತಾ ಮಸ್ತಕಂ ದಿ
ಗ್ವಳೆಯಂಗಳ್ ಕರ್ಣಮಂ ಸೋಂಕಿರೆ ನಲಿದುಱೆ ತ್ರೈವಿಕ್ರಮಾಕಾರದಿಂದಂ
ಜಲಜಾಕ್ಷಂ ಭೂಮಿಯಂ ಕೊರ್ತಿರವೆರಡಡಿಯಂ ಮಾಡಿದಂ ಮಾಮನೋಜ್ಞಂ
೧೦೩

ಕಂದ : ಇನ್ನೊಂದಡಿ[6]ಯಂ[6] ಭೂತಳ
ಮುನ್ನೆಱೆಯದಿರಲ್ಕೆ ಬಲಿಯ ಮೂದಲಿಸುತ್ತುಂ
ಪನ್ನಗರಿಪುವಾಹನ ಪದ
ವನ್ನಭಕೆತ್ತಲ್ಕೆ ವಿಷ್ಣುಪದವಾಯ್ತಭ್ರಂ ೧೦೪

---

1 ಯೋಸೆನಲ್ (ಚ) 2 ಯಿಸಿ (ಚ) 3 ಹೇಮಗಿಂಡಿಯುದಕದಿ (ಚ) 4 ಧರೆ (ಚ)
5 ಅಳದುಕೊಳ್ ನಿನ್ನ ಪದದಲಿ (ಚ) 6 ಗಂ (ಚ)

ವಚನ : ಅಂತೆತ್ತಿದ ಪಾದಂ ಸತ್ಯಲೋಕಕ್ಕೈದುವುದುಂ ಬ್ರಹ್ಮಂ ತನ್ನ ಕಮಂಡಲೋದಕದಿಂ

ಕಂದ : ಬೊಮ್ಮಂ ಹರಿಚರಣವ ಕಂ
ಡುಮ್ಮಹದಿಂದರ್ಘ್ಯಪಾದ್ಯಮಾಚಮ್ಯಗಳಂ
ಗಮ್ಮನೆ ತಾಂ ಮನದೊಲವಿಂ
ದಮ್ಮಾಡಲ್ಕಾಗ ಗಂಗೆಯುದ್ಭವವಾದಳ್ ೧೦೫

ಇಂದ್ರವಜ್ರ
ವ್ಯೋಮಕ್ಕೆ ಶ್ರೀಪಾದಮನೆತ್ತೆ ದೇವಂ
ಹೇಮಾಂಬುಜಾತೋದ್ಭವರಿಂದ್ರರೊಲ್ದಂ
ಪ್ರೇಮಾರ್ಘದಿಂದಾಗಸಗಂಗೆಯಿಂದಂ
ತಾ ಮಾಘಸ್ನಾನಕ್ಕೆಱೆಯಲ್ ಸರಾಗಂ ೧೦೬

*ಉಪೇಂದ್ರವಜ್ರ
ಜನಾರ್ದನಾಂಘ್ರಿರ್ನಖರೋಚಿಯಿಂದಂ
ಜನ್ಯೈಸಿದಾ ಗಂಗೆ ಮಹೀತಳಕ್ಕಂ
ಅನಂತ ಪುಣ್ಯೋತ್ತರ ತೀರ್ಥಮೆಂದುಂ
ಜನಂ ನುತ್ಯೈಸಲ್ಕದಿಯಾದವಂದುಂ ೧೦೭

ಕಂದ : ಮಂದಾಕಿನಿ ಹರಿಪದ ಸೋಂ
ಕಿಂದುದ್ಭವವಾಗಿ ವ್ಯೋಮಮಂಡಲದಿಂ[1]ದೆ[1]
ತಂದೊಲ್ದು ತ್ರಿಪಥಗಾಮಿನಿ
ಯೆಂದೆನಿಸಿದಳಾಗಳೀ ಧರಾತಲಕೆಲ್ಲಂ ೧೦೮

ಹರಿಯಿರಾರಡಿಯಂ ಮಾಡಿಯೆ
ಧರಣಿಯನಿನ್ನೊಂದು ಪದಕೆ ತೆಱಪಿಲ್ಲದಡಾ
ಚರಣವ ಬಲಿಶಿರದೊಳಗಿ
ಟ್ಟೆರದೌಂಕಿದನಾತನಂ ರಸಾತಲಕಾ[2]ಗಳ್[2] ೧೦೯

ಸುರ[3]ರರಲಮಳೆಯ[3] ಕಱೆದರ್
ಸುರದುಂದುಭಿ ಮೊಳಗಿದವು ಸುರೇಶ್ವರ ನಲಿದಂ
ಸರಸಿಜಭವ ಕೈಮುಗಿದಂ
ಸುರಮುನಿ ನಾರಂದ ಪೊಗಳ್ದಂ ಶ್ರೀಹರಿಯಂ ೧೧೦

---

* ಈ ಪದ್ಯ ಚ ಪ್ರತಿಯಲ್ಲಿಲ್ಲ
[1] ದೈ (ಕ ಚ) [2] ಗಂ (ಚ) [3] ರರ್ ಪೂಮಳೆಯಂ (ಗ ಚ)

ವಚನ : ಅಂತು ಸುರನಿಕ[1]ರಂ[1] ಸಂತಸಂಬಡುತಿರಲ್ ಶ್ರೀ ಆದಿನಾರಾಯಣಂ ಬ್ರಹ್ಮೇಂದ್ರಾದಿಗಳಂ ಬೀೞ್ಕೊಟ್ಟು ಕ್ಷೀರಾಬ್ಧಿಯಂ ಪೊಕ್ಕಂ

ಕಂದ : ಓರಂತಿರೆ ರಕ್ಷಿಪ ಗುಣ
ಭಾರವಿದೆಮ್ಮಂದಿಗರ್ಗೆಯ್ದಿದವತಾರಂ
ಸೇರಿದುದಂ ಸರಿಸೋಡೆಂ
ಮೋರಂತಿರೆ ನುಡಿವ ಕೃಷ್ಣ ಸಲಹುವದಿಳೆಯಂ ೧೧೧

ಮತ್ತೇಭವಿಕ್ರೀಡಿತ
ಧರಣೀಸೌಖ್ಯಕರಂ ಗದಾಯುಧಧರಂ ಶ್ರೀ ಶಾಙ್ಗ೯ಚಕ್ರೋಧರಂ
ವರ ಪೀತಾಂಬರ ದಿವ್ಯಕೌಸ್ತುಭಧರಂ ಲಕ್ಷ್ಮೀವರಂ ಭೂಧರಂ
ಸುರಸಂದೋಹ ಪುರಂದರೋನ್ನತಪರಂ ಸೌಖ್ಯಾಕರಂ ನಿರ್ಮಲಂ
ಪರಮಾನಂದಕರಂ ಜಗತ್ಪ್ರಕರಮಂ ರಕ್ಷಿಕ್ಕೆ ನಾರಾಯಣಂ ೧೧೨

ಗದ್ಯ : ಇದು ವೃಂದಾರಕವೃಂದ ಪರಿಮಣಿಖಚಿತಮಕುಟರಂಜಿತ ಶ್ರೀಮದಾದಿನಾರಾಯಣ
[ಶ್ರೀ]ಚರಣಸರಸೀರುಹ ಮಕರಂದ ಷಟ್ಚರಣಸಲ್ಲಲಿತ ಮಲ್ಲರಸಾಂಕ ವಿರಚಿತಮಪ್ಪ
ದಶಾವತಾರಚರಿತ ಪ್ರಬಂಧದೊಳ್ ಪ್ರಹ್ಲಾದಸಾಯುಜ್ಯ ಬಲಿರಾಜ್ಯಪ್ರಶಸ್ತಿ
ತದ್ರಾಜ್ಯವೈಖರಿ ಮಧುಮಾಸವನವಿಹಾರ ಪುಷ್ಪಾಪಚಯ ದಶದೋಹಳ
ಸೂರ್ಯಾಸ್ತಮಾನ ತಮಂಧ ನಕ್ಷತ್ರದೀಪ್ತಿ ಪಟ್ಟಣಪ್ರವೇಶ ಜಾರ
ಸಂಚಾರ ಚಂದ್ರೋದಯ ಚಂದ್ರಾಸ್ತಮಯ ಸೂರ್ಯೋದಯ
ನಾರದಾಗಮನ ಕೃಷ್ಣಸಂಧಾನ ವಾಮನತ್ರಿವಿಕ್ರಮಾವತಾರ
ಶುಕ್ರನಯನಚ್ಛೇದ ಗಂಗಾಮಹಾತ್ಮ್ಯ ಬಲೀಂದ್ರ
[2]ಪಾ[2]ತಳ ಪದವೀಮು[3]ಖ್ಯ[3] ವಾಮನಾವತಾರಂ
ಷಷ್ಠಮಾಶ್ವಾಸಂ

---

1 ರವೆಲ್ಲಂ (ಚ) 2 ರತಳಾ (ಗ) 3 ಖ್ಯಮಾದ (ಗ)

ಸಪ್ತಮಾಶ್ವಾಸಂ

ಕಂದ : ಶ್ರೀಮಾನಿನಿಯರಸಂ [1]ವರ[1]
ತಾಮರಸೋದರನುದಾರ ಪಾರಾವಾರಂ
ಕಾಮುಪಿತಂ ಭಕ್ತರುಮಂ
ಪ್ರೇಮದೆ ರಕ್ಷಿಸುವುದಾದಿನಾರಾಯಣನೇ ೧

ಶರಣರ್ಗೆ ಕೊಡಲಿಬೇಕಹ
ತರದಿಂದಂ ಕ್ಷತ್ರಕುಲವಿನಾಶಂ ಸೌಖ್ಯೋ
ತ್ಕರಮಾದ ಪರಶುರಾಮನ
ಚರಣಂ ರಕ್ಷಿಸುವುದಖಿಲ ಭುವನಮನೆಲ್ಲಂ ೨

ಚಂಪಕಮಾಲೆ

ಒಲಿದ ಪದಾರ್ಥಮಂ ಕುಡುವ ಗೋಮಿನಿಯಂ ಮನೆಯಲ್ಲಿ ಸಂತತಂ
ನೆಲಸಿಹ ಕಾಂತೆಯೆಂದು ನಿನಗಿರ್ದೊಡೆ ಮತ್ತೆ ದುರಾಶೆಯಿಂದೆ ನೀಂ
ಬಲಿಯನು ಲಾಘವಾಂಗದೊಳೆ ಬೇಡಿದೆಯೆಂದು ವಿನೋದವೃತ್ತಿಗಂ
ಸಲೆ ನಡೆತಂದ ಚಂದ್ರಕರದಂತೆಸೆದತ್ತು ಸುಧಾಬ್ಧಿಯೊಪ್ಪದಿಂ ೩

ವಚನ : ಅಂತೆಸೆವ ಕ್ಷೀ[2]ರ[2]ಪಾರಾವಾರದಲ್ಲಿ ಶ್ರೀ ಆದಿನಾರಾಯಣಂ ಮಹಾವಿಭವದಿಂದೊಡ್ಡೋಲಗಂಗೊಟ್ಟು ಕುಳಿತಿರ್ಪುದುಮಿತ್ತಲ್

ಕಂದ : ಕ್ಷತ್ರಿಯರ ಕೊರ್ವಿನಿಂದಂ
ಧಾತ್ರೀವಧು ನೊಂದು ಬಟಲಿ ಬಂದಾ ಸರಸಿಜ
ಪುತ್ರಗೆ ಬಿನ್ನೈಸಿದಳತಿ
ಗಾತ್ರದ ಭಾರವನು ತಾಳಲಾಱೆನೆನುತ್ತುಂ* ೪

---

[1] ಘನ (ಗ) [2] ರಾಬ್ಧಿ (ಗ)

* ಚ ಪ್ರತಿಯಲ್ಲಿ ನಾಲ್ಕನೆಯ ಪದ್ಯದ ಬಳಿಕ ಈ ಭಾಗ ಹೆಚ್ಚಾಗಿ ಸಿಗುತ್ತದೆ.

ವಚನ : ಅದೆಂತೆಂದೊಡೆ

ಕಂದ : ಅಗಣಿತ ಮದೇಭಘಟೆಗಳಿ
ನಗಣಿತ ಹಯನಿಚಯದಿಂದಮಗಣಿತ ರಥದಿಂ
ದಗಣಿತ ಪದಾತಿವೃಂದದಿ
ನಗಣಿತ ಭಾರವನು ತಾಳಲಾಱೆನೆನುತ್ತುಂ

ಬಿನ್ನೈಸಿದ ಭೂಸತಿಯಂ
ಮನ್ನಿಸಿ ಕಳುಪುತ್ತ ಬೊಮ್ಮನಂಚೆಯನೇಱು
ತ್ತುನ್ನತಗಾತ್ರಂ ಸಲೆ ದು
ಗ್ಧಾರ್ಣವಕಂ ಬಂದು ಪೊಕ್ಕ ಹರಿಯೋಲಗಮಂ ೫

ಬಂದು [1]ಹರಿಚರಣಯುಗ್ಮಕೆ[1]
[2]ವಂದಿಸಿಯಭಿ[2]ನಮಿಸೆ [3]ಬೊಮ್ಮ[3] ಕುಳ್ಳಿರೆನುತ್ತಂ
ಮುಂದಣ ಕಾರ್ಯವ ಪೇೞೆನ
ಲಂದಾಕ್ಷಣ ಕರವ ಮುಗಿದು ನುತಿಯಿಸುತೆಂದಂ ೬

ಎಲೆ ದೇವ ಬಹುಕ್ಷತ್ರಿಯ
ಬಲಭಾರಂ ಪೆರ್ಚೆ ಬಹಳ ಬಸವೞ[4]ಯು[4]ತೆ ಭೂ
ಲಲನೆ ಕೊಱಗುತ್ತಮಿರ್ಪಳ್
ಸಲಹೈ ಕೃಪೆಯಿಂದ[5]ಲಖಿಲ[5] ಲೋಕಾಧಾರಾ ೭

ಘನತರ ಸಹಸ್ರಭುಜದಿಂ
ದನುಜಾಮರರೆಲ್ಲರುಂ ಜಲತ್ಪ[6][ಣಂ ಎ][6]ನೆ ಕೊ
ರ್ವಿನಲಿರ್ಪ ಕಾರ್ತವೀರ್ಯಾ
ರ್ಜುನ ಮೊದಲಹ ಭೂಭುಜಾಳಿಯೇಂ ಪೆರ್ಚಿದುದೋ ೮

ವಚನ : ಎಂದು ಬ್ರಹ್ಮಂ ಬಿನ್ನೈಸೆ ಶ್ರೀಹರಿ ತಿಳಿದು ನೋಡಿ ನಿರೂಪಂಗೊಟ್ಟನ ದೆಂತೆಂದೊಡೆ

ಕಂದ : ಎಲೆ ಸ[7]ದಾ[7]ನಂದವೆರ್ಚಿದ
ಕುಲದಿರ್ಪತ್ತೊಂದು ಭೂ[8]ಮಿಪರನದಟಿಂದಂ[8]
ಕೊಲವೇಟ್ಟು ರೇಣುಕಾಸತಿ
ಗೊಲಿದಿಹ ಜಮದಗ್ನಿಯುದರದೊಳ್ ಜನಿಯಿಸುವೆಂ ೯

ವಚನ : [9]ಅಂತು[9] ಬ್ರಹ್ಮದೇವ[10]ನಂ[10] ಬೀೞ್ಕೊಟ್ಟು ಅವತಾರೋದ್ಯುಕ್ತನಾಗಿ ಲಕ್ಷ್ಮೀ ಕಾಂತಂ ಇರಲಿತ್ತಲ್

---

1 ಶ್ರೀ ಹರಿಯಚರಣ (ಚ) 2 ದ್ವಂದ್ವಕ್ಕಭಿ (ಚ) 3 ಬ್ರಹ್ಮ (ಚ) 4 ವೆ (ಚ)
5 ಮಖಿಳ (ಚ) 6 ಣವೆ (ಚ) 7 ತಾ (ಕ) 8 ಭುಜರಕವುಪಿಂದಂ (ಗ ಚ)
9 ಎಂದು (ಚ) 10 ರಂ (ಚ)

ಕಂದ : ವಿದಿತಂ ಭೃಗುಜಾತಂ ಜಾ
ಮದಗ್ನಿಯೆಂದೆನಿಪ ಋಷಿಕುಲೋತ್ತುಂಗ ದಯಾ
ಸದನೆಯೆನಿಸಿರ್ಪ ತನ್ನಯ
ಸುದತಿಸಹಂ ತಪದೊಳಿರ್ದನಾಶ್ರಮದೆಡೆಯೊಳ್ ೧೦

ವಚನ : ಇಂತಿರಲೊಂದುದಿ[1]ನಂ[1] ರೇಣುಕಾ[2]ಸತಿ[2] ತನಗೆ ಪುತ್ರೋ[3]ತ್ಪತ್ತಿಯಿ[3]ಲ್ಲವೆಂದು

ಕಂದ : ಅತಿನೊಂದು ಮನದೆ ರೇಣುಕೆ
ಸುತರಿಲ್ಲದ ಜನ್ಮಮಫಲವೆಂದುಱ[3] ಬಿಸುಸು
ಯ್ವುತಮಿರಲಾ ಜಮದಗ್ನಿಯು
ಸತಿಯಂ ಸಂತೈಸಿ ಮನದ ನೋಯದಿರೆಂದಂ ೧೧

ನಾವು ಕೃತಪುಣ್ಯ[4]ರೀಗಳ್[4]
ಶ್ರೀವರನಂಘ್ರಿಯನೆ ಭಜಿಸಿ ಪುತ್ರನ ಪಡೆ[5]ವೆಂ[5]
ಭಾವಕಿಯೆ ಚಿಂತೆ ಬೇಡೆಂ
ದಾ ವನಿತೆಯ ಸಂತವಿಟ್ಟನಾ ಮುನಿಮುಖ್ಯಂ ೧೨

ವಚನ : ಎಂದು ಸತಿಯಂ ಸಂತ[6]ಯಿಸಿ[6] ಸಂತಾನಗೋಪಾಲ ಮಂತ್ರಧ್ಯಾನದಿಂ ಸಂತತಂ ಜಪಾನಿಷ್ಠಿತನಾಗಿ

ಉತ್ಪಲಮಾಲೆ
ಶ್ರೀವರನಂ ಕೃಪಾಕರನನಂಬುಜನಾಭನನಾಹಿತಳ್ಪನಂ
ದೇವ[7]ಮುನಿವ್ರಜಾರ್ಚಿತ[7] ಪದದ್ವಯನಂ ಪರಮೇಷ್ಠಿಯೆಯ್ಯನಂ
ಪಾವನನಾಮನಂ ಸರಸಿಜಾಕ್ಷನನಾ ಶತಮನ್ಯು[8]ವಂದ್ಯನಂ[8]
ಭಾವವಿಶುದ್ಧಿಯಿಂ ಭಜಿಸಿದಂ ಹರಿಯಂ ಜಮದಗ್ನಿ ಸಂತತಂ ೧೩

ಕಂದ : ಭಜಿಸಿದ ಮುನ್ನಂ ಬಂದಂ
ಬುಜನಾಭಂ ಮುನಿಪ ನಿನ್ನ ಮನದೊಳ್ ಬಯ[9]ಸಿದ[9]
ನಿಜವರವ ಬೇಡುಬೇಡೆನೆ
ದ್ವಿಜ[10]ವರ[10] ಜಮದ[11]ಗ್ನಿ ಬಹಳ ಸಂ[11]ತಸದಿಂದಂ ೧೪

---

[1] ನಂ ನೀರೆ (ಚ) [2] ದೇವಿ (ಗ ಚ) [3] ತ್ಸವವಿ (ಗ) [4] ರಿಗಂ (ಚ)
[5] ವೊಂ (ಕ) [6] ವಿಟ್ಟು (ಗ ಚ) [7] ಮುನೀಂದ್ರ ಭಾವಿತ (ಗ) [8] ಪೂಜ್ಯನಂ (ಚ)
[9] ಪಾ (ಕ) [10] ಕುಲಪತಿ (ಗ) [11] ಗ್ನಿ ಸಂ (ಗ)

ಮಂದಿಸಿ ಕರಗಳ ಮುಗಿದು ಪು
ರಂದರ ಪೂಜಿತ ಸುರಾಸುರಾರ್ಚಿತ ಹರಿಗಿಂ
ತೆಂದನೆನಗೀಗ ಪುತ್ರನ
ಸಂದೇಹಂ ಮಾಡದೀವುದಂಬುಜನಾಭಾ ೧೫

ನಿನಗೆಣೆಯಪ್ಪ ತನೂಜನ
ನೆನಗೀಯಲ್ವೇಕೆನುತ್ತೆ ಕರಗಳ ಮುಗಿದುಂ
ಮುನಿಪತಿ ಬಿನ್ನಹ ಮಾಡಲ್
ವನಜಾಕ್ಷಂ ನಾನೆ ನಿನಗೆ ಜ[1]ನಿಯಿಪೆ[1]ನೆಂದಂ ೧೬

ಎಂದು ಹರಿ ತಿರುಗಲಿತ್ತ ಮು
ನೀಂದ್ರಂ ನಿಜಭವನದೊಳ್ ವರಾಂಗನೆಯೊಡನಿಂ
ತೆಂದನೆಲೆ ಸತಿಯೆ ನಮಗೀ
ಗಿಂದೀವರನಾಭನೊಲಿದು ಸುತನಹನೆಂದಂ ೧೭

ಎನಲಾ ರೇಣುಕೆ ತನ್ನಯ
ಮನದೊಳ್ ಗುಡಿಕಟ್ಟಿಯಧಿಕ ಸಂತೋಷದೊಳಾ
ಮುನಿಪತಿಯ ಪದಕೆ ನಮಿಸು
ತ್ತನುನಯದಿಂ ಕರವ ಮುಗಿದಳಧಿಕೋತ್ಸವದಿಂ ೧೮

ವನಜಾಕ್ಷನಿತ್ತ ವರದಿಂ
ತನುಜಂ ನಮಗಹನೆನುತ್ತೆ ರೇಣುಕೆ ಜಮದ
ಗ್ನ್ಯನ ಕೂಡೆ ನುಡಿವು[2]ತಿರಲಾ[2]
ವನಿತೆಗೆ ಋತುಸಮಯ ಪ್ರಾ[3]ಪ್ತಮಾ[3]ಯಿತ್ತಾಗಳ್ ೧೯

ಉಟ್ಟ ನಸುಮಾಸಿದಂಬರ
ಮೆಟ್ಟಿದ ಜೆಮ್ಮಾ[4]ನ್ರ[4] ಕ್ಕೆ[5]ಯೊಳೊ[5]ಪ್ಪುವ ಸೆಳೆ ಜೆ
ಳ್ಪಟ್ಟಕ್ಷಿ ಪರೆದ ತಿಳಕಂ
ಮುಟ್ಟಲುಗಂಡಬಲೆ ರೇಣುಕಾಸತಿ [6]ನಿಂದಳ್[6] ೨೦

---

1 ಸುವೆ (ಗ ಚ) 2 ತಿರ್ದನ (ಚ) 3 ಪ್ತಿಯಾ (ಚ) 4 ವ್ರಗೆ (ಚ)
5 ಯುಶೊ (ಚ) 6 ಯಿಸೆದಳ್ (ಚ)

ವನಿತೆಯಿಾ ತೆಱದೆ ನಾಲ್ಕುಂ
ದಿನಮಿರ್ದುಂ ಬಳಿಕ ದಶವಿಧಸ್ನಾನದಲಿ
ಗನೆ ಶುದ್ಧಕಾಯೆಯಾಗು
ತ್ತನುನಯದಿಂದೊಳಗೆ ಪೊಕ್ಕಳಾ ಸ್ತ್ರೀರತ್ನಂ ೨೧

ವಚನ : ಅಂತು ಬಂದು ಸಂತೋಷದಿಂಮೊಳಗಂ ಪೊಕ್ಕು ಮಂಗಳಾಂಗಿ [1]ಸಿಂಗರಿಸಿ ಕೊಳುತಿರ್ದಳದೆಂತೆನೆ[1]

ಚಂಪಕಮಾಲೆ

ಎಸೆವ ದುಕೂಲಮುಟ್ಟು ಪೊಸಮೌಕ್ತಿಕಹಾರಮನಾಂತು ಮಲ್ಲಿಕಾ
ಪ್ರಸವಗಳಂ ತುಱುಂಬಿ ಘನಸಾರಸುಗಂಧದ ಬೊಟ್ಟನಿಟ್ಟು ಕಂ
ಗೆಸೆ[2]ವ[2]ತಿ ದಿವ್ಯವಾಸನೆಯನಂಗ[3]ವಿ[3]ಲೇಪನಮಾಡಿಯೊಪ್ಪದಿಂ
ದಸಿಯಳೆನಿಪ್ಪ ರೇಣುಕೆ ವಿರಾಜಿಸುತುಂ ನೆನೆದಳ್ ನಿಜೇಶನಂ ೨೨

ಕಂದ : ನೆನೆಯದ ಮುನ್ನಂ ಸೆಜ್ಜೆಯ
ಮನೆಗೈತಂದಧಿಕ ಹರ್ಷದಿಂ ಜಮದಗ್ನ್ಯಂ
ವನಿತೆಯೊಡಗೂಡಿ ನೋಡು
ತ್ತನುನಯದಿಂದಂಚೆವಾಸಿನೊಳ್ ಕುಳ್ಳಿರ್ದಂ ೨೩

ವಚನ : ಅಂತು ಕುಳ್ಳಿರ್ದು ಲವಲವಿಸಿ ನೋಡಿ

ಸ್ರಗ್ಧರೆ

ಅಂ[4]ದಂತಾ[4] ರೇಣುಕಾಸುಂದರಿಯತಿಸೊ[5]ಗಸಿಂ[5]ದಿರ್ದೊಡಾ [6]ಜಾ[6]ಮದಗ್ನ್ಯಂ
ಬಂದಂ ಸ್ನೇಹೋಕ್ತಿಯಿಂದಾತುರ ಮಿಗೆ ಭರದಿಂ[7]ದಂಚೆ[7]ಮೇಲ್ವಾಸಿನೊಳ್ ಸಾ
ನಂದಂ ಕುಳ್ಳಿರ್ದು ರೋಮಾಂಚನ ಮಿಗೆ ನಯದಿಂದಪ್ಪಿಕೊಂಡೊಲ್ದು ದೇಹಂ
ಒಂದಾದಂತಾ ವಧೂವಲ್ಲಭರತಿಸೊಗಸಿಂ ಕೂಡಿದರ್ ಗಾಡಿಯಿಂದಂ ೨೪

ಮತ್ತೇಭವಿಕ್ರೀಡಿತ

ಪುಳಕಂ ಪೊಣ್ಮಿರೆ ಸ್ವೇದಬಿಂದುವೊಗೆಯಲ್ ಹಸ್ತಾಗ್ರದೊಳ್ ಕಂಪನಂ
ದಳೆಯಲ್ಕಕ್ಷಿಯೊಳಶ್ರು[8]ವ[8]ಣ್ಮುತಿರಲಾ ರೋಮಾಂಚನಂ ರಾಗದಿಂ
ತಳಿರೇಱುತ್ತಿರೆ ಗದ್ಗದಂ ಕೊನರೆ ಗಾಢಾಲಿಂಗನಂ ಮಾಡಲು
ಜ್ವಳಿಸಲ್ ಕಾಮರಸಾಬ್ಧಿ ತುಳ್ಕುತಿರಲತ್ಯಾನಂದದಿಂ ಕೂಡಿದರ್ ೨೫

---

1 ಶೃಂಗಾರವಾಗುತ್ತಿರ್ದಳದೆಂತೆಂದೊಡೆ (ಚ) 2 ದ (ಕ) 3 ದಿ (ಚ) 4 ತಾಗಲಾ (ಚ) 5 ಬಗಿಂ (ಗ ಚ) 6 ಜ (ಚ) 7 ಹಂಸೆ (ಚ) 8 ಮು (ಚ)

ಮಹಾಸ್ರಗ್ಧರೆ

ಸೊಗಸಿಂದಂ ಕೂಡಿದರ್ ದಂಪತಿಗಳು ಪ್ರಿಯದಿಂ ಚುಂಬನಾಲಿಂಗನಂ ಬಂ
ಧಗಳಿಂ ನಾನಾ ಕಳಾಭೇದವನಱಿದೊಲವಿಂದಕ್ಷಿ[1]ಯೊಳಕ್ಷಿ[1] ಬಾಯೊಳ್
ಮಿಗೆ ಬಾಯ್ ವಕ್ಷಂ ಸುವಕ್ಷಾಂತರದೊಳೆ ಮಿಸುಪಾ ತೋಳ್ಗಳೊಳ್ ತೋಳ್ಗಳಂಗಾಂ
ಗಗ[2][ಳೊಳಂಗಂಗ]ಳೂರುದ್ವಯದೆ ಬೆರಸಿರಲ್ ಕೂಡಿದರ್ ಗಾಡಿಯಿಂದಂ ೨೬

ಕಂದ : ಸುರ[3]ತದ[3] ಮಧ್ಯ[4]ದೆ[4] ನಾರೀ
ವರರನುಭವಸು[5]ಖಸುಧಾಬ್ಧಿ[5]ಯೊಳಗೋಲಾಡು
ತ್ತಿರಲುತ್ತಮೋತ್ತಮೋತ್ತ
ತರ ಸೌಖ್ಯದೊಳಿದ್ದು ನೆರೆದರಾ ದಂಪತಿಗಳ್ ೨೭

ಏನೆಂದಱಿಯದೆ ಸುರತ
ಧ್ಯಾನದೆ ಕಡುಮೂರ್ಛೆಯಿಂದಲಾ ದಂಪತಿಗಳ್
ನಾನಾವಿಧ ಬಂಧದೊಳ
ತ್ಯಾನಂದಾಮೃತವ ಸವಿದು ಸು[6]ಖದೊಳಗಿ[6]ರ್ದರ್ ೨೮

ತಿಳಿಯಿತ್ತು ಮೂರ್ಛೆ ನಯನೋ
ತ್ಪಲವರಳಿದವೊಬ್ಬರೊಬ್ಬ[7]ರಂ ನೋಡುತ್ತುಂ[7]
ಕಲಶಜಲದಿಂದೆ ಮುಖಮಂ
ಡಲಮಂ [8]ಕರ್ಚುತ್ತೆ[8] ವೀಳ್ಯಮಂ ಕೈಕೊಂಡರ್ ೨೯

ವಚನ : ಅಂತು ವೀಳಯಮಂ ಕೊಂಡು ಸಂತೋಷದಿಂದಿರ್ದು ತಾಂಬೂಲಮನುಗುಬ್ಬಿ ಅಂಬುವಂ ಮುಕ್ಕುಳಿಸಿ ಹರಿಸ್ಮರಣೆಯಂ ಮಾಡಿ ವರಾಂಗನೆಗೂಡಿ ಮುಕುಳಿತ ನಯನರಾಗಿ ಸುಖನಿದ್ರೆಗೈಯುತಿರ್ಪ ಸಮಯ[9]ದೊಳ್[9]

ಕಂದ : ಸುರಗಿರಿಯ [10]ಸುರಭಿಯಂ[10] ಕೇ
ಸರಿಯಂ ಮಂದಾರತರುವನಬ್ಜೇಶ್ವರನಂ
ವರರೇಣುಕೆ ತಾಂ ಬೆಳಗ
ಪ್ಪರೆಜಾಪಮಿರಲ್ಕೆ ಕಂಡಳೊಪ್ಪುವ ಕನಸಂ ೩೦

---

1 ಯುಕ್ತಿ (ಗ) 2 ಳೊಳೂರುದ್ವಯದೆ (ಕ ಚ) 3 ತ (ಚ) 4 ದಲಿ (ಚ) 5 ಖಾಬ್ಧಿ (ಕ) 6 ಖಿಯಾಗಿ (ಚ) 7 ರುಮನೀಕ್ಷಿಸುತ್ತುಂ (ಕ) 8 ತೊಳೆವುತ್ತೆ (ಚ) 9 ದಲ್ಲಿ (ಚ) 10 ನಬ್ಧಿಯುಂ (ಕ)

ವಚನ : ಅಂತು ಕನಸಂ ಕಂಡುಪ್ಪವಡಿಸಿ ಸ್ನಾನಕರ್ಮಾನುಷ್ಠಾನಂಗೆ[1]ಯ್ದು[1] ಪತಿಯಪ್ಪ ಜಮದ[2]ಗ್ನಿಯೆಡೆಗೈದಿ[2] ರೇಣುಕಾದೇ[3]ವಿ ತನ್ನ ಕಂಡ[3] ಸ್ವಪ್ನ[4]ವೃತ್ತಾಂತಮುಮಂ ವಿಜ್ಞಾಪಿಸಲೊಡಂ[4] ಆ ಋಷಿ ಪಿರಿಯರಂ ಕರೆಯಿಸಿ ತತ್ಪ್ರಪಂಚಮುಮಂ [5]ಪೃಚ್ಛಿಸಲೊಡನವರಿಂ[5]ತೆಂದರ್

ಚಂಪಕಮಾಲೆ

ಸುರಗಿರಿಯಂತೆ ಧೈರ್ಯಯುತನಂ ಮಕರಾಕರದಂತೆ ಸಂತತಂ
ಪರಮ ಗಭೀರನಂ ಕರಿವಿದಾರಣನಂತೆ ಬಹುಪ್ರತಾ[6]ಪನಂ[6]
ಸರಸಿಜಮಿತ್ರನಂತಧಿಕತೇಜಚರಿತ್ರನ ಪಾರಿಜಾತದಂ
[7]ತು[7]ರುತರದಾನಿಯಂ ತರುಣಿ ರೇಣುಕೆ [8]ತಾಂ ಪಡೆವಳ್[8] ಸುಪುತ್ರನಂ ೩೧

ಕಂದ : ಎನೆ ಪಿರಿಯರ್ಗಂ ವಂದಿಸಿ
ಮನವೊಲಿದುದನಿತ್ತು ಕಳುಪಿದರ್ ಸಂತಸದಿಂ
ವನಿತೆ ರೇಣುಕೆಗೆ ಗರ್ಭಂ
ಜನಿಯಿಸಿತದನೇನನೆಂಬೆನಾಕೆಯ ಬಗೆಯಂ ೩೨

ವಚನ : ಅದೆಂತೆಂದೊಡೆ

ಚಂಪಕಮಾಲೆ

ಎಸೆವ ಬಟಲ್ಕಚಂ ನಯನದೊಳ್ ಶ್ರಮವಾ ಬಿಳುಪೇಱಿ ದಾನನಂ
ಮಿಸುಪ ಘನಸ್ತನದ್ವಯದ ಚೂಚುಕದಲ್ಲಿಯ ಕಪ್ಪು ಬಿಣ್ಪಿನಿಂ
ದೆಸೆವ ಸುಮಧ್ಯ ನೇರಿತಹ ಬಾಸೆ ನಿವಾರಿಸಿದಾ ತ್ರಿರೇಖೆ ಪೂ
ಣ್ದಸಿಯಳನಾಭಿಮಾಂದ್ಯಗತಿ ರೇಣುಕೆಗೊಪ್ಪಿತು ಗರ್ಭವೇಳ್ಗೆಯೊಳ್ ೩೩

ಕಂದ : ತನು ಪಿಗ್ಗಿ[9]ತೊ[9] ರೇಖಾತ್ರಯ
ವಿನಿತಿಲ್ಲದೆ [10]ಪೋಯ್ತೊ[10] ತ್ರಿವಳಿಯಾ ಸ್ತನದಗ್ರಂ
ತನು ಕಪ್ಪುವೆರಸಿ[11]ತೋ[11] ಸ
ಜ್ಜನ [12]ಚೂಡಾ[12]ರತ್ನ ರೇಣುಕಾ ವರಸತಿ[13]ಗಂ[13] ೩೪

---

[1] ಯ್ದು ಬಂದು (ಚ) [2] ಗ್ನಿಯ ಸಮೀಪಕ್ಕೆ (ಚ) [3] ವಿ (ಚ) [4] ವಂ ಬಿನ್ನೈಸುವುದುಂ (ಚ) [5] ಕೇಳ್ದರವರಿಂ (ಚ) [6] ಪಿಯಂ (ಚ) [7] ತ್ಯ (ಗ) [8] ನೀಂಪಡೆವೆಂ (ಚ) [9] ತು (ಚ) [10] ಹೋಯಿತು (ಚ) [11] ತಾ (ಚ) [12] ಚಿಂತಾ (ಚ) [13] ಗೇಂ (ಕ)

ಇಂತಾಗೆ ಗರ್ಭಚಿಹ್ನಂ
ಕಾಂತೆಗೆ ಸೀಮಂತ ಶೋಭನವ ಮಾಡಿದನ
ತ್ಯಂತ ಜಮದಗ್ನಿಮುನಿಪತಿ
ಸಂತೋಷಾಂಬುಧಿಯೊ[1]ಳಿರ್ದರಾ[1] ದಂಪತಿಗಳ್ ೩೫

ಪುಂಸವನ[2]ಮನೆಸಗಿದನಾ[2]
ಭೂಸುರಕುಲತಿಲಕ ಜಾಮದಗ್ನ್ಯ ಮುನೀಂದ್ರಂ
ಭಾಸುರತೆಯಿಂದಲೊಪ್ಪಿದ
ರಾ ಸೌಖ್ಯಮನೇನನೆಂಬೆನಾ ಹರಿ ಬಲ್ಲಂ ೩೬

ಅಂತಾ ಪತಿವ್ರತೋತ್ತಮೆ
ಗಂತುಂ ನವಮಾಸ ತುಂಬಲಾ ಗ್ರಹನಿಕರಂ
ಮುಂತಿರಲುತ್ತಮದಿವಸದೊ
ಳಂತಕರಿಪುವೆನಿಪ ದಿವ್ಯಸುತನಂ ಪಡೆದಳ್ ೩೭

ಕ್ರಮದಿಂದೆ ನಡೆದು ನವಮಾ
ಸಮುದಾಗಲ್ ಪಡೆದಳಂದು ರೇಣುಕೆಯಾ ಸಂ
ಭ್ರಮಶುದ್ಧಿಯಲ್ಲಿ ಸುತನಂ
ಜಮದಗ್ನಿಯ ಜಾತಕರ್ಮಮಂ ಮಾಡುವುದಂ ೩೮

ವಚನ : ಅಂತಿರ್ಪ ಆದಿವಿಷ್ಣು ತನ್ನಂಶದಿಂ ಜನಿಯಿಸುವುದುಂ ಜಮದಗ್ನಿ ಮೂರ್ಧ್ನಿ ಘ್ರಾಣಂಗೈದು

ಕಂದ : ಜಮದಗ್ನಿ [3]ಋಷೀಶ್ವರನಾ[3]
ಕ್ರಮದಿಂದಂ ನಾಮಕರಣಮಂ ಮಾಡಿದನು
ತ್ತಮ ಪರಶುರಾಮನೆಂದುಂ
ಸಮತೆಯೊಳಾ ಧರಣಿಯಮರರುತ್ಸಾಹ[4]ಪ[4]ವೊಲ್ ೩೯

ಉನ್ನತ ತೇಜೋನಿಧಿ ಸಂ
ಪನ್ನಂ ಶ್ರೀಪರಶುರಾಮ[5]ನಿಗೆ[5] ಜಮದಗ್ನ್ಯಂ
ಅನ್ನಪ್ರಶನವ ಮಾಡಿಸಿ
ದನ್ನಯದಿಂ ಪರಸೆ ರೇಣುಕಾಸತಿಯೊಲವಿಂ ೪೦

---

1 ಳಿರ್ದರಾ (ಗ) ಳಿದ್ದರಾ (ಚ) 2 ಮಂ ಮಾಡಿದ (ಚ) 3 ಸನ್ಮುನಿಪ (ಚ)
4 ಸು (ಚ) 5 ಗಾ (ಚ)

ಚೌಲವನು ಮಾಡಿದಂ ಮುನಿ
ಬಾಲಂಗಾ ಪರಶುರಾಮ[1]ನಿಗೆ ಮುದ[1]ದಿಂದಂ
ಲೀಲೆಮಿಗೆ ರೇಣುಕಾಸತಿ
ಯಾಲೋಕಿಸುತಿರ್ದಳಾಗ ಸುತನೇಳಿಗೆಯಂ ೪೧

ಒಂದೆರಡು ಮೂಱು ನಾಲ್ಕೈ
ದೆಂದಾರೇಳೆಂಟು [2]ಬರಿಸ[2]ಮಾಗಲ್ ಸಂತೋ
ಷಂದಳೆದು ಮುಂಜಿಗಟ್ಟಿದ
ನಂದೀ ಭೂಸುರರು ಮೆಚ್ಚಲಾ ಜಮದಗ್ನ್ಯಂ ೪೨

ವೇದ[3]ಶಾಸ್ತ್ರಗಳನೋದಿದ
ನಾದರದಿಂ[3] ಪರಶುರಾಮನಾ [4]ಜಮದಗ್ನ್ಯನ[4]
ಬೋಧೆ[5]ಯಿಂದಧಿಕನಾದಂ
ಆ ದಿವ್ಯಾತ್ಮಕನು ಮಾತೃಪಿತೃಭಕ್ತಿಯುತಂ[5] ೪೩

ವ್ರತಗಳನಾಚರಿಸಿದ[6]ನ[6]
ಪ್ರತಿ[7]ಮಾನ ಚರಿತ್ರ ರೇಣುಕಾಸುತ[7] ರಾಮಂ
ಅತಿಭಕ್ತಿಯಿಂದೆ ಗಿರಿಜಾ
ಪತಿ[8]ಯಿಂ ಶರ ಪರಶು ಧನುವನಾತಂ ಪಡೆದಂ[8] ೪೪

ಇಂತಿಂತು ವೇದ[9]ವಂ ಶಾ
ಸ್ತ್ರಂ[9]ತನ ನೆಱೆ ಕಲ್ತು ಮೇಲೆ [10]ಶಸ್ತ್ರಗಳಂ ತಾಂ
ಸಂತಸದೆ ಕಲ್ತನಾ ಶ್ರೀ
ಕಾಂತಂಗೆಣೆಯೆನಿಪ ರಾಮನಾ ಪರಶುಧರಾ[10] ೪೫

ದಿವ[11]ಸಂಗಳ್ ಪಲವುಂ ಪೋ[11]
ದುವು ದಶ[12]ಮೈಕಾದಶ[12] ತ್ರಯೋದಶವರ್ಷಂ
ತವೆ ಪರಶುರಾಮದೇವಗೆ
ನವಕಲೆಗಳ್ ಕೂಡುವಂತಿರುಷುವಲ್ಲಭ[13]ಗಂ[13] ೪೬

---

[1] ನನುನಯ (ಚ) [2] ವರುಷ (ಚ) [3] ಗಳ ಶಾಸ್ತ್ರಮಂ ತಾನೋದಿದನಾ (ಕ) [4] ದರದಿಂದಂ (ಕ) [5] ಯೊಳಧಿಕಂತಾತಾನಿಸಾದಂ ಪಿತೃಭಕ್ತಿಯುಕ್ತನಾ ದಿವ್ಯಾತ್ಮಂ (ಕ) [6] ನಾ (ಚ) [7] ಪತಜಮದಗ್ನಿ ರೇಣುಕಾತ್ಮಜ (ಚ) [8] ಯಿಂದಂ ಪಡೆದ ಪರಶುವಂ ಧನುವಂ (ಚ) [9] ಶಾಸ್ತ್ರವನಂ(ಚ) [10] ಶಸ್ತ್ರಾಭ್ಯಾಸಗಳಂ ತಡೆಯದೆ ಮಾಡಿದನತ್ಯಂತಧಿಕಂ ಪರಶುರಾಮನಾದ್ವಿಜ ಪ್ರೇಮಂ (ಚ) [11] ಸಮದಿಂತಂ ತೀಪಿತು (ಚ) [12] ವೇಕಾದಶಾ (ಚ) [13] ಗೇ (ಕ)

ವಚನ : ಅಂತು ತತ್ಪರೋನ್ನತನಾಗಿ ಪರಶುರಾಮಂ ಪಿತೃಸೇವೆ[1]ಯೊಳಧಿಕ[1]ನೆಂದು

ಕಂದ : ಎಂದು ಜನಂ ಬಣ್ಣಿ[2]ಸೆ[2] ಮುದ
ದಿಂದಂ ಜಮದಗ್ನಿ ರೇಣು[3]ಕೆಯರ್ಗಳ್[1] ಸಂತೋ
ಷಂದಳೆಯೆ ಪರಶುರಾಮಂ
ತಂದೆಯ ಸೇವೆಯನು ಮಾಡುತಿರಲೊಂದುದಿನಂ ೪೭

ವಚನ: ರೇಣುಕಾದೇವಿ ತನ್ನಯ [4]ವಲ್ಲಭ[4]ನಪ್ಪ ಜಮದಗ್ನಿಯ ದೇವಾರ್ಚನೆಗೆ ಎಂದಿನಂತೆ ಸಿತಕ ಭಾಂಡದಲಿ ಹೊನಲಿಯುದಕಮಂ ತರುತಿರಲಲ್ಲಿ ಗಾಂಧರ್ವಚ್ಛಾಯೆ ಪೊಳೆಯೆ ಪರಪುರುಷದೃಷ್ಟಿಯಿಂ ಭಾಂಡಂ ಭಿನ್ನಮಾಗೆ ತಡೆದ ಕಾಂತೆಯಂ ಕಂಡು

ಕಂದ : ಸತಿಗೆ ದುರಾಚಾರಂ ಪೊ
ರ್ದಿತು ದೇವಾರ್ಚನೆಯ ಕಿಡಿಸಿದಳ್ ನೋಡೆನುತುಂ
ಸುತ ಪರಶುರಾಮನಂ ಕರೆ
ದತಿಕೋಪದೆ ಜಾಮದಗ್ನ್ಯಮುನಿಯಿಂತೆಂದಂ ೪೮

ತನಯಂ ನೀ[5]ನಪ್ಪೊಡೆಯೆ[5]
ನ್ನನುಜ್ಞೆಯಂ [6]ಮಾಱಲ್ಪ್ಪಯಪ್ಪೊಡೀಗಳ್[6] ನಿನ್ನೀ
ಜನನಿಯ ಶಿರವರಿ ವರ್ತನೆ
ಯನೆ ತಪ್ಪಿದಳೆಂದು ಘೂರ್ಮಿಸಿದನಾಗ್ರಹದಿಂ ೪೯

ತರಹರಿಸದೆ ತಂದೆಯ ನುಡಿ
ಗುರುವಾಕ್ಯವೆನುತ್ತೆ [7]ಪೊಯ್ದನಾಗಳೆ[7] ತಲೆಯಂ
ಹರಹರ ಪಾಪಂ ಪುಣ್ಯಗ
ಳೆರಡಱ ಭೇದವನು ರಾಮನೇನೆಂದಱಿವಂ ೫೦

ವಚನ : ಅಂತಾ [8]ಪೆಟ್ಟಿನಿಂ[8] ಸಿಡಿದ [9]ಹದಿಬದೆಯರ ತಲೆದುಡುಗೆಯೆನಿಪ್ಪ ಸತಿಯ ತಲೆಯಂ[9] ಮಾತಂಗಿ[10]ಯೆನಿಸಿಪ್ಪವಳ್[10] ತನ್ನ ಮನೆಯೊಳಿರಿಸಿ ಸೇವಿಸಿ

---

1 ಯಲ್ಲಿ ಅಧಿಕ (ಚ) 2 ಸಲ್ (ಚ) 3 ಕಾಸತಿ (ಚ) 4 ರಮಣ (ಗ)
5 ನಾದೊಡೆಯೆ (ಗ ಚ) 6 ಬಾಳ್ವೆನೆಂಬಡಿಗಂ (ಚ) 7 ಹೊಯ್ದನಾಕ್ಷಣ (ಗ ಚ)
8 ಪೊಡೆಯೆ (ಚ) 9 ಪತಿವ್ರತಾಶಿರೋಮಣಿಯ ಶಿರಸ್ಸಂ (ಚ) 10 ಯೆಂಬಳ್ (ಚ)

ಚಂಪಕಮಾಲೆ

ಕದುಬುವ ಕೂಳು ಪೊಯ್ತು ಪಱಿಯುಬ್ಬುವ ಬೊಬ್ಬೆ ಕನಲ್ವ ನೀಳ್ದ ಹ
ಗ್ಗದ ಹುರಿ ತೂಗುತಿರ್ಪ ಸಿಡಿ ಗಂಟಲಗಾಣವಗುರ್ವನಾಂತ ಕೆಂ
ಡದ ಮಡು ಪೊಯ್ಸ ಕೋಣ ಕುಱಿ ನೆತ್ತರ ಪೆರ್ವೊನಲಿಂದಲಪ್ಪುತಂ
ಪುದಿದಿರಲೇಕನಾಥೆಯೆನುತುಂ ಪೊಡಮಟ್ಟುದಭೀಷ್ಟಕಾಮಿಗಳ್* ೫೧

ಕಂದ : [1]ಮಾತೆಯ ಶಿರವರಿದನಿವಂ[1]
ಭೂತಳಕತಿಚೋದ್ಯಮೆಂದು ಪೊಗಱು[2]ತ್ತಿರೆ[2] ಭೃಗು
ಜಾ[3]ತಂ ಸುತನಂ ತಾಂ[3] ಸಂ
ಪ್ರೀತಿಯೊಳಪ್ಪಿದನು ಬೇಡು ವರಮಂ ಕೊಡುವೆಂ ೫೨

ಎಂದೆನಲು ತಾಯ [4]ಹರಣವ[4]
ಸಂದೇಹಂ[5]ಬಿಡದೆ ಕೊಡುವುದೆನಲಾ[5] ಮುನಿಪಂ
ಮುಂದಿರ್ದ [6]ಸತಿಯ[6]ನೆಬ್ಬಿಸಿ
ದಂದಮನಾನೇನ ಪೇೞ್ವೆನಿದು ಚಿತ್ರತರಂ ೫೩

ಮಗನೆ ನೀನೇನ ಬೇಡಿದೆ
ಮಗುೞ್ದು ನಿಜಜನನಿಯಸುವನೀಯೆನಲದಕಂ
ಮಿಗಿಲಾಂ ಮೆಚ್ಚಿ[7]ದೆನಿನ್ನೀ[7]
ನಗಲದೆ ವಚಿಸೀಗಲೀವೆನೆಂದಂ ಮುನಿಪಂ ೫೪

ಎನಲು ಜಮದಗ್ನಿಮುನಿಪದ
ವನಜದ್ವಯಕೆಱಗಿ ಪರಶುರಾಮಂ [8]ಭಯದಿಂ[8]
[9]ದನುನಯದ[9] ಕೋಪವೆಲ್ಲವ
ನಿನಿತಿಲ್ಲದೆ ಬಿಟ್ಟು ಸಲಹಿಂಯೆನಲಿಂತೆಂದಂ ೫೫

---

1 ಮಾತೃಮಸ್ತಕವನಿಳುಹಿದ (ಚ) 2 ತಿರಲ್ (ಚ) 3 ತನಾತನಯನಂ (ಚ)
4 ಪ್ರಾಣವ (ಚ) 5 ಮಾಡದಿಃವುದೆನಲಾ (ಚ) 6 ಸ್ತ್ರೀಯ (ಚ) 7 ದೆಂನೀಃ (ಚ)
8 ಭಕ್ತಿಯೊ (ಚ) 9 ಳನುನಯ (ಚ)

* ೫೧ನೆಯ ಪದ್ಯದ ಬಳಿಕ ಚ ಪ್ರತಿಯಲ್ಲಿ ಈ ಕೆಳಗಿನ ಭಾಗವಿದೆ.

ವಚನ : ಅಂತು ಎದೆ ಶಿರಸ್ಸಂ ಮಡಗಿ ಮಾತಂಗಿಯುಂ ಮಾತಂಗಿಯೆಂದು ರಕ್ಷಣಾರ್ಥವಾಗಿ ಕಾಯ್ದು ಪೂತೇಶ್ವರನಂ ಪೂತು ರಾಜಸೆಂದು ಉಘೆಯೆಂಬುದಕ್ಕೆ ಉದೊಯೊಂದು ಶಿರಸ್ಸು ಪೂಜ್ಯಂಗೊಳುತ್ತಿರಲಿತ್ತಲು

ಕೋಪವ ಬಿಡಿಯೆಂದೊಡೆ ನೀಂ
ಕೋಪಂ ತಾನೆನ್ನ ಜೀವನಕ್ಕಾಧಾರಂ
ಕೋಪ[1]ಮುಱಿ[1]ದಾಗ[1] ಜೀವಂ
ಪೋಪುದುಮುದಱಿಂದ [2]ಕೋಪ[2]ಮಂ ಬಿಡಬಹುದೇ ೫೬

ಬಿಡಬೇಕು ಜೀಯ ಕೋಪವ
ಕೊಡುವ[3]ಡೆ[3] ವರ[4]ವೊಂದನೀಗ ನೀಮೆನೆ[4] ಮುನಿಪಂ
ಕಡುವೇಗ[5]ಮು[5]ಗುೞ್ದ ಕೋ[6]ಪಂ[6]
ಘುಡುಘುಡಿಸುತೆ [7]ಗ[7]ತಿಯದಾವುದೆಂದುದು ಕೋಪಂ ೫೭

ನೀನಬ್ಧಿಗೈದು ಕೋಪಕ್ಕೃ
ಶಾನುವೆ ವಡಬಾಗ್ನಿಯಾಗಿ ಸಲಿಲವನೀಂಟುವೆ
ನೀನಾಹುತಿಗೊಳು ಪೋಗೆನು
ತಾ ನಿಧಿ[8]ಗಂ[8] ಕಳುಪಲ್ಕೈದಿತಂಬುಧಿಗಾಗಂ ೫೮

ವಡಬಾಗ್ನಿಯಬ್ಧಿ[9]ಯಂ[9] ಪೊ
ಕ್ಕೆಡೆಯುಡುಗದೆ ಸಲಿಲವೀಂಟುತಿರ್ದುದುಮಿತ್ತಂ
ಮಡದಿ ರೇಣುಕೆ ಸಮೇತಂ
ದೃಢದಿಂ ಜಮದಗ್ನಿ ತಪಸು ಮಾಡುತ್ತಿರ್ದಂ ೫೯

ವಚನ : ಅಂತು ಜಮದಗ್ನಿಯು [10]ಸ[10]ತ್ರಿಪುತರ್ವರಸಿ ತಪಸುಗೆಯ್ಯುತಿರ್ಪಿನಮಿತ್ತಲ್

ಕಂದ : ಸಲೆಸಂದ ಲಾಳದೇಶದೊ
ಳೊಲವಿಂದ[11]ಲಯೋಧ್ಯೆ[11]ಯೆಂಬ ಪಟ್ಟಣಮದು ಭೂ
ಲಲನೆಯ ಮುಖದರ್ಪಣಮೆಂ
ಬೊಲು ರಂಜಿಸುತಿರ್ಪುದಾವಗಂ ಸೊಬಗಿಂದಂ ೬೦

ವಚನ : ಅದೆಂತೆಂದೊಡೆ

---

1 ಪೋಱಾಗ (ಗ ಚ) 2 ಜೀವ (ಕ) 3 ಡೆನಗೆ (ಚ) 4 ವಿದೀಗಲೆನಲಾ (ಚ)
5 ಲು (ಚ) 6 ಪಪ (ಚ) 7 ಸ (ಕ) 8 ಗೆ ಮುನಿಪ (ಗ) 9 ಯು (ಗ)
10 ಶನ್ನ ಸ (ಗ ಚ) 11 ಮಯೋಧಿ (ಚ)

ಚಂಪಕಮಾಲೆ

ಧರೆಗೆ ವಿಚಿತ್ರಮಾದ ತೋಱಯಿಂ ಕೆಱಯಿಂ ನವನಂದನಂಗಳಿಂ
[1]ದು[1]ರುತರ ಪುಷ್ಪವಾಟಿಗಳಿನಲ್ಲಿಯ ಪೂಗೋಳಶಾಲಿಯೋಳಿಯಿಂ
ಸುರುಚಿರ ದೇವತಾಲಯದೆ ಸೂ[2]ರಿಯ ಸೋಮ ಸು[2]ವೀಥಿಯೋಳೆಯಿಂ
ಪಿರಿಯರತೀವ ಪುಣ್ಯಜನದೊಬ್ಬುಳಿಯಿಂದಲಯೋಧ್ಯೆಯೊಪ್ಪುಗುಂ ೬೧

ಕಂದ : ಆ ಪುರನಾಥಂ ಸಕಲ ಗು
ಣೋಪೇತಂ ಧರ್ಮಿ ಕಾರ್ತವೀ[3]ರಿಯನೆಂಬಾ[3]
ಭೂಪತಿ[4]ಸಾಸಿರ[4] ತೋಳಿಂ
ವ್ಯಾಪಿಸುತಿಹನರಸುವಂಶವುಸ್ತಕರತ್ನಂ ೬೨

ವಚನ : ಅಂತು ಕಾರ್ತವೀರ್ಯಾರ್ಜುನಂ ಮಹಾವಿಭೂತಿಯಿಂದೊಡ್ಡೋಲಗಂ[5]ಗುಡುತಿರ್ಪಾಗಳ್[5]

ಉತ್ಪಲಮಾಲೆ

ಜೇನ ಕೊಡಂಗ[6]ಳಿಂ[6] ಬೆಳಲಪಣ್ಣುಗಳಿಂ ವಚಿಪಾ ಶುಕಂಗ[7]ಳಿಂ[7]
ಆನೆಯ ದಂತಮಂ ಪುಲಿಯುಗುರ್ಗಳ ಸೂಕರ ಮೌಕ್ತಿಕಂಗಳಂ
ಮಿಾನಸಮೂಹಮಂ ಚಮರ ಚಾಮರ ಕತ್ತುರಿ ನೆಯ್ಮೃಗಂಗಳಂ
ಕಾನನವಾಸಿಗಳ್ ಧರಣಿಪಾಲಗೆ ಕಾಣ್ಕೆಯನಿತ್ತರರ್ತಿಯಿಂ ೬೩

ವಚನ : ಅಂತು ಬಂದು ಬೇಂಟೆಕಾಱರ್ ಕಾಣಿಕೆಯನಿತ್ತು ಕೈಯಂ ಮುಗಿದು ದೇವರು ಅರಣ್ಯದಲ್ಲಿ [8]ಸಾಕಿದ[8] ಖಗ ಮೃಗದಂತೆ ಮನುಜರಿಗೆ ಬೆಚ್ಚದೆ ಬೆದಱದೆ ಇದಿರಾಗಿ ಬರುತ್ತಿರ್ಪುವೀಗಳ್ ಬೇಂಟೆಗೆ ಸಮಯಮೆಂದು ಬಿನ್ನಸಂಗೈದ ಶಬರರಿಗುಡುಗೊಱ[9]ಯನಿತ್ತ[9] ಭೂಪಾಲಂಗೆ ಬೇಂಟೆಕಾಱರ್ ಮತ್ತಂ ಬಿನ್ನೈಸುತಿರ್ದರವೆಂ[10]ತೆನೆ[10]

ಸ್ರಗ್ಧರೆ

ದೇವಾ ನೀವೀಗ ನಾನಾ ಖಗಮೃಗವಧೆಯಂ ಮಾಡಬೇಕೆಂದು ವೃತ್ತಂ
ತಾವೆಲ್ಲಂ ಬಂದು ಕೈಯಂ ಮುಗಿಯಲಿಕವರಂ ಮನ್ನಿಸುತ್ತಂ ನರೇಂದ್ರಂ
[11]ಜೀ[11]ವವ್ರಾತಂಗಳಂ ಸಂಹರಿಸುವೆನೆನುತುಂ ಪ್ರೀತಿಯಿಂದೆದ್ದನಾ ಕಾ
ರ್ತವೀರ್ಯಂ ನಿಂದ[12]ನಾಗಳ್[12] ನೃಪಕುಲತಿಲಕಂ ಬೇಂಟೆಗುದ್ಯುಕ್ತನಾದಂ ೬೪

---

1 ನು (ಗ) 2 ರ್ಯ ಸೋಮ(ಗ) 3 ರ್ಯನೆಂಬಂ (ಗ) 4 ಸಹಸ್ರ (ಗ ಚ)
5 ಗೊಟ್ಟಿರ್ಪ ಸಮಯದಲ್ಲಿ (ಚ) 6 ಳಂ (ಚ) 7 ಳಂ (ಚ) 8 ಸೊಕ್ಕಿದ (ಗ)
9 ಯಂಕೊಟ್ಟು (ಚ) 10 ತೆಂದೊಡೆ (ಚ) 11 ದೇ (ಕ) 12 ನಾಗಂ (ಚ)

ವಚನ : ಅದೆಂತೆಂದೊಡೆ

ಉತ್ಪಲಮಾಲೆ

ದೀಹದ ಪುಲ್ಲೆಯಿಂ ಪುಲಿಯ ಭಂಡಿಗಳಿಂ ಬಲೆಯಂಟುಗೋಲ್ಗಳಿಂ
ಕಾಹಿನ ನಾಯ್ಗಳಿಂ ಪಱಿವ ವೇಸಡನಿಂದಿಱುಗೂಳಿ ಗಾಣದಿಂ
ತೋಹಿನವರ್ಗ[1]ಳಿಂ[1] ಕರಿ ತುರಂಗ ರಥಂ ಪರಿವಾರದೊಡ್ಡಿನಿಂ
ದಾ ಹಸುರಂಗಿ ಎಕ್ಕವಡ [2]ಕ್ಕೈ[2]ಪೊಡೆಯಿಂ ನೃಪ ಬೇಂಟೆಗೈದಿದಂ ೬೫

ವಚನ : ಅಂತು ಬಂದು ಕಾನನಮಂ ಪೊಕ್ಕು ಪರೆದು ನಡೆದು ಸೋಹಿ ಬೊಬ್ಬೆಯಬ್ಬರದಿಂ ಪರಿದು ಬಿಡುವ ದೀಹಂಗಳ ಹಾಸದನಾಯಿಗಳ ಇಡುವ ಬಡಿಕೋಲುಗಳ ಎಸೆವ ಕೊರ್ಗಣೆಗಳ ಬೀಸುವ ಬಲೆಗಳ ತಿವಿಪಿಟ್ಟಿಗಳ ಭಯಂಕರಕೆ ಬೆಚ್ಚಿ ದೆಸೆವೆಸೆಗೆ ಹಿಂಡೊಡೆದು ಎಱಗುವ ಹುಲಿಯ ಎತ್ತುವ ಹಂದಿಯ ಕೆಲೆವ ಕರಡಿಯ ಮುಸುಕುವ ಭೇರುಂಡನ ತೂಳುವ ಸಿಂಹವ ತುೞಿವ ಕಡವೆಯ ಪುಟನೆಗೆವ ಹರಿಣನ ಪರಿವ [3]ಸಾರಗದ[3] ಜುಣುಗುವ ಮೊಲನ ನುಱಿಪಟ್ಟ [4]ಕೊಂಡ[4]ಗುಱಿಯ ಹೊಡೆವ ಕಾಡುಕೋಣನ ಸುರುಳುವ [5]ಕೋ[5]ರುಮಂಗಿಯ [6]ನೆಲನಂ ಬಿಡದುಡುವಿನ ಕೆದಱಿ ಪಾಱುವ ಪಕ್ಕಿಗಳಂ ಕಂಡು ವಿವರವಱಿತು ಹೊಂಚಿ ಹಜ್ಜೆಯಱಿತು ಬೆಂಬತ್ತಿ[6] ಕೋಳಾಹಳಂಗೈದುದಂತುಮಲ್ಲದೆಯುಂ

ಮತ್ತೇಭವಿಕ್ರೀಡಿತ

ಶರಭಂ ಸಿಂಹ ಮಮೇಭಮುಂ ಪುಲಿಯುಮಂ ದೇವಾಂಗ ಸಾರಂಗಮುಂ
ಮರೆಯಂ ಸೊಕ್ಕು ಮೊಲಂಗಳಂ ಕರಡಿಯಂ ಕಾಡ್ಗೋಣ[7]ನಂ[7] ಖಡ್ಗಿಯಂ
ನರಿಯುಂ ಮರ್ಕಟಮೋಪ್ಪುಮುಂ ನಕುಲನುಂ ವಾರಾಹಮುಂ ಪುಲ್ಲೆಯುಂ
ಧರಣೀಶಂ ಕಲಿ ಕಾರ್ತವೀರ್ಯ ಭರದಿಂ ಕೊಂದಂ ಮಹಾವಿಂಧ್ಯವೊಳ್ ೬೬

---

[1] ಳಂ (ಕ) [2] ಕೈಯಿಂ (ಗ) [3] ಸಾರಂಗವ (ಚ) [4] ಕೊಡ (ಕ) [5] ತ (ಚ)
[6] ನೆಲನಂ ಬಿಡದುಡುಪಿನ ಬಯಲಿಂಗೋಡುವ ಮರೆಯ ಗವಿಯಿಂ ಪುಗುವ ಸ್ನೈವಂದಿಯ ಅರಿಯದಂತೆ ನುಂಗುವಂ ಮಾಪಿನ ಹೊಂಚಿ ಹಾಯ್ವ ಮೆಳೆಯೊಳ್ ಸಿಕ್ಕಿದ ರಘುಲ್ಲಿ ಮೃಗದ ಕಾಲ್ಗೆಟ್ಟು ನಿಂದ ಕತ್ತುರಿಮೃಗದ ಕಡೆಗೋಡುವ ಖಡ್ಗಿಯ ಕೆದಱಿ ಪಾಱುವ ಪಕ್ಕಿಗಳಂ ಕಂಡು ಮೋಲಿಕ್ಕಿತೊಮಗಟ್ಟಿ ವಿವರವಱಿತು ಹೊಳೆಯೊಳು ಹೊಂಚಿ ಪಜ್ಜೆಯಱಿತು ಬೆಂಬೊತ್ತಿ ಕದಿಖಂಡಂ ಮಾಡಿದನಟ್ಟುಗುಳಿಯಂತೆ (ಚ) [7]ನ (ಕ)

ಶಾರ್ದೂಲವಿಕ್ರೀಡಿತ

ಭೇರುಂಡಂ ಶಿಖಿ ವಾಯಸಂ ಪರಭೃತಂ ನೀರ್ವಕ್ಕಿಯುಂ ಗುಬ್ಬಿಯುಂ
ಭಾರದ್ವಾಜ ಬಕಂಗಳಂ ಹರಡೆಯುಂ ಪಾಲಕ್ಕಿಯುಂ ಗೂಗೆಯುಂ
ಕಾರಂಡಂ ಕೊಳರ್ವಕ್ಕಿಯುಂ ಶುಕಗಳಂ ನಾನಾ ಖಗವ್ರಾತಮಂ
ಘೋರಾರಣ್ಯದ ಬೇಂಟೆಯೊಳ್ ಕೆಡಪಿದಂ ಶ್ರೀ ಕಾರ್ತವೀರ್ಯಾರ್ಜುನಂ ೬೭

ವಚನ : ಇಂತು ಬೇಂಟೆಯಾಡಿ [1]ಪಲವು[1] ಮೃಗಂಗಳಂ ಹೊಱಿಸಿಕೊಂಡು ಬರುತಿರ್ಪಲ್ಲಿ

ಕಂದ : ಇಂತಖಿಲ[2]ಖಗ ಮೃಗಂಗಳ[2]
ನಂತವ ನೆಱ[3] ಬೇಂಟೆಯಾಡಿದಾ ಶ್ರಮದಿಂ ಭೂ
ಕಾಂ[3]ತಂ ಕೃತವೀರ್ಯಸುತಂ[3]
ಸಂತಂ ಜಮದಗ್ನಿಯಾಶ್ರಮಕೆ ಬರುತಿರ್ದಂ ೬೮

ಬರುತಿರಲಿ[4]ತ್ತಲ್[4] ಮುನಿಪನ
ವರತನುಜಂ ಪರಶುರಾಮ ರೇಣುಕೆ ಜಮದ
ಗ್ನ್ಯರ ದೇವಪೂಜೆಗತ್ಯಾ
ದರದಿಂದಂ ಪತ್ರಪುಷ್ಪಮಂ ತರಪೋದಂ ೬೯

ಮುನಿಪತಿಯ ದೇವಪೂಜೆಗೆ
ಮನದೊಲವಿಂ ಪರಶುರಾಮ ಪುಷ್ಪವ ತಹುದ
ಕ್ಕನುನಯದೆ ಪೋಗಲಿತ್ತಂ
ಜನಪತಿ ಕಲಿಕಾ[5]ರ್ತ[5]ವೀರ್ಯನೃಪನೈತಂದಂ ೭೦

ಮಹಾಸ್ರಗ್ಧರೆ

ಬರಲಾ[6]ಗಳ್[6] ಕಾರ್ತವೀರ್ಯಂಗತಿ ಘನತರ ರಾಜೋಪಚಾ[7]ರಂ[7]ಗಳಿಂದ
ತ್ಯುರುಸೌಖ್ಯಂ ಮಾಡಿದಂ ಭೂಸುರಕುಲತಿಲಕಂ ಜಾಮದಗ್ನ್ಯಂ ಮಹಾವಿ
ಸ್ತರದಿಂದಂ ಕೂರ್ತು ನಮ್ಮಾಶ್ರಮದೊಳೆ ಮುದದಿಂ ಭೋಜನಂ ಮಾಡಬೇಕೆಂ
ದಿರ[8]ದಾಗಳ್[8] ಬೇಡಿಕೊಂಡಂ ಧರೆಗಧಿಪತಿಯಂ ವಾಕ್ಯಸಾರಂಗಳಿಂದಂ ೭೧

---

[1] ಮೂಡೆಗಟ್ಟೆ ಬೆರಳೆಯುಂ ಅಡ್ಡೆಯು ಹಂದಿಯುಂ ಮಿಗಾಸ ಗುದಿಯಂ ಕಲ್ಲಿಯು ಹಕ್ಕಿಯುಂ ಭಂಡಿಯು ಕೊಣಸಂ ಹಿಡಿಗ್ಯೆಯು ಮೊಲನಂ ಮತ್ತಂ ಪಲವು (ಚ) [2] ಮೃಗ ಖಗಂಗಳ (ಕ) [3] ತನಾ ಕಾರ್ತವೀಯಂ (ಚ) [4] ತ್ತಂ (ಚ) [5] ತಿ (ಕ) [6] ಗಂ (ಚ) [7] ರ (ಕ) [8] ದಾಗಂ (ಚ)

ಕಂದ : ಎನೆ ಹೈ ಹಸಾದವೆನುತುಂ
ಘನಸಂತೋಷ[1]ದೊಳ್[1] ಕಾರ್ತವೀರ್ಯಂ ನಿಲಲಾ
ಮುನಿನಾಥನಾಗಲಾ ನಂ
ದಿನಿಯೆಂಬಾ ಕಾಮಧೇನುವಂ ನೆನೆಯಲೊಡಂ ೭೨

ವಚನ : ಅಂತು ನೆನೆಯೆ ಬಂದ ಕಾಮಧೇನುವಿಂಗರ್ಘ್ಯಪಾದ್ಯಾಚಮನಂಗೆಯ್ದು ಋಷೀಶ್ವರನಂ ಕಂ[2]ಡಾ[2] ಕಾಮಧೇನುವು ನೀವು ನಿಮ್ಮ ಚಿತ್ತದಲ್ಲಿ ಬಯಸಿದಂತಪ್ಪುದು ಮುಂದಣ ಪ್ರಯೋಜನಮುಂ ಸಾಗಿಸಿಮೆಂಬುದುಂ

ಕಂದ : ಆ ಕಾಮಧೇನುವಚನಂ
ಭೂಕಾಂತಂಗೆಡೆಯಮಾಡಿಯೆನಲಾಕ್ಷಣದಿಂ
ಬೇಕಾದ ಷಡ್ರಸಾನ್ನವ
ಜೋಕೆಯೊಳಂ ಬಡಿಸವೇೞ್ದಂ ಮುನಿನಾಥಂ ೭೩

ಪೇೞದ ಮುನ್ನಂ ಬಂದರ್
ಲೋಲಾಕ್ಷಿಯರಧಿಕ ಯೌವನೆಯರತಿಸೊಬ[3]ಗಿಂ[3]
ಬಾಲೆಯರು ರಾಜಪುತ್ರರ
ಸಾಲಱಿದತಿವೇಗವೆಡೆಯ ಮಾಡಿದರಾ[4]ಗಳ್[4] ೭೪

ಭಕ್ಷ್ಯ ಭೋಜ್ಯಾಜ್ಯ ಸೂಪವ
ನಿಕ್ಷುರಸಂ ಚೋಷ್ಯ ಲೇಹ್ಯ ಪಾನಾದಿಗಳಂ
ಈ ಕ್ಷಿತಿಪತಿಗಳ್ಗಂ ಕಮ
ಲಾಕ್ಷಿಯರೊಲವಿಂದೆ ಬಡಿ[5]ಸುತಿರ್ದರ್ ಜವದಿಂ[5] ೭೫

ಸ್ತ್ರೀಯರತಿಸೊಬಗಿಯರ್ ಕಮ
ಲಾಯತನೇತ್ರೆಯರು ಕಪ್ಪುರದ ವೀಳೆಯ[6]ಮಂ[6]
ವೋಯರದಿಂ[7]ದೀಯಲ್ ತಾ
ನಾಯುವನಿಪ[7] ಮುನಿಗೆ ನಮಿಸಿ ಕಳುಹಿಸಿಕೊಂಡಂ ೭೬

---

1 ದಲಿ (ಚ) 2 ಡು ಆ (ಚ) 3 ಗಿನ (ಚ) 4 ಗಂ (ಚ)
5 ಸಿದರ್ ತೀಕ್ಷ್ಣದಿಂ (ಚ) 6 ಗಳಾ (ಚ) 7 ದಲೀಯುಲ್ಲಾಯುದವನಿಪ (ಚ)

ಚಂಪಕಮಾಲೆ

ಮುನಿಪತಿ ಮಾಡಿದುತ್ಸವಮುಮಂ ಧರಣೀಶ್ವರ ಕಾರ್ತವೀರ್ಯನುಂ
ನೆನೆದತಿವಿಸ್ಮಯಂಬಡುತಲೀ ರಿಸಿಗೆತ್ತಣದೀಯಘಾಟದಾ
ವನಿತೆಯರೀ ಸುವಸ್ತುನಿಚಯಂ ದೊರೆಕೊಂಡುದು ಚೋದ್ಯಮೆಂದು ದು
ರ್ಜನ ಕಡುಧೂರ್ತರಂ ಕಟುಪಿ ನೋಡಿಸಿದಂ ನಿಲಲಾಜದಾಕ್ಷಣಂ ೬೭

ಉತ್ಪಲಮಾಲೆ

ಬಂದವರಾ ಮುನೀಶ್ವರಗೆ ವಂದಿಸಿ ಕೈಮುಗಿದೆಂದರೀಗ ನೀಂ
ತಂದ ಸುವಸ್ತುವೆಲ್ಲಿಯದು ಜೀಯ ಎನಲ್ ಜಮದಗ್ನಿ ಪೇೞ್ದಂ
ನಂದಿನಿಯೆಂಬ ಧೇನು ಬರಲಾದುದೆನಲ್ಕದನೀಯಬೇಕು ನೀ
ನೆಂದೆನಲೀವ್ರ[1]ದಿ[1]ಲ್ಲವದು ಬಾರದೆನಲ್ ನೃಪನಲ್ಲಿಗೈದಿದರ್ ೬೮

ಕಂದ : ದುಷ್ಟರ್ ದುರ್ಜನರಿಂದಂ
ಸೃಷ್ಟೀಶ್ವರರೞಿದುಪೋಪರೆಂಬುದು ಪುಸಿಯೇ
ದೃಷ್ಟಾಂತ ಕಾರ್ತವೀರ್ಯಂ
ಭ್ರಷ್ಟಾದಂ ಲೋಕಮಱಿಯೆ ಪಿಸುಣರ ದೆಸೆಯಿಂ ೬೯

ಉತ್ಪಲಮಾಲೆ

ಆ [2]ರಿಸಿ[2]ಯಾಶ್ರಮಾಂತದೊಳಗೇನುವ ಕಾಣೆವು ಜೀಯ ತನ್ನಯಾ
ನಾರಿಯದೊರ್ವಳೊಂದು ಪಶುವಿರ್ಪುದುಮಾ ಪಶುವೇನ ಬೇಡಿದಾ
ಸಾರ ಸುವಸ್ತುವಂ ಕೊಡುವುದಾ ಪಶುವಂ ತರವೇಟ್ಕುಮೆಂದುಮಾ
ಧಾ[3]ರಿ[3]ಣಿಯಾಣ್ಮನಾ ಪಿಸುಣರುಂ ನುಡಿಯಲ್ ಕಿವಿಗೊಟ್ಟು ಕೇಳಿದಂ ೭೦

ವಚನ : ಅಂತು ಪಿಸುಣರ ಮಾತಂ ವಸುಧಾಧಿಪಂ ಕೇಳ್ದು ಅನುಮಾನಂಗೊಳ್ಳದೆ ಮನಂ
ಗೊಂಡು

ಕಂದ : ಕೇಳಿ ಮನದೊಳಗೆ [4]ಹರಿಸಂ[4]
ದಾಳಿದನಾ ಕಾರ್ತವೀರ್ಯನಾ ಪಶುವಂ ಕೊಡ
ಹೇೞಿದನೆಂದಾ ಮುನಿಕುಲ
ಭಾಳಾಕ್ಷಂಗಱುಪಿ ಧೇನುವಂ ತಹುದೆಂದಂ ೭೧

ಎನಲಾ ದೂತರ್ ಬಂದಾ
ಮುನಿಪನ ಚರಣಾರವಿಂದಕೆಱಗಿದರೆಮ್ಮಯ
ಜನನಾಥ ನಿಮ್ಮೊಳಿಹ ನಂ
ದಿನಿಯಂ ಬೇಡಿದನು ಸಲುಗೆಯಂ ಸಲಿಸೆಂದರ್ ೭೨

---

[1] ದ (ಚ) [2] ರುಷಿ (ಚ) [3] ರು (ಚ) [4] ಸರುಷಂ (ಚ)

ಎಂದಡೆ ಮುನೀಂದ್ರನೆಂದಂ
ನಂದಿನಿ ಸುರಧೇನುವಿದನು ಕೊಡ[1]ಲಾಗ[1]ದು ಪೋ
ಗೆಂದೆನಲವರೀ ಪಶು ತಾಂ
ಬಂದಪುವೇಂ ಚೋದ್ಯಮೆಂದರಾ ಪಿಸುಣರ್ಕಳ್ ೮೩

ವಚನ : ಇಂತೆನ್ನಲಾ ಮುನಿಪತಿಯಿಂತೆಂದಂ

ಕಂದ : ಬಾರದು ಬಂದೊಡೆಯುಂ ಕೈ
ಸೇರದು ತಳತಂತ್ರಮಾರ್ಬಲವನೆಲ್ಲವನತಿ
ಗೋರಿಗೊಳಿಸುವುದು ಬೇಡೆನ
ಲಾ [2]ರಿಸಿಯಾ ಮಾತ[2] ಮೀಱಿ ಪಿಡಿದರ್ ಪಶುವಂ ೮೪

ಚಂಪಕಮಾಲೆ

ಪಿಡಿಯಲದಾಗ ಧೇನುವತಿ ಸೀತುರುಗೊಂಡು ಚತುರ್ಬಲಂಗಳಂ
ಕೆಡಪಿ ಮುನೀಂದ್ರನಲ್ಲಿಗಿರವೈತರಲಾಕ್ಷಣ ಪೋಗಿ ದುರ್ಜನರ್
ಪೊಡವಿಪ ಕಾರ್ತವೀರ್ಯಗೆ ಪೇೞಲಿಕಾ ನೃಪ ಕೋಪದಿಂದೆ ನೀಂ
ಪೊಡೆತಹುದೆಂದು ನೇಮಿಸಲು ಬಂದುದಗಣ್ಯದ ಸೇನೆ ಸುತ್ತಲುಂ ೮೫

ವಚನ : ಅಂತು ಸಕಲ ಚತುರ್ಬಲಂ ಬಂದು ನಂದಿನಿಯಂ ಸುತ್ತ ಮುತ್ತಿಕೊಂಡು ಓರೋರ್ವರೊಂದೊಂದು ಬೀರ್ವಗ್ಗಮಂ ಬೀಸಿ ಪಿಡಿತರಲಾ ಪಶು ಸಿಡಿಮಿಡಿಗೊಂಡು ಹಗ್ಗಗಳಂ ಪಱಿದಿಕ್ಕಿ ಅಗ್ಗಡವಾಯ್ತು ಪಡೆಯೆಲ್ಲಮಂ ಕೆಡೆಮೆಟ್ಟಿಕೊಂಡು ಸುರಧೇನ್ವ ತಿರುಗಿ ಬಂದು [3]ಋಷ್ಯಾ[3]ಶ್ರಮಮೊಳಿರಲು ಮತ್ತಂ ಪಿಸುಣರ್ ಪೋಗಿ ವಸುಧಾಧಿಪಂಗೆ ಪೇೞ[4]ಲಾ[4] ಮಾತಂ ಭೂತಳಾಧಿಪಂ ಕೇಳಿ ಕೋಪಮಂ ತಾಳಿ ಮಾಡಿದ ಲೇಸಂ ಮಱೆದು ಮರಣಮಂತ್ರಕ್ಕನುಗ್ರಹಂಗೊಂಬಂತೆ ಮತ್ತಂ ದೂತರಂ ಕರೆದು ಏತೆಱದಿಂದ ಮಾಡೊಡಂ ಪಶುವಂ ಪಿಡಿದು ತನ್ನಿಂ ಪೋಗಿ[5]ಮೆನೆಯವರ್[5] ಕೆಲವು ಬಲ[6]ದೊಡನೆ[6] ಕಾಮಧೇನುವಂ ಪಿಡಿಯ[7]ಲದು[7] ಪಿಡಿಗೊಳಗಾಗದೆ ಹಿಂಗಾಲಿಂದೊದೆದು ಮುಂಗಾಲ್ಗಳಿಂ ಕೆಱೆದು ಶೃಂಗಂಗಳಿಂದಿಱಿದು ಪುಚ್ಛದಿಂ ಬೀಸಿ ಸೀಳ್ದು ಸಿಡಿಂಬುಳಾಡಿ ಬಂದ ಚಾತುರ್ಬಲಮಂ ಬೞಿಕ್ಕೆ[8]ದು[8] ಮುನಿಯುಂ ಸಾರ್ವ[9]ದು[9] ಆ ವೃತ್ತಾಂತ[10]ಮನರಸಂಗಱುಪಿ ದೂತರ್[10] ಮತ್ತಮಿಂತೆಂದರ್

---

[1] ಬಾರ (ಚ) [2] ಋಷಿವಚನವನು (ಚ) [3] ಋಷಿಯಾ (ಚ) [4] ಲು (ಕ) [5] ಯೆಂಬುದಮವರ್ (ಚ) [6] ಸಹಿತಂ ಬಂದು (ಚ) [7] ಲಾ ಪಶು (ಚ) [8] ಡು ತಿರುಗಿ ಪೋಗಿಯಾ (ಚ) [9] ದುಂ ತದ್ (ಚ) [10] ಮಂ ಕಾರ್ತವೀರ್ಯಾರ್ಜುನಂಗೆ ದೂತರ್ ಪೇಳ್ದು (ಚ)

ಕಂದ : ಪಾಪಿಗ[1]ಳತಿ[1] ಕೊಂಡೆಯ[2]ರುಗ
ಳಾ[2] ಪತಿಗೆಂದರ್ ಮುನೀಶ ಬರಲೀಯನುಮಾ
ತಾಪಸನ ತಲೆಯ ಪೊ[3]ಯ್ದಂ[3]
ದಾ ಪಶುವಿನ ಕೊರ[4]ಲ್ಗೆ ಕಟ್ಟಿ ಬಂದಪುದೆಂದರ್[4] ೮೬

ವಚನ: ಎಂದ ಮಾತಂ [5]ಕೇಳ್ದು ತನ್ನ ಸೇನೆಯಟ್ಟಿದುದರ್ಕೆ ಕಡುಮುಳಿದು[5]

ಕಂದ : ಪೋಗಿ ನೀಮಾವಪರಿಯಿಂ
ದಾ ಗೋವಂ ತರ್ಪುದೆಂದು ನೇಮಿಸಲವರತಿ
ಬೇಗ[6]ದೆ ಬಂದಾ[6] ದೂತರ್
ಬಾಗಿಸಿ ಮುನಿಶಿರವನಿಳುಪಲದ್ಭುತಮಾ[7]ದುದು[7] ೮೭

ವಚನ: ಅದೆಂತೆನೆ

ಕಂದ : ಧರಣಿ ನಡನಡುಗಲೇಟಿಂ
ಶರನಿಧಿ ತುಳ್ಳಾಡಲಮರ[8]ನಿಚಯಂ ನಡುಗಲ್[8]
ತರಣಿ ಶಶಿ ತಾರೆಯುದು[9]ರಲ್
ಇ[9]ರದದ್ಭುತವಾ[10]ದುದಾ[10]ಗಲೇನಂ ಪೇಟ್ವೆಂ ೮೮

ಋಷಿ ಶಿರಮಂ ಕೊಯಿತಂದಾ
ಪಶುವಿನ ಕೊರಲಲ್ಲಿ ಕಟ್ಟಿ ಪೊಡೆಯಲ್ಕದು ಕೋ
ಪಿಸಿಕೊಂಡು ಕಾರ್ತವೀರ್ಯಂ
ಗುಸಿರುಬ್ಬಸಮಾಡಿ ಕೊಂದುದಗಣಿತಬಲಮಂ ೮೯

ಆ ಪಶುವತಿನೊಂದು ಕರಂ
ಭೂಪನ ಚತುರಂಗಬಲವನೆಲ್ಲವ ಸವರಿಯೆ
ತಾಪಸನ ಶಿರವ ಬಿಸುಟಂ
ದಾ ಪಗೆಯೊಳ್ ಮುಟಿಗಿ[11]ಪೋಯ್ತು ತನ್ನಯ ನೆಲೆಯಂ[11] ೯೦

ವಚನ : ಅಂತಾ ಕಾಮಧೇನು ಪೋಗಲಿತ್ತಲಾ ಜಮದಗ್ನಿ ಮಹಾಋಷೀಶ್ವರಂ ದಿವ್ಯ ವಿಮಾನ ಸಂದಣಿಗಳಿಂ ಸಪ್ತರುಷಿಗಳೊಳಗೆ ನಿತ್ಯ[12]ಮಪ್ಪ ಪ[12]ದಮಂ ಸೇರ್ವುದುಮಿತ್ತಲ್

[1] ಳಾಂ (ಚ) [2] ರುಂಭೂ (ಗ) [3] ಯ್ತಂ (ಗ ಚ) [4] ಳ ಕಟ್ಟಿದರೆಬಹುದೆಂದಂ (ಗ) [5] ಕೇಳಿಸಿನಾ ಸನ್ನಾಹವಳಿದುದಕ್ಕುಮ್ಮಳಿಸಿ ಕಡುಮುನಿದು (ಚ) [6] ದಿಂ ಬಂದು (ಚ) [7] ಯ್ತು (ಕ) [8] ಜನ ಕಂಪಿಸಲಾ (ಚ) [9] ರಿದಕಿ (ಚ) [10] ಯಿತಾ (ಗ) [11] ತನ್ನಯ ನೆಲೆಯಂ ಸಾರ್ದುವು (ಗ ಚ) [12] ಪ (ಚ)

ಕಂದ : ಕೋಪ ಚಂಡಾಲಮದು ತಾಂ
ಕೋಪದಿನಿಹಪರಕೆ ಹಾನಿಯೆಂಬುದದೆಂತೆನೆ
ಕೋಪ[1]ದೊಳ್[1] ಕಾರ್ತವೀರ್ಯಂ
[2]ತಾಪಸನಂ ಕೊಲಿಸಿ ಕೋಪದಿಂ ತಾನೞಿದಂ[2] ೯೧

ಪಲ[3]ವಗೆಯ[3] ಪತ್ರಪುಷ್ಪವ
ನೊಲವಿಂದಂ ಕೊಂಡು ಪರಶುರಾಮಂ ತಾನಿ
ತ್ತಲು ಬಂದು ಕಂಡ ಜನನಿಯ
ಕಳವಳಮಂ ವೀರವಾರ್ಧಿವರ್ಧನಚಂದ್ರಂ ೯೨

[4]ಅಂ ಪೂವ ತಿಱಿಯ[4]ಪೋಗ
ಲ್ಕೀ ಪರಿಯಾಯಿತ್ತೆನುತ್ತೆ ದುಸ್ಥಿತಿ ತಾತನ
ಕೋಪಮಂ ಬಿಡಿಸಿ ಕೊಂದೆನು
ಭಾಪುರೆ ವಿಧಿಯೆಂದು ರಾಮ[5]ನುಂ[5] ಬಿಸುಸುಯ್ದಂ ೯೩

ರೇಣು[6]ಕೆಯೆನಿಪ್ಪ ಸತಿ ಸ್ವ[6]
ಪ್ರಾಣೇಶ್ವರನಳಿಯಲೇಕವಿಂಶತಿ ಸೂೞಿಂ
ಮಾಣದೆ ಬ[7]ಸಿ[7]ಱಿಂ ಬಡಿಕೊಳೆ
ಕಾಣುತ್ತುಂ ಪರಶುರಾಮ [8]ಪಿಡಿದಂ ಕೈಯಂ[8] ೯೪

ಕ್ಷತ್ರಿಯರ ವಂಶ[9]ವೆ[9]ಲ್ಲವ
ಧಾತ್ರಿಯೊಳಿ[10]ರ್ಪತ್ತು[10]ವೊಂದು [11]ಸೂೞ್ವರಮಾ[11]ನ
ಕ್ಷತ್ರವ ಮಾಡುವೆನೆನುತುಂ
ಪುತ್ರಂ ಭೃಗುರಾಮ ನಿಲಿಸಿದಂ ತಾಯೞಲಂ ೯೫

---

1 ದಿಂ (ಗ ಚ) 2 ಕೋಪಿಸಿ ತಾಪಸನ ಕೊಲಿಸಿತೇನುಮಾಗಳ್ (ಗ) ಕೋಪಿಸಿ ತಾಪಸನ ಕೊಲಿಸಿ ಕೆಟ್ಟೆನುಮಾಗಳ್ (ಚ) 3 ತೆರದ (ಗ) 4 ನಾ ಪುಷ್ಪವ ತರ (ಚ) 5 ನುಱಿತ (ಚ) 6 ಕಾದೇವಿ ತನ್ನಯ (ಚ) 7 ಸು (ಚ) 8 ಕರಮಂ ಪಿಡಿದಂ (ಚ) 9 ವನೆ (ಗ) 10 ಪತ್ತ (ಚ) 11 ಸೂೞಿನೊಳಾ (ಚ)

ಉತ್ಪಲಮಾಲೆ

ತಂದೆಯ ಕೊಂದ ಪಾತಕನದೆಲ್ಲಿದನೆಲ್ಲಿದನೆಂದು ಕೋಪದಿಂ
ಬಂದೆಲೆ ಕಾರ್ತವೀರ್ಯ ನಿಲು ಹೋಗದಿರೆನ್ನೊಡನ್ನೆದೆ ಯುದ್ಧದೊಳ್
ನಿಂದುಱ‍ಿ ಕಾ[1]ದಿ ನಿನ್ನ[1] ಭುಜಸಾಸಿರಮುಂ ತಱಿದೊಟ್ಟಿ ಭೂತಕಾ
ನಿಂದುಣಲಿಕ್ಕಿ ತೇಗಿಸುವೆ ಸ್ಥಿರಿಸೆನುತ್ತಿದಿರಾಗಿ ತಾಗಿದಂ* ೯೬

ವಚನ : [2]ಅಂತೈತಪ್ಪ[2] ರಾಮನಂ ಕಾರ್ತವೀರ್ಯಂ ಕಂಡು ಮುಂಕೊಂಡು

ಕಂದ : ಎ[3]ಲೆ[3] ಬಾಲವಿಪ್ರ ತಂದೆಯ
ತಲೆ[4]ಹೋ[4]ದುದೆ ಸಾಕು ನಿನ್ನ ಹರಣಂ ಪೋಗಲ್
ಕುಲನಾಶವೆನಲ್ ನಿನ್ನಯು
ಕುಲನಾಶಂಗೈವೆನೀಗ ಸ್ಥಿರಿಪುದೆಂದಂ ೯೭

ಚಂಪಕಮಾಲೆ

ಎಲೆಯೆಲೆ ವಿಪ್ರ ನಿನ್ನ ಜನಕಂ ಮೃತನಾದಟಿಲಿಂದೆ ಕಾದುವಾ
ಕಲಿತನಮುಂಟೆ ಬ್ರಾಹ್ಮಣನು ಬಾಲಕನೊಬ್ಬ[5]ನೆ[5] ಹೋಗಿ ಬಾಟು ನೀಂ
ತೊಲಗು ವೃಥಾಯ ಸಾಯದಿರು ಸಾಕು ಮರಳ್ವುದು ಲೇಸು ಹೋಗೆ[6]ನಲ್
ಎ[6]ಲೆ ಕಡುಪಾಪಿ ನಿನ್ನ ಕೊಲದಿರ್ದಡೆ ನಾಂ ಭೃಗುರಾಮನಲ್ಲವೈ ೯೮

ಮತ್ತೇಭವಿಕ್ರೀಡಿತ

ಎನಲಾ[7]ಗಳ್[7] ಚತುರಂಗಸೇನೆ ಕವಿಯಲ್ ಕಾಲಾಳನಶ್ವಂಗ[8]ಳಿಂ[8]
ಘನ ಸೊಕ್ಕಾನೆಗಳಂ ವರೂಥಚಯಮುಂ ಕೊಂದಟ್ಟಿದಂ [9]ಮೆಟ್ಟಿ ಮೇ[9]
ಡನಿತಂ ಸಂಹರಿಸುತ್ತೆ ಸೀಳಿ ಬಿಸುಡಲ್ಕಂದಾಕ್ಷಣಂ ಕಾರ್ತವೀ
ರ್ಯನು ಕೋಪಾತುರನಾಗಿ ಕಾದಲಿದಿರ್ವಂದಂ ಧೈರ್ಯದಿಂ ಶೌರ್ಯದಿಂ ೯೯

ಶಾರ್ದೂಲವಿಕ್ರೀಡಿತ

ಬಂದೈನೂಱುಕರಂಗಳಿಂ ಧನುಗಳಂ ಮೇಣ್ ಹಸ್ತವೈನೂಱಱಿಂ
ದಂದಂಬಂ ಪಿಡಿದಾರ್ದು ಸಿಂಹರವದಿಂದಂ ಕಾರ್ತವೀರ್ಯಾರ್ಜುನಂ
ಮುಂದ್ವೈಸಿರ್ದ ಶರಂಗಳಂ ಸುರಿಯಲೆ[10]ತ್ತಲ್[10] ದಿಕ್ತಟದೆ[10]ತ್ತಲ್[10] ನಭಂ
ಮುಂದೀ ಧಾರಿಣಿಯೆತ್ತಲೆಂಬೊಲು ಶರಂ ತೀವಿತ್ತು ರೋಮೋಂತಮುಂ ೧೦೦

---

[1] ದಿ ನಿನ್ನಯ (ಗ) ದು ನಿನ್ನ (ಚ) [2] ಅಂತು ಮೇಲಕ್ಕಿ ತಾಗಿದ ಕಡುವೀರ (ಗ ಚ)
[3] ಲೊ (ಗ) [4] ಪೋ (ಕ) [5] ನು (ಗ) [6] ನಕ್ಕೆ (ಚ) [7] ಗಂ (ಗ ಚ) [8] ಳಂ (ಗ ಚ)
[9] ಮೆಟ್ಟಾದ (ಗ) ಮೆಟ್ಟಿದಂ ಮೇ (ಚ) [10] ತ್ತಂ (ಗ ಚ).

*೯೬ ನೆಯ ಪದ್ಯದ ನಂತರ ಚ ಪ್ರತಿಯಲ್ಲಿ ಈ ಕೆಳಗಿನ ವಚನಭಾಗವಿದೆ.

ವಚನ : ಅಂತು ಕಡುದುಃಖದಿಂದಳಲುವ ತಾಯುಂ ನೋಡಿಯಿಪ್ಪತ್ತೊಂದು ಸೂಳಿನ ಕ್ಷತ್ರಿಯರಂ ಕೊಲ್ವೆನೆಂದು ಮಾತೆಯಂ ಸಂತೈಸಿ ಪ್ರಳಯಾಂಗಾರ ಸಿಡಿಲಂತೆ ಘುಡಘುಡಿಸಿ ಮಸಗಿ

ಕಂದ : ಸುರಿವ [1]ಸರಲಳ್ಗ[1]ನೀಕ್ಷಿಸಿ
ಯರರೇ [2]ಚಾ[2]ಗೆಂದು ಹೊಗೞಿ ಕಡುಗಲಿ ರಾಮಂ
ತಿರುಪುತ್ತೆ ಪರಶುವಿಂ ಕ
ತ್ತರಿಸಿದನಾ ಶರವ ರಥವ ಹಯಸಾರಥಿಯಂ ೧೦೧

ತಱಿದೊಟ್ಟೆ ನಿನ್ನ ಕಾಯವ
ನೊಱಿವೃತ್ತಿಹ ರುಧಿರಮೆಲ್ಲಮಂ ಶಾಕಿನಿಯ
ಗೆಱಿದು ದಣಿಸುವೆನು ನಿಲ್ಲೆನು
ತುಱುಬಿದನಾ ಪರಶುರಾಮನತಿವಿಕ್ರಮದಿಂ ೧೦೨

ಎಲೆ ವಿಪ್ರಾಧಮ ನೀನತಿ
ಗಳಹಿದೊಡೇನಹುವೆನುತ್ತೆ ಸಾಸಿರ[3]ತೋ[3]ಳಿಂ
ವಳವಿಯಲಿ ಮುಸುಕಲಾಕ್ಷಣ
ದಲಿ ಭಾರ್ಗವರಾಮ ಕಾರ್ತವೀರ್ಯನನೆಂದಂ ೧೦೩

ಪಿತೃಘಾತಕ ಘಾತಕ ನೀಂ
ಕ್ಷಿತಿಪರೊಳತ್ಯಧಮ ನಿನ್ನ ಕಾಯಮನೀಗಂ
ಕತಿಕಿಱಿದು ಭೂತಪ್ರೇತ
ಪ್ರತತಿಗೆ ಬಡಿಸುವೆನು ದಣಿಸುವೆಂ ಶಾಕಿನಿಯಂ ೧೦೪

ಎಂದು ಜಮದಗ್ನಿಯಾತ್ಮಜ
ನಿಂದಾ ರಿಪು ಕಾರ್ತವೀರಿಯನನೊತ್ತುತ್ತುಂ
ಮುಂದಲೆಯ ಪಿಡಿದು ಕೆಡಹಿದ
ನಂದಾ ಕಲಿ ಪರಶುರಾಮನತಿ [4]ಶೌರಿಯದಿಂ[4] ೧೦೫

ಕಡುಮುಸಗಿ ಕಾರ್ತವೀರ್ಯನ
ಸಿಡಿಮೋೞಡವಿಯನು ಕಡಿದು ಕಡಿವೊಟ್ಟುತ್ತುಂ
ಕಡಿದಿೞುಹಿ ಮಸ್ತಕವನಡೆ
ಗಡಿದಂ ನಡು ತೊಡೆ ಮಡಂಗಳಂ ಕಲಿರಾಮಂ ೧೦೬

ಅಪ್ಪಳಿಸಿ ಭೂಪವಂಶಮ
ನಿಪ್ಪತ್ತೊಂದನ್ವಯಗಳ ರುಧಿರಾಂಬುಗಳಿಂ
ತರ್ಪಣವನಿತ್ತು ತಂದೆಗೆ
ವಿಪ್ರರ್ಗವನಿಯನು ಕೊಟ್ಟ ರಾಮ ಸನಾಮಂ ೧೦೭

---

1 ಶರಂಗಳ (ಗ) 2 ಜಾ (ಕ) 3 ದೋ (ಕ) 4 ಬೊಬ್ಬಿರಿದಂ (ಗ)

ಉತ್ಪಲಮಾಲೆ

ಮಾತೆಯ ಶೋಕಮಂ ನಿಲಿಸಿ ಸೂರಿಯವಂಶದ ಕ್ಷತ್ರಿಯರ್ಕಳಂ
ಭೂತಳ ವಿಸ್ಮಯಂಬಡಲು ಮರ್ದಿಸಿ ಕೀರ್ತಿಯನಾಂತು ದೇವತಾ
ಪ್ರೀತಿಯ ಮಾಡಿ ಧಾರಿಣಿಯ ಭೂಸುರರೆಲ್ಲರಿಗಿತ್ತು ರಾಗದಿಂ
ತಾಂ ತಪಕೈದಿದಂ ಪರಶುರಾಮವತಾರದಲಾದಿನಾರಣಂ ೧೦೮

ವಚನ: [1]ಅಂತು[1] ಸಮಸ್ತ ಕ್ಷತ್ರಿಯ ವಂಶಮಂ [2]ಸವಜಿ[2] ತಾಯಿ ರೇಣು[3]ಕೆಗೆ[3] ಯೋಗಪೀಠಮನಿ[4]ತ್ತು[4]

ಕಂದ : ಶರಣರ್ಕಳ ಪೊರೆವ[5]ತೆ ನದಿ[5]
ಗಿರಿಗಳೊಳಂ ತೊಟಿಲುತಾದಿನಾರಾಯಣ[6]ನಂ
ದು[6]ರುವಂಶ ಪರಶುರಾಮೋ
ತ್ಕರದಿಂ ಸುಖದಿಂದ[7]ಲಿ[7]ರ್ದನಮಲಜ್ಞಾನಂ ೧೦೯

ಮತ್ತೇಭವಿಕ್ರೀಡಿತ

ಧರಣೀ ಸೌಖ್ಯಕರಂ ಗದಾಯುಧಧರಂ ಶ್ರೀಶಾಙ್ರ್ಗಚಕ್ರೋಧರಂ
ವರ ಪೀತಾಂಬರ ದಿವ್ಯ ಕೌಸ್ತುಭಧರಂ ಲಕ್ಷ್ಮೀ[8]ವ[8]ರಂ ಭೂಧರಂ
ಸುರಸಂದೋಹ ಪುರಂದರೋನ್ನತಪರಂ ಸೌಖ್ಯಾಕರಂ ನಿರ್ಮ[9]ಲಂ[9]
ಪರಮಾನಂದಕರಂ ಜಗತ್ರಕರಮಂ ರಕ್ಷಿಕ್ಕೆ ನಾರಾಯಣಂ ೧೧೦

ಗದ್ಯ : ಇದು ವೃಂದಾರಕವೃಂದ ಪರಿಮಣಿಖಚಿತ ಮಕುಟರಂಜಿತ ಶ್ರೀಮದಾದಿ
ನಾರಾಯಣ ಶ್ರೀಚರಣಸರಸೀರುಹ ಮಕರಂದಷಟ್ಚರಣ ಸಲ್ಲಲಿತ ಮಲ್ಲರಸಾಂಕ
ವಿರಚಿತಮಪ್ಪ ದಶಾವತಾರ[10]ಚರಿತ[10] ಪ್ರಬಂಧದೊಳ್ ಕ್ಷೀರಾಬ್ಧಿ ವರ್ಣನ
ಬ್ರಹ್ಮದೇವರ ಬಿನ್ನಹ ರೇಣುಕಾದೇವಿಯ ಗರ್ಭ ಏಕನಾಥೆಯ
ಪ್ರಸಾವಸ್ತೆ ಕಾರ್ತವೀರ್ಯಾರ್ಜುನನ ಬೇಂಟೆ ಜಮದ[11]ಗ್ನೀ
ದರ್ಶನಂ[11] ಕಾಮಧೇನುಗಮನಂ ಪರಶುರಾಮಯುದ್ಧ
ಕ್ಷತ್ರಿಯಕುಲ[12]ವಧೆ[12] ಮುಖ್ಯಮಾದ
ಪರಶುರಾಮಾವತಾರಂ

ಸಪ್ತಮಾಶ್ವಾಸಂ

---

1 ಅ (ಗ) 2 ನಿಷ್ಕೃತಂಗೈಯ್ದು ಭೂಭಾರಮನಿಳುಪಿ ತನ್ನ (ಗ) ನಿಕ್ಷೇತ್ರಗೆಯ್ದು ಭೂಭಾರವುನಿಳುಪಿ ತನ್ನ (ಚ) 3 ಕಾದೇವಿಗೆ (ಚ) 4 ತ್ತು ತಪಶ್ಚರಣೆಯಿಂದೊಪ್ಪಿರ್ದಂ (ಗ ಚ) 5 ತ್ರಂ (ಗ) 6 ತನ್ನ (ಚ) 7 ವಿ (ಚ) 8 ಧ (ಚ) 9 ರಂ (ಚ) 10 ಚಾಂತ್ರ (ಚ) 11 ಗ್ನಿಯ ದರ್ಶನ (ಗ) ಗ್ನಿ ರುಷಿಯ ದರ್ಶನಂ (ಚ) 12 ಚ್ಛೇದ (ಚ)

ಅಷ್ಟಮಾಶ್ವಾಸಂ

ಕಂದ : ಶ್ರೀ[1]ಮಾ[1]ಲಕ್ಷ್ಮೀವದನ ಸು
ಕೋಮಲ ಸರಸಿರುಹ ತರಣಿ ಶರಣಾಗತ ಚಿಂ
ತಾಮಣಿಯೆಮಗತಿ ಭಕ್ತಿರ
ಸಾನ್ವ್ವತವೊಲಿದೀವುದಾದಿನಾರಾಯಣನೇ ೧

ಭವವಾರ್ಧಿ ಬಂಧ ಧೈರ್ಯೋ
ದ್ಭವ ಖರದೂಷಣ ಬಲಾರಿ ಇಂದ್ರಾರಿಗತಂ
ಭುವನಸ್ತವನಾಗ್ರಹ ರಾ
ಮವತಾರಂ ಭಕ್ತಜ[2]ನರ[2] ದುಷ್ಟವಿದೂರಂ ೨

ಕಾಂತಿಕರಂ [3]ರಾಕ್ಷ[3]ಸಕುಲ
ಕಾಂತಾರ ಧನಂಜಯಂ ಜಯೋನ್ನತ ಧರಣೀ
ಕಾಂತಾಮನೋಜ್ಞ ಲಕ್ಷ್ಮೀ
ಕಾಂತಂ ವೈಕುಂಠದಲ್ಲಿ ಸುಖಿಸುತ್ತಿರ್ದಂ ೩

ವೃಂದಾರಕ ವಂದ್ಯನ ಪದ
ವಂದನೆಗೆಂದೆಂದಿನಂದದಿಂದಂ ಸನಕ ಸ
ನಂದನರೊಯ್ಯನೆ ಬಂದರ್
ನಿಂದರ್ ಗುಣವೃಂದನಂಘ್ರಿಯೊಳ್ ಮಣಿದಿರ್ದರ್ ೪

ವಚನ : ಅಂತು ಬಂದ ಸನಕಸನಂದನರ್ಗೆ ಕುಳ್ಳಿರಲ್ ನಿಯಮಂಗೆಯ್ಯೆ ಕುಳ್ಳಿರ್ಪುದುಂ ಜಯವಿಜಯರೆಮ್ಮನಿನ್ನೆಂದು ಬಂದು ಕೂಡುವರೆಂದು ದೇವಂ ನಿರೂಪಿಸೆ ಸನಕ ಸನಂದನರ್ ಕೈಮುಗಿದಿಂತೆಂದರ್

ಕಂದ : ಪಗೆಯಾಗಿ ಮೂಱುಜನ್ಮ
ಕ್ಕೊಗೆವುದಕಿನ್ನೊಂದು ಜನ್ಮ ಮುಂದಕೆ ಬಂದೀ
ಗೊಗೆದಿರ್ಪರ್ ಧಾರಿಣಿಯೊಳ್
ಜಗದಾತ್ಮಕ ನೀವು ತಿಳಿಯದುದು ಪೇೞತುಂಟೇ ೫

---

[1] ಮಹ (ಜ) [2] ನ (ಜ) [3] ರಕ್ಕ (ಗ)

ಉತ್ಪಲಮಾಲೆ

ಸೃಷ್ಟಿಗಧೀಶರೆಂಬ ನವನಾಯಕರಲ್ಲಿ ಪುಲಸ್ತ್ಯ ವಂಶದೊಳ್
ಪುಟ್ಟಿ ಸಮುದ್ರಮಧ್ಯದೊಳೆ ಸೂರ್ಯೋದಯಕ್ಕೆ[1]ಣೆ[1]ಯಾದ ಲಂಕೆಯಿಂ
ದಟ್ಟಿ ಕುಬೇರನಂ ಮಿಸುಪ ಪಟ್ಟಣದೊಳ್ ನೆಲಸಿಂದು ಧಾತ್ರಿಗಿಂ
ದಿಟ್ಟಿಡೆಮಾಡುತಿರ್ದಪರು ಚಿತ್ತಯಿಸಂಬುಜಪತ್ರಲೋಚನಾ ೬

ಕಂದ : ಮುದದಿಂ ತ್ರಿಕೂಟದೊಳ್ ದಶ
ವದನಂ ಸಲೆ ಕುಂಭಕರ್ಣ[2]ರೆಂಬುವ[2] ಪೆಸರಿಂ
ಮುದಮುಖರಭವನನಜನಂ
ವಿದಿ[3]ತ ತಪಂ[3]ಗೆಯ್ವೆವೆಂದು ಉದ್ಯುತರಾದರ್ ೭

ವಚನ : ಅಂತು ತಪೋದ್ಯೋಗಿಗಳಾಗಿ ದಶವದನಂ ಹರಾದ್ರಿಯಂ ಕಿತ್ತೆತ್ತಿ ಶಿವಂ ಮುಗುಳ್ನಗುತ್ತೆ ಕರವಿರ್ಪತ್ತುಂ ಸಿ[4]ಲ್ಕೆ[4] ಮಹಾಧ್ವನಿಯಿಂ ಮೂಲೋಕಂ ತುಂಬುವಂತೆ ರವಂಗೆಯ್ಯೆ ರಾವಣನೆಂಬ ಪೆಸರಾಗಿ ಕಪಾಲಂಗಳಂ ಕೊಯ್ದು ನರಂಗಳಂ ಕಿತ್ತು ಹೂಡಿ ಮುಂಗೈಯಂ ಕತ್ತರಿಸಿ ದೇಹಚರ್ಮಮಂ ಹೊದಯಿಸಿ ಸಹಸ್ರವೇದಂಗಳಂ ಸಹಸ್ರ ರಾಗಂಗಳಿಂ ನುಡಿಯಿಸೆ ಶಿವಂ ಮೆಚ್ಚಿ ಅವಂ ಬೇಡಿದಂತೆ ಸತ್ಯೆಯೆಂಬ ಮಾಯಾಸ್ತ್ರೀಯಮಂ ಚಂದ್ರಾಯುಧಮಂ ಮೂಱುಕೋಟಿ ವರ್ಷದಾಯುಷ್ಯಮಂ ಪಡೆದು ದಶಕಂಠಂ ಪೋಗುತ್ತಿರ್ದಪನಾತನ ತಮ್ಮ ಕುಂಭಕರ್ಣಂ ನಿತ್ಯಪದಮಂ ಪಡೆವೆನೆಂದು ತಪಂಗೆಯ್ಯುತ್ತಿರ್ದಪನಾತಂಗೆ ಬ್ರಹ್ಮಂ ಮೆಚ್ಚುವ ಸಮಯ[5]ಮೆಂದು ಸನಕ ಸನಂದನರ್ ಬಿನ್ನೈಸೆ ಮು[5]ಕುಂದಂ ತಿಳಿದು ನೋಡಿ

ಕಂದ : ಇವರಿರ್ವರೀ ವರಂಗಳ
ತವೆ [6]ಪೊಂದಲ್[6] ಬಳಿಕ [7]ಬೇಗವೆಮ್ಮಂ[7] ಸೇ[8]ರರ್[8]
ಭುವನಕ್ಕೆ ಬಾಧೆಯೆನುತಂ
ಪವಣಿಸಿದಂ ಕೆಡಿಪ ಬುದ್ಧಿಯಂ ಲಕ್ಷ್ಮೀಶಂ ೮

---

[1] ಡೆ (ಗ) [2] ನೆಂಬಾ (ಗ ಚ) [3] ತಂ ತಪ (ಚ) [4] ಕ್ಕೆ (ಚ) [5] ದಲ್ಲಿಮು (ಗ)
[6] ಕೊಂಡು (ಗ) [7] ಲೆಮ್ಮಂಬೇಗ (ಗ) [8] ರಲ್ (ಚ)

ವಚನ: ಎಂದು ಶತವೃದ್ಧ ಬ್ರಾಹ್ಮಣನಾಗಿ ರಾವಣನಂ ಕಂಡು [1]ಹರಸಿ[1] ಇದೆ[2]ತ್ತಣಿಂ[2] ಬಿಜಯಂಗೈದಿರೆಂದು ಕೇಳೆ ಶಿವನಿಂದೀ ವಸ್ತುವಂ ಪಡೆದೆವೆಂದು ,ಪೇೞಲಿವು ಕಪಟ ದ್ರವ್ಯಂಗಳ್ ನೀವೆಂದ ದ್ರವ್ಯಂಗಳಂ ಬೇಱಱಿಯರ್ಪುವೆಂದು ಕುಮಂತ್ರಮಂ [3]ಪೇೞೆ ಮಗುೞ್ದು ಶಿವ[4]ನೆಡೆಗೈದಿ[4] ಎಲೆ ಮರು[5]ಳೆಱೆಯ[5] ದುಷ್ಟದಾನವಂಗೀ ವರಂಗಳಂ ಕೊಟ್ಟು ಭುವನಕ್ಷೋಭೆಯಂ ಮಾಡಿದೆ ಅವಂ ಮರಳಿ ಬಂದಪಂ ಅವಂಗೆ ಅರೆಕೋಟಿಯಾಯು ಷ್ಯಮುಂ ಕೊಟ್ಟು ಮೂಱುಕೋಟಿಯಾಯುಷ್ಯಮುಂ ತೆಗೆವುದೆಂದು ಪೋಗೆ ರಾವಣಂ ಮರಳಿ ಬಂದು ಘೂರ್ಮಿಸುವುದುಂ ಅಱಿದುದಿಲ್ಲವೆಂದು ಬಹುಕಾಲ[6]ದೊಳ್[6] ಪಾರ್ವ[7]ತಿಯ[7] ವೈರಿಯಂ ತಿಗುಱಿದ ಪೃತ್ತಿಕೆಯಿಂ ಸ್ತ್ರೀರೂಪಂ ಮಾಡಿ ಪ್ರಾಣ [8]ಮನಿತ್ತಿರೆ[8]ಸಲವಳ್ ಶಿವಂ ಕಾಮಿಸಿ ನೆಱೆಯಲವಳ್ ಗರ್ಭಮಪ್ಪುದುಂ ಅವಳಂ ದೇವಿ ಕಂಡು ಮಂಡೋದರಿಯಾಗೆಂದು ಶಪಿಸೆ ಶಾಪಹತಮಾಗಿರ್ದ ಮಂಡೋದರಿಯಂ ಕೊಟ್ಟು ಮತ್ತೊಂದಾಯುಧಮುಂ ಕೊಟ್ಟು ಅರೆಕೋಟಿಯಾಯುಷ್ಯಮುಂ ಕೊಟ್ಟು ರಾವಣನಂ ಕೞುಪಿದನಿತ್ತಲು ಅಂಬುಧಿಶಯನಂ ಶಾರದೆಯಂ ಕರೆದು ಕುಂಭಕರ್ಣಂ ಬ್ರಹ್ಮನಲ್ಲಿ ನಿತ್ಯತ್ವಮುಂ ಪಡೆವಲ್ಲಿ [9]ನಿದ್ರತ್ವಮೆಂದು[9] ನುಡಿಸೆಂದು ನೇಮಿಸಿ ಲಕ್ಷ್ಮೀಕಾಂತಂ ವೈಕುಂಠಮುಂ ಸಾರ್ದು ಸುಖದಿಂದಿರ್ಪುದುಂ

ಉತ್ಪಲಮಾಲೆ

ಸಾರ [10]ಸು[10]ಭೋಜನಾಥ್ವ ವಿಗತಂ ತನುದೀಧಿತಿ [11]ಮೇಚ[11]ಕಾಂಬರಂ
ವಾರಲಸತ್ಯಮುಂಜನಮಸಂಚ[12]ರ[12] ಕಾಲದಿನಾ ಸುಧಾಬ್ಧಿಯುಂ
ನೀರದ ಮಾರ್ಗದಿಂದಿೞಿದು ಮೆಲ್ಲನೆ ಸೇರಿ ಮುಕುಂದನಂಘ್ರಿಯಂ
ಸಾರಿದನೊಯ್ಯನಂಜುತವೆ ನಾರದನಾ ಶರದಭ್ರ ಶುಭ್ರದಿಂ ೯

ವಚನ: ಅಂತು ಪೊಕ್ಕು ಹರಿ[13]ಗೇ[13]ಕಾಂತ ಸಮಯಮೆಂದು ತಿಳಿದು ರಾವಣನ ಭೀತಿ ಯಿಂದ ದೂದಾಡಿದ ಮಾತು ಪ್ರಚುರಮಾಗದಂತೆ ಹರಿಯಿಂದಭಯಮಂ ಪಡೆದು ಪೇೞುತಿರ್ದನದೆಂತೆಂದೊಡೆ ತ್ರಿಕೂಟಾದ್ರಿ ಲಂಕಾಪಟ್ಟಣ[14]ದೊಳ್[14] ರಾವಣನೆಂಬ ರಾಕ್ಷಸಂ ಕುಂಭಕರ್ಣ ಸಮೇತಂ ಜನಿಸಿ ಶಿವನಿಂ ವರಮಂ ಪಡೆದು ಲೋಕೈಕವೀರನಾ ಗಿ[15]ರ್ಪನದೆಂತೆಂದೊಡೆ[15]

---

1 ಪರಕೆಯನಿತ್ತು (ಗ ಚ) 2 ತ್ತಂ (ಗ) 3 ಬಿತ್ತಿ (ಗ ಚ) 4 ನಲ್ಲಿಗೆ ಪೋಗಿ (ಗ ಚ) 5 ಳೊಡೆಯ (ಗ ಚ) 6 ದಲ್ಲಿ (ಗ ಚ) 7 ತಿದೇವಿಯರ (ಚ) 8 ಮಂಕೊಟ್ಟುಯಿರಿ (ಚ) 9 ನಿದ್ರೆಯೆಂದು (ಚ) 10 ಸುಖ (ಗ) 11 ಮೆಚ್ಚೆ (ಗ) 12 ರಣ (ಗ) 13 ಯೇ (ಚ) 14 ದಲ್ಲಿ (ಚ) 15 ರ್ಪನದು ಹೇಗೆಂದೊಡೆ (ಚ)

ಚಂಪಕಮಾಲೆ

ಹರಿ ಮನೆಯೊಳು ವಾಯುಸಖ ಬಾಣಸಿಗಂ ತಳವಾಜನಂತಕಂ
ನಿ[1]ರರು[1]ತಿ ಬಾಗಿಲಾತ ವರುಣಂ ಜಲಸೂತ್ರಿಕ ವಾಯುದೂತ ಕಿ
ನ್ನರಪತಿ ಜಾಲಿಕಂ [2]ತಿಸುಳಿ[2]ವಾರದ ಜಂಗಮ ಮೇಲುಲೋಕ ವು
ಪ್ಪರಿಗೆ ರಸಾತಳಾದಿ ನೆಲಮಾಳಿಗೆ ರಕ್ಕಸ ರಾವಣೇಂದ್ರ[3]ಗಂ[3] ೧೦

ಕಂದ : ಹದವಿಸಿಲಿಲ್ಲದೆ ಕಾಯಲ್
ಬೆದಱುವನಂಬು[4]ರುಹ[4]ಮಿತ್ರನತಿಶೀತಲಮ
ಪ್ಪುದ ಮಾಡಚಂದ್ರ ಲೋಕಂ
ಪದಿನಾಲ್ಕರೊಳಾಣೆ ಸಲ್ವುದಾ ರಾವಣನಾ ೧೧

ವಚನ : ವೀರಮೆಂಬುದು ವೀರತರುವಿನೊಳ್ ಪ್ರತಿವಾಕ್ಯಮೆಂಬುದು ನಾಮಶಾಸನದೊಳ್ ಬಲಮೆಂಬುದು ಜಲತ್ರಯಂಗಳೊಳ್ ಅರಸೆಂಬುದು ಚದುರಂಗದೊಳ್ ಮೊಳೆಯೆಂಬುದು ತಾಳೆವನದೊಳ್ ಎ[5]ಲೆ[5]ಯೆಂಬುದು ಪರ್ಣವಾಟಿಯೊಳಲ್ಲದೆ ಮತ್ತೆಲ್ಲಿಯುಂ ಸೈರಿಸ ನಂತುಮಲ್ಲದೆಯುಂ

ಕಂದ : ಅವನಂ ಜಯಿಸದೊಡಂ ತ್ರೈ
ಭುವನಕ್ಕಂ ಕೇಡು ದೇವರೆನಿಸುವರಿಲ್ಲಂ
ಅವ[6]ನಂ[6]ಪ್ರಿಯನೋಲೈಸಿಯೆ
ದಿವಿಜಾವಳಿ ಸಹಿತ[7]ಮಾ[7]ವು ಬಾಳ್ವು[8]ದು [8]ಕಜ್ಜಂ ೧೨

ವಚನ : ಎಂದ ನಾರದನ ಬಿನ್ನಪಮಂ ದೇವಂ [9]ಮನಂಗೊಂಡು ಇಂತೆಂದಂ[9]

ಕಂದ : ಅಱಿದೆನವರ್ ಪೂರ್ವದೊಳಂ
ಹಿರಣ್ಯಕಂ ತದ್ಧಿರಣ್ಯಕಾಕ್ಷರೆನಿಪ್ಪಾ
ವರ ಜಯವಿಜಯರ್ ಪುಟ್ಟಿದ
ರೆರಡನೆಯವತಾರದಲ್ಲಿಯದನಾಂ ಬಲ್ಲೆಂ ೧೩

ನರಸಿಂಹವತಾರ[10]ದೆ ನನ[10]
ಗೆರಡುಕರಂ ನಿನಗೆ [11]ಪ[11]ತ್ತು ಕರವೈಮೊಗವೆಂ
ದರೆ ರಕ್ಕಸ ನೀಂ ದಶಶಿರ
ವೆರಸಿಯೆ ಜನಿಸಿದೊಡೆ ಎರಡುಕರದಿಂ ಕೊಲ್ವೆಂ ೧೪

---

[1] ಋ (ಜ) [2] ತ್ರಿಶೂಲಿ (ಗ) [3] ಗೇ (ಕ) [4] ರು (ಕ) [5] ತಿ (ಗ ಚ) [6] ರಂ (ಗ) [7] ಲಾ (ಜ) [8] ದಂ (ಜ) [9] ಮನದೆಗೊಂಡಿಂತೆಂದಂ (ಗ) [10] ದೊಳೆನ (ಗ ಜ) [11] ಪ್ಪ (ಗ)

ವಚನ : ಇಂತೆಂದು ಮಾತುಂಟುಮಲ್ಲದೆ ಇಕ್ಷ್ವಾಕುವಂಶದಲ್ಲಿ ಅನರಣ್ಯನೆಂಬ ರಾಯಂ ಪುಟ್ಟಿ ಯಾಗಂಗೆಯ್ಯುತ್ತಿರೆ ·ರಾವಣಂ ಪೋಗಿಯೆನಗೆ ರಾವಣಾಧ್ವರಮಂ ಮಾಡ್ಪ ಪರಿಯೆಂತೆಂದು ಬಾಲಪ್ರಾಯದ ಭೂಪನ ಯಾಗಮಂಟಪಮಂ ದೞಿದುೞಿಂ ಪಾಯೆ ನಿಷ್ಕಾರಣಂ ಬಂದ ರಾವಣಂಗೆ ಬೆಚ್ಚಿ ಇಂದ್ರಂ ನವಿಲಾಗಿ ಪಾಯ್ದುದಕ್ಕೆ ತನ್ನ ಕ[1]ಣ್ಣನದಕ್ಕೆ[1] ಕೊಟ್ಟು ಅಗ್ನಿ ಪಾರಿವನಾಗಿ ಪಾಱಿದುದಕ್ಕೆ ಶಿಲಾಭೋಜನದಗ್ನಿಪಟುತ್ವ[2]ವನದಕ್ಕೆ[2] ಕೊಟ್ಟು ಯಮಂ ಕಾಗೆಯಾಗಿ ಜಾಱಿ ತನ್ನ ಬಲಿಯನದಕ್ಕೆ ಕೊಟ್ಟು ವಾಯು ಎರಳೆಯಾಗಿ [3]ಬಂದುದಕ್ಕೆ[3] ತನ್ನ ಜವಮ[4]ನದಕ್ಕೆ[4] ಕೊಟ್ಟು ತಲೆಯುೞಿಯಿತೆಂದು ಯಾಗಶಾಲೆಯುಂ ಬಿಟ್ಟು ಪೋಱಮಟ್ಟೋಡಿದರ್[5]ತ್ತಲ್[5] ರಾವಣಂ ಅನರಣ್ಯನ ಶಿರಮಂ ಪರಿಯಿಸುವಲ್ಲಿ ನಾಂ ಸುರತುಷ್ಟಿಯಾಗಂಗೈದೊಡೆ ಮಿಥ್ಯೆಯಿನ್ನಾಂ ಕೀರ್ತಿಗೆ ಪಿರಿಯನೆಂಬ ಗರ್ವದೊಳ್ ತಪ್ಪನೆಣಿಸಿದೆ ನಮ್ಮ ವಂಶದೊಳ್ ಪುಟ್ಟಿದ ನಸುಗೂಸಿನ ಕೈ[6]ಯೊಳ್[6] ನಿನ್ನ ಶರೀರವೞಿಯಲೆಂದು ಶಪಿಸಿ ಅನರಣ್ಯನಮರಾವತಿಯಂ ಸಾರ್ದನದಱಿಂದಾತನ ವಂಶದಲ್ಲಿ ಪುಟ್ಟಿರ್ದ ದಶರಥರಾಯನಲ್ಲಿ ಜನಿಯಿಸಿ ರಾವಣ ಕುಂಭಕರ್ಣಾದಿಗಳಂ [7]ಕೊಲ್ವೆನೆಂದು[7] ನಾರದನಂ ಕೞುಪಿ ಶ್ರೀರಮಣನವತರಿಪುದ್ಯೋಗ[8]ದೊಳಿ[8]ರ್ದನಿತ್ತಲ್

ಕಂದ : ಕ್ಷೋಣಿಗೆ ಮಧ್ಯಸ್ಥದ ಗೀ
ರ್ವಾಣಾದ್ರಿಗೆ ತೆಂಕನಗರ [9]ನಿಕಟ[9] ಗ್ರಾಮಂ
ದ್ರೋಣಾಮು[10]ಖತ್ವದಿಂದ[10]
ಕ್ಷೋಣತ್ವದ ಲಾಳದೇಶಮೊಪ್ಪುತ್ತಿರ್ಕುಂ ೧೫

ವಚನ : ಮತ್ತಮಾ ದೇಶದಲ್ಲಿ

ಕಂದ : ಬಾೞತಿಯಿನರೆಯಾಯುಷ್ಯಂ
ಶಾಲೀವನದೆಡೆಗಳಲ್ಲಿ ಹೊಡೆ ಕಂಟಕಮಾ
ತಾಳೀವನದೆಡೆಯೊಳ್ ಪುಸಿ
ಯೊಳಾಪಂ ಗರುಡಿಯಲ್ಲಿ ಪೆಱತಱತೊಳಿಲ್ಲಂ ೧೬

ತೋಱತ ಕಾಲ್ವೆ ಗದ್ದೆ ತೋಂಟಂ
ಯೞವಟ್ಟಗೆ ಕೆಯ್ವೊಲಂ ಲಸದ್ಗ್ರಾಮ ಸ್ಥಿತಿನಂ
ಕೆಱತಿಯಾರವೆಯೂರಲ್ಲದೆ
ಬೞಿಯ ನೆಲಂಗಳನು ನೋಡೆ ಸಾಲ್ವೆರಲಿಲ್ಲಂ ೧೭

---

[1] ಣ್ಣಂ (ಗ) [2] ಮಂ (ಗ) [3] ಪಾಱಿಂಪುದಕ್ಕೆ (ಗ) [4] ಮಂ (ಗ) [5] ತ್ತಂ (ಗ) [6] ಯುಳಿ (ಚ) [7] ಕೊಂದು (ಗ) [8] ದಲ್ಲಿ (ಗ) [9] ನಿಗಮ (ಗ ಚ) [10] ಖಂಗಳಿಂದ (ಗ ಚ)

ಉತ್ಪಲಮಾಲೆ

ಚಂದಿರಗಲ್ಲ ಸೀರ್ಗುಡುವನಂಗಳೊಳೊಪ್ಪುವ ನೀರ್ಗೆ ಸಾಸವಂ
ಗುಂದದು ಶೀಲ ಮೇಲೆ ಕೊಳಲೊಪ್ಪುವ ಕತ್ತುರಿ ಕಪ್ಪುರಂಗಳೊಳ್
ಚಂದಮನೊಂದುಗೂಡಿ ಸಸಿಗಲ್ಕರಗಂಗಳನಾಂತು ತುಂಬಿ ಮೇಣ್
ತಂದೆಱಿವಾ ಮೃಗೇಕ್ಷಣೆಯನಾ ಪಥಜಶ್ರಮವಾಱುತಿರ್ಪಿನಂ ೧೮

ವಚನ : ಮತ್ತಮಾ ಪ್ರದೇಶದೊಳ್ ವೇಶ್ಯಾವಾಟದಂತೆ ಕಾಮಧಾರೆ ನದ್ಯಾಕುಲದಂತೆ ಮಳಲಕಂತೆ ರಾಮಣದಂತೆ ಕೋದಂಡರಾಮ ಪುಷ್ಪವಾಟಿಯಂತೆ ಕೆಂಜಾಜಿ ಮಧುಕರ ಸಮಯದಂತೆ ಬಿಳಿಯಮಲ್ಲಿಗೆ ಕದಳೀಷಂಡದಂತೆ ಕೋಸೆವಾಱಿ ಸುರಲೋಕದಂತೆ ಚಿಂತಾಮಣಿ ಗೇಯಸ್ಥಾನದಂತೆ ಭೈರವಿ ಯಾದವಶ್ರೇಷ್ಠನಂತೆ ರಾಯಮುರಾರಿ ಶರತ್ಕಾಲದಂತೆ ಪೂರ್ಣಚಂದ್ರೋದಯ ಕೂರ್ಪ ಕಾಂತೆಯಂತೆ ಮನಃಪ್ರಿಯ ಏಕಾಂತದಂತೆ ಪುಷ್ಪಮಂಜರಿ ಸಿಂಹದಂತೆ ಕೇಸರಿಯೊಪ್ಪುತಿರ್ದುದಂತುಮಲ್ಲದೆಯುಂ

ಕಂದ : ಪರಿಪ ಪನಿನೀರ ಕಾಲ್ ಕ
ಪ್ಪುರವಾಱಿಯ ತೋಂಟ ಕುಂಕುಮದ ಪೆರ್ಮುಡಿಗಳ್
ಮುರಿದೆಳನೀರ್ಗಳ ತುಂತುರ್
ಪರಿದುರ್ವುವ ದಾಡಿಮಂಗಳಿಂ ವನಮೆಸೆಗುಂ ೧೯

ಆ ದೇಶಾಂಗನೆಗಖಿಲ ಸು
ಖಾದೇಶಮೆನಿಪ್ಪುದಮಳದೀಧಿತಿಯಿಂದಂ
ತೀದರಿಭಯಮುಂ ಜಯಕರ
ಮಾದುದು ಸುಜನರ್ಗಯೋಧ್ಯೆಯೆನಿಸುವ ನಗರಂ ೨೦

ಆ ಪುರನಾಥಂ ಸಕಲೋ
ರ್ವೀಪತಿ ದಶರಥನು ಸೂರ್ಯವಂಶೋದ್ಭವನಂ
ತಾ ಪುಣ್ಯಶ್ಲೋಕಂ ಕುಲ
ದೀಪಂ [1]ಸುಮಚಾಪರೂಪನಮಿತ[1]ಪ್ರತಾಪಂ ೨೧

ಪೃಥಿವಿಯ ಯಾಚಕರ ಮನೋ
ರಥಕಮರೋರ್ವೀಜ ವಾಚಮಾನಂ ರಥಿ ಸಾ
ರಥ ಭೂನುತ ವಿಶ್ರುತ ದಶ
ರಥಚಕ್ರೇಶ್ವರನೆನಿಪ್ಪ ಭೂಭುಜರತ್ನಂ ೨೨

---

1 ಸಿಂಚಾತರೂಪನಸಮಳ (ಗ) ಪಿಡಿಚಾಪರೂಪನತುಳ (ಚ)

ಚಂಪಕಮಾಲೆ

ದಶರಥರಾಯನೆಂಬ ನೃಪನುನ್ನತಸಂಪದದಿಂದೆ ಶೌರ್ಯದಿಂ
ವಸುಮತಿಯೆಲ್ಲಮಂ ಪರಮಧರ್ಮದಲಾಳು[1]ತಲಿ[1]ರ್ಪನಾವಗಂ
ಶಶಿಮುಖಿ ಕೌಸಲಾಸತಿಯು ರಾಜಿಪ ಕೈಕಯಿಯಸಾ ಸುಮಿತ್ರೆಯುಂ
ಕುಸುಮಶರಂಗೆ ದರ್ಪಣವೆನಿಪ್ಪತಿಗಾಡಿಕೆಯಿಂದೆ [2]ಶೋಭಿಪರ್[2] ೨೩

ಕಂದ : ಆ ಕೌಸಲೆ ಕೈಕಯೆಯುಂ
ಲೋಕೋತ್ತಮೆಯಾ ಸುಮಿತ್ರೆ ರೂಪಿಂ ಸೊಬಗಿಂ
ದಾ ಕುಶಲದೆ ಲಾವಣ್ಯದೆ
ಜೋಕೆಯೊಳತಿಮೋಹಿಸಿಪ್ಪರಾ ದಶರಥನಂ ೨೪

ವಚನ : ಅದೆಂತೆನೆ

ಕಂದ : ಸಲೆ ನಯನತ್ರಿತಯಂ ನಿ
ರ್ಮಲಮೂರ್ತಿ ಸದಾಶಿವಂಗೆ ತೋಱುವ ತೆಱದಿಂ
ನೆಲನಾಣ್ಮ ದಶರಥಗೆ ಕೌ
ಸಲೆ ಕೈಕೆ[3]ಯೆ[3]ಯಾ ಸುಮಿತ್ರೆಯೆನಿಪರ್ ಸತಿಯರ್ ೨೫

ತರುಣಿಯರ ಮೇಳದಿಂ ಧ
ರ್ಮರಹಸ್ಯಾಳಾಪದಿಂ ಪ್ರಜಾಪಾಲನೆಯಿಂ
ಧರಣಿಪ ದಶರಥರಾ[4]ಜಂ[4]
ನಿರುತಂ ಸುಖಸಂಕಥಾವಿನೋದ[5]ದೊಳಿ[5]ರ್ದಂ ೨೬

ವಚನ : ಅಂತು ದಶರಥರಾಯಂ ಸಂತೋಷಯುಕ್ತನಪ್ಪಭೋಗದಿಂ ತುಷ್ಟನಾಗಿರಲಿತ್ತಲ್ ಅಮರಾವತಿಯಂ ಸುಮನಸವಿದ್ವಿಷರ್ ಮುತ್ತಿಗೆಯಂ ಮಾಡಲೆಂದು ಚತುರಂಗ ಬಲಂ[6] ಬೆರಸು

ಕಂದ : ಅನಿಮಿಷಪುರಕನವರತಂ
ದನುಜರ್ ಮುತ್ತಿಗೆಯ ಮಾಡಿಕೊಂಡಿರಲಿಂದ್ರಂ
ದಿನ[7]ಮೆಲ್ಲ ಕಾದಿ ಬೞಲು[7]
ತ್ತನುಚರರಂ ಕರೆಯೆಕೞುಪಿದಂ ದಶರಥನಂ ೨೭

---

[1] ತಿ (ಗ) [2] ಮೋಹಿಪರ್ (ಚ) [3] ಅ (ಚ) [4] ಯಂ (ಚ) [5] ವಲಿ (ಚ)
[6] ಹಸ್ತ್ಯಶ್ವರಥ ಪದಾತಿ ಬಲಂ (ಗ ಚ) [7] ಚರಿಯಚಕಾದಿಶ್ರಮಪಿಂ (ಚ)

ಆ ಚರರು ವಹಿಲದಿಂದಂ
ಭೂಚಕ್ರಕೆ ಬಂದು ದಶರಥನ ಕರೆಯಲ್ಕಾ
ತ್ಯಾ[1]ಚರಿಯವಟ್ಟು[1]ಸಮರಕೆ
ತಾ ಚಿತ್ರದ ರಥವನಡರ್ದ ಸತಿಯರ್ ಸಹಿತಂ ೨೮

ವಚನ : ಅಂತು ದಶರಥಂ ಸತಿಯ[2]ರ್ವೆರಸು ತೇರ[2]ನೇಱಿ ಅಮರಾವತಿಯಂ ಪೊಕ್ಕು ದೇವೇಂದ್ರಂಗೆ ನಮಸ್ಕರಿ[3]ಪು[3]ದುಂ ರಕ್ಕಸರ [4]ಕೋಟಂ[4] ಬಲುಹೆಂದು ಕೂಟಕ್ಕೆ ಕರೆಯಲಟ್ಟಿದೆವೆಂದು [5]ತಾನುಂ ಸಹ[5] ಪುರಮಂ ಪೊಱ[6]ಮಟ್ಟು[6] ರಕ್ಕಸರ ಮಾಱಕೊಡ್ಡಂ ತಾಗುವುದುಂ ಅಮರೇಂದ್ರನಿಂ ದಶರಥಂ ನೇಮುಂಬಡೆದು

ಕಂದ : ರಥವೊಂದನೇಱಿ ಮಿಗೆ ದಶ
ರಥನೆನಿಸಿಯೆ ವೈರಿಗಳ್ಗೆ ದೆಸೆದೆಸೆಯೊಳ್ ದಶ
ರಥನೇಂ ರಿಪುಗಳ ಭೀತಿಯೊ
ರಥದೊಳ್ ಬಲ್ಲಿದನುಮೆಂದು[7] ಪೊಗೞ್ದರ್ ದಿವಿಜರ್[7] ೨೯

ವಚನ : ಅಂತು [8]ರಣಮಧ್ಯದೊಳ್ ದಶರಥಂ ದಿತಿಜರಂ ಪಳಂಚಿ ಕಾದುತ್ತಿರ್ಪಾಗಳ್[8]

ಕಂದ : ದಶರಥ[9]ನತಿಶಯ[9] ಶೌರ್ಯದೊ
ಳಸುರರ ಬಲಮಂ ಪಳಂಚಿ ಕಾದುತ್ತಿರೆ ರ
ಕ್ಕಸರು [10]ಕೆಡೆಯೆಚ್ಚು ತಾಂ[10] ಖಂ
ಡಿಸಿ[11]ದರು ರಥಚಕ್ರವನ್ನು ಕಂಡಳ್ ಕೈಕೇ[11] ೩೦

ವಚನ : ಅಂತು ಕಡೆಕೀಲು [12]ಖಂಡಿಸಿದುದಂ ಕೇಕಾವನಿತೆ[12] ಕಂಡು ತನ್ನ ಕಿಱುವೆರಲಂ ಕೀಲುಗೆಯ್ದು ಬರೆ ದಶರ[13]ಥನವಳ್ಗೆ[13] ಮೆಚ್ಚಿ ನಿನ್ನ ಮನದಿಷ್ಟಮಂ ಬೇಡೆನೆ ದೇವರ ಮೆಚ್ಚು ಭಂಡಾರ[14]ದೊಳಿ[14]ರಲಿ [15]ಎ[15]ನ್ನ ಮನಬಂದಾಗ ಬೇಡಿಕೊಂಬೆಂ ಎಂದು ಬಿನ್ನೈ[16]ಸೆ[16]ರಾಯಂ ತಥಾ[17]ಸ್ತು ಎಂದು[17] ದೇವೇಂದ್ರನಿಂ ಕಟಹಿಸಿಕೊಂಡು ಬರುತ್ತುಂ ವಸಿಷ್ಠನಾಶ್ರಮಮುಮಂ ಕಂಡು [18]ಆ ರಿಸಿಗೆ ತಲೆವಾಗಿ ನುತಿಸುತಿರ್ದನೆಂತೆನೆ[18]

---

[1] ಶ್ಚರ್ಯಬಟ್ಟು (ಗ) [2] ಸರ್ಹಿಂ ರಥವ (ಗ ಚ) [3] ಸೂ (ಚ) [4] ಹುಯ್ಯಲು (ಚ) [5] ತಾ ಸಹಂ (ಚ) [6] ವಂಟು (ಚ) [7] ದಿವಿಜರ್ ಪೊಗಳ್ದರ್ (ಚ) [8] ದಶರಥಂ ರಣಮಧ್ಯದಲ್ಲಿ ಅಸುರರಂ ಪಳಚಿ ಕಾದುತಿರ್ಪಲ್ಲಿ (ಚ) [9] ನಂತಾ (ಗ) ನಾಗತಿ (ಚ) [10] ಪರೂಥವೆಸಿಸಿ (ಚ) [11] ಮದುಕಡೆಕೀಲು ಕಂಡಳಾಗಂ ಕೈಕಲ್ (ಚ) [12] ಹನಿದುದಂ ಕೈಕಲಾದೇವಿ (ಚ) [13] ಥರಾಯಂ ಕೈಕಲಾದೇವಿಗೆ (ಚ) [14] ದಲ್ಲಿ (ಚ) [15] ನ (ಚ) [16] ಸಿ (ಚ) [17] ಸ್ತೆಂದ ರಕ್ಕಸರಂ ಜಯಿಸಿ (ಚ) [18] ಬಂದುರುಸಿಗೆ ಸಾಷ್ಟಾಂಗವಂದನ ಪ್ರಣೀತನಾಗಿ ಸ್ತೋತ್ರಂಗೆಯ್ಯುತಿರ್ದನದೆಂತೆಂದೊಡೆ (ಚ)

ಕಂದ : ಜಯ ಮುಖ್ಯಾಂಬುಜ ದಿನಕರ
ಜಯ ಸಂಸಾರಾಬ್ಧಿ ಛೈತ್ರವಿಮಲಾನಂದಾ
ಜಯ ಭವಹರ ಜಯ ಶುಭಕರ
ಜಯಜಯ ಮದ್ಗುರುವೆ ಇಷ್ಟಫಲ [1]ಶುಭ[1]ತರುವೇ ೩೧

[2]ತತ್ಪತ್ನೀತ್ರಯವಾ ಮುನಿ[2]
ಸತ್ಪದ [3]ಪಂಕಜವೆ[3] ನಮಿಸೆ [4]ಗುರು[4]ಮನವೆ ಕೃಪಾ
ತತ್ಪರನಾಗುತೆ ನಲವಿಂ
ಸತ್ಪುತ್ರಾವಾಪ್ತಿಯೆಂದು ಪರಸಿದನಾಗಳ್ ೩೨

ಪರಸಲ್ ದಶರಥಚಕ್ರೇ
ಶ್ವರ ಕೈಯಂ ಮುಗಿದು ದೇವ ನಿಮ್ಮಯ ವಾಕ್ಯಂ
ಸ್ಥಿರಮೈಸೆ ಎನಲು ಹಿಂದಕೆ
ತರುಣಿಯರಿಗೆ ಪುತ್ರರಾದುದಿಲ್ಲವೆ ಎಂದಂ ೩೩

ವಚನ : ಇಂತೆಂದ ನಿರೂಪಕ್ಕೆ ದಶರಥರಾಯಂ ಬಿನ್ನೈಸಿದನದೆಂತೆನೆ

ಕಂದ : ದಯೆಯಿಂ ಬಾಟದೆ ದಾನ
ವ್ರಯಮುಂ ನೆಱೆ ಪೂರ್ವದಲ್ಲಿ ಮಾಡದೆ ಪುಣ್ಯಾ
ಶ್ರಯಮಿಲ್ಲದೆ ಸತ್ಪುತ್ರರ
ಬಯ[5]ಸಿದೊಡೆಂ[5]ತಹರು ಗುರುವೆ ಭಕ್ತರ ಸಿರಿಯೇ ೩೪

ಸುತರಿಲ್ಲದ ಬದುಕಿಂದಂ
ವ್ರತಮುಂ ಕೈಕೊಂಡರಣ್ಯ[6]ವೊಳ್[6] ತಪಮುಂ ಮಾ
ಡು[7]ತಲಿಹು[7]ದು ಲೇಸೆನು[8]ತೆ[8] ದಶ
ರಥನಾಗ ವಸಿಷ್ಠಮುನಿಗೆ ಬಿನ್ನಪಗೈದಂ ೩೫

ಇಂತೆಂದು ನುಡಿದ ಬಿನ್ನಪ
ಮುಂ ತಡೆಯದೆ ಕೇ[9]ಳ್ದು[9] ಮುನಿವಸಿಷ್ಠಂ [10]ಭೂವಿಾ[10]
ಕಾಂತ ದಶರಥನಿ[11]ಗೊರೆದಂ[11]
ಸಂತಸದಿಂದೆಸೆವ ವಚನರಚನಾಮೃತ[12]ಮುಂ[12] ೩೬

---

1 ಸುರ (ಚ) 2 ತತ್ತರುಣಿತ್ರಯುವಾರುಷಿ (ಗ) 3 ಕಂ (ಚ) 4 ಗರುವಸಿಷ್ಠಂ (ಚ) 5 ಸಿದರೆ (ಚ) 6 ದಲಿ (ಚ) 7 ತಿಸು (ಚ) 8 ತಂ (ಚ) 9 ಳಿ (ಚ) 10 ತಾಂಭೂ (ಚ) 11 ಗೆಪೇಳ್ದಂ (ಗ ಚ) 12 ದಿಂ (ಚ)

ಚಂಪಕಮಾಲೆ

ನಿನಗೆ ಸುಪುತ್ರರಪ್ಪರೆಲೆ ಭೂಮಿಪ[1]ನೀ ಋಷಿ[1]ಶೃಂಗಮುಖ್ಯ[2]ನಾ
ತನ[2] ಕರೆತಂದು ಹೋಮವನು ಮಾಡಿಸಲಾಕ್ಷಣ ಮೆಚ್ಚಿ ಪಾವಕಂ
ಮನವೊಲಿದೀಪನೊಲ್ದು ಸುತರಂ ನೆಱೆ ಚಿಂತಿಸಬೇಡವೆಂದೆನಲ್
ಮುನಿಪದಪಂಕಜಕ್ಕೆಱಗಿದಂ ಧರಣೀಶನತೀವ [3]ಭಕ್ತಿಯಿಂ[3] ೩೭

ಕಂದ : ಪೊಡಮಡೆ ದಶರಥನೃಪನಂ
ಪಿಡಿದೆತ್ತಿದನಾ ವಸಿಷ್ಠಮುನಿ ಕೃಪೆಯಿಂದಂ
ತಡೆಯದೆ ಋಷಿಶೃಂಗನ ನೀ
ನೊಡಗೊಂಡೈ[4]ದುವ[4]ದೆನುತ್ತೆ ನೇಮಿಸಲಾ[5]ಗಳ್[5] ೩೮

ಉತ್ಪಲಮಾಲೆ

ಜೀಯ ಹಸಾದವೆಂದು ಮುನಿಮುಖ್ಯ ವಸಿಷ್ಠನ ಬೀಳುಕೊಂಡತಿ
ಪ್ರೀಯದಿನೈದಿದಂ ದಶರಥಂ ಋಷಿಶೃಂಗ ಜಿತೇಂದ್ರಿಯಾಶ್ರಮ
ಕ್ಕಾಯವನೀಶನಾ ಋಷಿಗೆ ವಂದಿಸಿ ಬಿನ್ನಹ ಮಾಳ್ಪೆನೆಂದು ನಾ
ನಾಯತಿಬುದ್ಧಿಯಿಂ ತನುಜರಂ ಪಡೆವಾತುರದಿಂದಲಾ ನೃಪಂ ೩೯

ಕಂದ : ಬಂದು [6]ಮುನೀಶ್ವರ[6]ನಂಘ್ರಿಗೆ
ವಂದಿಸಲೆತ್ತಿದನು [7]ಹರ್ಷದಿಂ ದಶರಥನಂ[7]
ಬಂದುದನು ಪೇಳೆನಲ್ ನಲ
ವಿಂದಂ ಬಿನ್ನೈಸಿದಂ ಮಹಾಭಕ್ತಿಯೊಳುಂ ೪೦

ದೇವ ಸುತರಿಲ್ಲಮದಱಿಂ
ನೋವತಿಘನವಾಗಿ ಧರೆಯನೆಲ್ಲವನುಱೆ ಬಿ
ಟ್ಟಾ ವಿಪಿನದಲ್ಲಿ ತಪಮಂ
ಭಾವವಿಶುದ್ಧಿ[8]ಯೊಳೇ[8] ಮಾಳ್ಪೆನೆಂದಿಂತೆಂದಂ ೪೧

ಶಾರ್ದೂಲವಿಕ್ರೀಡಿತ

ಏಕೈ ನೀನತಿ ನೋವೆ ಕಂದ ಎನುತುಂ ವಾಸಿಷ್ಠನೆನ್ನಂ ಕರಂ
ಬೇಕಾದಷ್ಟುಯಿಶ್ವರ್ಯ [9]ಸಂಪದಮುಮಂ[9] ಸಪ್ತಾಂಗಮಂ ಬಿಟ್ಟು ನೀ
ನೇ ಕಾರ್ಯಂ ತಪಕ್ಕೈವೆ ಬೇಡ ಋಷಿಶೃಂಗಂ ಕೇಳ್ ಮಹಾಯಜ್ಞಮಂ
ಸಾಕೆಂಬಂದದೆ ಮಾಡೆ ಪುತ್ರರಹರೆನ್ನಲ್ ಬಂದು ಬಿನ್ನೈಸಿನೆಂ ೪೨

---

1 ರುಷ್ಯ (ಕ) 2 ನ (ಕ) 3 ಹರ್ಷದಿಂ (ಚ) 4 ತನು (ಗ) ದೂ (ಚ) 5 ಗಂ (ಚ) 6 ಋಷಿಶೃಂಗ (ಗ) 7 ದಶರಥನತಿಸರುಷದೆ (ಚ) 8 ಯೊಲಿ (ಚ) 9 ಚಯಮಂ (ಗ)

ಮತ್ತೇಭವಿಕ್ರೀಡಿತ

ಧರೆಯುಂ ಸಂಪದಮುಂ ಮಹೈಶ್ವರಿಯುಮುಂ ಸಪ್ತಾಂಗಮುಂ ಬಿಟ್ಟು ನಾಂ
ಗುರುವಾಸಿಷ್ಠನ ಸೇವೆಗೈವೆನಲವರ್ ಬೇಡೆಂದು ಸನ್ಮಾನದಿಂ
ದಿರದೀಗಂ ಕರೆಯುಲ್ಕೆ ಬರ್ಪ ಋಷಿಶೃಂಗಂ [1]ಪು[1]ತ್ರಕಾಮೇಷ್ಟಿಯಂ
ದೊರೆಕೊಳ್ಳಲ್ ಸುತರಪ್ಪರೆಂದೆನಲು ಬಂದೆಂ ಕೇಳ್ ಕೃಪಾಸಾಗರಾ ೪೩

ಕಂದ : ಇಂದು ನೀಮೆನ್ನಭೀಷ್ಟಮ
ಸಂದೇಹಂ ಮಾಡದೀವುದೆನೆ ಋಷಿಶೃಂಗಂ
ಬಂದಪೆ ವಸಿಷ್ಠಮುನಿ ಪೇ
ಳ್ದಂದವ[2]ನಾ[2] ಮಾಳ[3]ಲಳವೆ[3] ದಶರಥರಾಯಾ ೪೪

ಎಮ್ಮ ತಪೋರಕ್ಷಣೆಗಂ
ನಿಮ್ಮೊಳ್ ಸುತರಾಗವೇ[4]ಟ್ಕನುತ್ತುಂ[4] ಮನ[5]ದೊಳ್
ಉ[5]ಮ್ಮಹ ಪುಟ್ಟತ್ತೆಂದಂ
ಸನ್ಮಾನನಿಧಾನವೆನಿಸುವಾ ಋಷಿಶೃಂಗಂ ೪೫

ಎನೆವ ವಸಿ[6]ಷ್ಠಂ[6] ಪೇಟಿಲ್
ದಶರಥ ನೀಂ ಬಂದೆ ಒಳ್ಳಿತಾ[7]ದುದೆ[7]ನುತ್ತುಂ
ಋಷಿಶೃಂಗಂ ಸಂತಸದಿಂ
ವಸುಮತಿಯಮರರ ಸಮೂಹದಿಂದಂ ಬಂದಂ ೪೬

ವಚನ : ಅದೆಂತೆಂದೊಡೆ

ಕಂದ : ಅತ್ರಿ ಶುಕ ಸನಕ ನಾರದ
ನಾತ್ರೇಯಂ ಕಾಶ್ಯಪಾಂಗೀರಸ ಮುನಿ ವಿಶ್ವಾ
ಮಿತ್ರ ಭೃಗು ಚವನ ಗಾರ್ಗ್ಯಂ
ಮೈತ್ರೇಯಂ ವ್ಯಾಸಮುಖ್ಯಮುನಿ ಸಹ ಬಂದಂ ೪೭

ಬಂದು ಋಷಿಶೃಂಗ ದಶರಥ
ರೊಂದಾಗಿಯೆ ಸಕಲ ಮುನಿಜನಂಗಳ್ ಸಹಿ[8]ತಂ
ಚಂ[8]ದದೆ ವಸಿಷ್ಠನಾಶ್ರಮ
ಕಂದ್ವೈತರಲಾ ಮುನೀಶನುಚಿತೋಕ್ತಿಗಳಿಂ ೪೮

---

1 ಸುಪ್ರ (ಗ) 2 ನಾಂ (ಗ) 3 ಬಹುದೇ (ಗ) 4 ಳ್ಕುಮೆನುತಂ (ಗ ಚ)
5 ದೊಳಗು (ಗ ಚ) 6 ಷ್ಠನು (ಚ) 7 ಯಿತೆ (ಚ) 8 ತಾನಂ (ಚ)

ಅಭ್ಯಾಗತಪೂಜೆಯನ
ತ್ಯಭ್ಯಗ್ರದೆ ಮಾಡಿ ಸಕಲ ಮುನಿಜನಕೆಲ್ಲಂ
ಅಭ್ಯರ್ಚಿಸಿ ಋಷಿಶೃಂಗನ
ಅಭ್ಯುದಯದ ಮಾತನಾಡಿದಂ ದಶರಥಗಂ ೪೯

ವಚನ : ಅದೆಂತೆಂದೊಡೆ [1]ಸು[1]ಹೃದಯರಪ್ಪ ಋಷ್ಯಶೃಂಗನಾದಿಯಾದ ವಸುಧಾಮರರ್ಗೆ ವಿಧಿವಿಹಿತವಾಗಿ ಮಧುಪರ್ಕಾದ್ಯುಪಚಾರಮಂ ಮಾಡಿ ಮುಂದಿರ್ದ ದಶರಥರಾಯಂಗೆ ಸಂತಸಮಪ್ಪಂತು ವಸಿಷ್ಠಮುನೀಶ್ವರಂ ಋಷ್ಯಶೃಂಗಂಗೆ ಪೇೞುತಿರ್ದನದೆಂತೆಂದೊಡೆ

ಸೈನಿಕ
ನೀವು ಸಂತಸಂಗಳಿಂದಲುಂ ಕರಂ
ಭಾವಶುದ್ಧಿಯಿಂದೆ ಮಾಡಲೆಜ್ಞಮಂ
ಭೂವಧೂವರಂಗೆ ಪುತ್ರರಪ್ಪರೆಂ
ದಾ ವಸಿಷ್ಠ ಪೇೞಿದಂ ಮುನೀಶಗಂ ೫೦

ಕಂದ : ನೀವು ಋಷಿಮುಖ್ಯರದಱಿಂ
ಭೂವರಗಂ ಪುತ್ರಕಾಮ ಹೋಮವ ಮಾಡಿಸ
ಲಾ ವೀತಿಹೋತ್ರ ಸುತರಂ
ಭಾವವಿಶುದ್ಧಿಯಲಿ ಕೊಡುವೆನೆಂದ ವಸಿಷ್ಠಂ ೫೧

ಉತ್ಪಲಮಾಲೆ
ಪೇೞಲಿಕಾ ಮುನೀಶ್ವರನಿದೊಳ್ಳಿತು ಯಜ್ಞವ ಮಾೞ್ಪವೀಗ ಭೂ
ಪಾಲಕನಿಷ್ಟಮಂ ಸಲಿಸವೇೞ್ಕನುತುಂ ಋಷಿಶೃಂಗನಾ ಮುನೀಂ
ದ್ರಾಳಿ ವಸಿಷ್ಠಗೂಡಿಯತಿಸಂತಸದಿಂದಲಯೋಧ್ಯೆಗೈದಿ ಸ
ಲ್ಲೀಲೆಯೊಳಾ ನೃಪಂ ಮುನಿಜನಂಗಳ ಸತ್ಕರಿಸುತ್ತಲಾಕ್ಷಣಂ ೫೨

ಕಂದ : ಮನ್ನಿಸಿ ಮಧುಪರ್ಕಾದಿಗ
ಳನ್ನಯದಿಂ ಮಾಡಿ ಸಕಲಮುನಿಜನಕೆಲ್ಲಂ
ಉನ್ನ[2]ತವಿಷ್ಟರಮಿತ್ತು[2] ಮ
ಹೋನ್ನತಿಯಿಂ ಭೂಪ ಹೋಮಮಂ ಮಾಡೆಂದಂ ೫೩

---

1 ಸದು (ಚ) 2 ತಾಪಸನನುನಿತ್ತುಂ (ಗ ಚ)

ಎನೆ ದಶರಥನೃಪನಿಂಗಂ
ತನುಜರ್ ಜನಿಯಿ[1]ಪ[1]ರು ಹೋಮಮುಮಂ ನಾವೀ[2]ಗಳ್[2]
ಮನವೊಲಿದು ಮಾಟ್ಪೆವೆನುತುಂ
ಮುನಿ ಋಷ್ಯಶೃಂಗಂ ಮಹೋತ್ಸವದೆ ಕೈಕೊಂಡಂ ೫೪

ವಚನ: ಅಂತು ಯಜ್ಞಪ್ರಾರಂಭಮುಮಂ ಸಂತೋಷದಿಂ ಕೈಕೊಂಡು ಋಷ್ಯಶೃಂಗ ವಸಿಷ್ಠ ಮುನಿಗಳಾದಿಯಾಗಿ ದಶರಥರಾಯುಂ ಯಾಗಶಾಲೆಯಂ ಪೊಕ್ಕು ಸಂಕಲ್ಪಮಂ ಮಾಡಿ ಪಂಕಜನಾಭನಂ ಸ್ಮರಿಸಿ ಭರ್ಗಪುತ್ರನಪ್ಪ ವಿಘ್ನೇಶ್ವರನಂ ಬಲಗೊಂಡು ಗಣ್ಯಾತೀತರಪ್ಪ ಮುನಿಗಳು ಪುಣ್ಯಾಹವಾರ್ಚನೆಯಂ ಮಾಡಿ ಸುಜ್ಞಾನದಿಂದಗ್ನಿಯಂ ಪ್ರತಿಷ್ಠೆಯಂ ಮಾಡಿ ಪರಿಸ್ತರಣಮನಿಕ್ಕಿ ಅಗ್ನಿಯನಲಂಕರಿಸಿ ಪರಿಷೇಚನಂ ಮಾಡಿ ಸೃಕ್ಸ್ರುವ ಪೂರ್ಣಪಾತ್ರೆ ರಜ್ಜು [3]ಇಧ್ಮ[3] ಬರ್ಹಿ ಸಮಿಧಾಜ್ಯ ತಿಲ ವ್ರೀಹಿ ಚರುವಾದಿಯಾದ ಯಜ್ಞಸಂಭಾರಮನಿರಿಸಿ ಅಂತರ್ವೇದಿ ಬಹಿರ್ವೇದಿ ಆಹವನೀ[4]ಯ ಗಾರ್ಹ[4]ಪತ್ಯ ದಕ್ಷಿಣಾಗ್ನಿಯುಂ ರಚಿಸಿ ಅರಣಿಯಿಂ ಸಪ್ತಾರ್ಚಿಯಂ ಪ್ರತಿಷ್ಠಿಸಿ ನವನೀತೋದ್ವರ್ತನ ಚರ್ಮಾಚ್ಛಾದನ ಶೃಂಗಹಸ್ತದಿಂ ಅರಸಿಂಗೆ ದೀಕ್ಷೆಯಂ ಮಾಡಿ ಯಾಜಮಾನ್ಯಮಂ ಪೇಟ್ ಹೋತೃ ಉದ್ಗಾತೃ ಅಧ್ವರ್ಯರಿಂ ಬ್ರಹ್ಮಸಾನ್ನಿಧ್ಯದಿಂ ಉತ್ತಮರ್ಷಿಗಳು[5] ತತ್ತತ್ಸ್ಥಾನದೊಳ್ ಕುಳ್ಳಿರ್ದು ಮಂತ್ರೋಕ್ತಿಗಳಿಂದಾಹುತಿಗಳಂ ಬೇಳೆ ಪೂರ್ಣಾಹುತಿಯಂ ಮಾಡುವುದುಂ

ಶಾರ್ದೂಲವಿಕ್ರೀಡಿತ

ಆ ಪೂರ್ಣಾಹುತಿಯಾಗಲಾಕ್ಷಣದೊ[6]ಳಾ[6] ಸಪ್ತಾರ್ಚಿ ಸಂತೋಷದಿಂ
ಭೂಪಂಗಿಷ್ಟಮನೀವೆನೆಂದೆನುತಲಾ[7]ಗಳ್[7] ತನ್ನ ದಿವ್ಯಾಂಗ ಸ
ದ್ರೂಪಂ ತೋಱಿಸಲಾ ಮಹೀಪತಿಯುಮಾ ಭೂಮಾಸುರವ್ರಾತಮುಂ
ತ್ರೀಪಾದಕ್ಕಭಿವಂದಿಸಲ್ಕೆ ಮುದದಿಂದಂ ಮೆಚ್ಚಿದಂ ಪಾವಕಂ ೫೫

ವಚನ: ಅಂತು ಮೆಚ್ಚಿ ಚಿತ್ರಭಾನು ಸಂತೋಷದಿಂ ಸ್ವಸ್ವರೂಪಮುಂ ತೋಱುತಿರ್ದನೆಂ[8]ತೆನಲ್[8]

ಕಂದ: ದ್ವಿಮುಖಂ ತ್ರಿಪದಂ ಕರಸ
ಪ್ತಮ ಸಪ್ತಮ ಜಿಹ್ವೆಯೊಪ್ಪವಾ [9]ಚಾ[9]ಶೃಂಗಂ
ಕ್ರಮದಿಂದೆಸೆಯಲ್ ಕೃಪೆಯಿಂ
ದನುಮಂ [10]ದಶರಥಗೆ ತನ್ನ ರೂಪಂ ತೋರ್ದಂ[10] ೫೬

---

1 ಸುವ (ಚ) 2 ಗಂ (ಚ) 3 ಯಿಧ್ಮ (ಚ) 4 ಯ್ಯಗಾರುಹ (ಚ) 5 ರುಷಿಯರು (ಚ) 6 ಗಂ (ಚ) 7 ತನ್ನನಿಜ (ಚ) 8 ಕೆಂದೊಡೆ (ಚ) 9 ಚತು (ಚ) 10 ನಿಜಮೂರ್ತಿದೋರಿದಂ ದಶರಥಗಂ (ಚ)

ವಚನ: ಅಂತು ಪ್ರತ್ಯಕ್ಷವಾದ ಅಗ್ನಿದೇವರ್ಗೆ ಮುನೀಶ್ವ[1]ರರೊಡನೆ[1] ದಶರ[2]ಥಂ ಮಣಿಯೆ[2]

ಕಂದ : ಎತ್ತಿ ಮತ್ತೊಬ್ಬರೊಬ್ಬರ
ಹತ್ತಿರೆ ಕುಳ್ಳಿರಿಸಿಕೊಂ[3]ಡು[3] ದಶರಥ ನಿನ[4]ಗಾ
ನಿ[4]ತ್ತಪೆ ವ[5]ರವುಂ[5] ಬೇಡೆನೆ
ಪುತ್ರರ ಕೃಪೆಮಾಡಿ ಎಂದು ಬಿನ್ನಪಗೈದಂ ೫೭

ದಶರಥನ ಬಿನ್ನಪಮನಾ
ಶ್ವಸನಸಖಂ ಕೇ[6]ಳ್ದು[6] ಹರ್ಷಮಂ ತಾಳ್ದಿಯೆ ಸಂ
ತಸದಿಂ[7]ದಾ[7]ಗಳ್ ನವ ಪಾ
ಯಸ ಭಿಕ್ಷದ್ವಯವನಿತ್ತನತಿಕೃಪೆಯಿಂದಂ ೫೮

ಚಂಪಕಮಾಲೆ

ನಿನಗಿದಱಿಂದೆ ನಾಲ್ವರು ತನೂಭವರಪ್ಪರೆನುತ್ತಲರ್ತಿಯಿಂ
ದನಲನು ಪೇಳಿತಿಯಾ ನೃಪತಿ ಜೀಯ ಹಸಾದವೆನುತ್ತೆ ಭಕ್ತಿಯಿಂ
ಮನವೊಲಿದಗ್ನಿಯಂಪ್ರಿಗೆಱಗುತ್ತೆ ಮಹಾಪರಿತೋಷದಿಂದಲಾ
ಮುನಿಜನಪಾದಪಂಕಜಕೆ ಕೈಮುಗಿಯುತ್ತಿರಲಾ ಧನಂಜಯಂ ೫೯

ಕಂದ : ಕಳುಹಿದನು [8]ಮುನಿ[8]ಗಳೆಲ್ಲರ
ಜ್ವಲನಂ ದಶರಥನ ಬೀಳುಕೊ[9]ಡುತುಂ ತನ್ನಾ[9]
ನೆಲೆಗೈದಿದನಿತ್ತಲ್ ಭೂ
ಲಲನಾಧಿಪನಾ ಮುನೀಶ್ವರರ ಬೀಳಿತ್ಕೊಟ್ಟಂ ೬೦

ವಚನ: ಅಂತು ಯಜ್ಞೇಶ್ವರಂ ಕುಂಡಸ್ಥನಾದನಿತ್ತಲು ದಶರಥಂ ಸಮಸ್ತ ಮುನಿಗಳ್ಗೆ ಸಂಭಾವನೆಯಂ ಮಾಡಿ ನಮಸ್ಕರಿಸಿ ಕಳುಪಿದನಿತ್ತಲ್

ಕಂದ : ಸಂದ ಸಂತೋಷದಿಂದಾ
ನಂದದೆ ದಶರಥಮಹೀಶನಗ್ನಿಯ ವರದಿಂ
ತಂದೆ ಪಾಯಸದ ಭಿಕ್ಷ
ದ್ವಂದ್ವವ [10]ಕೈಕಯಿಗೆ ಕೌಸಲೆಗೆ[10] ಮಿಗೆ ಕೊಟ್ಟಂ ೬೧

---

[1] ರರ್ ಸಹಂ (ಚ) [2] ಥರಾಯುಂ ನಮಸ್ಕಾರಂಗೆಯ್ಯೆ (ಚ) [3] ಡು ತಿಪಿ (ಚ) [4] ನಗಿ (ಚ) [5] ವ (ಚ) [6] ಳಿ (ಚ) [7] ದಲಾ (ಚ) [8] ಮುಷಿ (ಚ) [9] ಟ್ಟಸು ತನ್ನಯ (ಚ) [10] ಕೌಸಲೆಗೆ ಕೈಕಯೆಗೆ (ಚ)

ನಲವು ಮಿಗಲಾ ಸುಮಿತ್ರಾ
ಲಲನೆಗೆ ಕೌಸಲೆಯುಂ ತನ್ನ ಭಾಗವೊಳರ್ಧವ
ಬಳಿಕ ಕೈಕಯೆಯುಮರ್ಧವ
ನೊಲಿದಿತ್ತರ್ ಪಾಯಸಾನ್ನವಂ ಸಮ್ಮದದಿಂ ೬೨

ಭೋಗಿಸಿ ಸತಿಯರ್ ಮೂವರು
ರಾಗದೊಳಿರ್ದವರು ಮಾಣಿಕಂಗಂಡಿರ್ದಿಂ
ಬಾಗಿ ನಾಲ್ಕನೆಯ ದಿವಸದೊ
ಳಾ ಗಂಗೋದಕವೊಳೊಲ್ದು [1]ನೀರಂ ಮಿಂದರ್[1] ೬೩

ವಚನ: ಅಂತು ನಾಲ್ಕನೆಯ ದಿವಸಂ ಶುದ್ಧಸ್ನಾನಂ[2]ಗೈದು[2] ದುಕೂಲಾಂಬರಂಗಳನ್ನುಟ್ಟು ವಿಕಸಿತಮಾದ ಮಲ್ಲಿಕಾಕುಸು[3]ಮಮಂ[3] ಸಲ್ಲೀಲೆಯಿಂ ಮುಡಿದು ಸವ್ಯಗಂಧಾನುಲೇ[4]ಪಂಗೈ[4]ದು ದಿವ್ಯರತ್ನಾಭರಣಭೂಷಿತೆಯರಾಗಿ[5]ರ್ಪಲ್ಲಿ[5] ಕುಸು[9]ಮಶರಂಗೆ ತೊಣೆ[6]ಯಪ್ಪ ದಶರಥರಾಯಂ ಬಂದು ನೇಹದಿಂ [7]ಶಯ್ಯಾಗೃಹಮಂ[7] ಪೊಕ್ಕು ಮಣಿಖಚಿತ ಮಂಚದೊಳ್ ಮಂಡಿಸಿ ಲವಲವಿಕೆಯಿಂ ನೋಡಿ ಬರತೆಗದಪ್ಪಿ ಷೋಡಶಕಲೆಗಳನರಿದು ಚೌ[8]ಶೀತಿ[8] ಬಂಧಂಗಳಿಂ ಕೂಡಿ ಸುಖಿಯಾಗಿರಲಾ ಸತಿಯರ್ಗೆ

ಕಂದ : ಮೂವರು ಸತಿಯರ ಕೂಟದೆ
ಭೂವರ ದಶರಥನು ಸುಖ[9]ದಲಿಂದಿರು[9]ತಿರೆ ಮು
ತ್ತಾ ವನಿತಾತ್ರಯಕಂ ಸೌ
ಖ್ಯಾವಹದಿಂದಾಯಿತವರ್ಗೆ ಗರ್ಭಾಧಾನಂ ೬೪

ವಚನ: ಅಂತವರ್ಗೆ ನವಮಾಸಂ [10]ತುಂಬಿ[10] ಶುಭಗ್ರಹದೃಷ್ಟಿಯಿಂ ಪಂಚಮ ಶುದ್ಧಿಯಲ್ಲಿ ಸತ್ಪುತ್ರರಂ ಪಡೆಯೆ ದಶರಥರಾಯಂ ವಸುಧಾಮರರ್ಗೆ ಪುತ್ರಾಯಣಮನಿಕ್ಕಿ ಜಾತಕರ್ಮಂಗಳಂ ಮಾಡಿ ನಾಮಕರಣದೊಳೆ ಕೌಸಲ್ಯಾದೇವಿಯ ಪುತ್ರನಂ ಶ್ರೀರಾಮನೆಂದು ಕೈಕ[11]ಯಾತ್ಮಜನಂ[11] ಭರತನೆಂದು ಸುಮಿತ್ರಾದೇವಿಯ ಸುತರಂ ಲಕ್ಷ್ಮಣ ಶತ್ರುಘ್ನರೆಂದು ಪೆಸರನಿಟ್ಟು

---

1 ಸ್ನಾನಂಗೈದರ್ (ಚ) 2 ಗಳಂಮಾಡಿ (ಚ) 3 ಮಂಗಳಂ (ಚ) 4 ಪನಂಗಳಂ ಮಾಡಿ (ಚ) 5 ಯಿಪ್ಪಲ್ಲಿ (ಚ) 6 ಮಾಸ್ತಗೊರೆ (ಚ) 7 ಸೆಜ್ಜೆಯುಮನೆಯಂ (ಚ) 8 ರಾಸಿತಿ (ಚ) 9 ದೊಳಿರು (ಕ) 10 ತೀವಿ (ಚ) 11 ಲಾತ್ಮಜಂ (ಚ)

ಕಂದ : ರಾಮಂ ಲಕ್ಷ್ಮಣ ಭರತ ಸ
ನಾಮಂ ಶತ್ರುಘ್ನರೆನಿಪ ನಾಲ್ವರ್ ಸುತರೊಳ್
ಪ್ರೇಮದೆ ದಶರಥರಾಯಂ
ಗಾ ಮಹಿಪನ ಸಂತಸವನದಾರ್ ಬಣ್ಣಿಸುವರ್ ೬೫

ಅತಿಪರಿತೋಷದೊಳಾ ದಶ
ರಥನೀ ನಾಲ್ವರ್ ಕುಮಾರರಂ ಸಲಹಲ್ ಸುರ
ಪತಿಮುಖ್ಯರ್ ಸ್ವರ್ಗದೊಳೀ
ಕ್ಷಿತಿಯೊಳ್ ಸುಜನ[1]ರ್ಕ[1]ಳೆಲ್ಲ ನಲಿಯುತ್ತಿರ್ದರ್ ೬೬

ಸತ್ಯನಿಧಿ ರಾಮ ಲಕ್ಷ್ಮಣ
ಶತ್ರು[2]ಘ್ನರ್[2] ಭರತ[3]ರೆಂಬ[3] ನಾಲ್ವರ್ ಮೆಱೆದರ್
ನಿತ್ಯಂ ಸುರಧೇನುಗೆ ತೊರ
ದೊತ್ತಿರ್ದಾ ಸ್ತನಚತುಷ್ಟಯಂ[4]ಗಳ್ ಮೆಱೆವೊಲ್[4] ೬೭

ಭೂ[5]ಮಿಾ[5] ಭಾರವನಿೞು[6]ಪಲ್[6]
ಪ್ರೇಮದೊಳಮೃತಾಬ್ಧಿ ಶಯನ ನಾರಾಯಣನೇ
ರಾಮಾವತಾರದೊಳ[7]ಗೊಲಿ[7]
ದೀ ಮಹಿಯೊಳ್ ದಶರಥೋದರದೆ ಜನಿಸಿರ್ದಂ ೬೮

ಶಾರ್ದೂಲವಿಕ್ರೀಡಿತ
ಈ ನಾಲ್ವರ್ ಸುತರುನ್ನತ ಪ್ರಬಲರುಂ ಶ್ರೀರಾಮನುಂ ಲಕ್ಷ್ಮಣಂ
ಜ್ಞಾನಾಧಿಕ್ಯ ಸುಧೈರ್ಯಯುಕ್ತ ಭರತಂ ಶತ್ರುಘ್ನರೆಂಬರ್ ಸದಾ
ಶ್ರೀನಾರೀ [8]ಪ್ರಿಯನಂಶದಿಂ ಜನಿಯಿಸಿರ್ದೊಪ್ಪುತ್ತಿಹರ್[8] ಪೇೞಲೇಂ
ನಾನಾ ವಿದ್ಯವಿಶಾರದರ್ ದಶರಥಂಗಾನಂದಮಂ ಬೀಱುತುಂ ೬೯

ಕಂದ : ಇಳೆಯೊಳ್ ತೊಳಗುವ ರವಿಮಂ
ಡಲದೊಳ್ ಪೌರ್ಣಮಿಯ ಚಂದ್ರಬಿಂಬದೊಳನಿಲಂ
ಸುೞಿಯದ [9]ದೀಪದವೊಲ್ ಪ
ಜ್ಜ[9]ಳಿಪರ್ ಶ್ರೀರಾಮ ಲಕ್ಷ್ಮಣರ್ ಭರತಾದ್ಯರ್ ೭೦

---

[1] ರುಗ (ಚ) [2] ಘ್ನಂ (ಚ) [3] ನಾಮಿ (ಚ) [4] ಗಳತೆಱದಿಂ (ಚ) [5] ಮಿಯ (ಚ) [6] ಸುವ (ಚ) [7] ಳೊಲಿ (ಚ) [8] ವರ ನಾರಯಣನಂಶಸಂಭೂತರೊಪ್ಪುತ್ತಿಹರ್ (ಚ) [9] ಜ್ಯೋತಿಯಲಱ ಪ್ರಜ್ವ (ಚ)

ವಚನ : ಅಂ[1]ತಾದಿ[1]ನಾರಾಯಣಂ ಮೇದಿನೀಭಾರಮನಿಳು[2]ಪಲೆಂದು ದಶರಥಚಕ್ರೇಶನುದರದೊಳ್ ಜನಿಯಿಸಿ ಬಾಲ್ಯಮಂ ನಟಿಯಿಸಿ ಲೀಲೆಯಿಂದಾಡುತ್ತೆ ಜನನೀಜನಕರ್ಗಮುಂದಾನಂದಸಂದೋಹಮಂ ಪೆರ್ಚಿಸಿ ಮೆಯ್ವೊಗರಿಂ ತೊಳಗುತಿರ್ದ ನಾಲ್ವರ್ ಕುಮಾರರ್ಗೆ[2] ಏಳೆಂಟುವರ್ಷಮಪ್ಪುದುಂ

ಕಂದ : ಬೆಳೆಯುತ್ತಿರಲಿತ್ತಂ ಭೂ
ವಳಯದ ಕೌಶಿಕಮುನೀಂದ್ರ ಯಜ್ಞಂಗೆಯ್ಯಲ್
ಖಲರಧಿದೇವತೆ ತಾಟಕಿ
ಮುಳಿದಾ ಮಖಹ[3]ತಿಯ[3] ಮಾಡಲತ್ಯುಗ್ರತೆಯಿಂ ೭೧

ನೋಡೆಮ್ಮಯ ಮಖಕೆ ಮಹಾ
ಕೇಡಾಯಿತ್ತಿದಕುಪಾಯಮಾವುದೆನುತ್ತುಂ
ನಾಡೆ ಬಿಸುಸುಯ್ದು ಚಿಂತಿಸಿ
ನೋಡಿದನಾ ಮುನಿಪ ಜ್ಞಾನದಿಂ ರಘುಪತಿಯಂ ೭೨

ನೆನೆ[4]ಯುತೆ ಸಂತಸದಿಂದಂ[4]
ಮುನಿನಾಥಂ ರಾಮ ಲಕ್ಷ್ಮಣರನಾ[5]ನೀಗಳ್[5]
ಮನವೊಲಿದು ಕರೆದುತಹೆನೆಂ
ದೆನುತಾ[6]ಗಳ್[6] ಬಂದನೊಲಿದಯೋಧ್ಯಾಪುರಕಂ ೭೩

ವಚನ : ಅಂತು ಮುನೀಂದ್ರಂ ತಾಟಕಿಯ ಬಾಧೆಗಾಱದೆ ದಶರಥರಾಯನಲ್ಲಿಗೈದೆ

ಕಂದ : ಬರಲಿದಿರ್ವಂದಂ ದಶರಥ
ಧರಣೀಶ್ವರನರ್ಘ್ಯಪಾದ್ಯಮಾಚ[7]ಮನ[7]ಗಳಿಂ
ದಿರದೆ ಸತ್ಕರಿಸು[8]ತ[8]ಲ್ಲಿಗೆ
ಬರವಾವುದು ಕಜ್ಜಮೆಂದೊಡವರಿಂತೆಂದರ್ ೭೪

---

1 ತ್ರುತ್ರಿಃ ಆದಿ (ಚ) 2 ಪತೋಸುಗ ವಸುಮತಿವಲ್ಲಭನಪ್ಪ ದಶರಥರಾಯನಿಂದುದಯಿಸಿ ಬಾಲ್ಯಮಂ ನಟಿಸಿ ಲೀಲೆಯಿಂದಾಡುತ್ತಂ ತಂದೆತಾಯಿಗಳಿಗೆ ಸಂದಣಿಸಿದ ಸಂತೋಷಮಂ ಪೆರ್ಚಿಸಿ ಥಳಥಳಿಸಿ ಹೊಳಹೊಳದು ಸಳಸಳಿಸಿ ಬೆಳೆವುತ್ತಿರ್ದ ನಾಲ್ವರ್ ಕುಮಾರರ್ಗೆ (ಚ)
3 ತವ (ಚ) 4 ಮ ಸಂತೋಷಬಡುತುಂ (ಚ) 5 ನೀಗಂ (ಚ) 6 ಗಂ (ಚ)
7 ಮ್ಯ (ಚ) 8 ತ (ಚ)

ಚಂಪಕಮಾಲೆ

ದಶರಥರಾಯ ಕೇಳ್ ಸುಮುಖಮುಂ ರಚಿಸುತ್ತಮಿರಲ್ಕೆ[1]ಮ[1]ಲ್ಲಿ ರ
ಕ್ಕಸರಧಿನಾಥೆ ತಾಟಕಿ ಮಹಾಧ್ವರಮುಂ ಚ್ಯುತಿಗೈವೆನೆಂದು ಶಂ
ಕಿಸದವಳೆಲ್ಲಮುಂ ಕಿಡಿಸಲಾಂ ಮನನೊಂದಿದಕಾವುಪೆಂದು ಚಿಂ
ತಿಸುತಿರೆ ತೋಱಿತಾಗ ರಘುರಾಮನ ದಿವ್ಯಸರೂಪದಗ್ಗಳಂ* ೭೫

ವಚನ: ಎಲೆ ದಶರಥರಾಯ ತಾಟಕಿಯೆಂಬ [2]ರಕ್ಕಸಿ[2] ಮಾಯಾಬಲದಿಂ ಸದ್ರವ್ಯಂಗಳಂ ಪೊಗಲೀಯದೆ ಯಜ್ಞಘಾತಕಿಯಪ್ಪುದಂ ನಿಮಗಱುಪಿ ತವ ಪುತ್ರರಂ ಯಜ್ಞರಕ್ಷಣಾರ್ಥಂ ಕರೆದುಕೊಂಡು ಪೋಪೆನೆನೆ ದಶರಥನಿಂತೆಂದಂ

ಕಂದ: ಎಂದಡೆಲೆ ಮುನಿಪ ನಮ್ಮಯ
ನಂದನರತಿ ಪಸುಳೆಗಳ್ ಮಹಾಯುದ್ಧದೊಳಂ
ನಿಂದು ಕಾದುವರೆ ರಣವೇ
ನೆಂದಱಿಯದೆ ಶಿಶುಗಳಿವರು ನೀವಱಿಯದುವೇ ೭೬

ಆವೆಲ್ಲವ ಬಲ್ಲೆವು ವಸು
ಧಾವಲ್ಲಭ ನಿನ್ನ ಕುವರ ಸಲ್ವನೆ ಶಿಶುವೆಂ
ದೀ ವಚನ ಬೇಡ ದೇವರ
ದೇವಂ ಭೂಭಾರವಿಳುಪಬಂದವನೀತಂ ೭೭

ಕಾರಣಿಕಪುರುಷನೀತಂ
ನಾರಾಯಣನಾದಿವಸ್ತುವೆಂಬುದನಱಿಯೈ
ಧಾರಿಣಿಯ ಭಾರವಿಳುಪುವ
ಕಾರಣದಿಂ ಬಂದನೆಂದನಾ ಮುನಿನಾಥಂ ೭೮

---

1 ದ (ಕ) 2 ರಾಕ್ಷಸಿ (ಚ)

* ಚ ಪ್ರತಿಯಲ್ಲಿ ೭೫ನೆಯ ಪದ್ಯದ ಬಳಿಕ ಈ ಪದ್ಯ ಹೆಚ್ಚಾಗಿದೆ.

ಕಂದ: ಸೂರ್ಯವಂಶದಲಿ ಜನಿಸಿದ
ಶೌರ್ಯೋನ್ನತ ರಾಮಚಂದ್ರನಿಂದಂ ನಮ್ಮಯ
ಕಾರ್ಯಮಿದಪ್ಪುದೆನುತ್ತಂ
ತುರ್ಯವೊಳೊಡಗೊಂಡು ಪೋಪೆವೆನುತುಂ ಬಂದೆಂ

ಶಿಶುವಲ್ಲವೆ ಶಿಖಿವಾಹನ
ನಸುರೋತ್ತಮನೆನಿಪ ತಾರಕನ ಕೊಲ್ಲೆನೆ ಮಾ
ನಸತನದ ಮಾತದೇತಕೆ
ಬಿಸಜಾಕ್ಷಂ ಬಲ್ಲೆಯಜೀಯದೇಂ ಚಿಂತಿಸುವೈ ೭೯

వ:ಚನ : ರಾಮಲಕ್ಷ್ಮಣ[1]ರನೆಮ್ಮೊಡನೆ[1] ಕಳು[2]ಪವರ ಭರ[2]ಭಾರಂ ನಮ್ಮದು ಎನೆ

ಕಂದ : ಪೇಟ[3] ಹಸಾದವೆನುತ್ತುಂ
ಭೂಲಲನಾಧೀಶ ದಶರಥಂ ರಘು[3]ಪತಿಯುಂ
ಆ[3]ಲೋಕಿಸುತಿತ್ತಂ ಮುನಿ
ಮೌಳಿಯ ವಶ[4]ದೊಳಗೆ ಪುತ್ರರಂ ನಾಲ್ವರುಮಂ[4] ೮೦

ಸತಿಯ ವಿಯೋಗಂ ದಾರಿ
ದ್ರತೆಯಾಳ್ವನ ಹಾನಿ ವರ್ಷಕಾಲದ ಪಯಣಂ
ಸುತರಗಲಿಕೆ ಎಂದೆಂಬಿವು
ಕ್ಷಿತಿಪತಿಯೇ ಚಿಂತೆಯಹುದು ಚಿಂತಿಸಬೇಡಂ ೮೧

ವಚನ : ಎಂದರಸನಂ ಸಂತೈಸಿ

ಕಂದ : ಕೈಕೊಂಡು ಹರ್ಷದಿಂದಂ
ಲೋಕೈಕಂ ರಾಮಲಕ್ಷ್ಮಣರ ದಶರಥನಿಂ
ತಾ ಕಳುಹಿಸಿಕೊಂಡಾಶ್ರಮ
ಕಾ ಕೌಶಿಕ ಬಂದು ಹೊಕ್ಕ ನಿಜಮಂದಿರಮಂ ೮೨

ಇತ್ತ[5]ಲದೊ[5]ಂದು ದಿ[6]ನಂ[6] ಭೂ
ಪೋತ್ತಮ ದಶರಥನು ಬೇಂಟೆಯಾಡುವ ಪಥದೊಳ್
ಮಿ[7]ತ್ತುವೆ[7] ಬರ್ಪಂ[8]ತೆ ಚಾ[8]ಡಲ
ಪೊತ್ತೈದಿದ ಮುದುಪರಪ್ಪ ತಾಯ್ತಂದೆಗಳಂ ೮೩

---

[1] ರಂ ನಮ್ಮ ಸಂಗಡ (ಚ) [2] ಮಪರ ಚರಣ (ಗ) [3] ರಾಮನನಾ (ಗ) [4] ಕಾಗಸುತ ಚತುಷ್ಟಯರುಗಳಂ (ಗ ಚ) [5] ಲವೊಂ (ಚ) [6] ವಸ (ಚ) [7] ತ್ತು (ಚ) [8] ತಾ (ಕ)

ಚಂಪಕಮಾಲೆ

ಬರುತಿರೆ ತಾಯಿತಂದೆ ತೃಷೆಯಾಯ್ತೆನಲಾ ಪಿತೃಭಕ್ತ[1]ಚೌ[1]ಡಲಂ
ತ್ವರಿತವೊಳಂಬುವಂ ತಹೆನೆನುತ್ತವರಂ ಇಳುಪುತ್ತೆ ತಕ್ಷಣಂ
ಕರಗವ ಕೊಂಡುಪೋಗಿ ಕೊಳವೊಳ್ ಜಲಮಂ ನೆಜು[3] ತೀವಲಾ [2]ರವಂ[2]
ಕರರವ[3]ಗೆತ್ತು[3] ಭೂಮಿಪತಿಯಜ್ಞತೆಯಿಂ ತೆಗಪೆಚ್ಚನಾತನಂ ೮೪

ಮಹಾಸ್ರಗ್ಧರೆ

[4]ಇಸಲಾಗಳ್ ಚೌ[4]ಡಲಂ ಕಣ್ಣಳನರಳಿಸುತಂ ತಾಯುಗುಂ ತಂದೆಗಿನ್ನಾ
ರಸುವಂ ಕೊಂಡಾತನಾರೋ ಹರಿಹರಿ ಎನಲಾ ಭೂಪನೈತಂದು ಹಾಹಾ
ಋಷಿಯೆಂದಾಂ ಕಂಡುದಿಲ್ಲೆಂದೆನುತೆ ದಶರಥಂ ಬಾಣಮಂ ಕಿತ್ತು ಮತ್ತಾ
ವಸುಧಾಧೀಶಂ ಮಹಾನೋ[5]ವಿನೊಳಿರೆ[5] ಮುನಿಪಂ ಶಾಪಮಂ
ಕೊಟ್ಟನಾಗಳ್ ೮೫

ಕಂದ : ತಂದೆ[6]ಯುಮಂ ತಾಯಿಯುಮಂ[6]
ಕೊಂದೈ ಕಡುಪಾ[7]ಪ[7]ಕರ್ಮಿ ಮರಣದ ನಿ[8]ನ್ನಾ[8]
ನಂದನರ ಕಾಣದಿರು ಪೋ
ಗೆಂದೆನುತುಂ ಶಾಪವಿ[9]ಟ್ಟು ನೀಗಿದನಸುವಂ[9] ೮೬

ಶಾಪಹತನಾಗಿ ದಶರಥ
ಭೂಪಂ ಪುರಕ್ಕೆದೆ [10]ಪೋದ[10]ನಿತ್ತಲ್ [11]ಕುಶಿಕಜ[11]
ನಾ ಪರಮಪುರುಷ ರಘುಕುಲ
ದೀಪಂಗುಪದೇಶವಿತ್ತು ಶಾಸ್ತ್ರಕ್ರಮದಿಂ ೮೭

ಸಕಲ ವೇ[12]ದಾರ್ಥ[12]ಶಾಸ್ತ್ರ
ಪ್ರಕರಮ ಶಸ್ತ್ರಾಸ್ತ್ರ ವಿದ್ಯೆಯೆಲ್ಲಮನಾ ಕೌ
ಶಿಕಮುನಿಪ ರಾಮಚಂದ್ರಗೆ
ತ್ರಿಕರಣಶುದ್ಧಾತ್ಮನಾಗಿ ಕಲಿಸಿದನೊಲವಿಂ ೮೮

ಮತ್ತಂ ಕೌಶಿಕನಾ [13]ಭೂ
ಪೋ[13]ತ್ತಮರಿಗೆ ಶಸ್ತ್ರ ವಿದ್ಯೆಯಂ [14]ದಯೆಯಿಂ ವೇ
ಟುತ್ತಿ[14]ರ್ದಂ ತಾಂ ಪೂರ್ವದೆ
ಕ್ಷತ್ರತ್ವಂ ಬಲ್ಲನಾಗಿಯತಿಸಂತಸದಿಂ ೮೯

---

1 ನೌ (ಕ) 2 ಧ್ವನಿ (ಚ) 3 ವೆಂಮ (ಚ) 4 ಎಸಗಲಾಗಂ ಚೌ (ಗ ಚ)
5 ವೃತವಿುರೆ (ಚ) 6 ತಾಯಿಗಳು ಸಹಿತಂ (ಚ) 7 ಪಿ (ಚ) 8 ನ್ನಯ (ಚ)
9 ತ್ತು ಪ್ರಾಣವಬಿಟ್ಟಂ (ಗ ಚ) 10 ಪೊಕ್ಕ (ಗ) 11 ಕೌಶಿಕ (ಗ ಚ) 12 ವಾಂತ (ಗ)
13 ಕುವರೋ (ಗ ಚ) 14 ಕೃಪೆಯಿಂ ಕಲಿಸುತ್ತಿ (ಗ)

ನಾನಾ ವಿ[1]ದ್ಯೆಯನೊಱಿಕಿದಂ[1]
ದಾನವ[2]ಸೂದನಗೆ[2] ರಾಮಚಂದ್ರ[3]ಗೆ ಮುನಿಪಂ
ಆನಂದಂ ಮಿಗೆ ಅಕ್ಷಯ[3]
ತೂಣೀರಮುಮೆಂಬ ಸಾಯಕವನೊಲಿದಿತ್ತಂ ೯೦

ತೂ[4]ಣೀರವಮೆಂ[4]ಬಕ್ಷಯ
ಬಾಣಕ್ಕಂ ಸಾರ್ಥಮಾದ ಕಡು[5]ಪಿನ ನೂಱಿಂ[5]
ತೂ[6]ಣೀರಧನುವ[6] ಮುನಿಕುಲ
ಮಾಣಿಕ ಕುಶಿಕಜನು ಕೊಟ್ಟನಾ ರಘು[7]ಪತಿಗಂ[7] ೯೧

ಕೈಕೊಳಿಸಿ ರಾಮಚಂದ್ರಂ
ಗಾ ಕೌಶಿಕ ಚಾಪಶರಮನನುನಯದಿಂದಂ
ಬೇಕಾದ ಯಜ್ಞಮಂ ಸಲೆ
ನೀಂ ಕೃಪೆಯಿಂ ರಕ್ಷಿಸೆಂದನಾ ಮುನಿನಾಥಂ ೯೨

ಎನಲಾ ಮಾತಂ ಕೈಕೊಂ
ಡನು ದಶರಥರಾಮ ಲಕ್ಷ್ಮಣನು [8]ಕುಶಿಕಜನೊಡ
ನ[8]ನುನಯದೆ ಯಜ್ಞಕಂ ಭೋಂ
ಕನೆ ಪೋದರ್ ದಿವ್ಯಮುನಿಗಳೆಲ್ಲರ್ ಸಹಿತಂ ೯೩

ಕರೆಯಧ್ವರಿಯಂ ಮೈತ್ರಾ
ವರು[9]ಣಿಯು[9] ಬರಹೇೞು ಪುಷ್ಕಸಮಿಧೆಗಳಿಂದಂ
[10]ಪೊರೆಯಲಿ[10] ದಮುನ[11]ನನೆ[11]ನುತುಂ
ಶರಮಂ ತಿರುಪುತ್ತ[12]ಲಿ[12]ರ್ದನಾ ರಘುರಾಮಂ ೯೪

ವಚನ : ಆ ಸಮಯದೊಳ್

ಚಂಪಕಮಾಲೆ
ಕೆದರ್ದಲೆ ಕೆಂಡಮಂ ಕರೆವ ಕೆಂಗಿರಿಗಣ್ ಕಿವಿಗಾಂತ ಬಾಯಿಯು
ಬ್ಬಿದ ತುಟಿ ಜೋಲ್ದ ಲಂಬಗಿವಿ ನೀವಿಗಳೆಲ್ಲ ಕರಂ ಸಡಿಲ್ದ ಕೊ
ಬ್ಬಿದ ಬಸುಱಿಂ ಕೆಲಕ್ಕೊಲೆವ ಪೆರ್ಮೊಲೆ ಕೊಂಕಿದ ಕೋರದಾಡೆ ಪೆ
ರ್ಚಿದ ನಗೆ ಬೆಳ್ಳನಾದ ಪೊಱಿಸಲ್ಗಳ ತಾಟಕಿ ಬಂದಳಾಕ್ಷಣಂ ೯೫

---

1 ದ್ಯವಕಲಿಸಿದ (ಗ ಚ) 2 ರಿಪು (ಗ ಚ) 3 ಗಾ ಮುನಿನಾಥಂ ಶಾಸ್ತ್ರರಾಗ ದೊಳಗಕ್ಷಯು (ಗ ಚ) 4 ಚಿತ್ರವಮೆಂ (ಗ) 5 ಪಿಂ ಸಾಸಿರ (ಗ) 6 ಣಧನುಘುನವ (ಗ) 7 ಜಂಗೆ (ಕ) 8 ಕೌಶಿಕಸಹಿತ (ಗ) 9 ಣನ (ಗ ಚ) 10 ಸ್ಫುರಿಸಲಿ (ಗ ಚ) 11 ಸನೆ (ಚ) 12 ಮಿ (ಚ)

ವಚನ : ಅಂತು ಬರ್ಪುದುಂ ಬಹಳ ಪಿಶಾಚಬಲಂ ನೆರೆಯೆ

ಮತ್ತೇಭವಿಕ್ರೀಡಿತ

ಇವಳೇ ತಾಟಕಿ ಯಜ್ಞಮಂ ಕೆಡಿಸ ಬಂದಾ ದುಷ್ಟೆ ಪೆಣ್ಗೊತ್ತುಮಂ
ತವೆ ಕೊಂದಪ್ಪುದಿದಾವ ಶೌರ್ಯ ಮುನಿಮುಖ್ಯಾನುಜ್ಞೆಯಲ್ಲಾ ಎನು
ತ್ತವೆ ಕೋದಂಡವ ನೀವಿ ಜೇವೊಡೆಯಲಲ್ಲಾಡಿತ್ತು ಹೇಮಾದ್ರಿ ಬಾ
ಸವಿಯಂ ನೋಡು ಸರಲ್ಗಳಾಹುತಿಯನೆಂದಾರ್ದೆಚ್ಚನಾ ರಾಘವಂ ೯೬

ವಚನ: ಅಂತು ಶ್ರೀ ರಾಘವೇಶ್ವರಂ ತಾಟಕಿಯನೆಸಲ್

ಚಂಪಕಮಾಲೆ

ಕವಿದುದು ರಕ್ಕಸವ್ರಜಮುಘೇ ಎನುತುಂ ಸಿಡಿಲೇಱ್ಗಿಯುಂ ಮಹಾ
ಹವಕಿದಿರಾಗಿ ಚಾಪ ಶರ ಮುದ್ಗರ ಭಲ್ಲೆಯ ಪಿಂಡಿವಾಳ ಮಿಂ
ಚುವ ಗದೆಯಂಕುಶಂ ಸುರಗಿ ಶಲ್ಲೆಯ ಶೂಲ ಕೃಪಾಣ ಬಾಣದಿಂ
ತಿವಿದೆಱಗುತ್ತಲೊತ್ತಿದರು ರಾಮನನಾ ದನುಜೇಂದ್ರಭೀಮನಂ ೯೭

ವಚನ: ಅಂತು ರಾಕ್ಷಸ[1]ಕುಲಂ[1] ರಾಮ[2]ನಂ[2] ಮುತ್ತೆ

ಕಂದ : ಗಜ[3]ಕುಲಮಂ[3] ಪಂಚಾಸ್ಯಂ
ಭುಜಂಗಸಂಕುಲ[4]ಮ[4] ವೈನತೇಯಂ ಶೈಲ
ವ್ರಜಮಂ ಸುರಪತಿ ಗೆಲ್ವೊಲ್
ಭುಜಬಲದಿಂ ರಾಮನೊರ್ವನನಿಬರ[5]ಗೆಲ್ದಂ[5] ೯೮

ವಚನ: ಅಂತು ಪಿಶಾಚಬಲಂ ನುರ್ಗಪ್ಪುದುಂ ತಾಟಕಿ ಕಂಡು

ಕಂದ : ನೀಡುತ್ತುಂ ನಾಲಗೆಯಂ
ಜಾಡಿಸುತುಂ ಮೆಯ್ಯನೆಜ್ಞಶಾಲೆಗೆ ಕೈಯಂ
ಜೋಡಿಸುತಂ ನಡೆವವಳಂ
ನೋಡಲ್ ತೊಡಗಿತ್ತು ಮಖಗೃಹಾಂತದ ಪಾರ್ವರ್ ೯೯

ಉತ್ಪಲಮಾಲೆ (ಪಂಚಪಾದ)

ನೋಡಿದಿರೇ ಉಪಾಧ್ಯರೆ ಇದೆಲ್ಲಿಯ ಕೋಟಲೆ ಹೋಹವೇಱಿಂ
ನ್ನಾಡುವುದಕ್ಕಶಕ್ಯ ಬಿಡಿ ದಕ್ಷಿಣೆಯಾಸೆಯ ದೇವಪೂಜೆಯಂ
ನೀಡಿ ಯಮಂಗೆ ದುಸ್ತರ ಬಿಸಾಡಿರೆ ದರ್ಭೆಯ ಮುತ್ತೆ ಯಜ್ಞಮಂ
ಮಾಡಿದರೇನುಪೋಷಮಿವಳಾಹುತಿಗೊಳ್ಳದೆ ಮಾಣಳಿನ್ನನೆಂ
ದೋಡುವುದಕ್ಕೆ ಧೋತ್ರಗಳ ಸಂವರಿಸಲ್ ದೊರೆಕೊಂಡರಾಕ್ಷಣಂ ೧೦೦

---

1 ಬಲಂ (ಚ) 2 ನಂ ಸುತ್ತಿ (ಗ ಚ) 3 ಯೂಥವ (ಗ) 4 ವ (ಗ) 5 ತಱಿದಂ (ಗ)

ವಚನ: ಅಂತಾದ ಕಳವಳನುಂ [1]ಕುಶಿಕಜಂ[1] ನಿಲಿಸುತ್ತಿರಲಿತ್ತಲ್

ಮತ್ತೇಭವಿಕ್ರೀಡಿತ

ಘಡ ಎಂಪಾರ್ದು [2]ಶರಂಗಳಂ[2] ತೊಡ[3]ರ್ಚಿ[3] ಬಾಣಾಸಾರದಿಂ ದೈತ್ಯೆಯಾ
ಮುಡಿಯೊಳ್ ಮುಂ[4]ಗಡೆ[4]ಯೊಳ್ ಭುಜಾಗ್ರದೆಡೆಯೊಳ್ ಭಾಳಾಕ್ಷಿಯೊಳ್ ಕಕ್ಷದೊಳ್
ತೊಡೆಯೊಳ್ ತೋಳ್ಗಳೊಳಾಸ್ಯದೊಳ್ [5]ಚುಬುಕ[5]ದೊಳಾ [6]ವೋಷ್ಠದೊಳ್[6] ಕುಕ್ಷಿಯೊಳ್
ಬಿಡು ನಾರಾಚವ ಹೂಟಂ ತಾಟಕಿಯನೆಚ್ಚಂ ರಾಮರಾಮಾವರಂ ೧೦೧

ಕಂದ: ತಾಟಕಿ [7]ಎಲ್ಲಿ[7]ದಳೆನುತಾ
ಸ್ಫೋಟಿಸಿ ಧನುಕೋಟಿಯಿಂದಲಾ ರಕ್ಕಸಿಯಂ
ಮಿಾಟಿತ್ತಿ ಹೊಯ್ದು ಕೆಡಹಿದ
ನಾಟಕಧರನತಿಪ್ರತಾಪ ರಘುಕುಲದೀಪಂ ೧೦೨

ಕೊಂದು ದಿತಿಸುತರನೆಲ್ಲರ
ನಂದಾ ತಾಟಕಿಯ ಪ್ರಾಣಮಂ ಪಾಱಿಸುತಾ
ನಂದದೆ ಕೌಶಿಕಮುನಿ ಮಖ
ವಂ ದಣಿವೊಲ್ ಕೊಂದು ರಾಕ್ಷಸ[8]ರನೆ[8]ಲ್ಲರುಮಂ ೧೦೩

ವಚನ: ಇಂತು ರಾಕ್ಷಸರೆಲ್ಲರಂ ಶಿಕ್ಷಿಸಿ ರಾಮಂ ಯಜ್ಞಮಂ ಕೈಕೊಂಡು ಆಗುಮಾಡಿ ಕೊಳ್ಳಿ[9]ರೆನಲ್[9]

ಕಂದ: ಎನಲಾ ಕೌಶಿಕ ಮುಖಮುಂ
ಮನದಣಿವೊಲ್ ಮಾಡಿರೆಂದು ಕರೆಸಿದನೆಲ್ಲಾ
ಮುನಿಗಳ ಶಾಸ್ತ್ರಕ್ರಮದಿಂ
ಘನಯಜ್ಞವ ರಚಿಸಿ ತೃಪ್ತಿಪಡಿಸಿದನಾ[10]ಗಳ್[10] ೧೦೪

ವಚನ: ಅಂತು ತಾಟಕಿಯಂ ನಿರ್ಘಾಟಿಸಿ ಕೊಂದು ರಾಕ್ಷಸರೆಲ್ಲರಂ ಶಿ[11]ಕ್ಷಿಸಿ[11] ಕಾಕಾಸುರನ ಕಣ್ಣಂ ಕಿಡಿಸಿ ನಿರ್ವಿಘ್ನತೆಯಿಂ ಯಜ್ಞಮಂ ಸಂಪೂರ್ಣತೆಯಂ ಮಾಡಿ

---

[1] ಕೌಶಿಕಮುನಿ (ಗ) [2] ಸರಳ್ಗಳಂ (ಗ) [3] ಚಿ (ಕ) [4] ದಿ (ಗ ಚ)
[5] ಭುಜಕರ (ಗ) [6] ನಾವೋಷ್ಠಯೊಳ್ (ಗ) [7] ಯೋ (ಗ) [8] ರುಮಂ (ಚ)
[9] ಯೆನ್ನಲೂ (ಚ) [10] ಗಂ (ಚ) [11] ಕ್ಷೆಯಂ ಮಾಡಿ (ಚ)

ಕಂದ : ಇಕ್ಷ್ವಾಕುವಂಶತಿಲಕಂ
ಅಕ್ಷಯತೂಣೀರನೆಂಬ ಬಾಣದಿನೆಲ್ಲಾ
ರಾಕ್ಷಸರ ಮಡುಪಿ ಯಜ್ಞವ
ರಕ್ಷಿಸಿದಂ ತಾರ್ಕ್ಷ್ಯವಾಹನಂ ರಘುರಾಮಂ ೧೦೫

ಎಂ[1]ದು[1] ಕೊಂಡಾಡಿ[2]ತಾ ಮು[2]ನಿ
ವೃಂದಂ ಕೌಶಿಕ ವಸಿಷ್ಠ ಸಹಿತಂ ಕರುಣಾ
ಸಿಂಧು ಶ್ರೀರಾಮಚಂದ್ರನ
ಮುಂದೊಂದುದ್ವಾಹವಾರ್ತೆ ಪಸರಿಸಿತಾ[3]ಗಳ್[3] ೧೦೬

ವಚನ : ಅದೆಂತೆಂದೊಡೆ

ಕಂದ : ಕೆಱೆ ಬಾವಿ [4]ಬೆಂ[4]ಚೆ ಸ[5]ರದಿಂ[5]
ತುಱುಗಿದ ನಂದನದ ಕುಸುಮವಾ[6]ಟೆ[6]ಗಳಿಂದಂ
ನೆಱೆ[7]ಯುವ ಕಲಮ[7]ಕ್ಷೇತ್ರದಿ
[8]ನು[8]ಱೆ ರಂಜಿಸುತಿಹುದು ಮಿಥಿಲೆಯೆಂಬಾ ನಗರಂ ೧೦೭

ಸಕಲಸುರಭವನದಿಂದಂ
ತ್ರಿಕರಣಶುದ್ಧಾತ್ಮರಖಿಲ ವಿ[9]ದ್ಯಾ[9]ಧಿಕರಿಂ
ಅಕಳಂಕ ಸ್ತ್ರೀಕದಂಬದೆ
ನಿಖಿಲೈಶ್ವರ್ಯದೊಳೆ ರಂಜಿಪುದು ಮಿಥಿಲಪುರಂ ೧೦೮

ಆ ಪುರ[10]ವರದಧಿ[10]ನಾಯಕ
ಭೂಪಕುಲೋತ್ತಮ ವಿದರ್ಭದೇಶಾಧಿಪ ಶೌ
ರ್ಯೋಪೇತ ಜನಕನೆಂದೆಂ
ಬಾ ಪೆಸರಿಂದಿರ್ದನಧಿಕ ಸಂತಸದಿಂದಂ ೧೦೯

ವಚನ : ಅಂತಿರ್ಪ ಜನಕ ಚಕ್ರೇಶ್ವರಂ ತನ್ನ ಮಗಳಪ್ಪ

---

[1] ದುಂ (ಗ) [2] ಮು (ಗ) [3] ಗಂ (ಗ ಚ) [4] ಓಂ (ಚ) [5] ರಿಯಿಂ (ಗ)
[6] ದಿ (ಗ) [7] ವ ಕಳವೆಗಳ (ಗ ಚ) [8] ನೆ (ಗ) [9] ಶಾಸ್ತ್ರ (ಗ) [10] ದ (ಗ)

ಕಂದ : ಜಾನಕಿಯೆಂಬಾ ಪೆಸ[1]ರಿಂ[1]
ಭೂನಾಥಂ ಜನಕ ಸಲಹು[2]ತಿರೆ ದಶವರ್ಷಂ[2]
ಮಾನಿನಿಗಾಗಲ್ ಸರಸಿರು
ಹಾನನೆಯ [3]ಸಯಂಬರಕ್ಕೆ[3] ಬರವೇೞೆನುತುಂ ೧೧೦

ಚಂಪಕಮಾಲೆ

ಬರೆಸಿದನೋಲೆಯುಂ ಸಕಲ ರಾಜಸಮೂಹಕೆ ಮತ್ತೆ ರಾವಣಾ
ಸುರ ಮೊದಲಾದ ದಾನವರಿಗುಂ ಮುನಿವರ್ಗಕೆ ಮತ್ಕುಮಾರಿ ಸೌಂ
ದರಿ ವರಸೀತೆ ಈಕೆಯ ಸಯಂಬರಕ್ಕೈದುವುದೆಂದು ಚಾರರಂ
ಕರೆಯಲಿಕಟ್ಟಿದಂ ಜನಕಭೂಪತಿ ಲೇಖನಮುಂ ದಿಗಂತಕಂ ೧೧೧

ಕಂದ : ಕರೆಯ ಕೞುಪಿದರೆ ನಾನಾ
ಧರಣೀಶ್ವರರೈವೆ ಪೊಕ್ಕರಾ [4]ಮಿಥಿಲಾವರ
ಪುರಮಂ[4] ಕೌಶಿಕನಾ ಮುರ
ಹರ ಶ್ರೀರಘುರಾಮಚಂದ್ರನೊಡನಿಂತೆಂದಂ ೧೧೨

ಏಳಿಂ [5]ಮಿಥಿಲೆಗೆ[5] ಜನಕ ನೃ
ಪಾಲನ ಸುಕುಮಾರಿ ಸೀತೆಯ ಸ್ವಯಂವರಮಂ
ದೋಲೆಗಳಿವೆಯೆನೆ ರಾಮಂ
ಕೇಳಿದ ಕುಲಗುರು ವಸಿಷ್ಠನಡಿಗೆಱಗುತ್ತುಂ ೧೧೩

ವಚನ : ಅಂತು ವಸಿಷ್ಠ ವಿಶ್ವಾಮಿತ್ರರ್ ರಾಮಚಂದ್ರಂ ಕೇಳಲೊಡನಿಂತೆಂದರ್

ಚಂಪಕಮಾಲೆ

ಧರಣಿಪರಾಮ ಕೇಳು ನೆಱೆ ಪೇೞ್ವೆ ಪುಲಸ್ತ್ಯವಿಧಾತ್ರಜಾತ ಭೂ
ಸುರ ಕುಲರತ್ನ ವಿಶ್ರವಸುವಾತನ ಪುತ್ರನು ರಾವಣಾಸುರಂ
ಶರಧಿಯೊಳಾ ತ್ರಿಕೂಟಗಿರಿಯಗ್ರದೆ ರಂಜಿಪ ಲಂಕೆಯೆಂಬ ತ
ತ್ಪುರದೊಳಗಿರ್ದು ದೇವಕುಲನಿಗ್ರಹಮುಂ ನೆಱೆಮಾಳ್ಪನಾವಗಂ ೧೧೪

ವಚನ: ಅಂತು ರಾವಣಾಸುರಂ ಸಂತತಂ ದೇವಾದ್ಯರಂ ಲೆಕ್ಕಿಸದೆ ವಸುಮತಿಯೆಲ್ಲ ಮನಸಮಾನದಿಂದಾಳುತ್ತುಂ ಮಹಾವಿಭೂತಿಯಿಂ ಪುತ್ರಕಾಮೇಷ್ಟಿಯಂ ಮಾಡಬೇಕೆಂದು ಅರ್ತಿಯಿಂ ಯಜ್ಞಮಂ ಮಾಡುತಿರ್ದನದೆಂತೆಂದೊಡೆ

---

1 ರಿನ (ಗ) 2 ತ್ತಿರೆವರುಷಂ (ಗ) 3 ಸ್ವಯಂವರಕ್ಕೆ (ಗ ಚ) 4 ವಿದರ್ಭಪುರವರವಂ (ಗ) ಮಿಥಿಲಾಪುರವರವಂ (ಚ) 5 ಮಿಥುಳೆಯೊಳ್ (ಚ)

ಉತ್ಪಲಮಾಲೆ

ರಾವಣ ಪುತ್ರಿಕಾಸ್ಯದ ಮಹಾಮುಖಮಂ ನಿಜಿತಿಮೂಡಲಾಕ್ಷಣಂ
ಪಾವಕಸಂದೆ ಪುಟ್ಟಿದಳು ಕನ್ಯಕೆ ಸೀತೆಯ ಕಂಡು ರಾಕ್ಷಸಂ
ನೋವ್ರತಲೇನನಾಂ ಬಯಸಲೇನೆನಗಾದುದೆನುತ್ತೆ [1]ಚಿಂತೆಯಿಂ
ದಾ[1] ವಿಬುಧಾರಿ ದಿಮ್ಮಿದರ ಕೇಳಲಿಕದ್ಭುತವೆಂದು ಪೇಱದರ್ ೧೧೫

ವಚನ : ಅಂತು ಪೇಱಿ[3]

ಉತ್ಪಲಮಾಲೆ

ದುಷ್ಟದುರಾತ್ಮನಾದ ದಶಕಂಠನದಂ ನಿಜಿತಿಕೇಳ್ದು ಪುತ್ರಿಕಾ
ಮೋಷ್ಟಿಯಿನರ್ತಿಯಿಂ ಸುತರ ಪೆತ್ತಪೆನೆಂದೆನೆ ವಾರ್ಧಿಜಾತೆಯೇ
ಪುಟ್ಟಿದಳಿಲ್ಲಿ ತತ್ಸುತೆಯಿನೊಪ್ಪುವ ಲಂಕೆಗೆ ಹಾನಿಯೆಂದು ತಾಂ
ಪೆಟ್ಟಿಗೆಯಲ್ಲಿ ತುಂಬಿ ಜಲಧೀತೆರೆಯೊಳ್ ನಿಜಿ[3] ನೂಂಕೆ ದುಃಖದಿಂ ೧೧೬

ಕಂದ : ಈಕೆಯ ಕತದಿಂ ಲಂಕೆಯು
ಕಾಕಹುದದ್ಭುತವೊಡರ್ಚುಗೆನುತುಂ[2] ದೈತ್ಯಂ
ಆ[2] ಕುವರಿಯನಂಬುಧಿಯೊಳ್
ನೂಕೆನಲಾ ಶಿಶುವ[3]ನಬ್ಧಿಯೊಳ್ ನೂಕಲೊಡಂ[3] ೧೧೭

ಶರಧಿ ತೆರೆಯಿಂದೆ ನೂಂಕಲ್
ಭರದಿಂ ಕೂಲಕ್ಕೆ ಬಂದು ಪೆಟ್ಟಿಗೆ ಪೂಱ
ಲ್ಕಿರಪೆ ಲಾಂಗಲಕೆ [4]ಸಿಲ್ಕಿತು[4]
ಬರೆ ಜನಕಂ ಸಾಕುತಿರ್ದನತಿಸಂ[5]ಭ್ರಮ[5]ದಿಂ ೧೧೮

ವಚನ : ಅಂತು ಪೆಟ್ಟಿಗೆ ಲಾಂಗಲಪದ್ಧತಿಯಾದ ಸೀತೆ[6]ಯುಂ[6] ಕಾಣಿಸೆ ತತ್ಕತದಿಂ ಸೀತೆಯೆಂದು ಭೂಮಿಯೊಳ್ ಪುಟ್ಟಿದುದಱಿಂದ ಭೂಮಿಜೆಯೆಂದು ಜನಕನ ದೆಸೆಯಿಂ ಜಾನಕಿಯೆಂದು ಮಿಥಿಲಾಪುರ ಸಂಬಂಧದಿಂ ಮೈಥಿಲಿಯೆಂದು ವಿದರ್ಭವೇಶದ ಬಗೆಯಿಂ ವೈದೇಹಿಯೆಂದು ಆಕೆಗೆ ಪೆಸರನಿಟ್ಟು ಜನಕರಾಯಂ ರಕ್ಷಿಸುತಿರ್ಪನಾ ಕನ್ಯಕೆ ನಿನಗೆ ವಧುವಾಪವಳು ಪೋಪ[7]ಮೇಳಿವೆಂದು[7] ಶ್ರೀರಾ[8]ಮಚಂದ್ರಂಗೆ[8] ಪೇಱಿ[9] ವಸಿಷ್ಠ ವಿಶ್ವಾಮಿತ್ರ ಋಷಿ[9]ಗಳು[9] ಸಹ ರಾಮಲಕ್ಷ್ಮಣರ್ ಕೂಡಿ ಬರುತಿರೆ

---

[1] ಚಿಂತಿಸುತ್ತಾ (ಗ) [2] ತಂ ರಾವಣನೀ (ಗ ಚ) [3] ನುದಧಿಯೊಳೆ ಹಾಕಲೊಡಂ (ಚ) [4] ಸಿಕ್ಕಿದು (ಚ) [5] ತಸ (ಚ) [6] ಯೊಳ್ (ಗ) ಯು (ಚ) [7] ವೇಳೆಂದು (ಚ) [8] ಮಂಗೆ (ಚ) [9] ಜನಂಗಳು (ಚ)

ಕಂದ : ಪಲವು ನದೀನಿವಹಂಗಳ
ಪಲವಗ್ರಾಗಳ ಪಲವು ಪತ್ತನಚಯಮುಂ
ಪಲವು ಮಹಾದ್ರಿಗಳಂ ಮಿಗೆ
ಕಳೆಯುತ್ತುಂ ಗೌತಮಾಶ್ರಮಕೆ ನಡೆತಂದರ್ ೧೧೯

ಬಂದು ಗೌತಮಿಯ ತೀರದೆ
ನಿಂದೀಯಾಶ್ರಮಮಿದಾರದೆನುತುಂ ರಾಮಂ
ಮುಂದಿರ್ದ ಕಲ್ಲ ರೂಪೇ
ನೆಂದು ಮುನೀಶ್ವರರ ಕೇಳ್ದೊಡವರಿಂತೆಂದರ್[1] ೧೨೦

ಇದು ಗೌತಮಮುನಿಯಾಶ್ರಮ
ವಿದು ತಾನಾ ಮುನಿಯ ವಧುವಹಲ್ಯೆ ಗುಣಾನ್ವಿತೆ
ಇದು ಬೇಱೊಂದಾದ ಕತಾಂ
ತ್ರದೆ[2] ಶಿಲೆಯಾದುದನು ಪೇೞ್ವೆವೆಲೆ ರಘುನಾಥಾ ೧೨೧

ವಚನ: ಅದೆಂತೆನೆ

ಕಂದ : ಗೌತಮವರಮುನಿವಧು ತಾ
ನೀ ತರುಣಿಯಹಲ್ಯೆ ವಿಭ್ರಮದೆ ಸೊಬಗಿಂದ
ತ್ಯಾತಿಶಯ ರೂಪಿನಿಂದಿರೆ
ಪ್ರೀತಿಯೊಳಾ ಮುನಿಗವಿಾಕೆಗಂ ಸುತಳಾದಳ್[3] ೧೨೨

ಅಂಜನೆಯೆಂಬ ಕುಮಾರಿ ಪ್ರ
ಭಂಜನಗಂ[4] ರಾಣಿಯಾದಳಿತ್ತಲಹಲ್ಯೆಯು[5]
ರಂಜಿಸುತಿರೆ ಗೌತಮಮುನಿ
ಗಂಜದೆ ದೇವೇಂದ್ರ ನೆರೆದನಾತುರದಿಂದಂ ೧೨೩

ತೋಟಕ

ಪರನಾರಿಯ ಕೂಟದ ದೋಷದೊಳುಂ[6]
ಸುರರಾಜನು ತನ್ನಯ ಕಾಯದೊಳುಂ
ಪರಮುದ್ರೆಯ ತಾಳಿದ ಹಾಸ್ಯದೊಳುಂ
ನಿರುತಂ ಲಘುವಾದನು ಲೋಕದೊಳುಂ ೧೨೪

---

1 ಳ್ದರ (ಚ) 2 ದಲಿದು (ಚ) 3 ೯ಂಹೂ (ಚ) 4 ಸಿಗೆ (ಕ) 5 ಲ್ಯಾ (ಕ)
6 ಳಾ (ಕ)

ಕಂದ : ಪರಸತಿಯ ನೋಡಲಾಗದು
ಪರಸತಿಗೆಳಸಿ[1]ದೊಡೆ[1] ಕೇಡುತಪ್ಪದದೆಂ[2]ತೆನೆ:
ಪರಸತಿಯಹಲ್ಯೆಯಿಂದಂ
ಪರರುಪಹಾಸಕ್ಕೆ ಸುರಪ ತಾನೊಳಗಾದಂ ೧೨೫

ರಹದಿಂದಲಿಂದ್ರ ಸತಿಯು
ಪ್ಪಹಲ್ಯೆಗಂ ಗರ್ಭದಿಂದಲುದ್ಭವನಾದಂ
ಬಹಳ ಬಲಶೌರ್ಯಯುತನೀ
ಮಹಿಯೊಳಗಪ್ರತಿಮ ವಾಲಿಯೆಂಬಾ ಪೆಸರಿಂ ೧೨೬

ಬೆಳೆಯುತಿರಲಭ್ರದಿಂದಂ
ಜಲಜಸಖಂ ಕಂಡನೀಯಹಲ್ಯೆಯ ಸೊಬಗಿಂ
ಗೊಲಿದು ನಿಲಲಾಱದಲ್ಲಿಂ
ದಿಳಿದೀಕೆಯ ನೆರೆದ ಗೌತಮನ ರೂಪಿಂದಂ ೧೨೭

ಆ ವಧುವ ಮಱಸಿ ಕೂಡೆ ವಿ
ಭಾವಸುವಿಗೆ ರಾಹು ಕಿಲ್ಬಿಷಂ ಸಂಭವಿಸಿ
ತ್ತೀ ವನಿತೆಯು ಜಠರದೆ ಸು
ಗ್ರೀವಂ ಜನಿಸಿದನು ಬೆಳೆಯುತಿರಲೊಂದುದಿನಂ ೧೨೮

ಗೌತಮನು ನದಿಗೆ ಪೋಗು
ತ್ತಾ ತನುಜರನೆತ್ತಿ ಕೊಂಡನಂಜನೆಯುಂ ತಾಂ
ಭೂತಲದೆ ನಡೆಸುತ್ತೈತರ
ಲಾ ತನುಜೆ ಮನಸ್ಸಿನಲ್ಲಿ ನೋಯುತ್ತೆಂದಳ್ ೧೨೯

ಎಲೆ ತಂದೆ ನಿನಗೆ ಜನಿಯಿಸಿ
ದಳ ನೆಲ[3]ದೊಳು[3] ನಡೆಸಿಯನ್ಯಜಾತರ ನೀಂ ಸೆಗ
ಲಲಿ ಪೊತ್ತ್ಯದುವೆಯೆನುತುಂ
ಲಲನೆ ಮನಂ ನೊಂದು ನುಡಿಯಲದು ಹೇಗೆಂದಂ ೧೩೦

---

1 ದರೆ (ಚ) 2 ತಾ (ಕ) 3 ದಲಿ (ಚ)

ಆದೊಡೆಲೆ ತಂದೆ ನೀ ಕೇ
ಳಾ ದಿವಿಜೇಶ್ವರಗೆ ವಾಲಿ ಸುಗ್ರೀವಂ ತಾ
ನಾದಿತ್ಯಗಾದನಿದನಮ್ಮ
ತೋದರಿ ಗೌತಮಿಯೊಳದ್ದಿ ಭಾವಿಪುದೆಂದಳ್ ೧೩೧

ಎನಲು ಗೌತಮಿಯ ತೀರಕೆ
ಮುನಿನಾಥಂ ಬಂದು ಸುತರ ಮುಳುಗಿಸ[1]ಲಾಕ್ಷಣ[1]
ವನಚರರಾದರ್ ಮತ್ತಂ
ಜನೆಯುಮನದ್ದಲ್ಕೆ ನಿಜದಲಾ ಸುತೆಯಿರ್ದಳ್ ೧೩೨

ಇರಲಾ ಗೌತಮ [2]ಮುನಿವರ[2]
ಭರದಿಂದರ್ಭಕರು ಸಹಿತ ನಿಜಮಂದಿರಕಂ
ಬರಲಹಲ್ಯೆ ಸುತರ ಕಂಡ
ಚ್ಚರಿವಟ್ಟಳಿದೇಕೆ ಕಪಿಗಳಾದರೆನುತ್ತುಂ ೧೩೩

ಬೆಸಗೊಂಡಳಹಲೆ ಗೌತಮ
ಋಷಿಯಂ ಸುತರೇಕೆ ಕಪಿಗಳಾದರೆನುತ್ತುಂ
ಬಿಸುಸುಯ್ಯುತಿರಲ್ ಮುನಿವಧು
ಗುಸುರಿದನಿವ[3]ರಾರ್ಗೆ ಜನಿಸಿದರ್[3] ಪೇಟಿತೆಂದಂ ೧೩೪

ದೇವ ನೀವಲ್ಲದನ್ಯರ
ಭಾವದೆ ನಾನಱಿಯೆನೆಂದಡಾ ಮುನಿನಾಥಂ
ದೇವೇಂದ್ರಗೀತಪುಟ್ಟಿದ
ತಾವರೆ[4]ಸಖಗೀತನುದಯಿಸಿದನಿದನ[4]ಱಿಯಾ ೧೩೫

ನಾನಱಿಯೆ ನಿಮಗೆ ಪೇಟ್ದ್ದರ
ಸೂನುವೆ ಕಪಿಯಾಗಲೆಂದಡಾ ಮುನಿನಾಥಂ
ಮಾನಿನಿಗೆ ಮುನಿದು ಕೋಪಿಸಿ
ನೀನೇ ಶಿಲೆಯಾಗೆನು[5]ತ್ತೆ[5] ಶಾಪವನಿತ್ತಂ ೧೩೬

---

1 ಲವರುಂ (ಕ) 2 ಮಹಾರುಷಿ (ಚ) 3 ರಾರಿಗುದಿಸಿದರ್ (ಚ) 4 ಯಾಗೆಳೆಯಗೀತನುದಸಿದನ (ಕ) 5 ತ್ತಂ (ಗ)

ಎಂದಿಗೆ ವಿಶಾಪವಹುದೆನ
ಗೆಂದೆನಲಿಕ್ಷ್ವಾಕುವಂಶದಲಿ ಜನಿಯಿಸಿ ರಘು
ನಂದನನ ಚರಣ ಸೋಂಕಿದ
ಡಂದಿಗೆ ಹಿಂಗುವುದು ಶಾಪವೆಂದ ಮುನೀಂದ್ರಂ ೧೩೭

ಅದು ಕಾರಣ[1]ದಿಂ ತವ ಸಿರಿ[1]
ಪದ ಸೋಂಕಿಂದೀಕೆಗಹುದು ಶಾಪ[1]ದ ಕೊನೆಯಿಂ
ತಿ[2]ದು ವೃತ್ತಾಂತವೆನಲ್ ಕೇ
ಳಿದ ರಘುಕುಲರಾಮಚಂದ್ರನತಿಕೃಪೆಯಿಂದಂ ೧೩೮

ಶ್ರೀರಾಮನ ಪದಸೋಂಕ
ಲ್ಕೋರಂತಿರೆ ಹಲವು ಕಾಲ ಶಿಲೆಯಾಗಿರ್ದಾ
ನಾರಿಯಹಲ್ಯೆಯುಮಾ[3]ಗಳ್[3]
ಭೋರನೆ ಮುಱಿದೆದ್ದು ಕಂಡಳಾ ರಘುಪತಿಯಂ ೧೩೯

ದೇವ[4]ನೆ ನಿ[4]ಮ್ಮಿಂ[5]ದೆನ್ನ[5]ಯ
ಹೇವಂ ಹಱಿ[6]ದ[6]ತ್ತು ಶಾಪ ಹಿಂಗಿತ್ತೆನುತುಂ
ಭಾವಕಿಯಹಲ್ಯೆ ಪೊಡಮಡ
ಲಾ ವನಿತೆಯ ಮೊಗಮ ನೆಗಪಿದಂ ರಘುರಾಮಂ ೧೪೦

ಗೌತಮಮುನಿಗೆಯಹಲ್ಯೆಯ
ಪ್ರೀತಿಯೊಳೊಲಿದಿತ್ತು ಸಕಲಮುನಿಜನ ಸಹಿತಂ
ಭೂತ[7]ಲದ[7]ಧೀಶ ರಘುಕುಲ
ಜಾತಂ ಕೊಂಡಾಡುತಿರ್ದನಾ ಮುನಿವಧುವಂ ೧೪೧

ವಚನ : ಅದೆಂತೆಂದೊಡೆ

ಕಂದ : ಸತಿಸಾಧು ನೀನೆ ಲೋಕಕೆ
ಕತೆ ನಿನ್ನದು ಪುಣ್ಯಚರಿತ್ರವೆನುತುಂ ರಾಮಂ
ಮತಿಯುತೆಯಹಲ್ಯೆಗಂದಾ
ನತನಾಗಿಯೆ ಬೀೞುಕೊಟ್ಟು ಮುಂಬರುತಿರ್ದಂ ೧೪೨

ವಚನ : ಅಂತು ಬರ್ಪಿನಂ ಮುಂದೆ

---

[1] ನಿನ್ನಯ ಶ್ರೀ (ಚ) [2] ವಿಮೋಚನ ಯಿ (ಚ) [3] ಗಂ (ಚ) [4] ನಿ (ಚ)
[5] ದಲೆ (ಚ) [6] ಯಿ (ಚ) [7] ಳಾ (ಚ)

ಮತ್ತೇಭವಿಕ್ರೀಡಿತ

ತೊಱೆಯಿಂ ಕಾಲುವೆಯಿಂ ಮಹಾವನಗಳಿಂ ಗೋಹಟ್ಟಿಯಿಂ ಶಾಲಿಯಿಂ
ಕೆಱೆಯಿಂ ಪತ್ತನವಗ್ರಹಾರ ಪುರದಿಂ ಕಾಯ್ಪಣ್ಣು ಪುಷ್ಪಂಗಳಿಂ
ದೊಱೆಗುತ್ತಿರ್ಪ ನವಾಮ್ರ ಜಂಬುತತಿಯಿಂ ವೈದೇಹದೇಶಂ ಸುಖಂ
ಗಱೆಯುತ್ತಿರ್ದುದು ರಾಮಲಕ್ಷ್ಮಣರ ಕಣ್ಗಾನಂದದಿಂ ಚಂದದಿಂ ೧೪೩

ವಚನ: ಅಂತು ನೋಡುತ್ತುಂ ಬರ್ಪಿನಂ ಮುಂದೆ

ಕಂದ: ಪರಿಪರಿಯುಪ್ಪರಿಗೆಗಳಿಂ
ನೆರೆಯುತ್ತಿಹ ರಾಜಮಂಡಲೇಶ್ವರರಿಂದಂ
ವರ ನೇಜಯ ಗುಡಿಯಿಂ ಸಿಂ
ಗರಮಾಗೊಪ್ಪಿದುದು ಮುಂದೆ ಮಿಥಿಲಾನಗರಂ ೧೪೪

ಆ ಪಟ್ಟಣದ ವಿಲಾಸಮ
ನೇ ಪೊಗೞ್ವೆಂ ಸೋಮಸೂರ್ಯವೀಥಿಯೊಳೆಲ್ಲಂ
ಧೂಪ ಪನ್ನೀರು ಸಾದನು
ಲೇಪನಮಯಮಾಯ್ತು ಕೇರಿಕೇರಿಯೊಳೆಲ್ಲಂ ೧೪೫

ಗುಡಿ ತೋರಣ ಚಿತ್ರಗಳಿಂ
ಪಿಡಿದಿಹ ನವರತ್ನ[1]ಕಲಶ[2] ಕನ್ನಡಿ ಸೊಬ[3]ಗಿಂ[3]
ಮಡದಿ[4]ಯರ[4] ವಿಲಾಸ[5]ದೆ ತಾಂ[5]
ಕಡು[6]ಸುಂದರಮಾದ[6] ನೃತ್ಯಗೀತಗಳಿಂದಂ ೧೪೬

ದೇಶಾಧಿಪರಿಗೆ ತಕ್ಕ ನಿ
ವಾಸಮನವರಿಚ್ಛೆ[7]ವಂದ[7] ವಸ್ತುವನೀವ ವಿ
ಲಾಸಿನಿಯರ ಪರುಟವಿಸಿದ
ನಾ ಸೌಭಾಗ್ಯವನು ಬಣ್ಣಿಸುವ[8]ಡೆ[8]ನ್ನಳವೇ ೧೪೭

ವಚನ: ಅಂತೆಸೆವ ಪಟ್ಟಣಮಂ ಋಷಿಸಮುದಯಂ ಬೆರಸು

---

[1] ನ್ನಿ (ಚ) [2] ಗಳಸ (ಗ) [3] ಗಿನ (ಗ) [4] ಯರುಗಳ (ಚ) [5] ದ (ಚ)
[6] ಸೊಬಗಿನ ನೃತ್ಯವಾದ್ಯ (ಗ) ಸೊಬಗಿನ ಗೀತವಾದ್ಯ (ಚ) [7] ಯಾದ (ಚ) [8] ರೆ (ಚ)

ಉತ್ಪಲಮಾಲೆ

ರಾಮನು ವಸಿಷ್ಠ ಕೌಶಿಕ ಮುನೀಶ್ವರರ್ಗೆತರಲರ್ಘ್ಯಪಾದ್ಯದಿಂ
[1]ತಾ[1] ಮುದದಿಂದೆ ಸತ್ಕರಿಸಿ ವಂದಿಸಿ ಗೇಹಮನಿತ್ತು ರಾಗದಿಂ
ಭೂಮಿಪರೆಲ್ಲರಂ ವಿನಯದಿಂದಿದಿರ್ಗೊಂಡು ನಿವಾಸಮಿತ್ತು ಸು
ಪ್ರೇಮದೆ ಸರ್ವಸೌಖ್ಯಗಳ ಮಾಡಿಸಿದಂ ಮಿಥಿಲೇಶನರ್ತಿಯಿಂ ೧೪೮

ಚಂಪಕಮಾಲೆ

ಜನಕನರೇಂದ್ರ ಸೀತೆಯ ಸಯಂಬರಕಾವುದು ಯುಕ್ತಿಯೆಂದು ಚಿಂ
ತನೆಯನು ಮಾಡುತಿರ್ಪ ಸಮನಂತರದೊಳ್ ಮನದಲ್ಲಿ ಪುಟ್ಟಿ ಭೋಂ
ಕನೆ ನೆನೆದಂ ಮಹೇಶ ಪಿಡಿದಗ್ಗದ ಚಾಪವಿದೆನ್ನೊಳಿರ್ಪುದೀ
ಧನುವಿದನೆತ್ತಿದರ್ಗೆ ವಧುವೆನ್ನಯ ಪುತ್ರಿಯೆನುತ್ತಲಾ ನೃಪಂ ೧೪೯

ಮಹಾಸ್ರಗ್ಧರೆ

ಧನುವಂ ಶೃಂಗಾರಮಂ ಮಾಡಿಸಿ ಕಡುಸೊಗಸಿಂ ತಂದು ವೈವಾಹಗೇಹ
ಕ್ಕನುವಾಗೆಂದಾ ಮಹೀಪಾಲರಿಗಱುಹಿಸಲೆಳ್ತಂದರೊಬ್ಬೊಬ್ಬರುಚ್ಚಾ
ಸನದೊಳ್ ಕುಳ್ಳಿರ್ದರಂದಬ್ಧಿಯ ಘನರವವೆಂಬಂದದಿಂ ವಾದ್ಯಮುಣ್ಮಲ್
ಜನಕಂ ತಾಂ ಪುತ್ರಿ[2]ಯಂ[2] ಬೇಗ[3]ದಿ[3] ಕರೆತರಲ್ಕೆಂದಟ್ಟಿದಂ [4]ಸ್ನೇಹದಿಂದಂ[4]

ವಚನ: ಅಂತು ಕರೆಯಲಟ್ಟುವುದುಂ ಸೀತಾದೇವಿ ಬರುತಿರ್ದ[5]ಳೆಂತೆನೆ[5] ೧೫೦

ಉತ್ಪಲಮಾಲೆ

ಮಿಂದು ದೂಕೂಲಮುಟ್ಟು ಜನಕಾತ್ಮಜೆಯೊಲ್ಪು ಮನೋನುರಾಗದಿಂ
ಸಂದಣಿಸಿರ್ದ ರತ್ನಮಯ ಭೂಷಣದೊಟ್ಟು ಸುಗಂಧಲೇಪದಿಂ
ದಂದಮನಾಂತು ಕಂಪೆಸೆವ ಸೊಂಪಿನಲಂಪಿನ ಹೂದುಱುಂಬಿ ಸೌ
ಗಂಧಿಕ ಪುಷ್ಪಮಂ ಪಿಡಿದಳಂಗನೆಯಾದಿಗನಾದಿಧ್ಯಾನ[6]ದೊಳ್[6] ೧೫೧

ವಚನ : ಅಂತಾದಿನಾರಾಯಣಧ್ಯಾನದಿಂ ಕಾಂತೆ ಸಕಲಶೃಂಗಾರಕ್ಕೆ ಬಂಗಾರಮಾಗಿ ವನಿತಾರತ್ನ ಕನಕದಂಡಿಗೆಯೊಳ್ [7]ಕುಳಿತಿರ್ಪಲ್ಲಿ[7]

ಕಂದ : ಕರಕಂಕಣ [8]ಝಣಝಣ[8]ರವ
ಚರಣಾಂದು[9]ಕ[9] ಝಣಝಣಸ್ವನಂ ಕಾಂಚೀಬಂ
ಧುರರವ ಖಿಣಿ[10]ಖಿಣಿ ಖಿಣಿದನಿ[10]
ಪರೆದು ಪಳಂಚಲ್ಕೆ ಕಾಂತೆಯರ್ ಬರುತಿರ್ದರ್ ೧೫೨

ವಚನ : ಅಂತು ಬರುತಿರ್ದ ಕಾಂತೆಯರ ಮಧ್ಯ[11]ದೊಳ್[11]

---

[1] ದಾ (ಕ) [2] ಯ (ಕ) [3] ದಿಂ (ಕ) [4] ದೂತರಂ (ಕ) ಸ್ನೇಹದಿಂ (ಚ) [5] ಳದೆಂತೆಂದೊಡೆ (ಚ) [6] ದಿಂ (ಗ) [7] ಕುಳ್ಳಿರ್ದು ಬರುತಿರ್ಪಲ್ಲಿ (ಗ ಚ) [8] ಘಣ ಘಣ (ಚ) [9] ಗೆ (ಚ) [10] ಖಿಣಿಧ್ವನಿ (ಗ) [11] ದಲ್ಲಿ (ಚ)

ಮತ್ತೇಭವಿಕ್ರೀಡಿತ

ಇದೆ ಸಮ್ಮೋಹನಮಂತ್ರಮೂರ್ತಿ ರತಿಮಾರ್ಗೋಲ್ಲೇಖ ಸಿದ್ಧಾಂತವಿ
ಲ್ಲಿದೆ ಚಾತುರ್ಯವಚೋವಿಲಾಸ ವಿಲಸಚ್ಛೃಂಗಾರ ಸಾಮ್ರಾಜ್ಯವಿ
ಲ್ಲಿದೆ ಸಂಸಾರಸುಖಪ್ರಮೋದ[1]ಮುದಿತಂ[1] ನೋಡೆಂದು ಪೇಳ್ವಂತಿರು
ಣ್ಮಿದ ವಾದ್ಯಧ್ವನಿ ಪೊಣ್ಮೆ[2]ಯು[2]ಣ್ಮಿದುದು ಮಂಜೀರಾಂದುಕಾ
[3]ಸಿಂಜಿತಂ[3] ೧೫೩

ಮತ್ತೇಭವಿಕ್ರೀಡಿತ

ಅಲರಂಬಂ ಕಡೆಗಣ್ಣಳಿಂ ಪಡೆದಳೆಂಬೀ ಮಾತವೇಂ ಸಮ್ಮತಂ
ಅಲರಂಬಿಕ್ಷುಧನುರ್ಝಷಾಂಕ ಸಹಿತಂ ಸಂದೋಹದಿಂದೊಪ್ಪುತಿ
ರ್ಪಲರಂಬರ್ ಶತಕೋಟಿಯುಂ ತಳೆಪ ಕಣ್ಣಿಂ ಪೆತ್ತಳೆಂಬಂತೆ ಬೆ
ಳ್ವೆಳಗಂ ಸೂಸುವ ನೋಟದಿಂದಲೆಸೆದಳ್ ಭೂಜಾತೆ ವಿಖ್ಯಾತಿಯಿಂ ೧೫೪

ಕಂದ : ನಡುವಿಲ್ಲದ ಪೆರ್ಮೊಲೆ ಕುಱು
ಪಿಡಲಿಲ್ಲದ ಬಾಸೆ ವದನವಿಲ್ಲದ ನೇತ್ರಂ
ಪಡಿಯಿಲ್ಲದ ಬಾಳೆಯೆನಲ್
ಮಡದಿ ಶಿರೋರತ್ನ ಸೀತೆಯೆಸೆದಳಲಂಪಿಂ ೧೫೫

ಉತ್ಪಲಮಾಲೆ

ಮೀನ ಸಮಾಕ್ಷೆ ಕೂರ್ಮಪದೆ ಕೋಲ ಶಿರಸ್ತನೆ ಸಿಂಹಮಧ್ಯೆ ಚಂ
ದ್ರಾನನೆ ವಾಮನೇತ್ರಯುತೆ ರಾಮಮನೋರಮೆ ಕೃಷ್ಣವೇಣಿ ಬು
ದ್ಧಾನತಮೂರ್ತಿ ಕುಂದಕಳಿಕಾ ರದೆ ಸೀತೆ ದಶಾವತಾರ[4]ಮಂ[4]
ತಾನುಱ ತಾಳ್ದವೊಲ್ ಮೆಱೆದಳೆಂದೆನಲಾಕೆಯೆ ಲಕ್ಷ್ಮಿಯಲ್ಲವೇ ೧೫೬

ಮತ್ತೇಭವಿಕ್ರೀಡಿತ

ಧರಣೀಪಾಲಕುಳಂ ಮಹಾಜನಗಳುಂ ದೇಶಾಧಿನಾಥರ್ಕಳುಂ
ಸುರವೈರೀನಿಕುರುಂಬಮುಂ ಸಕಲಶಾಸ್ತ್ರಾರ್ಥಜ್ಞರುಂ ಕೋವಿದರ್
ಪಿರಿದುಂ ಬಾಹುಬಲಂಗಳುಳ್ಳವರು ಬಂದೀ ಚಾಪಮಂ ಎತ್ತಿದ
ರ್ಗಿರದೀವೆಂ ಕಡುಮಾನಿ ಜಾನಕಿಯನೆಂದಂ ಭೂಪನಾನಂದದಿಂ ೧೫೭

ವಚನ: ಅಂತು ಶೃಂಗಾರಕಾರಾಗಾರಮಾದ ಸಮಸ್ತ ಸ್ತ್ರೀಯರ ಸಹಂ ಸೀತಾದೇವಿಯಂ ತಂದು ನಿಲಿಸಿ ನೆಱೆದಿರ್ದ ಭೂಪಾಲಮಧ್ಯ[5]ದೊಳ್[5] ಧನುವಂ ತಂದಿಱುಹಿ

---

[1] ಹರುಷಂ (ಚ) [2] ಪೊ (ಗ ಚ) [3] ನಿಸ್ವನಂ (ಗ) [4] ವಂ (ಚ) [5] ದಲ್ಲಿ (ಚ)

ಕಂದ : ನಾರಿಯ ಕೊಪ್ಪಿಗೆ ಬಂಧಿಸೆ
ನಾರಿ ಮಹಾಸೀತೆಯೆಂದು ನಲಿವದು ಮಿಕ್ಕರ್
ನಾರಿಗೆ ಸರಿಯೆಂದೆನುತುಂ
ಘೋರನೆ ಮಸಗಿತ್ತು ಡಂಗುರಂ ನೃಪಸಭೆಯೊಳ್ ೧೫೭

ವಚನ: ಅಂತಾ ಧ್ವನಿಯಂ ಕೇಳಿ

ಕಂದ : ಇನಿತಱ ಮೇಲಿನ್ನಾರುಂ
ಧನುವಂ ನೆಗಪವೊಡೆ ಕೊಱತೆಯೆನುತುಂ ಭೂಪರ್
ತನತನಗೆದ್ದರ್ ಪಿಡಿದರ್
ತನು ಡೆಂಘಣಿಸುತ್ತೆ ಮುಗ್ಗಿ ಕೆಡೆದರ್ ಕೆಲಬರ್ ೧೫೯

ವಚನ: ಅಂತು ಬಿದ್ದ ಭೂಪಾಲರಂ ಕಂಡು

ಕಂದ : ಈ ಹಳೆಯ ಬಿಲ್ಲು ಭೂಪರ
ಬಾಹುಬಲಂಗಿಡಿಸಿತೆಂದು[1]ಲಿವ ಮಾಗಧ ಸಂ
ದೋಹ[1]ಸಹಿತೆದ್ದ ನಲವಿಂ
ದಾಹವ ಕಾಲಾಗ್ನಿರುದ್ರನಾ ದಶವದನಂ ೧೬೦

ಶಾರ್ದೂಲವಿಕ್ರೀಡಿತ

ಈ ಚಾಪಂ ತುಸುಮಾತ್ರವೆಂದು ದನುಜಂ ಹಸ್ತಂಗಳಿಪ್ಪತ್ತಱಿಂ
ಬಾಚಿತ್ತಲ್ ಮಹಿಯಿಂ ಮಿಡುಂಕದಿರಲಾ ದೈತ್ಯೇಂದ್ರನಾಡೊತ್ತುತುಂ
ಭೂಚಕ್ರಂ ಬೆಱಗಾಗಲೆತ್ತಿ ಶ್ರಮದಿಂ ಸ್ವೇದಾಂಬುವುಣ್ಮುತ್ತಿರಲ್
ತಾ ಚಿತ್ತಂಬಡೆದೆತ್ತಿ ನಿಂದ ಸಭೆ ಕೊಂಡಾಡ[2]ಲ್ಕಮಾ[2] ರಾವಣಂ ೧೬೧

ವಚನ: ಅಂತು ದಶಕಂಧರಂ ಧನುವನೆತ್ತಿ ಬಾಗೊತ್ತಿ ತಿಱುವನೇಱುಸುವನಿತಱೊಳ್ ಸಿಂಜಿನಿ ಕೊಪ್ಪಿಗೆ ಸಿಕ್ಕದೆ ಬಿಲ್ಲೊದೆಯೆ ಬಿದ್ದು ನಾಚಿಪೋದನಾ ರಾವಣಂ ಜನಕೇಶ್ವರಂ ಕಂಡು

---

[1] ಪೊಗಳ್ವವಂದಿ ಸಮೂಹ (ಚ) [2] ಕ್ಕೆಯಾ (ಗ)

ಕಂದ : ಉರ್ವೀನಾಥರುಗಳ ನೆಱೆ[3]
ಗರ್ವವ ಮುಱಿಯಿತ್ತು ಚಾಪವೀ [1]ಚಾಪಕ್ಕಾರ್[1]
ಮೌರ್ವಿಯ ತೊಡಿ[2]ಸುತೆ[2] ಯಂತ್ರವ
ನಿರ್ವಹಿಸುವ[3]ರೆಂದೆನು[3]ತ್ತೆ ಸುಯ್ದಂ ಜನಕಂ ೧೬೨

ವಚನ : ಅಂತು ದೇಶಾಧೀಶ್ವರರಂ [4]ಬೆಗಡು[4]ಗೊಳಿಸಿ ಪರಿಭವಿಸಿ ಗೆಲ್ದುದೀ ಶರಾಸ[5]ನಂ ಇದರ್ಕೆ[5] ತಿಱುವನೇಱೆ[6]ಪ[6] ಪರಾಕ್ರಮಿಗಳಾರೆಂದು ಸ್ವಾಂತ[7]ದೊಳ್[7] ಮಿಥಿಲಾಕಾಂತಂ ಚಿಂತಿಸುತಿರ್ದ[8]ನದೆಂತೆಂದೊಡೆ[8]

ಕಂದ : ಹಿಂದೆ ರಜತಾದ್ರಿಯಂ ಕೈ
ಯಿಂದೆತ್ತಿದ ರಾವಣೇಂದ್ರ ಧನುವಿಗೆ ಸೋತಂ
ನಂದನೆ ಸೀತೆಯ ಋಣಸಂ
ಬಂಧವಿದಾರ್ಗೆಂದು ಮನದೆ ಚಿಂತಿಸಿ ಜನಕಂ ೧೬೩

ಚಿಂತಿಸೆ ವಸಿಷ್ಠ ಕೌಶಿಕ
ರಂತ[9]ಸ್ಥಮ[9]ನಱಿದು ರಾಮಚಂದ್ರನ ಕರೆದೀ
ಯಂತ್ರ[10]ಮನೆ[10]ಸು ಕೋದಂಡವ
ನೀಂ ತಡೆಯದೆ ನೆಗಪೆನುತ್ತೆ ನೇಮಿಸಲಾ[11]ಗಳ್[11] ೧೬೪

ಬಂದು ದಶರಥತನೂಭವ
ನಂದಾ ಚಾಪವನು ನೋಡಿ [12]ಭೂಪಾಲಕರಂ[12]
ಮುಂದುಗೆಡಿಸಿದ ಮಹಾಧನು
ವಿಂದೆನ[13]ಗಮಸಾ[13]ಧ್ಯ ಮುನಿಮತಂ ಬಲ[14]ಮೈಸೇ[14] ೧೬೫

ಮಹಾಸ್ರಗ್ಧರೆ
ಎನುತುಂ ಶ್ರೀರಾಮಚಂದ್ರಂ ಮನದೊಳೆ ಪರಮಪ್ರೀತಿಯಿಂ ಪಾದದಿಂದಂ
ಧನುವಂ ಮೀಂಟಿತ್ತಿ ಹಸ್ತಾಗ್ರದೆ ಪಿಡಿಯುತಲಾ ಕೊಪ್ಪಿಗಂ ಬೇಗದಿಂ ಸಿಂ
ಜಿನಿಯಂ ತಾಂ ಸೆಕ್ಕಿ ಟಂಕಾರಮನೊದವಿಸುತುಂ ಬಾಣಮಂ ಪೂಡಿ ಯಂತ್ರ
ಕ್ಕನುವಂ ನೋಡುತ್ತೆ ಕರ್ಣಾಂತರ[15]ವರೆ ಸೆಳೆ[15]ಯಲ್ ಮುಱಿಯುತುಂಡಾಯ್ತು
ಚಾಪಂ ೧೬೬

---

1 ಕೋದಂಡಕೆ (ಚ) 2 ೨, (ಚ) 3 ರಾರೆನು (ಚ) 4 ಭ್ರಾಂತು (ಚ)
5 ಸಪಿದಕೆ (ಚ) 6 ಸುವ (ಚ) 7 ದಲ್ಲಿ (ಚ) 8 ನೆಂತೆನಲ್ (ಕ) 9 ಸ್ತವ (ಚ)
10 ವನಿ (ಕ) 11 ಗಂ (ಚ) 12 ಸಕಲೋರ್ವೀಶರ (ಚ) 13 ಗಸಾ (ಗ) 14 ವೈಸಿ (ಚ)
15 ಬರೆತೆಗೆ (ಚ)

ವಚನ : ಮತ್ತಮದಲ್ಲದೆ

ಕಂದ : ಎನುತೆತ್ತಿ ಚಾಪಮಂ ಸಿಂ
ಜಿನಿಯಂ ಕೊಪ್ಪಿಂಗೆ ತೊಡಿಸಿ ಕಿವಿವರೆ[1]ಗೆಳೆಯಲ್[1]
ಧನು ಸಿಡಿದು ಮೂಱುತುಂಡೆಂ
ಬಿನೆಗಂ ತುಂಡಿಸಿತು ರಾಮನೇಂ ಬಲ್ಲಿದನೋ ೧೬೭

ಮುಱಿಯಿತ್ತು ಚಾಪ[2]ಮಾಗಳ್[2]
ಮುಱಿಯಿತು ರಾವಣನ ಧೈರ್ಯ ಜನಕನ ಸಂಶಯ
ಮುಱಿಯಿತ್ತು ನಿಮಿಷಮಾತ್ರಕೆ
ಮುಱಿಯಿತು ಜಮದಗ್ನಿರಾಮನುನ್ನತ ಶೌರ್ಯಂ ೧೬೮

ಆಗಲ್ ಸೀತಾದೇವಿ ಸ
ರಾಗದೆ ಮಂದಾರ[3]ದಲರ[3] ಮಾಲೆಯ ತಂದಾ
ರಾಘವನ ಕೊರಲೊಳಿರಿಸಲ್
ಪೂಗಳ ಮಳೆ ಸುರಿದುದುನ್ನತ ಧ್ವನಿಯಿಂದಂ ೧೬೯

ಮತ್ತೇಭವಿಕ್ರೀಡಿತ

ಕೊನೆಗಣ್ಣಿಂ ಕುಸುಮಾಸ್ತ್ರಮಂ ಕೆದಱುತುಂ ವೈಗಂಪಿನಿಂ ತುಂಬಿವಿಂ
ಡಿನ ಕಾರ್ಗಾಲಮ ನಿರ್ಮಿಸುತ್ತೆ ಗತಿಯಿಂ ಹಂಸಾಳಿಯಂ ಕೂಡುತುಂ
ತನು ಲಜ್ಜಾಭರದಿಂದೆ ಭಾರವಿಸುತುಂ ಸ್ವೇದಾಂಬು[4]ವೃ[4]ಣ್ಮಲ್ಕೆ ಸ
ಜ್ಜನ ಚಿಂತಾಮಣಿ ಸೀತೆ ರಾಘವಗೆ [5]ತಾನಾ[5] ಮಾಲೆಯಂ ಸಾರ್ಚಿದಳ್ ೧೭೦

ಕಂದ: ಮಂಗಳಕರ ಧವಳಗಳಿಂ
ಮಂಗಳಪಾಠಕ ನಿನಾದ[6]ದಿಂದಾ[6]ರತಿಯಿಂ
ಮಂಗಳವಾದ್ಯಧ್ವನಿಯಿಂ
ಮಂಗಳಮಯಮಾಯ್ತು [7]ಮಿಥಿಳೆ[7] ಪುರದೊಳಗೆಲ್ಲಂ ೧೭೧

---

1 ದೆಗೆಯ (ಚ) 2 ಭಾಗಂ (ಗ) ವಾಗಂ (ಚ) 3 ಕುಸುಮ (ಚ) 4 ಮು (ಚ)
5 ಮಂದಾರ (ಗ ಚ) 6 ಸುಳಿವಾ (ಗ) 7 ಬಳಿಕ (ಕ)

ಶ್ರೀ ರಾಮಚಂದ್ರಗಾ[1]ಗಲ್[1]
ಧಾರಿಣಿಸುತೆ ಸೀತೆಯಂ ಮಹಾವೈಭವದಿಂ
ಧಾರೆಯನೆಱೆದಂ ಜನಕ ಮ
ಹೀರಮಣಂ ಸಕಲ[2]ದೇವರು[2]ಘೆ ಎನೆ ನಲವಿಂ ೧೭೨

ಆ ಮದುವೆಯಾದ ಬಳಿಕಂ
ಭೂ[3]ಮಿಪಾಪತಿಗಳ್ ತಮತ್ತು[3] ಪುರಮಂ ಪೊಕ್ಕರ್
ವೈಮನ[4]ಸಿನೊಳಾ[4] ರಾವಣ
ತಾ ಮನದಲಿ ನೊಂದು ಪೊಕ್ಕ ಲಂಕಾಪುರಿಯಂ ೧೭೩

ವಚನ : ಅಂತಾ ಮಹೀ[5]ಕಾಂತ[5]ರೆಲ್ಲರುಂ ಚಿಂತಾಕ್ರಾಂತರಾಗಿ ತಮ್ಮ ತಮ್ಮ ದೇಶಮಂ ಪೊಕ್ಕರಿತ್ತಲ್

ಕಂದ : ಕರದಿಂ ಧನು ಮುಱಿಯಲ್ಕಾ
ವರರಥಮಲ್ಲಾಡಿದತ್ತು ಸಾರಥಿ ಭಯದಿಂ
ಶಿರಮಂ ತೂಗಿದನೆನುತುಂ
ವರಮುನಿ ದಶರಥಗೆ ಕಳುಪಿದಂ ಲೇಖನಮಂ ೧೭೪

ವಚನ : ಅಂತಾ ವಸಿ[6]ಷ್ಠಂ[6] ಕಳುಪಿದ ಲೇಖನಮನೋದಿಸಿ ಕೇಳಿ ಹಸ್ತ್ಯಶ್ವ ರಥ ಪದಾತಿ [7]ವೆರಸಿ[7] ದಶರಥಂ ಮಿಥಿಲೆಯಂ ಪೊಕ್ಕು ಜನಕನೃಪನಿಂ ಪೂಜೆಯಂ ಕೈಕೊಂಡು ವಸಿಷ್ಠ ವಿಶ್ವಾಮಿತ್ರರ್ಗೆ [8]ವಂದಿಸಲವರು ಸೀತಾರಾಮರಂ[8] ತಂದು ದಶರಥಂಗೆ ಶರಣೆನಿಸಿ ಮತ್ತಮಿಂತೆಂದರ್

ಶಾರ್ದೂಲವಿಕ್ರೀಡಿತ

ಕೊಂದಂ ತಾಟಕಿಯುಂ ಸುಬಾಹುಸಹಿತಂ ನಾನಾ ಮಹಾದೈತ್ಯರಂ
ಸಂದೇಹಂಗೊಳದಂತೆ ನಮ್ಮ ಮಖಮಂ ಸಂಪೂರ್ಣಮಂ ಮಾಡಿದಂ
ಎಂದೆಂದುಂ ಶಿಲೆಯಾದಹಲ್ಯೆ[9]ಯನಿವಂ[9] ನಿಷ್ಪಾಪೆಯಂ ಮಾಡಿದಂ
ಬಂದಾ ದೇಶದ ರಾಯರಂ ಗೆಲಿದ ಬಿಲ್ಲಂ ಭಗ್ನಮಂ ಮಾಡಿದಂ ೧೭೫

---

1 ಗಂ (ಗ ಚ) 2 ಸುರರು (ಗ ಚ) 3 ಮಿಪರೆಯಿದ್ದ ತಮ್ಮ (ಚ)
4 ಸ್ಸಿನಲಿ (ಚ) 5 ಪಾಲ (ಚ) 6 ಷ್ಠಮುನಿ (ಚ) 7 ಚತುರಂಗ ಬಲಂ ಬೆರಸಿ (ಚ)
8 ನಮಸ್ಕರಿಸಲವರು ರಾಮಸೀತಾದೇವಿಯರಂ (ಚ) 9 ಸತಿಯಂ (ಚ)

ಈತಂ ಶ್ರೀರಘುರಾಮಚಂದ್ರನಧಿಕಂ ಶ್ರೀಯಾದಿನಾರಾಯಣಂ
ಸೀತಾದೇವಿ ಸುಧಾಬ್ಧಿ ಜಾತೆ ಸತತಂ ಮಾಂಗಲ್ಯಲಕ್ಷ್ಮೀಸ್ವಯಂ
ದೈತೇಯರ್ಕಳನೆಲ್ಲರಂ ಮಡುಪಿ ಭೂಮಿಭಾರಮಂ ತೀರ್ಚಲೆಂ
ದಾ ತುರ್ಯಂ ನರನಾಗಿ ನಿಮ್ಮುದರದೊಳ್ ಬಂದಂ ಧರಾವಲ್ಲಭಾ ೧೭೬

ವಚನ : ಎನಲದೆಲ್ಲಂ [1]ತವ[1] ಕೃಪಾಕಟಾಕ್ಷನೆಂದು ದಶರ[2]ಥಂ[2] ಬಿನ್ನವಿಸೆ ಮುನಿಗಳಾಶೀರ್ವಾದಮಂ ಮಾಡುತುಂ

ಕಂದ : ಅಂದು ಪರಸುತ್ತ ಮುನಿಕುಲ
ವೃಂದಾರಕರಾಶ್ರಮಕ್ಕೆ ಬಿಜಯಂಗೈಯಲ್
ಇಂದುಮುಖಿಯೂರ್ಮಿಳೆಯನೊಲ
ವಿಂದಂ ಲಕ್ಷ್ಮಣಗೆ ಜನಕ ಧಾರೆಯನೆಱೆದಂ ೧೭೭

ಪೊಡವೀಶ ಜನಕನನುಜಂ
ದೃಢಚಿತ್ತ ಕುಶಧ್ವಜಾತ್ಮಜಾತೆಯರಿರ್ವರ್
ಕಡುಸೊಬಗಿ ಮಾಳವೀವಧು
ಮಡದಿ ಶತಾನೀಕೆ ಇಂದುಮುಖಿ[3]ಯರುಮವರಂ[3] ೧೭೮

ಭರತಂಗೆ ಮಾಳವಿಯನಾ
ದರದಿಂ ಶತ್ರುಘ್ನಗಾ ಶತಾನೀಕೆಯುಮಂ
ವರ ಸುಮುಹೂರ್ತದೆ ಧಾರೆಯ
ನೆಱೆದಂ ಮಿಥಿಲೇಶ ಮಂಗಲಾಶೀರ್ವಚದಿಂ ೧೭೯

ವಚನ : ಅಂತು ರಾಮಚಂದ್ರಂಗೆ ಸೀತಾದೇವಿಯುಂ ಲಕ್ಷ್ಮಣಂಗೂರ್ಮಿಳೆಯುಂ ಭರತಂಗೆ ಮಾಳವಿಯುಂ ಶತ್ರುಘ್ನಂಗೆ ಶತಾನೀಕೆಯುಮಂ ಜನಕಚಕ್ರೇಶ್ವರಂ ಸಂಭ್ರಮದಿಂ ಮದುವೆಯಂ ಮಾಡಿ ಚತುರ್ಥ್ಯನಂತರದಲ್ಲಿ

ಕಂದ : ದೇಶ ಭಂಡಾರ ರಾಜ್ಯ ವಿ
ಲಾಸಿನಿಯರ ಮಂತ್ರಿತಂಡಮಂ ದುರ್ಗಗಳಂ
ಭಾಸುರ ಚಾತುರ್ಬಲಮಂ
ತಾ ಸಹಿತಂ ಜನಕನೊಲ್ದು ಬಱುನೆಱೆಯಿತ್ತಂ ೧೮೦

---

1 ನಿಮ್ಮ (ಚ) 2 ಥರಾಯಂ (ಚ) 3 ಖಿರಲವರಂ (ಗ)

ವಚನ : ಅಂತು ಸಪ್ತಾಂಗಮುಂ ಬಱಿಮಱಿಯಿತ್ತು ಜನಕನೃಪಂ [1]ನಿ[1]ಬ್ಬಣಮಂ ಕಳುಪಲ್ ದಶರ[2]ಥಂ[2] ಮಮನುಕ್ಕಳ್ [3]ಕೂಡಿ[3] ಸ್ವಪುರಕ್ಕಭಿಮುಖನಾಗೆ

ಚಂಪಕಮಾಲೆ

ತುರಗ ಚಯಂಗಳಿಂ ಕರಿಘಟಾವಳಿಯೊಬ್ಬುಳಿಯಿಂ ಪದಾತಿಯು
ಬ್ಬರಮೊದವಿಂ ರಥಂಗಳ ಸಮೂಹಗಳಿಂ ಶಶಿಸೂರ್ಯವಂಶರ
ಪ್ಪರ[4]ಸು[4]ಬಲಂಗಳಿಂ ಸಕಲ ಸೌಖ್ಯ[5]ದಿನೊ[5]ಪ್ಪುವ [6]ಸ್ತ್ರೀಕದಂಬದಿಂ[6]
ಮೊರೆವ ಸುವಾದ್ಯದಿಂ ದಶರಥಂ ಪುರಕಂ ಬರುತಿರ್ದನಾಕ್ಷಣಂ ೧೮೧

ಬರುತಿರಲಾಗಳಾ ಪರಶುರಾಮಮುನಿದೇತ್ತಣ ನಾದ್ಯಘೋಷಮೀ
ಕರಿ ತುರಗಂ ಪದಾತಿ ರಥಸಂಕುಲಮೆಲ್ಲಿಯದಾರು ನೀಮೆನಲ್
ಸರಸಿಜಮಿತ್ರವಂಶಜನು ನಾಂ ರಘುರಾಮನಯೋಧ್ಯೆಯೆಂಬ ತ
ತ್ಪುರದಧಿನಾಥನೀ ದಶರಥಂ ನಮಗಂ ಪಿತನೆಂದು ಪೇಳ್ದಂ ೧೮೨

ಕಂದ : ಆ ಮಾತ ಕೇಳುತುಂ ಭೃಗು
ರಾಮಂ ದಶರಥತನೂಜ ನಿಮಗೆಮಗಂ ಸಂ
ಗ್ರಾಮಮುಮುಂಟೇಳು ಕಾದುವ
ತಾಮಸಮಿನ್ನೇಕೆ ಕೈದುವಂ ಪಿಡಿಯೆಂದಂ ೧೮೩

ಕೈದು ನಿಮಗೇಕೆ ವಿಪ್ರರು
ಕಾದುವರೇ ನಿಮಗೆ ಜಪ ತಪ ಸ್ಥಿತಿ[7]ಯಲ್ತೇ[7]
ಭೂದಿವಿಜರೊಡನೆ ಕ್ಷತ್ರಿಯ
ರೈದುವರೇ ಯುದ್ಧಕೆಂದನಾ ರಘುರಾಮಂ ೧೮೪

ಹಿಂದೆ ನಿಮ್ಮರಸುವಂಶವ
ಕೊಂದೆವು ಶತಕೋಟಿ ಸಂಖ್ಯೆಯಿಂ ಸೂಳ್ವರೆ[8]ಯಿಂ[8]
ಇಂದು ನೀಂ ಕಾದೆನೆನೆ ಬಿಡು
ವಂದವ ಪೇಳ[9]ನೆ ಮುನೀಶ್ವರಂಗಿಂತೆಂದಂ[9] ೧೮೫

ಮತ್ತೇಭವಿಕ್ರೀಡಿತ

ಎಲೆ ವಿಪ್ರೋತ್ತಮ ಕೇಳು ಹಿಂದಣವರೆಲ್ಲಜ್ಞಾನದಿಂ ಕೋಪದಿಂ
ನೆಲನಂ ನೀಗಿದರಿಂದು ನಿಮ್ಮೊಡನೆ ನಾಂ ಯುದ್ಧಂಗಳಂ ಮಾಳ್ಪನೇ
ಬಲುಹಂ ಪೇಳಲದೇಕೆ ಕ್ಷತ್ರಿಯರು ಭೂವಿಪ್ರಾಧೀಶರೊಳ್ ಕಾದಲ
ಗ್ಗಳರೇ ತೋಱುವೆನೀಗಳೆನ್ನಳವನೆಂದಂ ರಾಮನಾ ರಾಮನೊಳ್ ೧೮೬

---

1 ದಿ(ಗ) 2 ಥರಾಮಂ(ಚ) 3 ಸಹ(ಚ) 4 ಸ(ಗ) 5 ದೊಳಿಂ(ಚ) 6 ನೀರೆಯರಿಂ (ಕ) 7 ಮಲ್ಲದೆ(ಚ) 8 ಮಂ (ಚ) 9 ನಲು ಮುನಿಮುಕುಂಗೆಂತೆಂದಂ (ಗ)

ಕಂದ : ಎನಲಾಗ ಪರಶುರಾಮಂ
ಧನು ಶರಮಂ ಕೊಂಡು ಕಾಳಗಕ್ಕಿದಿರಾ[1]ದಂ[1]
ಮನದೆ ನಸುನಗುತೆ ದಶರಥ
ತನುಜಂ ಶ್ರೀರಾಮಚಂದ್ರನಂದಿಂತೆಂದಂ ೧೮೭

ವಚನ : ನೀವು ಭೂಸುರರು ನಿಮ್ಮಯ ಸೇವಕರಾವೆಂದು ಚಾಪಮಂ ನಿಮಗೊಪ್ಪಿಸಿ ಕೊಟ್ಟಪೆಂ ಎನ್ನ ಶರೀರಮಂ ಬಲ್ಲಂತೆ [2]ಮಾಳ್ಪುದೆಂದು[2] ಶ್ರೀರಾಮಂ ಚಾಪಮಂ ನೀಡೆ ಪರಶುರಾಮಂ ಬಿಲ್ಲ ಕೊನೆಯಂ ಪಿಡಿಯೆ ಸರ್ವಶಕ್ತಿಯಂ ಶ್ರೀರಾಮಂ ಕಳೆದುಕೊಳೆ ಪರಶುರಾಮನ ಬಾಹಾಬಲಂ ಸಾಮಾನ್ಯಮಾಗೆ ಅವಂಗಳಿವು ತಲೆದೋಱೆ ನಾವಿಬ್ಬ[3]ರೂ[3] ಏಕಸ್ವರೂಪಂ ಭೂಭಾರೋತ್ತಾರಣಕ್ಕೆ ನಮಗೆ ಕಾರಣಮಿಲ್ಲವೆಂದು

ಕಂದ : ಅ[4]ತ್ತಲ್ ಭೃಗುಜಾತಂ[4] ನಾ
ಚುತ್ತುಂ ಕಡುನೊಂದು ದಿವ್ಯತ[5]ಪಸಿಗೆ[5] ಪೋಗಲ್
ಇತ್ತ ಶ್ರೀರಾಮನತಿ ಶೌ
ರ್ಯೋತ್ತಮನುತ್ಸಾಹದಿಂದಯೋಧ್ಯೆಗೆ ಬಂದಂ ೧೮೮

ವಚನ : [6]ಎಂತೆನೆ[6]

ಕಂದ : ಸೀತೆಯೂರ್ಮಿಳೆಯು ಮಾಳವಿ
[7]ಪೂತ[7] ಶತಾನೀಕೆ[8]ಸಹಿತಲಾ[8] ರಘುರಾಮಂ
ಭ್ರಾ[9]ತರ[9] ಲಕ್ಷ್ಮಣ ಭರತ ಸು
ನೀ[10]ತರ್[10] ಶತ್ರುಘ್ನರೊಡನೆ ಪುರಮಂ ಪೊ[11]ಕ್ಕಂ[11] ೧೮೯

ಮತ್ತೇಭವಿಕ್ರೀಡಿತ

ಕಲಶಂ ಕನ್ನಡಿ ತೋರಣಂ ಗುಡಿಗಳಿಂ ಸ್ತ್ರೀಯೂಥದಿಂ ಪುಷ್ಪದಿಂ
ವಿಲಸನ್ಮಂಜುಲವಾದ್ಯದಿಂ ಪರಿಮಳಸ್ತೋಮಂಗಳಿಂ ವಸ್ತ್ರಮಂ
ಗಲಗೀತಂಗಳ ಘೋಷದಿಂ ಧವಳವಾಡಿಂ ಸರ್ವಸೌಭಾಗ್ಯದಿಂ
ನಿಲಯಂಬೊಕ್ಕರತೀವ ಸಂಭ್ರಮದೊಳಾ ಶ್ರೀರಾಮ ಸೀತಾದಿಗಳ್ ೧೯೦

---

[1] ಗಲ್ (ಚ) [2] ಮಾಡಿಯೆಂದು (ಚ) [3] ರುಂ (ಚ) [4] ತ್ತ ಭೃಗುರಾಮನ (ಚ) [5] ಪಕಂ (ಚ) [6] ಅದೆಂತೆಂದೊಡೆ (ಚ) [7] ಖ್ಯಾತೆ (ಚ) [8] ಸಂಹಿತೆ ಶ್ರೀ (ಚ) [9] ತ (ಚ) [10] ತಂ (ಚ) [11] ಕ್ಕರ್ (ಚ)

ವಚನ: ಅಂತು ದಶರ[1]ಥಂ[1] ಸಂ[2]ತಸದಿಂ[2] ಗೃಹಪ್ರವೇಶಮಂ ಮಾ[3]ಡಿಸಿ[3] ಸೌಖ್ಯಮಾರ್ಯಾಂಗದಿಂ ಸಕಲ ಸುಖಮನನುಭವಿಸುತ್ತಂ ಕೆಲವಾನುಂ ದಿವಸಂ[4]ಗಳೊಳ್ ರಾಯಂ[4] ವಿಶೇಷಬುದ್ಧಿಯಿಂ ಶ್ರೀರಾ[5]ಮಂಗೆ[5] ಧಾರಿಣಿಯೊಡೆತನದ ಪಟ್ಟ[6]ಮಂ[6] ಕಟ್ಟಲೆಂದು

ಕಂದ : ತವೆ ನೆರೆದ ರಾಮಚಂದ್ರಗೆ
ಯುವರಾ[7]ಜನ[7] ಪಟ್ಟಗಟ್ಟ[8]ಬೇಕೆಂದೆನುತು[8]
ತ್ಸವದಿಂ ದಶರಥ ಮುನಿಪುಂ
ಗವರಂ ಕರೆಸಿದನು ಮಂಗಳೋತ್ಕರಸಹಿತಂ ೧೯೧

ವಚನ: ಅದೆಂತೆನೆ ವಸಿಷ್ಠಮುನಿಯಾದಿಯಾದ ವಸುಧಾಮರರಂ ಕರೆಯಿಸಿ ಶಾಸ್ತ್ರೋಕ್ತದಿಂ ಸಕಲ ತೀರ್ಥಮಂ,ತರಿಸಿ ಪಟ್ಟಾಭಿಷೇಕಮಂ ಮಾಲ್ಪೆನೆಂಬಲ್ಲಿ ಮಂಥರೆಯೆಂಬ ದಾಸಿಯದಂ ಕಂಡು ಮಂತಣಗೊಳುತ್ತುಂ ಬಂದು [9]ಒಡತಿ ಕೈಕಯೆಗೆ[9] ಬಿನ್ನಪಂಗೈಯ[10]ಲವಳ್[10] ಭೋಂಕನೆ ಬಂದು

ಕಂದ : ಭೂಮಿಯೊಡೆತನದ ಪಟ್ಟವ
ರಾಮಗೆ ಕಟ್ಟುವದು ನಿಲಲಿ ಭರತಂಗೀಗಲ್
ಪ್ರೇಮದೆ ಮಾ[11]ಡುವುದುಂ[11] ಸಲೆ
ನೀ ಮೆಚ್ಚಿದ ವರವಿದೆನೆಗೆ ದಶರಥ[12]ಜನಪಾ[12] ೧೯೨

ವಚನ: ಎಂದು [13]ಕೇಕಯರಾಜಪುತ್ರಿ ಬಿನ್ನೈಸೆ[13] ದಶರಥಂ ಚಿಂತಾಗ್ನಿದಹ್ಯಮಾನನಾಗಿ ಬೆಱಗುವಟ್ಟಿರ್ಪುದುಂ ರಾಮಚಂದ್ರನಿಂತೆಂದಂ

ಚಂಪಕಮಾಲೆ

ತನುವಿದು ಮೇಘದೊಡ್ಡು ಧನಮೆಂಬುದು ಸಂಜೆಯ ಕೆಂಪು ಕಾಮಿನೀ
ಜನಸುತರೆಂಬಿದಿಬ್ಬನಿಯ ಮುಂಬನಿ ಭೂಮಿಯೆ ನೀರಿನಕ್ಕರಂ
ಅನುದಿನ ಬಿಟ್ಟುಪೋಗದ ಮಹಾಘನಸತ್ಯವೆ ನಿತ್ಯಮೆಂಬುದಂ
ಮನದೊಳೆ [14]ತಂದೆ[14] ನೀಂ ತಿಳಿವುದೆಂದನು ರಾಮನದೇಂ ಮಹಾತ್ಮನೋ ೧೯೩

---

[1] ಥರಾಯುಂ (ಗ ಚ) [2] ತೋಷದಿಂ (ಗ ಚ) [3] ಡಿ (ಚ) [4] ಗಳ ಮೇಲೆ ನಲವಿನಿಂ ದಶರಥರಾಯುಂ (ಚ) [5] ಮಚಂದ್ರಗೆ (ಚ) [6] ವ (ಚ) [7] ಜಂ (ಚ) [8] ಶೆಂದತ್ತ್ಯ (ಕ) [9] ತನ್ನೊಡತಿ ಕೈಕಲಾದೇವಿಯು ಕೂಡೆ (ಗ ಚ) [10] ಲದಂ ಕೇಳಿ ಕೈಕಲಾದೇವಿ (ಚ) [11] ಡೂದುಂ (ಚ) [12] ರಾಯಾ (ಚ) [13] ಕೈಕಲಾದೇವಿ ಬಿನ್ನವಿಸುವುದುಂ (ಗ ಚ) [14] ತಾತಾ (ಕ)

ಕಂದ : ಪೊಡವಿಗೊಡೆಯ[1] ರಘುವಂಶದೆ
ನುಡಿಯೆರಡುಂ ರಣದ ಭೀತಿ ಯಾಚಕರೆಡೆಯೊಳ್
ಕಡುಲೋಭಮಿನಿತುದಿನಮಿ
ಲ್ಲೊಡಲೇಂ ಸ್ಥಿರವಲ್ಲ [2]ಕುಲಕೆ[2] ಕುಂದಂ ತಹರೇ ೧೯೪

ವಚನ: ಎಂದು ತಂದೆಯುಂ ಸತ್ಯಬುದ್ಧಿಯಿಂ ನಿಲಿಸಿ ವನವಾಸಕ್ಕೆ ಸೀತೆ[3]ಯೊಡನೆ[3] ರಾಮಂ ಪೊಱಮಟ್ಟು ಪೋಪುದುಂ ಲಕ್ಷ್ಮ[4]ಣಂ[4] ಕಂಡು ತನ್ನ ಜನನಿ ಸುಮಿತ್ರೆಗೆ ವಂದನಂ ಮಾಡಿ[5] ಪಿರಿಯನಾದ ಶ್ರೀರಾಮ[6]ನ[6] ಬಳಿಸಂದು ಪೋಪೆನೆಂ[7]ದ[7] ಮಗನ ಮಾತಿಗೆ ಸಂತಸಂಬಟ್ಟು ಸುಮಿತ್ರೆಯಿಂತೆಂದಳ್

ಕಂದ : ರಾಮನೆ ದಶರಥ ಸೀತಾ
ಭಾಮಿನಿಯೇನಾನರಣ್ಯವೊಪ್ಪುವಯೋ[8]ಧ್ಯಂ
ಈ[8] ಮಾತ ಮಱೆಯದಿರು ನೀ
ಬಾ ಮಗನೇ ಎಂದು ಸಂತವಿಸಿ ಬೀಱಿಕೊಟ್ಟಳ್ ೧೯೫

ವಚನ : ಅಂತು ಸುಮಿತ್ರಾದೇ[9]ವಿ[9] ಲಕ್ಷ್ಮ[10]ಣಗೆ[10] ಬುದ್ಧಿಯಂ ಪೇೞೆ ಪೋದಳಿತ್ತಲ್ ಶ್ರೀರಾ[11]ಮಂ[11] ಲಕ್ಷ್ಮ[12]ಣನೊಡನೆ[12] ದಕ್ಷಿಣಾಭಿಮುಖನಾಗಿ ಗಂಗಾತೀರದ ಶೃಂಗಿವೇರ ಪುರದಲ್ಲಿ ನಿಂತು ಗುಹ[13]ನಂ[13] ಕೂಡಿಕೊಂಡು ಭರಧ್ವಾಜಾಶ್ರಮಕ್ಕೆ ಬಂದು ಆ [14]ಮುನಿಯೊಡನೆ[14] ಚಿತ್ರಕೂ[15]ಟಕ್ಕೆ[15] ಬಂದು ಅಲ್ಲಿ ಪರ್ಣಶಾಲೆಯಂ ಕಟ್ಟಿ ನಿಲಲಿತ್ತಲ ಯೋಧ್ಯೆ[16]ಯೊಳ್[16]

ಕಂದ : [17]ಚ[17]ಡಲೆಯ ಶಾಪ ಕೈಕ[18]ಯೆ[18]
ಯಾಡಿದ ನುಡಿ ಸುತರು ನಾಲ್ವರುಗಳ ವಿಯೋಗಂ
ಕೂಡಿತ್ತು ದುಃಖವೆನಗೀ
ರೂಢಿಯ ಋಣ ಹಱಿ[19]ದುದೆಂದ[19] ದಶರಥರಾಯಂ ೧೯೬

ವಚನ: ಅಂತು [20]ಪುತ್ರವಿಯೋಗದಿಂ ದಶರಥಂ[20] ದೀರ್ಘನಿ[21]ದ್ರೆಯಂಗೆಯ್ಯೆ[21] ಸುಮಂತ್ರ ನೆಂಬ [22]ಸಚಿವಂ[22] ಮಾತಾಮಹನಲ್ಲಿಗೆ ಪೋಗಿರ್ದ ಭರತ ಶತ್ರುಘ್ನರ್ಗೆ [23]ಪಿತೃಮರಣ ವೃತ್ತಾಂತಮಂ ತಿಳಿಪಿದನೆಂತೆನಲ್[23]

---

1 ವೀಶ್ವರ (ಗ ಚ) 2 ತಂದೆ (ಗ) 3 ಸಹಿತಂ (ಚ) 4 ಣದೇವಂ (ಚ) 5 ನಿಯಾದ ಸುಮಿತ್ರಾದೇವಿಗಂ ನಮಸ್ಕಾರಂಗೈದು (ಚ) 6 ಚಂದ್ರನ (ಚ) 7 ದು ನುಡಿದ (ಚ) 8 ಧಿಯುಃ ವಿಾ (ಗ) 9 ವಿ ತನ್ನ ಸುತನಾದ (ಚ) 10 ದೇವಂಗಂ (ಚ) 11 ಮಚಂದ್ರ (ಚ) 12 ಸಹ (ಚ) 13 ನೆಂಬ ಚಂಚಿಲನಂ (ಚ) 14 ಮುನೀಶ್ವರಂ ಸಹ (ಚ) 15 ಟ ಪರ್ವತಕ್ಕೆ (ಚ) 16 ಯಲ್ಲಿ (ಚ) 17 ಔ (ಕ) 18 ಶಿ (ಚ) 19 ಯಿತೆಂವ (ಗ) 20 ದಶರಥರಾಯಂ ಪುತ್ರವಿಯೋಗದಿಂ (ಗ) ದಶರಥರಾಯಂ ಪುತ್ರಶೋಕಾತುರದಿಂ (ಚ) 21 ದ್ರಿತನಪ್ಪುದುಂ (ಚ) 22 ಪ್ರಧಾನನು ಬುದ್ಧಿವಾಸನಪ್ಪವರಿಂ (ಚ) 23 ಪಿತಂ ಮೃತವಾದ ವಾರ್ತೆಯಂ ಪೇೞೆ ಕಳುಹಿದನದೆಂತೆಂದೊಡೆ (ಚ)

ಕಂದ : ಬರೆಸಿ ಕಟುಪಿದನು ಓಲೆಯ
ಭರತಗೆ ದಶರಥನು [1]ದಿವಮನ್ನೈದಿದುದಂ ತಾಂ
ಇ[1]ರದೆ ಶತ್ರುಘ್ನಸಹಿತಂ
ಪುರವರ[2]ಮಂ[2] ಬಂದು ಪೊಕ್ಕನಾಗಳೆ ಭರತಂ ೧೯೭

ಮೃತನಾದನೇಕೆ ನಮ್ಮಯ
ಪಿತೃ ಪೇಟು ಸುಮಂತ್ರಯೆಂದು ಬೆಸಗೊಳೆ ಭರತಂ
ಗತಿಭೀತಿಯಿಂದುಸಿರ್ದಂ
ಪತಿಭಕ್ತ[3]ಪರಂ ಪ್ರಧಾನಿ ತತ್ಸಂಗತಿಯಂ[3] ೧೯೮

ರಾಮಂಗೆ ಪಟ್ಟಗಟ್ಟುವ
ಪ್ರೇಮದೆ ದಶರಥನೃಪಾಲನನುಮಾಡಿಸುತಿರ
ಲಾ ಮಂ[4]ಥರೆ[4] ಪಿಸುಣತೆಯಿಂ
ಕಾಮಿನಿ ಕೈಕ[5]ಯೆ[5]ಗೆ ಪೇಟಲಾ[6]ಕ್ಷಣದೊಳಗೆ[6] ೧೯೯

ಬಂದು ಕೈಕ[7]ಯೆ[7] ಮಹೀಶಂ
ಗೆಂದಳ್ ಪೂರ್ವದಲಿ ಪಾಲಿಸಿದ ವರವೆರಡಂ
ಸಂದೇಹಂ ಮಾಡದೆ ಕೊಡಿ
[8]ರೆ[8]ಂದೆನುತುಂ ಬಂದು ಬೇಡಿ[9]ದಳ್[9] ಸಂತಸದಿಂ ೨೦೦

ಭರತಗೆ ಪಟ್ಟಂಗ[10]ಟ್ಟುವು[10]
ದರಸುತನದ ರಾಮನಂ ವನಾಂತಕೆ ಕಟು[11]ಪು[11]
ದೆರ[12]ಡುಂ[12] ವರ[13]ಗಳಿದೀಗೆನೆ[13]
ಧರಣೀಶಂ ಹರಣಗುಂದಿ ಮಱವಟ್ಟಿರ್ದಂ ೨೦೧

ನೀಂ ಮೂರ್ಛೆವೋಗಲೇತಕೆ
ಕಾಮಿನಿ ಬೇಡಿದುದ ಸಲಿಸು ಭರತಗೆ ಪಟ್ಟವ
ಪ್ರೇಮ[14]ದಿ[14] ಕಟ್ಟೆನ್ನುತ್ತುಂ
ರಾಮನರಣ್ಯಕ್ಕೆ ಪೋಗೆ ತಾ ಮೃತವಾದಂ ೨೦೨

---

1 ದೀರ್ಘನಿದ್ರಿತನಾದುದನಿ (ಚ) 2 ಕಂ (ಚ) 3 ಪ್ರಧಾನ ತದ್ವೃತ್ತಾಂತವನುವಂ (ಚ) 4 ಥಿಣಿ (ಚ) 5 ತೆ (ಚ) 6 ಸುಮುಹೂರ್ತಕೆ (ಚ) 7 ತೆ (ಚ) 8 ಯೆಂ (ಚ) 9 ಕೊಂಡಳತಿ (ಚ) 10 ಟ್ಟಿ (ಚ) 11 ಪಂ (ಕ) 12 ಡು (ಚ) 13 ವಱಿಂದೆನಗೆ (ಚ) 14 ದಿಂ (ಚ)

ಎನೆ ಕೇಳ್ದು ನೊಂದು ಭರತಂ
ಜನಕನ [1]ಸಂಸ್ಕಾರಮಾಡಿಯಗ್ರಜ ರಾಮುನ
ಘೋ[1]ನದರ್ಶನಕಾ ಮಂತ್ರೀ
ಶನು ಚಾತುರ್ಬಲ ಸಮೇತಮೆಲ್ಲರ್ ಬಂದರ್ ೨೦೩

ಬಂದು ರಘುಪತಿಯ ಚರಣ
ದ್ವಂದ್ವಕ್ಕಭಿನಮಿಸಿ ತಂದೆ ಮೃತನಾದನು ಕೇ
ಳೆಂದೆನಲು ರಾಮು ಲಕ್ಷ್ಮಣ
ರಂದತಿಶೋಕಿ[2]ಸಲು ಅ[2]ಗ್ರಜಾನುಜರೆ[3]ಲ್ಲರ್[3] ೨೦೪

ಕರೆಯಿಸಿ ವಸಿಷ್ಠಮುನಿಯಂ
ಧರಣಿಪ ದಶರಥನೃಪಾಲಗುತ್ತರಕ್ರಿಯೆಯಂ
ವಿರಚಿಸಿ ಶ್ರೀರಘುರಾಮಂ
ಭರತನ ಕಟುಪಿದನು ರಾಜ್ಯವಾಳುವುದೆನುತುಂ ೨೦೫

ಕಟುಪಲಾ ಭರತನೆಂದಂ
ನೆಲದೊಡೆತನವೆನಗೆ ಸಲ್ವುದೇ ಶ್ರೀರಾಮಾ
ಲಲನೆಯರ ಮಾತು ತಾನದು
ನೆಲೆಯೇ ಚಿತ್ತ್ರೈಸಯೋಧಿಗೆನಲಿಂತೆಂದಂ ೨೦೬

ಮಾತೆಯ ಮಾತಂ ಮಿಾಱುವ
ನೇತಱ ಸುತ ಕೇಳು ಭರತ ದ್ವಾದಶವರ್ಷಂ
ಭೂತಳವ [4]ಕೊಳಲು[4]ಬಹೆ ನೀಂ
ಪ್ರೀತಿಯೊಳುಂ ರಾಜ್ಯವಾಳುತಿರು ಹೋಗೆಂದಂ ೨೦೭

ಎನಲಾ ಭರತಂ ರಘುರಾ
ಮುನ ಕೂಡಿಂತೆಂದನೆನಗೆ ಸಲ್ಲುದೆ ರಾಜ್ಯಂ
ನಿನಗಲ್ಲದೆನಗೆ ನಿ[5]ನ್ನ[5]ಯ
ನೆನಹೇ ಗತಿ[6]ಯೆನಗೆ[6] ರಾಜ್ಯ[7]ಕೋ[7]ಶಮನೊಲ್ಲೆಂ ೨೦೮

---

[1] ಸಂಸ್ಕರಿಸಿಯಗ್ರಜನ ರಾಮುನದ್ಘ (ಕ) [2] ಸಿದರ (ಚ) [3] ಲ್ಲಂ (ಗ) [4] ಕೊಳಲಿ (ಚ)
[5] ಮ್ಮ (ಚ) [6] ಯಾಗಿ (ಚ) [7] ದೇ (ಚ)

ಮಾತಾಪಿತೃಗಳ ನುಡಿ ವಿ
ಖ್ಯಾತಂ ಗುರುವಚನಮಗ್ರಜರ ಮಾತುಗಳಂ
ಕಾತರಿಸಿ ಮೀಱಿದವರಿಗೆ
ಪಾತಕಮಾ ಚಂದ್ರಸೂರ್ಯರುಳ್ಳನ್ನೆಬರಂ ೨೦೯

ವಚನ : ಎಂದು ನಿರೂಪಿಸಿದ ರಾ[1]ಮು[1]ವಾಕ್ಯಕ್ಕೆ ಭರತಂ ಭೀತನಾಗಿ

ಕಂದ : ಧರಣಿಯನಾಳುವದಕ್ಕಾ
ನರುಹನೆ ರಘುರಾಮ ನಿಮ್ಮ ಪಾದುಕೆಯುಂ ಮುಂ
ದಿರಿಸಿಕೊಂಡಿ[2]ರ್ಪೆನೆನುತುಂ[2]
ತಿರುಗಿದ [3]ತನ್ಮಂತ್ರಿ[3]ಮುಖ್ಯ[4]ರೊಡನಾ[4] ಭರತಂ ೨೧೦

ವರುಷ ಹನ್ನೆರಡು[5]ವರೆಗಾ[5]
ನರಣ್ಯವಾಸವನು ಮಾಡಿ ಬೇಗಲಯೋಧ್ಯಾ
ಪುರಕೆ ನೀಂ ಬಾರದಿರ್ದೊಡೆ
ಯುರಿಯೊಗುವೆಂ ರಾಮ ಕೇಳ್ಳುದೆಂದಂ ಭರತಂ ೨೧೧

ಎಂದು ರಘುಪತಿಯ ಚರಣ
ದ್ವಂದ್ವಕ್ಕಭಿನಮಿಸಿ ಬೀಳುಕೊಂಡಾಕ್ಷಣ[6]ದೊಳ್[6]
ನಂದೀಗ್ರಾಮಕೆ ಭರತಂ
ಬಂದಂ ತಾಂ ಪುಗದಯೋಧ್ಯೆಯುಂ ತಮ್ಮ[7]ನೊಡಂ[7] ೨೧೨

ವಚನ : ಅಂತು ಭರ[8]ತಂ[8] ಅಯೋಧ್ಯೆ[9]ಗೆ[9] ಸಕಲ ಚಾತುರ್ಬಲಮಂ [10]ಮಂತ್ರಿಯಂ ಕ[10]ಳುಪಿ ನಂದೀಗ್ರಾಮದೊಳ್ ನಿಂದು ಸಿದ್ಧಾಯಶೇಷಮಂ ಮುಟ್ಟದೆ ಸುಂಕವೆಂಬುದಂ ಪುಟ್ಟಿಸಿ ಸಕಲ ತಳತಂತ್ರಮುಂ ಸಲಪುತಿರ್ದನಿತ್ತಲ್

ಕಂದ : ಇರಲಿತ್ತ ರಾಮಚಂದ್ರಂ
ಧರಣಿಜೆ ಲಕ್ಷ್ಮ[11]ಣ[11]ರು ದಂಡಕಾರಣ್ಯಕ್ಕಂ
ಬರುತೆ ಶರಭಂಗ[12]ಮುನಿಯಂ[12]
ದರುಶನ ಮಾಡಲ್ ವಿರಾಧರಾಕ್ಷಸನಿರ್ದಂ ೨೧೩

---

[1] ಮ ಚಂದ್ರಸ (ಚ) [2] ಹೆನೆನುತ್ತುಂ (ಗ ಚ) [3] ನಾ ಮಂತ್ರಿ (ಗ ಚ) [4] ಸಹಿತಂ (ಗ) [5] ತನಕಾ (ಚ) [6] ದಿಂ (ಚ) [7] ಸಹಂ (ಗ ಚ) [8] ತ ಚಕ್ರೇಶ್ವರಂ (ಚ) [9] ಗೆ ಮಂತ್ರಿಸುಮಂತ್ರ ಸಹ (ಗ) ಗೆ ಸುಂತ್ರಿ ಸಹಂ (ಚ) [10] ಕ (ಚ) [11] ನು (ಚ) [12] ಋಷಿಯುಂ (ಚ)

ವಚನ : [1]ಅವನಂ[1] ಕಂಡು ಮಹಾಯುದ್ಧ[2]ದೊಳ್[2] ಕೊಂದು ಅಗಸ್ತ್ಯಾಶ್ರಮಕ್ಕೆ ಬಂದು ಸುತೀಕ್ಷ್ಣನಂ ಕಂಡು ಆಯಗಸ್ತ್ಯನಿಂ [3]ಧನುರ್ಬಾಣಂಗಳಂ[3] ಕೈಕೊಂಡು ರಾಕ್ಷಸ ವಧೆಯಂ ಮಾಡುವೆನೆಂದು [4]ಶ[4]ಪಥಂಗೈದು ಆಯಾಶ್ರಮಬಾಧಕರಪ್ಪ ರಕ್ಕಸರಂ[5] ಕೊಂದನಂತುಮಲ್ಲದೆಯುಂ

ಕಂದ : ಕಿಱುವಿದಿಱುತೂಳ್ ಪುತ್ತಿನವೊಲ್
ನೆಱೆ ತಪಮಂ ಮಾಡುತಿರ್ಪ ಶಂಬುಕನೆಂಬಾ
ಸಱಂಗರಕ್ಕಸನ ಕಾಣುತೆ
ತಱಿದಂ ಖಡ್ಗದೊಳೆ ಲಕ್ಷ್ಮಣಂ ಕಡುಭರದಿಂ ೨೧೪

ವಚನ : ಅಂತು ಪೊಯ್ಯೆ ಬಿದ್ದ ಶಂಬುಕನ[6]ವ್ವೆ[6] ಶೂರ್ಪನಖಿ ತನ್ನ ಮಗನಂ ಕೊಂದವನಂ ತಿಂಬೆನೆಂದು ಬಂದು ಲಕ್ಷ್ಮಣನ ರೂಪಿಂಗೆ ಸೋತು ಕಾಮರೂಪಿಯಾಗಿ ರಾಮಚಂದ್ರನಿಂ ಪೇೞಿಸುವೆನೆಂದು ರಾಮುಂಗೆ ಬಿನ್ನೈಸಿ ಲಕ್ಷ್ಮಣಂಗೆ [7]ಎನ್ನುವಂ[7] ಸಾರ್ಚುವುದೆನಲು ರಾಮಂ ಕರೆದವಳ ಬೆನ್ನಿನೊಳಕ್ಕರಮಂ ಬರೆದು ಲಕ್ಷ್ಮಣನಲ್ಲಿಗೆ ಕೞುಪುವುದುಂ ಲಕ್ಷ್ಮಣನದಂ ನೋಡಿ

ಕಂದ : ಶೂರ್ಪನಖಿಯೆಂಬ [8]ರಕ್ಕಸಿ[8]
ಯಾರ್ಪಿಂ ಲಕ್ಷ್ಮಣನ[9]ನೊಲಿಸಿ[9] ಕೊಂಡ[10]ಹೆನೆ[10]ನುತುಂ
ದರ್ಪದಿನೈತರಲವಳಂ
ಕೂರ್ಪಿಂ ನಾಸಿಕವನಱಿದನಾ ಸೌಮಿತ್ರಂ ೨೧೫

ವಚನ : ಅಂತವಳ ನಾಸಿಕಾಚ್ಛೇದನಂಗೈಯೆ ಅವಳ್ ಪೋಗಿ ಖರ ದೂಷಣ ತ್ರಿಶಿರರ್ಗೆ ಮೊಱೆಯಿಡಲವರ್ ತಮ್ಮ ಬಲಂಗೂಡಿ ರಾಮ[11]ನ[11] ಮೇಲೆತ್ತಿ ಬರೆ

ಚಂಪಕಮಾಲೆ

ಕವಿದುದು ರಾಕ್ಷಸೇಶ ಬಲವಾ ಬಲವಂ ರಘುರಾಮನಂಬಿನಿಂ
ಕವಿಸಿ ಕನಲ್ದು ಸೀಳಿಯದ ಕಾಣುತ[12]ಲಾ[12] ಖರ ದೂಷಣಾದ್ಯರಂ
ಕವಿಸಲಗುರ್ವಿನಿಂ ಸರಲಸೋನೆಯ ಸೂಸುತೆ ರಾಮಬಾಣದಿಂ
ದವರ ವಿಭಾಡಿಸುತ್ತೆ ತವೆ ಕೊಂದನು ರಾಮನವೇಂ ಪ್ರತಾಪಿಯೋ ೨೧೬

---

1 ಅಂತಿರ್ದ ವಿರಾಧರಾಕ್ಷಸನಂ (ಗ) 2 ದಿಂವ (ಚ) 3 ಬಿಲ್ಲು ಅಕ್ಷಯ ಬಾಣ ಖಡ್ಗ ಬತ್ತಳಿಕೆಗಳಂ (ಗ ಚ) 4 ರಾಮುಂ ಶ (ಚ) 5 ಪ್ರಸಮಸ್ತರಂ (ಚ) 6 ತಾಯಿ (ಚ) 7 ನೆನ್ನುರಂ (ಗ) 8 ರಾಕ್ಷಸಿ (ಚ) 9 ವರಿಸಿ (ಗ) 10 ಹುದೆ (ಕ) 11 ಚಂದ್ರನ (ಚ) 12 ಮಾ (ಚ)

ಉತ್ಪಲಮಾಲೆ

ತಾನಱಿಯಟ್ಟುಕೊಂದ ರಘುರಾಮ ಸಲಕ್ಷ್ಮಣಗೂಡಿತಾಂ ಜನ
ಸ್ಥಾನ ನಿವಾಸಿಯಾದ ಖರ ದೂಷಣರೊಳ್ ಪದಿನಾಲ್ಕುಲಕ್ಷಮಂ
ಆನುವರಾರು ಕಾಣೆನೆನಿಪಾ ಧ್ವನಿಯಂ ದಶಕಂಠ ಕೇಳಿ ಕೋ
ಪಾನಳನಾಗಿ ಮಾತುಳನೆನಿಪ್ಪ ಸುರಾರಿಯ ಕಂಡನಾಕ್ಷಣಂ ೨೧೭

ಮತ್ತೇಭವಿಕ್ರೀಡಿತ

ಅದ ಕಂಡಾ ಖರ ದೂಷಣ ತ್ರಿಶಿರದೈತ್ಯರ್ ನೊಂದುಕೊಂಡಾಗಳ
ಗ್ಗದ ಚಾತುರ್ಬಲಗೂಡಿ ಬಂದು ರಘುಸಂಜಾತರ್ಕಳೊಳ್ ಕಾದಿ ನೊಂ
ದುದ ಕೇಳ್ದಾಗಳೆ ರಾವಣಂ ದುರುಳ ಮಾರೀಚಂಗೆ ಪೇೞಲ್ಕವಂ
ಮುದದಿಂ ಪೊಮ್ಮೃಗಮಾಗಿ ತೋಱಲದ ಕಂ[1]ಡಂ[1] ರಾವಣಂ ನಲ್ಮೆಯಿಂ ೨೧೮

ವಚನ : ಅಂತು ಹೊ[2]ಮ್ಮೃಗಮಾ[2]ದ ರೂಪಂ ಕಂಡು ಎಲೆ ಮಾವ ಈ ರೂಪಿ[3]ನೊಳ್ ನೀಂ[3] ರಾಮನಂ ಕೊಂಡುಪೋಗು ನಾಂ ಸೀತೆಯಂ ಕೊಂಡುಪೋಪೆನೆನೆ ಮಾರೀಚಂ ಬಲಯುತನಾದ ರಾಮನ ಕೂಡೆ ವಿರುದ್ಧಂ ಬೇಡವೆನೆ ರಾವಣಂ ಕೋಪದಿಂ ಸುರಗಿಯಿಂ ಪೊಯ್ವೆನೆಂದನುಗೆಯ್ಯೆ ಇವನ ಕೈ[4]ಯ್ಯಿಂ[4] ಸಾವುದಱಿಂ ರಾಮ[5]ಪಾದಮಂ ಸೇರುವೆನೆಂದು[5] ಮಾರೀಚಂ ಪೊಮ್ಮೃಗಮಾಗಿ

ಕಂದ : ತಟಿತಟಿಸುವ ಕುಂದಣದೊಲ್
ನಳನಳಿಸುವ ಕಾಯಕಾಂತಿಯಿಂದಾಡುತೆ ಪೊಂ
ಜೆಳೆಮೆಯ್ಯ ಸೀತೆಯಿದಿರೊಳ್
ಸುೞಿದಂ [6]ಪೊಮ್ಮೃಗದ[6] ವೇಷದಿಂ ಮಾರೀಚಂ ೨೧೯

ವಚನ : ಅಂತು ಸು[7]ೞಿವ ಹೊಮ್ಮೃಗಮಂ ಸೀತೆ[7] ಕಂಡು ಇದಂ ತಂದುಕೊಡಿಮೆಂದು [8]ರಾಮ[8]ನಂಡಲೆವುದುಂ ಸೀತಾವಚನಮನತಿಕ್ರಮಿಸಲಂಜಿ ಲಕ್ಷ್ಮಣನಂ ಜಾನಕಿಯ ಕಾಪಿಂಗಿರಿಸಿ [9]ಮೃಗಮಂ ಬೆನ್ನಟ್ಟಿ[9] ಮಾರ್ಕಂಡೇ[10]ಯಾಶ್ರಮದೆಡೆಯೊಳ್ ಅದಂ[10] ಬೀೞಿಲಿಸಲೊಡನೆ ಹೋ ಲಕ್ಷ್ಮಣ ಎನುತುಂ ಬೀೞಲಾ [11]ರವಮಂ ಸೀತೆ[11] ಕೇಳಿ ರಾಮನನಾವ[12]ರಕ್ಕಸರು[12] ಕೊಂದರೋ ಲಕ್ಷ್ಮಣ ನೀಂ ಪೋಗೆನೆ ರಾಮಂಗೞಿವುಂಟೆ [13]ನೀವು[13] ಸುಮ್ಮನಿರಿಮೆನೆ ಎನ್ನ ಕಾದಿರ್ಪುದರಿಂ ರಾಮನಂ ನೋಡಿ[14]ಬರ್ಪುದು[14] ನಿನಗಸಹ್ಯಮೆನೆ ಲಕ್ಷ್ಮಣಂ [15]ನಡುಗಿ[15] ಸಪ್ತಮಂಡಲಮಂ ಬರೆದು ನೀಮಿದಂ ದಾಂಟದಿರಿಮೆಂದು ಬು[16]ದ್ಧಿ[16]ಪೇೞ್ದು

---

[1] ಡಾ (ಚ) [2] ಮೃಗವಾ (ಚ) [3] ನಲ್ಲಿ ನೀನು (ಚ) [4] ಯಿಂದ (ಚ) [5] ಚಂದ್ರನ ಶ್ರೀಪಾದಮಂ ಕೂಡುವೆನೆಂದು (ಚ) [6] ಹೊಮ್ಮೃಗದ (ಚ) [7] ದಾಡುವ ಹೊಮ್ಮೃಗಮಂ ಸೀತಾದೇವಿ (ಚ) [8] ಶ್ರೀರಾಮಚಂದ್ರ (ಚ) [9] ತಾಂ ಮೃಗದ ಬೆಂಬಳಿಸಂದ. (ಚ) [10] ಯನಾಶ್ರಮದಲ್ಲಿ ಮೃಗಮಂ (ಚ) [11] ಧ್ವನಿಯಂ ಸೀತಾದೇವಿ (ಚ) [12] ರಾಕ್ಷಸರು (ಚ) [13] ನೀಂ (ಗ) [14] ಬಪ್ಪುದುಂ (ಗ ಚ) [15] ಬೆದಱಿ (ಗ ಚ) [16] ದ್ಧಿಯಂ (ಚ)

ಶಾರ್ದೂಲವಿಕ್ರೀಡಿತ

ರಾಮಂ ಲಕ್ಷ್ಮಣರತ್ತ [1]ಹೊಮ್ಮಿಗಮ[1]ನ್ನೈದಲ್ಕಿತ್ತಲಾ ರಾವಣಂ
ಕಾಮೋದ್ರೇಕದೆ ಭಿಕ್ಷುರೂಪನುಜಿ[3] ತಾಳ್ದಾ [2]ಗಲ್[2] ಮನೋರಾಗದಿಂ
ಭೂಮಿಜಾತೆಯನೆತ್ತಿಕೊಂಡು ಜಿಗಿಯಲ್ ಕಂಡಾ ಜಟಾಯುಷ್ಯನಿ
ಸ್ಸೀಮಂ ವಿಷ್ಣುಪದಾರ್ಚಿತಂ ತಡೆದನಂದಾ [3]ಯುದ್ಧದೊಳ್ ದೈತ್ಯನಂ[3] ೨೨೦

ಚಂಪಕಮಾಲೆ

ಬಿಡು ಬಿಡು ಖ್ಯಾತೆಯಂ ಭುವನಮಾತೆಯನಾ ಜನಕಾತ್ಮಜಾತೆಯಂ
ಕಡು ಕಡು ಮಾನಿಯಂ ನಿಖಿಲದಾನಿಯುನೊಯ್ವರೆ ವಿಶ್ವಯೋನಿಯಂ
ಹಿಡಿ ಹಿಡಿ ಚಾಪಮಂ ಶರಚಮೂಪಮ ನಿನ್ನಯ ರೌದ್ರರೂಪಮಂ
ಕೆಡಿಸದೆ ಮಾಣೆನಾಂ ರಘುಜನಾಣೆನುತುಂ ಪೊಡೆದಂ ಸುತ್ರಾಣನಂ ೨೨೧

ಕಂದ : ಹೊಡೆಯಲ್ ನೊಂದಾ ರಾವಣ
ಘುಡುಘುಡಿಸಿ ಜಟಾಯುಪಕ್ಷಿ ಪಕ್ಷದ್ವಯಮಂ
ಕಡಿದಿಟ್ಟುಹಿ ಸೀತೆಸಹಿತಂ
ಕಡುವೇಗ[4]ದಿ ನೋ[4]ಡಿ ಪೊಕ್ಕ ಲಂಕೆಯನಿತ್ತಲ್ ೨೨೨

ವಚನ: ರಾಮಲಕ್ಷ್ಮಣರ್ [5]ಕಾಂಚನಪೆರಳೆಯಂ ಮಡುಪಿ[5] ತಂದು ಪರ್ಣಶಾಲೆಯೊಳ್ ಸೀತೆಯಂ ಕಾಣದೆ

ಕಂದ : ತನಿನೇಹವುಕ್ಕಿ ಕಣ್ಣಿನ
ಕೊನೆಯೊಳ್ ಕಂಬನಿದುಟ್ಟುಂಕಿ ರಘುರಾಜೇಂದ್ರಂ
ಮನೆಯೊಳಅಸುತ್ತೆ ಸೀತಾಂ
ಗನೆಯಿಹ ಕೋಣೆಯನು ನೋಡಿತಿಲ್ಲಪವೆಂತೋ ೨೨೩

ವಚನ : ಅಂತಱಿಸಿ ತರಹರಿಸಲಾ[6]ಱ[6]ದೆ

ಮತ್ತೇಭವಿಕ್ರೀಡಿತ

ಸಸಿಯೋ ಸಂಪಗೆಯೋ ತನೂಲಲತೆಯೋ ಬೆಳ್ದಿಂಗಳೋ ಮುಗ್ಧಸಾ
ರಸಮೋ ಕಾಣಿರೆ ಪೂರ್ಣಚಂದ್ರಮುಖಿಯಂ ಸಚ್ಚಂಪಕಾಮೋದಮಾ
ನಸೆಯಂ ದಿವ್ಯಾಲತಾಂಗಿಯಂ ಧವಳನೇತ್ರಾಪಾಂಗೆಯಂ ಸಂಕಜೋ
ಲ್ಲಸದತ್ಯುನ್ನತ ಕುಟ್ಮಲಸ್ತನಭರ ಪ್ರಖ್ಯಾತೆಯಂ ಸೀತೆಯಂ ೨೨೪

---

[1] ಹೊಮ್ಮೃಗವ (ಚ) [2] ಗಂ (ಚ) [3] ನೈತ್ಯನಂಯುದ್ಧಕಂ (ಚ) [4] ದೊಳೋಂ (ಗ(
[5] ಪೊಮ್ಮಿಗವಂ ಕೊಂದು (ಗ ಚ) [6] ಗ (ಕ)

ಮತ್ತೇಭವಿಕ್ರೀಡಿತ

ಕಿಡಿಯಂ ಸೂಸುವರೇ ಶಶಾಂಕ ಮಳಿಸಂ ಕೈಕೊಂಬರೇ ಚೈತ್ರಯೆ
ನ್ನೆಡೆಗಂ ಪಾಯ್ವರೆ ಮಂದಮಾರುತ ಮಹಾನಿಷ್ಠೂರದಿಂದೆನ್ನ ನೀಂ
ನುಡಿಯಲ್ ತಕ್ಕುದೆ ತುಂಬಿ ಬೀಟಲಿಸಲೇಂ ಕಂಜಾಸ್ತ್ರವೈದೇಹಿ ಕೈ
ವಿಡಿದೆನ್ನಂ ಪೊರೆವನ್ನಕಂ ಸಲಹಿರೇ ಕಾರುಣ್ಯಮಂ ಸೂಸಿರೇ ೨೨೫

ವಚನ : ಇಂತೆಂದಾಜಿತೀಟಿವಷ್ಟಿಗೆ ಸಂದ ರಾಮನಂ ಸೀತೆಯನಱಸುವ ಬನ್ನಿಮೆಂದು ಲಕ್ಷ್ಮಣಂ ಸಂತೈಸಿಕೊಂಡು ಬಪ್ಪನ್ನಂ ಮುಂದೆ [1]ಸಂ[1]ಪಾತಿಯ [2]ತಮ್ಮನಾದ[2] ಜಟಾಯುಷ್ಯಂ ಬಿದ್ದಿರಲಾ ಪಕ್ಷಿಯಂ ಕಂಡು ನುಡಿ[3]ಸುವ[3]ದುಂ

ಕಂದ : ದೇವ ರಘು[4]ಜಾತ[4] ಸೀತಾ
ದೇವಿಯ ದಶಕಂಠನೊಯ್ಯೆ ಕಾದಿದೆನವನಿಂ
ಸಾವು ಸಮನಿಸಿತು ಮುಕ್ತಿಯ
ನೀವುದು ಹರಿಹರಿ ಎನುತ್ತಲಸುವಂ ಬಿಟ್ಟಂ ೨೨೬

ವಚನ : ಅಂತು [5]ಜೀವಂ[5] ಬಿಟ್ಟ ಜಟಾಯುಷ್ಯಂಗೆ ಸಂಸ್ಕಾ[6]ರಂಗೈದಿ[6] ಬರುತಿರಲ್ ಮುಂದೆ ಕಬಂಧರಾಕ್ಷಸಂ [7]ರಾಮನಿ[7]ಗಡ್ಡಬರಲವನಂ ಕೊಲ್ವುದುಂ ಅವಂ ಸ್ವರ್ಗಪ್ರಾಪ್ತಿಗೈದುವಲ್ಲಿ ಮುಂದೆ ಶಬರಿಯಾಶ್ರಮ[8]ವುಂಟು ಅಲ್ಲಿಗೆ[8] ಬಿಜಯಂಗೈವುದೆಂದು ಸ್ವರ್ಗಸ್ಥನಾದಂ ಆ ಮಾ[9]ತಿನಿ[9]ಂ ಮುಂದೆ ರಾಮ ಲಕ್ಷ್ಮ[10]ಣರ್[10] ಶಬರಿಯಂ ಕಂಡು ವಿನಯೋಕ್ತಿಗಳಿಂ ನಮಸ್ಕರಿಸೆ

ಕಂದ : ಆ ಶಬರಿ ರಾಮಚಂದ್ರನ
ಬೇಸರನೆಲ್ಲವನು ಬಿಡಿಸಿ ವಿನಯೋಕ್ತಿಗಳಿಂ
ದೀ ಸರಣಿಗೊಂಡು ಪೋಗಲ್
ಲೇಸುಹುದಿಲ್ಲಿಂದ ಮುಂ[11]ದೆಯೆನೆ[11] ನಡೆತಂದರ್ ೨೨೭

ವಚನ : ಅಂತು ಬರ್ಪಿನಂ ಮುಂದೆ

ಕಂದ : ಎರಳೆಯೊಳೊಂದಿಹ ಪುಲಿಯಂ
ಕರಿಯೊಳ್ ಮೊಗವಿಟ್ಟು ನಲಿವ ಪಂಚಾಸ್ಯ[12]ಗಳಿಂ[12]
ಶರಭಂಗಳೊಳಾಡುತ್ತಿಹ
ಸರಸದ ಭೇರುಂಡಜಾತಿಯೆಸೆವವಲಂಪಿಂ ೨೨೮

---

[1] ಷಂ (ಗ) [2] ಸಹಜಾತನಪ್ಪ (ಗ) ಸಹಜಾತನಾದ (ಚ) [3] ಸೂ (ಚ) [4] ರಾಮ (ಗ ಚ) [5] ಪ್ರಾಣಮಂ (ಗ ಚ) [6] ರಮಂಗೂಡಿ (ಗ ಚ) [7] ಶ್ರೀರಾಮಚಂದ್ರಂ (ಚ) [8] ಮಿರ್ಪುದಲ್ಲಿಗೆ (ಗ) ಇದ್ದಿತು ಅಲ್ಲಿಗೆ (ಚ) [9] ತವಿಡಿಮ (ಚ) [10] ಣರು ಎಂದು (ಚ) [11] ನೆದಕೆ (ಗ ಚ) [12] ಳಂ (ಚ)

ವಚನ : ಅಂ[1]ತಾಶ್ಚರ್ಯವಂ[1] ರಾಮ ಲಕ್ಷ್ಮಣರ್ ನೋಡುತ್ತುಂ ಬರಲ್ ಮುಂದೆ ಪರಿವ ತುಂಗಭದ್ರೆಯಿಂ ರಾಜಿಸುವ ಪಂಪಾಕ್ಷೇತ್ರಮಂ ಕಂಡು ಶ್ರೀರಾಮ ಲಕ್ಷ್ಮಣರ್ ಆ ವಿರೂಪಾಕ್ಷಲಿಂಗಕ್ಕೆ ನಮಸ್ಕಾರಂಗೈದು ಒಂದು ಮರದಡಿಯಲ್ಲಿ ಲಕ್ಷ್ಮಣನ ತೊಡೆ[2]ಯ ಮೇಲೆ[2] ಮಂಡೆಯನಿಟ್ಟು [3]ಶ್ರೀರಾಮಚಂದ್ರಂ ವಿಶ್ರಮಿಸಿರ್ದು ಎಲೆ[3] ಲಕ್ಷ್ಮಣ ಈ ವೃಕ್ಷಾಗ್ರದಲ್ಲಿ ಒಂದು ಕಪಿಗೆ ಸುವರ್ಣದ ಕೌಪೀನವುಂ ರತ್ನಕುಂಡಲಂಗ[4]ಳುಮಿವೆ[4] ಇದೇನಾಶ್ಚರ್ಯಮೆನೆ ಮರದ ಮೇಲಿರ್ದ ಹನುಮಂತಂ ಕೇಳಿ ಈ ಕೌಪೀನ ಕುಂಡಲಂಗಳಂ ಕಂಡವನೇ ಒಡೆಯನೆಂದು ನಮ್ಮ ತಾಯಿ ನಿರೂಪಿಸಿ[5]ರ್ದಳು[5] ಅದಱಿಂದೀತನೇ ಒಡೆಯ ನೆಂ[6]ದು[6] ಮರದಿಂದಿೞಿದು

ರಥೋದ್ಧತ

ಅಂದು ಕಂಡು ಹನುಮಂತ ರಾಮನಂ
ನಿಂದು ಕೈಮುಗಿಯುತೆಂದ ಭಕ್ತಿಯಿಂ
ತಂದೆ ನಿಮ್ಮ ಚರಣಾರವಿಂದಮಂ
ಬಂದು ಸೇರಿದೆನು ದೇವ ರಕ್ಷಿಸೈ ೨೨೯

ವಚನ : ಅಂತು ಬಂದು ನಮಸ್ಕಾರಂಗೈದ ಹನುಮಂತನಂ ಕಂಡು ನೀನಾರೆಂದು ಕೇಳ್ವುದುಂ ತನ್ನ ವೃತ್ತಾಂತಮನೆಲ್ಲಮಂ ಬಿನ್ನಪಂ ಮಾಡಿದ ಹನುಮಂತಂಗೆ ಸಂತೋಷಂಬಟ್ಟು ಸೀತಾದೇವಿಯಂ ಕೊಂಡುಪೋದ ನಿಮಿತ್ತಂ ಬಂದೆವೆಂದು [7]ರಾಮಂ[7] ನಿರೂಪಿಸೆ ಹನುಮಂತನಿಂತೆಂದಂ

ಕಂದ : ದೇವ ನಾ ನಿಮ್ಮ ಚರಣದ
ಸೇವೆಯೊಳಿಹೆನೆಂದು ಬಿನ್ನಹಂ ಮಾಡಲು ರಾ
ಜೀವಾಕ್ಷ ರಾಮಚಂದ್ರಂ
ಭಾವ ವಿಶುದ್ಧಿ[8]ಯೊಳ್[8] ಹನುಮನಂ ಕೈವಿಡಿದಂ ೨೩೦

ವಚನ : ಅಂತು ಪ್ರೇಮದಿಂ ನಿಜಸೇವಕನಾದ ಹನುಮಂತನಂ ಕೈವಿಡಿಯಲಾ ಹನುಮಂತನಿಂತೆಂದಂ

ಕಂದ : ಮುಂದೆ ನಿಮಗೇನು ಕಾರಿಯ
ವಿಂದೀವರನಾಭ ಪೇೞ್ವುದೆನೆ ಕಲಿಹನುಮಂ
ಗೆಂದ ರಘುರಾಮನಾ ದಶ
ಕಂಧರನಂ ಮರ್ದಿಸುವಡೆ ಪೋಪುವೆ ಕಜ್ಜಂ ೨೩೧

---

1 ತಚ್ಚರಿಯಂ (ಗ ಚ) 2 ಯಲ್ಲಿ (ಚ) 3 ಎಲೆ (ಕ) 4 ಳುಂಯಿದೆ (ಚ)
5 ದ್ದಳು (ಚ) 6 ದು ಹನುಮಂತಂ (ಚ) 7 ರಾಮಚಂದ್ರಂ (ಗ ಚ) 8 ಯಲಿ (ಚ)

ಉತ್ಪಲಮಾಲೆ

ಆವಡೆ ಬಿನ್ನಪಂ ವಿಭುವೆ ನಮ್ಮಯ ತಾಯೊಡವುಟ್ಟಿದರ್ ಸದಾ
ಕಾದುತುಮಿರ್ಪರೊಬ್ಬ ವಧು ತಾರೆಯೆನಿಪ್ಪಳಿಗೋಸ್ಕರಂ ಮಹ
ತ್ತಾದ ಸುಘೈರ್ಯ ವಾಲಿಯವ ರಾವಣನಂ ಪಿಡಿತರ್ಪನಾತನಂ
ಸಾಧಿಸದಲ್ಲದಾ ವರಸುಕಾರ್ಯಗಳಾಗ[1]ವು[1] ರಾಘವೇಶ್ವರಾ ೨೩೨

ಕಂದ : ಸುಗ್ರೀವನೆನಿ[2]ಸುವಾ[2]ತಂ
ಗಗ್ರಜನಾ ವಾಲಿಯಿರ್ವರಧಿಕೋನ್ನತರು ಸ
ಮುಗ್ರಬಲರೊಬ್ಬ ತಾರೆಗೆ
ವಿಗ್ರಹವಂ ಮಾಡುತಿರ್ಪರಿರುಳುಂ ಪಗಲುಂ ೨೩೩

ಎಂದಡೆಲೆ ಹನುಮ ನೀನೀ
ಗೆಂದವನವನಾವ [3]ತಾವೊಳಿ[3]ರ್ದಪನವನಂ
ಕೊಂದಪೆವು ನಿಲ್ಲು ಕಾರ್ಯಕೆ
ಸಂದೇಹಂ ಬೇಡವೆಂದನಾ ರಘುರಾಮಂ ೨೩೪

ಎನೆ ಹೃಹಸಾದವೆನುತುಂ
ಹನುಮಂತಂ ರಾಮಲಕ್ಷ್ಮಣರನೊಡಗೊಂಡಾ
ಘನಕಿಷ್ಕಿಂ[4]ಧಾಪುರಕ[4]
ತ್ಯನುನಯದಿಂ ಬಂದರೊಲ್ದು ಕೊಂಡಾಡುತ್ತುಂ ೨೩೫

ವಚನ : ಅಂತು ಬಂದು ಹನುಮಂತಂ ಸುಗ್ರೀವನಂ ಕಾಣಿಪುದುಂ ರಾಮಚಂದ್ರಂ ಕೈವಿಡಿದು ಸುಗ್ರೀವನಿಂದಗ್ನಿಸಾಕ್ಷಿತಮಾಗಿ ವಿಶ್ವಾಸಂಗೈಸಿಕೊಂಡು [5]ತಾಂ[5] ವಾಲಿಯಂ ಕೊಲ್ವೆನೆಂದಾತಂಗಭಯಹಸ್ತಮಂ ಕೊಟ್ಟು ಮುಂದೆ ಪೋಪನ್ನಂ ಸುಗ್ರೀವಂ [6]ರಾಮಚಂದ್ರನ [6]ಸತ್ತ್ವಮನಱಿಯವೆ ವಾಲಿ ಕೊಂದ ರಾಕ್ಷಸನ ಕಾಯಮಂ ತೋಱೆ ರಾಮಂ ಪಾದಾಂಗುಷ್ಠದಿಂ ಮಿಸಾಂಟೆ ನೂಱುಗಾವುದಂ ಪಾಱೆ ಬೀೞೆ ಸುಗ್ರೀವಂ ಸಂತೋಷಂಬಟ್ಟು ಮುಂದಿರ್ದ ಸಪ್ತತಾಳಂ ಕಡಿದರ ಕ್ಕೆಯ ವಾಲಿಯೞಿವನೆಂದು ಸುಗ್ರೀವಂ ಬಿನ್ನೈಸೆ ರಾಮನದಂ ಪಱಿಯಲೆಚ್ಚು ಮಾಲ್ಯವಂತಕ್ಕೆ ಪೋಗಿ ವಾಲಿಯಂ ಕೆಣಕಿಕೊಂಡು ಬಾರೆಂದು ಸುಗ್ರೀವನಂ ಕೞುಪೆ

---

1 ದು (ಗ) 2 ಪನಾ (ಗ) 3 ಠಾವಿಲಿ (ಚ) 4 ದಾ ಚಲಕ (ಚ) 5 ತಾನು (ಚ)
6 ಯೆನ್ನ (ಚ)

ಕಂದ : ಬಂದು ಸುಗ್ರೀವ ಗವಿಗಳ
ಮುಂದಬ್ಬರಿಸಲ್ಕೆ ತಾರೆ ಬೇಡವೆನಲ್ಕ್ರೈ
ತಂದು ಕಲಿವಾಲಿ ಪೊಯ್ಯೆ
ಲ್ಕೊಂದುಜಿ೩ ಸುಗ್ರೀವ ಬಂದ ರಾಮುನ ಬಳಿಗಂ ೨೩೬

ವಚನ : ಅಂತು ನೊಂದು ಬಂದ ಸುಗ್ರೀವನಂ ಸಂತೈಸಿ ತನ್ನ ಕೊರಲಮಾಲೆಯಂ ಕೊಟ್ಟು ನೀನಿದ[1]ನಿಟ್ಟುಕೊಂಡವನೊಡನೆ[1] ಕಾದು ನಮಗೆ ಕುಱುಹುಗಾಣಿಸದೆಂದಾತನಂ ಕಟುಹಲಾ ಸುಗ್ರೀವಂ ಬಂದು ವಾಲಿಯೊಳ್ ಹೋರು[2]ತ್ತಿ[2]ರೆ ರಾಮುಚಂದ್ರಂ ಕಡೆಯುಲಿದ್ದು ವಾಲಿಯನೊಂದುಕೋಲೊಳೆಸೆಯೆ

ಕಂದ : ಕಂ[3]ಡಂ[3] ವಾಲಿಯು ರಾಮುನ
ಖಂಡಿತ ಭುಜಬಲವನಿನ್ನು ನಿನಗೆಣೆಯಾರ್ ಭೂ
ಮಂಡಲದೊಳಧಿಕನೆನುತುಂ
ಕೊಂಡಾಡುತಲೆಚ್ಚ ಬಾಣಮಂ ಮಿಗೆ ಪಿಡಿದಂ ೨೩೭

ವಚನ : ಅಂತು ಪಿಡಿದು ಎಲೆ ದೇವಾ ರಾವಣನೆಂಬ ಹುಲುವಂ ನಿನ್ನುಗುರ ಕೊನೆಯಲ್ಲಿ ಕಟ್ಟುವೆನೆನ್ನುತಮಥನಮನೊರ್ವನೆ ಮಾಡಿವೆ ಎನ್ನಂತಪ್ಪ ವೀರನನೆಂದು [4]ಕಾಬೆ ನೀ[4]ನೆಚ್ಚಬಳಿಕಂ ಹುಸಿಯಿಲ್ಲವೆಂದೆನು[5]ತ[5] ಮತ್ತಿಂತೆಂದಂ

ಕಂದ : ನಡೆದಾಡಲಿ ಕುಲಶೈಲಂ
ಪೊಡವಿಯ ದಿಗಿಭಂಗಳಿಟುಹಿಪೋಗಲಿ ಸೂರ್ಯಂ
ಜಡನಾಗಲಿ ರಘುರಾಮುನ
ನುಡಿಗಂ ಬಾಣಕ್ಕೆ ಮತ್ತೆ ಹುಸಿಹುಟ್ಟುವುವೇ ೨೩೮

ವಚನ : ಅದಱಿಂ[6] ನಿನ್ನ ಬಾಣಕ್ಕೆ ಹುಸಿಯಿಲ್ಲ ಎನ್ನೀ ಪರಾಕ್ರಮಂ [7]ನೀಂ ಕಾಣಬೇಕೆಂದು[7] ಬಾಣಮಂ ಪಿಡಿವೆ ಎನ್ನ ಮಗನಂಗದಂ ನಿನ್ನ ಕೈಲೆಡೆಯೆಂದು[8]ಕೊಟ್ಟು[8] ವಾಲಿ ಪಿಡಿದ ಬಾಣಮಂ ಬಿಡೆ ಬೆನ್ನೊಳ್ ಮೂಡಿ ವೈಕುಂಠಪ್ರಾಪ್ತನಾ[9]ದಂ ಇತ್ತಲ್ ರಾಮುಂ[9] ಸುಗ್ರೀವಂಗೆ ತಾರೆಯಂ ಕೊಟ್ಟು ಅಂಗದಂಗೆ ಯುವರಾಜಪಟ್ಟಮಂ ಕಟ್ಟಿ

ಕಂದ : ವಾಲಿ ಮೃತನಾಗಲಾತನ
ಬಾಲಕನಂಗದನು ಹನುಮ ಸುಗ್ರೀ[10]ವರ್[10] ಸ
ಮ್ಮೇಳದಲಾ ಕಪಿಸೇನಾ
[11]ಜಾಲಸಹಂ[11] ರಾಮುಚಂದ್ರನೊಡನೈತಂದರ್ ೨೩೯

---

1 ನಿಟ್ಟುಕೊಂಡವನೊಳು (ಚ) ನಿಕ್ಕಿಯುವನೊಳ್ (ಗ) 2 ತ್ತಮಿ (ಗ) ತ್ತಲಿ (ಚ) 3 ಡನಾ (ಚ) 4 ತಾ ಬೆನ್ನಿ (ಕ) 5 ತ್ತುರಿ (ಗ) 6 ರಿಂದಂ (ಗ) 7 ನಿನ್ನೊಳ್ ತೋಱಬೇಕೆಂದು (ಗ ಚ) 8 ಟ್ಟು ಮತ್ತೆಯುಂ ಬೇಡಿಕೊಂಡು (ಚ) 9 ದನಿತ್ತಂ ರಾಮುಚಂದ್ರಂ (ಗ ಚ) 10 ವಂ (ಚ) 11 ಬಲಸಹಿತಂ (ಗ)

ನಡೆತಂದು ಪಯಣಗತಿಯಿಂ
ವಡವಿಯೊಳುಂ ಕಂಡು ಜಾಂಬವರ ನಳ ನೀಲರ
ನೊಡಗೊಂಡು ದಕ್ಷಿಣಾಶಾ
[1]ಕಡಲೆಡೆಯೊಳ್[1] ಬೀಡುಬಿಟ್ಟನಾ ರಘುರಾಮಂ ೨೪೦

ವಚನ : [2]ಅದೆಂತೆನೆ[2]

ಉತ್ಪಲಮಾಲೆ

ರಾಮನ ಬೀಡು ಬಿಟ್ಟುದುದಧೀತಟದೊಳ್ ಬಹುವಾದ್ಯಘೋಷದಿಂ
ಸಾಮಜಯೂಥದಿಂ ರಥಸಮೂಹದಿ ವೀರಪದಾತಿವೃಂದದಿಂ
ದಾ ಮಹ ತೀವ್ರವಾಜಿನಿಕುರುಂಬದಿನಾ [3]ಕಪಿ[3]ಸಂಕುಲಂಗಳಿಂ
ಭೂಮಿದಿ[4]ಗಂತ[4]ಮೆಲ್ಲ ನೆಱೆ ಪರ್ಬಿದುದದ್ಭುತ ಲಂಕೆಗಪ್ಪಿನಂ ೨೪೧

ಚಂಪಕಮಾಲೆ

ಅದುರಿದುದಾ ತ್ರಿಕೂಟಗಿರಿಯಭ್ರದೆ ತಾರೆಗಳೆಲ್ಲ ಭೂತಲ
ಕ್ಕುದುರಿದುದಿಂದ್ರಚಾಪವೊಗೆದತ್ತು ದಿಶಾಳಿಯ ಧೂಮಕೇತುಗಳ್
ಕೆದಱಿತು ವಾರ್ಧಿಯುಕ್ಕಿದುವು ಮೇದಿನಿ ಬಾಯ್ದೆಱೆದತ್ತು ಭೀತಿಯಿಂ
ಪುದಿದುದು ಸರ್ವದೈತ್ಯಜನಮದ್ಭುತಮಾದುದು ಲಂಕೆಯೊಳ್ ಕರಂ ೨೪೨

ವಚನ : ಇಂತು ಕಪಿ[5]ಗಣದೊಡನೆ[5] ಶ್ರೀರಾ[6]ಮಂ[6] ಸಮುದ್ರತೀರದೊಳ್ ನಿಂದು ಸೀತೆಯಂ ನೋಡಿಬರ್ಪುದಕ್ಕೆ ಆರಂ ಕಳುಪುವಮೆನೆ ಹನುಮಂತಂ ಕರಕಮಲಂಗಳಂ ಮುಗಿದು ಬಿನ್ನಪಂಗೆ[7]ಯುತ್ತಿರ್ದನದೆಂತೆನೆ[7]

ಕಂದ : ಮೊದಲೂಳಿಗಮೆನ್ನದು ನೀಂ
ಮುದದಿಂ ಕೃಪೆಯಾಗು ನಿಮಿಷಮಾತ್ರದೊಳಿಂತೀ
ಯುದಧಿಯನು ದಾಂಟಿ ಸೀತೆಯ
ಪದಪದ್ಮವ ಕಂಡುಬರ್ಪೆ ನೀಡುಂಗುರಮಂ ೨೪೩

---

1 ಕಡಲಾಂತರದಿ (ಗ ಚ) 2 ಅದೆಂತೆನೆ ಭೂಮಿಗಂ ಪಿರಿಯನಾದ ಜಾಂಬವರಂ ಅಗಸ್ತ್ಯರ ಶಿಷ್ಯನಾದ ನಳ ನೀಲರಂಗವಯುಗವಾಕ್ಷರಂ ಸುಷೇಣ ಮೊದಲಾದ ಕಪಿಕಟಕಮಂ ಕೂಡಿಕೊಂಡು (ಚ) 3 ಯೂಥ (ಗ) 4 ಶಾಂತ (ಚ) 5 ಕಟಕಸಮಂ (ಚ) 6 ನು ಚಂದ್ರನು (ಚ) 7 ವೃತ್ತಮಿರ್ದನದೆಂತೆಂದೊಡೆ (ಚ)

ವಚನ : [1]ಎಂದಣುವಂ[1] ಬಿನ್ನೈಸಿಯುಂಗುರಮಂ ಕರತಳದಿನಾಂತು

ಕಂದ : ಬರು[2]ತುಂ[2] ಸಂಪಾತಿಯು ಕಂ
ಡುರುತರ ಕಾರ್ಯವನು ಕೇಳಿ ಸಾಗರಮಂ ತಾಂ
ಭರದಿಂದೆ ದಾಂಟಿ ಲಂಕಾ
ಪುರದೊಳ್ ನೆಱೆನೋಡಿ [3]ಬನದ[3] ಸೀತೆಯ ಕಂಡಂ ೨೪೪

ವಚನ : [4]ಅಂತು ಕಂಡು ನಮಿಸಿ ಉಂಗುರಮನಿತ್ತು ನೀವು ಶ್ರೀರಾಮಂಗೆ ಮುಖ ಮಜ್ಜನಕ್ಕೆ ಉದಕಮಂ ನೀಡುವಲ್ಲಿ ನಿಮ್ಮ ಕಣ್ಬೆಳಗು ಮೀನಿನಂತೆ ಪೊಳೆಯೆ ರಾಮಂ ನೀರಂ ಸೂಸಿದನೆಂದು ಕುಱುಹಂ ಪೇೞ್ ಸಮುದ್ರತಟದೊಳ್ ರಾಮಂ ರಾಕ್ಷಸವಧೆ ಗೋಸುಗ ಕಪಿಕಟಕದೊಡನೆ ಬೀಡುಬಿಟ್ಟಿರ್ಪನೆಂದು ಪೇೞ್ ಕಳುಹಿಸಿಕೊಂಡು ಬಂದು ಶ್ರೀರಾಮನಂ ಕಂಡು[4]

ಕಂದ : ಕಂಡೆನು ಸೀತೆಯ ದೇವಾ
ಚಂಡಬಲಾ ಹನುಮ ಕೊಟ್ಟ [5]ಬೊಮ್ಮನ[5] ಪದಮಂ
ಗಂಡುಗಲಿ ರಾವಣನ ಕಡಿ
ಖಂಡಂ ಮಾಡಲ್ಕೆ ಮಾಟ್ಪುದಿನ್ನುಜ್ಜುಗಮಂ ೨೪೫

ವಚನ : ಎಂದು [6]ಪೇೞ್ವನಿತಱೊಳ್[6] ಲಂಕೆಯೊಳಪ್ಪ ಭೀತಿಯಿಂ ವಿಭೀಷ[7]ಣಂ ರಾವಣ ನೆಡೆಗೈದಿ[7] ಸಭಾಮಧ್ಯದೊಳ್ ನಿಂ[8]ದು[8] ಕೈಮುಗಿದು [9]ಬಿನ್ನೈಸುತಿರ್ದನೆಂತೆನಲ್[9]

ಉತ್ಪಲಮಾಲೆ
ರಾವಣ ನಿನ್ನ ವಿಕ್ರಮಕೆ ಹಾನಿಯುಮಪ್ಪುದದೆಂತೆನಲ್ ಮಹಾ
ದೇವಿ[10]ಯನೀಟ್ಟು[10] ತಂದೆಯದಱಿಂ ರಘುರಾಮನ ಬೀಡುಬಿಟ್ಟುದೀ
ಭೂವಧುಜಾತೆಯುಂ ತಿರುಗಲೊಪ್ಪಿಸಿ ನೀಂ ಸುಖಿಯಾಗಿರೆಂದೆನಲ್
ಆ ವಿ[11]ಕಟಾ[11]ಸುರಂ ಜಱಿದು ಝುಂಕಿಸಿ ನೂಂಕಿಸಲಾ ವಿಭೀಷಣಂ ೨೪೬

---

1 ಎಂದು ಹನುಮಂ (ಚ) 2 ತ್ತ (ಗ) 3 ವನದ (ಗ) 4 ಅಂತು ಬಂದು ಅಶೋಕ ವನದೊಳ್ ನಿಂದು ಸರಮೆ ತ್ರಿಜಟೆಯರ ಮೇಳದಿಂ ಶ್ರೀರಾಮವಾಕ್ಯಸ್ಮರಣೆಯಲ್ಲಿರ್ಪ ಸೀತೆಯಂ ಕಂಡು ನಮಸ್ಕಾರಂಗೈದು ಉಂಗುರಮಂ ಕೊಟ್ಟು ರಾಮಚಂದ್ರಂಗೆ ನೀವು ಮುಖಮಜ್ಜನಕ್ಕೆ ಉದಕಮಂ ನೀಡುವಲ್ಲಿ ನಿಮ್ಮ ಕಣ್ಬೆಳಗು ಮೀನಿನಂತೆ ಪೊಳೆಯೆ ರಾಮಂ ನೀರಂ ಸೂಸಿದುದು ಕುಱುಹೆಂದು ಕುಱುಹಂ ಪೇಳಿ ಸಮುದ್ರತೀರದಲ್ಲಿ ರಾಮಚಂದ್ರಂ ರಾವಣನ ವಧೆಗೋಸುಗ ಕಪಿಕಟಕ ಸಹ ಬಿಟ್ಟಿರ್ಪನೆಂದು ಬಿನ್ನಪಂಗೆಯ್ದು ಕಳುಹಿಸಿಕೊಂಡು ಮರಳಿ ಬಂದು ಶ್ರೀರಾಮಚಂದ್ರನಂ ಕಂಡು (ಚ) 5 ಬ್ರಹ್ಮನ (ಚ) 6 ಬಿನ್ನಪಂಗೆಯ್ವನಿತರೊಳೆ (ಚ) 7 ವಿಭೀಷಣದೇವಂ ಮಧ್ಯಾಹ್ನದನಪ್ಪ ರಾವಣನ ಬಳಿಗೆ ಭಾವಶುದ್ಧಿಯಿಂ ಬಂದು (ಚ) 8 ದು ಮೈಯಿಕ್ಕಿ (ಚ) 9 ಬಿನ್ನಪಂಗೆಯ್ಯುತಿರ್ದನದೆಂತೆನೊಡೆ (ಚ) 10 ಯಂ (ಗ) 11 ಗಡಾ (ಚ)

ಕಂದ : ನಡೆತಂದು ರಾಮು ಸಲಹೆಂ
ದಡಿಗೆಱಗಿದೊಡಾ ವಿಭೀಷಣನನತಿಕೃಪೆಯಿಂ
ಪಿಡಿದೆತ್ತಿ ಬಂದ ಕಾರ್ಯವ
ತಡೆಯದೆ ಪೇೞಾರು ನೀನೆನಲ್ಕಿಂತೆಂದಂ ೨೪೭

ಸಾಹಸಿ ರಾವಮಂಗೀ ವೈ
ದೇಹಿಯ ಬಿಡು ಲೇಸು ನಿನಗೆನಲ್ಕಾ ಸ್ವಾಮಿ
ದ್ರೋಹಿ ರಾವಣನು ಕೋಪಿಸಿ
ನೀ ಹೋಗೆಂದೆನುತೆ ಜಱೆದು ನೂಂಕಿದನೆನ್ನಂ ೨೪೮

ಎಂದು ಬಿನ್ನೈಸಿದಂ ಮುದ
ದಿಂದಂ ಕಲಿ ವೈಷ್ಣವರ್ಗೆ ಚಿಂತಾರತ್ನಂ
[1]ಸುಂದರಮೂರ್ತಿಯೆ[1] ರಾವಣ
ನಿಂದಂ ಕಿಱುಯಾತನಾ ವಿಭೀಷಣದೇವಂ* ೨೪೯

ವಚನ : [2]ಎಂದು ಕರಮಂ ಮುಗಿದು ದೇವಾ ವಿಶ್ರವಸುವಿಗೆ ನಾಲ್ಕಾಜಾತಿಯ ಪೆಂಗಳೊಳ್ ರಾವಣ ಕುಂಭಕರ್ಣರ್ ಮಕ್ಕಳು ವೈಶ್ಯಸ್ತ್ರೀಯೊಳಾಂ ಪುಟ್ಟಿದೆಂ ರಾವಣಂಗೆ ಕೇಡಪ್ಪುದೆಂದಱಿದು ದೇವರೆಡೆಗೈದಿದೆನೆಂದು ಪೇೞಲ್ ಸಂತಸದಿಂದಾತಂಗಭಯಮಿತ್ತು ಲಂಕೆ ಎಂತು ಸಾಧ್ಯಮೆಂದು ಬೆಸಗೊಳಲವಂ ಸಮುದ್ರಕ್ಕೆ ಸೇತು ಕಟ್ಟವೇೞ್ಕುಮೆನೆ ರಾಮಂ ಸುಗ್ರೀವಂಗೆ ಸೇನೆಯೊಡೆತನಮಿತ್ತು ಕಪಿಸೇನೆ ಎನಿತೆಂದು ಕೇಳಲ್ ಸುಗ್ರೀವಂ ಪೇೞ್ದಂ[2]

---

[1] ಸೌಂದರ್ಯ ಮೂರ್ತಿ (ಚ) [2] ಮತ್ತಂ ಕರಕಮಲಂಗಳಂ ಮುಗಿದು ದೇವಾ ಪುಲಸ್ತ್ಯ ಬ್ರಹ್ಮಂಗೆ ಪುಟ್ಟದ ವಿಶ್ರವಸುವಿಂಗೆ ನಾಲ್ಕು ಜಾತಿಯ ಸ್ತ್ರೀಯರಲ್ಲಿ ಮಕ್ಕಳು ವೈಶ್ಯ ಸ್ತ್ರೀಯ ಮಗನಾಂ ಹೆಸರು ವಿಭೀಷಣಂ ರಾವಣಂಗೆ ಕೇಡಪ್ಪುದೆಂದಱಿದು ದೇವರ ಶ್ರೀಪಾದಾರ್ಚನೆಯಂ ಮಾಳ್ಪೆನೆಂದ. ಬಂದೆನೆನಲು ಸಂತೋಷಂಬಟ್ಟು ಆತಂಗಭಯಮಂ ಪಾಲಿಸಿ ಲಂಕಾಸಾಧ್ಯಮೆಂತಪ್ಪುದೆಂದು ಬೆಸಗೊಳೆ ವಿಭೀಷಣಂ ಬಿನ್ನೈಸಿದ ದೇವಾ ಸಮುದ್ರಕ್ಕೆ ಸೇತುವಂ ಕಟ್ಟಬೇಕೆನೆ ರಾಮಂ ಕೈಕೊಂಡು ಸುಗ್ರೀವಂಗೆ ಸೇನಾಧಿಪತ್ಯಮಂ ಕೊಟ್ಟು ಕಪಿಸೇನೆಯೆನಿತೆಂಬುದಂ ನೋಡಿ ಪೇಳೆನೆ ಸುಗ್ರೀವಂ ಪಸಾದವೆಂದು ಬಿನ್ನೈಸಿದಂ (ಚ)

*೨೪೯ ನೆಯ ಪದ್ಯದ ಬಳಿಕ ಚ ಪ್ರತಿಯಲ್ಲಿ ಕಂಡುಬರುವ ಹೆಚ್ಚಿನ ಪದ್ಯ

ಕಂದ : ತಂದೆ ನೀಂ ಸಲಹೆನುತ್ತಂ
ಬಂದಾ ರಘುರಾಮಚಂದ್ರ ನಿಮ್ಮಯ ಚರಣ
ದ್ವಂದ್ವವನು ಸೇರಿದೆನು ಕೃಪೆ
ಯಿಂದೆನ್ನ ಕಾಯಿವುದೆಲೆ ಕೃಪಾಳುಗಳರಸಾ

ಕಂದ : ಬಲ್ಲಿದರಹ ಕಪಿಸೇನೆಯ
ನೆಲ್ಲವ ನಾಂ ನೋಡಿ ಬಂದೆ ರಘುಕುಲತಿಲಕಾ
[1]ವೆಲ್ವೆ[1]ಪ್ಪತ್ತೆರಡಾಯಿತು
ಮಲ್ಲಿಹ ಹುಲುಕಪಿಗಳವಿನಿ[2]ತೆಂ[2]ಬುದನಱಿಯೆಂ ೨೫೦

ವಚನ : ಎನೆ [3]ರಾಮಚಂದ್ರಂ ಸೇತುವೆಯಂ ಕಟ್ಟುವದಕ್ಕೆ ಬೆಟ್ಟಂಗಳಂ ತಹುದೆಂದು ನೇಮಿಸುವುದುಂ[3]

ಕಂದ : ಪರಿದುದು ಕಪಿಕುಲನಿಕರಂ
ಗಿರಿಗಳ[4]ನುಱಿ[5][4]ತಂದು ಬೇಗ ನೀರಾಕರದೊಳ್
ತರವಿಡಿದು ಕಟ್ಟಲಾ ಜಲ
ಚರಗಳ್ ಬೆಟ್ಟಗಳ ನುಂಗುತಿರ್ದುವು ಭರದಿಂ ೨೫೧

ಗಿರಿಗಳನೆಲ್ಲಂ ಮಿಗೆ ಜಲ
ಚರಗಳ್ ನುಂಗಲ್ಕೆ ಕಟ್ಟದಿರೆ ರಘುರಾಮಂ
ಸರಲಂ ತೊಡಚುತೆ ಕೋಪಿಸೆ
ಶರಧಿಗೆ ತಾಂ ತೊಟ್ಟನೆಂತು ಭುಜಬಲಯುತನೋ ೨೫೨

ಅಂತಾ [6]ರಘುರಾಮಂ[6] ಸರ
ಲಂ ತೊಡಲಾ ವಾರ್ಧಿಯೆಲ್ಲಮುಂಬಿನ ಮೊನೆಗಂ
ಮುಂತ್ತೈದಿತು ಮಣಿಯುವೊಲು ಮ
ಹಾಂತರ್ ಕೋಪಿಸಿ[7]ದೊಡೆ[7]ಮನು ಇದಿರಹರುಂಟೇ ೨೫೩

---

[1] ವೆಲ್ಲ (ಗ) [2] ತದೆಂ (ಕ) [3] ರಾಮಚಂದ್ರಂ ನೆಲ್ವೆಯೆಂಬುದೆನೀತನೆ ಸುಗ್ರೀವಂ ಕೈಮುಗಿದು ಹೇರಾನೆಯ ತಿಂತಿಣಿಯಂ ಮೇಲೆಕಟ್ಟೆ ಕೆಳಗೆ ಕೆಸಱಿಂ ಪೊಯ್ದು ಆ ತಿಂಥಿಣಿಯಂ ಸೂಜಿಮುನಿತ್ತು ದ್ವಾರಂಗೆಯಿಂದು ಕೆಳಗೆಯುಡಹಾಯಲಾ ಸೇನೆಯ ಕಾಲಧೂಳಿಂದತಿ ತುಂಬಿ ಅವ ಹಱಿದು ಬಿದ್ದರೊಂದು ವೆಲ್ವೆ ಅಂತಪ್ಪದೆಪ್ಪತ್ತೆರಡು ವೆಲ್ವೆ ಮುಖ್ಯ ಕಪಿಶರರು ಮಿಕ್ಕ ಹುಲುಕಪಿಗಳೆನಿತೆಂದರಿಯೆನೆನೆ ರಾಮಚಂದ್ರಂ ಸೇತುವೆಯಂ ಕಟ್ಟುವದಕ್ಕೆ ಬೆಟ್ಟಂಗಳು ತಹುದೆಂದು ನೇಮಿಸೂಪುಂ (ಚ) [4] ಮಿಗೆ (ಗ) [5] ಱಿ (ಚ) [6] ರಾಮಂ ತಾಂ (ಕ) [7] ದರೆ (ಚ)

ವಚನ : ಆ ಸಮಯದೊಳು[1]ದಧಿ ರಾಮಂಗೆ ಮಣಿದು ನಳನೆಂಬ ಕಪಿಯಿಂ ಬಿದ್ದವು ತೇಲ್ವುವು ಸಮುದ್ರದೊಳದಱಿನಾತನ ಕೈಯಿಂ ಕಟ್ಟಿಸಿಮೆನೆ, ರಾಘವಂ ಸಮುದ್ರಕ್ಕೆ ಸೇತುವಂ ಕಟ್ಟಿ ತೆರಳಲೆಂದನುಗ್ಗೈಯೆ ವಿಭೀಷಣಂ ಸಂಧಾನಕ್ಕೆ ದೂತರಂ ಕಳುಪಿಯುವರದ ಕೊಡಬಡದಿರಲೆತ್ತುವುದು ರಾಜಧರ್ಮಮೆನೆ ರಾಮನಂಗದನಂ ಕಳುಪಲವಂ ಲಂಕೆಯಂ ಪುಗುವಲ್ಲಿ[1]

ಚಂಪಕಮಾಲೆ

ಕನಕದ ಕೋಂಟೆ ಮಾಣಿಕದ ಕೊತ್ತಳ ನೀಲಗಳಾಳುವೇರಿ ಮು
ತ್ತಿನ ತೆನೆ ತೋರಪಚ್ಚೆಗಳಿನಿಂದೆಸೆವಟ್ಟಣೆ ಚಂದ್ರಕಾಂತದಿಂ
ಮಿನುಗುವ ಬಾಗಿಲುಪ್ಪರಿಗೆ ವಜ್ರದ ಪೇರ್ಗದ ಪುಷ್ಯರಾಗದಿಂ
ತನಿ ಹೊಗರ್ವ ದಿಡ್ಡಿಗಳಿನೊಪ್ಪುವ ಲಂಕೆಯ ಕಂಡನಂಗದಂ ೨೫೪

ಕಂದ : ಬಾಗಿಲನು ಹೊಗದೆ ಕೋಂಟೆಯ
ಲಾಗಿಸಿ ರಾವಣನ ರಾಜಬೀದಿಯೊಳೈತಂ
ದಾ[2]ಗಳ್[3] ಸಮಯಂಗಾಣದೆ
ರಾಗರಸಂಗೆಟ್ಟು ಕುಳಿತಸುರರಂ ಕಂಡಂ ೨೫೫

ವಚನ : ಅವರಂ ಕಂಡು ಅರಮನೆಯ ಬಾಗಿಲಂ ದಾಂಟಿ ರಾವಣನೋಲಗಮಂ ಪೊಕ್ಕು

ಕಂದ : ಬಿಡು ಸೀತೆಯನೊಲ್ಲದೊಡಂ
ಬಿಡು ನಿನ್ನ ಸಿರಾಸೆಯಂ ಸಮಂತಂಘ್ರಿಯೊಳುಂ
ಕೆಡೆ ರಾಮನ ಬಾಟ್ವರೆ ನೀಂ
ಕೆಡ ಜೇಡೆಂದೊತ್ತಿ ನುಡಿದನಂಗದನವನಂ ೨೫೬

ವಚನ : ಅಂತಂಗದಂ ರಾವಣನುತ್ತರಭಗ್ನಸ್ಫುರಣ ಪ್ರತ್ಯುತ್ತರಂಗೊಟ್ಟು ಸಂಧಾನಂ ಮುಱಿದು ಶ್ರೀರಾಮನೊಳ್ ಬಿನ್ನೈಸುತಿರ್ದ[3]ನೆಂತೆನಲ್[3]

---

[1] ಆ ಸಮಯದೊಳು ರಘುರಾಮಂಗೆ ನಮಸ್ಕಾರಮಂ ಮಾಡಿ ದೇವಾ ಅಗಸ್ತ್ಯಶಿಷ್ಯ ನಳನೆಂಬ ಕಪೀಶ್ವರನು ಅಗಸ್ತ್ಯರ ಉಪಕರಣಮುಂ ತೊಳೆವಲ್ಲಿ ಕೈತಪ್ಪಿ ಸಮುದ್ರದಲ್ಲಿ ಬೀಳಲಾ ಅಗಸ್ತ್ಯಂ ಕೋಪಿಸಿ ಸಮುದ್ರನಾದೆನ್ನನಾಪೋಶನಂಗೊಳೆ ನಾನು ಉಪಕರಣಮುಂ ಕೊಟ್ಟು ಮುಂದೆ ಈ ನಳನ ಕೈಯಿಂದ ಬಿದ್ದವು ತೇಲುವಂತೆ ಕಟ್ಟಳೆಯ ಮಾಡಿ ಸಮುದ್ರೋದಕಮಂ ಪುರುಷನಾಳಿಸಿ ಬಿಟ್ಟಂ ಅದಱಿಂ ನಳನ ಕೈಯಿಂ ಕಟ್ಟಿಸಿಮೆನೆ ರಘುನಾಥಂ ಸಗರನ ಮಕ್ಕಳಗಡುಹೆ ಚ್ಚಿದ ಪುಲ್ಲವಮೆಂಬ ಸಮುದ್ರಮಂ ಸೇತುವೆಯಂ ಕಟ್ಟಿ ತೆರಳಲೆಂದನುಗ್ಗೈದು ವಿಭೀಷಣನಂ ಕರೆದು ಕಪಿಸೇನೆ ತೆರಳಲೆಂಬುದುಮಾತಂ ಸಂಧಾನಕ್ಕೆ ದೂತರಂ ಕಳುಹಿ ಸಂಧಾನಕ್ಕೆ ಒಡಂಬಡದಿರೆ ನೋಡಲೆತ್ತುವುದು ರಾಜಧರ್ಮಮೆನೆ ಶ್ರೀರಾಮಚಂದ್ರಂ ಅಂಗದನಂ ಕರೆದು ಸಂಧಾನಕ್ಕೆ ಕಳುಹಿ ಅಂಗದಂ ಬಂದು ಲಂಕೆಯಂ ಪೊಗುವಲ್ಲಿ (ಚ) [2] ಗಂ (ಚ) [3] ನದೆಂತೆಂದೊಡೆ (ಚ)

ಕಂದ : ಎಲ್ಲಾ ನೀತಿಗಳಂ ತಾ
ನೊಲ್ಲಂ ಸಂಧಾನಮೆಂಬ ನುಡಿಯುವಗಿಲ್ಲಂ
ಸಲ್ಲಂ ನೀತಿಗೆ ಮರಣವ
ಹುಲ್ಲೆಂದುಂ ಗಡಣಗೊಳ್ಳ ರಾವಣ ಖುಲ್ಲಂ ೨೫೭

ಆ ಪುರದ ಸಿರಿಯ ಸೊಬಗನ
ದೇ ಪೊಗಟಿಪ್ಪಂ ರಾಮಚಂದ್ರ ಶೂನ್ಯಾಲಯದೊಳ್
ದೀಪಂ ಪ್ರಜ್ವಲಿ[1]ಪಂತೆ[1] ನಿ
ಶಾಪತಿಯಿರದಭ್ರದಂ[2]ತೆಯಿಹು[2]ದಾ ನಗರಂ ೨೫೮

ಉಸಿರಿಲ್ಲದ ಕಾಯದವೊಲ್
[3]ಕೃಷಿಯಿಲ್ಲದ ಕ್ಷೈವೊಲಂಗಳೊಲ್ ಎಂದುಂ[3] ಕೇಳ್
ವಿಷಧರ ಪಿಡಿದಿಹ ರವಿಯುಂ
ತಸಪಟ್ಟಿದಿಹುದೇನನೆಂಬೆನೆಲೆ ರಘುನಾಥಾ ೨೫೯

ವಚನ : ಇಂತೆಂದಂಗ[4]ದ[4]ನ ಬಿನ್ನಪಂಗೇಳ್ದು ರಣಸನ್ನೆಯಂ ಪೊಡೆಯಿಸಿ ಲಂಕಾಪುರೋಪಕಂಠದೊಳ್ ಸೇನೆ ಬಿಡುವುದುಂ ಸಂಧ್ಯಾಸಮಯಮಾಗೆ ರಾಮಂ ಕ್ರಿಯೆಯಂ ಮಾಡಿ ಅರಮನೆಯ ಕಾವ[5]ಲಂ[5] ಹನುಮಂತಂಗೆ ಕೊಟ್ಟು [6]ಭೋಜನಂಗೈದು[6] ಪವಡಿ[7]ಸಲ್[7] ಲಂಕೆಯುಂ ಶ್ರೀರಾ[8]ಮಂ[8] ಮುತ್ತಿ[9]ದ[9] ವಾರ್ತೆಯಂ ಮೈರಾವಣಂ ಕೇಳಿ

ಉತ್ಪಲಮಾಲೆ

ತೀವಿದ ರಾತ್ರಿಯಲ್ಲಿ ಧರಣೀತಳದಿಂ ಪೊಜಮಟ್ಟು ಬಂದು ಮೈ
ರಾವಣನೆಂಬ ರಾವಣನ ಸೋದರಿಗಂ ರಘುರಾಮ ಲಕ್ಷ್ಮಣ
ರ್ಗಾವರಿಸಿರ್ದ ನಿದ್ರೆಯೊಳಗಂದು ವಿಭೀಷಣನಂದದಿಂದೆ ಬಂ
ದಾವಗ ಪೋದನೆಂದಱಿಯದಂತಿರೆ ಕೊಂಡೊಯಿದಂ ಮಹಾತ್ಮರಂ ೨೬೦

---

[1] ಪ ತೆಱಿದಿ (ಚ) [2] ತಿಹು (ಚ) [3] ಕ್ಷೇತ್ರದಂತಿರಾವಾಗಂ (ಚ) [4] ಜ (ಗ) [5] ಲ (ಚ) [6] ಅರಮನೆಯ ಪೊಕ್ಕು ಮಜ್ಜನ ಭೋಜನಂಗಳಂ ಮಾಡಿ ಶಯ್ಯೆಯಲ್ಲಿ (ಚ) [7] ಸುಪ್ತನ.ಂ (ಚ) [8] ಮಚಂದ್ರಂ (ಚ) [9] ದನೆಂಬ (ಚ)

ವಚನ : ಅಂತು ಬಂದು ಕೊಂಡೊಯ್ಯಲಂತಪ್ಪರನೊಳ್ ಗಜಬಜಂ ಪುಟ್ಟೆ ಜಾಂಬವರ್ ಬಂದು ಹನುಮಂತನಂ ಕೇಳ್ವುದುಂ ವಿಭೀಷಣನಲ್ಲದೆ ಬಂದವರಿಲ್ಲ[1]ವೆಂದು[1] ಪೇಳೆ[2] ವಿಭೀಷಣಂ[2] ವಿಚಾರಂಗೊಂಡು [3]ಮೈರಾವಣನೆನ್ನ ರೂಪಿಂ ಬಂದಿರ್ದನವನ ಬಳಿಗೆ ಪೋಗವೇಳ್ಕುಮೆನೆ ಅಂಜನಾಸುತಂ ಪೋಗಿ ಪಾತಾಳಲಂಕೆಯುಂ ಪೊಕ್ಕು[3] ರಾಮ ಲಕ್ಷ್ಮಣರುಂ ಬಲಿಗೈಯಲಿರ್ದ ಮೈರಾವಣನಂ ಕೊಂದು ರಾಮ.ಲಕ್ಷ್ಮಣರಂ ನಿದ್ದೆಗಿಡ [4]ದಂತೆ[4] ಮಗುಳೆ ತಂದು ಅವಮನೆಯೊಳಿಟ್ಟು ಹಲಸಿತಳ್ತೊಳೆ [5]ಸೂರ್ಯೋದಯ ಮಾಗಲ್[5]

ಕಂದ : ತಲೆತಟ್ಟಿಸಿತು ಸೂರ್ಯೋದಯ
ಮೊಳಗಿದುವಿರ್ದೆಸೆಯ ಭೇರಿ ನಿಸ್ಸಾಳ ಚಯಂ
ದಳಮಾಡಿತು ಕಪಿರಾಕ್ಷಸ
ರ[6]ವಿಂ ಬೊಬ್ಬಿಱಿದು ಹುಯ್ಯಲಾದುದು ಘೂರ್ಣಿಂ ೨೬೧

ಚಂಪಕಮಾಲೆ
ಘಡಘಡ ಸೂಕೆನುತ್ತೆ ಗಿರಿ ಪೆರ್ಮರನಂ ಸುರಿಯುತ್ತೆ ವಾನರರ್
ಮಿಡುಕುವ ಸಿಂಗಳೀಕ [7]ಮುಸು ಭಲ್ಲುಕನಂ[7]ಕುಲ ಮುತ್ತೆ ರಕ್ಕಸರ್
ಕಡಿದರು ಮೇಲೆ ಬಿರ್ದು ಮಗುಳೆತ್ತೊತ್ತಿದುದಾ ಕಪಿಸೇನೆಯತ್ತಲು
ಗ್ಗಡಿಸುವರೆದ್ದರುಬ್ಬಿಯತಿಕಾಯ ಶುಕಂ ವಿರುಪಾಕ್ಷರೆಂಬವರ್ ೨೬೨

ಕಂದ : ಇತ್ತಲ್ ನಳ ನೀಲರ್ ವೀ
ರೋತ್ತಮ ಸುಗ್ರೀವನಂಗದಂ ಜಾಂಬವರೊ
ತ್ತೊತ್ತೆ ಮಸಗಿತ್ತು ಹೊಕ್ಕರ್
[8]ತತ್ತಱಿದಱಿದಱಿದು ಬಿಸುಟರಸುಗಳ ಕೆಲವರ್ ೨೬೩

ಗಿರಿಯ ಮಱೆಯೊಮ್ಮೆ ಸೂಸುವ
ಸರಳಿನ ಮಱೆಯೊಮ್ಮೆ ಕತ್ತಲಿಸಿತವನಿಯುಮಾ
ಧುರವಂ ಪೇಳ್ವವರಾರ್ ನೆ
ತ್ತರ ಪೊನಲೆಸೆದತ್ತು ಕುಣಿವ ಮುಂಡಗಳಿಂದಂ ೨೬೪

---

1 ಮೆನೆ ([illegible]) 2 ಣ ಸಿದೇನೆಂದು (ಚ) 3 ಯೆನ್ನ ರೂಪಂ ಮೈರಾವಣಂಗೆ ಕೊಟ್ಟಪ್ಪನದಱಿಂ ಮೈರಾವಣನಲ್ಲಿಗೆ ಬೇಗಂ ಪೋಗವೇಳ್ಕುಮೆನೆ ಹನುಮಂತಂ ಪೋಗಿ ರಾವಣನ ಕ್ರೀಡಾಸರೋವರದ ಕಮಲನಾಳದಲ್ಲಿಯ ಪಾತಾಳಲಂಕೆಯಂ ಪೊಕ್ಕು ತೂಗಿಬಿಡ ಸ ಜಲಭಾಂಡದೊಳಡಗಿ ಪೋಗಿ (ಚ) 4 ದಂತೆ ಹನುಮಂತಂ (ಚ) 5 ಸೂರ್ಯನುದಯಿ ಸೂದುಂ (ಚ) 6 ರಕ್ಕ (ಚ) 7 ಮುಸುಪೆರ್ಗರಡಿ ([illegible]) 8 ಕತ್ತಱಿ (ಕ)

ಕಂಡಂ ರಘುವೀರಂ ಕೋ
ದಂಡವ ಜೇವಡೆದು ಶರಕೆ ಕೈನೀಡುತ್ತುಂ
ಮಂಡಿಸಿ ಸುರಿದಂ ಸರಳಂ
ದಿಂಡುರುಳಿತು ಕರುಳ ಕಾಜಿ ರಕ್ಕಸನಿವಹಂ ೨೬೫

ಉಱಿದನತಿಕಾಯ ಮಾಜಿಱಾಂ
ತಳವಿಗೆ ತಾಂ ಬಿರ್ದುನಿಂದನು ವಿರೂಪಾಕ್ಷಂ
ತಳಕಂ ಸರಿದುದು ಮತ್ತಂ
ಮುಱುಗಿದನ[1]ತ್ತಲ್[1] ಪ್ರಹಸ್ತ ಗಜರಥಸಹಿತಂ ೨೬೬

ಒತ್ತರಿಸಿತು ರಥ ತುರಗಂ
ಮತ್ತಗಜಂ ಸಱಿಗರಕ್ಕಸರ್ ನಿಲಲಂಜಿ ಪ್ರ
ಹಸ್ತಂ ಮುಸುಕಲ್ಕಂ ಸೌ
ಮಿತ್ರಂ ಸಂವರಿಸಿಕೊಂಡು ಬೆರಸಿದ ರಣಮಂ ೨೬೭

ವಚನ : ಅಂತು ರಾಮ ಲಕ್ಷ್ಮ[2]ಣರ್[2] ಚತುರಂಗಮಂ ಕಡಿಖಂಡಂ ಮಾಡೆ

ಕಂದ : ನಡೆದಿಸುವ ಮುಂಡಗಳ್ ಕುಬು
ಬಿಡುತಿಹ ತಲೆ ಸುರಿವ ರಕುತ ನೆಣವಸೆಗೆಸಱಿಂ
ಕಡಿದಿಕ್ಕಲು ರಕ್ಕಸರಂ
ಮುಡಿದಂ ಬೇಗಂ ಪ್ರಹಸ್ತ[3]ನೆನಿಪಾ[3] ಸಚಿವಂ ೨೬೮

ವಚನ : ಅಂತು ಸಮಸ್ತ ಸೇನೆ ನುಗ್ಗುಪ್ಪುದುಂ ರಾವಣಂ ಚಿಂತಾಕ್ರಾಂತನಾಗೆ ಮಗನಾದ ಇಂದ್ರಜಿತು ಬೆಸನಂ ಪಡೆದು ಮೇಘಮಾರ್ಗದಿಂ ಬಂದು ಸರ್ಪಾಸ್ತ್ರವರ್ಷಮಂ ಕಱೆಯೆ [4]ಸಕಲ ಬಲಂ[4] ಲಕ್ಷ್ಮಣ ಸಹಂ [5]ಮೈಮಱೆಯೆ[5] ಜಾಂಬವ[6]ರಣುವನಂ[6] ಸಂಜೀ[6]ವನೆ[7]ಗೆ ಕಟುಹ[8]ಲವನದಂ ಕಾ[8]ಣದೆ ದ್ರೋಣಾದ್ರಿ[9]ಯುಂ[9] ತಂದಿರಿಸೆ ಜಾಂಬವರ್ ಕೈಯಲಾಂತು ಸಂಜೀವಿನಿಯಂ ಲಕ್ಷ್ಮಣಂಗೆಱದು ಸುಷೇಣನ ಕೈಯಿಂ ಮಿಕ್ಕವರಂ ಹನು[10]ಮನ[10] ಬಾಲಕಾ ಸಂಜೀವನಿಯಂ ತೊಡೆ[11]ಯಲವಂ[11] ಬಾಲವಂ ಬೀಸಲಾಗಾಳಿ[12]ಗೆ ಬಲಮೆಲ್ಲಂ ಜೀ[12]ವಿಸೆ ರಾ[13]ಮಂ[13] ವಿಭೀಷಣನಂ ಕರೆದು ಇಂದ್ರಜಿತುಯೇತು ಮುಡಿವನೆಂದು ಬೆಸಗೊಳೆಯ[14]ವನಿಂತೆಂದಂ[14]

---

1 ತ್ತ (ಚ) 2 ಣರ್ ಬೆರಸಿ (ಗ ಚ) 3 ನೆನಿಸುವ (ಗ ಚ) 4 ಸಮಸ್ತ ಕಪಿಸಮೂಹಂ (ಗ ಚ) 5 ಮೂರ್ಚೈಯಾಗೆ (ಚ) 6 ರು ಹನುಮಂತನಂ (ಚ) 7 ವೆ (ಚ) 8 ಲಾತಂ ಸಂಜೀವೆಯುಂ ಕಾ (ಚ) 9 ಯಂ.ಕಿತ್ತು (ಚ) 10 ಮಂತನ (ಚ) 11 ಯೆ ಹನುಮಂತಂ (ಚ) 12 ಗೆಯುಲ್ಲಾ ಬಲಂಸಂಜೀ (ಚ) 13 ಮಚಂದ್ರಂ (ಚ) 14 ವಿಭೀಷಣಂ ಬಿನ್ನೈಸಿದಂ (ಚ)

ಕಂದ : ಹಸಿವು ತೃಷೆ ನಿದ್ರೆ ಕಾಂತಾ
ವ್ಯಸನಂ ಪಣ್ಮಾಸವಿಲ್ಲದವರಿಂ ಮಡಿವಂ
ಅಸಮಬಲನಿಂದ್ರಜಿತುವೆನೆ
ನಸುನಗುತುಂ ಕೊಲ್ವೆನೆಂದ ಲಕ್ಷ್ಮಣದೇವಂ ೨೬೯

ವಚನ : ಎಂದು ಲಕ್ಷ್ಮಣಂ ಹನುಮಂತನ ಕೈಯ ಮೇಲೆ ನಿಂದು ಮೇಘಮಾರ್ಗದಿಂ ಬರ್ಪ ಇಂದ್ರಜಿತುವಂ ತಡೆದು ಹಾಣಾಹಾಣಿಯುದ್ಧದಿಂ ಕಾದಿ[1]ಯವನ[1] ಶಿರಮಂ ಪಱಿ[2]ಯೆ[2] ರಾವಣಂ ಶೋಕಹೃದಯನಾಗಿ ಎಂತಾನುಂ ಸಂತೈಸಿಕೊಂಡು [3]ನಿದ್ರಿಸುತಿರ್ದ[3] ಕುಂಭಕರ್ಣನನೆಬ್ಬಿ[4]ಸಲುದ್ಯುಕ್ತನಾದಂ[4]

ಕಂದ : ಬಲು ವಜ್ರದ ಗೂಟಗಳಿಂ
ಬಲಿದರ್ ಕೈಕಾಲಿನಲ್ಲಿ ಗಜಕೋಟಿಗಳಿಂ
ತುೞಿಸಿದರು ಕೋಟಿ ಸಿಡಿಲಂ
ಸುೞಿಸಿದರದ ಕುಂಭಕರ್ಣನೇನೆಂದಱಿಯಂ ೨೭೦

ವಚನ : [5]ಇಂತಿರ್ಪುದಂ[5] ರಾವಣಂ ಕಂಡು [6]ವಿಧಾತ್ರನಂ[6] ಕರೆಸಿ ಕಮಂಡಲೋದಕ[7]ಮಂ[7] ಚೆಲ್ಲಿ[8]ಸೆ[8] ನಿದ್ದೆ ತಿಳಿದು

ಕಂದ : ಮಲಗಿದ್ದೆೞುತ್ತಲಾಗಸ
ಜಲನುಂ ಮುಕ್ಕುಳಿಸಿ ಸುರೆಯ ಕಡಲಂ ಪೀರ್ದುಂ
ಸಲೆ ಮೂಗಿನುಸುರ ಬಿಡೆ ತಾ
ನೊಲೆದುವು ಘನಮೇರುಮಂದರಂಗಳ್ ಭರದಿಂ ೨೭೧

ಪುರದ ಹೊಱಬಾಹೆಯಲಿ ಮಿಗೆ
ನೆರೆದಿಹ ನೊಱಜುಗಳಿವೇನು ಪೇೞಿಂದೆನೆ ಸ
ತ್ಕರವಂ ಮುಗಿದು ರಣಕ್ಕಂ
ಧರಣಿಪ ರಘುರಾಮ ಬಂದನೆಂದರ್ ಸಚಿವರ್ ೨೭೨

ವಚನ : ಆ ಮಾತಂ ಕೇಳಿ [9]ನಕ್ಕು[9] ಕುಳಿತಲ್ಲಿಯೆ ಕೈನೀಡಿ ಕಪಿಸೇನೆಯುಂ ಬಾಚು ವ್ರ[10]ಮುಂ[10] ರಾ[11]ನುಂ[11] ಕೆಲಸಿಡಿದು ಧನುವನೆ[12]ೞಸಿ[12]ಯವನ ಶಿರವೞಿಯಲೆ[12]ಸೆಯೆ ಶಿರಂ ಧ್ರುವಲೋಕಕ್ಕೆ ಪಾಱಿ ತಿರಿಗಿ[13]ಬರ್ಪುದುಂ[13] ವಿಭೀಷಣಂ [14]ಕಂಡು[14]

---

1 ಯಿಂದ್ರಜಿತುವಿನ (ಚ) 2 ಯೆಸೆಯೆ (ಚ) 3 ನಿದ್ರಾಸಕ್ತನಾಗಿರ್ದ (ಚ) 4 ಸುವುದಕ್ಕೆ ಉದ್ಯುಕ್ತನಾದಂ (ಚ) 5 ಅಂತು ತುಳಿಸಿದ ಗಜಘಟಾವಳಿ ರೋಮ ಕೂಪದೊಳ್ ಬಿದ್ದು ಸಾವುದಂ ರೋಮ ಸೋಂಕಿ ಕೋಟಿರಕ್ಕಸರಳಿವುದಂ (ಚ) 6 ಬ್ರಹ್ಮದೇವರಂ (ಚ) 7 ಮನಭಿಮಂತ್ರಿಸಿ (ಚ) 8 ಸಿ ಕುಂಭಕರ್ಣಂಗೆ (ಚ) 9 ಗಹಗಹಿಸಿನಕ್ಕು (ಗ ಚ) 10 ದುಂ ಮೈಗೂಪಲ ಸಂದಿಸಂದಿಗಳಿಂದೆಲ್ಲರ್ ನುಸುಳಿಪೋಗೆ (ಚ) 11 ಮಚಂದ್ರಂ (ಚ) 12 ಮಂತ್ರಾಸ್ತ್ರಗಳಿಂ ಶಿರವಂ ಪಱಿಯೆ (ಚ) 13 ನಿರ್ಭರದಿಂ ಬರುತಿರ್ಪುದಂ 14 ಕಂಡು ರಾಮಂಗೆ ಬಿನ್ನವಿಸಿದಂ (ಚ)

ಕಂದ : ಎಲೆ ದೇವ ಕುಂಭಕರ್ಣನ
ತಲೆ [1]ಬೀಳಲ್[1] ಭೂಮಿಯೆಲ್ಲ ನುಗ್ಗುವುದು ಬೇ
ಗಲೆ ಶೂಲದಿಂದಲಿಡುಯೆಂ
ದೊಲವಿಂದಂ ನುಡಿದನಾ ವಿಭೀಷಣದೇವಂ ೨೭೩

ವಚನ : ಆ ಮಾತಂ ಕೇಳಿ ರಾಮಂ ಶೂಲದಿಂ[2]ದಿಡೆ[2] ಶೂಲದ ಮೇಲಣ ತಲೆ ಮುಂಡಕ್ಕೆ ಪೇಟ್ದು ಕಾದಿಸುತಿರೆ ರಾಮಂ ದಿವ್ಯಬಾಣದಿಂ[3]ದಾ ಮುಂಡಮನೆಚ್ಚು[3] ಕುಂಭಕರ್ಣನಂ ಕೊಲ್ವು[4]ದುಂ[4] ಸಮಸ್ತ[5]ರುಂ[5] ಮಡಿದುದಂ ಕಂಡು [6]ರಾವಣಂ ಪಾ[6]ತಾಳಹೋಮಕ್ಕೆ ನಿ[7]ಲಲದಂ ಅಂಗದ ವಿಭೀಷಣರ್ ಕೆಡಿಸೆ ಕೋಪದಿಂ ರಥಮನೇಱಿ ರಾಮ ಧನುವಂ ಪಿಡಿ ಬಂದವಂ ದಶಕಂಠನೆನೆಲು ರಾಮಂ[7] ದಶಕಂಠನಲ್ಲನೀನರಿಕಂಠನೆನಲು

ಕಂದ : ಎನುತಿರೆ ರಾಮನ ಮುಸುಕಿದ
ಘನಬಾಣಾಸಾರದಿಂದಲಂಬಿನ ಮೊನೆಯಿಂ
ದಿನ ಶಶಿಗಳೊಡಿದರ್ ನಿ
ರ್ಜನಮಾದುದು ದೇವಲೋಕಮುದನೇನೆಂಬೆಂ ೨೭೪

ಈಡಿಱಿದ ಸರಳ ತುಂಡಿಸಿ
ಹೊಡಿದನಾ ರಾಮ ಬಾಣದಿಂ ಪಗೆಯೆದೆಯಂ
ಜತ್ತೋಡುಗಳೆಪೆಚ್ಚಡಾನೆಯ
ಕೋಡುಂ ಬೆನ್ನಿಂದ ಪಾಱಿದವದೇಂ ಚಿತ್ರಂ ೨೭೫

ವಚನ : ಅಂತು ಬಿದ್ದ ರಾವಣನ ಬೆನ್ನ[8][ದಾಡೆ][8]ಗಳಂ ಕಂಡು ರಾಮಂ ವಿಭೀಷಣನಂ ಕರೆದಿವೇನೆ[9]ನೆ[9] ರಾವ[10]ಣಂ[10] ದಿಗ್ಗಜಂ[11]ಗಳೊಳ್ ನಲ್ಲಯುದ್ಧಮಂ ಮಾಡೆ[11] ದಿಗ್ಗಜದ ಕೊಂಬು ರಾವಣನ ಬೆ[12]ನ್ನೊಳ್[12] ನೂಡೆ[13]ಯದಂ[13] ಕೇಳಲಾಜಿಪೆ ನಿ[14]ರೆ[14] ರಾವಣಂ ಚಂದ್ರಹಾಸದಿಂ ಕೊಯ್ದು ವೀರಶೃಂಗಾರವೆಂದನಕ್ಕೆ ಮಣಿಯಂ ಕೆತ್ತಿಸಿ ಇನಿತು ದಿನವೆಯಲಿರ್ದುವು ಈಗ ದೇವರ ಬಾಣಹತಿಯಿಂ ಹಿಂದಕ್ಕೆ ಹಾಱಿದುವೆನೆ ರಾಮಂ ಸಂ[15]ತಸಂ[15]ಬಟ್ಟು ಸುತ್ತಿ ದಶಕಂಠನ ಕಂಠಕ್ಕಂಬ ಹೂಡಿ ಬಿಡೆ ತಲೆಗಳ್ ಪಱಿದು

[1] ಬಿದ್ದರೆ (ಜ) [2] ದಿಡೆ ಬಪ್ಪತಲೆಯು ಶೂಲವನೊತ್ತೆ ಶೂಲಂ ನೆಲಕ್ಕಾನೆ (ಜ) [3] ಣಂಗಳಿಂ ಆನುಮಂಡನುಂ ಮುಱುತುಂಡಾಗಲೆಚ್ಚು (ಜ) [4] ಮಂ ರಾವಣಂ ತಾನೊಬ್ಬ ನುಳಿಯೆ (ಜ) [5] ರೆಲ್ಲಂ (ಜ) [6] ಪಾ (ಜ) [7] ಲ್ಲಲಾ ಹೋಮಮಂ ಹನುಮಂತಂ ವಿಭೀಷಣಂ ಅಂಗದಂ ಪೋಗಿ ಕೆಡಿಸೆ ಕೋಪದಿಂದ ರಾವಣಂ ರಥಾರೂಢನಾಗಿ ಪೋಜಮಟ್ಟು ರಾಮಾ ಪಿಡಿ ಧನುವ ರಣದೊಳ್ ಕಡವ್ರ ಮಾಡುವರೆ ಬಂದವಂ ದಶಕಂಠಂ ಮಿಡುಕೆನಲು ರಾಮನೊಲವಿಂ ನುಡಿದನು (ಜ) [8] ವಡು (ಕ) ವಂಡಂ (ಗ) [9] ನೆ ನೇನಾ (ಜ) [10] ಣಂ ಹೊತ್ತು ಹೋಗದೆ (ಜ) [11] ಗಳುಂ ಕಾಮಂ ಮುಂತಗಾಳಗದಿಂದೊತ್ತುವಲ್ಲಿ (ಜ) [12] ನ್ನಿಂ (ಜ) [13] ದಿಗ್ಗಜಂ (ಜ) [14] ಲ್ಲಿ (ಜ) [15] ತೋಷಂ (ಜ)

ಕಂದ : ಎರಡೈದು ಹತ್ತು ಶತ ಸಾ
ವಿರ ಲಕ್ಷಂ ಕೋಟಿಯರ್ಬುದ ನ್ಯರ್ಬುದ ಸಾ
ಗರಮೆಂಬ ತೆಱದೆ [1]ರಾಕ್ಷಸ[1]
ಶಿರಗಳ್ ಭೂಗಗನದೆಡೆಯ ತುಂಬಿದುವಾಗಳ್ ೨೭೬

ಎಚ್ಚಡೆ ದನುಜನ ಶಿರವತಿ
ಹೆಚ್ಚುತ್ತಿರೆ ರಾಮಭದ್ರನೀ ರಾವಣನೊಳ್
ಮಚ್ಚರಕೆ ದೂರವರಿದೆನು
ತಚ್ಚರಿವಟ್ಟಿರಲು ಕಂಡು [2]ವಾನರ[2]ಕಟಕಂ ೨೭೭

ಚಂಪಕಮಾಲೆ

ಬೆರಸಿದನಾಗಲಾ ಹನುಮನಂಗದ [3][ಲಕ್ಷ್ಮಣನಾ][3] ವಿಭೀಷಣಂ
ಧುರಕತಿವಿಕ್ರಮಂ ನಳನು ನೀಲನು ಜಾಂಬವರೆಂಬರೊಗ್ಗಿನಿಂ
ದುರವಣಿಸಿತ್ತು ಪಾಯದಳಕದ್ಭುತವದ್ಭುತವಾಗೆ ಕಾದಿದರ್
ಸುರರಿಪು ರಾವಣಾಸುರನಿಗುಬ್ಬಸಮಪ್ಪವೊಲಾಜಿರಂಗದೊಳ್ ೨೭೮

ಉತ್ಪಲಮಾಲೆ

ಹೊಯ್ವರು ರಾವಣಾತ್ಮಜರು ವಾನರಯೂಥನುನಾಹವಾಗ್ರದೊಳ್
ಮೆಯ್ದಣಿವನ್ನ ಕಾದಿದಪು ವೀರಪ್ಲವಂಗ ಸಮೂಹ ವಜ್ರಿಗಂ
ದೆಯ್ದಿ ಸುರಾಸುರದ್ವಿಷರಿಗಂ ಜಯವಾದವೊಲಾಗಲಾಕ್ಷಣಂ
ಬಯ್ದುಬುಬೆಂದು ರಾನುಪಡೆ ಮತ್ತುಱುಬಿತ್ತಮರಾರಿಸೈನ್ಯಮಂ ೨೭೯

ವಚನ : ಅಂತು ವಾನರ[4]ಸಮೂಹ[4]ಮುಂ ದಾನವಸಮೂಹಮಂ ಕಾದಿ ಮಡಿವುದಂ ರಾವಣಶಿರಂಗಳ್ [5]ಜೆಳೆಯುವುದಂ[5] ಶ್ರೀರಾ[6]ಮಂ[6] ಕಂಡು ಇವನೞಿವುದಕಾವುದು ಪಾಯಮೆಂದು ವಿಭೀಷಣನಂ ಕೇಳೆ

ಕಂದ : ಅನ್ನವೆ ವಿಷವಾಗಿರ್ಪುದು
ಹೊನ್ನಂ ಹಿಡಿಯಲ್ಕೆ [7]ತಾನೆ[7] ಕರ್ಬೊನ್ನ[8]ಕ್ಕುಂ[8]
ತನ್ನವರೆ ಪಗೆಗಳಪ್ಪರ್
ಸನ್ನಿಯೆ ಹುಸಿಸುಹುದು ದೈವದೂರರ್ಗೆಂದುಂ ೨೮೦

---

1 ರಕ್ಕಸ (ಚ) 2 ದಾ ಕಪಿ (ಗ) 3 ಲಕ್ಷ್ಮಣಸಂಗದನಾ (ಕ ಚ) 4 ಯೂಥ (ಗ)
5 ಬಿಗರೂದುಂ (ಚ) 6 ನುಚಂದ್ರಂ (ಚ) 7 ಕೆಟ್ಟ (ಚ) 8 ಪ್ಪುದು (ಚ)

ವಚನ : ಅದು ನಿಮಿತ್ತಂ ವಿಭೀಷಣಾನೇ[1] ರಾಮಂಗೆ ರಾವಣನ ಮರ್ಮಸ್ಥಾನಮಂ ಪೇಟಿತೆ

ಕಂದ : ತಡವಿನ್ನೇಕೆಂದೆನುತುಂ
ಪಿಡಿದಾ ರಘುರಾಮ ದಿವ್ಯಮಂತ್ರಾಸ್ತ್ರಗಳಂ
ಬಿಡದಿ[2]ಸೆ[2] ಮರ್ಮವ ರಾವಣ
ಮುಡಿದಂ ಪರಸತಿಯ ತುಡುಕಿದವರುಟಿಂದಪರೇ ೨೮೧

ವಚನ : ಅಂತು ಬಿದ್ದ ರಾವಣನಂ [3]ರಾಘವಂ[3] ಬಂದು ನೋಡಿ ವಿಭೀಷಣಾ ಇವ ಮಹಾಸ್ವರೂಪಿಯೆಂದೆಂ[ಬುದನ]ಱಿದೆನ್ನೆ ಕುರೂಪಿಯಾಗಿರ್ದಪನೆನೆ ದೇವಾ ಜೀವದಲ್ಲಿ ಇ[4]ರ್ಪನ್ನೆವ[4]ರಂ ವ್ಯಾಧಿಗಳ್ ಮುಟ್ಟಲಂಜುವವು [5]ಈಗಳ್[5] ರೋಗಂ ಬಂದಾಶ್ರಯಿಸಿದುವೆಂದು ರಾವಣ[6]ಕಳೇಬರನುಂ[6] ವಿಭೀಷಣನಲುಗಿಸೆ ಜೀವಂ ಬಂತೆಂದು ವ್ಯಾಧಿಗ[7]ಳೋಡೆ[7] ಸರೂಪವಾದುದಂ ಕಂಡು ರಾಮಂ ಮೆಚ್ಚಿದನಾ[8]ಗಳ್[8]

ಕಂದ : ಕಱಿತೆದುದು ಹೂವಿನ ಹೆಮ್ಮಳೆ
ಸೆಱಿತೆಬಿಟ್ಟುದು ದೇವಕಾಂತೆಯರ ಮೂಲೋಕಂ
ನೆಱಿತೆ ಸಂತಸಮಂ ತಾಳ್ದುದು
ಹಱಿದುದು ಭೂಭಾರ ರಾಮಚಂದ್ರನ ಕೃಪೆಯಿಂ ೨೮೨

ಮತ್ತೇಭವಿಕ್ರೀಡಿತ

ಪರನಾರೀ ವಶದಿಂದೆ ಕೆಟ್ಟ ನಹುಷಂ ದೇವೇಂದ್ರನುಂ [9]ಬೊಮ್ಮನುಂ[9]
ಶಿರಮಂ ನೀಗಿದ ರಾವಣಂ ಕೃತಕದಿಂ ಭಸ್ಮಾಸುರಂ ಬೆಂದು ನಿಂ
ದುರಿದಂ ಕೀಚಕನಂತಕಾಲಯಮ ಪೊಕ್ಕಂ ಶೀಘ್ರದಿಂ ಕೌರವಂ
ನರಕಾಂಬೋಧಿಯೊಳಾಳ್ದು ಪೋದರುಱಿದರ್ ಕೈಕೊಂಬುನೇ ಪಾತಕಂ ೨೮೩

ಆದಱಿಂದಂ ರಘುರಾಮನೇ ಗತಿಯೆನಲ್ ವೈಭೀಷಣ ವ್ಯಾಸ ನಾ
ರದ ಪಾರಾಶರನಂಬರೀಷ ಸಿತವಾಹಂ ಪುಂಡರೀಕಂ ಶುಕಂ
ಮುದದಿಂದಾ ಪ್ರಹಲಾದ ಶೌನಕರು ಮುಖ್ಯರ್ ವಿಷ್ಣುಸಾ[10]ಯುಜ್ಯ[10]ಮಂ
ಪಡೆದು ಪೆತ್ತವೊಲಾ ವಿಭೀಷಣಗೆ ಪಟ್ಟಂಗಟ್ಟಿದಂ ಲಂಕೆಯಿಂ ೨೮೪

---

1 ನೆ ಪಗೆಯಾಗಿ ಪೋಗಿ (ಚ) 2 ಸೆಯೆ (ಗ) 3 ರಘುನಾಥಂ (ಚ) 4 ಪನ್ನೆಬ (ಚ) 5 ಯೋಗಂ (ಚ) 6 ಶ್ರವನಂ (ಚ) 7 ಳೆಲ್ಲಂ ಬಿಟ್ಟೋಡೆ (ಚ) 8 ಸಮುಖದಲ್ಲಿ (ಚ) 9 ಬ್ರಹ್ಮನುಂ (ಚ) 10 ಯೋಜ್ಯ (ಚ)

ವಚನ : ಅಂತು ವಿಭೀಷಣಂಗೆ [1]ಸ್ಥಿರಪಟ್ಟಂಗಟ್ಟಿ ಸೀತೆಯಂ ಕರೆತನ್ನಿ ಮೆನೆ ಸೀತೆ ಬರ್ಪುದುಂ ರಾವಣನ ಹಿಂದೆ ಬಂದೆಯೆಂದು ಮುಖಮುನಡ್ಡಲಿಕ್ಕೆ ಸೀತೆಯಗ್ನಿಪ್ರವೇಶಂಗೆಯ್ಯೆ ಅಗ್ನಿ ಪ್ರಸನ್ನನಾದಂ ಆಗಳುಮಾಮಹೇಶ್ವರರ್ ತಂದೆ ದಶರಥಂ ಬಂದು ಈ ಮಹಾಸತಿಯಂ ಕೂಡಿರುವ್ಪೆಂದು ಪುನರ್ವಿವಾಹಂಗೈದು ಸೀತೆಯಂ ರಾಮಂಗಿತ್ತು[1]

ಕಂದ : ಈಕೆಯ ಕಥೆಯೆ ಪವಿತ್ರಂ
ಈಕೆಯ [2]ಚರಿತಮೆ ಸಮಸ್ತ[2]ಮಂಗಳಕರವ್ಮೈ
ಈಕೆಯ ನೆನೆದರೆ ಜಗದೊಳ
ಗೇಕಪತಿವ್ರತೆ[3]ಯರೆಂ[3]ದು ನುಡಿದರಲಂಪಿಂ ೨೮೫

ನುಡಿದವರತ್ತಲ್ ಪೋ[4]ದರ್[4]
ನಡೆದಂ ರಘುರಾಮ ಪುರಕೆ ಸೀ[5]ತಾಸಹಿತಂ[5]
ಒಡೆದಂ ಸೇತುವ ಧನುವಿಂ
ದೆಡೆಯಾಡದ ತೆಱದೆ [6]ಜನರು[6] ಲಂಕಾಪುರಕಂ ೨೮೬

ವಚನ : ಅಂತು ಸಮಸ್ತಸೇನೆ[7]ಯೊಡನೆ[7] ಪುಷ್ಪಕದ ಮೇಲೆ [8]ಬಂದು[8] ಭರಧ್ವಾಜ [9]ಮುನಿಗೆ[9] ನಮಸ್ಕಾರಂಗೆಯ್ಯೆ ಆ ಋಷಿ[10]ಯೂ[10]ಟಮಾಡಿ ಪೋಗೆನೆ ರಾಮನಿಂತೆಂದಂ

ಕಂದ : ಹನ್ನೆರಡುವರುಷ ತನಕಂ
ತಾನ್ನೋಡುವೆ ರಾಮ ಮೇಲೆ ಕಿಚ್ಚಂ ಪುಗುವೆಂ
ನನ್ನಿಯೆಂದೆಂದ ಭರತಂ
ಹನ್ನೆರಡುಂ ತುಂಬಿತಿಂದಿಗೆಂತುಟು ಮುನಿಪಾ ೨೮೭

---

[1] ಪಟ್ಟಂಗಟ್ಟಿ ರಾಮನಾಮ ಉಳ್ಳಲ್ಲಿ ಪರ್ಯಂತರಂ ರಾಜ್ಯವಾಳೆಂದು ದುಸ್ಥಿರಪಟ್ಟಂಗೆಯ್ದು ವಿಭೀಷಣನಂ ಹನುಮಂತನಂ ಸೀತೆಯಂ ಕರತನ್ನಿಮೆನೆ ಸೀತೆ ಬರ್ಪುದುಂ ಹೊನ್ನಗಡ ಹಿಂದೆ ನಮ್ಮಂ ಕಳುಹಿ ಲಕ್ಷ್ಮಣನಂ ಹೊಱಡನೂಂಕಿ ರಾವಣನ ಹಿಂದೆ ಬಂದೆಯೆಂದು ಮುಖ ಮುನಡಲಿಕ್ಕೆ ಸೀತಾಪರಮೇಶ್ವರಿಯಗ್ನಿಪ್ರವೇಶವಾಗೆಯಗ್ನಿಪುರುಷಂ ಪ್ರಸನ್ನನಾದಂ ಆ ಸಮಯ ದಲ್ಲಿವ್ರುಮಾ ಮಹೇಶ್ವರರ್ ತಂದು ದಶರಥಸಹಿತಂ ಬಂದು ಈ ಮಹಾಸತಿಯಂ ಕೂಡಿಕೊಂಡಿರಿ ಯೆಂದು ಪುನರ್ವಿವಾಹಮಂ ಮಾಡಿ ಸೀತೆಯಂ ರಾಮಚಂದ್ರನ ಕೈಯಲ್ಲಿ ಕೊಟ್ಟು (ಚ) [2] ಚಾರಿತ್ರ ಸರ್ವ (ಚ) [3] ಯೆಂ (ಚ) [4] ದರತ್ತಂ (ಚ) [5] ತೆ ಸಮೇತಂ (ಚ) [6] ನರರು (ಚ) [7] ಸಹಿತಂ ಸೀತೆ ಸಮೇತಂ ಸರ್ವರುಂ ಕುಬೇರನಿಂ ರಾವಣಂ ತೆಕ್ಕೊಂಡು (ಚ) [8] ಬಪ್ಪನ್ನಂ ಮುಂದೆ (ಚ) [9] ರುಷಿಯಾಶ್ರಮಮಂ ಕಂಡು ಆ ಮುನಿಗೆ (ಚ) [10] ನಮ್ಮಲ್ಲಿಯೂ (ಚ)

ಕೆಲಬಿಹಲ್ಲಿಗೆ ಹನುಮಂತನ
ದಳಸಹಿತಂ ಸೀನು ಭೋಜನಂಗೈ ಬೇಗಂ
ತಳುವಿಲ್ಲವೆಂದು ಮುನಿಪಂ
ನಿ[1]ಳಿಂಪ[1]ಧೇನುವನು ನೆನೆಯೆ ಬಂದುದು ಬೇಗಂ ೨೮೮

ಪೊಳೆವ ನೆಲೆಮಾಡದರಮನೆ
ಲಲನೆಯರಮೃತಾನ್ನಭೋಜನಂ ತಾಂಬೂಲಂ
ಪಲವುಡುಗೊರೆ ಸಹಿತೆಲ್ಲಾ
ದಳಕಂದಾಯಿತ್ತು [2]ಮುನಿ[2]ಚರಿತ್ರವೆ ಸಫಲಂ ೨೮೯

ವಚನ: ಅಂತು ಭೋಜನಂಗೈದು ಪುಷ್ಪಕಾರೂಢನಾಗಿ ರಾಮಂ ಬರುತಿರಲಿತ್ತ[3]ಲಣುವಂ ಭರತಂಗೆ ರಾಮಂ ಬಂದನೆಂದು[3] ಪುಷ್ಪಕಮಂ ತೋರೆ[3] ಹನುಮಂಗಂಗಚಿತ್ತ[4]ವಿತ್ತು[4] ಭರತಂ [5]ರಾಮನಂ[5] ಕಣ್ಣೊಳ್ ನೋಡಿ

ಕಂದ: ಆಡುವ ನರ್ತಕಿಯರ್ ಕೊಂ
ಡಾಡುವ ಕೈವಾರನಿಕರ ಶುಭಧವಳಗಳಂ
ಪಾಡುವ ಮುತ್ತೈದೆಯರಿಂ
ಕೂಡೆಯಯೋಧ್ಯಾಪುರಕ್ಕೆ [6]ಬಂದಂ ರಾಮಂ[6] ೨೯೦

ವಚನ: [7]ಅಂತು[7] ಸಮಸ್ತ ಸೇನೆ[8]ಯೊಡನೆ[8] ಪಟ್ಟಣಮಂ ಪೊಕ್ಕು ಎಲ್ಲರೂ ಬಟಲಿ[9]ರ್ಪರ್[9] ಔತಣಮಂ ಮಾಡಬೇ[10]ಕೆನೆ[10] ಭರ[11]ತಂ[11] ಸರ್ವಸನ್ನಾಹ[12]ದೊಡನೆ ಪಂಚಭಕ್ಷ್ಯಂಗಳಂ ಷಡ್ರಸಂಗಳಂ ಅಷ್ಟಶಾಕಂಗಳನಣಿಮಾಡಿ ಕಪಿನಾಯಕರ್ಗೆಡೆಯಂ ಮಾಡಿಸಿ ಹನುಮಂತಂಗೆಡೆಯಾವುದೆಂದೆಕ್ಕಟಿಯೊಳ್ ರಾಮನಂ ಲಕ್ಷ್ಮಣಂ ಕೇಳೆ[12]

1 ಳಿಪಂ (ಗ) 2 ರುಷಿ (ಚ) 3 ಹನುಮಂತಂ ಭರತನ ಬಳಿಗೆ ಬಪ್ಪನ್ನೆಗಂ ಭರತಂ ಅಗ್ನಿಪ್ರವೇಶಕ್ಕೆ ಸನ್ನದ್ಧನಾಗಿರಲಾ ಸಮಯದಲ್ಲಿ ಹನುಮಂತಂ ಬಂದು ರಾಮಂ ಬಂದನೆಂದು (ಚ) 4 ನುಂ ಕೊಟ್ಟು (ಚ) 5 ಸಮಸ್ತ ಸಂಭ್ರಮ ಸಹಂ ಯಿದಿರ್ಗೊಂಡು ಶ್ರೀರಾಮನಂ (ಚ) 6 ರಾಮಂ ಬಂದಂ (ಚ) 7 ಅಂತು ಭರತ ಸಹಂ (ಚ) 8 ಸಹಂ (ಚ) 9 ಬಂದರ್ (ಚ) 10 ಕೆಂದು (ಚ) 11 ತಂಗೆ (ಚ) 12 ವಾಂ ಮಾಡಿ ಸಮಸ್ತ ಶಾಕಪಾಕ ಭಕ್ಷ್ಯ ಭೋಜ್ಯ ಆಜ್ಯ ಲೇಹ್ಯ ಚೋಷ್ಯ ಮಜ್ಜನ ಮುಂತಾಗಿ ಗುಡ ಪಿಷ್ಟ ಗೋಧೂಮ ಮಾಡಿ ಸೂಕ್ಷ್ಮ ಧಾನ್ಯಗಳಿಂದ ಪಂಚ ಭಕ್ಷ್ಯಂಗಳಿಂ ಕಟು ಆಮ್ಲ ಮಧುರ ತಿಕ್ತ ಲವಣ ಕಷಾಯಂಗಳೆಂಬ ಷಡ್ರಸಂಗಳಿಂ ಬೇರು ಗೆಣಸು ದಂಟು ಸೊಪ್ಪು ಹೂವು ಕಾಯಿ ಹಣ್ಣು ಮಿಕ್ಕು ಮುಂತಾದ ಅಷ್ಟಶಾಕಂಗಳಿಂ ಸನ್ನಾಹಂಗಯ್ದು ಡೆ ಸಮಸ್ತ ಕಪಿನಾಯಕರ್ಗೆಡೆ ಮಾಡಿಸಿ ಸಮಸ್ತರಂ ಕುಳ್ಳಿರಿಸಿ ಹನುಮಂತಂಗೆಡೆಯಾವುದೆಂದು ರಾಮಂಗೆಂಬೀ ಕಾಲದೊಳ್ ಲಕ್ಷ್ಮಣ ನೇಮಂ ಬಿನ್ನೈಸಿ (ಚ)

ಕಂದ : ಧನಮಂ ಬಯಸಿದನೋ ಪೊಸ
ವನಿತೆಯರಂ ರಾಜ್ಯ ವೇಶಮಂ ಬಯಸಿದನೋ
ತನುಜೀವಮನೆಮಗಿತ್ತಂ
ಹನುಮಂತಂಗೇಕೆ ಬೇಱತ ಭೋಜನಮೆಂದಂ ೨೯೧

ವಚನ: ಎಂದು ಹನುಮಂತ[1]ನಂ[1] ಭೋಜನಕ್ಕೆ ಬಾ[2]ರೆನೆ[2] ಹರಿವಾಣಮಂ ತೆಕೊಂಡು ಪೋಗಿ ವೃಕ್ಷದ ಮೇಲುಂಡು ಆಕಾಶಗಂಗೆ[3]ಯೊಳ್[3] ಹಸ್ತಪ್ರಕ್ಷಾಲನಂಗೈದನಿ[4]ತ್ತಲ್[4] ಕಪಿನಾಯ[5]ಕರ್[5] ಭೋಜನಂಗೈದು ಕುಳ್ಳಿರ್ಪುದುಂ ಲಕ್ಷ್ಮ[6]ಣಂ[6] ನಸು ತೂಕಡಿಸಿ ನಗುವುದುಂ ರಾಮಂ ಕಂಡು ಎಲೆ ಲಕ್ಷ್ಮಣ ಅಕಾರಣ ಹಾ[7]ಸ್ಯಂ[7] ಶಂಕೆಯೆನೆ

ಕಂದ : ಹಿಂದಕ್ಕರೆವರುಷಂ ಮಿಗೆ
ಬಂದತ್ತಿಲ್ಲನಗೆ ನಿದ್ರೆ ಹಸಿವುಂ ತೃಷೆಗಳ್
ಬಂದ ತೂಂಕಡಿಕೆಗಂ ನಗೆ
ಬಂದತ್ತೆಲೆ ರಾಮಯೆಂದು ಲಕ್ಷ್ಮಣ ನುಡಿದಂ ೨೯೨

ವಚನ: ಎನೆ [8]ರಾ[8]ಮಂ [9]ನೊಂದು[9] ಮುಂದಣವತಾರದೊಳ್ ನೀಂ ಪೇಟ್ದಂತೆ ನಾನಿರ್ಪೆನೆಂದು ಸಕಲ ಸೇನೆಯೊಡನೆ ಸುಖದಿಂದಿರ್ದ

ಕಂದ : ಕ್ಷಮಭಯ ಮರಣಭಯಂಗಳ್
ಸಮನಿಸ ಡಾಮರದ ಭಯ ಮಹಾಚೋರಭಯಂ
ಹಿಮಮಗ್ನಿಯೊಮಯದ ಭಯ
ವಮಮಾ ಶ್ರೀರಾಮನಾಳ್ದ ದೇಶದೊಳಿಲ್ಲಂ ೨೯೩

ಪರಮಾಯುಷ್ಯಂ ಭೋಗೋ
ತ್ಕರಪುಣ್ಯಂ ದಿವ್ಯಯೌವನಂ ಸಂತೋಷಂ
ಕರುಣನಿಧಿ ರಾಮಚಂದ್ರನ
ಚರಿತವ ಕೇಳುವರಿಗಿಷ್ಟಸಿದ್ಧಿಗಳಕ್ಕುಂ ೨೯೪

---

1 ನಂ ಕರೆದು (ಚ) 2 ಯೆನೆ ರಾಮಂ ಭೋಜನಂಗೈದ ಪಿತರೊಳು (ಚ) 3 ಯಲ್ಲಿ (ಚ)
4 ತ್ತ (ಚ) 5 ಕರೆಲ್ಲ (ಚ) 6 ಣದೇವಂ (ಚ) 7 ಸ್ಯಂ ಕಪುಸ್ತರಿಗೂ (ಚ)
8 ಶ್ರೀರಾ (ಚ) 9 ಇಂದ್ರಜಿತುವಂ ಆದ ಪ್ರೇರಣೆಯಿಂದ ನಿಸ್ಸಂ ಮರವೆನೀನೊ ತಮ್ಮ ನಿನಗೆ ಹಸಿವು ನಿದ್ರೆ ಅಜುದಿಂಗಳೇತಕಿಲ್ಲೆನೆ ದೇವಂಗೆ ನಾಂ ಕೊಡದೆ ಫಲಂಗಳ ಕೊಂಬುದಿಲ್ಲ ಫಲವಂ ಕೊಳ್ಳದೆ ತಾರನೆಂದು ದೇವರು ಕೊಡಲಿಲ್ಲ ಅದು ನಿಮಿತ್ತಮುಪೋಷ್ಯಂ ಮೃಗ ರಾಕ್ಷಸರ ಬಾಧೆಗೆ ಎಚ್ಚತ್ತಿರ್ಪನೆನೆ ರಾಮಚಂದ್ರಂ ನೊಂದು (ಚ)

ಮತ್ತೇಭವಿಕ್ರೀಡಿತ

ಧರಣೀ ಸೌಖ್ಯಕರಂ ಗದಾಯುಧಧರಂ ಶ್ರೀಶಾರ್ಙ್ಗ ಚಕ್ರೋಧರಂ
ವರಪೀತಾಂಬರ ದಿವ್ಯಕೌಸ್ತುಭಧರಂ ಲಕ್ಷ್ಮೀ[1]ವ[1]ರಂ ಭೂಧರಂ
ಸುರಸಂದೋಹ [2]ಪುರಂದರೋನ್ನತ[2]ಪರಂ ಸೌಖ್ಯಾಕರಂ ನಿರ್ಮ[3]ಲಂ[3]
ಪರಮಾನಂದಕರಂ ಜಗತ್ರಕರಮುಂ ರಕ್ಷಿಕ್ಕೆ ನಾರಾಯಣಂ ೨೯೫

ಗದ್ಯ : ಇದು ವೃಂದಾರಕವೃಂದ ಪರಿಮಣಿಖಚಿತ ಮಕುಟರಂಜಿತ ಶ್ರೀಮದಾದಿ ನಾರಾಯಣ ಚರಣ ಸರಸೀರುಹ ಮಕರಂದ ಷಟ್ಚರಣ ಸಲ್ಲಲಿತ ಮಲ್ಲರಸಾಂಕ ವಿರಚಿತಮಪ್ಪ ದಶಾವತಾರ ಚರಿತ್ರ ಮಹಾ ಪ್ರಬಂಧದೊಳು ಹರಿಯೋಲಗ ಸನಕ ಸನಂದನ ಗಮನ ಮುಂತಾದ ರಾಮಾವತಾರಂ

ಅಷ್ಟಮಾಶ್ವಾಸಂ

---

1 ಧ (ಚ) 2 ಮುನೀಶ್ವರಾರ್ಚಿತ (ಚ) 3 ಠಂ (ಚ)

ನವಮಾಶ್ವಾಸಂ

ಕಂದ : ಶ್ರೀಕಮಲೆಯರಸನಚ್ಯುತ
ವೈಕುಂಠಂ ಸಕಲ ಲೋಕವಂದಿತಪದ ಕರು
ಣಾಕಾರಂ ಸಲೆ ಶರಣರ
ನೀ ಕೃಪೆಯಿಂ ಪೊರೆವುದಾದಿನಾರಾಯಣನೇ ೧

ಓರಂತೆ ಸತ್ಯಭಾವೋ
ದ್ಧಾರಂ ಬಲಯುತನನಂತ ಗೋಪ್ರತಿಪಾಲಂ
ಚಾರುತರವೆನಿಸ ಕೃಷ್ಣನ
ತಾರನುದಕ್ರೂರ ಶರಣದಯ ವಿಸ್ತಾರಂ ೨

ಶರ[1]ಧಿಯ[1] ಕುಮಾರಿಕಾಮುಖ
ಸರಸಿಜ ಮಕರಂದ ಭೃಂಗನೊಲವಿಂದೆ ಸುಧಾ
ಶರಧಿಯೊಳೊಪ್ಪುತ್ತಿರೆ ಬಂ
ದರು ಸನಕ ಸನಂದನಾದಿಗಳ್ ಭಕ್ತಿಯೊಳುಂ ೩

ಉತ್ಪಲಮಾಲೆ

ಬಂದೊಲವಿಂದೆ ವಂದಿಸಿ ಮುಕುಂದಗೆ ನಿಂದಿರ........
ನಂದನನೆಂದನಿಂದಿಗೆರಡಾಯಿತವಂದಿರಿಗಂ ಭವಂ ಸಮಂ
ತೊಂದಲಿ[3]ಂ[3]ಳಿವು ಕೊಡುವರೆನುತ್ತಿರೆ ಬಾಗಿಲೊಳೀಗ ದೇವತಾ
ವೃಂದಸಮೇತ[2]ಮು[2]ಬ್ಜಭವ[3]ನಿ[3]ರ್ದಪ[4]ನೆಂ[4]ದರು ದ್ವಾರಪಾಲಕರ್ ೪

ವಚನ : ಅಂತು ವೇತ್ರಧಾರಿಗಳ್ [5]ಬಿನ್ನೈಸೆ ಮುಕುಂದಂ[5] ಬರವೇಳ್ವುದೆಂದು [6]ನಿಯಮಿಸೆ[6]

ಮತ್ತೇಭವಿಕ್ರೀಡಿತ

ಪೊಗಳುತ್ತುಂ ಕೃಷ್ಣ ನೀನೇ ಗತಿ ಮತಿಯೆನುತುಂ ಬ್ರಹ್ಮ[7]ರಿಂ[7]ದ್ರಾದ್ಯರೆ[8]ಲ್ಲರ್[8]
ಮಿಗೆ ಪಾದಾಕ್ರಾಂತರಾಗಲ್ ಮುರಹರ ಕೃಪೆಯಿಂದೆತ್ತಿ ನೀವೀಗ ಬಂದು
ಜಗಮುಂ ಪೇಳಿಂಮೊಡಾ[9]ಗಂ[9] ಸರಸಿಜಭವ ಬಿನ್ನೈಸಿದಂ ದೇವ ಕೇಳೀ
ಜಗಮೆಲ್ಲಂ ದೈತ್ಯ ಸೇನಾಸಿವಹದ ಕುಸಿಯಿತ್ತೆಂದು ಭೂಕಾಂತೆ [10]ಬಂದಳ್[10] ೫

---

1 ನಿಧಿ (ಗ) 2 ಲ (ಚ) 3 ಳಿ (ಗ) 4 ರೆಂ (ಗ ಚ) 5 ಮುಕುಂದಂಗೆ ಬಿನ್ನೈಸಿ (ಚ) 6 ನಿಯಮಿಸುತ್ತಿರಲು (ಚ, 7 ಯಿಂ (ಚ) 8 ಲ್ಲಂ (ಚ) 9 ಗಲ್ (ಗ) 10 ಬಾದಳ್ (ಕ) ಯೆಂದಳ್ (ಗ)

ವಚನ : ಇಂತೆಂದು ಭೂಕಾಂತೆಯಂ ತೋಱುವ[1]ಮುಮುವಳ್[1] ಕರ[2]ಮಂ ಜೋಡಿಸಿ

ಕಂದ : ಗಿರಿರಂಗ ವಾಲಿಯಾದವು
ಕರಿಮುಟ್ಟಿಗೆಯೊದವಹಿಪ ಮೂರ್ಛಾಭರದಿಂ
ಸುರುಳ್ದಂ ಚಿತ್ತೈಸೈ ನಾ
ಗರ ನೋಱುವ ಬಟ್ಟೆಯಿ[3]ತ್ತು[3] ಪಂಕಜನಾಭಾ ೬

ವಚನ : ಎಂದ ನೆಲವೆಣ್ಣಿನ ತಿಣ್ಣತೆಯಂ ತಾವರೆಗಣ್ಣಂ ಕೇಳ್ದು ಪವಡಿಸಾಲ್ಗಣ್ಣನೊಳಿಂ
ತೆಂದಂ

ಕಂದ : ಅರಿಕಾಲನೇಮಿ ಕಂಸಂ
ಧರಣಿಗೆ ಮುತ್ಸಂಗದಿಂದೆ ಜನಿಸಿದ ನರಕಾ
ಸುರ ಕುಂಭಕರ್ಣ ದುರ್ಧರ
ಚರಿತಂ ತಾಂ ದಂತವಕ್ತ್ರನೆಂಬುವ[4]ನಜು[4]ವೆಂ[4] ೭

ರಾವಣನೇ ಶಿಶುಪಾಲಂ
ಭಾವಿಸೆ ಬಲಿಸೂನುವೀಗ ಬಾಣಾಸುರ ಮು
ತ್ತಾ ವಿಗಡ ಸಾಲ್ವ ಮಾಗಧ
ರೀ ವಸುಧೆಗೆ ಭಾರವಾದರಂಬುಜಗರ್ಭಾ ೮

ವರು[5]ಣ[5]ಮುಖಸಾಧ್ಯಕೆಂ[6]ದಾ[6]
ಸುರಭಿಗಳಂ ತಂದು ಪಡೆದಿರಲು [7]ಕಾ[7]ಶ್ಯಪ ಸ್ಸೈ
[8]ತಿರದಾ[8] ಗೋಸಂಕುಲಮಂ
ಭರದಿಂದಪಹರಿಸಿ ತಂದನಾಶ್ರಮವೆಡೆಗಂ ೯

ಮುನಿಪತಿ [9]ತನ್ನಾ[9] ಪ್ರೇಮದ
ವನಿತೆಯರುಗಳಿರ್ವರದಿತಿ ಸು[10]ರ[10]ಭಿ[10]ವತಿಗೆ ಗೋ
ಧನವಂ [11]ತ[11]ರ[11]ದೀಯಲ್ಕಾ
ವರುಣಂ ನಿನಗೈವೆ ಪೇಟಿನೇ ಕಮಲಭವಾ ೧೦

---

[1] ಮಣಿ ಭೂಕಾಂತೆ (ಚ) [2] ಕನಿಲಂಗಳಂ ಮುಗಿದು (ಚ) [3] ತು (ಚ)
[4] ಬಳ್ಳಿಂ (ಚ) [5] ಣಂ (ಗ) [6] ದು (ಗ) [7] ಕಾ (ಗ) [8] ರಿಪದೆ (ಗ)
[9] ತನ್ನಯ (ಗ) [10] ಭ (ಗ) [11] ಪರಿ (ಗ) ಸರಿ (ಚ)

ವನಧಿಪ ವೇಟಿಲ್ ನಿನಗಂ
ವನಜಭ[1]ವನೆ[1] ಕೋಪದಿಂ[2]ದೆ[2] ಕಶ್ಯಪಮುನಿಗಂ
ಮನುಜಲೋಕದೊಳ್ ಜನಿಸುವು
ದೆನುತುಂ ನೀಂ ಶಾಪಮಿತ್ತೆಯದುಕಾರಣದಿಂ ೧೧

ವಸುದೇವನಾದ [3]ಕ[3]ಶ್ಯಪ
ಬಿಸಜಾನನೆಯದಿತಿದೇವಿ ದೇವಕಿಯಾದಳ್
ಶಶಿವದನೆ ಸುರಭಿ ರೋಹಿಣಿ
ವೆಸರಿಂ [4]ಜನಿಯಿಸಿದರವನಿಯೊಳ್[4] ಪರಮೇಷ್ಠಿ ೧೨

ದ್ರೋಣನೆನಿಪ್ಪಾ ವಸುವಿನ
ಪ್ರಾಣೇಶ್ವರಿ ಧರಣಿಯೆಂಬ ಬಾಲಕಿಯಿವರುಂ
ಕ್ಷೋಣಿಯೊಳ್ ನಂದಗೋಪಂ
ರಾಣಿ ಯಶೋದೆ[5]ಯರೆನಿ[5]ಪ್ಪರಮ[6]ರ[6]ಜ್ಯೇಷ್ಠಂ ೧೩

ವಚನ : ಅದು ನಿಮಿತ್ತಂ ಮಾತಾಪಿತೃಗಳ ತಪೋನಿಮಿತ್ತಂ ಗೋವುಗಳಾದ ವೇದಮಂ ಕಾವುದಕಾಗಿ ಗೋ[7]ಪೀ[7]ಗೋಪರಾದ ದೇವ[8]ರ[8] ಕೂಡಾಡುವದ[9]ಕ್ಕಾಗಿ[9] ದೇವಕಿ[10]ಯ[10] ಬಸಿಱೊಳ್ [11]ಬಂ[11]ದು ಯಶೋದೆಗೆ ಮುದ್ದಂ ತೋಱಿ ಪಾಂಡವರಂ ರಕ್ಷಿಸಿ ಕೌರವರಂ [12]ಶಿಕ್ಷಿಸಿ[12] ನೀವೆಲ್ಲಂ ನಿಮ್ಮಂಶಂಗಳೊಳ್ ಪು[13]ಟ್ಟಿರೆಂದು[13] ಶೇಷನಂ ರೋಹಿಣಿಯೊಳ್ ಜನಿಸೆಂದು [14]ಅಮರಾದ್ಯರಂ[14] ಕಟಿಪಿ ತಾನವತಾರೋದ್ಯೋಗ[15]ಸಾದನಿತ್ತಲ್[15]

ಉತ್ಪಲಮಾಲೆ

ನಂದನದಿಂದೆ ಶಾಲಿವನದಿಂದೆ ಮಹಾ[16]ನದಿಯಿಂ[16]ದದಾವಗಂ
ಕುಂದದೆ ತೀವಿ ರಾಜಿಪ ತಟಾಕಗಳಿಂದೆ ಸುಪುಷ್ಪವಾಟಿಯಿಂ
ಬಂಧುರಮಾದ ಪೂಗೊಳಗಳಿಂ ನಗರಂ ಪುರ ಪಟ್ಟಣಂಗಳಿಂ
ದಂದಮನಾಂತ ದೇಶಗ್ರಹದಿಂ ಭರತಾವನಿಯಿರ್ಪುದೊಪ್ಪದಿಂ ೧೪

ವಚನ : ಆ ಭರತಕ್ಷೇತ್ರದೊಳ್ ಯಮು[17]ನಾನದೀ ತೀರದೊಳ್[17]

---

[1] ವ (ಗ) [2] ದಂ (ಗ) [3] ಕಾ (ಗ) [4] ದವನಿಯೊಳ್ ಜನಿಸಿದರ್ (ಚ) [5] ಯಮುನೆಯಿ (ಚ) [6] ರರ್ (ಗ) [7] ಪಿಯರ್ (ಗ ಚ) [8] ಕಳ (ಗ ಚ) [9] ಕ್ಕಾಗಿ ಭೂಭಾರೋತ್ತರಣಕ್ಕಾಗಿ ವಸುದೇವ (ಚ) [10] ಯರ (ಚ) [11] ಸಂ (ಚ) [12] ಶಿಕ್ಷಿಸಿ ಆಚಾರ್ಯರಂ (ಚ) [13] ಟ್ಟಿಯೆಂದುನಿಯಮಂಗೊಟ್ಟು (ಚ) [14] ದೇವತೆಗಳಂ ಬ್ರಹ್ಮನಂ (ಚ) [15] ನಿಶ್ಚಯಿಸಿರ್ದನಿತ್ತಲ್ (ಚ) [16] ಸರಿತಂ (ಚ) [17] ನೆಯೆಂಬನದಿಯ ತೀರದಲ್ಲಿ (ಚ)

ಚಂಪಕಮಾಲೆ

ಯದುಕುಲರಾಜಧಾನಿ ಸಲೆ ರಂಜಿಸುತಿರ್ಪುದು ಹರ್ಮ್ಯವೊಪ್ಪುವಾ
ಸದನಗಳೋಳಿಯಿಂ ಬಹಳ ರತ್ನಸಮೂಹಗಳಿಂ ಸುವೀಥಿಯಿಂ
ಸುದತಿಯರಿಂದೆ ಸತ್ಪುರುಷರಿಂದೆ [1]ಸು[1]ಸೌಖ್ಯಗಳಿಂ ವಿಭೂತಿಯಿಂ
ಮಧುರೆಪುರಕ್ಕೆ ಪಾಸಟಿಯೆನಿಪ್ಪವೆ ಭೂತಳದಲ್ಲಿ ಪಟ್ಟಣಂ ೧೫

ಕಂದ : ಆ ಮಧುರಾಪಟ್ಟಣಕಧಿ
ರಾಮಂ [2]ಪತಿ[2]ಯುಗ್ರಸೇನನೆಂಬ ನರೇಂದ್ರಂ
ಕಾಮಸನ್ನಿಭ ಸುವಿಕ್ರಮ
ವಾಮಾಕ್ಷೀಜೀವಿತೇಶನಿಹನನವರತಂ ೧೬

ಆ ಉಗ್ರಸೇನನಾತ್ಮಜ
ದೇವಕನೆಂಬಾತನಾತನಂಗನೆ ವಸುಮತಿ
ದೇವಿಯುತಿ ಸೊಬಗಿನಿಂದು
ದ್ಯಾವನದೊಳಗಿರಲು ದ್ರಮಿಳದಾನವನೊರ್ವಂ ೧೭

ವಚನ: ಇಂತಾ ದಾನವಂ ದೇವಕನ ರೂಪಂ ಕೈಕೊಂಡು ಆಕೆಯುಂ ನೆರೆವುದುಂ [3]ಕಂಸಂ[3] ಪುಟ್ಟಿದಂ ಆ ದೇವಕನಂಶದಲ್ಲಿ ದೇವಕೀದೇವಿ ಪುಟ್ಟಿದಳಿಂ[4]ತಿರಲ್[4]

ಉತ್ಪಲಮಾಲೆ

ದೇವಕನಾತ್ಮಜಾತೆ ವಸುದೇವಕನಂಗನೆಯಾಂದು ಪುಟ್ಟಿದಳ್
ದೇವಕಿದೇವಿ ಕಂಸನೊಡಹುಟ್ಟಿದಳುತ್ತಮಜಾತಿವಸ್ತು ಸ
ದ್ಭಾವಕಿ ಪೂರ್ಣಚಂದ್ರಮುಖಿ ಸರ್ವಜನಸ್ತುತಪಾತ್ರೆ [5]ಗಾತ್ರೆ[5]ಯಿಂ
ದೀವರನೇತ್ರೆ ವಿಭ್ರಮವಿಲಾಸದಿನೊಪ್ಪುತ[6]ಲಿ[6]ರ್ದಳಾವಗಂ ೧೮

ಮತ್ತೇಭವಿಕ್ರೀಡಿತ

ಯದುವಂಶಾಧಿಪ ಶೂರಸೇನನ ಸುತಂ ಶ್ರೀವಾಸುದೇವಂ ಸುಖ
ಪ್ರದ[7]ಯಂ ತನ್ನನು[7]ಜಾತೆಯುಂ ಪೃಥೆಯೆನಿಪ್ಪಾ ನಾರಿಯುಂ ಕೂರ್ತು[8]ನೇ[8]
ಹದೊಳಿತ್ತಂ ಕಡುಮಾನಿಯಂ ಸುತೆಯ ಕುಂತೀಭೋಜಭೂಪಂಗೆ ಸೌ
ಖ್ಯದೊಳಾತಂ ಸಲಹಲ್ಕೆ ಕುಂತಿವೆಸರಿಂ ಕೂಡಿರ್ದ[9]ಳಾ[9] ಪಾಂಡು[10]ವಂ[10] ೧೯

---

[1] ಸಂ (ಕ) [2] ದೊರೆ (ಗ) [3] ರಾಕ್ಷಸತ್ವದಿಂ ಕಂಸಂ (ಗ ಚ) [4] ವೆಂತೆನೆ (ಚ) [5] ದಿಂ (ಗ) [6] ಇಂ (ಚ) [7] ಯುಕ್ತನಂಗನು (ಗ) [8] ಸ್ನೇ (ಚ) [9] ನಾ (ಚ) [10] ಗಂ (ಚ)

ವಚನ : ಇ[1]ತ್ತಲ್[1] ವಸುದೇವಂಗೆ ರೋಹಿಣಿಯುಂ ಮದು[2]ವೆ[2]ಯಾಡಿ ಶೂರಸೇನಂ [3]ಮೃತನಾದ ಬಳಿಕ[3] ವಸುದೇವಂ ರೋಹಿಣಿ[4]ಯೊಡನೆ[4] ಗೋಕುಲ[5]ದೊಳ್[5]ದಿರ್ದು ಅಲ್ಲಿಂದ ಮಧು[6]ರೆಗೆ[6] ಬಂದು ಕನ್ಯಾರ್ಥಿಯಾಗಿ ಕಂಸನಂ ಕೇಳ್[7]ಲನಂ[7] ದೇವಕಿ[8]ಯುಂ[8] ವಸುದೇವಂಗೆ ಕೊಡುವೆನೆಂದು

ಶಾರ್ದೂಲವಿಕ್ರೀಡಿತ

ಮತ್ತಂ ಶ್ರೀವಸುದೇವಗಂಮೊಲವಿನಿಂ ಕಂಸಾಸುರಂ ಕೊರ್ತುಸ್ತ್ರೀ
ರತ್ನಂ ದೇವಕಿದೇವಿಯುಂ [9]ಮದುವೆಯುಂ ಮಾ[9]ಡಲ್ ನಭೋವಾಕ್ಯಸಾ
ಜ್ಜಿತ್ತೀ ಕನ್ಯೆಗೆ ಪುಟ್ಟಿದಾತ್ಮಭವ[10]ನಿಂ[10] ಕಂಸಂಗೆ ಕೇಡೆಂದು ಹೇ
ಳುತ್ತಾ[11]ಗಳ್[11] ದಿವಿಯಿಂದೆ ನಾರದನು ಬಂದಂ ಕಂಡನಾ ಕಂಸನಂ ೨೦

ಸ್ರಗ್ಧರೆ

ಬಂದಾ ನಾರಂದಗರ್ಘ್ಯಾರ್ಚನಮನವ ಮಧುಪರ್ಕಾದಿಯಂ ಮಾಡಿ ಶೀಘ್ರಂ
ಬಂದಾ ಕಾರ್ಯಂಗಳಂ ನೀನುಸುರೆನಲದಸಿನ್ನೇನ ನಾಂ ಪೇಟ್ವೆ ಕಂಸಾ
ಸಂದೇಹಂ ಬೇಡವೀ ದೇವಕಿಯುದರದೊಳೀಗುದ್ಭವಂಗೈದು ನಿನ್ನಂ
ಕೊಂದೀ ಭೂ ಭಾರಮುಂ ತೀರ್ಚುವೆನೆನುತೊಲವಿಂ ಬ್ರಹ್ಮಗೆಂದಂ ಮುಕುಂದಂ ೨೧

ಕಂದ : ಎನುತೊಲವಿಂದಂ ನಾರದ
ಘನಪಥದಿಂನ್ಸೈದಿ ಪೊಕ್ಕ ನಾಕಮನಿ[12]ತ್ತಲ್[12]
ಘನಚಿಂತೆಯಿಂದೆ ಕಂಸಂ
ಮುನಿವಚನ ನಭೋನಿನಾದಮಂ ನೆನೆಯುತ್ತುಂ ೨೨

ಚಿಂತೆ[13]ಯದೇತ[13]ಕೆ ದೇವಕಿ
ಯುಂ ತವೆ ಕೊಂದಪೆನು ಸುತರು ಪುಟ್ಟದ ಮುನ್ನಂ
ದಂತಾ[14]ಗಲೆ[14]ಕ್ಕೈದುವ ಸೆಳೆ
ದುಂ ತಂಗಿಯು ಪೊಯ್ಸೆನೆಂಬ ಸಮನಂತರದೊಳ್ ೨೩

ಎಲೆ ಕಂಸಾಸುರ ನೀನೀ
ಲಲನೆಯು ಕೊಲವೇಡವೀಕೆ[15]ಯೊಳ್[15] ಜನಿಸಿದ ಮು
ಕ್ಕ[16]ಳ ನೀಂ[16] ಕೊಲ್ವುದೆನುತ್ತುಂ
ಒಲವಿಂ ವಸುದೇವನಾತನಂ ಕಾಲ್ಪಿಡಿದಂ ೨೪

---

1 ತ್ತಲಾ (ಚ) 2 ವೆಯುಂ (ಚ) 3 ಸ್ವರ್ಗಸ್ಥನಾದ ಬಳಿಕಂ (ಚ) 4 ಸಹಾ (ಚ) 5 ದಲ್ಲಿ (ಚ) 6 ರಾಪುರಕಂ (ಚ) 7 ಲು (ಚ) 8 ದೇವಿಯುಂ (ಚ). 9 ಮಾ (ಚ) 10 ನಿಂ (ಚ) 11 ಗಂ (ಚ) 12 ತ್ತಂ (ಚ) 13 ಯಿನ್ನೀ (ಚ) 14 ಕ್ಷಣ (ಚ) 15 ಯಲಿ (ಚ) 16 ಳುಗಳ (ಚ)

ವಚನ : [1]ಎನೆ[1] ಕಂಸನೊಡಂಬಟ್ಟು ತಮ್ಮ ಮುತ್ತೈಯ್ಯನುಗ್ರಸೇನನಿದ್ದ ಕಾರಾಗೃಹದೊಳ್ [2]ದೇವಕೀ ವಸುದೇವರಂ[2] ಸೆಱೆ[3]ಯಿಟ್ಟು ಹು[3]ಟ್ಟಿದ[3] ಮಕ್ಕಳಂ ಕೊಲುತಿರಲ್

ಕಂದ : ಆ ಸುರವಿರೋಧಿಯಹ ಕಂ
ಸಾಸುರನಿಂತಾಱು ಮಕ್ಕಳಂ ಪ್ರತಿಸರ್ಗಂ
ಹೇಸದೆ ಕೊಲಲತ್ಯಂತ
ಕ್ಲೇಶದೆ ವಸುದೇವ ದೇವಕಿಯರಿರುತಿರ್ದರ್ ೨೫

ವಚನ : [4]ಅಂತಿರ್ಪ[4] ದಂಪತಿಗಳ ಸ್ವಪ್ನದೊಳ್ [5]ಶ್ರೀಪುರುಷೋತ್ತಮಂ ಬಂದು[5] ನಿಮಗೆ ಮಗ[6]ನಾಗಿ ಪುಟ್ಟಿ ಕಂಸನಂ ಮರ್ದಿಸಿ[6] ಭೂಭಾರೋತ್ತಾರಣಂಗೈವೆನೆಂದು ಪೋದನಿತ್ತಲ್

ಕಂದ : ಕಲಸಿದ ತಿಲಕಂ ಸೂಸಿ
ರ್ದಲಕಾವಳಿ ಶೂನ್ಯಹಾರ ಪರೆದಂಜನಮುಂ
ಸಲೆ ಸೊವಡನಾಂತ ಕಕ್ಷಂ
ಗಳ ದೇವಕಿದೇವಿ ಮಾಣಿಕಂಗಂಡಿರ್ದಳ್ ೨೬

ಈ ತೆಱದೆ ನಾಲ್ಕುದಿನಮಿ
ರ್ದಾ ತರುಣಿ ಬಳಿಕ್ಕೆ ಶುದ್ಧಸ್ನಾನಂಗೈವು
ತ್ತೋತು [7]ಮಾಲ್ಯಾನು[7]ಲೇಪನ
ಶ್ವೇತಾಂಬರ ಭೂಷಣಂಗಳಿಂದೊಪ್ಪಿರ್ದಳ್ ೨೭

ಇರೆ ವಸುದೇವಂ ಬಂದಾ
ತುರದಿಂ ಮಣಿಮಂಚವೇಱುತುಂ ದೇವಕಿಯುಂ
ಬರಸೆಳೆದು ತಬ್ಬಿಕ್ಕೈದಂ
ಭರದಿಂ ಸುರತಾದಿಯಲ್ಲಿ ಸುಖರಸದಿಂದಂ ೨೮

ತೊರೆದು ತೊಟ್ಟಿಡುವ ಸವಿ ಕಾ
ತರಿಸುವ ನಗೆಗಣ್ಣು ನೆನಹಿಗೊದಗುವ ಮನ ಮುಂ
ಬರಿವ ಕಳೆ ಪೇಟಬಾರದ
ಪರಮಾನಂದಾಬ್ಧಿಯಲ್ಲಿ ಕೂಡಿರುತಿರ್ದರ್ ೨೯

---

[1] ಅಂತಾತನಂ ಕಾಲ್ಪಿಡಿದು ಈಕೆಯ ಮಕ್ಕಳು ಪಗೆಯಾದರೀಕೆಯಂ ಕೊಲಲ್ ಕಾರಣವಿಲ್ಲ ಈಕೆಯಲ್ಲಿ ಪುಟ್ಟಿದ ಮಕ್ಕಳಂ ಕೊಲ್ವುದೆಸೆ (ಚ) [2] ವಸುದೇವ ದೇವಕಿಯರಂ (ಚ) [3] ಟ್ಟಿ ಹುಟ್ಟಿದ (ಚ) [4] ಅಂತು ಕ್ಲೇಶಂಬಡುತಿರ್ಪ (ಚ) [5] ವಸುದೇವನಾಂ (ಕ) [6] ನಪ್ಪೆಂ (ಕ) [7] ಪುಷ್ಪಾನು (ಚ)

ಒಜೆ೩ವ ಸುಸ್ವೇದಬಿಂದುವಿ
ಸ‌ಜೆ೩ವಾಗ್ರ್ಯಂಭನವೆ ಪ್ರ್ರಾಣಾಯೆ ರೋಮಾಂಚನದಿಂ
ದುಜ೩ ಕಂಪನಾದಿಭಾವವೆ
ನೆಜೆ೩ದಿರ್ದರ್ ಸುರತಮಧ್ಯದೊಳ್ ದಂಪತಿಗಳ್ ೩೦

ಉತ್ಪಲಮಾಲೆ
ಆಯತನೇತ್ರ ನೇತ್ರಗೊಳಗಂ ಮೊಗದೊಳ್ ಮೊಗ ಸುಯ್ಲಿನೊಳ್ ಸುಯಿಲ್
ಬಾಯೊಳೆ ಬಾಯಿ ತೋಳ ಳೊಳು ತೋಳ ಳುರಂ ಉರದೊಳ್ ನಿರಂತರಂ
ಪ್ರೀಯದಿನೊರ್ವರೊರ್ವರೊಳಗೊಪ್ಪಿರೆ ತಮ್ಮೊಳೆ ಬೆಚ್ಚಮಾಟಿಕ್ಕಯಿಂ
ದಾ ಯುವತೀಯುವರ್ಕಳವರೊಂದೆ ಶರೀರಮೆನಲ್ ಸರಾಗದಿಂ ೩೧

ಕಂದ : ತಾನಾದಿ ಸುರತಮಧ್ಯ
ಧ್ಯಾನವೆ ಮನವತ್ತಲಿತ್ತ ಚಲಿಸದೆ ನುತ್ತೊಂ
ದೇನುಮನಜೀಯದೆ ಮೂರ್ಚ್ಛೆಯಿ
ನಾನಾವಿಧ ಬಂಧವಬಿಡದು ಸುರತಾಂತ್ಯದೊಳುಂ ೩೨

ವಚನ : ಆ ಸಮಯ[2]ದೊಳ್[2]

ಕಂದ : ಸೌರಭ್ಯ ಶೈತ್ಯಮಾಂದ್ಯದ
ಮಾರುತ ಬರೆ ಸುರತಶ್ರಮವಡಂಗಿತು ಸುಖಸ
ದ್ವಾರಿಧಿಯುಕ್ಕಿದುದಾ[3]ಗಳ್[3]
ಕ್ಷೈರಪಸಖನುದಯವಾದನಾ ಸಮಯದೊ[4]ಳಂ[4] ೩೩

ನೀರಂ ಮುಕ್ಕುಳಿಸಿಯೆ ಕ
ರ್ಪೂರದ ವೀಳೆಯವ ಕೊಂಡರಂಬರಮುಟ್ಟರ್
ನಾರಾಯಣನಂ ನೆನೆದರ್
ನಾರೀನರರೊಲ್ದು ಸುಖಸುಷುಪ್ತಿಯೊಳಿರ್ದರ್ ೩೪

ವಚನ : [5]ಅಂತು[5] ನಿದ್ರಾಸಕ್ತರಪ್ಪುದುಂ

---

1 ೪ (ಕ) 2 ದಲ್ಲಿ (ಚ) 3 ಗಂ (ಚ) 4 ೪ಂ (ಚ) 5 ಅಂತು ಸುರತಶ್ರಮ ಪರಿಪೂರ್ಣ (ಚ)

ಕಂದ : ಇಂದು[1]ನ ರವಿಯುಂ ತಾ[1]ನೊಲ
ವಿಂದಬ್ಧಿಯ ಸಿಂಹಮುಂ ಸುರಾದ್ರಿಯುನೆಸೆವಾ
ಮಂದಾರಮೆಂ[2]ಬಿವಂ[2] ಮುದ
ದಿಂ ದೇವಕಿದೇವಿ ಸ್ವಪ್ನದೊಳ್ ಮಿಗೆ ಕಂಡಳ್ ೩೫

ವಚನ : ಅಂತು ಕನ[3]ಸಂ ಕಂಡು[3]ಪ್ಪವಡಿಸಿ [4]ಅನು[4]ಷ್ಠಾನಂಗೈದು ವಸುದೇವನಂ ಸಾರಿ ಸ್ವಪ್ನಮುಂ ಪೇಳ್ದು[5]ದು[5]ಮಾತನಿಂತೆಂದಂ

ಚಂಪಕಮಾಲೆ

ಸರಸಿಜವೈರಿಯೆಂತತಿಕಲಾಯುತನಂ ರವಿಯಿಂ ಪ್ರಕಾಶನಂ
ಶರನಿಧಿಯಿಂ ಗಭೀರನ ಮೃಗಾಧಿಪನಂತೆ ಭುಜಪ್ರ[6]ಕಾಶನಂ[6]
ಸುರಗಿರಿಯಂತೆ ಧೈರ್ಯನನು ಕಲ್ಪಕುಜಂಬೊಲತೀವ ದಾನಿಯಂ
ಸುರುಚಿರಮಪ್ಪ ನಂದನನ ನೀಂ ಪಡೆ[7]ವೈ[7] ಸುಕುಮಾರ ಧೀರನಂ

ವಚನ : [8]ಎನೆಯಂದಿನಿಂ[8] ದೇವಕಿ [9]ಗರ್ಭಮಂ ತಾಳ್ದಳೆಂತೆನಲ್[9] ೩೬

ಚಂಪಕಮಾಲೆ

ತರುಣಿಗೆ ಗರ್ಭಮುದ್ಭವಿಸೆ ನಾಭಿ ಗಭೀರತೆ ಪೂಣ್ದು ಬಾಸೆಯೊ
ಪ್ಪಿರೆ ಕಡುನೇರಮಾದುದು ವಳಿತ್ರಿತಯಂ ಪರೆದತ್ತು ರಾಜಿಪಾ
ಗುರುಕುಚಚೂಚುಕಂಗಳೊಳೆ ಕರ್ಪೆಸೆದತ್ತು ಬೆಳರ್ತುದಾನನಂ
ಬೆರಸೆ ಬಟಿಲ್ಕೆ ಮಾಂದ್ಯಗತಿಯಾದುದು ದೇವಕಿಗಂದು ರಾಗದಿಂ ೩೭

ಕಂದ : ಆ ಗರ್ಭದಲ್ಲಿ ಮುದದಿಂ
ಭೋಗೀಶಂ ನೆಲಸಲಾಕ್ಷಣಂ ನಾರಯಣಂ
ರಾಗದೆ ನೆನೆಯಲ್ ಮಾಯೆಯ
ನಾಗಾಕ್ಷಣ ಬಂದು ನಮಿಸಿ ಬೆಸನೇನೆಂದಳ್ ೩೮

ದೇವಿ ನೀಂ ಪೋಗಿ ಮಾಯುವೆ
ದೇವಕಿಯುದರದಲಿ ಬೆಳೆವ ಕೂಸಂ ರೋಹಿಣಿ
ದೇವಿಯ ಬಸಿಱೊಳಗಿರಿಸಿಯೆ
ನೀವೋಗಿ ಯಶೋದೆಯುದರದೊಳ್ ಜನಿಸೆಂದಂ ೩೯

---

[1] ರವಿಮಂಡಲವ (ಚ) [2] ಬುದಂ (ಕ) [3] ಕುಗಂತು (ಚ) [4] ನಿತ್ಯಕರ್ಮಾನು (ಚ) [5] ಮುಂ ಕೇಳ್ದು (ಚ) [6] ತಾಳಿಯಂ (ಚ) [7] ವೆಂ (ಚ) [8] ಎಂದು ವಸುದೇವಂ ಪೇಳಲಾದಿನಂ ಮೊದಲಾಗಿ (ಚ) [9] ದೇವಿ ಗರ್ಭಚಿಹ್ನಮುಂ ತಾಳ್ದಳೆಂದೆಂದೊಡೆ (ಚ)

ಮತ್ತೇಭವಿಕ್ರೀಡಿತ

ಎನಲಾ ಮಾಯೆ ಹಸಾದವೆಂದು ಹರಿಯಂ ಬೀಳ್ಕೊಂಡು ಸಂತೋಷದಿಂ
ದನುಮಾನಂ ಮಿಗೆ ಗರ್ಭದಿಂ ಸ್ರವಿಸಿತೆಂಬೊಂದಂದದಿಂ ದೇವಕೀ
ತನುವಿಂದಂ ಮಿಗೆ ಕೊಂಡುಪೋಗಿ ವಸುದೇವಾರ್ಧಾಂಗಿಯಾ ರೋಹಿಣೀ
ವನಿ[1]ತಾ[1]ದೇಹದೊಳಿಟ್ಟಳಾ ವಿಧವ ನಾನೇನೆಂಬೆನಾಶ್ಚರ್ಯಮಂ ೪೦

ವಚನ : [2] ಅಂತು ರೋಹಿಣೀದೇವಿ ಮಾಯಾದೇವಿಯ ಮಾಯೆಯಿಂದಂ ಪೂರ್ಣಗರ್ಭಿಣಿಯಾಗಿ ಬಲರಾಮನಂ ಪಡೆದಳಿತ್ತ ದೇವಕಿಗೆ ಗರ್ಭಸ್ರಾವಮೇ ಸೂತಕಮಾಗಿ[2] ವಸುದೇವಸಂಗದಿಂ ನವಮಾಸಂ ತೀವೆ

ಕಂದ : ಅಡಿಗೆಟ್ಟಜಾಂಡಕೋಟಿಯ
ನೊಡಲೊಳ್ ತಾಳ್ದಿರ್ಪ ವಿಷ್ಣುವಂ ದೇವಕಿ ತಾಂ
ಪಡೆದಳ್ ಭೂಕಾಮಿನಿ ತಾಂ
ಪಡೆಯಲ್ ಸಂತಸದ ಪುಣ್ಯಪಡೆ ಪೆರ್ಚುವಿನಂ ೪೧

ವಚನ : ಶ್ರಾವಣಮಾಸದಸಿತಪಕ್ಷಾಷ್ಟಮಿ[3]ಯೊಳ್[3] ರೋಹಿಣೀನಕ್ಷತ್ರ[4]ದೊಳ್[4] ದೇವಕೀಗರ್ಭದಿಂ ಕೃಷ್ಣಂ ಜನಿಸೆ[4] ವಸುದೇವ ದೇವಕಿಯರ್ಗೆ [5]ನೀವೀ[5] ಶಿಶುವಂ ಕೊಂಡು ಪೋಗಿ ಗೋಕುಲ[6]ದ[6] ಯಶೋದೆಯ ಮಗು [7]ಬೊಳಿರಿಸಿಯವಳ ಸ್ತ್ರೀಶಿಶುವಂ[7] ದೇವಕಿಯ ಮಗು [8]ಬೊಳಿರಿಸಿಮೆನೆ[8] ವಸುದೇವಂ [9]ವಿಸ್ಮಯಂಬಟ್ಟು[9] ದೇವ[10]ಕಿಗೆ[10] ಪೇೞ[11]ಲವಳಿಂ[11]ತೆಂದಳ್

ಕಂದ : ಇದು ವಿಷ್ಣುನಿರ್ಮಿತಂ ನೀ
ವಿದ ಮಿಾಱಲ್ಬಹುದೆ ಶಿಶುವ ಕೊಂಡೊಯ್ವುದು ಬೇ
ಗದೊಳೆಂದು ಪೇೞಲಾಕ್ಷಣ
ಸದನದ ಪೊಱಮಟ್ಟು ಪೋಪ ಸಮಯಾಂತರದೊಳ್ ೪೨

---

[1] ತ (ಚ) [2] ಅಂತು ದೇವಕಿದೇವಿಯ ಗರ್ಭದಲ್ಲಿ ಶೇಷಂ ಪುಟ್ಟಿಯಿರಲಾ ನಾರಾಯಣಂ ತಿಳಿದು ಮಾಯೆಯಂ ಕರದು ದೇವಕಿ ದೇವಿಯ ಗರ್ಭದ ಶೇಷನಂ ತೆಗೆದಾಕೆಯ ಸಾಪತ್ನಿ ರೋಹಿಣಿಯುದರದಲಿರಿಸೆನಲಾ ಮಾಯಾದೇವಿಯೂ ಪ್ರಕಾರದಿಂದಾಕೆಯ ಗರ್ಭಮಂ ರೋಹಿಣಿಯುದರದಲಿರಿಸಲಾಕೆ ಸಂಪೂರ್ಣಗರ್ಭಿಣಿಯಾಗಿ ಬಲರಾಮನಂ ಪಡೆದಳಿತ್ತ ದೇವಕೀದೇವಿಗೆ ಗರ್ಭಂ ಸ್ರವಿಸಿದಂತಾಗಿ ಅದೆ ಸೂತಕವಾಗಿ ದೇವಕಿದೇವಿ (ಚ) [3] ಯರ್ಧರಾತ್ರಿಯಲ್ಲಿ ಮಿಸ ಪ (ಚ) [4] ದಲ್ಲಿ ಕೃಷ್ಣದೇವನು ದೇವಕೀದೇವಿಯ ಗರ್ಭದಿಂದುದಯಂಗೆಯ್ದು (ಚ) [5] ವಿಷ್ಣುಮಾಯೆಯು ಮಹಿಮೆನಾಡಿ ನೀವೀ (ಚ) [6] ದಲ್ಲಿದ್ದ (ಚ) [7] ಲಲ್ಲಿರಿಸಿ ಆ ಯಶೋದೆ ಪಡೆದ ಹೆಣ್ಣುಮಗುವ ತಂದು (ಚ) [8] ಲಲ್ಲಿರಿಸಿಯೆನೆ (ಚ) [9] ವಿಷ್ಣುಮಾಯೆಯಂ ಕನಸುಗಂಡಂತಾಗಿ ವಸುದೇವನೆಚ್ಚೆತ್ತು ವಿಸ್ಮಯಂಬಟ್ಟು (ಚ) [10] ಕಿದೇವಿಗೆ (ಚ) [11] ಲಾಕೆಯಿಂ (ಚ)

ಉತ್ಪಲಮಾಲೆ

ಮೋಡದ ಕಪ್ಪಿನಿಂ ಸುರಿವ ಪೆರ್ಮೞೆಯಿಂ ವರ್ಷೋಪಲಂಗಳಿಂ
ರೂಢಿಪ ಮಿಂಚಿನಿಂ ಸಿಡಿಲ ಗರ್ಜನೆಯಿಂ ಬಿಱುಗಾಳಿವೊಯ್ಲಿನಿಂ
ತೀಡುವ ಶೈತ್ಯದಿಂ ಪಱಿವ ಪೆರ್ವೊನಲಿಂದಿಡಿದಾ ತಮಿಸ್ರದಿಂ
ದೀಡಿಱಿದಿರ್ದ ಪೆರ್ವನಿಗಳಿಂ ಮೞೆಯುದ್ಭುತಮಾಯ್ತು ರಾತ್ರಿಯೊಳ್ ೪೩

ಚಂಪಕಮಾಲೆ

ಪರಿಜನ ಕಾಣದಂತೆ ಗೃಹರಕ್ಷಕರೆಚ್ಚರದಂತೆ ರಾತ್ರಿಯೊಳ್
ಚರಿಸುವರ್ಕೈದೆ ಕಾಣದವೊಲಾ ಪುರಮಂ ಪೊಱಮಟ್ಟು ಭೀತಿಯಿಂ
ತೊರೆದು ಬರುತ್ತುಮಿರ್ಪ ಸಮನಂತರದೊಳ್ ಫಣಿರಾಜ ಬಂದು ತ
ನ್ನುರುಪೆಡೆಯಂ ಮುಸುಂಕಿ ಫಣರತ್ನದೆ ದಾರಿಯನೈದೆ ತೋಱಿದಂ ೪೪

ವಚನ : ಅಂತು ಶೇಷಂ [1]ಹೆಡೆಯಿಂ[1] ಮೞೆಯಂ ಪರಿ[2]ಹರಿಸಿ[2] ಫಣಾಮಣಿ[3]ಯಿಂ ಮಾರ್ಗಮಂ[3] ತೋಱೆ ಬರುತ್ತಿರೆ ಮುಂದೆ ಕಾಳಿಂದೀನದಿ [4]ಮೇಲ್ವಾಯ್ದು[4] ಬರುತ್ತಿರೆ ಪುತ್ರಮೋಹದಿಂದೆತ್ತಲೆಂದಱಿಯದೆಯಾ ನದಿಯಂ ದಾಂಟದ[5]ನೆಂತೆನಲ್[5]

ಕಂದ : ಹರಿಯಂ ನೆನೆಯಲ್ ಭವಸಾ
ಗರಮಂ ದಾಂಟುವದು ತಥ್ಯಮದಱಿಂ ಕಡೆಯೇ
ಪರಮಾತ್ಮ ವಿಷ್ಣುವಂ ಪೆ
ತ್ತರಿಗೀ ನದಿಯಿದಿರೆ ದಾರಿಗೊಟ್ಟುದು ಭುವನಂ ೪೫
ಆ ನದಿಯ ದಾಂಟಿ ಗೋಕುಲ
ದಾ ನಂದನ ಮನೆಗೆ ಬಂದನಾ ವಸುದೇವಂ
ಮಾನಿನಿ ಯಶೋದೆ ಕುವರಿಯ
ನಾನಂದದೆ ಪಡೆದಳಾಗ ದುರ್ಗಿಯ [6]ನಲವಿಂ[6] ೪೬

ವಚನ : ಅಂತು ಚಂಡಿ[7]ಕೆಯಂ[7] ಪಡೆದು ಮಾಯೆಯಿಂ ಮಱೆದೊರಗಿರ್ದ ಗೋಪಿಯ ಮಗ್ಗು[8]ಲೊಳಿ[8]ರ್ದ ಚಂಡಿಯಂ ಕಂಡು ವಸುದೇ[9]ವನರಿಷ್ಟ[9]ಗೃಹಮಂ ಪೊಕ್ಕು

ಕಂದ : ಗೋಪಿಗೆ ಕೃಷ್ಣನನಿತ್ತಾ
ಗೋಪಿಯ ಸುತೆ ಚಂಡಿಯೆಂಬಳಂ ವಸುದೇವಂ
ಗೋಪ್ಯದಿನೆತ್ತಿಕೊಳುತ್ತುಂ
ಗೋಪ್ಯದಿನಾ ಮಧುರೆಗೈದಿ ಗೃಹಮಂ ಪೊಕ್ಕಂ ೪೭

---

1 ಪೆಡೆಯ ಮಱೆಯಿಂ ಸುರಿವ (ಚ) 2 ಹರಿಸಿ ತನ್ನ (ಚ) 3 ಬೆಳಗಿನಿಂ ಸರಣಿಯಂ (ಚ) 4 ಮೇಲುವಾರದಿಂ (ಚ) 5 ನದೆಂತಂದೊಡೆ (ಚ) 6 ನೊಲಪಿನಿಂ (ಚ) 7 ಕಾದೇವಿಯಂ (ಚ) 8 ಲಲ್ಲಿ (ಚ) 9 ವಂ ಸೂತಕಾ (ಚ)

ವಚನ: ಅಂತು ಪೊಕ್ಕು [1]ಶಿಶುವಂ ಪತ್ತಿಯ[1] ಮಗು ಳೊಳಿರಿಸುವುದುಂ [2]ಮೂಲೋಕಂ[2] ಮುಟ್ಟುವಂತೆ[3]ಳಲದಂ[3] ಗೃಹಾಧ್ಯಕ್ಷಂ ಕೇಳ್ದು ಕಂಸಂಗೆ ಪೇಳ್ದುದು[4]ಮವಂ[4] ಬಂದು ಕೂಸಂ ಪಾಸಱೆಯ ಮೇಲೆ ಪೊಯ್ಯುನಿತಱೊಳಾ ಶಿಶು ಕಂಸನೆವೆಯನೊದ್ದು [5]ಆಕಾಶಕ್ಕೆ ಜಿಗಿದು[5] ಎಲೆ ಕಂಸಾ ನಿನ್ನಂ [6]ಕೊಲಲೆನ್ನಗ್ರಜಂ ಬೇಱೆ[6] ತಾಣದೊಳ್ ಪುಟ್ಟಿರ್ದಪನೆಂದು ಯೋಗಸೀಠಕ್ಕೆ ಪೋದಳ್[7]ತ್ತ[7] ಕಂಸ[8]ನೆಂ[8]ತಾನುಂ ತಿಳಿದು ಕೋಪಿಸಿ

ಚಂಪಕಮಾಲೆ

ಎನಗಿದಿರಾರು ನಾಕ ನರ ನಾಗ ನಿಕಾಯದ ಲೋಕದಲ್ಲಿ ಕೆ
ಮ್ಮನೆ ತಿಱಿದಿಕ್ಕುವೆಂ ಸುರಪನಗ್ನಿ ಯಮಂ ನಿರು[9]ತಂ[9] ಪ್ರಚೇತನಂ
ಅನಿಲನ ಗುಹ್ಯಕೇಶ್ವರನನಾ ವೃಷಭೇಶನನಿಂದು ಸೂರ್ಯರಂ
ದನುಜರನಟ್ಟುವೆಂ ಕೊಲುವೆ ದೇವಕಿಯಾತ್ಮಜನಂ ತ[10]ತು[10]ಕ್ಷಣಂ ೪೮

ಕಂದ: ಎಂದಿಂತು ಕೋಪದಿಂದಂ
ವೃಂದಾರಕವೈರಿ ಕಂಸ ಕರೆಸಲ್ ನಾನಾ
ಚಂದದ ದಾನವರೆಲ್ಲರ್
ಬಂದಾತಂಗೆಱಗಿ ದೇವ ಬೆಸನೇನೆಂದರ್ ೪೯

ವಚನ: ಅವರಾರೆಂದೊಡೆ ಪೂತನಿ ಶಕಟ ಯಮಳಾರ್ಜುನ ಧೇನುಕ ಪ್ರಲಂಬ ಪುಂಗವ ಖರಾಸುರ ಮೊದಲಾದರಂ ಕ[11]ರೆಯಿಸಿ[11]

ಕಂದ: ಆವಾವ ಪರಿಯ ರೂಪಿಂ
ನೀವಾತನನಱಸಿಕೊಂಡು ಪೋಪುದು ಕೊಲ್ವುದು
ದೇವಕಿ[12]ಯ ತನಯನಂ[12] ಸ
ದ್ಭಾವ ವಿಶುದ್ಧಿಯಲಿ ಮಾಳ್ಪುದೀ ಕಾರ್ಯಮುಮಂ ೫೦

ಎಂದು ಕಟಿಪಲ್ಕೆ ರಾಕ್ಷಸ
ವೃಂದಂ ಲೋಕದೊಳಗಱಸಿ ಕಾಣದೆ ಬಂದಾ
ನಂದನ ಗೋಕುಲದೊಳಗಿರ
ಲಂದಾ ಪೂತನಿ ಯಶೋದೆಯಂತೈತಂದಳ್ ೫೧

---

1 ತಾ ತಂದ ಚಂಡಿಯುಂ ದೇವಕಿಯ (ಚ) 2 ಆ ಶಿಶು ಮೂಱುಶೋಕಮಂ (ಚ) 3 ವುದುಂ (ಚ) 4 ಮಾ ಕಂಸಂ (ಚ) 5 ನಿರ್ಭರದಿಂ ಪೋಗಿ ಅಭ್ರಮಾರ್ಗದೊಳ್ ನಿಂದು (ಚ) 6 ಕೊಲುವರೆಯುವಗ್ರಜನೊಂದು (ಚ) 7 ತ್ತಂ (ಚ) 8 ಚಿಂತಿಸಿಯುಂ (ಚ) 9 ತಿ (ಚ) 10 ತೂ (ಚ) 11 ರಸಿ (ಚ) 12 ಯಾತ್ಮಜನಂ (ಚ)

ವಚನ : ಇ[1]ತ್ತಲ್[1] ಯಶೋದೆ ಮಗುವಂ ಮಲಗಿಸಿ ಗೃಹವ್ಯಾಪ್ತಿಗೆ ಪೋ[2]ಗಲ್[2] ಪೂತನಿ[3]ಯೊಳ್[3]ಪೊಕ್ಕು ಶಿಶುವಪ್ಪ ಕೃಷ್ಣಂಗೆ ನಂಜಿನಮೊಲೆಯನೂಡುವ್ರದು[4]ಮವಂ[4] ಮೊಲೆಗಳಂ ಪಿಡಿದು [5]ರಕ್ತ[5]ಮಾಂಸಂಗಳಂ ಪೀರ್ವುದುಂ ಪೂತನಿ ಮಡಿದುದಂ ಗೋಕುಲದವರ್ ಕಂಡು

ಕಂದ : ಗೋಪಿಯರ್ ಕಾಣುತ್ತಂಜಿಯು
ಮಾಪತಿಯಂ ನೆನೆದು ಶಿಶುವನೆತ್ತಿಕೊಳುತ್ತುಂ
ತೂಪಿಱಿದು ಮೊಲೆಯನೂಡಿದ
ರಾ ಪೆಣನಂ ತೆಗೆದು ಬಿಸುಟರಾ ರಕ್ಕಸಿ[6]ಯಂ[6] ೫೨

ಕಂಸನಿವಳಟ್ಟಿದುದಂ ಕೇ
[7]ಳ್ದಾ[7] ಶಿಶುವಿನ ಸಾಹಸಕ್ಕೆ ವಿಸ್ಮಯವಡು[8]ತುಂ
ಏ[8]ಸು ಬಲುಹಿವನು ನೆರೆದರೆ
ಘಾಸಿಯ ಮಾಡುವನು ನಮ್ಮನಿವ ಕೈಕೊಳ್ಳಂ ೫೩

ಎಂದು ಚಿಂತಿಸುತೆ ಕಂಸಂ
ನಂದನಕಂದನನು ಗೆಲುವ್ರಪಾಯ [9]ಕ್ಕೇ[9]ತೆಱ
ನೆಂದೆ[10]ನ್ನು[10]ತಿರಲ್ ಶಕಟಂ
ಬಂದೆಱಗುತ್ತವನ ಕೊಲ್ಲೆ ಚಿಂತೆಯಿದೇಕೈ ೫೪

ವಚನ : ಎನಲಿ[11]ತ್ತಲ್[11] ನಂದಗೋಪ ಯಶೋದೆಯರ್ [12]ರೋಹಿಣೀಯಂಗೆ[12] ಬಲರಾಮನೆಂದು ಪೆಸರಿಟ್ಟು

ಕಂದ : ಜಾತಕರ್ಮವನು ಮಾಡಿಯ
ಜಾತಂಗೆ ಸಹಸ್ರನಾಮದಾ ವಿಷ್ಣುವಿಗಂ
ಪ್ರೀತಿ[13]ಯೊಳ್[13] ನಾಮಕರಣವ
ನೀತಂ ಶ್ರೀಕೃಷ್ಣನೆಂಬ ಪೆಸ[14]ರಿಂ[14] ಕರೆದರ್ ೫೫

ವಚನ : ಅಂತು ಪೆಸರಿಟ್ಟು ತೊಟ್ಟಿಲೊಳ್ ಪಟ್ಟಿರಿಸಿ

---

[1] ತ್ರಲೀ (ಚ) [2] ಪುದಂ (ಚ) [3] ನೊಳಗಂ (ಚ) [4] ಕೃಷ್ಣಂ (ಚ) [5] ರಕ್ತದೋಷ್ಟ (ಚ) [6] ಯಾ (ಕ) [7] ಳ್ದೀ (ಚ) [8] ತ್ತಿನ್ನೀ (ಚ) [9] ಕಂ (ಗ) [10] ನ್ನ (ಕ) [11] ತ್ರಂ (ಚ) [12] ತಾನಿಜೇಯಂಗೆ (ಕ) ರೋಹಿಣಿಯ ಮಗನಪ್ಪವಂಗೆ (ಚ) [13] ಯಿಂ (ಚ) [14] ರಂ (ಚ)

ಲಲಿತಪದ

ನಳಿನ ಭವಾಂಡನನಾಡಿಸುತಿರ್ಪಾ
ಜಳಜದಳಾಕ್ಷನ ತೊಟ್ಟಿಲೊಳಿಟ್ಟೂ
ಲಲಿತೆ ಕುರಂಜಿ ವಸಂತಗಳಿಂದಾ
ಲಲನೆಯರೆಲ್ಲ[1]ರು[1] ಜೋಗು[2]ಳ[2] ಪಾ[3]ಡೀ[3] ೫೬

ಮಣಿರಂಗ

ಏಣನೇತ್ರೆಯರೆ[4]ಲ್ಲ[4] ನೆರೆದೂ (?)
ಜಾಣಕೃಷ್ಣನ ತೊಟ್ಟಿಲೊಳಿಟ್ಟೂ
ವಾಣಿಯಾಳ್ದನ ತಂದೆಯನಾ[5]ಗಾ[5]
ರಾಣಿಯರೊಲವಿಂ ತೂಗಿದರಂದೂ (?) ೫೭

ಕಂದ : ಆ ತೊಟ್ಟಿಲೊಳಖಿಲ ಜಗ
ತ್ತ್ರಾತನಿರಲ್ ದನುಜ ಶಕಟದಂದದೆ ಪರಿತಂ
ದಾತನ ಮೇಲ್ವಾಯಲ್ ಪದ
ಘಾತದೊಳೊದ್ದವನ ಕೆಡಸಿದಂ ಮುರಮಥನಂ ೫೮

ಆ ಶಕಟನಟಿದುದಂ ಕಂ
ಸಾಸುರ ತಾಂ ಕಂಡು ಕಂಡು ಯಮಳಾರ್ಜುನರೆಂ
ಬಾಸುರರ ಕಟಿಸಿದಂ ನೀ
ವಾ ಶಿಶುವಂ ಕೊಲ್ಲುದಾವ ತೆಱದಿಂದೆನುತುಂ ೫೯

ಬಂದು ಯಮಳಾರ್ಜುನರ್ ಗೋ
ವಿಂದನ ಕೊಲಬೇಕೆನುತ್ತೆ ಮತ್ತಿಯ ಮರನೆಂ
ಬಂದದೆ ಬರಲದನಱಿದು ಮು
ಕುಂದಂ ತೊಟ್ಟಿಲೊಳಗಿರ್ದು ಪೋದಪೆನೆನುತುಂ ೬೦

ಅಳುವ ಕೃಷ್ಣನ ಯಶೋದಾ
ಲಲನೆಯು ತಾನೆತ್ತಿ ಪಣಿಯೆ ಮೊಲೆಯೂಡುತ್ತುಂ
ನೆಲಕಿಟಿಹಿ ಪೋಗಲ[6]ತ್ತಲ್[6]
ಜಲಜಾಕ್ಷಂ ತಳುವದೈದಿದಂ ಭರದಿಂದಂ ೬೧

---

1 ಲ್ಲರು (ಕ ಚ) 2 ಳಿಯ (ಕ ಚ) 3 ಡಿದರು (ಕ ಚ) 4 ಲ್ಲರು (ಕ ಚ)
5 ಗಳ್ (ಕ) 6 ತ್ತುಂ (ಗ ಚ)

ಇರದೆ ಪೊಱಮಡುವ ಕೃಷ್ಣನ
ಭರವಸಮಂ ಸಲಿಸಬೇಕೆನುತ್ತೆ ಯಶೋದಾ
ತರುಣಿಯೊರಳಲ್ಲಿ ದಾಮದೆ
ಹರಿಯಂ ಕಟ್ಟಿದಳು ಜಗವ ಕಟ್ಟುವ ಶಿಶುವಂ ೬೨

ಇನ್ನೆಲ್ಲಿ ಪೋಪೆಯೆನುತುಂ
ಪನ್ನಗತಲ್ಪನನು ನೋಡಿ ಮುದ್ದಿಸಿ ನಗುತುಂ
ತನ್ನ ಮನೆಗೆಲಸಕ್ಕೈದಿದ
ಳನ್ನೆಗ ಶ್ರೀಕೃಷ್ಣನೊರಳನೆಳೆದುಕೊಳುತ್ತುಂ ೬೩

ಒರಳುಸಹಿತ್ಯೆದಿ ಮತ್ತಿಯ
ಮರನೆರಡಱ ನಡುವೆ ಪಾಯ್ದು ತೊನೆಯಲ್ ಭರದಿಂ
ಮರನಾಗಿಹ ಯಮಳಾರ್ಜುನ
ಸುರವೈರಿಗಳಱಿದು ಬಿದ್ದರಸುಗಳ ಬಿಟ್ಟರ್ ೬೪

ಕಾಮಿನಿಯರೆಲ್ಲ ಪರಿತಂ
ದಾ ಮರವೇನಾದುವೆನುತೆ ಮಱುಗುತೆ ನಡುವಿನ
ದಾಮವನು ಬಿಟ್ಟು ತೂಪಿಱಿ
ದಾ ಮಹಿಮನನೆತ್ತಿಕೊಂಡು ಗೋಪಿಯರೆಲ್ಲರ್[1] ೬೫

ವಚನ : ಅಂತು ಕೃಷ್ಣಂ ಪೆಱತೊಂದೆಡೆಯೊಳ್ ಪುಟ್ಟಿಪೊರ್ದನಱಿದು [2]ಕಂಸಂ ವಸುದೇವ ದೇವಕಿಯರ ಸೆಱೆಯಂ ಬಿಡೆ ವಸುದೇವಂ ಗೋಕುಲಕ್ಕೆ ಬಂದು ರೋಹಿಣೀ ಪುತ್ರನಾದ ಬಲರಾಮನಂ ಯಶೋದೆಯ ಕ್ಯೆಯೊಳಿತ್ತು ಪೋದನಿತ್ತಲ್ ಯಶೋದೆ ರಾಮಕೃಷ್ಣರಂ ಸರಿಯಾಗಿ ಸಲುಪುತ್ತಿರೆ[3]

ಕಂದ : ಸುಳಿಗಾಳಿಯಂತೆ ಕೃಷ್ಣನ
ನೆಳೆಯಲ್ ತೃಣಾವರ್ತನೆಂಬ ರಕ್ಕಸನೊರ್ವಂ
ಬಳಲ್ಮುಷ್ಟಿ ಪೂರದಿಂದಂ
ಖಲನಂ ಕೆಡಪಿದನು ಕೃಷ್ಣನೇಂ ಬಲ್ಲಿದನೋ ೬೬

ವಚನ : ಅಂ[4]ತಾ[4]ದೈತ್ಯನಂ ಕೃಷ್ಣಂ ಕೊಲ್ವುದುಂ ಗೋಪ[5]ವನಿತೆಯರ್[5] ಕಂಡು

---

[1] ಲ್ಲಂ (ಚ) [2] ವಸುದೇವ ದೇವಕಿಯರಂ ಕರಸಿ ನನ್ನ ಹಗೆ ಪೆಱತೊಂದೆಡೆಯೊಳಿರ್ದಪ ನಿಮ್ಮಂ ವೃಥಾ ನಿರ್ಬಂಧಿಸಿದೆನೆಂದು ಅವರ ಸೆಱೆಯಂ ಬಿಡೆ ವಸುದೇವಂ ಗೋಕುಲಕ್ಕೆ ಬಂದು ತನ್ನ ಜೇಷ್ಠ ಸತಿಯಿಂದೊಗೆದ ರೋಹಿಣೀದೇವಿಯ ಮಗನಪ್ಪ ಬಲರಾಮನಂ ಯಶೋದೆಯ ಕೈಯೊಳಿಟ್ಟು ಪೋದನಿತ್ತಂ ಯಶೋದೆ ರಾಮಕೃಷ್ಣರಂ ಸರಿಯಾಗಿ ಸಲಹುತ್ತಿರೆ (ಚ) [3] ಲು (ಕ) [4] ತು ತೃಣಾವರ್ತನೆಂಬ (ಚ) [5] ಕಾಂತೆಯರ್ ಕೃಷ್ಣನಂ (ಚ)

ಕಂದ : ರಕ್ಕಸನ ಕೊಲಲು ಕೃಷ್ಣನ
[1]ಕರ್ಕ್ಕಸ[1]ಕುಚ ಗ್ರಹಣದಿಂದೆ ಚುಂಬಿ[2]ಸುತೊಲವಿಂ[2]
ಸಕ್ಕರೆಸವಿಯಧರ[3]ವನಿವ[3]
ಚಿಕ್ಕವ[4]ನಲ್ಲೆನುತೆ[4] ಗೋಪಿಕಾನಿಕುರುಂಬಂ ೬೭

ನಲಿದಾಡುತಿರಲ್ ಸುಖದಿಂ
ಬಲರಾಮನುಂ ಬಂದು ಕೃಷ್ಣನೊಡನಾಡು[5]ತಿರಲ್[5]
ಸಲಹಿದರೆಶೋದೆ ರೋಹಿಣಿ
ಲಲನೆಯರಂದಗ್ರಜಾನುಜರನೊಲವಿಂದಂ ೬೮

ಮನೆಮನೆಯ ಪೊಕ್ಕು ಮಾಸಲ
ಕೆನೆ ಮೊಸರಂ ಪಾಲುಂ ಬೆಣ್ಣೆಯಂ ಮೆಲುತಿ[6]ರ್ಪಂ[6]
ವನಿತೆಯರೆಲ್ಲರ ವಂಚಿಸಿ
ದನುಜಹರರ್ ಕುಣಿವರೇಡಿಸರ್ ಗೋಕುಲದೊಳ್ ೬೯

ಸುರವೈರಿಗಳಂ ಮರ್ದಿಸಿ
ಹರಿರಾಮರ್ ಸುಖದಿನಿರಲು ಹತ್ತೆಂಟಬುದಂ
ಇರದಾಗೆ ಗೋಕುಲವ ಬಿ
ಟ್ಟುರುವೃಂದಾವನಕೆ ಬಂದು ಗೋಪಸಮೂಹಂ ೭೦

ವಚನ : ಅಂತು ವೃಂದಾವನಕ್ಕೆ ಬಂದು ರಾಮಕೃಷ್ಣರ್ [7]ಕಱು[7]ಗಾವಲ್ಲಿ

ಕಂದ : ಬಲರಾಮ ಕೃಷ್ಣರಿರ್ವರ
ಕೊಲಬೇಕೆಂದೆನುತೆ ವತ್ಸನೆಂಬಸುರಂ ಸಂ
ಚಲಿಸುತೆ ವತ್ಸಾಕಾರದೆ
ಕೆಲವೃತ್ತುಂ ಬಂದು ಕಱುಗಳೊಳಗಾಡುತ್ತುಂ ೭೧

---

1 ಕರ್ಕಶ (ಕ) 2 ಸಿ ಓಲೈರ್ಪಂ (ಗ) 3 ಕವನಿಃ (ಗ) 4 ನೆಯೊನುತ್ತ (ಗ)
5 ತ್ತಿರೆ (ಗ ಚ) 6 ಏರ್ಪ (ಗ) 7 ತಱು (ಗ)

ಮೇವುತಿಹ ಕಱುಗಳೆಲ್ಲವ
ಹಾವುತ್ತೊದವುತ್ತೆ ಕೆಡಹುತಿರಲ[1]ದ ಕಂಡಾ[1]
ದೇವೋತ್ತಮ ಕೃಷ್ಣ ಬಲರ್
ತಾವಿರ್ವರ್ ಬಂದು ವತ್ಸನಂ ಸಾಹಸದಿಂ ೭೨

ಅಱ[2]ಯ[2]ಟ್ಟೆ ವತ್ಸದೈತ್ಯನ
ಕಿಱುದಾಡೆಯ ಹಿಡಿದು ರಾಮ ಕೃಷ್ಣರ್ ಚಲದಿಂ
ಮುಱಿಯೊತ್ತಿ ಸೀಳ್ದೆನೆತ್ತರ
ತೊಱೆವರಿದುದನೇನನೆಂಬೆನಾ ಸಾಹಸಮಂ ೭೩

ಇಂತು ಬಲರಾಮ ಕೃಷ್ಣರ್
ಸಂತಂ ಗೋವುಗಳ ಕಾವುತಿರಲೊಂದುದಿನಂ
ಮುಂತೊಬ್ಬ ಧೇನುಕಾಸುರ
ತಾಂ ತಡೆಯದೆ ಕೊಲ್ವೆನಿವರನೆನುತ್ತೈತಂದಂ ೭೪

ಧೇನುವಾಕಾರದಿಂ[3]ವಾ[3]
ಧೇನುಕ ಸುರವೈರಿ ರಾಮಕೃಷ್ಣರ ಬಲುಹೆಂ
ದೇನುಮನಱಿಯದೆ [4]ಕೋಪದಿ[4]
ಧೇನುಗಳೊಡನಾಡುತಿರ್ದನತಿದುರ್ಜನದಿಂ ೭೫

ವಚನ : ಅದೆಂತೆಂದೊಡೆ

ಮಹಾಸ್ರಗ್ಧರೆ

ಹರಿಯುತ್ತುಂ ಹಾಱು[5]ತುಂ[5] ಘೂರ್ಮಿಸುತೆ ಕೆಱೆಯುತುಂ ಬಾಲದಿಂ ಪೊಯ್ವುತುಂ ಕೆ
ಕ್ಕರಿಸುತ್ತುಂ ಭೂಮಿಯಂ ಪಾದದಿನುಱೆ ಕೆಱೆಯುತ್ತುಂ ಮಹಾಶೃಂಗದಿಂ ಕ
ತ್ತರಿಸುತ್ತುಂ ಪುತ್ತಮಂ ಗೋನಿವಹಮನಱೆಯಟ್ಟುತ್ತುಮಾ ಗೋಪರಂ ಸಂ
ಹರಿಸುತ್ತುಂ ರಾಮಕೃಷ್ಣರ್ಗಿದಿರೆನೆ ಬರುತಿರ್ದಂ ಮಹಾದೈತ್ಯನಾ[6]ಗಳ್[6]

ಕಂದ : ಬಂದರೆ ಧೇನುಕನಂ ತವೆ
ಮುಂದಕ್ಕಡಿಯಿಕ್ಕಲೀಸದಳ್ಕೆಗಳಂ ಕಾ
ಲಿಂದೊದೆದುಗ್ರಮುಷ್ಟಿಘಾತದೆ
ಕೊಂದಂ ಭುಜಬಲಮದೆಂತೊ ಕಮಲಾಂಬಕನಾ ೭೬

---

[1] ದ ಕಂಡಂ (ಕ) ದಂ ಕಂಡರ್ (ಗ) [2] ವೆ (ಗ) [3] ನಂ (ಜ) [4] ಕುಪಿತದಿ (ಜ)
[5] ತ್ತುಂ (ಗ) [6] ಗಂ (ಗ)

ವಚನ: ಅಂತು ಧೇನು[1]ಕ ಹನನಂಗೈದು[1] ಗೋಪಾಲಲೀಲೆಯಂ ನಟಿಸು[2]ತ್ತುಂ[2] ಗೋಪಿಯರಂ ಮೋಹಿಸು[3]ತ್ತುಂ[3] ರಾಮ ಕೃಷ್ಣರಿರ್ಪಿನಮಿತ್ತಲ್ ಮಿಥಿಲಾ[4]ಪುರಿಯೊಳ್ ಜನಕಾನ್ವಯದೊಳ್[4] ಮಿಥಿಲನೆಂಬ ರಾಜನೊಪ್ಪುತಿರ್ದನೆಂತೆನೆ

ಉತ್ಪಲಮಾಲೆ

ನಾಡೆ ವಿದರ್ಭದೇಶದೊಳಗಾ ಮಿಥಿಲಾಪುರವೊಪ್ಪಲಂತದಂ
ಗಾಡಿಯೊಳಾಳ್ದನಾ ಮಿಥಿಲಪಾರ್ಥಿವನುಳ್ಳಿಹ ಕುಂಭಕಂ ಕರಂ
ಕೂಡಿದ ಲಕ್ಷಸಂಖ್ಯೆಯ ಪಶುವ್ರಜಮುಂ ಹೊಱಹಟ್ಟಿಯಲ್ಲಿರಲ್
ಕೇಡಿಗ ಪುಂಗವಾಸುರ ಸಹೋದರರೆಂಬರು ಗೂಳಿಯಂದದಿಂ ೭೮

ವಚನ: [5]ಪುಂಗವನೆಂಬ[5] ರಾಕ್ಷಸ ಮುಖ್ಯವಾಗಿ [6]ಕಂಸದೂತರ್ ಕುಂ[6]ಭಕನ ಗೋಕುಲಕ್ಕೆಯ್ದಿ

ಕಂದ: ಬಂದಾ ದಿತಿಜರ್ ಗೂಳಿಗ
ಳಂದವೆ ನಾಡೊಳಗೆ ಪರಿದು ಕೆಯ್ವೊಲಕುಲಮುಂ
ತಿಂದು [7]ಪಾೞಿಗೞ್ದು[7] ಹೊಡೆಯಲ್
ಬಂದವರಂ ಸೀಳ್ದು ಕೊಲುತಮಿರ್ಪರ್ ನಿಚ್ಚಂ ೭೯

ಪರಿಜನ ಪುರಜನರೆಲ್ಲಂ
[8]ಕರೆಕರೆಪಡುತೊಡನೆ[8] ಮಿಥಿಲಪಾರ್ಥಿವಗೆ ಪೇೞಲ್
ಕರೆಸಿ ಕುಂಭಕನ ಗೂಳಿಯ
ನಿರಿಸದೆ ಪೊಱಮಡಿಸು ಅಲ್ಲದೊಡೆ ನೀಂ ಕಿಡುವೈ ೮೦

ಎನೆ ಕುಂಭಕ ತನ್ನಯ ನ
ಚ್ಚಿನ ಗೋಪರ ಲ[9]ಕ್ಷ[9] ಸಂಖ್ಯೆಯಂ ಕರೆಸಲ್ ಬಂ
ದನುನಯದಿನುರುಳುವಗ್ಗಗ
ಳನು ಕೊಂಡೊಯ್ದುವರು ಮುತ್ತಿದರ್ ಗೂಳಿಗಳಂ ೮೧

---

1 ಕಂಸನಸಂ ವಧಂಗೆಯ್ದು (ಗ ಚ) 2 ತ್ತುಂ ಗೋಪಾಲರೊಳಾಡುತ್ತುಂ (ಚ) 3 ತ್ತುಂ ಗೋಪಿವೇಷಿಯರ ಕಣ್ಗೆ ಸೆರೆಯ ಕೌತುಕವಂ ಬೀಱುತ್ತುಂ (ಚ) 4 ಪುರವೆಂಬ ಪಟ್ಟಣದಲ್ಲಿ ಜನಕರಾಜ ಸಂಭವರಾದ ಅರಸರೊಳಗೆ (ಚ) 5 ಅಂತಾ ಕುಂಭಕನ ಗೋಕುಲದೊಳ್ ಕಂಸನ ಪೊರೆದಪ್ಪ ರಾಕ್ಷಸನೀತಂ ಪುಂಗವನೆಂಬ (ಗ ಚ) 6 ಕುಂ (ಚ) 7 ಪಾೞಿಗೞ್ದು (ಚ) 8 ಖರಖರಸೊಂದಲ್ಲಿ (ಚ) 9 ಕ್ಷ (ಚ)

ಮುತ್ತಲ್ಕೆ ಗೂಳಿಗಳ್ [1]ನೆಗೆ[1]
ಯುತ್ತುಂ ಹಗ್ಗಗಳ ಪಱಿದು ಗೋಪಾಲಕರಂ
ಕುತ್ತಿ ಕೆಡೆಮೆಟ್ಟಿ ಹೂಂಕರಿ
ಸುತ್ತುಂ ಕುಂಭಕನನೋಡಿಸಿ[2]ದುವಾಕ್ಷಣದೊಳ್[2] ೮೨

ವಚನ : [3]ಅಂತವನೆಂತಾನುಂ ಪಿಡಿಯಲಾಱದೆ[3]

ಕಂದ : ಈ ಗೂಳಿಗಳಂ [4]ಪಿಡಿದಂ
ಗೀಗಳ್[4] ನಮ್ಮಯ ತನೂಜೆ ನೀಲಾದೇವಿಯ
ಬೇಗದೊಳಗೀವೆನೆಂದೆನು
ತಾಗಳ್ ಸಾಱಿಸಿದ ಕುಂಭಕಂ ಪಟ್ಟಣದೊಳ್ ೮೩

ವಚನ : [5]ಈ ವಾರ್ತೆಯಂ[5] ಗೋಕುಲದೊಳೊರ್ವ ಸುಬಾಹುವೆಂಬ ಗೋಪಂ ಕೃಷ್ಣನೆಡೆಗೆ [6]ಬಂದು[6] ಬಿನ್ನೈಸಿ ಮತ್ತಮಿಂತೆಂದಂ

ಮತ್ತೇಭವಿಕ್ರೀಡಿತ
ಜಲಜಾತಾಂಬಕ ಕೇಳು ಕುಂಭಕನ ಗೂಳಿವ್ರಾತಮಂ ಬಲ್ಪಿನಿಂ
ಗೆಲಿಯಲ್ಕಾಕ್ಷಣಮೀವನಂಗಜನ ಸತ್ಸೌಭಾಗ್ಯೆಯಂ ಮೋಹ ನಿ
ರ್ಮಲ ಮಂತ್ರಾಕ್ಷರಮೂರ್ತಿಯಂ ಸುಖದ ಸಾಕಾರಾರ್ಥ ಸಂಪೂರ್ಣೆಯಂ
ಕುಲಕಂಠೋತ್ತಮಮಾಲೆಯಂ ವಿಮಲ[7]ನೀ[7]ಲಾದೇವಿಯಂ ಭಾವೆಯಂ ೮೪

ಕಂದ : ಆ ಕನ್ಯಾರತ್ನಮನಾ
ನೀಕೆ ರಸನೆಯೊಳ್ ಪೊಗಟಿತ್ತೊಪ್ಪಡ[8]ಳ[8]ವಾಗದಪ್ಪುದೇ
ಮಾಕಂಠ ನವ್ಯಮಣಿಯಂ
ಶ್ರೀಕಾಂ[9]ತಾತ್ಸನ್ಮು[9]ಖಾಬ್ಜ ರವಿದೀಧಿತಿಯಂ ೮೫

ಲಲನೆಯ ಕೈಕಾಲ್ಗಳ್ ನಿ
ರ್ಮಲ ಬಿಂಬಾಧರಮುಖೇಂದು ಘಟಕುಚ ಮಿಸುಪ
ಜ್ಜ್ವಲನೇತ್ರವ ಪೆತ್ತನಜಂ
ತಳಿರಂ ತಾವರೆಯನುಬ್ಜಪೊಲ್ ನಿರ್ಮಿಸಿದಂ ೮೬

---

1 ನೆರೆ (ಗ) 2 ದನಾಕ್ಷಣದಿಂ (ಚ) 3 ಅಂತು ಗೂಳಿಗಳಂ ಪಿಡಿಯಲಾರದೆ ಬೇಳಾಗಿ ಕುಂಭಕಂ ಬೆಂಬಿದ್ದು (ಚ) 4 ಕೊಂಡವರಿಗೀಗಂ (ಚ) 5 ಅಂತಾ ಕುಂಭಕಂ ಗೂಳಿಗಳಂ ಗೆದ್ದವರಿಗೆ ಮಗಳಂ ಕೊಡುವನೆಂಬ ವಾರ್ತಾಭಾರವಂ ಕರ್ಣಪರಂಪರೆಯಿಂ ಪುಟ್ಟೆ (ಚ) 6 ಬಂದು ಯಥಾಕಥನಮಂ (ಚ) 7 ಲೀ (ಚ) 8 ಅರಳ (ಚ) 9 ತತ್ಸನ್ಮು (ಗ ಚ)

ವಚನ : ಇಂತೆಂ[1]ದ[1] ಗೋಪಾ[2]ಲ[2]ಲೀಲಾವಚನಮಂ [3]ಕಮಲಲೋಚನಂ ಕೇಳ್ದು ಕನ್ಯಾಲಾಭಮಂ ತಿಳಿದು ಆ ಪುಂಗವಸಪ್ತಕಂಗಳ್ ಕಂಸಭೃತ್ಯರೆಂಬುದನಱಿದು[3] ಗೋಕುಲಮಂ ಪೊಱಮಟ್ಟು

ಕಂದ : ಕುಂಭಕನ ಕಂಡು ಕೃಷ್ಣಂ
ಕಂಬನಿಯಂ ತೊಡೆದು ಗೂಳಿಗಳ ನಾಂ ಕೊಲ್ವೆಂ
ಪಂಬಲಿಸಲೇಕೆ ನೀವೆನು
ತುಂ ಬಂದರ್ ರಾಮ ಕೃಷ್ಣರತಿಭುಜಬಲದಿಂ ೮೭

ವಚನ : ಅಂತು [4]ಬಂದು[4] ಭುಜಾಸ್ಫಾಲನಂಗೈ[5]ದು[5] ಮೇಲ್ವಾಯ್ದು [6]ಪುಂಗವಂಗಳ ಕೋಡುಗಳಂ ಭಂಗಮನಾಗಿಸಿ[6] ಕೊನೆಗಾಲ್ವಿಡಿ[7]ದು[7] ಸಿಕ್ಕನೆ ಸೀಳೆ ಕುಂಭಕಂ ಕೇ[8]ಳ್ದು[8] ಸಂತಸಂದಾಳ್ದು

ಮತ್ತೇಭವಿಕ್ರೀಡಿತ
ಭಲರೇ ದೇವರದೇವ ನೀನಹುದೆನುತ್ತಾನಂದದಿಂ ಕುಂಭಕಂ
ಕುಲಗೋತ್ರಂ ನಲಿದಾಡೆ ಪೂಮಳೆ ಸುರವ್ರಾತಂಗಳಿಂ ಸೂಸಲು
ಜ್ವಲದೇವಾನಕ ಧಂ ಧಣಂ ಧಣರೆನಲ್ ಸಂತೋಷದಿಂದಿತ್ತನಾ
ಲಲನಾರತ್ನಮನಬ್ಜಲೋಚನೆಗೆ [9]ನೀ[9]ಳಾದೇವಿಯಂ [10]ಲೀಲೆಯಿಂ[10] ೮೮

ವಚನ : ಅಂತು ಕನ್ಯಾಲಾಭಮಂ ಪಡೆದು ಬರುತಿ[11]ರ್ಪನ್ನೆಗಂ[11] ಮುಂದೊಂ[12]ದು[12] ಕಾಸಾರಮೊಪ್ಪು[13]ತಿರ್ದುದೆಂತೆನೆ[13]

ಕಂದ : ಕುರುಳ್ಗಳಳಿಕುಲದಿನಾನನ
ಸರಸಿಜದಿಂ ಲೋಚನೋತ್ಪಲಸ್ತನ ಚಕ್ರೋ
ತ್ಕರದಿಂ ಕಾಂತೆಯ ತೆಱದಿಂ
ಸರಸಿ ನಯಂ ಬೆರಸಿ ಕಣ್ಗೆ ಸುಖಮಾವರಿಸೀ ೮೯

---

1 ಮು ಪುದಿದ (ಗ) 2 ಲನ (ಗ) 3 ಕರ್ಣರಾಜ್ಯನ್ಯನೂಗೆ ಕಮಲದಳಾಕ್ಷಂ ಕನ್ಯಾಲಾಭಮಂ ತಿಳಿದು ಕಂಸರಾಕ್ಷಸರೆಂಬುದು ಕಂಸಾರಾತಿಕಸ ಸಿಸ್ಯಜ್ಞಾನಂ ತಿಳಿದು (ಚ) 4 ಬಂದು ಗೋಕುಲದೊಳ್ ನಿಂದು (ಚ) 5 ದು ಪುಂಗೆತ್ತುಗಳಂ (ಚ) 6 ಕೊನೆಗೆ ಕೊಂಬುಗಳಂ ಮುಱಿಂದು (ಚ) 7 ದು ಗೂಳಿರೂಪಾದ ಏಳು ಮಂದಿ ರಾಕ್ಷಸರಂ (ಚ) 8 ಳಿ (ಚ) 9 ಲೀ (ಚ) 10 ಕೃಷ್ಣಂ (ಚ) 11 ರ್ಪನಂ (ಚ) 12 ದೆಸೆಯೊಳ್ ಪಥಾಂತರದಲ್ಲಿಯೊಂದು (ಚ) 13 ತ್ತಿರ್ಪುದದೆಂತೆಂದೊಡೆ (ಚ)

ವಚನ : [1]ಅಲ್ಲಿ[1]

ಕಂದ : ಪೂತನಿಯಗ್ರಜನತಿ ವಿ
ಖ್ಯಾತಂ ಬಕನೆನಿಸುವಸುರ ಬೆಳ್ಳಕ್ಕಿಯವೊಲ್
ಪಾತಕನಿರಲವನಂ ಸೀ
ಳ್ದಾತುರದಿಂ ಮುಂದೆ ನಡೆದು ಬರುತಿರ್ಪಿನೆಗಂ ೯೦

ಬೆಟ್ಟ[2]ದ ತೆಱದಿಂ[2] ಬಾಯಂ
ಬಿಟ್ಟಾ ಗುಹೆಯಂತೆ ನಗಸುರಾರಿಯೆನಿಪ್ಪಂ
ಪೆಟ್ಟಿರೆ ಗೋಕುಲ ಸಹಿತಂ
ನೆಟ್ಟನೆ ಮಿಗೆ ಪೊಕ್ಕು ಕೃಷ್ಣನವನಾಸನಮಂ ೯೧

ನಗಮಂ ಪೊತ್ತೆತ್ತಿದ್ದ ಬಲ್
ನಗಕುಲಮಂ ತಱಿದನಂ ಸದಾ ರಕ್ಷಿಪಗಂ
ನಗವೊಂದಿದೆನೋ ಕೃಷ್ಣಗೆ
ನಗಮಂ ಪೊಯ್ದೊರಸಿಕೊಂದನಾ ರಕ್ಕಸನಂ ೯೨

ವಚನ : ಅಂತು ನಗಾಸುರನಂ [3]ಮರ್ದಿಸಿ[3] ಮುಂದೆ ದುಱುದುಱಿಪ ವಿಷದ ನೊರೆಯಡರೆ ಸೀದು ಬೀಳ್ವ ಪಕ್ಷಿಗಳಿಂ [4]ವಿಷಮಾಗಿರ್ದ[4] ಕಾಳಿಂದಿಯ ಮಡುವಂ [5]ಕಂಡು[5] ಸೇವ್ಯ[6]ಮಂ[6] ಮಾಡವೇಳ್ಕುಮೆಂದು ಮನಂ[7]ದಂದು[7]

ಮತ್ತೇಭವಿಕ್ರೀಡಿತ

ಭರದಿಂದಂ ಬಲರಾಮ ಕೃಷ್ಣರೊಲವಿಂದಂ ಗೋಪರಾನಂದದಿಂ
ಸುರಭಿವ್ರಾತಮ ಮೇಯಿಸುತ್ತ ಸಿಡಿಗೆಂಡಾಡುತ್ತ[8]ಮಿರ್ಪನ್ನೆಗಂ[8]
ಕರದಿಂ ಕಂತುಕ ಬಿದ್ದುದಾ ಮಡುವಿನೊಳ್ ಕಾಳಿಂಗನಿರ್ದಲ್ಲಿಗ
ಚ್ಚರಿಯಿಂ ಕೃಷ್ಣನು ಬೇಗದಿಂ ಧುಮುಕಿದಂ ಕಾಳಿಂದಿಯಾ [9]ಬೆಂಚೆಯೊಳ್[9] ೯೩

ಮಹಾಸ್ರಗ್ಧರೆ

ಕದಡಿತ್ತಾ ಬೆಂಚೆ ಕಾಳಿಂಗನ ಪೆಡೆ ಕುಸಿಯಿತ್ತಾ ಫಣಾರತ್ನಮೆಲ್ಲಂ
ಕೆದಱಿತ್ತೊಂದೊಂದು ಮುಂ ಪೊರ್ದವೆ ಹರಿ ತುಳಿಯಲ್ ಕಾಳಿಯಂ ಲಾಸ್ಯದಿಂದಂ
ಬೆದಱಿತ್ತಾ ನಾಗನಾರೀ ನಿವಹ ಮಣಿದು ಜೆಂಡಿತ್ತರಾ ಕೃಷ್ಣ[10]ನಾಗಳ್[10]
ಪದಪಿಂ ಕಾಳಿಂಗನಂ ರಕ್ಷಿಸುತೆ ಮಡುವಿನಿಂ ಬಂದನೊಲ್ದಾ ಮುಕುಂದಂ ೯೪

---

[1] ಅಂತಿರ್ಪ ಕಾಸಾರ ತೀರದಲ್ಲಿ (ಚ) [2] ದೊಲ್ ಬೆಳೆದ (ಚ) [3] ಮರ್ದಿಸಿ ಬಪ್ಪನ್ನಂ (ಚ) [4] ಹಳಾಹಳವಾಗಿರ್ದ (ಚ) [5] ಕೃಷ್ಣಂ ಕಂಡು (ಚ) [6] ಮಪ್ಪಂತು (ಚ) [7] ಗೊಂಡು (ಚ) [8] ಲಿಪ್ಪನ್ನೆಗಂ (ಚ) [9] ಪೆಂಟೆಯೊಳ್ (ಚ) [10] ಗಾಗಂ (ಚ)
*ವಚನ: ವ॥ ಅಂತು ಪೊಕ್ಕು (ಚ)

ವಚನ : ಅಂತು [1]ಕಾಳಿಂಗನ[1] ಶಿರ[2]ದೊಳ್[2] ತ್ರಿಪಾದನನೊತ್ತಿ ವಿಷಮಂ ಬಿಡಿಸಿ ಗೋಪ ಗೋಪಿಯರಂ ಸಂತೈಸಿ ಯಶೋದಾ ನಂದಗೋಪರ ತಳ್ಳಂಕನುಂ ಬಿಡಿಸಿ ಸುಖದಿಂದಿರ್ಪನ್ನಮೊಂದುದಿವಸಂ ಗೋನಿವಹದಿಂ ಪೋಗುತ್ತಿರಲ್

ಚಂಪಕಮಾಲೆ

ದಡದಡಿಸು[3]ತ್ತೆ[3] ಡಬ್ಬ[3]ನು[3]ತ್ತೆ[3] ತೇಗು[3]ತ್ತೆ[3] ಜೋಲುತಲಾಲುತಂತೆ ಕ
ಣ್ಗಡೆಯೊಳೆ ಕೆಂಪು ಸೂಸಿ ಎಡಹುತ್ತಡಹಾಯ್ಸುರ ಕಂಡು ಕೋಪದಿಂ
ಘುಡುಘುಡಿಸುತ್ತಲೊತ್ತಿ ನಗುತುಂ ನೆಳಲೊಳ್ ನಲಿಯುತ್ತೆ ಹಿಗ್ಗಿ ಹೇ
ರೊಡಲ[4]ಸೆಯು[4]ತ್ತೆ ಕಳ್ಗುಡಿದು [5]ರಾಕ್ಷಸಿ[5]ಯರ್ ಬರುತಿರ್ದರಾಕ್ಷಣಂ ೯೫

ವಚನ : ಅಂತು [6]ಬರ್ಪ[6]ವರಂ [7]ಕೃಷ್ಣನಿವರಾರೆನೆ ಗೋಪಾಲರಿವರ್[7] ಕಂಸನ ಮನೆಯ[8]ವರ್[8] ತಾಟಿರಸಂಗೊಂಡು ಪೋಗುತಿರ್ದ[9]ಪರ್[9] ಖರನೆಂ[10]ಜೊರ್ವ[10] ನಿಶಾಚರಂ ಗಾರ್ದಭ[11]ನಂತೆ[11]ಯಾ ತೋಂಟಮಂ ಕಾದಿರ್ಪನಲ್ಲಿಗೆ ಪೋಗಲ್ವೇಡಮೆನೆ

ಕಂದ : ಇಂತೆಂ[12]ದೊಡೆ[12] ತಾಟ್ಪಣ್ಣಂ
ಸಂತಸದಿಂ ಮೆದ್ದು ಬರ್ಪೆವೆನುತುಂ ಕೃಷ್ಣಂ
ಮುಂತಡಿಯಿಡೆ ಖರ ಖರಖರ
ನಂತಿರ್ದಂ ಮಾರಿ ಮಸಗಿ ರೂಪಾಗಿರ್ದೊಲ್ ೯೬

ವಚನ : ಅಂತಿರ್ಪ ಖರ[13]ನ[13] ಹಿಂಗಾಲ್ಗಳಂ ಪಿಡಿದು ತಾಟಿ[14]ಫಲಮ[14]ನಿಟ್ಟು ರಾಕ್ಷಸನಂ ಕೊಂದು [15]ಗೋಕುಲದೆ[15] ಸುಖನೊಳಿರ್ಪಿನ[16]ಮೊಂದುದಿನಂ[16]

ಕಂದ : ಒಡನಾ[17]ಡಿಗ[17] ಮಕ್ಕಳ ಸಂ
ಗಡಿಗಂ ತಾನೆಂಬ ತೆಱದೆ ಪೆಗಲೇಱಾಟದೆ
ನಡೆಯುತ್ತುಂ ಬಲರಾಮನ
ನಡುಪೆಗಲೊಳಗಾ ಪ್ರಲಂಬ ತಾಳ್ದಂ ಬನದೊಳ್ ೯೭

---

1 ಕಾಳಿಯ (ಕ) 2 ಸ್ಸಿನಲ್ಲಿ ಕನ್ನ (ಚ) 3 ತ್ರ (ಚ) 4 ಸವ್ರ (ಚ) 5 ರಕ್ಕಸಿ (ಚ) 6 ಬರುತಿರ್ಪ (ಚ) 7 ಕಂಸು ಕೃಷ್ಣಂ ಗೋಪರನಿವರಾರೆಂದು ಕೇಳುವುದುಂ (ಚ) 8 ರಾಕ್ಷಸಿಯರ್ (ಚ) 9 ಪರಪಲ್ಲದೆ (ಚ) 10 ಬರಾಕ್ಷಸಂ (ಚ) 11 ರೂಪಾಗಿ (ಚ) 12 ದರೆ (ಚ) 13 ನನಟ್ಟಿ (ಚ) 14 ಪಣ್ಣುಗಳ (ಚ) 15 ತಾಳಹಣ್ಣುಗಳಂ ಕೊಂಡು ಗೋಕುಲಕ್ಕೆ ಬಂದು (ಚ) 16 ಮುಂದೊಂದು ದಿವಸಂ (ಚ) 17 ಡುವ (ಗ ಚ)

ವಚನ: [1]ಆಕಾಶದೊಳ್ ಪೋಗುತಿರ್ಪಿನಂ ಪೂರ್ವಮಂ ನೆನೆದು ಬಲರಾಮಂ ಪ್ರಲಂಬನಂ ವಧಿಸಿ ಪ್ರಲಂಬಘ್ನನೆಂಬ ಪೆಸರಾಂತು ಬರ್ಪಿನಂ ಮುಂದೆ[1]

ಕಂದ: ಉದ್ದದ ಕೂ[2]ಳಿನ[2] ರಾಶಿಯ
ಹೊದ್ದಿದ ಪೆರ್ಗೊಡದ ಶಾಕ ಕಜ್ಜಾಯಗಳಿಂ
ಶುದ್ಧಾತ್ಮರ್ ಮಿಗೆ ಮಾಡು
ತ್ತಿರ್ದರ್ ಸುಗಿರೀಂದ್ರಮುಖವ ಗೋಪಸಮೂಹಂ ೯೮

ಘನತರಗಿರಿಮುಖದೆಡೆಗೊ
ಯ್ಯನೆ............................
....
............ಬಂದಂ ಕೃಷ್ಣ ರಾಮ ಗೋಕುಲ ಸಹಿತಂ* ೯೯

ಕಳಿಕಳಿಯೆಲಗಲ್ [3]ತೊಲ[3]ಗದ
ವಿಲಸತ್ ಕೊಂಕಿಂಗೆ ಕೊಂಕು ಪೊಗದಮೃತರಸಂ
ತುಳುಕಿತ್ತೆನೆ ಮೃಗಪಕ್ಷಿಗ
ಳೆಳಸುತ್ತಿರೆ ಕೊಳಲನೂದುತಿರ್ದಂ ಕೃಷ್ಣಂ ೧೨೦

ವಚನ: ಆ ಸಮಯ[4]ದೊಳ್ ಶಂಖಚೂಡಂ[4] ಪೊದಱಿಂ ಬಂದೊರ್ವ ಗೋಪಿಯನೆಳೆ ದೊಯ್ವುದುಂ ಕೃಷ್ಣಂ ಕಂಡು ಬೆನ್ನಟ್ಟಿ

ಕಂದ: ಶಶಿ[5]ಮುಖಿಯಂ[5] ಬಿಡು ಪಾತಕ
ದಶಕಂಠನ [6]ಹೆಱತಿಯ[6] ಮಗನೆ ಎನುತುಂ ಪಿಡಿದಂ
ಕುಸುಬಿದನಱತಿದಂ ತಱಿದಂ
ಬಿಸುಟಂ ರಕ್ಕಸನ ಪೆಣನನಂದು [7]ಮು[7]ಕುಂದಂ ೧೨೧

---

1 ಅಂತು ಪ್ರಲಂಬಂ ರಾಮನಂ ತಳೆದಾಕಾಶಮಾರ್ಗಕ್ಕೆ ಪೋಪುದಂ ಕೃಷ್ಣಂ ಕಂಡು ರಾಮಂಗವತಾರಪೂರ್ವಮನೆಚ್ಚರಿಪುದುಂ ಬಲರಾಮಂ ಪ್ರಲಂಬನಂ ಕೊಂದು ಪ್ರಲಂಬಘ್ನನೆಂಬ ಪೆಸರಂ ತಾಳ್ದು ಬರ್ಪನ್ನಂ ಮುಂದೆ (ಚ) [2] ಳ್ಗಳ (ಚ) [3] ಲೋಲ (ಗ) [4] ದೊಳಾಡುವ ಸ್ತ್ರೀ ಸಮೂಹಮಂ ಕಂಡು ಸ್ವೈರಿಸಲೆಂದು ಜಿದೆ ಶಂಖಚೂಡನೆಂಬ ರಾಕ್ಷಸಂ (ಗ ಚ) [5] ವದನೆಯು (ಗ) [6] ಮನೆಯ (ಗ) [7] ಬಂದುಮು (ಗ)

* ಇಲ್ಲಿಂದ ಮುಂದೆ ೧೨೦ ನೆಯ ಪದ್ಯದ ವರೆಗೆ ಕ ಗ ಚ ಮೂರು ಪ್ರತಿಗಳಲ್ಲಿಯೂ ಗ್ರಂಥಲುಪ್ತವಾಗಿದೆ. ಕ ಪ್ರತಿಯಲ್ಲಿ ಈ ರೀತಿ ಬರೆದಿದೆ: ಈ ಮಧ್ಯಭಾಗದಲ್ಲಿ ಎರಡು ಪೋಲಿಗಳಲ್ಲಿ ಏನೂ ಬರೆದಿಲ್ಲ ಬಿಟ್ಟು ಹೋಗಿರುವಂತೆ ತೋರುತ್ತದೆ.

ವಚನ : ಅಂತು ಶಂಖಚೂಡ ಹನನಂಗೈದು ಶಿಟ್ಟಿರೋಮಣಿಯಂ[1] ಬಲರಾಮಂಗೆ ಕೊಟ್ಟು ಪುರಕ್ಕೆ ಬರ್ಪ ಸಮಯ[2]ದೊಳ್[3] ನಂದಗೋಪನನೊಂದು ಪೆರ್ಬಾವು ನುಂಗುತಿರೆ ಗಜಬಜಂ ಮಸಗೆ ಕೃಷ್ಣಂ ಭುಜಗರಕ್ಕಸನೆಂದಱಿದು ಅವನಂ ಸರವಿಯಂ ಪಱಿವಂತೆ ಪಱಿದು ಕೊಂದು ಗೋಸಮೂಹಮಂ ಮೆಯ್ಸಿಸುತಿರ್ಪ ಸಮಯದೊಳ್

ಉತ್ಪಲಮಾಲೆ

ಉಬ್ಬಿದ ಕೇಸರಂ ಪೊರಳ್ವ ಬಾಲ ಪಳಂಚುವ ಕೆಂಡಗಣ್ಣಿನಿಂ
ದಬ್ಬರಿಸುತ್ತಿರಿಪ್ಪನೆನಿಪೊರ್ವಸುರಂ ಮೃಗರಾಜರೂಪದಿಂ
ಗುರ್ಬಿನೊಳಂಬುಜಾಂಬಕನ ಮೇಲ್ವರಿಯಲ್ ಪೊಸೆದಿಕ್ಕಿ ಕೊಂದನಾ
ನುರ್ಬಿಲಗೋಪ ಗೋವುಗಳ [3]ಕದ್ದನು[3] ರಕ್ಕಸ ವ್ಯೋಮನೆಂಬವಂ ೧೨೨

ವಚನ : ಅಂತು ಪಿಡಿದಾ ಯಮಸೂನುನಪ್ಪ ವ್ಯೋಮ[4]ರಾಕ್ಷಸ[4]ನಂ ಕೊಂದು ಗೋಪರ ಸೆಱೆಯಂ ಬಿಡಿಸಿ ಬರ್ಪನ್ನಂ ಮುಂದೆ

ಉತ್ಪಲಮಾಲೆ

ನಿಶ್ವನದಬ್ಬರಂ ನೆಗೞೆ ನಿಲ್ಲವಗುಂಪಸುರ್ದಕ್ಷಿ ರಾಜಿಸ
ಲ್ಪೃಪ್ತವಿವೇಕೆ ಸೂಳ್ಪ ನರಳುತ್ತಿಹ ಘೋಷದ ಕೇಶಿಯಾರ್ದು ಜಾ
ತ್ಯಶ್ವದ ಮಾೞ್ಕೆಯಿಂ ಪರಿಯೆ ಕೃಷ್ಣನದಂ ಮಿಗೆ ಮೇಲುವಾಯ್ದು ನಾ
ಕೇಶ್ವರರಾ ಎನಲ್ಕೆ ಮಡದಿಂದವೆ ತಾಂ ಬಡಿದಂ ಸುರಾರಿಯಂ ೧೨೩

ವಚನ : ಅಂತು ಕೇಶಿಯಂ ಕೊಂದ ಕತದಿಂ ಕೇಶವನಾಗಿರ್ಪುದಂ ಕಂಸಂ ಕೇಳಿ ಇಂತಿವನಂತಕಾಲಯಮನ್ನೈದಂ ಧನುಪರ್ವಮೆಂದು ಕಪಟೋಪಾಯದಿಂ ಕೊಲ್ವುದೇ ಕಜ್ಜಮೆಂದು ಪ್ರಿಯವಚನವಾಚಸ್ಪತಿಯೆನಿಪ ಅಕ್ರೂರನಂ ಕರೆದು ನೀಂ ಪೋಗಿ ಗೋಪಪಳ್ಳಿಯೊಳಿರ್ಪ ಕೃಷ್ಣನಂ ಕರೆತರ್ಪುದೆನೆ ಹಸಾದಮೆಂದು ಪೊಜಮಟ್ಟು

ಕಂದ : ದೂಷಕರ ತಗಹಿನಿಂ ಹರಿ
ನಾಶನವಾದಂತೆ ಕಂಸನೂಳಿಗದಿಂದಂ
ಕೇಶವನ ಕಾಣ್ಬ ಪುಣ್ಯಾವಿ
ಲಾಸಂ ನನಗಾಯ್ತು ಪೂರ್ವಪುಣ್ಯಾಸುದೆಂತೋ ೧೨೪

ವಚನ : ಎನುತುಂ ಬಂದಕ್ರೂರಂ ಗೋಕುಲಮಂ ಸಾರ್ಪುದುಂ

---

1 ಡಸಂ ಕೊಂದವನ ಮಸ್ತಕದ ಮಣಿಯುಂ (ಚ) 2 ದಲ್ಲಿ (ಚ) 3 ಕೊಂದನು (ಕ)
4 ರಕ್ಕಸ (ಚ)

ಕಂದ : ಮುಱುವೆಲ್ಲಿ ಕಱುವ ಬಿಡು ಮಿಗೆ
ತುಱುಸಾಪಂ ಕಱಿವರೇಳು ಬಿದಿರಂ ಪಿಡಿ ನೀಂ
ಸಿಱುವಾಯನೆನಿಪ್ಪಬ್ಬರ
ತುಱುಹಟ್ಟಿಯೊಳುರ್ಬೆ ಪರ್ಬುತಿರ್ಪವಸರದೊಳ್ ೧೨೫

ಚಂಪಕಮಾಲೆ

ತಳಿತಲರ್ಚಿರ್ಪ ತಾವರೆಯ ಬೆಳ್ಪಿಸಳಿಂ ಚೆಲುವಾದ [1]ಕಣ್ಗಳಿಂ[1]
ಪೊಳೆವ ಕದಂಪಿನೊಳ್ ಸುಳಿವ ಕೂದಲ ನೀಲನಿಭಾಂಗ ತೋರ್ಪ ಚೆಂ
ದಳಿರ ವಿಳಾಸಮಂ ಕಱಿವ ದಿವ್ಯಸುಧಾಧರವೊಪ್ಪೆ ಗೋಪ ಸಂ
ಕುಳದೊಳಗಿರ್ದನಂದು ಹರಿ ಗೋಪಿಯರೊಳ್ ನಗುತುಂ ವಿಲಾಸದಿಂ ೧೨೬

ವಚನ: ಅಂತೊಪ್ಪುವ ಕೃಷ್ಣಂಗಕ್ರೂರಂ[2] ಪೊಡಮಟ್ಟು[2] ನಂದಗೋಪನಿಂ [3]ಸನ್ಮಾನಿತನಾಗಿ[3] ಸರ್ವ ವೃತ್ತಾಂತಮಂ [4]ವಿ[4]ಸ್ತಾರಮಾಗಿ ಪೇಳೆ ರಾಮ ಕೃಷ್ಣರಂ ಪ್ರಯಾಣೋದ್ಯುಕ್ತರಂ ಮಾಡಿ ಪುರಮಂ ಪೊಱಮಟ್ಟು ಪೋಪನ್ನಂ

ಕಂದ : ಹರಿಯುಮನಗಲಿಸೆ ಬಂದಾ
ಸುರವೈರಿಯ ದೂತನೆನಿಸುವಕ್ರೂರಂಗಂ
ಬರೆದವರಾರೋ ಮೊದಲ
ಕ್ರೂರಮಂ ತೊಡೆಯೆಂದು ಗೋಪಿಯರ್ ಕೋಪಿಸಿದರ್ ೧೨೭

ವಚನ: ಅಂತಳಲ್ವ ಗೋಪಿಯರನೆಂತಾನುಂ ಸಂತೈಸಿಯಕ್ರೂರ[5]ಸಹಂ[5] ಬಂದು ಯಮುನಾನದಿಯೊಳ್ ಅಕ್ರೂರಂ ಸ್ನಾನಂಗೆಯ್ಯುತಿರೆ ಶ್ರೀಕೃಷ್ಣನಕ್ರೂರಂಗೆ ವಿಶ್ವರೂಪಮಂ ತೋಱಲ್ ವಿಸ್ಮಯಸ್ವಾಂತನಾಗಿ ಕೃಷ್ಣಂಗೆ [6]ನಮಸ್ಕಾರಂಗೈದಕ್ರೂರಂ ಪುರೋಪಕಂಠದೊಳ್[6] ಕಳುಹಿಸಿಕೊಂಡು ನೀವು ಮೆಲ್ಲನೆ ಬನ್ನಿಯೆಂದು [7]ಪೋದನಿತ್ತಲ್[7] ರಂಗಕಾರನೆಂಬ ಕಂಸಾಸುರನ ರಜಕನಂ ಕಂಡು ಬೇಡಿದ ವಸ್ತ್ರಮಂ ಕುಡದಿರಲವನಂ ಕೊಂದು ವಸ್ತ್ರಲಾಭಮಂ [8]ಪೊಂದಿ[8] ಕುಬ್ಜೆಯಿತ್ತ ಗಂಧಾನುಲೇಪಂಗೈದವಳಂ ಸೌಮ್ಯಾಂಗಿಯಂ ಮಾಡಿ ಸುಧಾಮನಿಂ ಪುಷ್ಪಮಾಲ್ಯಾಲಂಕೃತರಾಗಿ ಕಂಸನರಮನೆಯಂ ಪೊಕ್ಕು ಅಲ್ಲಿಯ ಶಸ್ತ್ರಶಾಲೆಯಂ ದಳ[9]ಮ[9]ಳಿನಾಯ್ದು ಉದ್ದಂಡಕೋದಂಡಮಂ ಖಂಡನಂಗೈಯ್ದು ಚಾಣೂರ[10]ನಂ[10] ಪೊಯ್ದೊರಸಿ ಮುಷ್ಟಿಕನಂ ಬಲ[11]ರಾಮ[11]ನಿಂ ಕೊಲಿಸಿ ಕುವಲಯಾಪೀಡ[12]ಮಂ[12] ತಾನೊದ್ದು ಕೊಂದು ಕರುಮಾಡದ ಮೇಲಿರ್ಪ ಕಂಸನಂ ಕಂಡು

---

1 ಕಣ್ಣುಮಂ (ಚ) 2 ಬಂದು ನಮಸ್ಕಾರಂಗೆಯ್ದು (ಚ) 3 ಮಾನ್ಯಮಂ ಪಡೆದು ಮನೆಯೊಳ್ ಕುಳ್ಳಿರ್ದು (ಚ) 4 ಸವಿ (ಚ) 5 ಸಹಿತಂ (ಗ) 6 ಪೊಡಮಟ್ಟು ನಮಸ್ಕಾರಂಗೈದು ಪುರೋಪಕಂಠಕ್ಕೆ ಬಂದಕ್ರೂರಂ (ಚ) 7 ಪೋಗಲಾತನಂ ಕಳುಪಿ (ಚ) 8 ಪಡೆದು ಪುರ ಪ್ರವೇಶಂಗೆಯ್ದು (ಚ) 9 ವು (ಚ) 10 ಮಲ್ಲರಂ (ಗ ಚ) 11 ಭದ್ರ (ಚ) 12 ನೆಂಬಾನೆಯ (ಚ)

ಕಂದ : ನಾ[1]ವಿಬ್ಬರು[1] ಹಸುಳೆಗಳಂ
ನೀವಿಲ್ಲಿಗೆ ಕರೆಸಿಯಾನೆಮಲ್ಲರ ಕೈಯಿಂ
ಮಾವಾ ಕೊಲಿಸಲ್ ಬಗೆ[2]ದ
ಮ್ಮಾ[2]ವಿಗೆ ಸರಿಯಾದೆ ಕಂಸಮಾವಾ ಎಂದಂ ೧೨೮

ಎಂದುಪ್ಪರಿಗೆಗೆ ಮೃಗಪತಿ
ಯಂದದೆ ಧುಮ್ಮಿಕ್ಕಿ ಸೆಳೆದು ಕಂಸನನಾ[3]ಗಳ್[3]
ಕೊಂದಂ ಗುಣವೃಂದಂ ದಯೆ
ಯಿಂದಂ ತಾಯ್ತಂದೆಯಂಘ್ರಿಯೆಡೆಗೈತಂದಂ ೧೨೯

ವಚನ : ಅಂತು ಬಂದು ದೇವ[4]ಕೀ[4] ವಸುದೇವರ್ಗೆ ನಮಸ್ಕಾರಂಗೈದು ಉಗ್ರಸೇನಂಗೆ ಪಟ್ಟಂ[5]ಗಟ್ಟಿ ಸಕಲ ಯಾದವಮುಖ್ಯರನುಗ್ರಸೇನನಂ ಕಾಣಿಸಿ ಕತಿಪಯ ದಿನಂ[6]ಗಳಂ[6] ಕಳೆದು ಮೇಲೆ ವಿದ್ಯಾಭ್ಯಾಸಮಂ ಮಾಡ[7]ಲೆಂದು[7] ಪುರಮಂ ಪೊಱಮಟ್ಟು

ಕಂದ : ಈಶಸಿವಾಸವ ಭವಭಯ
ನಾಶವ ಸಂಸ್ಪರ್ಶವಿಗತ ದೋಷವ ಸಾಕ್ಷಾತ್
ಕಾಶಿಯನೈದಿದರಧಿಕವಿ
ಲಾಸದೊಳಾ ಸರಸಿಜಾಕ್ಷ ರಾಮರ್ ಮುದದಿಂ ೧೩೦

ವಚನ : ಅಂತು ಪೊಕ್ಕು [8]ಪಾತಕಮೆನಿತಂ[8] ಮಾಡಿ ಕಾಶಿಯೊಳ್ ಮರಣಂಗೆಯ್ದೊಡೆ ಮಹಾದೇವನಪ್ಪುದೆಂಬುದಂ ತೋಱುತೊಪ್ಪುವ ಸುರಾಭಾಂಡೇಶ್ವರಂ ಮುಂತಾದ ಕ್ಷೇತ್ರಂಗಳಂ ನೋಡಿ ಕಾಶಿಯುಂ ಪೊಕ್ಕು ಸಾಂದೀಪನೆಂಬ ಗುರುವಂ ಕಂಡು ಸಮಸ್ತ ವಿದ್ಯೆಗಳಂ ಮನುಷ್ಯಲೀಲೆ[9]ಯಿಂ[9] ಕಲ್ತು ಕಱುಹಿಸಿಕೊಳ್ಳಲುದ್ಯುಕ್ತರಾಗಿ

ಕಂದ : ನುಡಿದ ಕವಿಗರ್ಥಲಾಭವ
ಪಡೆದವರಿಗೆ ಭಕ್ತಿಭಾವಮಂ ವಿದ್ಯೆಗಳಂ
ಕೊಡೆ ಕಲ್ತು ಗುರುಗೆ ಪೂಜೆಯ
ಕೊಡದಿರಲಾತಂಗೆ ಮುಂದೆ ಲೇಸಾದಪುದೇ ೧೩೧

---

1 ವಿರ್ವರ್ (ಗ) 2 [illegible] (ಚ) 3 ಗಂ (ಚ) 4 ಕಿದೇವಿ (ಚ) 5 ಟ್ಟವುಂ (ಚ) 6 ಗಳ್ (ಕ) 7 ಚೇಕೆಂಬು (ಚ) 8 ಯೆನಿತು ಪಾತಕವುಂ (ಚ) 9 ಯಂ (ಚ)

ವಚನ : ಎಂದು ನುಡಿದು ಗುರುಪೂಜೆಯೇನೆಂದು ಕೇಳ್ವುದುಂ ನಮ್ಮ ಸುಕುಮಾರಂ ಸಮುದ್ರಗತನಾಗಿರ್ಪಂ ಆತನಂ ತಂದು [1]ಕುಡುವುದೆಂಬುದಂ[1] ಕೃಷ್ಣಂ ಕೈಕೊಂಡು

ಕಂದ : ಎಲೆಲೆ ಕುಡು ಗುರುಕುಮಾರನ
ತಳುವೇತಕ್ಕೆಂದು ಹೊಕ್ಕು ಜಳನಿಧಿಯಂ ತಾ
ಯ್ಮಳಲಂ ತೀಡಿದ ತೋಡಿದ
ತುಳುಕಿದ ತುಳ್ಕಾಡಿ ಕಲಕಿದಂ ವಾರಿಧಿಯಂ ೧೩೨

ಮಹಾಸ್ರಗ್ಧರೆ

ಅದಱಿಂ ನೊಂದಬ್ಧಿನಾಥಂ ಕರಗಳಮುಗಿದಬ್ಜಾಕ್ಷ ಚಿತ್ತೈಸಿಯೆನ್ನೊಳ್
[2]ಕ[2]ದುಬುತ್ತುಂ ಕಾಡುತಿರ್ಪಂ ವಡಬನ ಪಿಡಿವಂ ಪಂಕಜಂ ನೀವು ಕೊಂಡೊ
ಪ್ಪಿದ ಶಂಖಂಗೊಂಡು ಮತ್ತಾ ಗುರುಕುಮರನುಮಂ ಕಾಣವೇಟ[3]ಕ್ಕಂದೊಡಂ ಪಾ
ಯ್ದೊದದಿಂದ್ರಾರಾತಿಯಂ ಮೂದಲಿಸೆ ಕದನ ಕೆಳ್ತಂದನಾ[3] ರಾಕ್ಷಸೇಂದ್ರಂ ೧೩೩

ಕಂದ : ಹೊಂಚಿ ಹೊಯ್ದೊರಸಿದಂ ಮಿಗೆ
[4]ಪಂ[4]ಚಜನಂ ಪಾಂಚಜನ್ಯಮಂ ಕೈಕೊಂಡಂ
ಮುಂಚುವ ವೀರೋದ್ರೇಕಮೊ
ಳುಂ ಚೆಚ್ಚರವೆಸೆಯಲೆಮಗೆ ಧಾಳಿಯನಿಟ್ಟಂ ೧೩೪

ವಚನ : ಅಂತು ಯಮಪುರಕ್ಕೆ ಧಾಳಿಯನಿಟ್ಟು ಗುರುಪುತ್ರನಂ ತಾರೆಂದಬ್ಬರಿಸುವುದುಂ ಯಮಧರ್ಮಂ ಮಸಗಿ ಮಾಱಾ[5]ನುವು[5]ದುಂ

ಕಂದ : ಪಾವಂ ಕಚ್ಚುವ ತೆಱದಿಂ
ದಾವಾಗ್ನಿಯನುಱುಹುವಂತೆ ಸಚರಾಚರದೊಳ್
ಜೀವಂಗೊಂಬಂತಕನಾ
ಜೀವಂಗುಬ್ಬಸವ ಮಾಡಿದಂ ಕಮಲಾಕ್ಷಂ ೧೩೫

ವಚನ : ಅಂತು [6]ಕಂಗೆಟ್ಟು[6] ಗುರುಪುತ್ರನನೊಪ್ಪಿಸುವುದುಂ

ಕಂದ : ತಂದೊಲವಿಂ ಸುಕುಮಾರನ
ಸಾಂದೀಪಗೆ ಕೊಟ್ಟು ಮಧುರೆಯಂ ನೆಱೆ ಪೊಕ್ಕಂ
ನೊಂದಾ ಕಂಸಸ್ತ್ರೀಯರ್
ತಂದೆ ಜರಾಸಂಧಗಱುಹಿದರ್ ವಾರತೆಯಂ ೧೩೬

---

1 ಕೊಡೆಂಬುದಂ (ಗ) 2 ಳ (ಕ) 3 ಕೇಳೆಂದವನಾ (ಕ) 4 ಪಾ (ಗ) 5 ನೂ (ಚ)
6 ತಂಗೆಟ್ಟು ದಂಡಧರಂ ಗೋದಂಡಧರಂಗೆ ನಮಸ್ಕಾರಂಗೆಯ್ದು (ಚ)

ವಚನ : ಅಂತು ಕೃಷ್ಣನಿಂದಱಿದಳಿಯನ ವಾರ್ತೆಯಂ [1]ಕೇಳ್ದು[1] ಜರಾಸಂಧಂ ಸಿಂಧುಘೋಷದಿಂ [2]ಮುಸಗಿ[2]

ಕಂದ : ಕೆಳಗಣ ಜಲದೊಳ್ ಘುಳುಘುಳು
ಘುಳುವೆಂ[3]ದುಱಿ[3] ಮೇಲೆ ಶಿಂಶುಮಾರಾಶೆಯೊಳಂ
ಧಱಿಧಱಿ ಧಱಿಱೆಂಬ ರವ ಹೆ
ಕ್ಕಳಿಸಲ್ ಪರ್ಬಿದುದು ಮಗಧಭೇರೀ ನಿನದಂ ೧೩೭

ಸ್ರಗ್ಧರೆ

ತೀವಿತ್ತೆಕ್ಕೆಕ್ಕೆಯಿಂದಂ ಮಿಗೆ ಬಲ ಬಲದೊಳ್ ತೇರು ತೇರ್ಕೈಸಿ ಶಸ್ತ್ರೋ
ಜ್ಜೀವರ್ ಜೀನಾದಿಗಂತಂ ತಡೆಯೆ ಕಡುಗಿ ಬಲ್ದಂತಿಸಂತಾನಮಶ್ವಂ
ಮೂವತ್ತಕ್ಷೋಹಿಣೀ ಮಾರ್ಬಲ ನೆಲ ನಡುಗಲ್ ವಾರ್ಧಿ ತುಳ್ಕಾಡೆ ಕೊರ್ವಿಂ
ದೇವಾರಾತಿ ಪ್ರಮುಖ್ಯಂ ನಡೆದೊದವಿ ಜರಾಸಂಧನಾನಂದದಿಂದಂ ೧೩೮

ವಚನ : ಅಂತು [4]ಮಧುರೆಯಂ ಮುತ್ತೆ ರಾಮಕೃಷ್ಣರ್[4] ಕೈದುಗೊಂಡು ಬಾಗಿಲಂ ತೆಗೆಸಿ

ಕಂದ : ಪರಿತಂದರಿಪೌಜಿನೊ[5]ಳುಂ[5]
ಬೆರಸುತಲಾರ್ದೆಚ್ಚು ಸರಲಸಾರದೊಳಂ ಕ
ತ್ತರಿಸಿದ ಮಗಧಾಧೀಶನ
ಕರಿ ತುರಗ ಪದಾತಿ ರಥವನಾ ಕಲಿಕೃಷ್ಣಂ ೧೩೯

ಒಂದೆಸೆಯೊಳ್ ಬಲರಾಮಂ
ಸಂಧಾನದೆ ಗಜವ ಗಜದಿನಶ್ವವನ[6]ಶ್ವದಿ[6]
ವೃಂದದಲಾಳ್ಗಳನಾಳಿಂ
ಕೊಂದಂ ಪೊಯ್ದುಱಿಸಿಯರಸುಪೌಜಿಂಗಾಂತಂ ೧೪೦

ವಚನ : ಅಂತೆಚ್ಚು ಕೊಲ್ವ ರಾಮಕೃಷ್ಣ[7]ರುಱುಬೆಗೆ ಬಲವೋಡೆ ಮಗುಱೆ ಜರಾಸಂಧಂ ಬರ್ಪುದುಂ[7]

---

[1] ಕೇಳ್ದು ನಿರ್ವರ್ತಿಸಿ (ಚ) [2] ಮುಸಗಿ ದಂಡಯಾತ್ರೋದ್ಯುಕ್ತನಾಗಿ ರಣಭೇರಿಯಂ ಪೊಡೆಯಿಸಿ (ಗ ಚ) [3] ದು (ಚ) [4] ಬಂದು ಮಧುರೆಯಂ ಮುತ್ತಿ ನಾಲ್ಕು ಬಾಗಿಲೊಳ್ ಪರಿದೆಸುವುದುಂ ಪುರದೊಳ್ ಗಜಬಜಂ ಮುಸಗಿ ಧನಮಂ ಪೊಳ್ತ ಧನಿಕರಿಂ ಮನೆಗೋಡುವ ಹಂದೆಗಳಿಂ ಕೈದುಗೊಂಡು ಪರಿವ ವೀರರಿಂ ವೃಟ್ಟಕಟ್ಟಿ ಮೆಲ್ಲನೆ ನಡೆವ ಜೀವಗಳ್ವರಿಂ ಬೆರಳ ಮುಱಿವ ತರುಣಿಯರಿಂ ಬೀದಿಯೊಳ್ ತಱಿಗೆದಱಿ ಪರಿವ ಚಾಮರೆಯರಿಂ ದಟದೊಣ್ಣೆಯಂ ಪಿಡಿದೈದುವ ಬಿಸುಗು ಬಂಟರಿಂ ಕೋಟೆಯ ತೆನೆಗಾಂತ ಪುರಜನದಿಂ ಪುರಮೆಲ್ಲಂ ಕೈದೊಳಗಾಗೆ ರಾಮಕೃಷ್ಣರ್ ಕಂಡು ಹೋಹೋಯೆಂದು ಕೈಯೆತ್ತಿ (ಚ) [5] ಳಾ (ಚ) [6] ಶ್ವ (ಚ) [7] ರವುಱಿಬೆಯಂ ತಾಳಲಾರದೆ ಬಲವೆಲ್ಲಂ ಮುಡಿಯೆ ತಿರುಗಿ ಪೋಗಿ ದೇಶಾಧೀಶರಂ ಕೂಡಿ ಮಗುಳೆ ಜರಾಸಂಧಂ ತಿರುಗಿ ಬರ್ಪುದುಂ (ಚ)

ಕಂದ : ಹರಿಗೆಯವರೆಲ್ಲಿ ಪಿಡಿ ಬ
ದ್ದರಮುಂ ಇಚ್ಚಣಿಯು ಹಾಯ್ಕು ಹೂಳಂಗಳ ಕಂ
ಡರಿಸು ನೆಲಗನ್ನವೆಂಬ
ಬ್ಬರ ಮುಸಗಿತು ಮಗಧನೃಪನ ಸೇನೆಯೊಳೆಲ್ಲಂ ೧೪೧

ಪಡೆ ಮುಕೆದು ಮೊಱೆದು ಲಗ್ಗೆಯ
ಬಿಡದೇಱಿತು ಕೋಂಟಿದೆನೆಗೆ ಎಸುವಂಬಿಗೆ ಮೇ
ಲಿಡುವೆತ್ತುಗಲ್ಗೆ ಸೂಸುವ
ಕಡುಗಾದಿಹ ಮಳಲ ಲೆಕ್ಕಿಸದೆ ರಿಪುಸೈನ್ಯಂ ೧೪೨

ವಚನ : [1]ಅಂತಿರ್ಪರಿಸೈನ್ಯಮುಂ ಕಂಡು[1]

ಚಂಪಕಮಾಲೆ
ಮುಸಗಿ ಕನಲ್ದು ಕೃಷ್ಣನುಱೆ ಸೈನ್ಯದೊಳಬ್ಬರಿಸುತ್ತೆ ಹೊಕ್ಕು ಪೂ
ಣ್ದಿಸುತಿರಲಾಗ ವೈಷ್ಣವ ಶರಂ ಗಜಕಾಯಿತು ಸಿಂಹ ವೀರಮಾ
ನಸರಿಗೆ ಮಾರಿಯಶ್ವಗೆ ಮೃಗಾದನ ತೇರಿಗೆ ಬಲ್ಸಿಡಿಲ್ಗಳಿಂ
ಬೆಸಕದೆ ಹೊಯ್ದು ನಿಟ್ಟೊರಸಿ ಕೊಂದುದು [2]ನೋಡಲನೇಕ[2] ಸೈನ್ಯಮುಂ ೧೪೩

ಕಂದ : ಕುರುರಾಯ ಕರ್ಣ ಸೈಂಧವ
ವರ ಮಾಗಧ ಶಕುನಿ ತುರುಕ ನೇಪಾಳಂ ಬ
ರ್ಬರ ದಂತವಕ್ತ್ರರೆಂಬೆಂ
ಬರಸುಬಲಂ ಕವಿದು ಮುಱಿದು ಭಂಗದೊಳಾಳ್ದರ್ ೧೪೪

ವಚನ : [3]ಈ ಪರಿಯೊಳ್ ಮಗಧಂ ಪದಿನೇೞ್ ಸೂಳ್ವರಂ ಬಂದು ಮುಱಿದು ಪೋಪುದುಂ ರಾಮ ಕೃಷ್ಣರ್ ನಾಮಿಲ್ಲಿರ್ದೊಡೆ ಜರಾಸಂಧಂ ಮರಳಿ ಬರ್ಪಂ ರಾಜ್ಯಕ್ಕೆ ಬಾಧೆಯೆಂದು ಪೊಱಮಟ್ಟು ಖಟ್ವಾಂಗೀ ತೀರದೊಳ್ ಪರಶುರಾಮನಿಂ[3] ಭವಿಷ್ಯೋತ್ತರ ವಚನಂಗಳಂ ಕೇಳಿ ಮುಂದೆ ಬರ್ಪುದುಂ

---

1 ಅಂತಪ್ಪ ಕೋಳಾಹಳಮುಂ ರಾಮಕೃಷ್ಣರ್ ಕಂಡು ಚಾರಿವರಿವತಿದಾಳುವೇರಿಯುಂ ಹತ್ತಿದವರಂ ಬೀಳಪೊಯ್ದು ಲಗ್ಗೆಯುಂ ತೆಗಸಿ ಪುರಮುಂ ಪೊರಮಟ್ಟು (ಚ) 2 ರಾಮನ ನೇಗಿಲಿತ್ತ ಖಂಡಿಸಿ ನೆಣಸಬ್ಬಿ ಮುಂತ ಕಣಿವಂತಿರೆ ಕೊಂದುದನೇಕ (ಚ) 3 ಅಂತು ಮಾಗಧಂ ಮುಱಿದು ಪೋಗಿ ಮಗುಳೆ ಬಂದು ಮುರಿದೀಪರಿ ಪದಿನೇಳ್ ಸೂಳ್ವರಂ ಬಂದೈನೂಱಪತ್ತಕ್ಷೋಹಿಣಿ ಬಲಮುಂ ನೀಗಾಡಿ ಪೋಪುದುಂ ರಾಮಕೃಷ್ಣರಾಳೋಚಿಸಂಗೈದು ನಾವಿಲ್ಲಿರ್ದೊಡೆ ಮಗಧಂ ಮರಳಿ ಬಪ್ಪಂ ರಾಜ್ಯಕ್ಕೆ ಬಾಧೆಯೆಂದು ಯಿರ್ವರುಂ ಪೊರಮಟ್ಟು ಕಟ್ವಾಂಗಿಯೆಂಬ ನದಿಯಲ್ಲಿ ಪರಶುರಾಮನಂ ಕಂಡಾತನಿಂ (ಚ)

ಕಂದ : ಕರವೀರಪುರದೊಳಿರ್ದಾ
ಸುರನೊರ್ವಂ ದುರ್ಜನಂ ಶೃಗಾಲನೆನಿಪ್ಪಂ
ಹರಿ ರಾಮರ ಬರವಂ ದೂ
ತರ ಮುಖದಿಂದಱಿದು ತಾಗಿದಂ ಹರಿ ಬಲರಂ ೧೪೫

ವಚನ : [1]ಅಂತು ಶೃಗಾಲರಕ್ಕಸಂ ಸೂರ್ಯಚಿತ್ರ ರಥದೊಳ್ ಕಾದುತ್ತಿರೆ ಕೃಷ್ಣನವನಂ ಮಡುಪಿಯವನ ರಥಮುಂ ಕೊಂಡು ಗೋಮಂತಪರ್ವತಕ್ಕೈದಿ ಪರಶುಧರಂ ಪೇಳ್ದಂತೆ ಬಲರಾಮಂಗೆ ನೀಲಕುಂಡಲಮುಮೇಕಾಂಬರಮುಂ ಕೃಷ್ಣಂಗೆ ಗರುತ್ಮನಿಂ ಕಿರೀಟಮುಂ ಕುಂಡಲಮುಂ ಬರೆಯವಂ ಕೈಕೊಂಡು ಸಮುದ್ರತೀರಕ್ಕೈದಿ[1]

ಕಂದ : ಬಾರೆಲೆ ಸಮುದ್ರ ನಿನ್ನೊಳ್
ದ್ವಾರಾವತಿಯೆಂಬ ಪಟ್ಟಣವ ಕಟ್ಟುವೆ ನೀಂ
ನೀರಂ ತೆಗೆಯೆನೆ ತೆಱಪಂ
ಓರಂತಿರಲಿತ್ತ ಕೃಷ್ಣಗೀಯದರಾರೋ ೧೪೬

ಅಗೞಾಳುವೇರಿ ಕೊತ್ತಲ
ಮುಗಿಲಟ್ಟಣೆ ಮಕರ ಬಿಬ್ಬಿ ಡೆಂಕಣಿ ಜೋಹಂ
ನೆಗೆದ ಸಿಡಿ ರತ್ನಮಯದಿಂ
ಸೊಗಯಿಸಿತಾ ದ್ವಾರ[2]ಕಾವತೀ ಘನನಗರಂ ೧೪೭

ವಚನ : ಅಂತು ದ್ವಾರಾವತಿಯಂ ಕಡಲೊಳ್ ಕಟ್ಟಿಸಿ ಮಧುರಾಪುರಜನಮುಂ [3]ಕಟುಪಲೆಂದು[3] ಮಧುರಾಪುರಿಗೈದಿಯಲ್ಲಿರ್ಪರನೆಲ್ಲರಂ ದ್ವಾರಕಿಗೆ[4] ಕಟುಹಿ ತಾವಿರ್ಪನ್ನಂ ನಾರದಂ ಪೋಗಿ ಕಾಲಯವನ[5]ನಂ ಕಂಡು

ಕಂದ : ಮಧುರೆಯೊಳಿರ್ಪಂ ಕೃಷ್ಣಂ
ಮದನಮುಖದಿಂ ನಿಮ್ಮ ಗೆಲ್ದನೆಂಬಾ ಹಮ್ಮಿಂ
ಕದುಬಿ ಜರಾಸಂಧಂ ಹೋ
ಗದ ಮುನ್ನಂ ಹೋಗಿ ಗೆಲ್ಲ[6]ವಡೆ[6]ವುದೆ ಕಜ್ಜಂ ೧೪೮

---

1 ಆ ಶೃಗಾಲರಾಕ್ಷಸಂ ಜರಾಸಂಧನೊಡನೆ ಬಂದು ಭಂಗಿತನಾದುದಂ ನೆನದು ಕೃಷ್ಣನೊಳ್ ಪ್ರೋಡರ್ಬ ಸೂರ್ಯಚಿತ್ರ ರಥನೆಂಬ ಗದೆಯಿಂ ಕಾದುತ್ತಿರಲವನಂ ಕೊಂದಾದಿತ್ಯದತ್ತ ರಥಮುಂ ಕಳವೆಕೊಂಡು ಗೋಮಂತ ಪರ್ವತಕ್ಕೆ ಬಂದು ಪರಶುರಾಮಂ ಪೇಳ್ದಂತೆ ರಾಮಂಗೆ ಯೇಕಕುಂಡಲಮುಂ ನೀಲಾಂಬರಮುಂ ಬರೆ ಕೃಷ್ಣಂಗೆ ಗರುತ್ಮನಿಂ ಕಿರೀಟಮುಂ ಕುಂಡಲಮುಂ ಬರಲವಂ ಕೈಕೊಂಡು ಸಮುದ್ರತೀರಕ್ಕೆ ಬಂದು (ಚ) 2 ಕೀ ಮಹಾ (ಗ) 3 ಕಳುಹಲ್ವೇಕೆಂದು ಮರಳಿ (ಚ) 4 ಗೆ ಬಂದು ಸಮಸ್ತ ಜನರಂ ದ್ವಾರಾವತಿಗೆ (ಚ) 5 ನೆಂಬ ರಾಕ್ಷಸನಂ ನೋಡಿ (ಚ) 6 ಪಡೆ (ಚ)

ವಚನ : [1]ಎಂದ ಮುನಿವಚನಮಂ ಕೇಳಿಯಾ ರಕ್ಕಸನಪರಿಮಿತಸೈನ್ಯದೊಡನೆ ದ್ವಾರಾವತಿಗೆ ಬರುತ್ತಿರೆ ಕೃಷ್ಣನೇಕಾಂಗಿಯಾಗವಂಗೆ ಇದಿರಾಗಿ ಮುಂದಂತೋಡುತ್ತೆ ಶತಶೃಂಗ ಪರ್ವತದೊಳ್ ಮುಚುಕುಂದಂ ರಾಕ್ಷಸ ಬಲಮಂ ಗೆಲ್ದು ಬಳಲ್ದು ದೇವರಿಂ ತನ್ನ ನಿದ್ರಾಭಂಗಂಗೆಯ್ದವನುರಿದು ಬೂದಿಯಪ್ಪ ವರಮಂ ಪಡೆದು ನಿದ್ರೆಗೈಯುತಿರಲಾ ಗುಹೆಯೊಳ್ ಕೃಷ್ಣನಡಗೆ ಕಾಲಯವನನುಂ ಮುಚುಕುಂದನನೊದೆಯೆ ಆತನ ದೃಷ್ಟಿಪಾತದಿಂ ಸುಟ್ಟು ಬೂದಿಯಾಗೆ ಮುಚುಕುಂದಂ ಕೃಷ್ಣನಿಂ ಮುಕ್ತಿಯಂ ಪಡೆದನಿತ್ತಲ್ ಬಲರಾಮಂ ಸೇನೆಯೆಲ್ಲಮನೊರಸೆ ಕೃಷ್ಣನುಂ ತಾನುಂ ದ್ವಾರಾವತಿಯೊಳಿರೆ[1]

ಕಂದ : ಕಾಲಯವನಳಿದ ಸುದ್ದಿಯ
ನಾಲಿಸಿ ಕಡುಮುಸಗಿಯಸುರ ಮಾಗಧರಾಯಂ
ಮೇ[2]ಲೆತ್ತಿ[2] ಬರ್ಪ ಸುದ್ದಿಯ
ನಾಲಿಸಿದಂ ಕೃಷ್ಣ ರಾಮನೊಡನಿಂತೆಂದಂ ೧೪೯

ಆ ಮಹಾದಳದ ಭಾರವ
ನೀ ಮಧುರೆಯ ಸೀಮೆ ತಾಳಲರಿಯದು ಪೋಪಂ
ಗೋಮಂತಗಿರಿಯ[3]ಲ[3]ನಿಬರ
ನೇ ಮರ್ದಿಪುದಿದುವೆ ಕಜ್ಜಮೆಲೆ ಬಲ[4]ಭದ್ರಾ[4] ೧೫೦

ವಚನ : [5]ಎಂದು[5] ಗೋಮಂತಪರ್ವತಕ್ಕೆ[6]ಯ್ದಿ[6] ಇರ್ವರುಂ ಬರ್ಪ ಮಗಧಸೈನ್ಯಮಂ [7]ಕಂಡು[7]

ಕಂದ : ಬಿಡದಿರ್ ಬಿಡದಿರ್ ಪಗೆಗಳ
ಪಿಡಿಯೇಕಾಂಗನೊಳೆ ಸಿಲ್ಕಿದರ್ ಲೇಸೆನುತುಂ
ಘುಡುಘುಡಿಸಿ ಮಾಗಧಂ ಬಲು
ಪಡೆಗಂ ಕೈವೀಸಿ ಮುಸುಕಿದರ್ ಭೋರೆನುತುಂ ೧೫೧

---

1 ಅಂತೆಂದು ಪೇಳ್ದ ನಾರದನ ನುಡಿಯಂ ಕೇಳ್ದು ಕಾಲಯವನಂ ಹದಿನೆಂಟಬ್ಬುದ ಸೇನೆ ಸಹಂ ದ್ವಾರಾವತಿಗೆ ಬರುತ್ತಿರೆ ಕೃಷ್ಣನಿದಿರಾಗಿ ಏಕಾಂಗದಿಂ ಕಾಣಲೆಂದು ಗವಾಕ್ಷದಿಂ ಪಳಂಚಿ ಕಾಲಯವನಗೆ ಮುಂದಂತೆ ಪೋಪುದಂ ಕಾಲಯವನಂ ಬೆನ್ನಟ್ಟಿ ಬಪ್ಪುದುಂ ಹರಿ ಸಿಕ್ಕದೆ ಪೋಗಿ ಶತಶೃಂಗಪರ್ವತದಲ್ಲಿ ಮಾಂಧಾತನ ಮಗನಪ್ಪ ಮುಚುಕುಂದಂ ರಾಕ್ಷಸ ಬಲವಂ ಕಾದಿ ಗೆಲ್ದು ವರವಂ ಪಡೆದು ನಿದ್ರೆಯಂ ಕೆಡಿಸಿದವಂ ಕೃಷ್ಣಂ ಪಡೆದ ಮಾನಸನಪ್ಪನೆಂಬ ವರವಂ ನಂಬಿ ನಿದ್ರೆಗೆಯ್ದಿರಲಲ್ಲಿಗೆ ಕೃಷ್ಣಂ ಪರಿದು ಗುಹೆಯೊಳ್ ಪೊಕ್ಕು ಆ ಗಲಾ ಕಾಲಯವನಂ ಪೋಗಿ ಕೃಷ್ಣನೆಂದು ಮುಚುಕುಂದನನೊದೆವುದುಂ ಮುಚುಕುಂದಂ ಕಣ್ದೆರೆದು ಆತನ ದೃಷ್ಟಿಪಾತದಿಂ ಯಿತ್ತಲು ಬಲಭದ್ರಂ ಸಮಸ್ತ ಸೇನೆಯುಮನೊರಸೆ ಕೃಷ್ಣನುಂ ತಾನುಂ ದ್ವಾರಾವತಿಯೊಳಿರೆ (ಚ)
2 ಲೇರಿ (ಗ) 3 ಲಿ (ಚ) 4 ರಾಮಾ (ಚ) 5 ಎಂದಿರ್ವರುಂ (ಗ ಚ) 6 ಬ (ಗ)
7 ಕಂಡುಮುಟ್ಟೆ ಬಪ್ಪುದು (ಚ)

ಅಂತೊತ್ತಿ ಬರ್ಪ ಸೇನೆಯ
ಕಂತುಪಿ[1]ತಂ[1] ರಾಮನೆಚ್ಚು [2]ಕಡಿಯುತ[2] ತಱಿಯು
ತ್ತಂ ತಱಿಸುತ್ತುಂ ಮಿಗೆ ಗೋ
ಮಂತವ ಸಾರಿದರು ಸಿಂಹ ಗುಹೆಯಂ ಪುಗುವೊಲ್ ೧೫೨

ವಚನ : ಅಂತು [3]ಗಿರಿ[3]ಯೊಳಡಂಗಿ ಬಲಮುಂ ಕೊಲುತ್ತಿರೆ ಮಾಗಧಂ ಕನಲ್ದು ಗಿರಿಯ ಸುತ್ತ[4]ಲುಮಿಂಧನ[4]ಗಳನೊಟ್ಟಿಸಿ ಗಿರಿಯೊಳ್ ದಹ್ಯಮಾನರಾದರಿಂದು ಹಗೆ ಹರಿಯಿತ್ತೆಂದು ಮಗಧಂ ಪೋದನಿತ್ತಲ್

ಕಂದ : ವರು[5]ಣಾಸ್ತ್ರದೊಳಗೆ[5] ಕಿಚ್ಚಂ
ಪರಿಹರಿಸುತ್ತೈದಿ [6]ದೋರಕೆಯ ಪುರಿಯಂ ತ
ತ್ಪು[6]ರವೆ ಹರಿ ರಾಮು[7]ರಿರ್ದರ್
ಭರದಿಂ[7] ಕೃಷ್ಣನ ಸಮೀಪಕೊರ್ವಂ ಬಂದಂ ೧೫೩

ನಡುಗುವ ತಲೆಯಿಂ ಮಿಡುಕುವ
ನಿಡುಗಡ್ಡದೆ ಮುಗ್ಗಿ ಕೆಮ್ಮಿ ಹರಿಹರಿಯೆನುತುಂ
ನಡೆತಂದು ಕೃಷ್ಣರಾಯಂ
ಗೊಡನಾಶೀರ್ವಾದ ವಚನಮಂ ಕೊಡುತಿರ್ದಂ ೧೫೪

ವಚನ : [8]ಅಂತಾಶೀರ್ವಚನಂಗೈದ ವಿಪ್ರನ ನೀಮಾರೆಂದು ಕೇಳಲವನಯ್ಯಾ ಭೀಷ್ಮಕನ ಪುತ್ರಿ ರುಕ್ಮಿಣಿಯೆಂಬ ಕನ್ಯಕೆ ತವ ರೂಪ ರೇಖಾ ವಿಭ್ರಮಂಗಳಂ ಕೇಳಿ ಮದನನದಟಿಂದೆ ಬೆದಱಿ ದೇವರನಲ್ಲಿಗೆ ಕರೆತರವೇಟ್ಟಳ್ ಆಕೆಯಗ್ರಜಂ ರುಕ್ಮನೆಂಬನಾಕೆಯಂ ಶಿಶುಪಾಲಂಗೀಯಲೆಂದು ಕರೆಯಲಟ್ಟಿರ್ಪಂ ನೀಮಿಾಗಳೆ ಬಂದು ಪುರಾಂತಿಕದುದ್ಯಾನದೊಳಿರ್ದೊಡೆ ನೋಂಪಿಯ ನೆವದೊಳವಳಂ ಕರೆತಂದಪೆನೆನೆ ಕೃಷ್ಣಂ ಪ್ರಯಾಣಸನ್ನದ್ಧನಾಗಿ ಬಲರಾಮನೊಡನೆ ಸೈನ್ಯದೊಡನೆ, ಪಿಂದೆ ಬರ್ಪುದೆಂದು ನಿಯಾಮಿಸಿ ತೇರನೇಱಿ ಮುಂದೆ ಪೋಗಿ ವನದೊಳಿರೆ ಬ್ರಾಹ್ಮಣಂ ರುಕ್ಮಿಣಿಗೆ ಪೇೞಿಯುವಳ್ ನೋಂಪಿಯ ನೆವದಿಂ ಬರುತಿರ್ದಳೆಂತೆನೆ[8]

---

1 ತರ್ (ಕ) 2 ಕೆಡಹಕು (ಚ) 3 ಗೋವಂತಗಿರಿ (ಗ ಚ) 4 ಇಂಧನಂ (ಚ) 5 ಣ ಬಾಣದೊಳೆ (ಗ ಚ) 6 ದ್ವಾರಕಾವತಿಯೆಂಬಾ ಪು (ಚ) 7 ರತಿಸುಖಂ ಯಿರುತಿರೆ (ಚ) 8 ಅಂತಾಶೀರ್ವಾದವಂ ಮಾಡಿದ ವಿಪ್ರನಂ ನೋಡಿಯೆಲ್ಲಿಂದ ಬಂದಿರೆನಲು ಅಯ್ಯಾ ಭೀಷ್ಮಕರಾಯನ ಮಗಳು ರುಕ್ಮಿಣಿದೇವಿಯೆಂಬ ಕನ್ಯಾರತ್ನಂ ದೇವರ ರೂಪರೇಖೆ ವಿಲಾಸವಂ ಮದನನಪಟಿಂದೆ ಬೆದಱಿ ದೇವರಸಲ್ಲಿಗೆ ಕರೆತರವೇಳಿ ... ರುಕ್ಮನೆಂಬನಾಕೆಯಗ್ರಜಂ ಶಿಶುಪಾಲಂಗೆ ಕೊಡುವೆನೆಂದು ಕರೆಯಲಟ್ಟಿದ ನೀವೀಗಳೆ ಬಂದು ಆಕೆಯಿರ್ಪ ಪಟ್ಟಣದ ಹೊರತೋಟದೊಳಿರ್ದಾರೆ ನೋಂಪಿಯ ನೆವದಲ್ಲಿ ಕರೆತಂದಪೆನೆನೆ ಕೃಷ್ಣಂ ಪ್ರಸ್ಥಾನ ಭೇರಿಯಂ ಪೊಯಿಸಿ ರಾಮನಂ ಕರೆಸಿ ಸೈನ್ಯಸಮೇತವಾಗಿ ನೀವು ಚಾತುರ್ಬಲಸಹಿತ ಹಿಂದೆ ಬನ್ನಿಮೆಂದು ತಾಂ ತೇರನೇಱಿ ಮುಂದೆ ಪೋಗಿ ವನದೊಳಿರೆ ಬ್ರಾಹ್ಮಣಂ ರುಕ್ಮಿಣಿಗೆ ಪೋಗಿ ಪೇಳೆಯವಳ್ ನೋಂಪಿಯ ನೆವದಿಂ ವನಕ್ಕೆ ಬರುತಿರ್ದಳದೆಂತೆಂದೊಡೆ (ಚ)

ಮಹಾಸ್ರಗ್ಧರೆ

ತನು ಗಂಧಾಸಕ್ತ ಭೃಂಗೀ ಘುಮುಘುಮು ನಿನದಂ ಪಾದಪಂಕೇಜ ಮಾಣಿ
ಕ್ಯ ನಿಕಾಯ ಸ್ಫೂರ್ತಿ ರುದ್ಯಜ್ಝಣಝಣದುಲಿಯುಂ ಮೇಖಲಾ ಕಿಂಕಿಣೀ ನ
ರ್ತನ ಮಧ್ಯಾಂದೋಳ ಪಿಂಡೋದಿತ ಕಿಣಿಕಿಣಿ ತಂನೋಜಜ್ಯೈದಿತ್ತು ಸನ್ಮೋ
ಹನಮಂತ್ರ ಪ್ರಾಣ ವರ್ಣಕ್ರ[1]ಮು[1] ವಿಮಲ ಗುಣಾಲಂ[2]ಬ[2]ಕಾಂತಾ ಕದಂಬಂ ೧೫೫

ವಚನ : ಅಂತು ಬರ್ಪ ಕಾಂತಾಕದಂಬ[3]ದ ಮಧ್ಯದೊಳ್[3]

ಮತ್ತೇಭವಿಕ್ರೀಡಿತ

ತಳಿರುಂ ಹೇಮ ನಿಷಂಗಮುಂ ಕದಳಿಯುಂ ಕುಂಭಂಗಳಂ ಕೌಂಗಿನು
ಜ್ಜ್ವಳ ರೇಖಾತ್ರಯಮುಂ ಗಭೀರಸರಮುಂ ಪೂವಲ್ಲಿಯುಂ ಕಂಜಕು
ಟ್ಮಲಮುಂ ವಾರಣಹಸ್ತಮುಂ ವಿಮಲರೇಖಾಚಂದ್ರ ಪ್ರದೀಪ್ಯ ಮುಂ
ಡಲಮುಂ ಸಾಲಿಡುವಂತೆ ಬಪ್ಪ ಸತಿಯುಂ ಕಂಡಂ ಸರೋ[4]ಜೇಕ್ಷಣಂ[4] ೧೫೬

ಕಂದ : [5]ಭೂನುತ[5] ಸನ್ಮೋಹ[6]ನಮುಂ[6]
ಮಾನಿನಿಯಾಕಾರಮಾಯಿತಲ್ಲದೆ ನೋಡಲ್
ಮಾನಿನಿಯೆಂಬರೆ ಎನುತನು
ಮಾನದಿನೀಕ್ಷಿಸಿದ ಮೋಹದಲಿ ರುಕ್ಮಿಣಿಯುಂ ೧೫೭

ವಚನ : ಅಂತು [7]ಬಂದ ಕಾಂತಾಮಣಿಯುಂ ದೇವಶಿಖಾಮಣಿಗೆ ವಿಪ್ರಂ ತೋಱಿ[7]

ಮತ್ತೇಭವಿಕ್ರೀಡಿತ

ಅ[8]ದೆ[8]ಕೋ ನಿನ್ನ ಕಟಾಕ್ಷ ಚಾರುಮಧುಸಸ್ಮೇರಾಬ್ಜ ನೋಡ್ಸೈಯ್ಯುಮ
ತ್ತ[8]ದೆ[8]ಕೋ ನಿನ್ನ ವಚಸ್ಸುಧಾ ಮಧುರಜೀವಂ ಜೀಯ ಮಾತಾಡು ಮೇ
[8]ಣ[8]ದೆಕೋ ನಿನ್ನಯ ಬಾಹುಕಲ್ಪಲತಿಕಾ ಮಂದಾರ ಮೈಸೋಂಕು ಮೋ
ಹದ ಮಾತೃಸ್ಥಲಮಪ್ಪ ರುಕ್ಮಿಣೀ[9]ಯ[9] ಕಂ[10]ಡೈ[10] ಕಂಜಪತ್ರಾಂಬಕಾ ೧೫೮

ವಚನ : [11]ಎಂದು ಬಿನ್ನಪಂಗೆಯ್ಯೆ ಕೃಷ್ಣಂ ರುಕ್ಮಿಣಿಯುಂ ಕೈವಿಡಿದು ರಥದೊಳಿರಿಸಿ[11] ಬರ್ಪನ್ನಂ ಪುರದೊಳ್ ಗಜಬಜಂ ಮಸಗಿ

---

[1] ತು (ಗ) [2] ಜಂ (ಗ) [3] ನಂ ಕೃಷ್ಣಂ ಕಣ್ಣೆಟ್ಟು ನೋಡಲಾ ಮಧ್ಯದಲ್ಲಿ (ಚ) [4] ಜಾಂಬಕಂ (ಚ) [5] ಮೂಲೋಕದ (ಗ) [6] ನ (ಗ, ನದಿ (ಚ) [7] ಬಪ್ಪಕಾಂತಾರತ್ನಮಂ ಪೂರ್ವಸೂಚಕ ವಿಪ್ರಂ ಕೃಷ್ಣಂಗೆ ಸನುಸ್ಕರಿಸಿ (ಚ) [8] ನ (ಗ) ದ (ಚ) [9] ಯಂ (ಕ ಚ) [10] ಡಂ (ಗ) ದಂ (ಚ) [11] ಎಂಬ ಬಿನ್ನಹದ ಸಮಯದಲ್ಲಿ ಕೃಷ್ಣಂ ಭೂಸುರನಂ ಸನ್ಮಾನಿಸಿ ರುಕ್ಮಿಣಿಯುಂ ಕೈವಿಡಿದು ಸುತ್ಕೈಸಿ ರಥದೊಳಿರಿಸಿ (ಚ)

ಕಂದ : ಎಲೆಲೆ ತುಱುಗಾಹಿ ತಂಗಿಯ
ನೆಳವೊಯ್ದಂ ಗಡಮುವಂಗೆ ಪಣೆಯೊಳ್ ಕಣ್ಣೇ
ಬಲಮುಂ ಬರವೇೞ್ಕೆನುತುಂ
ಕಳಕಳದಿಂ ರುಕ್ಮನೈದಿದಂ ಸೂೞೆಯೊಳುಂ ೧೫೯

ವಚನ : ಅಂತು ರುಕ್ಮಂ ಬಂದು ಬಾಣಾಸಾರಮುಂ ಕರೆಯೆ ಕೃಷ್ಣಂ [1]ಬಿಲ್ವಿಡಿದು ಅವನ ಮಾರ್ಗಣೆಗಳಂ ಹೊಱಸೂಸಿಯವನಂ ರಥದೊಳ್[1] ಪಾಶಬದ್ಧನಂ ಮಾಡಲಿತ್ತ ಪುರದೊಳ್

ಕಂದ : ಹರಹರ ಸಿಂಹದ ಪೊಲನಂ
ನರಿ ಪೊಕ್ಕಂತಾಯಿತೆನುತೆ ಪಲ್ಮೊಱೆಯುತ್ತಂ
ದುರವಣಿಸಿ ದಂತವಕ್ತ್ರ
ಸುರನೈದಿದ ಹರಿಯು ಹರಿ[2]ಯನೈದು[2]ವ ತೆಱದಿಂ ೧೬೦

ಹೋಗದಿರು ಗೋಪ ಪುರದೊಳ್
ಮಾಗಧನಂ ಮುಱಿಯಲಿಱಿದ ಬಲುಹಂ ಮಱೆಯಿ
ನ್ನೇಗುವೆ ನಿನಗಾಱೆನುತುಂ
ತೂಗಿದ ಮಣಿಮಯದ ಗದೆಯನಬ್ಜಗದಾಂಗಂ ೧೬೧

ವಚನ : [3]ಆಗಳ್[3] ಕೃಷ್ಣಂ ಕೌಮೋದಕಿಯುಂ [4]ಪಿಡಿದು[4]

ಕಂದ : ಒಂದೆ[5]ರಡು[5] ಮೂಱೆನುತ್ತುಂ
ಸಂದಣಿಸಿದ ಹೊಯ್ಲ ತಪ್ಪಿ ಕೃಷ್ಣಂ ಗದೆಯಿಂ
ಕಂದರಮನೆಱಗಿ ರಿಪುವಂ
ಕೊಂದಂ ಸುರದುಂದುಭಿಸ್ವನಂ ನೆಗೞ್ವಿನಂ ೧೬೨

ವಚನ : ಆ ಸಮಯದೊಳ್ [6]ಕೃಷ್ಣಂ ಸುಮ್ಮನೆ ಪೋದೊಡೆ[6] ಚೋರವೀರತ್ವಮಪ್ಪು[7]ದೆಂದು[7] ಪಾಂಚಜನ್ಯಮುಂ ಪೂರ್ಯೈ[8]ಸೆ[8]

---

1 ಶಾರ್ಙ್ಗಮಂ ಪಿಡಿದು ಯಿದಿರಪ್ಪುದುಂ ರುಕ್ಮಿಣಿ ಎಲೆದೇವಾ ನಿಮ್ಮ ಮೈದುನನಿಂ ರಣವು ಬಿದಲ್ಲಿ ಕೆಕ್ಕಿಸಂ ಜಕನನೆನೆ ರುಕ್ಮಿಣಿಯ ಬಿನ್ನಹಮಂ ಸೈರಿಸಿ ರುಕ್ಮನ ಚಾಪಮಾರ್ಗಣೆಗಳಂ ಕಡಿದು ಅವನಂ ಪಿಡಿದು ರಥದಲ್ಲಿ (ಚ) 2 ಯೆಯ್ದು (ಗ) 3 ಆ ಸಮಯದೊಳ್ (ಚ) 4 ತಳೆದು ಧರಣಿ ತಳಕ್ಕವತರಿಸಿ (ಚ) 5 ರಲ್ (ಚ) 6 ರುಕ್ಮಂ ಸಿಕ್ಕಿದಂ ದಂತವಕ್ರಂ ಬಿದ್ದಂ ಈ ಸಮಯದೊಳ್ ಸುಮ್ಮನೆ ಪೋದರೆ (ಚ) 7 ದೆಂದು ಕೃಷ್ಣಂ (ಚ) 8 ಸೂದುಂ (ಚ)

ಸ್ರಗ್ಧರೆ

ಅಂಭೋಧಿವ್ರಾತದೊಳ್ ಘೋರೆನುತೆ ಕುಲಗಿರಿವ್ಯೂಹದೊಳ್ ಘುಮ್ಮೆನಲ್ ಪ್ರಾ
ರಂಭಂಗೈವುತ್ತೆ ದಿಕ್ಕುಂಜರದ ಕಿವಿಗಳೊಳ್ ಘೀಳೆನುತ್ತುಬ್ಬಿ ದೈತ್ಯ
ಸ್ತಂಭಾಕಾರಂಬೊಲಾಗಲ್ ರಿಪುಗಳೆದೆಗಳೊಳ್ ಧಿಕ್ಕು ಧಿಕ್ಕೆಂದೆನಲ್ಕಂ
ತುಂಬಿತ್ತೈಯ್ಯಯ್ಯ ಮೂಲೋಕಮನಘಕುಲವಿಚ್ಛೇದಮಾ ಶಂಖನಾದಂ ೧೬೩

ಕಂದ : ಆ ಶಂಖಧ್ವನಿಯಂ ಕೇ
ಳ್ದಾ ಸಾಲ್ವ ಸಮೇತ ಮಗಧ ಶಿಶುಪಾಲಾದಿ ಮ
ಹಾ[1]ಸಹಸಿಗಳಾ ಪುರದಿಂ[1]
ದಾಸುರನುಣ್ಮುತ್ತಲೈದಿದರ್ ಮುರಹರನಂ ೧೬೪

ವಚನ : ಅಂತು [2]ರಾಕ್ಷಸ ಬಲಂ[2] ಬೆರಸು[3]ನ್ನ[3]ಮಿತ್ತಂ ಕೃಷ್ಣಂ ತನ್ನ ಯಾದವ ಬಲಮಂ ಕೂಡಿ[4]ಕೊಳ್ವುದುಂ[4]

ಕಂದ : ಬೆರಸಿದವೆರಡು ದಳಂ ಮಿಗೆ
ಸುರಿವಂಬಿನ ಮಱೆಯ ಬೀಱ್ವ ಪೆಣಜೊಟ್ಟಲಿನಿಂ
ಮೆಱೆವ ಬಲುಬೊಬ್ಬೆಯಿಂ ಪೊ
ಯ್ದೊರೆಸಿದುದಿರ್ದೆಸೆಯ ವೀರಪಡೆ ಕಡುಭರದಿಂ ೧೬೫

ವಚನ : ಆ ಸಮಯ[5]ದೊಳ್[5]

ಚಂಪಕಮಾಲೆ

ಗಜದೊಡಲನ್ನು ಸೀಳಿ ತುರಗಂಗಳ ತುಂಡಿಸಿ ತೇರ ನೆಗ್ಗಿ ಹೊ
ಯ್ದ ಜಗಿಜಿ ಮಾಡಿ ಕಾಲವರ ಮಾಸಧ ಸಾಲ್ವರೆನಿಪ್ಪ ರಾಕ್ಷಸ
ವ್ರಜದೆಡೆಯಲ್ಲಿ ಮುಮ್ಮೊನೆಯ ಬೋಱಗಳಂ ನೆಱೆ ಹೂಱ ಯಾದವರ್
ವಿಜಯವನಾಂತು ಕೃಷ್ಣನೊಡನೈದಿತು [6]ಮೋರಕೆ[6]ಯಂ ನಿರಂತರಂ ೧೬೬

ವಚನ : ಅಂತು ದ್ವಾರಕೆಯಂ [7]ಪುಗಲ್ ಭೀಷ್ಮಕಂ ಬಂದು ಮಣಿದು[7] ರುಕ್ಮಿಣಿಯಂ ಸುಮುಹೂರ್ತದಿಂ ಧಾರೆಯನೆಱೆವೆನೆಂದು

---

[1] ಸಾಹಸರಾ ಪುರದಿಂ (ಚ) [2] ಸಮಸ್ತ ರಾಕ್ಷಸ ಸಮೂಹಂ (ಚ) [3] ನ್ನಕರ (ಚ) [4] ಕೊಂಬುದುಂ (ಚ) [5] ದಲ್ಲಿ ಕೃಷ್ಣ ಬಲಭದ್ರ ಸಾತ್ಯಕಿ ಭೂರಿಶ್ರವ ಕೃತುವರ್ಮ ಮುಖ್ಯರಾದ ಮಹಾರಥರೊಗ್ಗೊಡೆಯುದೇಱಿ (ಚ) [6] ದ್ವಾರಕಿ (ಚ) [7] ಕೃಷ್ಣಂ ಪೊಗತೊಡಂ ಭೀಷ್ಮಕರಾಯಂ ಹಿಂತನೆ ಬಂದು ಕೃಷ್ಣಂಗೆ ಪಾದಾಕ್ರಾಂತರಾಗಿ (ಚ)

ಕಂದ : ಹಸೆಯಿಂ ಚಪ್ಪರದಿಂದಂ
ಹೊಸಕುಂಭಂ ಲಾಜೆಹೋಮ ಕನ್ನಡಿ ಕಳಶಂ
ಶಶಿಮುಖಿಯರ್ ಬಾಂಧವರಿಂ
ದೆಸೆಯೊಳ್ ಸಡಗರದ ಸಂಭ್ರಮಂ ತುಂಬುವಿನಂ ೧೬೭

ವಚನ : [1]ಇಂತು ಮಹಾಸಂಭ್ರಮದಿಂ ವಿವಾಹಮಾಗಿ ಉಚಿತ ಸನ್ಮಾನದಿಂ ಭೀಷ್ಮಕನಂ ರುಕ್ಮನಂ ಮನ್ನಿಸಿ ಕಳುಪಲಿತ್ತಲ್[1]

ಕಂದ : ನಳಿನದಳಾಕ್ಷಂ ರುಕ್ಮಿಣಿ
ಸಲೆ ಭಾಗ್ಯಸುಖಾನುಭಾವದಿಂದಂ [2]ದಿನಮಂ
ಕಳೆಯು[2]ತ್ತಿರೆ ಬೆವರುತ್ತುಂ
ಸುಳಿದಂ ಶ್ರೀಕೃಷ್ಣನಿದಿರಿನೊಳ್ ಚರನೊರ್ವಂ ೧೬೮

ವಚನ : [3]ಆ ಚರನಂ ಶ್ರೀಹರಿ ಮನ್ನಿಸಿ ಕೇಳ್ವುದುಂ[3]

ಕಂದ : ಜೀಯ ಸತ್ರಾಜಿತೆನಿಪಾ
ರಾಯನ ಪುರದಿಂದೆ ಬಂದೆನೇಕಾಂತದೆ ನಿ
ರ್ಮಾಯಾವಧಾರು ಬಿನ್ನಪ
ಶ್ರೀಯರಸಾ ಎಂದೊಡುಳಿದುವೊಡ್ಡೋಲಗಮಂ ೧೬೯

ವಚನ : ಅಂತೇಕಾಂತಸಮಯ[4]ದೊಳಾತಂ ದೇವ ಪಿಂದೊರ್ಮೆ ನೀಮೆಮ್ಮ ರಾಯನೆಡೆಗೆ ಬಂದಿರ್ದಾಗಳ್ ಆ ರಾಯಕುವರಿ ನಿಮ್ಮಂ ಕಂಡು ವಿರಹಸಂತಪ್ತೆಯಾಗಿರ್ದಪಳೆಂತೆನೆ[4]

ಕಂದ : ಅಯ್ಯಂಬನೆನಿಸುವಂಗಜ
ನಯ್ದಾಱೀಳೆಂಟು ಸಾಸಿರಂಬವನಾದಂ
ಮೈಗೆಟ್ಟವರೂಪಾಂತಂ
ಕೈಯ್ಗಾಯೆಂ ಕಾವನಾಗಿ ಸತ್ರಾಜಿತೆಯಂ ೧೭೦

---

1 ಸುಳಿವ ಚಾಮರದಿಂ ಮೊಳಗುವ ವಾದ್ಯದಿಂ ಎತ್ತುವ ಗುಡಿಯಿಂ ಆಡುವ ವೇಜಿ... ದಿಂ ನೆಗೆದ ಪಲ್ಲವ ಸತ್ತಿಗೆಗಳಿಂ ಕಂಚುಕಿವಿಡಿದು ಪರಿವ ಸಂಭ್ರಮಕಾಱರಿಂ ನೆರದ ಮಂಗಳ ದ್ರವ್ಯದ ಹೊಱೆಗಳಿಂ ಸಿಂಗರಂಗೆಯ್ದ ವೀಧಿಗಳಿಂ ಪೊತ್ತೊತ್ತೆಯಿಂ ನೆರದ ವಿಪ್ರವೃಂದದಿಂ ಸಂಭ್ರಮಿಸುವ ನಿಬ್ಬಣಿಗರಿಂ ಭೋಜನಕ್ಕೆ ಬರ್ಪ ಸಮಸ್ತ ಜನರಿಂ ಬಾಗಿಲ ತೋರಣಂಗಳಿಂ ಯಿಂತಿವು ಮುಂತಾದ ಸಮಸ್ತ ಸಂಭ್ರಮದಿಂ ಕೃಷ್ಣರಾಯಂ ವಿವಾಹವಾಗಿ ಭೀಷ್ಮಕರಾಯನಂ ಆತನ ಮಗ ರುಕ್ಮಕನಂ ವಸ್ತ್ರಾಲಂಕಾರಂಗಳಿಂ ಮನ್ನಿಸಿ ಕೃಷ್ಣಂ ಕಳುಹಿ ಸುಖದಿಂದಿರೆ (ಚ) 2 ಮಿಗೆದಿನಗಳಿವು (ಚ) 3 ಅಂತು ಬರಲವನಂ ಕೃಷ್ಣಂ ಮನ್ನಿಸಿ ನೀನಿದಾರೆಂದು ಕೇಳ್ವುದುಂ (ಚ) 4 ದಲ್ಲಿ ದೂತನಂ ಕರಮೂಮಂ ಬಾದು ಕೈಮುಗಿದು ಸ್ವಾಮಿ ಹಿಂದೊನ್ಮೆ ನಮ್ಮ ರಾಯನ ಮನೆಗೆ ಬಂದಿರ್ದರಿ ಗಡಮಾ ದಿನಂ ಮೊದಲಾಗಿ ನಮ್ಮ ರಾಯರ ಕುಮಾರಿತಿ ಸತ್ಯಭಾವೆಯೆಂಬ ಶೃಂಗಾರನಿಧಿಗೆ ವಿರಹಂ ಸಂಪೂರ್ಣವಾಗಿರ್ದಪುದು ಅದೆಂತೆಂದೊಡೆ (ಚ)

ಚಂಪಕಮಾಲೆ

ವನಿತೆಯ ಕಾಮದಾಹ ನಿಡುಸುಯ್ಯೆಯ ಜೊನ್ನಮನಟ್ಟೆ ಜೊನ್ನವ
ಬ್ಜನಪುಗೆಯಬ್ಜನಿಂ ಹರನ ನೆತ್ತಿಯ ಬಾಂಬೊಳೆಯೆಂಬು ತೆಕ್ಕೆ ತೆ
ಕ್ಕನೆ ಕುದಿಯಲ್ಕೆ ಕಣ್ಗೆ ಬಿಸಿವೆಗ್ಗಳಮಾಗೆ ತದುಷ್ಣಕೀಶ್ವರಂ
ತನಿ ಸೊಗಸಿಂದಲ[1]ದ್ರಿಸುತೆಯಂ ಬಿಡದಪ್ಪುವನೇನ ಪೇಳುವೆಂ ೧೬೧

ವಚನ : [2]ಎಂದು ದೇವರ್ ಬಂದು ಸತ್ರಾಜಿತನಂ ಕೇಳೆಪಂ ಸತ್ಯಭಾಮೆಯುಂ ಕೊಟ್ಟಪೆನೆನೆ ಕೃಷ್ಣಂ ಮನದೆ ಕೊಂಡು ತನ್ನಗರಕ್ಕೆ ಪೋಪುದುಂ[2]

ಕಂದ : ಬರಲಿದಿರ್ವಂದಾ ಕೃಷ್ಣನ
ಚರಣಾಬ್ಜ[3]ಕೆ ಮಣಿದು[3] ಭೂಪ ಸತ್ರಾಜಿತು ಮಂ
ದಿರಕೊಯ್ದು ಬಂದ ರಥ ಕರಿ
ತುರಗಂ ಕಾಲಾಳ್ಗೆ ಕೊಟ್ಟ ಬೀಡಾರಗಳಂ ೧೬೨

ನಗಧರ ನಿಮ್ಮಯ ಸಿರಿಪದ
ಯುಗವೆನ್ನ ಪುರಕ್ಕೆ [4]ಬಂದ[4] ಭಾಗ್ಯಮ[5]ದೇನೆನೆ
ನಗುತ ಹರಿಯೆಂದ ಕನ್ಯಾ
ರ್ಥಿಗಳಾಗಿಯೆ ಬಂದೆವಿನ್ನು ನೀಂ ಪೇಳಿರಸಾ ೧೬೩

ಕುಲಶೀಲಂ ಭಾಗ್ಯಂ ಭುಜ
ಬಲ ನಿಮ್ಮಿಂದಾರ್ಗೆ ಕೊಟ್ಟೆನೀಗಳೆ ಸುತೆಯಂ
ಒಲಿದಂತೆ ರಕ್ಷಿಸೆನುತುಂ
ಸಲೆ ಸಂಭ್ರಮದಿಂದೆ ನೆಗಳಿದಂ ಪರಿಣಯಮಂ ೧೬೪

ವಚನ : [6]ಅಂತು ವಿವಾಹಮಾಗಿ ದ್ವಾರಕಿಗೆ ಬಂದು ರತಿರಾಜ್ಯವಿಭವದಿಂದಿರೆ[6]

---

[1] ವಾ (ಚ) [2] ಯಿಂತಪ್ಪ ಪಿರಿಯಾನಸ್ಥೆಯಿಂದಿರ್ದುದಂ ಪೇಳ್ದ ದೇವರು ಬಂದು ಬಾಂಧವತ್ವದಿಂ ಸತ್ರಾಜಿನೃಪನಂ ಪೆಣ್ಗೇಳೆ ಸತ್ಯಭಾಮೆಯಂ ಕೊಟ್ಟಪಂ ಎನ್ನ ಬಿನ್ನಪಮಂ ಕೇಳಿಯೆನೆ ದೂತನ ಮಾತಂ ಮನಸದೆಗೊಂಡು ಕೃಷ್ಣಂ ಸತ್ರಾಜಿನ್ನಗರಕ್ಕೆ ಪೋಪುದುಂ (ಛ) [3] ಕೈಜಿಗಿ (ಚ) [4] ಬಪ್ಪ (ಚ) [5] ವಿ (ಚ) [6] ಅಂತು ಸಂಭ್ರಮದಿಂ ವಿವಾಹಮಾಗಿಯುಮು ಸಮಸ್ತ ವಸ್ತುವಂ ಬಳುವಳಿಯಂ ಕೊಟ್ಟು ವಧೂವರರಂ ದ್ವಾರಕಿಗೆ ಕಳುಪೆ ಕೃಷ್ಣಂ ಪುರಮಂ ಪೊಕ್ಕು ನೋಟವ ಲವಲವಿಕೆಯಿಂ ನುಡಿಯು ವೈಖರಿಯಿಂ ರತಿರಾಜ್ಯವಿಭವದಿಂದಿರೆ ಕೆಲವು ದಿವಸದಿಂ ಮೇಲೆ (ಚ)

ಕಂದ : ರುಕ್ಮಾಬ್ಜವದನ ಮಧುಮಯ
ರುಕ್ಮಾರಿಗಮನುಪಮ ಸ್ವರೂಪೆಗೆ ನೆಗಳ್ದಾ
ರುಕ್ಮ ಸಹಜಾತೆಯೆನಿಸುವ
ರುಕ್ಮಿಣಿದೇವಿಯರಿಗಾದುದೊಪ್ಪುವ ಗರ್ಭಂ ೧೭೫

ಗರ್ಭಮುಮಾ ರುಕ್ಮಿಣಿಗಂ
ನಿರ್ಭರ ತಾನಾಗೆ ತುಂಬೆ ನವಮಾಸಂ ತಾಂ
ಅರ್ಭಕನುಂ ಮುನಿಮಾನಸ
ನಿರ್ಭೇದ್ಯನ ಪಡೆದಳೊಲ್ದು ಕುಸುಮಾಯುಧನಂ ೧೭೬

ವಚನ : ಅಂತು [1]ಪುತ್ರೋದಯಮಾಗಳ್[1] ನಾಮಕರಣಂಗೈದ[2]ಂದು ರುಕ್ಮಿಣೀಕೃಷ್ಣರ್ ಹಸೆಯಮೇಲಿರಲಾಗಳ್[2] ನಾರದಂ ಪಾರಿಜಾತಪ್ರಸೂನಮಂ ಕೃಷ್ಣಂಗೆ ಕೊಟ್ಟು ರುಕ್ಮಿಣಿಗಂ ಮುಡಿಯಿಸಿ [3]ನಿನ್ನ ಕಾಂತೆಯರೊಳ್ ರುಕ್ಮಿಣಿಗೆಣೆಯಾದವರಿಲ್ಲವೆಂದವನಿಂ ಪೇಳಿಸಿ ಸತ್ಯಭಾಮಾಗೃಹಕ್ಕೈದಿ ಸತ್ಕೃತನಾಗಿ ಪೇಳ್ದ ನಾಂ ಪಾರಿಜಾತಕುಸುಮಮನಿತ್ತರೆ ಕೃಷ್ಣಂ ರುಕ್ಮಿಣಿಗದನಿತ್ತಾಕೆಗೆ ಸರಿಯಾದ ಕಾಂತೆಯರಿಲ್ಲೆಂದು ಪೇಳ್ದನೆನೆ ಸತ್ಯಭಾಮೆ ಪ್ರಣಯಕಲಹದಿಂದಿರ್ದಳದನರಿದು ಕೃಷ್ಣನೈತಂದು[3]

ಕಂದ : ಮುನಿಸೆಂಬ ಹಿಮಕೆ ಕೊರಗಿದ
ವನಜಾನನ ಬಿಳಿಯ ಸೀರೆ ತಳೆಗತ್ತುರಿಯಿಂ
ದಿನಿದಧರಂ ರಸವಾರಿದ
ತನ್ನಿನೇಹದ ಸತ್ಯಭಾಮೆಯಂ ನೆಱೆ ಕಂಡಂ ೧೭೭

---

1 ಪುತ್ರೋತ್ಸವಮಾಗಲೊಡಂ (ಚ) 2 ಒಕ್ಕೆ ಕೃಷ್ಣಂ ರುಕ್ಮಿಣಿ ಸಮೇತಂ ಹಸೆಯೊಳಿರಲಾ ಸಮಯದಲ್ಲಿ (ಚ) 3 ಎಲೆ ಕೃಷ್ಣ ನಿನ್ನ ಕಾಂತೆಯರ್ ಸರಿಯಲ್ಲನೆಂದು ನಾಮಕರಣಮಂ ಮಾಡಿಸಿ ನಾರದ ಸತ್ಯಭಾಮಾದೇವಿಯಲ್ಲಿಗೆ ಪೋಗಿ ಅಮ್ಮಾ ಪಾರಿಜಾತದ ಹೂವಂ ಕೊಟ್ಟರೆ ಕೃಷ್ಣಂ ರುಕ್ಮಿಣಿಗೆ ಸಮಾನ ಸ್ತ್ರೀಯರಿಲ್ಲೆಂದು ಆಕೆಗೆ ಕೊಟ್ಟನೆಂದು ಪೇಳೆ ಪೋಪುದುಂ ಸತ್ಯಭಾಮೆ ಪ್ರಣಯಕಲಹದಿಂದಿರೆ ಕೃಷ್ಣಂ ತಿಳಿದು ಬಂದ. (ಚ)

ವಚನ : [1]ಎಲೆ ಮದಗಜಗಾಮಿನಿ ರುಕ್ಮಿಣಿಗಾಂ ಪಾರಿಜಾತದ ಪೂವನಿತ್ತೆನೆಂದು ನೀಂ ಮುನಿಯಲೇಕೆ ಆ ವೃಕ್ಷವನೆ ತಂದು ನಿನ್ನ ಮನೆಯ ಮುಂದೆ ನಿಲಿಸುವೆನೆಂದು ಸಂತೈಸಿ ವೈನತೇಯನಂ ನೆನೆಯಲಾತಂ ಬರಲವನ ಬೆನ್ನಂ ಸತ್ಯಭಾಮೆಯುಂ ಕೃಷ್ಣನುಮೇಱಿ ಅಮರಾವತಿಗೈದಿ ನಂದನನುಂ ಮುತ್ತಿ ಬಂದ ಹುಯ್ಯಲಿಗಾಂತ ಬಿಡೌಜ ಪರಿವಾರಮ ನೋಡಿಸಿಯವನಿಂ ಮನ್ನಣೆವಡೆದು[1] ಪಾರಿಜಾತ ವೃಕ್ಷಮುಂ ಕೈಕೊಂಡು ಸತ್ಯಭಾಮೆಗಿತ್ತು ಸುಖದಿಂದಿರೆ

ಕಂದ : ಸುರಕಾಂತೆಯರಂ ನರಕಾ
ಸುರ[2] ಷೋಳ[2]ಸಹಸ್ರ[3]ವನ್ನು[3] ನೆಲಮಾಳಿಗೆಯೊಳ್
ಪರಿಪರಿಯೊಳಿಟ್ಟುಮುಪಯಮ
ಕುರುತರ ಲಗ್ನಮನೆ ಪಾರುತಿರ್ದಂ ಭರದಿಂ ೧೭೮

ವಚನ : ಅಂತು ನರಕಾಸುರಂ [4]ಪೂರ್ವಾಮರನೆಂಬ ಹಮ್ಮಿಂ ಸಕಲ ಸುರಲೋಕಮಂ ಕಾಡುತಿರಲವರ್ ಭೂಲೋಕದೊಳ್ ದ್ವಾರಕೆಗೈದಿ[4]

ಕಂದ : ಸರಸಿಜಭವಸುರಭೌಮಂ
ಸುರನಾಥಂ ವರುಣ ವಾಯು ಕೌಬೇರಾದ್ಯರ್
ಹರಿಯೋಲಗ[5]ಕೆ ಬರುತ್ತುಂ[5]
ಕರಕಮಲವ ಮುಗಿಯೆ ಕೃಷ್ಣ ಕುಳ್ಳಿರವೇಳ್ದಂ ೧೭೯

ವಚನ : ಅಂತು[6]ಕುಳ್ಳಿರ್ದು ಸುರಸಭೆಯೊಳ್ ಬೃಹಸ್ಪತಿ ಕೈಮುಗಿದು ಬಿನ್ನಪಂಗೈಯ್ಯು ತಿರ್ದನೆಂತೆನೆ[6]

ಕಂದ : ಶರಣಜನ ಹೃದಯ ಪಂಕಜ
ಸ್ಫುರಿತ ದಿವಾಕರ ಬಿನ್ನಪಮನೊಲವಿಂದವ
ಧರಿಸಾವೇಟಿಕ್ಕ್ಯ[7]ಯೆನುತುಂ
ಕರಕಮಲವ ಮುಗಿದು ನುಡಿಯುತಿರ್ದಂ ಜೀವಂ ೧೮೦

---

[1] ರುಕ್ಮಿಣಿಗೆ ಪಾರಿಜಾತದ ಹೂವಂ ನಾರದಂ ತಂದಿತ್ತ ನಿನಗಾ ಪಾರಿಜಾತದ ವೃಕ್ಷವನೆ ತಂದು ನಿನ್ನ ಮನೆಯ ಮುಂದೆ ನಿಲಿಸಿಕೊಡುವೆನೆಂದು ಆಕೆಯುಂ ಸಂತೈಸಿ ಗರುತ್ಮಂ ತನ್ನಂ ನೆನೆಯೆ ಬಂದ ವೈನತೇಯನಂ ಸತ್ಯಭಾಮೆಯುಂ ತಾನುಂ ಆರೋಹಣರಾಗಿ ಅಮರಾವತಿಗಭಿಮುಖವಾಗಿ ನಂದನವುಂ ಮುತ್ತಿ ಬಂದ ಹುಯ್ಯಲಿಗಾಂತ ದೇವೇಂದ್ರನ ಚಾತುರ್ಬಲವುಂ ಭಗ್ನಂ ಮಾಡೆ ದೇವೇಂದ್ರಂ ಯಾದವೇಂದ್ರನಿಂ ಮನ್ನಿಸಿಕೊಂಡು (ಚ) [2] ಷೋಡಶ (ಗ) [3] ಮಂ (ಗ) [4] ನರಕಕ್ಕೆ ಸುರನಾಗಿ ಸಮಸ್ತ ದೇವತಾಲೋಕಮಂ ಪೂರ್ವದೇವನೆಂಬ ಹಮ್ಮಿಂ ಗೋಳಿಗೊಳಿಸಿ ಕಾಡುತಿರೆ ಸಮಸ್ತ ಸುರಜನಂ ಕೃಷ್ಣನಂತಪ್ಪ ಬಲವಂತರಿಲ್ಲೆಂದು ಭೂತಳದಲ್ಲಿ ದ್ವಾರಾವತಿಗೆಯ್ದಿ (ಚ) [5] ಕ್ಕೆ ಬಂದುಂ (ಚ) [6] ಕುಳ್ಳಿರವೇಳ್ದುದುಂ ಸುಧರ್ಮಾಸ್ಥಾನಂಗೊಂಡು ನಡುವೆ ಬೃಹಸ್ಪತಿದೇವರು ಕರಕಮಲವಂ ಮುಗಿದು ಕೃಷ್ಣಂಗೆ ಬಿನ್ನೈಸುತಿರ್ದನದೆಂತೆಂದೊಡೆ (ಚ) [7] ಬೇಕೈಯ (ಚ)

ನರಕಾಸುರನಿಂದೆಮಗಂ
ನರಕಾಸುರಗತಿಯ ಮಾಳ್ಪನವನಂ ಮಿಗೆ ಸಂ
ಹರಿಸಲ್ಕಾಬಿತಿಯ ಬಿಡು ನೀಂ
ಸುರವೈರಿಯ ವೈರಿಯೆಂಬ ನುಡಿಯಂ ದೇವಾ ೧೮೧

ವಚನ: ಎಂದ ಬಿನ್ನಹಮಂ [1]ಕೇಳಿಯುಮಂ ಮುಂ[1] ವರಹಾವತಾರದೊಳ್ ಭೂ ಸಂಯೋಗದಿಂದೆನಗವಂ ಪುಟ್ಟಿದಂ ಅವನಂ ಕೊಂದು ಕನ್ಯಾಲಾಭಮ[2]ನೊಂದುವೆಂ ನಾನಿಮ್ಮಂ ಸ್ಮರಿಸಿದಾಗಳಂಬಿನಾಕಾರದಿಂ ನೀಮ್ಬೈತರ್ಪುದೆಂದವರಂ ಕಳುಪಿ ಖಗೇಶ್ವರನಂ ನೆನೆವುದುಂ[2]

ಕಂದ : ಶರನಿಧಿ ತುಳ್ಕಾಡಲ್ ಕುಲ
ಗಿರಿ[3]ಕುಲಮ್[3]ಅಲ್ಲಾಡೆ ಪಕ್ಷಮಾರುತ[4]ದಿಂ[4]ದಂ
ಹರಿಯಂಘ್ರಿಗೆ ನಮಿಸು[5]ತ್ತುಂ[5]
ಗರುಡಂ ಬೆಸನಾವುದೆಂದು ಕೈಮುಗಿದಿರ್ದಂ ೧೮೨

ನರಕಾಸುರನೆಂಬಸುರಂ
ಸುರರುಮನಲೆಯುತ್ತು ಮಿರ್ಪನವನಂ ಗೆಲ್ದಾ
ತರುಣಿಯರಂ ತಹುದೀಗಳ್
ವರಕಾರ್ಯಮೆನುತ್ತೆ ಗರುಡನಂ ಪೇಳ್ದಾಯದ್ದಂ ೧೮೩

ವಚನ : ಅಂತು ಸತ್ಯಭಾಮೆ[6]ಯೊಡನೆ ಗರುಡನನೇಱಿ[6] ನರಕನ ಪುರಮಂ ಸೇರ್ದು ಪುರದ್ವಾರದೊಳ್ ಜಗಳಂ ಬಲಿಯಲಲ್ಲಿರ್ದವರಂ[6] ಖಂಡಿಸಿ ಪುರಮಂ ಪುಗುವುದುಂ

ಕಂದ : ಏಳು[7] ರಕ್ಕಸಕುಲೋತ್ತಮ
ಆಳಂ ಸವರಿದನು ಬಾಗಿಲವರಂ ಕೃಷ್ಣಂ
ಧಾಳಿಯ ಬಂದನೆನಲ್ಕಂ
ಕೇಳುತೆ ಸಿಡಿಲೇಳ್ಗೆಯಿಂದೆ ಮುಸಗಿದನಸುರಂ ೧೮೪

---

1 ಕೇಳ್ದು ಅವಂ ನಮಗೆ (ಚ) 2 ಜಠವೆ ನೀನೆಲ್ಲಂ ಸ್ಮರಿಸಿದಾಗ ನಿಮ್ಮ ಶಕ್ತಿಗಳಿಂದಂಬಿನಾಕಾರವಾಗಿ ಬನ್ನಿಮೆಂದು ನಿಯಾಮಿಸಿ ಅವರಂ ಕಳುಹಿ ಗರುತ್ಮಂತನಂ ಸ್ಮರಿಸೂದುಂ (ಚ) 3 ಕುಲವ (ಚ) 4 ನಿಂ (ಚ) 5 ತಂ (ಚ) 6 ಸಹಿತಂ ಗರುಡಾರೋಹಣನಾಗಿ ನರಕಾಸುರ ಪುರಮಂ ಸೇರುವುದುಂ ಬಾಗಿಲೊಳ್ ಜಗಳಂ ಬಲಿಯೆ ಕೃಷ್ಣಂ (ಚ) 7 ಳ್ಕೆ (ಚ)

ಚಂಪಕಮಾಲೆ

ಪರಿದು ತುಡುಂಕಿದಂ ಧನುವ ಬಲ್ಸರಲಂ ಸುಱಿಯುತ್ತೆ ರಾಕ್ಷಸೇ
ಶ್ವರ ಹರಿಯಂ ಪಳಂಚೆ ರಿಪುರಾಕ್ಷಸನಂಬಿನ ಸೋನೆಯಂ ನುಹಾ
ಶರದೊಳೆ ತೂರಲೆಚ್ಚು ರಿಪುಸಾರಥಿಯಂ ರಥವಶ್ವ ನೇಜೆಯಂ
ಶರ ಧನು ಜೋಡು ಸೀಸಕವ [1]ತುಂಡಿಸಿ ಕೊಂದನು ಕೃಷ್ಣನಾತನಂ[1]* ೧೮೫

ಕಂದ : ನರಕಾಸುರ[2]ನಳಿದ[2] ದಿನಂ
ನರಕಚತುರ್ದಶಿಯೆನುತ್ತೆ ಸುರ ನರರೆಲ್ಲರ್
ಹರಿಯ ನೆನೆಯುತ್ತೆ ಹಬ್ಬವ
ನುರು ಮುದದಿಂ ಮಾಡಲೆಂದು ದೀಪಾ[3]ವಳಿಯಂ[3] ೧೮೬

---

[1] ತುಂಡಿಸಿ ಬೀಳೆನುತಾರ್ದು ಪಂಕಜೋದರ ಸುರವೈರಿಯಂ ಹವಣುಗುಂದಿಸಿದಂ ಭುಜ ಸತ್ವಮೆಂತುಟೊ (ಚ) [2] ಸತ್ತ (ಚ) [2] ಳಿಗೆಯಂ (ಚ)

* ೧೮೫ ನೆಯ ಪದ್ಯದ ಬಳಿಕ ಚ ಪ್ರತಿಯಲ್ಲಿ ಸಿಕ್ಕುವಹೆಚ್ಚಿನ ಭಾಗಗಳು

ವಚನ : ಅಂತೆಸಲಸುರಂ ಮುಸಗಿ

ಕಂದ : ಇದುಕೋ ಹೊಸಧನುವೆನುತುಂ
ಕದುಬುತ್ತಂ ಭ್ರಾಮುನೆಸೆವ ಮಂತ್ರಾಸ್ತ್ರಗಳಂ
ಹೊದಿಸಿದ ಕೃಷ್ಣನ ಶಾರ್ಙ್ಗದ
ತುದಿಗೊಪ್ಪಂ ಹಱಿಯಲೆಚ್ಚನೇನಂ ಪೇಳ್ವೆಂ

ವಚನ : ಅಂತೆಸಲೊಡಂ ಕೃಷ್ಣಂ ಸಮಸ್ತದೇವತಾಸ್ಮರಣೆಯಂಗೆಯ್ಯೆ ವಾಯು ಹಿಳುಕಾಗಿ ಗರುತ್ಮಂ ಗಱಿಯಾಗಿ ದೇವತೆಗಳ್ ಸರ್ವಸ್ವನಾಗಿ ಶೇಷಂ ಕಾಪಾಗಿ ಅಗ್ನಿಯಲಗಾಗಿ ಆದಿತ್ಯ ಪಾಳವಾಗಿ ಬ್ರಹ್ಮಾಸ್ತ್ರಮಂ ನಿರ್ಮಿಸಿ

ಕಂದ : ಉರುತರ ದೇವಶರಮಂ
ಬರೆ ತೆಗೆದಾ ಕರ್ಣಪೂರದಂಬಿಂ ನರಕಾ
ಸುರ ಶಿರಮಂ ಪಱಿಯೆಸಲುಂ
ನರಕಾಂತಕನೆಂದು ಹರಿಯ ಕೀರ್ತಿಗೆ ದಿವಿಜರ್

ವಚನ : [1]ಅಂತು ರಕ್ಕಸನಂ ಸಂಹರಿಸಿ ಷೋಡಶಸಹಸ್ರ ಯುವತಿಯರಂ ಸೆರೆಯಿಂ ಬಿಡಿಸಿಯವರಂ ಮದುವೆಯಾಗಿ ಷೋಡಶಸಹಸ್ರ ಪುತ್ರರಂ ಪಡೆದು ಸೌಭರಿಯ ಸಂತಾನವೆನಿಸಿ ಸುಖಮಿರ್ದನಾ ಸಮಯದೊಳ್[1]

ಕಂದ : ವರ ರಾಜಸೂಯಕೆನುತುಂ
ಸರಸಿಜಲೋಚನನ ಕರೆಯಲಟ್ಟಲ್ ಬಂದಂ
ಧರಣಿಪ ಧರ್ಮಜನಾಜ್ಞಾ
ಧರನಾಹವಜಿತ ಸಮರ್ಥನಾ ಕಲಿಪಾರ್ಥಂ ೧೮೭

ವಚನ : ಅಂತು ಬಂದ ಪಾರ್ಥನಂ [2]ಬಿಗಿಯಪ್ಪಿ[2] ಕುಳ್ಳಿರಿಸಿ

ಕಂದ : ವರಕುಂತಿ ಕುಶಲವೇ ಭೂ
ವರ ಧರ್ಮಜ ಭೀಮ ನಕುಲ ಸಹದೇವಾದ್ಯರ್
ಸ್ಥಿರವೇ ದ್ರುಪದ[3]ಜೆ[3] ಸುಖಿಯೇ
ನರ ನೀಂ ಬಂ[4]ದಿರ್ಪ[4] ಕಾರ್ಯಮಂ ಪೇಳೆಂದಂ ೧೮೮

ಧರ್ಮಜನು ರಾಜಸೂಯಕೆ
ನಿಮ್ಮಂ ಕರೆತರ್ಪುದೆಂದು ಬೆಸಸಲ್ ಬಂದೆಂ
ನಮ್ಮಿಷ್ಟವ ಸಲಿಸುವ್ರದೆನೆ
ತಾಮ್ಮಗುಳೆಂದಂ ಮುಕುಂದನೊಂದುಜ್ಜುಗಮಂ ೧೮೯

ವಚನ : ಎಲೆ ಧನಂಜಯ ನೀಂ ಬಂದ ಕ್ಕೆಯಲೆ ಜಲಕ್ರೀಡೆ[5]ಯಾಡುವನೆಂದು ತನ್ನ ಪರಿಮಿತ ಪತ್ನೀ ಪುತ್ರಾದ್ಯರಂ ಕರೆಸಿ[5]

ಕಂದ : ಹರಿಮುಖಿಯರ್ ಹರಿಪದೆಯರ್
ಹರಿಮಧ್ಯೆಯರೆಸೆವುತಿರ್ಪ ಹರಿನಿನದೆಯರುಂ
ಹರಿಯೂಟಕೆ ಹರಿಕೂಟಕೆ
ಹರಿವರ್ಣೆಯರ್ಬೈದೆ ಸಂತಸದ ಹರಿವರೆಯಂ ೧೯೦

---

[1] ಅಂತು ದೀಪಾವಳಿಗೆಯಂ ಮಾಡಿ ಸೆರೆಯುಲ್ಲಿರ್ದ ಪದಿನಾಱುಸಾವಿರ ಸ್ತ್ರೀಯರಂ ಬಿಡಿಸಲಸಿಬರು ಕೃಷ್ಣನಂ ಬಯಸಿ ಕೃಷ್ಣಂ ವಿವಾಹವಾಗಿ ಷೋಡಶಸಹಸ್ರ ಗೋಪೀವಲ್ಲಭನಾಗಿ ಪ್ರತ್ಯೇಕಂ ಸ್ತ್ರೀಯರ್ಗೆ ಷೋಡಶಸಹಸ್ರ ಪುತ್ರರಂ ಪಡೆದು ಸಾಬರಿಯ ಸಂತಾನವೆನಿಸಿ ಕೃಷ್ಣಂ ಸುಖಮಿರಲಾ ಸಮಯಕ್ಕೆ (ಚ) [2] ತಕ್ಕೈಸಿ (ಚ) [3] ಜೆಯು (ಚ) [4] ದೊಂದ (ಚ) [5] ಯನಾಡುವೆನೆಂದು ಕೃಷ್ಣಂ ಸಮುದ್ರರಾಜನಂ ಕರೆಸಿ ನಮ್ಮ ಸಾಬರಿ ಸಂತಾನಂ ಜಲಕ್ರೀಡೆಯನಾಡುವರೆ ಕೊಳಸಿಂಬಿಲ್ಲ ನೀಂ ಯೋಜನಪರ್ಯಂತಂ ಸಮಸ್ತಳವಾಗಿರೊ ಎಂದು ಸಮುದ್ರರಾಜನಂ ಕಳುಪಿ ಸಮಸ್ತಸ್ತ್ರೀಯರಂ ಕರಸುವುದುಂ (ಚ)

ತೆರೆಕಾಂತಿ ಮಸಗೆ ನಗೆವೊಗ
ಸರಸಿಜವಲ್ಲಾಡೆ ಚಕ್ರಕುಚಮಲೆಯಲ್ ಬಂ
ಧುರ ನಾಭೀಸುಳಿ ಕಾಣಿಸೆ
ಹರಿಯೊಳ್ ಜಲಕೇಳಿಯಾಡುತಿರ್ದರ್ ಸತಿಯರ್ ೧೯೧

ವಚನ : [1]ಅಂತು ಜಲಕೇಳಿಯಾಡುತಿರ್ಪಾಗಳ್ ಷಟ್ಪುರವಾಸಿಯೆಂಬ ರಕ್ಕಸಂ ವೀರರತ್ನಂ ಲೇಸೆಂದು ವಿಜಯನಂ ಕಕ್ಷದೊಳಿಱುಂಕಿ ಪಾಱುವುದುಂ ಕೃಷ್ಣಂ ಕಂಡು[1]

ಕಂದ : ಬಿಡು ಖಾಂಡವವನದಹ[2]ನನ[2]
ಬಿಡು ದ್ರುಪದೋರ್ವೀಶಬದ್ಧಹಸ್ತನನೆಲೆಲೋ
ಬಿಡು ದಿಗ್ವಿಜಯಾರೂಢನ
ಬಿಡು ಪಾರ್ಥನನೆನುತೆ ಬೆರಸಿದಂ ಕಲಿಕೃಷ್ಣಂ ೧೯೨

ವಚನ : [3]ಅಂತಾ ರಕ್ಕಸನಂ ಕೊಂದು ಪಾರ್ಥನಂ ಬಿಡಿಸಿ ಇಂದ್ರಪ್ರಸ್ಥಕ್ಕೆ ಬಂದು ಪಾಂಡವರಂ ಕಾಣಲ್[3]

ಕಂದ : ಬಲುಸಡೆಯನೊರಸಿ ಹಿಂದಕೆ
ಸಲೆ ಕಾದುತ್ತೆಸೆಯುತಿಹ ಜರಾಸಂಧನ ತಾಂ
ಕೊಲಿಸಿದ ಭೀಮನ ಕೈಯಿಂ
ಜಲಜಾಕ್ಷನ ತೆಱದಿ ಸೂತ್ರಧಾರನದಾವಂ ೧೯೩

ವಚನ : ಅಂತು ಜರಾಸಂಧನಂ ಕೊಲಿಸಿ ಯಾಗಮಂ [4]ನಿರ್ವಿಘ್ನಮಾಗೆ ಪೂರ್ತಿಗೈಸಲ್ ಯುಧಿಷ್ಠಿರಂ[4] ಕೃಷ್ಣನಂ ಅಗ್ರಪೂಜೆಗೆಂದು ಸಿಂಹಾಸನ[5]ಮನೇಱಿಸಲ್ ಶಿಶುಪಾಲಂ[5] ರೋಷಂ ಮಸಗಿ

---

[1] ಅಂತು ಜಲಕ್ರೀಡೆಯನಾಡುವ ಸಮಯದೊಳೊಬ್ಬ ಭಾನುಮತಿಯೆಂಬ ಸ್ತ್ರೀಯಂ ಷಟ್ಪುರವಾಸಿಯೆನಿಸುವ ಹಂಸನೆಂಬ ರಾಕ್ಷಸಂ ವಿಮಾನ್ಪುಳಿಗನ ಪಕ್ಷಿಯಂತೆ ಪೊಯ್ದುಕೊಂಡು ಪೋಪಂ ಕಾದಿರ್ದ ಫಲುಗುಣಂ ಕಂಡು ಗಾಂಡೀವಮನೇಱಿಸಿ ಬಾಣಾಸಾರಮಂ ಸೂಸುವುದುಂ ರಕ್ಕಸಂ ಕಂಡು ಸ್ತ್ರೀರತ್ನದಿಂ ವೀರರತ್ನಂ ವೆಗ್ಗಳವೆಂದು ಅರ್ಜುನನಂ ಕಕ್ಷದಿನಿಱುಂಕಿ ಪಾಱುವುದುಂ ಕೃಷ್ಣಂ ಕಂಡು (ಚ) [2] ನವ (ಚ) [3] ಅಂತಾ ರಾಕ್ಷಸನಂ ಕೊಂದು ಸ್ತ್ರೀಯುಂ ಬಿಡಿಸಿ ಇಂದ್ರಪ್ರಸ್ಥಪುರಕ್ಕೆ ಬಿಜಯಂಗೈದು ಪಾಂಡವರಂ ಕಾಣಿಸಿಕೊಂಡು (ಚ) [4] ಧರ್ಮರಾಯನಿಂ ಮಾಡಿಸಿ ಯಾಗ ಸಂಪೂರ್ತಿಯಲ್ಲಿ ಧರ್ಮರಾಯಂ (ಚ) [5] ದೊಳಿರಿಸಲು ಶಿಶುಪಾಲಂ ಪೂರ್ವಕಥನದಿಂ (ಚ)

ಕಂದ : ಸ್ತ್ರೀವಧೆಯ ಮಾಡಿ ಹೇಸದೆ
ಗೋವಂ ಮಿಗೆ ಕೊಂದು ಮಾವನಂ ಮರ್ದಿಸಿ ನೀ
ನಾವಕುಲವೃಳ್ಳನೆಂದೆಲೆ
ಗೋವಳಿಗಾ ಪೂಜೆಯೆಂದ[1]ಡ[1]ನುಕರಿಸಿರ್ದೈ ೧೯೪

ವಚನ : [2]ಎನೆ[2] ಭೀಷ್ಮಂ [3]ಮುಂಕೊಂಡು[3]

ಕಂದ : ಸತ್ತ್ವರಜಸ್ತಮದಿಂದಂ
ಹೆತ್ತುಱಿ ರಕ್ಷಿಸುವ ಕೊಲ್ವನಜ ಹರಿ ರುದ್ರಾ
ಶಕ್ತಿ[4]ಯೊಳ್ ಪರಬ್ರಹ್ಮನ[4]
ನೆತ್ತಲ್ ನೀನಱಿವೆಯಸುರ ಮೂಢರ ಗುರುವೇ ೧೯೫

ವಚನ : [5]ಆಗಳ್[5] ಕೃಷ್ಣನಿಂತೆಂದಂ

ಕಂದ : ಇವನವ್ವೆಯ ನುಡಿಗಪರಾ
ಧವ ಶತಮುಂ ಕಾ[6]ಯ್ವೆ[6]ನೆಂದು ಚಕ್ರವ ತೆಗೆದುಂ
ತವೆ ಶಿಶುಪಾಲನ ಘನ ಕಂ
ಠವನಿಱುಹಿದನಮರಭೇರಿಗಳ್ ಮೊಱಗುವಿನಂ ೧೯೬

ವಚನ : [7]ಇಂತಗ್ರಪೂಜೆಯಂಗೊಂಡು ಸುಖದಿನಿರ್ಪಿನಂ ಸಾಲ್ವಂ ದ್ವಾರಕೆಯ ಮುತ್ತಿದುದುಂ ಬಲಭದ್ರ ಮುಂತಾದರ ಯುದ್ಧಸಂಗತಿಯಂ ಕೇಳಿ ಬಲದೊಡನೆ ಮಾಯಾಪುರಮಂ ಪೊಕ್ಕು ಯುದ್ಧಂಗೆಯ್ವಿನಂ[7]

ಮಹಾಸ್ರಗ್ಧರೆ
ಹರಿ ಬಾಣಾಸಾರದಿಂದಂ ಬಲವನೊರೆಸಿ ಕೊಟಕ್ಕೆ ಬಂದಾನುತಿರ್ಪಾ
ಮುರಮುಂತಾಗಿರ್ದ ದೇವಾರಿಗಳನನಿಬರಂ ಕೊಂದು ಮಂತ್ರಾಸ್ತ್ರಮಂ ತಾಂ
ಸುರಿದಾ ಸಾಲ್ವಾಮರಾರಿ ಪ್ರಮುಖರ ಶಿರಮಂ ತುಂಡು ಬೀಱಿಚ್ಚು ಬಂದಂ
ಪುರಮಂ ತಾಂ ಪೊಕ್ಕು ಸೌಖ್ಯೋತ್ಕರದಿನೆಸೆವುತಿರ್ದಂ ಲಸತ್ಕೀರ್ತಿವೃಂದಂ ೧೯೭

---

[1] ಪಸ (ಗ) [2] ಅನಿತರೊಳ್ (ಚ) [3] ಮಾಕೊಂಡು (ಚ) [4] ಯಲಿ ಪರಬೊಮ್ಮನ (ಚ) [5] ಆ ಸಮಯದೊಳ್ (ಚ) [6] ಯ್ವೆ (ಚ) [7] ಅಂತು ಶಿಶುಪಾಲನಂ ಕೊಂದು ಅಗ್ರಪೂಜೆಯಂ ಕೈಕೊಂಡು ಸುಖದೊಳಿಪ್ಪನ್ನಂ ಸಾಲ್ವಂ ದ್ವಾರಕಿಯಂ ಮುತ್ತಿದನೆಂಬ ವಾರ್ತೆಯಂ ಕೇಳಿ ಪಾಂಡವರಿಂ ಕಳುಹಿಸಿಕೊಂಡು ಬಲಭದ್ರ ಸಾತ್ಯಕಿಗಳಿಂ ಯುದ್ಧಸಂಗತಮಂ ಕೇಳಿ ಚಾತುರ್ಬಲಮುಂ ಬೆರಸು ಸಾಲ್ವನ ಮಾಯಾಪುರಕ್ಕೆ ಸಡೆವುದುಂ ಸಾಲ್ವಂ ಸಮುಖಾಜನೊಡ್ಡಿ ಪಳಂಚುವುದುಂ (ಚ)

ವಚನ : [1]ಇಂತಿರಲೊಂದುದಿವಸಂ ದುರ್ನಿಮಿತ್ತಮಾಗಲಿದೇನೆಂದು ವೃದ್ಧರಂ ಕೇಳೆಯವರ್ ರಾಜಬಾಧೆಯೆನಲ್ ವಿಚಾರಿಸೆ ಕಾಮಪುತ್ರನನಿರುದ್ಧನಿಲ್ಲವೆನಲೆತ್ತ ಪೋದನೆನಲ್ ಮಂತ್ರಿಗಳಿಂತೆಂದರ್[1]

ಕಂದ : ಬಾ[2]ಣಂ[2]ಬಲಿಯಾತ್ಮ[3]ಜ[3] ಸುಮ
ಬಾಣಸಮಾಕಾರವೈರಿ ಕದಳೀವನಕಂ
ಬಾಣದ್ವಯನೆನಿಸುತ್ತಿಹ
ಬಾಣಾಸುರನಿಹ ಸಹಸ್ರಬಾಹುಸಮೇತಂ ೧೯೮

ಉತ್ಪಲಮಾಲೆ
ಅಷ್ಟದಿಶಾಧಿನಾಥರುಱ[3] ಕಪ್ಪವನಿತ್ತಪರೆನ್ನ ಬಾಗಿಲಂ
ನೆಟ್ಟನೆ ಕಾವನೀಶನಜನಾಶ್ರಿತನೆನ್ನೊಳಗಾಂತು ಕೋಪಮಂ
ಪುಟ್ಟಿಸಿ ಖಂಡದಿಂಡೆಗಳನಾಡುವ ಯುದ್ಧಮನಿಲ್ಲ[4]ವೇಂ[4] ವೃಥಾ
ಪುಟ್ಟದವೆನ್ನ ತೋಳು ಹೊಱೆಯಾಗೆನುತಿರ್ದಪ ಬಾಣನಾವಗಂ ೧೯೯

ಕಂದ : ಅಂತಾ ಬಾಣಂಗೊಗೆದಳ್
ಕಂತುಕಲಾಕಾಮಧೇನು ಯುವತಿಯರೊಳಗಂ
ಚಿಂತಾಮಣಿಯೆನಿಸುತ್ತಿಹ
ಕಾಂತೆಯುಷಾದೇವಿಯೆಂಬ ಕನ್ಯಾರತ್ನಂ ೨೦೦

ವಚನ : [5]ಅಂತಿಹ ಕನ್ನಿಕೆಯನನಿರುದ್ಧಂ ಚೋರಭಾವದಿಂ ನೆಱೆದು ಮರಳಿ ಬರ್ಪಿನಮುಷೆ ವಿರಹಾತುರೆಯಾಗಲಾಕೆಯ ಸಖಿ ಚಿತ್ರಲೇಖೆ ಸಮಸ್ತರ ರೂಪಂ ಬರೆದು ತೋಱಿಸಿಯದಱೊಳ್ ಕುಱುಪುವಿಡಿಯೆ ಚಿತ್ರಲೇಖೆ ಮರಳಿ ಬಂದು ಅನಿರುದ್ಧನನೊಯ್ದುಷೆಯ ಸೆಜ್ಜೆಯಂ ಸಾರ್ದುದುಂ[5]

---

[1] ಅಂತು ಶ್ರೀಕೃಷ್ಣಂ ಸುಖಸಂಕಥಾವಿನೋದದಿಂದಿರಲೊಂದು ದಿವಸಂ ದುರ್ನಿಮಿತ್ತವಾಗಲು ಕೃಷ್ಣಂ ನೋಡಿ ವೃದ್ಧರಂ ಕೇಳಲಿದು ರಾಜಬಾಧೆಯೆಂದು ಪೇಳ್ವುದುಂ ನಮ್ಮ ಸೇನೆಯಲ್ಲಿ ವಿಚಾರಿಸಿಮೆನಲ್ಕಾಮನ ಮಗನನಿರುದ್ಧನಿಲ್ಲವೆನಲೆತ್ತ ಪೋದನೆಂದುಂ ಕೇಳ್ವುದುಂ ಮಂತ್ರಿಗಳಿಂತೆಂದರು (ಚ) [2] ಣ (ಕ) [3] ಜಂ (ಕ) [4] ವೇಂ (ಚ) [5] ಅಂತಿರ್ದ ಉಷಾದೇವಿಯುಂ ನಿಮ್ಮನಿರುದ್ಧಂ ರತಿ ಚೋರತ್ವದಿಂ ನೆರೆದು ಮಗುಳೆ ಬಪ್ಪುದುಂ ಉಷಾದೇವಿಗೆ ವಿರಹಂ ವೆಗ್ಗಳವಾಗಲಾಕೆಯಂ ಸಖಿ ಚಿತ್ರಲೇಖೆ ಸಮಸ್ತರ ರೂಪಂ ಪಟಂಗಳಲ್ಲಿ ಬರೆದು ತಂದು ತೋಱಿ ಕುಱುಹುಗಂಡು ಪೇಳ್ವುದು ಚಿತ್ರಲೇಖೆ ಮಗುಳೆ ಬಂದನಿರುದ್ಧನಂ ಕೊಂಡೊಯ್ದು ಪೋಗಿ ಉಷಾದೇವಿಯ ಸೆಜ್ಜೆಮನೆಯಂ ಸಾರ್ದು (ಚ)

ಚಂಪಕಮಾಲೆ

ತರಹರಮಿಲ್ಲದಿರ್ಪ ಮನಮುಕ್ಕುವ ಕಾತುರ ಮತ್ತೆಮತ್ತೆಯು
ಬ್ಬರಿಸುವ ತೆಕ್ಕೆ ಮೇಲಱುಯದಾಡುವ ಲಲ್ಲೆ ಪೊದಳ್ದ ಬಂಧನೊ
ತ್ತರಿಸುವ ಗದ್ಗದಂ ಬಲಿದ ರೋಮ ಜೆಮರ್ವನಿ ಜೋಲ್ದ ಕಣ್ಣಿನಿಂ
ಸುರತಸುಖಾನುಭಾವದೊಳೆ ರ್ಷೋಂಪಿಸುತಿರ್ದರತೀವ ಸೌಖ್ಯದಿಂ ೨೦೧

ವಚನ : [1]ಅಂತಿರ್ಪಿನಂ ಬಾಣಾಸುರನಱುತು ಸೆಜ್ಜೆಯಂ ಮುತ್ತೆಯನಿರುದ್ಧಂ ಕಾದುತಿರ್ಪಂ ನೀಮಿಾಗಳೆ ಪೋಗವೇೞ್ಕುಮೆನೆ[1]

ಕಂದ : ಪೂರೈಸಿ ಪಾಂಚಜನ್ಯಮ
ತೇ[2]ರನ್ನೇ[2]ಱುತ್ತೆ ಕೃಷ್ಣ ಪೊಱಮಡೆ ಹುಯ್ಯಲ್
ದ್ವಾರಾವತಿಯೊಳ್ ತುಂ[3]ಬಲ್[3]
ಘೋರೆಂದಬ್ಬರಿಸಿ ತೆರಳಿದಂ [4]ಭರದಿಂದಂ[4] ೨೦೨

ವಚನ : ಅಂತು ಕೃಷ್ಣಂ ತೆರಳಿ ಬಾಣಾಸುರನಂ [5]ಸಳಂಚಿ[5] ಮಹಾಯುದ್ಧ[6]ದೊಳವನ[6] ತೋಳ್ಗಳಂ ಕಡಿದು [7]ಉಷಾನಿರುದ್ಧರೊಡನೆ[7] ಪಟ್ಟಣಕ್ಕೆ ಬಂದು ಕೆಲವು ದಿನದ ಮೇಲೆ

ಕಂದ : ನರನೊಳ್ ಸಾರಥಿತನಮಂ
ವಿರಚಿಸಿ ಭಾರತಮೆನಿಪ್ಪ ಕಥೆಯಂ ಪುಟ್ಟಿಸಿ
ಕುರುಪಾಂಡವರಿಂ ಕೊಲಿಸಿದ
ಹರಿ ಹದಿನೆಂಟಕ್ಷೋಹಿಣಿಯಧಿಕ ನೂಱಱೂಂದಂ ೨೦೩

ವಚನ : ಅಂತು [8]ಭೂಮಿಾಭಾರಮನುತ್ತಾರಂಗೈದು ಶ್ರೀಕೃಷ್ಣಂ ಸುಖದಿಂದಿರ್ದಂ ಈ ಕೃಷ್ಣಾವತಾರದೊಳ್[8]

---

1 ಅಂತು ಕಾಮಕೇಳಿ ಕೌತೂಹಲದಿಂದಿರ್ಪಿನಮವಳ ತಂದೆ ಬಾಣಾಸುರನಱುತು ಸೆಜ್ಜೆವನೆಯಂ ಮುತ್ತಿ ಅನಿರುದ್ಧನಂ ಪಿಡಿವಲ್ಲಿ ಮನೋರಥಮೇ ರಥವಾಗಿಯುಂ ಭುಜದಂಡಮೇ ಗದಾದಂಡವಾಗಿಯುಂ ಅನಿರುದ್ಧಂ ಕಾದುತಿರ್ಪ ದೇವರೀಕ್ಷಣಮೆ ಪೋಗಲ್ವೇಳ್ಕುಮೆನೆ (ಚ) 2 ರಂ ಏ (ಕ) 3 ಬಿಸು (ಚ) 4 ಕಡುಭರದಿಂ (ಚ) 5 ಪಳಂಚಿ ಸಮಸ್ತ ಬಲಮಂ ಬರಿಕೆಯ್ದು (ಚ) 6 ದಿಂ ಬಾಣಾಸುರನ (ಚ) 7 ಉಷಾದೇವಿಯುನಿರುದ್ಧ ಸಹಂ (ಚ) 8 ಕುರುಪಾಂಡವ ಅಷ್ಟಾದಶಾಕ್ಷೋಹಿಣಿಯಲ್ಲಿದೆ ಬೆ ಱಿ ಚಕ್ರ ಶಾರ್ಙ್ಗಗಳಿಂ ರಾಕ್ಷಸಬಲವನೊಂದುಲಕ್ಷ ಕ್ಷೋಹಿಣಿಯುಂ ಕೊಂದು ಭೂಭಾರೋತ್ತಾರಣಮಂ ಮಾಡಿ ಶ್ರೀಕೃಷ್ಣಂ ಸುಖಸಂಕಥಾವಿನೋದದಿಂದಿರ್ದಂ ಕೃಷ್ಣಾವತಾರದಲ್ಲಿ (ಚ)

ಕಂದ : ಧರಣಿ ಬೆಳೆದವುದು ಪಶುಗಳ್
ವರ ಕ್ಷೀರಮನೀಗು ಪೇಳ್ವಕೇಳ್ವರ್ಗೆ ಶುಭೋ
ತ್ಕರಮಕ್ಕು ಕೃಷ್ಣರಾಯನ
ಚರಿತೆಯೆ ಪಾವನಸವಿತ್ರವೆಂದೆನಿಸಿರ್ಕುಂ ೨೦೪

ಮತ್ತೇಭವಿಕ್ರೀಡಿತ

ಧರಣೀಸೌಖ್ಯಕರಂ ಗದಾಯುಧಧರಂ ಶ್ರೀಶಾರ್ಙ್ಗ ಚಕ್ರೋಧರಂ
ವರಪೀತಾಂಬರ ದಿವ್ಯಕೌಸ್ತುಭಧರಂ ಲಕ್ಷ್ಮೀವರಂ ಭೂಧರಂ
ಸುರಸಂದೋಹ ಪುರಂದರೋನ್ನತಪರಂ ಸೌಖ್ಯಾಕರಂ ನಿರ್ಮಲಂ
ಪರಮಾನಂದಕರಂ ಜಗತ್ತ್ರಕರನುಂ ರಕ್ಷಿಕ್ಕೆ ನಾರಾಯಣಂ ೨೦೫

ಗದ್ಯ: ಇದು ವೃಂದಾರಕವೃಂದ ಪರಿಮಣಿಖಚಿತ ಮುಕುಟರಂಜಿತ ಶ್ರೀಮದಾದಿನಾರಾಯಣ ಶ್ರೀ ಚರಣ ಸರಸೀರುಹ ಮಕರಂದ ಷಟ್ಚರಣ ಸಲ್ಲಲಿತ ಮಲ್ಲರಸಾಂಕ ವಿರಚಿತಮಪ್ಪ ದಶಾವತಾರ ಚರಿತ ಮಹಾಪ್ರಬಂಧದೊಳ್ ಬ್ರಹ್ಮಬಿನ್ನಪ ದೇವತಾನಿರೂಪ ಮುಂತಾದುವನೊಳಕೊಂಡ ಬಲರಾಮ ಕೃಷ್ಣಾವತಾರಂ

ನವಮಾಶ್ವಾಸಂ

ದಶಮಾಶ್ವಾಸಂ

ಕಂದ : ಶ್ರೀಕಾಂತನಸುರಮರ್ದನ
ವೈಕುಂಠನಿವಾಸ ಸುರಪವಂದಿತ ಚರಣಂ
ವ್ಯಾಕುಲವಿರಹಿತ ಭಕ್ತರ
ನೀ ಕೃಪೆಯಿಂ ಪೊರೆವುದಾದಿನಾರಾಯಣನೇ ೧

ಶಿವಸಂಗ ವೈರಿಸಂಚಯ
ಯುವತೀ ಮನದಿಷ್ಟನಾಶ ಭಯ ಪುರಹರಣ
ಸ್ತವಯುಕ್ತನೆನಿಸುತಿಹ ಬೌ
ದ್ಧವತಾರಂ ಶರಣಜನ ಭವಾಂಬರದೂರಂ ೨

ಶಿಕ್ಷಿಸಿ ತಮನಂ ಹೈರ
ಣ್ಯಾಕ್ಷ ಹಿರಣ್ಯಕ ಬಲೀಂದ್ರ ಬಹುಭುಜರಂ ಹೊ
ಯ್ದೀಕ್ಷಿಸಿಕೃಪೆಯಿಂ ಪಾರ್ಥನ
ನಕ್ಷಯಸುಖಿಯೊಪ್ಪುತಿರ್ದನಂಬುಜನಯನಂ ೩

ವಚನ : ಅಂತು ಕ್ಷೀರಪಾರಾವಾರದಲ್ಲಿ ಕೃಷ್ಣಂ ಸುಖದೊಳಿರೆ

ಚಂಪಕಮಾಲೆ

ಜಯ ಜಗದಾತ್ಮಬಂಧು ಜಯ ಜಾಂಬವಪಾಲಕ ಸತ್ಯಪಾಕರಾ
ಜಯ ಜನನಾಂತದೂರ ಜಯ[1]ಜಂತು[1] ಜನೋದರ ವಿಶ್ವತೋಮುಖಾ
ಜಯಜರಿಹಂ ನಿವಾಸ ಜಯಜಂಭಹತಾರ್ಚಿತ ಎಂದು ಭಕ್ತಿಯಿಂ
ಜಯ ವಿಜಯರ್ಕಳಾರ್ತ ಸುರಭೂರುಹಕಾನತರಾದರರ್ತಿಯಿಂ ೪

ವಚನ : [2]ಎಂದು ಪೊಡಮಟ್ಟು[2]

ಕಂದ : ಅಪರಾಧಶತವ ನೋಡದೆ
ಕೃಪೆಯಾಗೆಮಗೆಂದು ಮುಂದೆ ನಿಂದಿರ್ದವರಂ
ಸುಪವಿತ್ರಾಂಗಂ ದಯೆಯಿಂ
ದಪರಿಮಿತಾನಂದದಿಂಪೆ ನೋಡಿದನವರಂ ೫

---

1 ಜಯುಂತು (ಗ) 2 ಸರ್ವಕರುಣಾಸರಧಿವೊಲಿದು ಸಲಹು ಸುಲಭಯೆನುತವೆ ಪೊಡಮಡುತೆ ಜಯವಿಜಯರು (ಚ)

ವಚನ: [1]ಅಂತು[1] ಜಯವಿಜಯರಂ ಕಂಡು [2]ಕರುಣದಿಂ[2] ಮುನ್ನಿನಂತೆ ದ್ವಾರರಕ್ಷ[3]ಣೆಯ ನಿತ್ತು ಬುದ್ಧಿವಂತರಾಗಿರಿ[3]ಮೆಂದು ಬಾಗಿಲಿಗೆ ಕಳುಹಲಿತ್ತಲ್ ಜೊಳ್

ಕಂದ: ಶರದಭ್ರಂ ಕ್ಷೀರಾಬ್ಧಿಯ
ನೊರೆಯಲ್ ಸರಿಯಾಗಲೆಂದು ಬಂದಾ ತೇಜದಿಂ
ವರಮುನಿ ನಾರದ ಲಕ್ಷ್ಮೀ
ವರನೋಲಗಕಾಗಿ ಬಂದನಾರಿಗೆ ಕೇಡೋ ೬

ವಚನ: ಎಂದು ಜಯ ವಿಜಯರ್ ತಡೆಯಲಂಜಿ ನಾರದನಂ ಬಿಡ[4]ಲವಂ ಹರಿಗೆ ಮಣಿದು[4]

ಕಂದ: ಪೞೆಯಂತೆ ಬಂತು ಭೂಮಿಗೆ
ಬೞಲಿಕೆಯೆಲೆದೇವ ಬಿನ್ನವಿಸಿದರೆ ಎನ್ನಂ
ಕಲಹಪ್ರಿಯನೆಂದೆಂಬರ್
ಜಲಜಾಕ್ಷಾಯೆಂದಡೆನಲಿ ಬಿನ್ನೈಸಿದಪೆಂ ೭

ಮೂಲೋಕಮನವಗಡಿಸುತೆ
ಕಾಲಾಂತಕನೆನಿಸಿ ಕಮಲಲೋಚನ ವಿದ್ಯು
ನ್ಮಾಲಿ ಘನ ತಾರಕಾಕ್ಷರು
ಘೋಳಿಡಿ[5]ಸಂ[6] ಜಗವ ತಾರಕಂಗೊಗೆದನಿಶಂ ೮

ವಚನ: ಅಂತು ಪುಟ್ಟಿದ [6]ರಕ್ಕಸರ್ ತಾವರೆಯಣುಗನಂ[6] ಕುರಿತು ತಪಂಗೈಯಲೆಂದು

ಕಂದ: ಶಕ್ರಾದಿನೆಸೆವಕ್ಕರದೊಳ್
ಮಿಕ್ಕೀ ಹವಿಯಾದಿಯಲ್ಲಿ ಮನನಾಲ್ಕುಜತೊಳಂ
ತೆಕ್ಕನೆ ತೀವಿರೆ ಚಿಂತೆಯ
ನಿಕ್ಕಿದರಾ ಬೊಮ್ಮನಡಿಯನಾಶಾಪಾಶಂ ೯

ವಚನ: ಅಂತು ತಪಂಗೈದ [7]ರಕ್ಕಸರ್ಗೆ[7] ಬ್ರಹ್ಮಂ ಮೆಚ್ಚಿ ವರಮಂ ಬೇಡಿಯೆನೆ [8]ಆಗಸದೊಳ್[8] ಮೂಜೂರ [9]ನಿರ್ಮಿಸಿ[9] ಅವು ತಿರುಗುತ್ತಿರಲಿ ನಾವಲ್ಲಿರ್ಪೆವೆನೆ [10]ಬ್ರಹ್ಮ ನಿವರ್ಗೀ ವರಮನಿತ್ತೊಡೆ ದೇವತಾಬಾಧೆಮಕ್ಕುಮದಱಿಂದಾ ಪುರತ್ರಯಂ[10] ದಿವ್ಯ ಸಹಸ್ರವರ್ಷಕ್ಕೊಮ್ಮೆ ಕೂಡಲಿ [11]ಆಗಳಾರೆಚ್ಚೊಡಂ[11] ಕೆಡಲಿಯೆಂದು ನುಡಿಯೆ ನಾವಿಲ್ಲದವನೆಸೆಯಲೆಂದವರತ್ತಲ್ ಪೋಗೆ

---

1 ಅಂತು ನಮಸ್ಕಾರಂಗೆಯ್ದು (ಚ) 2 ಬಳಲಿರೆಂದು ಕರುಣದಿಂ ಪ್ರಸಾದಮಂ ಪಾಲಿಸಿ (ಚ) 3 ಣ ವಂ ಕೊಟ್ಟು ಮುಂದೆ ಮುಂದೆ ಬುದ್ಧಿಯಿಂ ಬಾಳಿ (ಚ) 4 ಲೊಳ ಪೊಕ್ಕು ಹರಿಗೆ ನಮಸ್ಕಾರಂಗೈದು (ಚ) 5 ಹರ್ (ಚ) 6 ರಾಕ್ಷಸರ್ ಬ್ರಹ್ಮನಂ (ಚ) 7 ರಾಕ್ಷಸರ್ಗೆ (ಚ) 8 ಆಕಾಶದಲ್ಲಿ (ಚ) 9 ನಿರ್ಮಿಸಿಕೊಟ್ಟು (ಚ) 10 ಬ್ರಹ್ಮಂ ನೋಡಿ ಯಿವರಿಂದಿರಿಗೆ ವರವಂ ಕೊಟ್ಟರೆ ದೇವತಾಬಾಧೆಯೆಂದು ನಿಮ್ಮ ಪುರು ದಿವ್ಯಸಹಸ್ರವರ್ಷಕ್ಕೆ (ಚ) 11 ಆ ಸಮಯದಲ್ಲಿ ಅರೆಚ್ಚರೂ (ಚ)

ಕಂದ : ಕರೆಸಿ[1]ದರು[1] ಮಯನನಾಗಳೆ
ಪುರಮಂ ರಚಿಸಿದರು ವಾಯುಪಾಶವೆ ಮೂಱುಂ
ತಿರುಗತೊಡಗಿದುವು ಬೊಮ್ಮನ
ವರವೇಂ ಪುಸಿಯಹುದೆ ಧಾತ್ರಿಯಂ ಪಡೆದವನೊಳ್ ೧೦

ಉತ್ಪಲಮಾಲೆ

ಮಾಯದ ಪಟ್ಟಣಂಗಳೊಳೆ ಕೊಟ್ಟವ ಕಟ್ಟಿ ಸಮಸ್ತ ದೇವತಾ
ಸ್ತ್ರೀಯರ ಗಾಣದಿಂ ತೆಗೆದು ಬರ್ಪ ಹವಿಸ್ಸಿಗೆ ಲೂಟಿವಾಯ್ತು ನಿ
ರ್ದಾಯದೆ ಲೋಕ ಮೂಱಱೊಳೆ ತಾಣೆಯವಿಟ್ಟರವರ್ಗೆ ತಕ್ಕುದಂ
ಜೀಯ ವಿಚಾರಗೈಯದೊಡೆ ಕೆಟ್ಟುದು ಲೋಕಮದಕ್ಕೆ ಸಂದೆಯಂ ೧೧

ಮತ್ತೇಭವಿಕ್ರೀಡಿತ

ತನುನಿಂದಗ್ಗಳರಾ ಹಿರಣ್ಯನಯನಂಗುತ್ಕೃಷ್ಟರಾ ವೀರರು
ದ್ಯಮ ಹೈರಣ್ಯಕಗದ್ಭು[2]ತರ್[2] ಬಲಿಗೆ ಮತ್ತಂ ವೆಗ್ಗಳರ್ ಕಾರ್ತವೀ
ರ್ಯಮಹಾಬಾಹುಗೆ ಬಲ್ಲಿದರ್ ದಶಗಳಂಗತ್ಯಂತ ನಿಷ್ಠೂರ ವಿ
ಕ್ರಮಯುಕ್ತರ್ ಶಿಶುಪಾಲನಿಂ ತ್ರಿಪುರನಾಸುರ್ ಧಾರಿಣೀ ಬಾಧಕರ್ ೧೨

ವಚನ : ಎಂ[3]ದ[3] ಬಿನ್ನಹಮಂ [4]ವಿಚಾರಂಗೈದು[4]

ಕಂದ : ಹರನಿಂದಲಲ್ಲದಾಗದು
ಸುರಪ ಬ್ರಹ್ಮಾದಿ ಮುಖ್ಯರೆಲ್ಲರುಮಂ ನೀಂ
ಕರೆದೊಯ್ದು ಕಾಣಿಸೆನುತುಂ
ವರಮುನಿಯಂ ಬೀಳುಕೊಟ್ಟ ಕರುಣದೆ ಕೃಷ್ಣಂ ೧೩

ವಚನ : ಅಂತು ಮುನಿಸೂಪನುಂ [5]ಪೇತ್ತು[5] ನಾರದಮ ನೀರದಮಾರ್ಗದಿಂದೈದಿ [6]ಸುರಪ ಬ್ರಹ್ಮರೊಡನೆ ಪೇಳಿ ಒಡಗೂಡಿ[6] ಕೈಲಾಸಾಭಿಮುಖರಾಗಿ ಬಾಗಿಲಂ ಸೇರೆ

---

[1]ದರ್ (ಗ) [2] ತಂ (ಗ) [3] ಬ (ಚ) [4] ಕೃಷ್ಣ ವಿಚಾರಂಗೈದು (ಚ) [5] ಪತಿಸು (ಚ) [6] ಯಿಂದ್ರಾದಿಬ್ರಹ್ಮಂಗೆ ವಿಸ್ತಾರವಾಗಿ ಪೇಳಿ ಒಡಂಗೊಂಡು (ಚ)

ಕಂದ : ಇಂದುಧರ ಬಿನ್ನಪಂ ಮಿಗೆ
ಬಂದಿರ್ಪರ್ ಬಾಗಿಲಲ್ಲಿಯಜಸುರಪತಿಗಳ್
ತಂದೆಯೆವಧಾರುಮೆನೆ ಬರ
ಲೆಂದಂ ಭವದೂರ ಶಂಭು ಕರುಣಾಸಾರಂ ೧೪

ವಚನ : ಅಂತು ಬಂದು

ಚಂಪಕಮಾಲೆ

ಶುಭಗುಣವಾರ್ಧಿಚಂದ್ರ ಸುಮುಖಾನತಜೋಷ ಸಗಾಮರೇಂದ್ರ ವಿ
ಶ್ವಭವನ ಕೀರ್ತಿಸಾಂದ್ರ ಪುರರಾಕ್ಷಸಮೋಚನುದದ್ವಿಪೇಂದ್ರಸ್ವೈ
ರಿಭ ಸುರವೈರಿನಾಶಕರ ಭೂಧರಜಾಸುರತಾಂದ್ರ ತಾಂದ್ರ ಕೂ
ರ್ತಭಯಕರಾಗ್ರವೃಂದ ಶರಣಾಗೆಮಗಿಂದು ಮಹಾಮಹೇಶ್ವರಾ ೧೫

ವಚನ : ಎಂದು [1]ಮಣಿದಮರರಂ ಕುಳ್ಳಿರವೇಳಲ್[1]

ಕಂದ : ತಡವೇತಕೆ ಗಂಗಾಧರ
ನಡಿದಾವರೆಗಳ್ಗೆ ಭಕ್ತಿ ಭಯದಿಂವೆಲ್ಲರ್
ಪೊಡಮಟ್ಟು ಬಂದ ಕಾರ್ಯವ
ನುಡಿಯೆಂದರ್ ನಯವೆ ಚಂಡಕೀರ್ತಿಗಳಾಗಳ್ ೧೬

ವಚನ : [2]ಎನಲಜಸುರರ್ ಕೈಮುಗಿದು ಮುಪ್ಪುರವಾಸಿಗಳ ಬಾಧೆ ಪಿರಿದು ಅವರಂ ತೆವರಿಯೆಮ್ಮಂ ರಕ್ಷಿಸೆಂದು ಬಿನ್ನೈಸೆ[2]

ಕಂದ : ದಿವಿಜಜನಂ ಪಶುಪತಿಪ
ಟ್ಟವ ಕಟ್ಟಿದಡೆಮಗೆ ಪುರವ ಜಯಿಸುವೆವೆನಲೊ
ಪ್ಪುವ ಬಗೆಯಿಲ್ಲದೆ ಮನಕು
ತ್ಸವದೋಱವೆ ಸುಮ್ಮನಿರ್ದರಜಸುರರೆ[3]ಲ್ಲರ್[3] ೧೭

ವಚನ : [4]ಅಂತಿರ್ಪರಂ ಚಂದ್ರಮೌಳಿ ನೋಡಿ[4]

---

[1] ನಮಸ್ಕಾರಂಗೆಯ್ದು ಸುರಸಮುದಯಮುಂ ಕುಳ್ಳಿರವೇಳ್ವುದುಂ (ಚ) [2] ಅಂತವರ ನುಡಿಯಂತೆ ಕೇಳಿ ಅಜಸುರರ್ ಕೈಮುಗಿದು ದೇವಾ ಮುಪ್ಪುರವಾಸಿಗಳೆಮ್ಮನೊಪ್ಪಂಗೆಡಿಸಿದರು ಮವರಂ ತೆವಱಿ ರಕ್ಷಿಸಬೇಕೆಂದು ಆ ಕ್ಷಿತ್ರಿತಯುಗರಂ ನೋಡ (ಚ) [3] ಲ್ಲಂ (ಚ) [4] ಅಂತು ಸುಮ್ಮನಿರಲವಱಂ ಯಿಶ್ವರಂ ನೋಡಿ (ಚ)

ಕಂದ : ಕರ್ಮದೊಡೆತನದೆ ಬಱಿದೇ
ಹಮ್ಮದಬೋಗಿರ್ದು ಮಮತೆಗಿಡದೆ ಚಿದಾತ್ಮಾ
ಗಮ್ಯವನಱಿಯದೆ ಬೆರೆವಾ
ನಿಮ್ಮಂ ಪಶುವೆಂದಡೇಕೆ ಮನದೊಳ್ ಭೇದಂ ೧೮

ವಚನ : [1]ಎನೆಯೊಡಂ[1]ಬಟ್ಟು ಶಿವಂಗೆ ಪಶುಪತಿಪಟ್ಟಂಗಟ್ಟಿ

ಕಂದ : ಕರೆ[2]ಯಿಸಿದನಾಗ[2] ಲಕ್ಷ್ಮೀ
ವರನಂ ರಥವಶ್ವಧನು[3]ವ[3] ಜೋಡಿಸು ಬೇಗಂ
ಸುರರುಮುನಿಲ್ಲಿಗೆ ಕಟುಪಿಯೆ
ಶರಧಿಯೊಳಱಿಯದವೊಲಿಹರೆ ಮಾಯೂಸಿದ್ಧಾ ೧೯

ವಚನ : [4]ಎನೆ ಕೃಷ್ಣಂ[4]

ಕಂದ : ಧಾರಿಣಿಯೇ ತೇರಾದುದು
ವಾರಾಸಿಯನಚ್ಚುಮಾಡಿದಂ ಭಾಸ್ಕರನ
ಬ್ಜಾರಿಮಂಡಲದ ಗಾಲಿಯ
ಸೇರಿಸಿದಂ ವಿಶ್ವಕರ್ಮ ಹರಿಯನುಮತದಿಂ ೨೦

ಮಂದರ ಮಲಯಾಚಲ ಗಿರಿ
ವೃಂದಂ ಮೇಲ್ವಲಗೆ ಮಂತ್ರತಂತ್ರೌಘಗಳಿಂ
ಬಂಧಿಸಿದ ನೇಣಮಾಡಿದ
ನಂದುಜ್ಜ್ವಲವೇದ[5]ಮಾಯ್ತು ನಾಲ್ತುರಗಂಗಳ್[5] ೨೧

ಆ ಸಮಯ[6]ದೊಳಖಿಳಾತ್ಮ[6] ನಿ
ವಾಸಂ ಗಣನಿಕರ ಸಹಿತೆ ಚಿತ್ತವಿಸೆನು[7]ತೆ[7] ವಿ
ಲಾಸ ಮಿಗಲ್ ಸುರರುಲಿಯಲ್
ಭಾಸುರಗಂಗಾಧರೇಶ ಕರುಣಾವಾಸಂ ೨೨

---

1 ಎಂದ ಮಾತಿಗೊಡಂ (ಚ) 2 ಸಿದನಾಗಂ (ಚ) 3 ಜ (ಕ) 4 ಎಂದ ಮಾತಿಂಗೆ ಕೃಷ್ಣಂ ಹಸಾದವೆಂದು (ಚ) 5 ನಾಲ್ಕು ತುರಗಗಳಾದಾ (ಚ) 6 ದಿಯಖಿಳಾತ್ಮಕ (ಗ) 7 ತುಂ (ಗ)

ಪುಲಿಸೊವಲ ಚಪ್ಪಣಂ ಫಣಿ
ದಳಿ ಮಾಣಿಕ ಕಡೆಯ ಜಡೆಯ ಚಿಮ್ಮುರಿಸಿಸೆಯೊಳ್
ಕಲಿಯೆಸಿಸುವ ಮನ್ಮಥನಂ
ಗೆಲಿದ ಮಹಾವೀರ ವೀರಸಹ ಸ್ರೋಜನಂಟಂ ೨೩

ರಥಮಾದುದನ್ನು ನಡೆಸುವ
ರಥಿಕನದಾರೆಂದು ಕೃಷ್ಣನಂ ಕೇಳಲೊಡಂ
ಪೃಥುಳಶ್ರುತಿಯಂ ನಡೆಸುವ
ರಥಿಕಂ ಕಮಲಜನು ಕರೆಯಿಮೆಂದಂ ಸುರರಂ ೨೪

ವಚನ : [1]ಎಂತೆನೆಯಮರರ್ ಪೋಗಿ ಬ್ರಹ್ಮನಂ ಕರೆತಂದು ಸಾರಥಿಯಂ ಮಾಡಲು[1]

ಕಂದ : ಸರಸಿಜಲೋಚನ ಧನುವಂ
ಸರಳಂ ಸಂವರಿಸಿಮೆನಲು ನಗುತುಂ ಹೇಮದ
ಗಿರಿಯಂ ಬಿಲ್ಲಂ ಮಾಡಿದ
ನುರಗೇಶನ ಹೆದೆಯ ಮಾಡಿದಂ ಮುರಮಥನಂ ೨೫

ತಾಸಂಬಾದಂ ಸುರಜನ
ಮಾಸಂಪದೆ ಪೊಗಳಿತ ಜಗಮುಘೇ: ಎನೆ ಸದ್ಭ
ಕ್ತಾನಂದಂ ಗುಣವೃಂದಂ
ಭಾನುಸಹಸ್ರಾಂಶು ರಥಕೆ ಬಿಜಯಂಗೈದಂ ೨೬

ಚಂಪಕಮಾಲೆ

ಉಲಿವ ಸುರಾಳಿಯಿಂ ರಥದ ಮೇಲೆ ಶಿವಂ ಪದಮೂಜಲಾಕ್ಷಣಂ
ತಲೆಯುಡಿಯಾಗಿ ವೇದಮುಮ ಮುಗ್ಗಿದುವಾ ರಥ ತಗ್ಗಿ ತೀಡು ಕೀ
ಲ್ಬಳೆ ಮೊಳೆಯುರ್ಚೆ ಮುಟ್ಟಲು ರಸಾತಲದೊಳ್ ವೃಷಭಾಂಗದಿಂದೆ ಪೊ
ಕ್ಕಳುಕದೆ ತಾಳ್ದು ಬಲ್ಪು ಜಗತ್ತಿರದಾ ಜಲಜಾತಲೋಚನಂ ೨೭

ಕಂದ : ಮೊರೆದುವು ಸುರದುಂದುಭಿಗಳ್
ಕರೆದುವು ಬಿರುತ್ತಿ ಕಹಳೆ ಬಲುಬೊಬ್ಬೆಗಳ
ಬ್ಬರ ಮುಸಗಿತು ಸುರಬಲ ಮಿಗೆ
ತೆರಳಿತು ಧರೆ ಕೂಗಿದು ದಾಜಯೋದ್ಧ ತರಾ[2]ಗಳ್[2] ೨೮

ವಚನ : [3]ಇಂತು ಬರ್ಪದಮಾ ಸೇನೆಯಿಂ ತ್ರಿಪುರವಾಸಿಗಳ್ ಕಂಡು[3]

---

1 ಅಂತೆನಲಾ ಸುರಸಮುಚ್ಚಯರ್ ಪೋಗಿ [illegible] ತಿಳುಹಿ ತಂದು ಬ್ರಹ್ಮನಂ ಸಾರಥಿಯ ಮಾಡೆ (ಚ) 2 ಗಂ (ಜ) 3 ಅಂತು [illegible] ಬರ್ಪುದಂ ತ್ರಿಪುರನಿವಾಸಿಗಳ್ ಕಂಡು (ಚ)

ಚಂಪಕಮಾಲೆ

ಇದೆ ಹೊಲವೇಡೆಯೊಳ್ ಬಿನುಗುವೇವರ ಪೌಜೆನುತಾರ್ದು ಬಂದು ತಾ
ಗಿದರಡಗಟ್ಟಿ ಚೂಣಿಯೊಳೆ ಮುಂಚುವವಂ ಬಿಸವೆಚ್ಚು ಮುಂದೆ ನಿ
ಲ್ಲದೆ ಕೆಲಸಾರಿ ಪೊಯ್ದೊರಸುನಬ್ಬರ ಹಬ್ಬಿತು ಖೋ ಎನುತ್ತೆ ತು
ಬ್ಬಿದ ಬಲುಹುಯ್ಯಲಂ ಹರಿ ಸುರೇಶ್ವರ ಮುಖ್ಯರು ಕೇಳ್ದರಾಕ್ಷಣಂ ೨೯

ಕಂದ : ಸೇರಿದರಾ ವೃಷಭಂ ದ
ಕ್ಷಾರಿ ಮಹಾಕಾಳಿ ಚಂಡಕೀರ್ತಿಗಳುಂ ಬಿ
ಲ್ಲಾಳಿರುಗಳ್ ನಡೆತರೆ ಮದ
ನಾರಿಗೆ ತಾಂ ಪೆರ್ಚೆ ವೀರರಸಮುಕ್ಕಾವಿನಂ ೩೦

ಚಂಪಕಮಾಲೆ

ಸುರಪತಿಯಗ್ನಿ ದಂಡಧರ ನೈರುತಿ ವಾರಿಧಿನಾಥ ವಾಯು ಶಂ
ಕರಸಖ ಶೂಲಿ ವಿಷ್ಣು ಮೊದಲಾದರುನೆಲ್ಲರು ಪೌಜುಮಾಡಿಯು
ಬ್ಬರಿಸುತೆ ಭೇರಿಯಂ ಪೊಡೆಸಿ ನೀಂ ನಡೆ ತಾಂ ನಡೆಯೆಂದು ನೂಕಿಯೊ
ತ್ತರಿಸುತೆಯಾಗ ಬಾಂಬೊಲಿಲ ಸೀಮೆಯೊಳಾಂತು[3] ಬಿಟ್ಟುದಾಕ್ಷಣಂ ೩೧

ವಚನ : [1]ಅಂತು[1] ರಕ್ಕಸರ ಸೀಮೆಯೊಳ್ ಬಿಡುವ[2]ದುಮುನರ್[2] ಮುಸಗಿ

ಚಂಪಕಮಾಲೆ

ಮುಸಗಿತು ರಾಕ್ಷಸೇಂದ್ರಪುರದೊಳ್ ಬಲುಹುಯ್ಯಲು ಹೊಯ್ವ ಭೇರಿಯಿಂ
ದೆಸೆ ಬೆಸಲಾದುದೆಂಬವೊಲು ತಾಗಿದರಾ ಸುರಸೈನ್ಯವಾರ್ಧಿಯುಂ
[3]ದಿಸುವ [4]ಶರಂಗಳಿಂ[4] ಪೊಡೆವ ಲೌಡಿಗಳಿಂ ಮಿಗೆ ತೂಳ್ವ ದಂತಿ ಸಿ
ಪ್ಪಸರದೆ ನೂಂಕುತಿರ್ಪ ರಥ ವಾಜಿಗಳಿಂ ಬೆರಸಿರ್ದುದಾರ್ಕೆನಿಂ ೩೨

ಕಂದ : ತರಹರಿಸಿ ರಕ್ಕಸರ ಬಲ
ಬೆರಸಿತು ತಲೆವಿಲ್ಲುಗೊಂಡು ಸೂಸುವ ಕರುಳಿಂ
ಹೊರಳುವ ಮುಂಡಗಳಿಂದಂ
ಸುರಬಲವರೆನೆಲಿಗೆ ಮುಳಿಂದು ಮುಗಿ ಮದಾಂಗಗಳ್[5] ೩೩

ವಚನ : ಅಂತು ಮುಳಿದುಮುಬರ್ಪ ಸುರಸೇನೆಯುಂ ದಿಕ್ಪಾಲಕರ್ ಕಂಡು [6]ತಗುಳೆ[6]

---

1 ಅಂತು ತಗುಳ್ಮುಗುಳಿಂದೆಚ್ಚಾಡುತೆ (ಚ) 2 ದುಂ ರಕ್ಕಸರ್ (ಚ) 3 ಯಿ (ಚ) 4 ಸರಳ್ಗಳಿಂ (ಚ) 5 ಗಂ (ಗ ಚ) 6 ದೇವ ಬಲಂ ದೇವೇಂದ್ರಮುಖ್ಯದಿಕ್ಪಾಲಕರೇಱಿದುಂ (ಚ)

ಕಂದ : ಮುಱಿದುದು ರಕ್ಕಸಬಲ ಮಿಗೆ
ತಱುಬಿತು ಸುರಸೈನ್ಯ ಕೋಂಟೆದೆನೆಯೇಱುವರಂ
ತಱಿದರ್ ವಿದ್ಯುನ್ಮಾಲಿಗ
ಳಱತಿಮುಸಗಿದರಮುಮ ಚೆರಸಿದರ್ ವೀಥಿಯೊಳುಂ ೩೪

ಎತ್ತಿದರೆಚ್ಚರ್ ಕಡಿದರ್
ತತ್ತಱದಱಿದರ್ ಕುಸುಂಬಿದರ್ ತುಂಡಿಸಿದರ್
ಕುತ್ತಿದರಿಱಿದರ್ ಪೊಯ್ದರ್
ಮುತ್ತಿಗೆದೆಗೆಸಿದರ್ ಚೆರಸಿದರ್ ಪರಬಲದೊಳ್ ೩೫

ವಚನ : ಅಂತು ದೇವಬಲಂ ಮುಱಿದು[1]ಬರೆ ವೃಷಭೇಂದ್ರಂ[1] ಕಂಡು

ಚಂಪಕಮಾಲೆ

ಹರಹರ ಹೇಳಬಾರದು ವೃಷೇಂದ್ರನ ವೀರವ ವೈರಿಸೇನೆಯೊಳ್
ಚೆರಸಿದನಡ್ಡಬಿದ್ದವರ ಹೊಯ್ದುಱಿ ಸೀಳಿದನಟ್ಟಿಮೆಟ್ಟಿ ಕ
ತ್ತರಿಸಿದ ದುರ್ಗಮುಂ ಹೊಗಿಸಿ ಬಾಗಿಲೊಳುಂ ಕಡಿಖಂಡ ಮಾಡಿ ತಾಂ
ತಿರುಗಿದ ಧರ್ಮಗಾಳೆಗಳ ಬಾಜಿಸುತುಂ ಶಿವನಾಳು ಲೀಲೆಯಿಂ ೩೬

ವಚನ : ಅಂತು ಮುಱಿದು[2] ಕೋಂಟೆಯೊಳ್[2] ಸೇರುವುದಂ ಶಿವಂ ಕಂಡು

ಕಂದ : ಪುರದಲ್ಲಿಯಮೃತಕೊಳನುಂ
ಪರಮಪತಿವ್ರತೆಯರುಂಟುಮಿದಱಿಂ ದೂರಂ
ಪರಿಹರಿಸಲಱಿದು ನೀಂ ಕಂ
ಡುರುತರ ಬಗೆಯೇನು ಕೃಷ್ಣಯೆಂದ ಮಹೇಶಂ ೩೭

ಮಾರಿಭಯಂ ಮರಣಭಯಂ
ಕ್ರೂರೋರಗಭಯ ನೆಗಟ್ಟಿ ಡಾಮರಭಯಮುಂ
ದೂರಿಸುವ ಕ್ಷಾಮಭಯಮುಂ
ಸಾರವು ಪತಿಹಿತೆಯರಿರ್ದ ನೆಲಮೊಳ್ ಕೃಷ್ಣಾ ೩೮

---

1 ನುಂ ಕಡಿಖಂಡಂ ಮಾಡುವುದುಂ ವೃಷಭೇಶ್ವರಂ(ಚ) 2 ಪೋಗಿ ಕೋಂಟೆದೆನೆಯೊಳ್ (ಚ)

ವಚನ : [1]ಎಲೆ ಶಂಕರ ನಾನುಂ ಬ್ರಹ್ಮನುಂ ಪದ್ಮಿನಿಯೆಂಬ ಮಾಯಾಂಗನೆಯುಂ ಪೋಗಿ ಸಾಧ್ಯಂಗೈದಪೆವು ನೀಂ ತ್ರಿಪುರವೊಂದಾಗಿ ಕೂಡುವುದಂ ನೋಡುತಿರ್ಪುದೆಂದು ತಾಂ ಪಶುವಾಗಿ ಬೊಮ್ಮಂ ಕಱುವಾಗಿ ಪದ್ಮಿನಿ ಗೊಲ್ಲಹೆಂಗುಸಾಗಿ ಪೊಕ್ಕಮೃತದ ಕೊಳದ ಮೃತಮಂ ನಿಶ್ಶೇಷಂ ಮಾಡಿ[1]

ಮತ್ತೇಭವಿಕ್ರೀಡಿತ

ಬೆಳೆದಂ ಪೂರ್ವತ್ರಿವಿಕ್ರಮಂಬೊಲು ನಭೋಂತಂ ಮುಟ್ಟೆ ಸೌಂದರ್ಯ ವೆ
ಗ್ಗಳಿಸಲ್ ಮೆಲ್ಲಡಿ ಗುಲ್ಫ ಜಾನು ಘನಜಂಘಾಕಾಂಡಮೂರು ಸ್ಥಲಂ
ಸುಳಿನಾಭೀ ಪೃಥುರೋಮರಾಜಿ ನಳಿತೋಳ್ ಸಂಪೂರ್ಣಚಂದ್ರಾನನಂ
ಪೊಳೆಯಲ್ ಮೋಹನ ತುಂಬಿ ಮೇಲ್ವರಿಯೆ ಬೌದ್ಧಾಕಾರದಿಂದಚ್ಯುತಂ ೩೯

ಕಂದ : ಹಿಂದಕ್ಕೆ ಗೋಪಕಾಂತಾ
ವೃಂದಂ ಅನಿರ್ಗ್ರಂಥಮೆನಿಸಿದಾ ಫಲದಿಂದಂ
ಬಂದುದು ಕೃಷ್ಣಗೆ ನಗ್ನತೆ
ಯೆಂದರೆ ಮಾಡಿದುದು ಮಿಕ್ಕರಂ ಬಿಟ್ಟಪುದೇ ೪೦

ವಚನ : [2]ಅಂತು ಪದ್ಮಾಪತಿಯೆಂದು ಬ್ರಹ್ಮನೆಂದು ಬೌದ್ಧದರ್ಶನಮಾಗಲಾಗಳ್[2]

ಕಂದ : ಪುರದಿಂ ಪೊಱಮಟ್ಟರ್ ಶಂ
ಕರನಂ ನೆಱೆ[3] ಕಂಡು ದೇವದಿವ್ಯಸಹಸ್ರಂ
ವರುಷಂಗಳಾದುವೆನುತುಂ
ಸರಳಾದಂ ಕೃಷ್ಣಚರಿತಮೇನಗ್ಗಳಮೋ ೪೧

ವಚನ : ಅಂತು ಪುರದ [3]ಕೂಟಮಂ[3] ಶಂಕರಂ ನೋಟ್ಪಲ್ಲಿ ಕಣ್ಣನೀರುಂ ರುದ್ರಾಕ್ಷೆ[4]ಗಳಾದುವಾಗಳ್ ತ್ರಿಪುರಂ ಕೂಡಲ್[4] ಕಂಡು

ಚಂಪಕಮಾಲೆ

ತುಡುಕಿದನಾಕ್ಷಣಂ ಪೊಳೆವ ಚಿನ್ನದ ಬಿಲ್ಲನಡರ್ದು ತನ್ನ ಪೆ
ರ್ಮೊಡವಿನ ಮೌರ್ವಿಯಂ ಪಿಡಿದು ಪಾಶುಪತಾಸ್ತ್ರವ ಹೂಡೆ ಲೋಕಗಳ್
ನಡುಗೆ ಪಯೋಧಿ ತುಳ್ಕೆ ತೆಗೆದೆಚ್ಚನು ಮನ್ಮಥವೈರಿಯೊಂದೆರ
ಳ್ಕಡಿಯೊಳೆ ಬೆಂದುದಾ ತ್ರಿಪುರ ಹಬ್ಬಿದುದಂಬಿನ ಕಿಚ್ಚು ಲೋಕಮಂ ೪೨

---

[1] ಎನಲು ಶ್ರೀಕೃಷ್ಣಂ ಎಲೆಮಹಾದೇವನೆ ನಾನುಂ ಬ್ರಹ್ಮನುಂ ಪದ್ಮಿನೀಯೆಂಬ ಮಾಯಾಂಗನೆಯುಂ ಪೋಗಿ ಸಾಧ್ಯಂಗೆಯಿದಪೆವು ನೀನು ತ್ರಿಪುರವೊಂದಾಗಿ ಕೂಡುವುದಂ ನೋಡುತಿರ್ಪುದೆಂದು ಕೃಷ್ಣಂ ಪಶುವಾಗಿ ಬ್ರಹ್ಮಂ ಕಱುವಾಗಿ ಪದ್ಮಿನಿ ಗೊಲ್ಲಸ್ತ್ರೀಯಾಗಿ ಪೊಕ್ಕ ಅಮೃತದಕೊಂಡದಮೃತಮಂ ನಿಶ್ಶೇಷಮಾಡಿಕೊಂತು (ಚ) [2] ಅಂತಪ್ಪ ಬೌದ್ಧಾವತಾರಮಂ ಕಂಡು ಸರ್ವಜ್ಞನೆಂದು ಬೌದ್ಧದರ್ಶನಮಾಗಲಾ ಸಮಯದಲ್ಲಿ (ಚ) [3] ಕೋಂಟೆಯಂ ಗ) [4] ಗಳಾಗಿ ಪುಟ್ಟಿದವಾಸಮಯದಲ್ಲಿ ಪುರಮೂಱುಂ ಕೂಡಾದುಂ ಶಿವಂ (ಚ)

ಕಂದ : ಆ ಸಮಯದಲ್ಲಿ ಸುರರು ಮ
ಹಾಸಂಕಟಗೊಂಡು ದೇವ ಸರಳಂ ಕಟಾಕ್ಷಯೆಂ
ದೋಸರಿಸದೆ ಬಾಣದೆ ಲ
ಕ್ಷ್ಮೀಶನ ಪೊಗಟ್ಟಿದರು ಭಕ್ತಿರಸಮುಣ್ಮುವಿನಂ ೮೩

ಬಿಡದೋಡಿ ಗಂಟನಿಡುವರಿ
ಪೊಡವಿಯ ರಕ್ಷಿಸುವೆನೆಂದು ಕೊಲ್ವುದು ಗುಣವೇ
ಕಡುಕರುಣಿಯಾಗೆನುತ್ತುಂ
ನುಡಿಯಲ್ ಸುರರುಗಳ ವಚನ ಪರ್ಬಿತು ಜಗಮಂ ೮೮

ವಚನ: ಆ [1]ಸ್ತುತಿಗೆ[1] ಸಂತುಷ್ಟನಾಗಿ ಸುಡುವುದಂ ಬಿಟ್ಟು ತನ್ನ ಶಕ್ತಿಯಪ್ಪ ಬಾಣಮಂ ಶಿವನ ಕೈಸಾರ್ಚಿ ಎಂದಿನಂತೆ ರಥಮಂ ಸ್ಥಾನಂಗಳೊಳಿಟ್ಟು

ಕಂದ : ಹರನಿಂ ಕಟುಹಿಸಿಕೊಂಡಾ
ಸುರರಂ ಬೀಟ್ಕೊಟ್ಟು ಕ್ಷೀರವಾರ್ಧಿಯೊಳೊಲವಿಂ
ಪರಮಸುಖಿಯಾದ ಶ್ರೀಯುತ
ಹರಿಯಿರ್ದಂ ಸಕಲಲೋಕಮಂ ರಕ್ಷಿಸುತುಂ ೮೫

ಮತ್ತೇಭವಿಕ್ರೀಡಿತ
ಧರಣೀಸೌಖ್ಯಕರಂ ಗದಾಯುಧಧರಂ ಶ್ರೀಶಾರ್ಙ್ಗಚಕ್ರೋಧರಂ
ವರಪೀತಾಂಬರ ದಿವ್ಯಕೌಸ್ತುಭಧರಂ ಲಕ್ಷ್ಮೀವರಂ ಭೂಧರಂ
ಸುರಸಂದೋಹಮುನೀಶ್ವರಾರ್ಚಿತ ಪದಂ ಸೌಖ್ಯಾಕರಂ ನಿರ್ಮಲಂ
ಪರಮಾನಂದಕರಂ ಜಗತ್ಪ್ರಕರಮಂ ರಕ್ಷಿಕ್ಕೆ ನಾರಾಯಣಂ ೮೬

ಗದ್ಯ : ಇದು ವೃಂದಾರಕವೃಂದ ಪರಿಮಣಿಖಚಿತ ಮಕುಟರಂಜಿತ ಶ್ರೀಮದಾದಿ
ನಾರಾಯಣ ಶ್ರೀಚರಣಸರಸೀರುಹ ಮಕರಂದಷಟ್ಚರಣ ಸಲ್ಲಲಿತ ಮಲ್ಲರ
ಸಾಂಕ ವಿರಚಿತಮಪ್ಪ ದಶಾವತಾರಚರಿತ ಮಹಾಪ್ರಬಂಧದೊಳ್
ಕ್ಷೀರಾಬ್ಧಿವರ್ಣನೆ ನಾರದಾಗಮನ ಬ್ರಹ್ಮವರ ಪಶುಪತಿಪಟ್ಟ
ತ್ರಿಪುರಸಂಹಾರ ಮುಖ್ಯವಾದ ಬೌದ್ಧಾವತಾರಂ

ದಶಮಾಶ್ವಾಸಂ

---

[1] ಸ್ತೋತ್ರಕ್ಕೆ (ಚ)

ಏಕಾದಶಾಶ್ವಾಸಂ

ಕಂದ : ಶ್ರೀ ನಾರೀವರನಧಿಕಂ
ದಾನವಕುಲವನಕುಠಾರನಮಿತೋದ್ಧಾರಂ
ದೀನಾನತ ಸದ್ಭಕ್ತರ
ನಾನಂದದೆ ಪೊರೆವುದಾದಿನಾರಾಯಣನೇ ೧

ಓರಂತೆ ಶರಣಕುಲವಿ
ಸ್ತಾರಿತ ಕಲಿಮಲವಿದೂರ ತಾರ್ಕ್ಷ್ಯಾಶ್ವಸಮು
ದ್ಧಾರಿತರಾವ್ರತ ಕಲ್ಕ್ಯವ
ತಾರಂ ಮಾಡುತ್ತಲಿರ್ಕೆ ಸೌಖ್ಯೋನ್ನತಿಯಂ ೨

ಕ್ಷೀರಾಬ್ಧಿಯಲ್ಲಿ ವೈಷ್ಣವ
ನೀರೇರುಹಮಿಹಿ[1]ರ[1] ಲಕ್ಷ್ಮಿಸಹಿತಂ ಲೋಕೋ
ದ್ಧಾರಂ ಸುಖಮಿರಲೋಲಗ
ಕೋರಂತಿರಲಿಂದ್ರರಜ ಮುನೀಂದ್ರರ್ ಬಂದರ್ ೩

ವಚನ : ಅಂತು ಬಂದು [2]ನಮಸ್ಕಾರಂಗೈದು[2] ಕುಳ್ಳಿರ್ಪುದುಂ

ಕಂದ : ದರಹಾಸದ ಬೆಳ್ದಿಂಗಳ್
ಶರಧಿಯ ಪೆರ್ಜೆಱೆಯ ಮೇಲೆ ಸೂಸಿತ್ತೆನಿಪೊಲ್
ಹರಿ ನಸುನಗುತೊಯ್ಯನೆ ತಾಂ
ಸುರಜ್ಯೇಷ್ಠನ ಹರುಷದಿಂದೆ ಮಾತಾಡಿಸಿದಂ ೪

ಎಡೆ ನರೆವಾಯ್ತುದು ದೇಹಂ
ಸಡಿಲಿತು ಪಂಕೇಜಗರ್ಭ ವರ್ಷಗಳೆನಿತುಂ
ನಡೆದುವು ನಿನಗೆನೆ ಮತ್ತಾ
ನುಡಿಯಂ ಲಾಲಿಸುತಂ[3] ಸುಮ್ಮನಿರ್ದಂ ಬ್ರಹ್ಮಂ ೫

---

1 ತ (ಕ) 2 ನಮಸ್ಕಾರಂಗೈದು ನೇಮಸ್ಥಾನಮಂಬಂದು (ಚ) 3 ಯನದಾಲಿಸುತೆ (ಕ)

ವಚನ : ಆ ಸಮಯದೊಳ್ ಮಾರ್ಕಂಡೇಯ ಋಷೀಶ್ವರಂ ತನ್ನಾಯುಷ್ಯವಂ ತಾಂ ಪೇಳ್ವುದು ಶಾಸ್ತ್ರಸಿದ್ಧಮಲ್ಲ ನಾಂ ಬಿನ್ನಪಂಗೈವೆನೆನುತಿಂತೆಂದಂ

ಕಂದ : ಪೊಡೆಯಲರ ನಿಮ್ಮ ಕುವರಂ
ನುಡಿವರೆ ತನ್ನಾಯುಗುಣವ ಸರ್ವಜ್ಞಂ ನೀಂ
ಪಡೆದವನಿದೇನು ಮಾರ್ಗವೆ
ಕಡಲೆಯು ಬಿತ್ತಿನೊಡೆ ಕಳ್ಳಿ ಮೊಳೆವುವೆ ಹರಿಯೇ ೬

ವಚನ : ಎಂದು ಮತ್ತಮಿಂತೆಂದಂ

ಉತ್ಪಲಮಾಲೆ

ಚಿತ್ತವಿಸಂಬುಜೋದರ ಜಗತ್ಪಿತನಾದ ಭವತ್ಕುಮಾರಗ್ಗೆ
ವತ್ತಬುದಂಗಳಾಗಿ ನಡೆಯುತ್ತಿಹ ವತ್ಸರದಾದಿಮಾಸವೊ
ಪ್ಪುತ್ತಿಹ ವಾಸರಾರ್ಧಮೊಳೆ ಸಂದವು ನಾಡೆ ಮಹಾಯುಗಂ ಕೆಲಂ
ಮುತ್ತವಳಿಲ್ಲಿ ಮೂಱುಯುಗ ಸಂದುವು ಚಿತ್ತ[1]ವಿ[1]ಸಂಬುಜಾಂಬಕಾ ೭

ಕಂದ : ಜಲಜಾಕ್ಷ ನಡೆವುದೀ[2]ಗಳ್[2]
ಕಲಿಯುಗದೊಳ್ ಪ್ರಥಮಪಾದವದರಾಯತಮಂ
ಸಲೆ ಬಲ್ಲಂ ನಾರದಮುನಿ
ಕುಲಭಾನಕನಿಂವೆ ಚಿತ್ತವಿಸು ನೀನನಘಾ

ವಚನ : ಎಂದ ಮಾತಿಗೆ [3]ಲಕ್ಷ್ಮೀಮನೋಹರಂ[3] ನಸುನಗುತಿಂತೆಂದಂ ೮

ಕಂದ : ಕೊಲಿಸುವನಿಱಿದಾಡಿಸುವಂ
ಒಲಿದಡೆ ರಕ್ಷಿಸುವನೊಲ್ಲದಡೆ ಶಿಕ್ಷಿಸುವಂ
ಸಲೆ ಶುಭಚರಿತಂ ನಾರದ
ಕಲಹಪ್ರಿಯನೆಂದು ವಿಷ್ಣು ಬಿನದದೆ ನುಡಿದಂ ೯

ವಚನ : ಎನಲಾ ನಿರೂಪಕ್ಕೆ ಮಾರ್ಕಂಡೇಯಂ ಮಾರ್ಕೊಂಡು ಮಿಥ್ಯಾಂತವೇನಿಪ್ಪದೆಂದು ಹರಿಯೊಳ್ ಯಥಾಸ್ಥಿತಿಯಂ ಬಿನ್ನವಿಸಿದ[4]ನೆಂತೆನೆ[4]

---

1 ಯಾ (ಚ) 2 ಗಂ (ಚ) 3 ಶ್ರೀಕಾಂತನು ಮನೋಹರಂ ಜಗದ್ವಿಖ್ಯಾತ ಪುರುಷಂ (ಚ)
4 ನದೆಂತೆಂದೊಡೆ (ಚ)

ಕಂದ : ಕಲಹಪ್ರಿಯನೆಂಬರೆ ನಿ
ರ್ಮಲಚರಿತಜಗದ್ಧಿತಾರ್ಥದೇವರ ಜಯಮಂ
ಸಲೆ ಬಯಸುವ ನಾರದನಿಂ
ದಲಿ ಕಾಣಿಸದಿರ್ಪ ಕಜ್ಜಮೆಳ್ಳನಿತುಂಟೇ ೧೦

ವರ ಮತ್ಸ್ಯನಾದಿಕೂರ್ಮಂ
ನರಹಂ ನರಸಿಂಹ ವಾಮನಂ ಶ್ರೀರಾಮಂ
ಉರುತರ ಬೌದ್ಧವತಾರದಿ
ನಿರುತಂ ನೋಡಿದಿರಿ ನಾರದಂ ಪುಸಿವವನೇ ೧೧

ವಚನ : ಎನಲಾದಿಪುರುಷಂ ನಸುನಕ್ಕು [1]ಎಲೆ ನಾರದ ಯುಗದ ವೇಥೆ ಬಾಧೆ ಪುಟ್ಟಿದುವೆ ಪೇಟ್ವು[2] ಎನಲಿಂತೆಂದಂ[1]

ಮತ್ತೇಭವಿಕ್ರೀಡಿತ

ಪೊಡವೀವಲ್ಲಭದೇವ ಕೇಳ್ ಕಲಿಯುಗಂ ಪ್ರಾರಂಭವಾಯ್ತ್ತೈಸೆ ಮುಂ
ನಡೆವೀ ಕಾಲವ ದೇವರೇಂ ತಿಳಿಯಿರೇ ಸರ್ವಜ್ಞ ನೀನಲ್ಲವೇ
ಕಡುಧೂರ್ತರ್ ಮಡಿ[2]ವರ್ ಜಗಕ್ಕೆ ಭರವಿನ್ನೇನೆಂದು ಸೌಕರ್ಯದಾ
ನುಡಿಯಂ ಸಾಲಿಡುತಿರ್ದನಾ ಕಲಹಧಾರಾನೀರದಂ ನಾರದಂ ೧೨

ಕಂದ : ಕಡುದುಷ್ಟದೈತ್ಯತಮನಾ
ಜಡಮತಿ ಶಿಶುಪಾಲ ಕಂಸ ಮಗಧಾದಿಗಳಂ
ಮಡುಹಿದಿರಿ ಕೋಟಿಸಂಖ್ಯೆಯ
ನುಡಿವುದು ಮತ್ತೇನು ಪೇಟ್ವುದಂಬುಜನಾಭಾ ೧೩

ವಚನ । [3]ಎನಲಾ ಬ್ರಹ್ಮಾಮರಮುಖ್ಯರ್ ಕೈಗಳಂ ಮುಗಿದು ದೇವಾ ನಾರದಂ ಸೌಕರ್ಯವಚನಮಂ ನುಡಿದನದು ನಿಶ್ಚಯಮಲ್ಲ ಚಿತ್ತೈಸೆಂದರದೆಂತೆನೆ[3]

ಕಂದ : ಯುಗವಾಕ್ಯದ ಮನುಜರ್ ಸಂ
ಯುಗಕೋಡುವ ಭಟರನಿನಹಮಾ ಕಾಲಗಳಾ
ಯುಗವರೆಯಹ ಬಾಟುವೆ ಕಲಿ
ಯುಗಮದನೇನೆಂದು ಪೇಟಬಹುದಬ್ಜಾಕ್ಷಾ ೧೪

---

[1] ಮಾರ್ಕಂಡೇಯಂಗೆ ತಪಸ್ಕೃತ್ಯವಲ್ಲದೆ ಜಗದ್ವಿಚಾರವಿಲ್ಲ ಯೆಲೆ ನಾರದ ನಿನ್ನ ನುಡಿ ಹಿತವಾಕ್ಯ ಯುಗದ ವೇಥೆ ಬಾಧೆ ಪುಟ್ಟಿದವೆ ಪೇಳ್ಳೆಯೆನೆ ನಾರದಂ ಬಿನ್ನೈಸಿದಂ (ಜ) [2] ದ (ಜ, [3] ಯೆನಲು ಬ್ರಹ್ಮಂ ಸುರಪಮುಖ್ಯವಾದ ದೇವಸಮುದಯಂ ಋಷಿಕುಲ ಸಹಂ ಕರಗಳಂ ಮುಗಿದು ದೇವಾ ನಾರದಂ ಸೌಕರ್ಯವಚನವಂ ನುಡಿದನದು ನಿಶ್ಚಯಮಲ್ಲ ಚಿತ್ತೈಸೆಂದರದೆಂತೆಂದೊಡೆ (ಜ)

ತನುನೊಯ್ದು ವೇದಮಾರ್ಗ
ಕ್ರಮುವೆನಿಸಿತು ವೇದ ದೇವ ಭಾವಿಪೊಡೀಗಳ್
ತನುನೊಯ್ಯದೆ ಶ್ರುತಿಮಾರ್ಗ
ಕ್ರಮವಿಲ್ಲದೆ ಪೋಪುದಯ್ಯ ಮೇಘಶ್ಯಾಮಾ ೧೫

ವರ ಮುನಿಶಾಪದೆ ದಿವಿಜರ
ಸಿರಿ ಪೋದುದು ಮುಂದೆ ಮುನಿಯ ಶಾಪಂ ಪೋಗದೆ
ನಿರುತಂ ಹವ್ಯದೆ ದಿವಿಜರ
ಸಿರಿ ಪೋಪುದು ಮಾಣದಯ್ಯ ಮನುಮುನಿವಂದ್ಯಾ ೧೬

ಖಳನಾ ಹಿರಣ್ಯಕಾಕ್ಷಂ
ಬೆಳೆಯಂ ಕೆಡಿಸಿದನು ಧರೆಯನಾಸುರನಳಿದುಂ
ಬೆಳೆ ಕೆಟ್ಟು ರತ್ನಗರ್ಭೆಯ
ಬೆಳೆ ಪೋದುದು ಪೇಟಿಲೇನು ಲಕ್ಷ್ಮೀರಮಣಾ ೧೭

ದುರುಳ ಹಿರಣ್ಯಕ ನಿನ್ನಿ
ಮ್ಮುರುನಾಮಸ್ಮರಣೆಗೆಟ್ಟುದವನಳಿದುಂ ತ್ವ
ಚ್ಚರಣದ ಕೀರ್ತನೆ ನಿಮಿಷಂ
ಸರಕಲಿಸದು ಪೇಟಿಲೆಂತು ಪಂಕಜನಾಭಾ ೧೮

ಬಲಿಯಿಂದೆ ಪರರ ಚಿಂತೆಯ
ನೆಲಸಿತ್ತಿ[1]ಲ್ಲಿ[1]ವನ ಪಸಪಿಯಳಿದ ಬಳಿಕ್ಕಂ
ಸಲೆಸಂದಿಹ ಪರಚಿಂತೆಯ
ಹೊಲಬಿಲ್ಲದೆ ಪೋದುದಯ್ಯ ಮನ್ಮಥತಾತಾ ೧೯

ವರ ಕಾರ್ತವೀರ್ಯನಿಂ ಭೂ
ಸುರ ಚಿತ್ತಕ್ಷೋಭೆಯಾದುದವನಳಿದಿರ್ದುಂ
ಪಿರಿದೆನಿಸುವದನುದಿನ ಭೂ
ಸುರ ಚಿತ್ತಕ್ಷೋಭೆಯಕ್ಕು ಶ್ರೀವತ್ಸಾಂಕಾ ೨೦

---

[1] ಲ್ಲ (ಚ)

ದಶಕಂಠನಿಂ ಕುಲಸ್ತ್ರೀ
ದೆಸೆಗ[1]ಪ[1]ಜಯವಾಯ್ತುಮವನ ರೂಪಟಿದಿದರ್ಂ
ಪ್ರಸರಿಪುದು ಕುಲಸ್ತ್ರೀಯರ
ದೆಸೆಗಗ್ಗದ ಮಾನಹಾನಿ ಮಿಗೆ ಗೋವಿಂದಾ ೨೧

ಶಿಶುಪಾಲನಿಂದೆ ಮುಖಕಪ
ಯಶವಾದುರುಕಂಟಕತ್ವ ಬಂದುದುಮವನಾ
ಅಸುವಳಿದುಂ ಕ್ರತುಕುಲಕಪ
ಯಶ[2]ವಾಗಪೆ ಪ್ರಾಣದಕಟ[2] ಕಮಲದಳಾಕ್ಷಾ ೨೨

ಒಂದೊಂದು ಬಾಧೆಗೋಸುಗ
ಲೊಂದೊಂದವತಾರನಾದೆ ಪಾವನ[3]ಚರಿತಾ[3]
ಮುಂದೆ ಕಲಿಯುಗದ ಮಾರ್ಗದ
ವಂದುಗದೋಱಿಸುವುದಾದಿನಾರಾಯಣನೇ ೨೩

ವಚನ : ಮತ್ತಮಾ ಕಲಿಕಾಲಂ ವೇಶ್ಯಾಸ್ತನದಂತೆ ಬಹುಕರಪೀಡಿತಮುಂ ಬಬ್ಬೂರದ್ರುಮದಂತೆ ಕಂಟಕಸಮೂಹಮುಂ ಚೋರಾಗಾರದಂತೆ ದಾರಿದ್ರ್ಯಪ್ರವೇಶಮುಂ [4]ಕುರ್ಕುರ[4]ಮುಖದಂತೆ ಸ್ಪೃಶ್ಯಸಂಘಮುಂ ವ್ಯಾಧಜಾಲದಂತೆ ವಿಜಾತಿಸಂಘಮುಂ ಭುಜಂಗಸಂಕುಲದಂತೆ ವಕ್ರಮಾರ್ಗಿಯುಮೆನಿಪುದಂತುಮಲ್ಲ[5]ದೆಯುಂ[5]

ಚಂಪಕಮಾಲೆ

ನಿರಸನಭಾಸವೃತ್ತಿ ಬಹುದೋಷ ಕುಸಂಧಿಯು ಮಾರ್ಗ ದುರ್ಘಟೋ
ತ್ಕರ ಜಡಭಾರವಸ್ತುವಿನಯರ್ಥಗಭೀರ ವಿಶೂನ್ಯದೋಷಸಂ
ಕರ ಫಲನಾಶಮುಂ ಮಿಗಿಲುವೆತ್ತ ಅತತ್ರ ಅವೆಕ್ಕಸಕ್ಕದಿಂ
ಸ್ಫುರಿಪುದೆನಿಪ್ಪುದಾ ಕುಕವಿ ಕಾವ್ಯದವೊಲ್ ಕಲಿಕಾಲಮಾವಗಂ ೨೪

ಕಂದ : ಇದಱಿಂದೆ ದಾನಮಾರ್ಗಾ
ಸ್ಪದವೆಳ್ಳನಿತಿಲ್ಲ ಹೆಚ್ಚುಕುಂದೆಲ್ಲಂ[6] ತ್ವ
ತ್ಪದ ಪದ್ಮಾನು[7]ಗ್ರಹಮು[7]
ಲ್ಲದೆ ಮತ್ತೊಂದಿಲ್ಲ ದೇವ ನೀನಱಿಯದುದೇ ೨೫

---

[1] ವಿ (ಚ) [2] ಮುಪ್ಪುದು ಪ್ರಾಣಿಸೈಯ (ಚ) [3] ನಾಮಾ (ಚ) [4] ಕುಕ್ಕುರ (ಚ)
[5] ದೆ (ಕ) [6] ಕತ್ಸ (ಗ) [7] ಜ್ಞತೆಯ (ಗ)

ಸುರವೈರಿಗಳಳಿಯಂ ನಿ
ರ್ಧರಿಸಲ್ಕಹುದಯ್ಯ ಕಲಿಯ ಮಾರ್ಗಸ್ಥಿತಿಯಂ
ಪರಿಹರಿಸಲಱಿಯೆವಿದ ತಾಂ
ಹರಿ ನೀಂ ಸರ್ವಜ್ಞದೇವ ನೀನಱಿಯದುದೇ ೨೬

ವಚನ : ಎಂದ ಬಿನ್ನಪಕ್ಕೆ ಲಕ್ಷ್ಮೀರಮಣನಾಳೋಚನಂಗೈದು ಬ್ರಹ್ಮಾದಿಸುರಮುನಿಗಳ ವೊಗಮಂ ನೋಡಿ ಮುಗುಳ್ನಗೆ ನಗುತ್ತ ಕರುಣಾರಸಾರ್ದ್ರಹೃದಯನಾಗಿ

ಕಂದ : ಎದೆಹಾಱಿತೀತಕೆ ಕಲಿಕಾ
ಲದ ಭೀತಿಗೆ ಲೋಕರಕ್ಷನೆಂದ ಬಳಿಕ್ಕಂ
ಪದವಾವುದು ನಿಮ್ಮೊಳ್ನುಡಿ
ವುದಕೆಂದಂ ನಾನೆನುತ್ತೆ ಮತ್ತಿಂತೆಂದಂ ೨೭

ಸಲೆ ವಿಶ್ವಂಭರನೆನಿಸಿದ
ಬಳಿಕಂ ನಾವಿನ್ನು ತೊಲಗುವುದು ತಾನೆಂತೋ
ಅಲಸಿದಿ[1]ರೆ[1] ಕರ್ಮಬಾಧೆಗೆ
ಸಲೆ ಬೆಚ್ಚದಿರೆಂದು ದೇವನಭಯವನಿತ್ತಂ ೨೮

ಶ್ರುತಿಯ ತುರಂಗಕ್ಕಾಂ ರಾ
ವುತನಾಗಿಯೆ ತುಱಿಸಿ ಕೊಲ್ವೆ ಕಲಿಕಾಲದವು
ನ್ನತಿಯಾದ ಕರ್ಮಕುಲಮಂ
ಪ್ರತಿಜ್ಞೆಯಿದು ಬೆಚ್ಚಬೇಡವೆಂದ ಮುಕುಂದಂ ೨೯

ಮುಂದಕ್ಕೆ ನಡೆವ ಕಲಿಯುಗ
ವೆಂದೆಂಬುದ ಬಿಡಿಸಿಯೆನ್ನ ಧರ್ಮಾ[2]ಶ[2]ದ ಕೂ
ಡೊಂದಿದ ನಾಲ್ಕುಪದಮನಾ
ನಂದದೊಳುಂ ನಿಲಿಸಿ ತೋರ್ಪೆನೆಂದಂ ಕೃಷ್ಣಂ ೩೦

ಕರ್ಮಬಾಧೆಯನೆ ಬಿಡಿಸಿಯೆ
ಧರ್ಮವೆ ನಾಲ್ಕಡಿಯನೂಱಿ ವರ್ಧಿಸುವಂತಾಂ
ನಿರ್ಮಲಯುಗಮಂ ಮಾಱ್ಪಂ
ನಿಮ್ಮಿಷ್ಟವ ಸಲಿಪೆನೆಂದನಾ ಕಮಲಾಕ್ಷಂ ೩೧

ವಚನ : ಇಂತೆಂದ ನಿರೂಪಕ್ಕೆ ಸಂತಸಂಬಟ್ಟು ದೇವಾ ನೀನಲ್ಲದಾವಾಗಂ ಗತಿಯಾರೆಂದು ಸ್ತೋತ್ರಂಗೈದರದೆಂ[3]ತೆನೆ[3]

---

[1] ೦ (ಚ) [2] ಶ್ವ (ಚ) [3] ತೆಂದೊಡೆ (ಚ)

ಕಂದ : ಶ್ರೀರಮಣೀಕುಚಕುಂಕುಮ
ಸೌರಭ್ಯಾಂಕಿತ ವಿಶಾಲವಕ್ಷಸ್ಥಲ ಗಂ
ಭೀರಗುಣೋನ್ನತ ಸಾಕ್ಷಾ
ನ್ನಾರಾಯಣಭಜಕಬಂಧು ಕರುಣಾಸಿಂಧೂ ೩೨

ಉತ್ಸಾಹರಗಳೆ

ಶ್ರೀಮದಮರಮೌಳಿಮಣಿವಿರಾಜಿತಾಂಘ್ರಿ ನಾರಯಣಾ*
ಕಾಮಿತಾರ್ಥಕುಲಸಮೂಹ ಕಲ್ಪವೃಕ್ಷ ನಾರಯಣಾ
ಸಕಲ ಭುವನಕೋಶ ಪೀಠಿಕಾಪ್ರಕೋಶ ನಾರಯಣಾ
ಮುಕುತಿಮುಖ ನವೀನಕಾಂತಿ ಮುಕುರಮೂರ್ತಿ ನಾರಯಣಾ
ಅಮೃತಸಿಂಧುವೃಂದಮಂದಿರನಘಬಂಧು ನಾರಯಣಾ
ವಿಮಲಮುನಿಗಳಮಲ ಬಿನ್ನಪಮನೆ ಕೇಳ್ದೆ ನಾರಯಣಾ
ಹೊಳೆವ ಮತ್ಸ್ಯರೂಪದಿಂದ ಬೆಳೆದು ಸುಳಿದೆ ನಾರಯಣಾ
ಖಳನೆನಿಪ್ಪ ತಮನ ಕೊಂದು ಬಂದು ನಿಂದೆ ನಾರಯಣಾ
ಶ್ರುತಿಯ ನುತಿಯ ಪತಿ ವಿಧಾತ್ರಗಿಗೆ ಕೊಟ್ಟೆ ನಾರಯಣಾ
ಸುರಪನಿರವೆ ಬಂದು ನಿಲಲು ಕರೆಸಿಕೊಂಡೆ ನಾರಯಣಾ
ಗಿರಿ ದಧೀಚಿ ಮುನಿಯ ಶಾಪಗಳನೆ ಕೇಳ್ದೆ ನಾರಯಣಾ
ಇಂದ್ರವಚನಕಬುಧಿಮಥನಕೆಂದು ನೆನೆದೆ ನಾರಯಣಾ
ಮಂದರಾದ್ರಿ ಶೇಷಪತಿಯ ತಂದೆಯಯ್ಯ ನಾರಯಣಾ
ಅಂದು ಕೂರ್ಮರೂಪಿನಿಂ[1]ದೆ ನಿಂದೆಯಯ್ಯ ನಾರಯಣಾ
ಕಂಧರದೊಳೆ ಮಂದರವನು ತಾಳ್ದೆಯಯ್ಯ ನಾರಯಣಾ
ಸಕಲ ವಸ್ತುಗಳ[2]ನು[2] ಪಡೆದು ಸುರಪಗಿತ್ತೆ ನಾರಯಣಾ
ನಿಖಿಲ ಸುರರು ಮೆಚ್ಚೆ ಸಿರಿಯ ಮದುವೆಯಾದೆ ನಾರಯಣಾ
ಅಮೃತ ಸುರೆಯ ಸುರರು ಪೂರ್ವಸುರರಿಗಿತ್ತೆ ನಾರಯಣಾ
ಭ್ರಮಿತ ರಾಹುಕೇತುಗಳನೆ ಹೊಯ್ದು ಪಡೆದೆ ನಾರಯಣಾ
ವಾಲಿಗಿತ್ತೆ ತಾರೆಯಂ ವಿಶಾಲಮೂರ್ತಿ ನಾರಯಣಾ
ಕಾಲಕೂಟ ವಿಷವ ಶಿವಗೆ ತಾಳಲಿತ್ತೆ ನಾರಯಣಾ
ಕ್ಷಿತಿಯೊಳೇಕದಶಿಯೆನಿಪ್ಪ ವ್ರತವ ಪಡೆದೆ ನಾರಯಣಾ

---

1 ದ (ಗ ಚ) 2 ನೆ (ಗ)

* ನಾರಯಣಾ ಎಂಬುದಕ್ಕೆ ಬದಲಾಗಿ ಚ ಪ್ರತಿಯಲ್ಲಿ ಎಲ್ಲ ಕಡೆಯಲ್ಲಿಯೂ ನಾರೆಯಾಣ ಎಂದಿದೆ

ಸನಕರಿಂದೆ ಜಯ ವಿಜಯರು ಶಾಪ ಕೇಳ್ದು ನಾರಯಣಾ
ಜನಿಸಿದಾ ಹಿರಣ್ಯಕಾಕ್ಷರಲೆಯ ಕೇಳ್ದೆ ನಾರಯಣಾ
ಘನ ವರಾಹನಾಗಿಯವನ ಜವನಿಗಿತ್ತೆ ನಾರಯಣಾ
ಅಲ್ಲಿ ನರಕಾಸುರನ ನೀನೆ ಪಡೆವೆಯಯ್ಯ ನಾರಯಣಾ
ಎಲ್ಲ ಧರೆಯನೆಂದಿನಂತೆ ತಂದಿರಿಸಿದೆ ನಾರಯಣಾ
ನಂಬಿ ಕರೆದ [1]ಬಾಲ[1]ಪ್ರಹ್ಲಾದಗಾಗಿ ನಾರಯಣಾ
ಕಂಬದೊಳಗೆ ನಾರಸಿಂಹನಾದೆಯಯ್ಯ ನಾರಯಣಾ
ಸೊಕ್ಕುತಿರ್ಪ ಬಲಿಯ ಸುದ್ದಿಗೇಳ್ದೆಯಯ್ಯ ನಾರಯಣಾ
ಹೊಕ್ಕು ವಾಮನತ್ವದಿಂದಲವನ ಕೇಳ್ದೆ ನಾರಯಣಾ
ಬಲಿಯ ತಲೆಯ ನಲಿದು ಮೆಟ್ಟಿ ನಿಂದೆಯಯ್ಯ ನಾರಯಣಾ
ಬೆಳದು ಹೊಳೆದ ಪುಣ್ಯಜಲವ ಪಡದೆಯಯ್ಯ ನಾರಯಣಾ
ವರಮುನೀಂದ್ರ ಜಾಮದಗ್ನಿಯಲ್ಲಿ ಬೆಳೆವೆ ನಾರಯಣಾ
ಪರಶುರಾಮನೆನಿಪ ನಾಮ[2]ವಾಂತೆಯಯ್ಯ[2] ನಾರಯಣಾ
ಜನನಿಗೇಕನಾ[3]ಥೆ[3]ಪದವ ಕೊಡಿಸಿ ಮೆಱೆವೆ ನಾರಯಣಾ
ಜನಕ ಮೆಚ್ಚೆ ಕೋಪ ಬೇಡವೆಂದೆಯಯ್ಯ ನಾರಯಣಾ
*ಕನಲಿ ಕಾರ್ತವೀರ್ಯನೃಪನ ಹೊಯ್ದು ನಿಂವೆ ನಾರಯಣಾ
ಬಿನುಗು ಭೂಭುಜರನು ಪರಶುವಿಂವೆ ಗೆಲಿವೆ ನಾರಯಣಾ
ದಶಗಳಂಗೆ ಹರನ ವರವನಪಹರಿಸಿವೆ ನಾರಯಣಾ*
ದಶರಥೋರ್ವಿನಾಥನಿಂದೆ ರಾಮನಾವೆ ನಾರಯಣಾ
ಮುನಿಯ ಕೂಡೆ ಪೋಗಿ ಯಜ್ಞರಕ್ಷೆಗೈವೆ ನಾರಯಣಾ
ಕನಲಿ ತಾಟಕಿಯನೆ ತಱಿದು ಭೂತಕಿತ್ತೆ ನಾರಯಣಾ
ಸುಳಿದ ದುಷ್ಟಕಾಕಸುರನ ಕಣ್ಣನೆಚ್ಚೆ ನಾರಯಣಾ
ಶಿಲೆಯೊಳಿರ್ದಹಲ್ಯೆ ಶಾಪದಳವ ಮುಱಿವೆ ನಾರಯಣಾ
ಇಂದ್ರ ಸೂರ್ಯರಿಂಗೆ ಬಂದ ಶಾಪದಳವ ನಾರಯಣಾ
ಮುಂಗೆ ವಾಲಿಯಾಂಜನೇಯ [4]ಜನ್ಮ ಕೇಳ್ದೆ[4] ನಾರಯಣಾ
ಬಿಲ್ಲಮುಱಿದು ಜನಕಸುತೆಯ ಮದುವೆಯಾವೆ ನಾರಯಣಾ
ಬಲ್ಲತನವೆ ಪರಶುರಾಮನಿರವ ಕಂಡೆ ನಾರಯಣಾ

---

[1] ತರುಣ (ಚ) [2] ಧೇಯುವಾಂತೆ (ಚ [3] ದೆ (ಗ) [4] ರ ಜನನ (ಚ)
* ಕ ಪ್ರತಿಯಲ್ಲಿ ಈ ಭಾಗವಿಲ್ಲ

ಪಿತನ ನುಡಿಗೆ ಸೀತೆ ಸಹಿತ ಪುರವ ಬಿಟ್ಟೆ ನಾರಯಣಾ
ಗುಹನೆನಿಪ್ಪ ಬೇಡಗೊಲಿದು ವರವನಿತ್ತೆ ನಾರಯಣಾ
ಬಹುಮುನೀಶರೊಡನೆ ಚಿತ್ರಕೂಟಕಾಂತೆ ನಾರಯಣಾ
ವರ ಕಬಂಧನಿಂದೆ ಶಬರಿಯಿರವನಱಿತೆ ನಾರಯಣಾ
ಹನುಮ[1]ನಿಂ[1] ಸುಗ್ರೀವ[2]ನನ್ನು ಕಂಡೆಯಯ್ಯ[2] ನಾರಯಣಾ
ಕೊನೆಬೆರಲಲಿ ದುಂದುಭಿಯನು ಮಿಾಂಟಿ ಜಿಗಿವೆ ನಾರಯಣಾ
ಘನವೆನಿಪ್ಪ ಖರ ತ್ರಿಶಿರರ ಕೊಂದೆಯಯ್ಯ ನಾರಯಣಾ
[3]ಕಾ[3]ಳನೆಚ್ಚ ವಾಲಿಯೊಡಲ ಸೀಳಿ ಬಿಸುಟೆ ನಾರಯಣಾ
ಅವನ ಕುವರನಂಗವಂಗೆ ಕರುಣಿಯಾವೆ ನಾರಯಣಾ
ಯುವತಿಯೆಡೆಗೆ ಹನುಮಗುಂಗುರವನು ಕೊಟ್ಟೆ ನಾರಯಣಾ
ಕಂಡು ಪುರವ ಸುಟ್ಟು ಬಂದ ಹನುಮಗೊಲಿವೆ ನಾರಯಣಾ
ಕಂಡ ನೀಲಜಾಂಬವರನೆ ಮನ್ನಿಸಿರ್ದೆ ನಾರಯಣಾ
ಶರಧಿಗಂಬನೆಚ್ಚು ಸೇತುಗಟ್ಟಿಸಿಸೆಯೊ ನಾರಯಣಾ
ಶರಣ[4]ಗಾ[4] ವಿಭೀಷ[5]ಣಂ[5]ಗೆ ವರದನಾವೆ ನಾರಯಣಾ
ಕೊಲಿಸಿ ವೈರಾವಣಾದಿ ಖಳರ ಹೊಯ್ದೆ ನಾರಯಣಾ
ಕುಂಭಕರ್ಣ ರಾವಣರನು ಕೊಂದೆಯಯ್ಯ ನಾರಯಣಾ
ನಂಬಿದಾ ವಿಭೀಷಣಂಗೆ ಲಂಕೆಯಿತ್ತೆ ನಾರಯಣಾ
ಸೀತೆ ಸಹಿತ ಪುರಕೆ ಬಂದು ನಿಂದೆಯಯ್ಯ ನಾರಯಣಾ
ಓತು ಮತ್ತೆ ಕ್ಷೀರವಾರ್ಧಿವಾಸನಾದೆ ನಾರಯಣಾ
ಧರೆಗೆ ಭಾರವೆಂ[6]ಬ [6]ನುಡಿ[7]ಯ ನೀನು[7] ಕೇಳ್ದೆ ನಾರಯಣಾ
ತರುಣಿ ದೇವಕಿಯಲಿ ಕೃಷ್ಣನಾಗಿ ನಿಂದೆ ನಾರಯಣಾ
ಪೂತನಾದಿ ಶಕಟತೃಣರ ಕೊಂದೆಯಯ್ಯ ನಾರಯಣಾ
ಮರನ ಮುಱಿದು ನೀನು ದಾಮೊದ[8]ರನು ಆದೆ[8] ನಾರಯಣಾ
ಮುಸಗಿ ವತ್ಸ ಪುಂಗವರನು ಸೀಳಿಬಿಸುಟೆ ನಾರಯಣಾ
ವಿಷದ ಮಡುವ ಕಲಕಿ ಪಾವ ಹೊರಡಹೊಯ್ದೆ ನಾರಯಣಾ
ಗಿರಿಯೊಳನ್ನವುಂಡು ಮೞೆಗೆ ಗಿರಿಯ ತಾಳ್ದೆ ನಾರಯಣಾ
ಪರಮ ಗೋವಿಂದುಪೇಂದ್ರವೆಸರ ತಾಳ್ದೆ ನಾರಯಣಾ
ಕೇಶಿಯೆಸೆವರಿಷ್ಟರುಗಳ ಹೊಯ್ದು ತಾಳ್ದೆ ನಾರಯಣಾ
ಕೇಶವಾಭಿಧಾನದಿಂದೆ ಕರೆಸಿಕೊಂಡೆ ನಾರಯಣಾ

---

1 ಹನುಮನಿಂದಲಾ (ಗ ಚ) 2 ಸನುಕಂಡೆ (ಚ) 3 ತಾ (ಚ) 4 ನಾದ (ಚ) 5 ಣ (ಚ) 6 ಬಸುರ (ಚ) 7 ಯ (ಚ) 8 ರಾಖ್ಯನಾದೆ (ಚ)

ಜನಕಗೊಂದು ಗಿರಿಪು ಸೀಳಿ ಹಾವ ಹೊಯ್ದೆ ನಾರಯಣಾ
ಭಕತನೆನಿಸಿ ಮೆಱೆವಕ್ರೂರಗೊಲಿದೆ ನೀನು ನಾರಯಣಾ
ಠಂಗಕಾರ ಮಲ್ಲ ಕಂಸರುಗಳ[1] ಕೊಂದೆ ನಾರಯಣಾ
ಸಿಂಧು ಕದಡೆ ಪಾಂಚಜನ್ಯಲಾಭವಾಂತೆ ನಾರಯಣಾ
ತಂದುಕೊಟ್ಟೆ ಮಡಿದ ಮಗನ ಗುರುವಿಗಾಗಿ ನಾರಯಣಾ
ಮಗಧನೃಪನ ಬಹಳ ಬಲವ ಸೀಳಿ ಬಿಸುಟೆ ನಾರಯಣಾ
ನಗವನೇಱಿಯುರಿಯೆನಿಪ್ಪ ಖಳರ ತುಳಿದೆ ನಾರಯಣಾ
ದ್ವಾರಕಾಭಿಧಾನಪುರವ ಕಟ್ಟಿಸಿದೆಯೊ ನಾರಯಣಾ
ಚಾರಣತ್ವದಿಂದ ಕಾಲಯವನ ಗೆಲಿದೆ ನಾರಯಣಾ
ತರುಣಿ ರುಕ್ಮಿಣಿಯನು ತಂದ ಗರ್ವನಿಧಿಯೆ ನಾರಯಣಾ
ಪರಿದು ದಂತವಕ್ತ್ರಗಾಗ ಮರಣವಿತ್ತೆ ನಾರಯಣಾ
ಕರುಣೆಯಿಂದೆ ಸತ್ಯಭಾಮೆಗೊಲಿದೆಯಯ್ಯ ನಾರಯಣಾ
ಸುರರ ಗೆಲಿದು ಪಾರಿಜಾತ ತಱುವ ತಂದೆ ನಾರಯಣಾ
ನರಕನಿರವ ಕೆಡಿಸಿ ಕಾಂತೆಯರನು ತಂದೆ ನಾರಯಣಾ
ಶರಧಿಯಾಟದೊಳ್ ಕಿರೀಟಿಯನೆ ಬಿಡಿಸಿದೆ ನಾರಯಣಾ
ಬಂದು ಪಾಂಡವರನು ಯಜ್ಞದಲ್ಲಿ ಕಂಡೆ ನಾರಯಣಾ
ಕೊಂದೆ ಸಾಲ್ವ ಮಗಧ ಶಿಶುಪಾಲರುಗಳ ನಾರಯಣಾ
ಒತ್ತಿ ಬಾಣ ಖಳನ ಕರವ ಕತ್ತರಿಸಿದೆ ನಾರಯಣಾ
ಮತ್ತೆ ತ್ರಿಪುರದಸುರರಲೆಯ ಕರುಣೆ ಕೇಳ್ದೆ ನಾರಯಣಾ
ಚಿತ್ತಜಾರಿಗಧಿಕರಥವ ಜೋಡುಗೈದೆ ನಾರಯಣಾ
ತೇರು ಮುಳುಗೆ ಬಸವನಾಗಿ ತಾಳಿ ನಿಂದೆ ನಾರಯಣಾ
ಚಾರು ಬೌದ್ಧನಾಗಿ ಸತಿಯರಧಟ ಮುಱಿದೆ ನಾರಯಣಾ
ಸರಳಿನಂತೆ ಮೂಱುಪುರವನುರುಹಿ ಸುಟ್ಟೆ ನಾರಯಣಾ
ಪಿರಿದು ಕಲಿಯ ಪರಿಯೆ ಪೇಟಲೊಲಿದು ಕೇಳ್ದೆ ನಾರಯಣಾ
ಮುಂದೆ ರಾವುತನಾಗಿ ಪೊರೆವೆನೆಂದೆಯಯ್ಯ ನಾರಯಣಾ
ಕುಂದದಖಿಲ ಲೋಕಗಳನು ಪೊರೆವೆ ಕರುಣಿ ನಾರಯಣಾ
ನೆನೆವವಿಷ್ಟಸಿದ್ಧಿಯೀವ ಅನಘಮೂರ್ತಿ ನಾರಯಣಾ
ಚಿನುಮಯ ಪ್ರತಾಪ ಚಿದ್ವಿಲಾಸವೇಷ ನಾರಯಣಾ
ರಾಜತೇಜನತವಿರಾಜ ಕಲ್ಪಭೂಜ ನಾರಯಣಾ

---

1 ಕಂಸಮಲ್ಲರುಗಳ (ಗ)

ಯಾಜಮಾನ ಪೂಜನೀಯ ತೇಜರಾಜಿ ನಾರಯಣಾ
ಶರಣಕರಣ ಚರಣಭರಿತ ಕಿರಣವರಣ ನಾರಯಣಾ
ದುರಿತ ಧರಣಿಧರ ಸುರೇಶ ಪರಮುನಿರಜ ನಾರಯಣಾ
ಜಯತು ಜಯತು ನಾರಯಣಾ ಜಯೆಜಯಾ ನಮಸ್ತೆ ನಮಃ

ವಚನ : ಎಂದು ಸ್ತೋತ್ರಂಗೈದ ಸುರಮುನಿಗಳಂ ನೋಡಿ ಕಲ್ಕ್ಯವತಾರಮಂ ಮಾಡಿ ನಿಮ್ಮಂ ನಿಶ್ಚಯದಿಂ ರಕ್ಷಿಸುವೆನೆಂದು ದೇವಾದಿದೇವರೋಲಗದೊಳ್ ಲಕ್ಷ್ಮೀಕಾಂತಂ ನಾರಾಯಣನೊಪ್ಪುತಿರ್ದನೆಂಬ ದಶಾವತಾರ ಚಾರಿತ್ರ ಸ್ರವಣಪುಣ್ಯಫಲ[1]ಮೆಂತೆನಲ್[1]

ಉತ್ಪಲಮಾಲೆ

ಪುತ್ರಪರಂ ಸುಪೌತ್ರ ಪರಮಕ್ಷಯಸೌಖ್ಯಮನಂತಸಿದ್ಧಿ ಸ
ರ್ವತ್ರದಯಾನುಕೂಲ ಜಯವಾಯುನಿರೋಗ ಧನಂ ವಿಶಾಲವೈ
ಚಿತ್ರವಭೀಷ್ಟ ಸತ್ಫಲ ಸದಾನೆಲಸಿರ್ಕೆ ದಶಾವತಾರ ಚಾ
ರಿತ್ರಮನೋದಿದರ್ಗೆ ಮಿಗೆ ಕೇಳಿದವರ್ಗೆ ಸದಾವಕಾಲ[2]ಮುಂ[2] ೩೩

ಮತ್ತೇಭವಿಕ್ರೀಡಿತ

ಭುವನಾಧಾರ ಜಗದ್ಧಿತಾರ್ಥವದು ನಿನ್ನಂಶಾಂಶದಿಂದೊಪ್ಪಿತೋ
ಱುವುದೊಂದೊಂದವತಾರದಂಶದ ಸಹಸ್ರಂಶಾಂಶಮುಂ ವೇದಶಾ
ಸ್ತ್ರವದೆಂದುಂ ನೆಱೆ ಕಾಣವೆಂದೆನಲಿಕಾಂ ಪೇೞ್ವಾತನೇ ಮತ್ತದುಂ
ತವೆ ನಿನ್ನ ಸ್ಮರಣಂಗಳೈಸೆ ನಲವಿಂ ಚಿತ್ತೈಸು ನಾರಾಯಣಾ ೩೪

ವರವಿಶ್ವಾತ್ಮಕ ನಿನ್ನ ಸಚ್ಚರಣ ಕೀರ್ತ್ಯಾಳಾಪನಂ ಪೇೞ್ವೆನೆಂ
ಬುರು ಸಂಕಲ್ಪಮನೆನ್ನ ಚಿತ್ತದೊಳೆ ಸಂಪೂರ್ಣತ್ವಮಾಗೊಪ್ಪೆ ಬಂ
ಧುರದಿಂದಾನಱಿದಂತೆ ಪೇೞ್ವನಿದನೀಂ ಸ್ವೀಕಾರಮಂ ಮಾಡಿ ಸ
ತ್ಪರದಾಸಕ್ತಿಯ ಭಕ್ತನೆಂದು ಕೃಪೆಯಿಂದಂ ಕಾಯೊ ನಾರಾಯಣಾ ೩೫

ಕಂದ : ಓರಂತೆ ನಿನ್ನ ಪತ್ತವ
ತಾರಮನಱಿದಂತೆ ಪೇ[3]ೞ್ದೆ[3]ನೆಂಬ ಮನೋವಿ
ಸ್ತಾರವೆ ಸಂಕ[4]ಲ್ಪಾ[4]ರ್ಥಂ
ನಾರಾಯಣ ನಿನ್ನ ಚರಣಕರ್ಪಿತ[5]ವೆಂದುಂ[5] ೩೬

---

[1] ವೆಂತೆಂದೊಡೆ (ಚ) [2] ದೊಳ್ (ಚ) [3] ಳ್ವೆ (ಗ) [4] ಲ್ಪ (ಕ) [5] ಮಸ್ತೇ (ಗ)

ಎಲೆ ಹರಿಯೆ ನಿನ್ನ ಕಥೆಯಂ
ಸಲೆ ಪೇೞ್ದ ಸತ್ಕವೀಶ ಮಲ್ಲನ ವಂಶಂ
ನಲವಿಂ ಸುಖದಿಂ ಗಂಗೆಯ
ಮಳಲಂದದೆ ಪೆರ್ಚಲಾದಿನಾರಾಯಣನೇ ೩೭

ಮತ್ತೇಭವಿಕ್ರೀಡಿತ

ಮುೞಿಯೆಂದುಂ ದೊರೆಕೊಳ್ಗೆ ಪೆರ್ಮೆಳಸು ನಿಚ್ಚಂ ಕುಂದದಾಲೋಕಸಂ
ಕುಳಮೆಂದುಂ ಸುಖಮುಕ್ಕೆ ಗೋಧನ ಘಟಕ್ಷೀರಂಗಳಿಂ ಬಾೞ್ಗೆ ನಿ
ರ್ಮಳಧರ್ಮಂ ಮಿಗೆ ಪೆರ್ಚುತಿರ್ಕೆ ಹರಿಭಕ್ತರ್ಗಿಷ್ಟ ಕೈಸಾರ್ಗೆ ಪ್ರ
ಜ್ವಲದಿಂದೊಪ್ಪೆ ದಶಾವತಾರಚರಿತಂ ಚಂದ್ರಾರ್ಕತಾರಾಂಬರಂ ೩೮

ಧರಣೀ ಸೌಖ್ಯಕರಂ ಗದಾಯುಧಧರಂ ಶ್ರೀಶಾರ್ಙ್ಗಚಕ್ರೋಧರಂ
ವರಪೀತಾಂಬರ ದಿವ್ಯ ಕೌಸ್ತುಭಧರಂ ಲಕ್ಷ್ಮೀವರಂ ಭೂಧರಂ
ಸುರಸಂದೋಹ ಮುನೀಶ್ವರಾರ್ಚಿತಪದಂ ಸೌಖ್ಯಾಕರಂ ನಿರ್ಮಲಂ
ಪರಮಾನಂದಕರಂ ಜಗತ್ರಯಕರಮುಂ ರಕ್ಷಿಕ್ಕೆ ನಾರಾಯಣಂ ೩೯

ಗದ್ಯ : ಇದು ವೃಂದಾರಕವೃಂದಪರಿಮಣಿಖಚಿತ್ರಮುಕುಟರಂಜಿತ ಶ್ರೀಮದಾದಿ
ನಾರಾಯಣ ಶ್ರೀಚರಣಸರಸೀರುಹ ಮಕರಂದಷಟ್ಚರಣ ಸಲ್ಲಲಿತ
ಮಲ್ಲರಸಾಂಕ ವಿರಚಿತಮಪ್ಪ ದಶಾವತಾರ ಚರಿತ ಮಹಾ
ಪ್ರಬಂಧದೊಳ್ ಕಲ್ಕ್ಯವತಾರೋದ್ಯೋಗಂ
ಏಕಾದಶಾಶ್ವಾಸಂ

ಅನುಬಂಧ ೧

ಸಪ್ತಮಾಶ್ವಾಸದಲ್ಲಿ ೭೪ ನೆಯ ಪದ್ಯದ ಬಳಿಕ ಚ ಪ್ರತಿಯಲ್ಲಿ ಸಿಕ್ಕುವ ಹೆಚ್ಚಿನ ಪದ್ಯಗಳು :

ವಚನ : ಅದೆಂತೆನೆ

ಕಂದ : ಚಿನ್ನದ ಗಿಂಡಿ ಕುಜಾಯ್ಕ್ರಿಗೆ
ರನ್ನಂ ತೆತ್ತಿಸಿದ ಚೆಂಬುಮೆಡವಟ್ಟಲ್ಗಳ್
ಹೊನ್ನ ಪೂಜೆಗಳು ಕರಗೆ
ಪನ್ನೀರಂ ತೀವಿ ಕೊಟ್ಟುದಬಲಾನೀಕಂ

ಎಡೆಯೆಡೆಗಡ್ಡಣಿಗೆಗಳಂ
ಮಡದಿಯರತಿವೇಗ ಪೊನ್ನ ಪರಿಯಾಣಗಳಂ
ಕಡುಚೆಲ್ವ ತಟ್ಟೆಬಟ್ಟಲ
ಪಿಡಿತಂದಿರಿಸಿದರತೀವ ಸಂತಸದಿಂದಂ

ಭೋಜನಶುದ್ಧಿಯ ಮಾಡಿದ
ರೋಜೆಯೊಳಾ ರಾಜಪುತ್ರರೆಡೆಗಳಿಗೆಲ್ಲಂ
ಭೋಜಾನನೆಯರ್ ಮುದದಿಂ
ರಾಜಿಪ ವರ ಶಾಕಪಾಕವಿಕ್ಕಿದರಾಗಂ

ಉಪ್ಪಿನಕಾಯಂ ನಾನಾ
ಹಪ್ಪಳ ಸಂಡಗೆಯ ಬಾಳುಕಂಗಳ ನಲವಿಂ
ದೊಪ್ಪುವ ರಸಾಯನಂಗಳ
ತಪ್ಪದೆ ಬಡಿಸಿದರು ಚಂದ್ರಮುಖಿಯರ್ ಸುಖಿಯರ್

ಬೇರಂ ದಟ್ಟಾಸೊಪ್ಪಂ
ಸೇರಿದ ಹೂವುಗಳ ಕಾಯಿಗಳ ಪರಿಮಳ ಸಂ
ಚಾರ ಪೂರಿತದ ಶಾಕವ
ನೋರಣದಿಂ ಬಡಿಸುತಿರ್ದರಾ ಭಾಮಿನಿಯರ್

ಅನ್ನಂ ರಾಜಾನ್ನಂ ಪರ
ಮಾನ್ನಂ ಪರಿಪರಿಯ ಕಲಸಿದನ್ನಂಗಳಮಂ
ಬಿನ್ನಾಣದಿಂದೆ ಸಖಿಯರ್
ಸನ್ನುತ ರಾಜರ್ಗೆ ಬಡಿಸಿದರ್ ಸಂತಸದಿಂ

೭೫ ನೆಯ ಪದ್ಯದ ಬಳಿಕ ಬರುವ ಪದ್ಯಗಳು

ಕಂದ : ಅಮೃತಸಿಂಧು ಮುನಿಪತಿ
ಯಮೃತೋನ್ನತ ವಚನದಿಂದೆಯುಪಚರಿಸಿದನಿಂ
ದಮೃತವೆಮಗಾದುದೆನುತಂ
ದಮೃತಾರೋಗಣೆಯಂ ಮಾಡಿದರ್ ಮುದದಿಂದಂ

ಮೊಸರು ಮಜ್ಜಿಗೆಯು ಬೇಗಂ
ಬಿಸರುಹವದನೆಯರು ಬಡಿಸಿ ಕೈಮೊಳುವುದಕಂ
ಬಿಸಿನೀರನಿತ್ತರತಿಸಂ
ತಸದಿಂದಂ ಕಾರ್ತವೀರ್ಯ ಮೊದಲಾದರಿಗಂ

ಪರಿಮಳ ಗಂಧಂಗಳನಾ
ಪರಿಮಳದನುಲೇಪನಾದಿಗಳ ಪರಿಪರಿಯಾ
ಪರಿಮಳ ಕದಂಬ ಪುಷ್ಪವ
ಪರಿಪರಿಯಂಗನೆಯರಿತ್ತರತಿನಲವಿಂದಂ

ಆಭರಣ ವಸ್ತ್ರವಿತ್ತರ್
ಭೂಭಾಗಾಧೀಶನಾದಿಯಾದರ್ಗೆಲ್ಲರ್
ಗಾ ಬಾಲಕಿಯರ್ ಮುದದಿಂ
ದೇ ಬಣ್ಣಿಪೆ ಕಾರ್ತವೀರ್ಯನತಿಸಂತಸಮಂ

ಅನುಬಂಧ ೨

ಪುರಂದರದಾಸ ಮತ್ತು ಕನಕದಾಸರ ಕೀರ್ತನೆಗಳಲ್ಲಿ ದಶಾವತಾರ

1

ಬಾರಯ್ಯ ವೆಂಕಟರಮಣ ಭಕ್ತರ ನಿಧಿಯೆ
ಬಾರೋ ವಿಶ್ವಂಭರಣ

ತೋರೋ ನಿನ್ನಯ ದಯೆ ತೋಯಜಾಂಬಕನೆ

ವೇದಗೋಚರ ಬಾರೋ ಆದಿಕಚ್ಛಪ ಬಾರೋ
ಮೋದಸೂಕರ ಬಾರೋ ಸದಯ ನರಸಿಂಹ ಬಾರೋ

ವಾಮನ ಭಾರ್ಗವ ಬಾರೋ ರಾಮಕೃಷ್ಣನೆ ಬಾರೋ
ಪ್ರೇಮದ ಬುದ್ಧನೆ ಬಾರೋ ಸ್ವಾಮಿ ಕಲ್ಕಿಯೆ ಬಾರೋ

ಅರವಿಂದನಾಭ ಬಾರೋ ಸುರರ ಪ್ರಭುವೆ ಬಾರೋ
ಪುರುಹೂತವಂದ್ಯ ಬಾರೋ ಪುರಂದರವಿಠಲ ಬಾರೋ

2

ಪಂಕಜಮುಖಿಯರೆಲ್ಲರು ಬಂದು ಲಕ್ಷ್ಮೀ
ವೆಂಕಟರಮಣಗಾರತಿಯೆತ್ತಿರೆ

ಮತ್ಸ್ಯಾವತಾರಗೆ ಮಂದರೋದ್ಧಾರಗೆ
ಉತ್ಸಾಹದಿ ಭೂಮಿ ತಂದವಗೆ
ವತ್ಸನಾಗಿ ಕಂಬದಿಂದಲಿ ಬಂದ
ಉತ್ಸವ ನರಸಿಂಹಗಾರತಿಯೆತ್ತಿರೆ

ವಾಮನರೂಪದಿ ದಾನ ಬೇಡಿದವಗೆ
ನೇಮದಿ ಕೊಡಲಿಯ ಪಿಡಿದವಗೆ
ರಾಮನಾಗಿ ದಶಶಿರನನು ಕೊಂದ
ಸ್ವಾಮಿ ಶ್ರೀಕೃಷ್ಣಗಾರತಿಯೆತ್ತಿರೆ

ಬತ್ತಲೆ ನಿಂತಗೆ ಬೌದ್ಧಾವತಾರಗೆ
ಉತ್ತಮ ಅಶ್ವವನೇರಿದಗೆ
ಭಕ್ತರ ಸಲಹುವ ಪುರಂದರವಿಠಲಗೆ
ಮುತ್ತೈದೆಯರಾರತಿಯೆತ್ತಿರೆ

3

ಬಣ್ಣಿಸಲಳವೇ ನಿನ್ನ
ಬಣ್ಣಿಸಲಳವಲ್ಲ ಭಕುತವತ್ಸಲದೇವ
ಪನ್ನಗಶಯನ ಪಾಲ್ಗಡಲೊಡೆಯನೆ ರಂಗ

ಅಸಮ ಪರಾಕ್ರಮಿ ತಮನೆಂಬ ದೈತ್ಯನು
ಶಶಿಧರನ ವರದಿ ಶಕ್ರಾದ್ಯರಿಗಳುಕದೆ
ಬಿಸಜಸಂಭವನ ಠಕ್ಕಿಸಿ ನಿಗಮವ ಕದ್ದು
ವಿಷಧಿಯೊಳಡಗಿರಲ್ ಒದಗಿ ಬಂದಮರರು
ವಸುಧೀಶ ಕಾಯಬೇಕೆಂದೆನಲವನ ಮ
ರ್ದಿಸಿ ವೇದಾವಳಿಯ ತಂದು ಮೆರೆದೆ ದಶ
ದಿಸೆಯೊಳು ಬೊಮ್ಮಗಂದು ವೇದವ ಕರು
ಣಿಸಿದೆ ಕಂಜಾಕ್ಷ ಕೇಶವ ದಯಾಸಿಂಧು

ಇಂದ್ರಾದಿ ಸಕಲ ದೇವತೆಗಳೆಲ್ಲರು ದೈತ್ಯ
ವೃಂದವೊಂದಾಗಿ ಮತ್ಸರವ ಮರೆದು ಕೂಡಿ
ಬಂದು ನೆರೆದು ಮುರಹರ ನಿನ್ನ ಮತದಿಂದ
ಮಂದರಾದ್ರಿಯ ಕಡೆಗೋಲಗ್ಯೆಯ್ದತುಳ ಫ
ಣೀಂದ್ರನ ತನು ನೇಣೆನಂದದಿ ಬಂಧಿಸಿ
ಸಿಂಧುಮಥಿಸುತಿರಲು ಘನಾಚಲ
ವಂದು ಮುಳುಗಿ ಪೋಗಲು ಬೆನ್ನಾಂತು ಮು
ಕುಂದ ನೆಗಹಿದೆ ಸುರರು ಜಯಜಯವೆನಲು

ಖಳಶಿರೋಮಣಿ ಕನಕಾಕ್ಷನೆಂಬಸುರ ನಿ
ನ್ನೊಳು ಸೆಣಸುವೆನೆಂಬ ಗರುವದಿಂದಲಿ ಬಹು
ಬಲದಿಂದುದ್ಧಟನಾಗಿ ದಿವಿಜರನಂಜಿಸಿ
ಇಳೆಯ ಕದ್ದು ರಸಾತಳದೊಳಗಿರೆ ನಿನ್ನ

ಪೊಳೆವ ಕೋರೆಗಳಿಂದ ತಿವಿದು ರಕ್ಕಸನ ಅ
ಪ್ಪಳಿಸಿ ಕೊಂದವನ ದಿಂಡುಗೆಡಹಿ ಮಹೀ
ಲಲನೆಯೊಡನೆ ಕೈಕೊಂಡು ಪಾಲಿಸಿವೆ ಪೂ
ಮಳೆಗರೆದರು ಅಮರರು ನಲಿಗೊಂಡು

ಹಗಲಿರುಳಳಿವಿಲ್ಲದಸುರ ಕಶಿಪು ತನ್ನ
ಮಗನ ಹರಿಯ ತೋರೆಂದಧಿಕ ಬಾಧಿಸುತಿರೆ
ಬಗಿದು ಕಂಬವನೊಡೆದಧಿಕ ರೋಷಾಗ್ನಿ ಕಾ
ರ್ಬೊಗೆ ಸೂಸಿ ಗಗನಮಂಡಲ ಧಗ ಧಗ ಧಗ
ಧಗಿಪ ಪ್ರಜ್ವಾಲೆಯನುಗುಳಿ ಹಿರಣ್ಯಕನ ಕೊ
ರುಗುರಿಂದೊಡಲ ಸೀಳಿ ಕರುಳಮಾಲೆ
ತೆಗೆದು ಕಂಠದಲಿ ತಾಳಿ ಒಪ್ಪಿದೆ ನರ
ಮೃಗರೂಪೀ ತ್ರಾಹಿಯೆನಲು ಶಶಿಮೌಳಿ

ಕುಲಿಶಧರನ ಗೆದ್ದು ಕುವಲಯದೊಳು ಭುಜ
ಬಲವಿಕ್ರಮದಲಿ ಸೌಭಾಗ್ಯದುನ್ನತಿಯಿಂದ
ಬಲಿ ವಾಜಿಮೇಧಗೆಯ್ಯಲು ವಟುವೇಷದಿಂ
ದಿಳಿದು ತ್ರಿಪಾದಭೂಮಿಯ ದಾನವ ಬೇಡಿ
ಬಲುಹನ್ನು ಮುರಿಯಬೇಕೆಂದವನ ಶಿರಮೆಟ್ಟಿ
ನೆಲನ ಈರಡಿಮಾಡಿದೆ ಚರಣವಿಟ್ಟು
ಜಲಜಜಾಂಡವನೊಡೆದೆ ಅಂಗುಷ್ಟದಿಂ
ಸುಲಲಿತ ಸುಮನಸ ನದಿಯ ನೀ ಪಡೆದೆ

ಪೊಡವಿಪತಿಗಳೊಳಧಿಕ ಕಾರ್ತವೀರ್ಯ
ಕಡುಧೀರ ದೇವನೈತ್ಯರಿಗಂಜದವನ ಬೆಂ
ಬಿಡದೆ ಸಂಗ್ರಾಮದೊಳಧಿಕ ಸಮರ್ಥನ
ಹೊಡೆದು ತೋಳ್ಗಳ ಕುಟ್ಟಿ ಕೆಡಹಿ ಆಗಸದೊಳು
ನೃಪಮುಖ್ಯ ದೇವಸಂತತಿ ನೋಡೆ ಕ್ಷತ್ರಿಯರ
ಪಡೆಯನೆಲ್ಲವ ಸವರಿ ಮಾತೆಯ ಶಿರ
ಕಡಿದು ತತ್ಪತಿಗೆ ತೋರಿ ಪಿಡಿದೆ ಗಂಡು
ಗೊಡಲಿಯ ಕರದಿ ಬಲ್ಲಿದ ದನುಜಾರಿ

ದಶರಥರಾಯ ಕೌಸಲ್ಯಾನಂದನನಾಗಿ
ಋಷಿ ವಿಶ್ವಾಮಿತ್ರನಧ್ವರವ ರಕ್ಷಿಸಿ ಘನ
ವಿಷಕಂಠಧನುವ ಖಂಡಿಸಿ ಜಾನಕಿಯ ತಂದು
ತ್ರಿಶಿರ ದೂಷಣ ಖರರಳಿದು ವಾಲಿಯನಂದು
ನಿಶಿತಾಸ್ತ್ರದಿಂದ ಸಂಹರಿಸಿ ಸಾಗರವ ಬಂ
ಧಿಸಿ ರಾವಣನ ಶಿರವ ಕತ್ತರಿಸಿ ರಂ
ಜಿಸುವ ಲಂಕಾಪುರವ ವಿಭೀಷಣಗೆ
ಎಸೆವ ಪಟ್ಟವ ಕಟ್ಟಿದೆಲೆ ದೇವಗರುವ

ದೇವಕಿವಸುದೇವರಲ್ಲಿ ಜನಿಸಿ ಲೋಕ
ಪಾವನಗೆಯ್ದು ಪನ್ನಗನ ಪೆಡೆಯ ಮೆಟ್ಟಿ
ಗೋವಳನಾಗಿ ಗೋವರ್ಧನ ಗಿರಿಯೆತ್ತಿ
ಮಾವ ಮಲ್ಲರ ಕೊಂದು ಪಾರಿಜಾತವ ತಂದು
ಆ ವಿಪ್ರನಲಿ ಓದಿ ಪೋದ ಪುತ್ರನನಿತ್ತ
ದಾವರೆದಳಸುನೇತ್ರ ತ್ರಿಭುವನ ಸಂ
ಜೀವ ಪರಮಪವಿತ್ರ ಶ್ರೀರುಕ್ಮಿಣಿ
ದೇವಿ ಮನೋಹರ ಶುಭನೀಲಗಾತ್ರ

ಸರಸಿಜಾಸನ ಭವ ಇಂದ್ರಾದಿಗಳುಕದೆ
ದುರುಳ ದಾನವರಿರಲಂದು ಖೇಚರದೊಳು
ನಿರುಪಮ ನೀನೆ ಒಂದೊಂದು ರೂಪಗಳಿಂದ
ಹರಗೆ ಸಹಾಯವಾಗಿ ದನುಜಸ್ತ್ರೀಯರ ವ್ರತ
ಪರಿಹಾರಮಾಡಿ ಆಯಾಸವಿಲ್ಲದಲೆ ಮು
ಪ್ಪುರವ ಅಳಿದ ನಿಸ್ಸೀಮ ಅಖಿಳಶ್ರುತಿ
ಯರಸೆ ಕಾಣದ ಮಹಿಮ ಹೇ ಸಾಮಜ
ವರದ ಸುಪರ್ಣವಾಹನ ಸಾರ್ವಭೌಮ

ಮಣಿಮಯಯುಕ್ತ ಆಭರಣದಿಂದೆಸೆವ ಲ
ಕ್ಷಣವುಳ್ಳ ದಿವ್ಯವಾಜಿಯನೇರಿ ಧುರದೊಳು
ಕುಣಿವ ಮೀಸೆಯು ಘೋರವದನ ಖಡ್ಗ ಚರ್ಮ
ವನು ಕೊಂಡು ದ್ರುಹಿಣಾದಿಗಳು ಪೊಗಳಲು ಕಲಿ
ದನುಜರೆಲ್ಲರನೊಂದೆ ದಿನದೊಳು ಸವರಿದ
ರಣಭಯಂಕರ ಪ್ರಚಂಡ ಮೂಜಗದೊಳು

ಎಣೆಗಾಣೆನೆಲೊ ಉದ್ದಂಡ ಕಲ್ಕಿ ದಿನ
ಮಣಿ ಕೋಟಿತೇಜ ದುಷ್ಕೃತಕುಲಖಂಡ

ಚಿತ್ತಜನಯ್ಯನೆ ಚಿನ್ಮಯಗಾತ್ರನೆ
ಉತ್ತಮಧರ ಚಕ್ರ ಗದೆ ಜಲಜಾಂಕನೆ
ಸುತ್ತಲು ಅರಸಲು ನಿನಗೆಲ್ಲಿ ಸರಿಕಾಣೆ
ಹೊತ್ತು ಹೊತ್ತಿಗಾದಿತ್ಯರ ಬಿನ್ನಪ ಕೇಳಿ
ಹತ್ತವತಾರದಿ ಅಸುರರ ಮಡುಹಿದೆ
ನಿತ್ಯ ತ್ರಿಸ್ಥಾನವಾಸವಾಗಿಹ ಸರ್ವ
ಭಕ್ತರ ಮನೋವಿಲಾಸ ಸಲಹೋ ಪುರು
ಷೋತ್ತಮ ಪುರಂದರವಿಠಲ ತಿರುಮಲೇಶ

4

ಏಳಯ್ಯ ಬೆಳಗಾಯಿತು
ಬೆಳಗಾಯಿತೇಳಯ್ಯ ಬಿಸಿಲು ಮೈದೋರುತಿದೆ
ಸುಳಿವುದೋರ್ಕೈ ನಿನ್ನ ಹಾರಯ್ಸಿ ನಿಂದಿಹರು
ತಳುವ ಮಾಡದಿರಯ್ಯ ಸ್ವಾಮಿ ತಿರುಮಲೆರಾಯ ಸೆಳೆಮಂಚದಿಂದಲೇಳು

ವೇದವನು ತರಲೇಳು ಮಂದರವ ಹೊರಲೇಳು
ಛೇದಿಸುತ ಅಸುರರನು ಭೂಮಿಯ ತರಲೇಳು
ಕಾದಿ ಹಿರಣ್ಯನ ಕರುಳ ಕೊರಳೊಳಗೆ ಧರಿಸೇಳು ಕಾದು ಬಲಿ ಬಾಗಿಲೊಳಗೆ
ಭೇದದಲಿ ಭೂಮಿಯ ತ್ರಿಪಾದದಿಂದಳೆಯೇಳು
ಛೇಧಿಸುತ ಕ್ಷತ್ರಿಯರ ಕೊಡಲಿಯಿಂ ಕಡಿಯೇಳು
ಸಾಧಿಸುತ ಶರಧಿಯಲಿ ಸೇತುವೆಯ ಕಟ್ಟೇಳು ನಂದಗೋಪನ ಉದರದಿ

ಪುರಮೂರ ಗೆಲಬೇಕು ಅರಿವೆಯನು ಕಳೆದೇಳು
ದುರುಳರನು ಕೊಲಬೇಕು ತುರಗವಾಹನನಾಗು
ಪರಿಪರಿಯ ಕೆಲಸಗಳ ಮಾಡಲುದ್ಯೋಗಿಸದೆ ಮರೆತು ನಿದ್ರೆಯಗೈವರೆ

5

ಮಲಗಿ ಎದ್ದನು ರಂಗ ಮಕ್ಕಳಮಾಣಿಕ ಕೃಷ್ಣ
ಛಲ ಹಿಡಿದನು ನೋಡೆ ಮೊಲೆ ಕೊಡೆ ಕೃಷ್ಣಗೆ

ಜಲದೊಳು ತಮನ ಮರ್ದಿಸಿ ಅಂದು ಮತ್ಸ್ಯನಾಗಿ
ಬಲುಗಿರಿಯ ನೆಗಹಿ ಮರೆಮಾಡಿ ಕೂರ್ಮನಾಗಿ
ನೆಲನ ಒಯ್ದವನ ಕೊಲುವೆನೆಂದು ವರಹನಾಗಿ
ಬಲು ಭಕ್ತಿಗಾಗಿ ಕಂಬದಿ ನಾರಸಿಂಹನಾಗಿ

ಚಿಕ್ಕರೂಪದಿಂದ ಬಲಿಯ ದಾನವ ಬೇಡಿ
ಉಕ್ಕಿನ ಕೊಡಲಿಯ ಪಿಡಿದ ಪರಶುರಾಮ
ಮಿಕ್ಕಿದ ತಲೆಯ ಚೆಂಡಾಡಿದ ಶ್ರೀರಾಮ
ಸೊಕ್ಕಿದ ಕಂಸನ ಕೊಲುವೆನೆಂದ ಕೃಷ್ಣ

ಬಲುಪತಿವ್ರತೆಯರ ವ್ರತವನಳಿದ ಬುದ್ಧ
ಕಲಿಯಾಗಿ ಖಡುಗವ ಪಿಡಿದು ಕುದುರೆ ಏರಿ
ಒಲಿದು ಭಕ್ತರನೆಲ್ಲ ಸಲಹುವೆನೆಂತೆಂದು
ಚೆಲುವ ಪುರಂದರವಿಠಲ ತೊಟ್ಟಿಲೊಳು

6

ನಾರಾಯಣ ಗೋವಿಂದ ಹರಿಹರಿ
ನಾರಾಯಣ ಗೋವಿಂದ

ನಾರಾಯಣ ಗೋವಿಂದ ಮುಕುಂದ
ಪರತರ ಪರಮಾನಂದ

ಮೊದಲು ಮತ್ಸ್ಯನಾಗಿ ಉದಿಸಿ ಸೋಮನನು
ಸದೆದು ವೇದಗಳ ತಂದ

ಮಂದರಗಿರಿಯಲಿ ಸಿಂಧುಮಥಿಸಿ ಸುಧೆ
ತಂದು ಭಕ್ತರಿಗುಣಲೆಂದ

ಭೂಮಿಯ ಕದಿದಾ ಖಳನನು ಮರ್ದಿಸಿ
ಆ ಮಹಾಸತಿಯಳ ತಂದ

ದುರುಳಹಿರಣ್ಯನ ಕರುಳು ಬಗೆದು ತನ್ನ
ಕೊರಳೊಳಗಿಟ್ಟಾನಂದದಿಂದ

ಪುಟ್ಟನಾಗಿ ದಾನಕೊಟ್ಟ ಬಲಿಯ ತಲೆ
ಮೆಟ್ಟಿ ತುಳಿದ ಬಗೆಯಿಂದ

ಧಾತ್ರಿಯೊಳಗೆ ಮುನಿಪುತ್ರನಾಗಿ ಬಂದು
ಕ್ಷತ್ರಿಯರೆಲ್ಲರ ಕೊಂದ

ಮುಡದಿಗಾಗಿ ತಾ ಕಡಲನೆ ಕಟ್ಟಿ
ಹಿಡಿದು ರಾವಣನ ಕೊಂದ

ಗೋಕುಲದೊಳು ಹುಟ್ಟಿ ಆಕಳ ಕಾಯ್ದ
ಶ್ರೀಕೃಷ್ಣನು ತಾ ಬಂದ

ಛಲದಲಿ ತ್ರಿಪುರದ ಸತಿಯರ ವ್ರತದ
ಫಲವನಳಿದ ಬಗೆಯಿಂದ

ಧರೆಯೊಳು ಪರಮುನೀಚರ ಸವರಲು ಕು
ದುರೆಯನೇರಿದ ಕಲಿ ಚೆಂದ

ದೋಷದೂರ ಶ್ರೀ ಪುರಂದರ ವಿಠಲ
ಪೋಷಿಪ ಭಕ್ತರ ವೃಂದ

೪

ಕೇಶವ ಮಾಧವ ಗೋವಿಂದ ವಿಠಲೆಂಬ ದಾಸಯ್ಯ ಬಂದ ಕಾಣೆ
ದೋಷರಹಿತ ನರವೇಷವ ಧರಿಸಿದ ದಾಸಯ್ಯ ಬಂದ ಕಾಣೆ

ಖಳನು ವೇದನೊಯ್ಯೆ ಪೊಳೆವ ಕಾಣದ ದಾಸಯ್ಯ ಬಂದ ಕಾಣೆ
ಘಳಿಲನೆ ಕೂರ್ಮ ತಾನಾಗಿ ಗಿರಿಯ ಪೊತ್ತ ದಾಸಯ್ಯ ಬಂದ ಕಾಣೆ
ಇಳೆಯ ಕದ್ದಸುರನ ಕೋರೆದಾಡಿಯ ಅಳಿದ ದಾಸಯ್ಯ ಬಂದ ಕಾಣೆ
ಛಲದಿ ಕಂಬದಿ ಬಂದು ಅಸುರನ ಸೀಳಿದ ದಾಸಯ್ಯ ಬಂದ ಕಾಣೆ

ಬಲಿಯ ದಾನವ ಬೇಡಿ ನೆಲವನಳೆದು ನಿಂದ ದಾಸಯ್ಯ ಬಂದ ಕಾಣೆ
ಮಲೆತ ಕ್ಷತ್ರಿಯರ ಕುಲವ ಸಂಹರಿಸಿದ ದಾಸಯ್ಯ ಬಂದ ಕಾಣೆ
ಲಲನೆಯನೊಯ್ಯೆ ತಾ ತಲೆ ಹತ್ತಾರನು ಕೊಂದ ದಾಸಯ್ಯ ಬಂದ ಕಾಣೆ
ನೆಲಕೊತ್ತಿ ಕಂಸನ ಬಲವನಳಿದ ಮುದ್ದು ದಾಸಯ್ಯ ಬಂದ ಕಾಣೆ

ಪುಂಡತನದಿ ಪೋಗಿ ಪುರವನುರುಪಿ ದಾಸಯ್ಯ ಬಂದ ಕಾಣೆ
ಲಂಡರ ಸದೆಯಲು ತುರಗವನೇರಿದ ದಾಸಯ್ಯ ಬಂದ ಕಾಣೆ
ಹಿಂಡುವೇದಗಳೆಲ್ಲ ಅರಸಿ ನೋಡಲು ಸಿಗದ ದಾಸಯ್ಯ ಬಂದ ಕಾಣೆ
ಪಾಂಡುರಂಗ ನಮ್ಮ ಪುರಂದರ ವಿಠಲ ದಾಸಯ್ಯ ಬಂದ ಕಾಣೆ

8

ಜಲದ ನೀಲ ಗಾತ್ರ ಏತರ ಚೆಲುವ ರುಕ್ಮಿಣಿ
ಬಿಳಿಯ ಜಡೆಯ ಮೈಯ ಜೋಗಿಗೊಲಿದ ಪಾರ್ವತಿ

ಉದಕವೊಳಗೆ ವಾಸವೇಕೆ ಸದನವಿಲ್ಲವೆ
ಸುದತಿ ಸುಡುವ ಕಾಡಿಗಿಂತ ಲೇಸು ಅಲ್ಲವೆ

ಶೃಂಗಿಯ ಬೆನ್ನಿಲೆತ್ತಿದವನ ಸೊಗಸು ನೋಡಿದೆ
ಗಂಗೆಯು ಶಿರವಿ ಪೊತ್ತವನ ಗರುವ ಕೇಳಿದೆ

ವಸುಧೆ ನೆಗಹಿ ಬೇರ ಮೆಲುವ ಅಶನವಿಲ್ಲವೆ
ಹಸಿದು ವಿಷವ ಕುಡಿದ ಎಂತು ಸ್ವಾದವಲ್ಲವೆ

ಕರುಳ ಕೊರಳ ಸರವು ಏಕೆ ಸರವು ದೊರಕದೆ
ಕೊರಳ ರುಂಡಮಾಲೆ ಏಕೆ ಕಾಂಚನವಿಲ್ಲವೆ

ಧರಣಿ ಮೂರಡಿ ಬೇಡಲಿಕ್ಕೆ ದೊರೆಯು ಅಲ್ಲವೆ
ನರಕಪಾಲ ಪಿಡಿವ ಜಗದ ಕರ್ತೃವಲ್ಲವೆ

ಮಾತೆ ಶಿರವ ಅಳಿದವನ ಮಾತ ಕೇಳಿದೆಯಾ
ತಾತನಾಣೆ ಸುತನ ಕೊಂದ ನೀತಿ ನೋಡಿದೆಯಾ

9

ತಮನ ಕೊಂದವನೀತ ಮಂದರೋದ್ಧರನೀತ
ಭೂಮಿಯ ನೆಗಹಿ ತಂದವನೀತ
ಕುಮತಿ ರಕ್ಕಸರನು ಸೀಳಿ ಬಲಿಯ ಬೇಡಿದನೀತ
ಜಮದಗ್ನಿಭವ ಪರಶುನಾಥನೀತ
ಸುಮನಸೇಂದ್ರನ ತನೂಭನಸಖನೀತ
ಚಮತ್ಕೃತಿಯಿಂದ ಮೂರೂರು ಗೆಲಿದನೀತ
ಅಮಲ ಕಲ್ಕಿ ಮೊದಲಾದ ಅನಂತಾವತಾರನೀತ
ಕಮಲೇಶ ಪುರಂದರವಿಠಲನೀತ

10

ವಾಸುದೇವ ನಿನ್ನ ಮರ್ಮ ಕರ್ಮಂಗಳ
ದೇಶದೇಶದೊಳು ಹೇಳಲೆ

ಬೇಸರಿಯವೆ ಎನ್ನ ಹೃದಯಕಮಲದಲ್ಲಿ
ವಾಸವಾಗಿ ಸುಮ್ಮನಿರುವೆಯೊ

ಮತ್ಸ್ಯರೂಪವಾಗಿ ಮನಸು ಕಾಣಿಸಿಕೊಂಡು ಮಕ್ಕಳ ತಿದ್ದಿದ್ದು ಹೇಳಲೆ
ಉತ್ಸಾಹದಿಂದ ನಿಗಮವ ತಂದು ಬ್ರಹ್ಮಗೆ ಮೆಚ್ಚಿ ಕೊಟ್ಟದ್ದು ನಾ ಹೇಳಲೆ

ಕಡೆಗೋಲ ಮಂಡೆಯಂದದಿ ಕೈಕಾಲು ಮುದುಡಿಕೊಂಡದ್ದು ನಾ ಹೇಳಲೆ
ಕಡಲೊಳಗಿಂದ ಪಾತಾಳಕೆ ಇಳಿದಿಳೆ ಪಡೆದಾತನ ಸುದ್ದಿ ಹೇಳಲೆ

ಹುಚ್ಚುಮನಸು ಮಾಡಿ ಕಚ್ಚುತ ಕೆದರುತ ರಚ್ಚೆಯಿಕ್ಕಿದ ಸುದ್ದಿ ಹೇಳಲೆ
ಮುಚ್ಚಿದ ಭೂಮಿಯ ಹಲ್ಲಿಂದ ಕಿತ್ತಿದ ಹೆಚ್ಚುತನವ ನಾನು ಹೇಳಲೆ

ಕಂದನ ಮಾತಿಗೆ ಕಡುಕೋಪದಿಂ ಬಂದು ಕಂಬವನೊಡೆದದ್ದು ಹೇಳಲೆ
ಕುಂದದೆ ಹಿರಣ್ಯಕಶಿಪುವಿನುದರ ಸೀಳಿ ಕರುಳ್ಮಾಲೆ ಧರಿಸಿದ್ದು ಹೇಳಲೆ

ಬಾಲನಾಗಿ ಬ್ರಹ್ಮಚಾರಿವೇಷವ ತೋರಿ ಬಲಿಯ ಬೇಡಿದುದನು ಹೇಳಲೆ
ಲೀಲೆಯಿಂದಲಿ ಧರೆಯ ಈರಡಿ ಮಾಡಿದ ಜಾಲತನವನು ನಾನು ಹೇಳಲೆ

ಹೆಸರಿಲ್ಲದೆ ಹೋಗಿ ಹೆತ್ತ ತಾಯ್ ತಲೆಕುಟ್ಟಿ ಕೊಡಲಿಯ ಪಿಡಿದದ್ದು ಹೇಳಲೆ
ಸೋಸಿ ದೈತ್ಯರನೆಲ್ಲ ರೋಸಿ ಪ್ರಾಣವ ಕೊಂಡ ದೋಷತನವ ನಾನು ಹೇಳಲೆ

ತಾಯ ಮಾತನೆ ಕೇಳಿ ತಮ್ಮನ ಒಡಗೂಡಿ ಅಡವಿಯೊಳಿದ್ದದ್ದು ಹೇಳಲೆ
ಮಾಯಾಸೀತೆಗಾಗಿ ರಾವಣನನು ಕೊಂದು ಮಹಿಮೆಯ ನೆರೆದದ್ದು ಹೇಳಲೆ

11

ರಾಮಗೋವಿಂದ ಹರೆ ಕೃಷ್ಣಗೋವಿಂದ
ದಾಮೋದರ ಹರಿ ವಿಷ್ಣು ಮುಕುಂದ

ಮತ್ಸ್ಯವತಾರದೊಳಾಡಿದನೆ ಮಂದ
ರಾಚಲ ಬೆನ್ನೊಳಗಾಂತವನೆ
ಅಚ್ಚ ಸೂಕರನಾಗಿ ಬಾಳಿದನೆ ಮದ
ಹೆಚ್ಚೆ ಹಿರಣ್ಯಕನ ಸೀಳಿದನೆ

ಬಲಿಯೊಳು ದಾನವ ಬೇಡಿದನೆ ಕ್ಷಾತ್ರ
ಕುಲವ ಬಿಡದೆ ಕ್ಷಯಮಾಡಿದನೆ

ಜಲನಿಧಿಗೆ ಬಿಲ್ಲ ಹೂಡಿದನೆ ಕಾಮ
ಕೊಲಿದು ಗೊಲ್ಲತಿಯೊಳಾಡಿದನೆ

ಸಾಧಿಸಿ ತ್ರಿಪುರರ ಗೆಲಿದವನೆ ಪ್ರತಿ
ವಾದಿಸಿ ಹಯವೇರಿ ನಲಿದವನೆ
ಭೇದದಿ ವಿಶ್ವವ ಗೆಲಿದವನೆ ಬಾಡ
ದಾದಿಕೇಶವ ನಮಗೊಲಿದವನೆ

12

ಪರಮಪುರುಷ ಹರಿ ಗೋವಿಂದ ಸಿರಿ
ಧರ ನಾರಾಯಣ ಗೋವಿಂದ

ನಿಶಿವೆಸರಸುರನ ಅಸುವ ತೊಲಗಿಸಿದೆ
ಕುಸುಮಶರನ ಪಿತ ಗೋವಿಂದ
ರಸಪೂರಿತ ಶ್ರುತಿ ಮುಸುಳಿಸದಲೆ ತಂದೆ
ಬಿಸಜಸಂಭವನಯ್ಯ ಗೋವಿಂದ

ಜತನದೊಳಮೃತಮಥನದಿಯಂದು ಪ
ರ್ವತವನುದ್ಧರಿಸಿದೆ ಗೋವಿಂದ
ಶತಕ್ರತುವಿನ ಸಿರಿ ಹತವಾಗೆ ಧರೆಯ ಪೊ
ತ್ತಾತನ ನಿಲಿಸಿದೆಯೊ ಗೋವಿಂದ

ಭೂತಳವೆರಸಿ ರಸಾತಳಕೊಯ್ದನ
ಪಾತಾಳವೊಳು ಕಂಡೆ ಗೋವಿಂದ
ಆತನೊಡನೆ ಕಾದಿ ಆತನ ಗೆಲಿದು ಮ
ಹೀತಳವನು ತಂದೆ ಗೋವಿಂದ

ದುರುಳದೈತ್ಯನ ನಿಡುಗರುಳ ಮಾಲೆಯ ಮುಂ
ಗೊರಳೊಳು ಧರಿಸಿದೆ ಗೋವಿಂದ
ಗರಳಕಂಧರನು ಬೆರಳೆತ್ತಿ ಪೊಗಳಲು
ತರಳಗೊಲಿದು ನಿಂದೆ ಗೋವಿಂದ

ವಾಮನನಾಗಿ ನಿಸ್ಸೀಮ ಬಲಿಯ ಕೈಯ
ಭೂಮಿಯನಳಕೊಂಡೆ ಗೋವಿಂದ

ತಾಮರಸಾಂಘ್ರಿಯಿಂ ಹೇಮಗರ್ಭದಲಿದ್ದ
ವ್ಯೋಮಗಂಗೆಯ ಪೆತ್ತೆ ಗೋವಿಂದ

ವರಪಶುವಿನ ಋಷೀಶ್ವರನ ತಪದ ಬಹು
ಕರಕಮಲದಲಿದ್ದೆ ಗೋವಿಂದ
ತರಹರಿಸಲು ಸುಂದರಿಗೆ ಪತಿವ್ರತ
ಸುರರರಿಯದೆ ಕೊಟ್ಟೆ ಗೋವಿಂದ

ತ್ರಿಣಯನನೊಲಿದ ರಾವಣನ ಗರ್ವವ ರಣಾಂ
ಗಣದೊಳೊರಗಿಸಿದೆ ಗೋವಿಂದ
ಜನ ಮಣಿಯಲು ಬೇರೆ ಮಣಿಪುರದಲಿ ವಿಭೀ
ಷಣಗೆ ಶಾಶ್ವತವಿತ್ತೆ ಗೋವಿಂದ

ಮಾರಣ ಕ್ರತು ಸಂಪೂರಣ ಕಂಸ ಸಂ
ಹಾರಣ ಭುಜಬಲ ಗೋವಿಂದ
ಪೇರಣಪುರಪತಿ ಸಿರಿ ಭೂಭಾರೋ
ತ್ತಾರಣ ಗುಣನಿಧಿ ಗೋವಿಂದ

ಕಥೆಯ ನಿರ್ಮಿಸಿ ಪತಿವ್ರತೆಯರೆಲ್ಲರ ಘನ
ವ್ರತಗಳನಳಿದೆಯೊ ಗೋವಿಂದ
ಜತೆಯುಗಲದಲಿಹ ತ್ರಿತಯರ ಗೆಲಿದು ದೇ
ವತೆಗಳೆಲ್ಲರ ಕಾಯ್ದೆ ಗೋವಿಂದ

ಓಜೆಯ ಮರಕತ ತೇಜಿಯನೇರಿ ಕ
ನೋಜ ರಾವ್ರತನಾದೆ ಗೋವಿಂದ
ಸೂಜಿಯ ಬೆನ್ನಲಿ ರಾಜಿಪ ತೆರದಿ ಸ
ಹಾಜರ ಒಳಗಿಪ್ಪೆ ಗೋವಿಂದ

13

ನೋಡಯ್ಯ ನಿನ್ನ ದಾಸರ ಮೇಲೆ ಕೃಪೆಗಳನು
ಮಾಡಯ್ಯ ಮನ್ನನಕೆ ಸಂತಸವನು
ಕೀಡಯ್ಯ ಭವಭಯದ ಪಾತಕಂಗಳ ನಾನ
ವಾಡ ಗುಡ್ಡದ ತಿರುಮಲೇಶ ಸರ್ವೇಶ

18

ಆದಿಯಲಿ ವೇದಗಳ ಕದ್ದು ಕೊಂಡೊಯ್ದವನ
ಸಾಧನಂಗೆಯ್ವೆನೆಂದಾಕ್ಷಣದೊಳು
ಪೋದನೆಲ್ಲೆನುತ ಶರನಿಧಿಯೊಳಗೆ ಪೊಕ್ಕು ಮ
ತ್ತಾ ದೈತ್ಯನಂ ಕೊಂದು ತಿಕ್ಕಿ ಮುಕ್ಕೆ

ನೀ ದಯಾಪಾತ್ರನೆಂಬುದ ಕೇಳಿ ನಾನರಿತೆ
ಭೂಧರೆಯ ಸುರರ ನೀ ಸಲುಹಲಾಗ
ಪೋದ ನಿಗಮಂಗಳನು ತಂದು ಸಲೆ ರಕ್ಷಿಸಿದೆ
ಆದಿಮತ್ಸ್ಯವತಾರ ಶರಣೆಂಬೆನು

ಅಮರ ದೈತ್ಯರು ಕೂಡಿ ಅಂಬುಧಿಯ ಕಡೆಯಲಿಕೆ
ಕ್ರಮದಿ ಮಂದರಕೆ ಕಟ್ಟಿದ ಶೇಷನ
ತಮತಮಗೆ ಪಿಡಿದೆಳೆಯೆ ತಲ್ಲಣಿಸಿ ಫಣಿರಾಜ
ಸಮವಿಷದ ಕರ್ಬೊಗೆಯನುಗುಳುತಿರಲು
ಮಮಕಾರತತ್ತ್ವದಲಿ ಮತ್ತೊಂದು ರೂಪಾಗಿ
ಅಮಿತಗುಣಮೂರ್ತಿ ನೀನಂದು ಬೇರೆ
ಸುಮತವನು ಬೆನ್ನಲ್ಲಿ ಸಲೆ ಆತು ರಕ್ಷಿಸಿದೆ
ಕಮಠಮೂರುತಿ ನಿನಗೆ ಶರಣೆಂಬೆನು

ಚಿನ್ನಗಣ್ಣವನೆಂಬನೊರ್ವ ಖಳ ಭೂದೇವಿ
ಕನ್ನಿಕೆಯನೊಯ್ಯುತಿರೆ ಕನಲಿ ಮನದಿ
ಇನ್ನು ಅವನನು ಸೆಣಸಿ ಜಯಿಸುವವರನು ಕಾಣೆ
ನೆನ್ನುತಲಿ ರೋಮಗಳನುಬ್ಬೆತ್ತುತ
ತನ್ನ ಮುಂಗೋರೆಗಳ ಮಸೆದೊಡನೆ ರಕ್ಕಸನ
ಬೆನ್ನಟ್ಟಿ ಬರಸೆಳೆದು ಸದೆದೊರಗಿಸಿ
ಚೆನ್ನಾಗಿ ಧರಣಿಯನು ತಂದು ಸಲೆ ರಕ್ಷಿಸಿದೆ
ಹನ್ನೆರಡು ಪೆಸರವನೆ ಶರಣೆಂಬೆನು

ಹೇಮಕಶ್ಯಪನೆಂಬ ನಾಮುಜನ ಸುತನೊರ್ವ
ನಾ ಮಹಾಘನವೆಂದು ನೆನೆಯುತಿರಲು
ತಾಮಸದ ಖಳ ತನ್ನ ತನುಜನನು ಮಥಿಸುತಿರೆ
ರಾಮನನು ತೋರೆಂದು ಬಾಧಿಸುತಿರೆ

ಧೂಮಜ್ವಾಲೆಗಳೊಡನೆ ಭುಗಿಭುಗಿಲು ಛಿಟಿಲೆನುತ
ಆ ಮಹಾರಕ್ಕಸನ ಪೊಡೆಯ ಸೀಳಿ
ಪ್ರೇಮದಲಿ ಪ್ರಹ್ಲಾದಗೊಲಿದು ಪಟ್ಟವನಿತ್ತ
ಸಾಮಜಾರಿಯ ವದನ ಶರಣೆಂಬೆನು

ಬಲಿಯಧ್ವರದ ಸಾಲೆಗೊಂದು ವೇಷವನಾಂತು
ಸಲೆ ಬಂದು ಧರೆಯ ಮೂರಡಿಯ ಬೇಡೆ
ಒಲಿದು ಇತ್ತಪೆನೆನಲು ಧಾರೆಯನೆರೆಯಲಸುರ
ಕುಲಗುರುವು ಜುಳಿಗೆಯೊಳು ತಡೆದು ನಿಲಲು
ಸಲಿಲ ವರ್ಜಿತನಯನನು ಮಾಡಿ ಆಕಾಶ
ನೆಲವೆರಡು ಪಾದವನ್ನಳೆದ ಬಳಿಕ
ತಲೆಮೇಲೆ ಇರಿಸೆನಲು ತಳಕಿಳಿಸಿ ಅವನ ಬಾ
ಗಿಲ ಕಾಯ್ದ ವಾಮನನೆ ಶರಣೆಂಬೆನು

ರೇಣುಕೆಯ ಬಸುರಿನಲಿ ಜನಿಸಿ ಪಿತನಾಜ್ಞೆಯನು
ಮಾಣಬಾರದು ಎಂಬ ಮತವ ಪಿಡಿದು
ಕ್ಷೋಣವಿಲ್ಲದೆ ತಾಯ ಶಿರವರಿದು ತಂದೆಯನು
ಪ್ರಾಣಹತ್ಯವ ಮಾಡಿದರ ಕುಲವನು
ಕ್ಷೋಣಿಗೆರಗಿಸಿ ಕಾರ್ತವೀರ್ಯಾರ್ಜುನನ ಮಡುಹಿ
ಜಾಣತನದಲ್ಲಿ ಭೂದಾನಗಳ ಭೂಸುರರ
ಕಾಣುತಲೆ ಕರೆಕರೆದು ಕೊಟ್ಟೆಯ್ದೆ ನೀನು ಪೂ
ಬಾಣಜನಕನೆ ರಾಮ ಶರಣೆಂಬೆನು

ಸೀತೆಯನು ಕದ್ದು ಒಯ್ದವನ ಕೊಲ್ಲುವ ಭರದಿ
ಭೂತಳದ ಕಪಿಗಳನು ಕೂಡಿಕೊಂಡು
ಸೇತುವೆಯ ಕಟ್ಟಿ ಶರನಿಧಿ ದಾಟಿ ಬರಲಾಗ
ಭೂತಗಣ ಸಂತತಿಯು ನಡುನಡುಗುತಿರಲು
ಚೇತನದ ರಾವಣೇಶ್ವರ ಕುಂಭಕರ್ಣ ಸ
ತ್ವಾತಿಶಯ ರಕ್ಕಸರ ಇರಿದೊರಗಿಸಿ
ಮಾತು ಲಾಲಿಸಿ ವಿಭೀಷಣಗೆ ಪಟ್ಟವನಿತ್ತ
ದಾತ ರಘುನಾಥನೇ ಶರಣೆಂಬೆನು

ಶಕಟ ಕುಕ್ಕುಟ ಧೇನುಕಾಸುರರ ಪೂತನಿಯ
ಬಕ ವತ್ಸಹಕ ವೃಕ್ಷಾಸುರ ಮುಖ್ಯರ

ಪ್ರಕಟದಿಂದಿರಿದು ಕರಿಯನು ಸೀಳಿ ತನಗೆ ಸಂ
ಮುಖರಾದ ಮಲ್ಲರನು ಇರಿದೊರಗಿಸಿ
ಮುಕುರದಂತ್ಯದ ಹರ್ಮ್ಯದೊಳಗಿಂದ ಕಂಸಕನ
ಸಕಪುಕನೆ ತಿವಿದವನನಿರಿದೊರಗಿಸಿ
ಸಕಲವೆಸೆದಿರ್ದ ಮಧುರಾಪುರವ ಉಗ್ರಸೇ
ನಕಗಿತ್ತ ಕೃಷ್ಣನೇ ಶರಣೆಂಬೆನು

ಮೂರುಪುರದಬಲೆಯರ ವ್ರತಗಳನೆ ಕೆಡಿಸಲಿಕೆ
ಬೇರೊಂದು ಅಶ್ವತ್ಥವೃಕ್ಷವಾಗಿ
ನಾರಿಯರ ವ್ರತಭಂಗಗೆಯ್ಯಲಾ ದೆಸೆಯಿಂದ
ಊರುತ್ರಯವದು ತಿರುಗುವುದು ನಿಲ್ಲಲಾಗ
ನೀರ ಮಸ್ತಕದಲ್ಲಿ ಧರಿಸಿದನ ಕರವಿಲ್ಲ
ನಾರಿಯೊಳು ನಾರಾಯಣಾಸ್ತ್ರವಾಗಿ
ಘೋರತನವೆತ್ತ ತ್ರಿಪುರದ ಕೀಲ ಪರಿದ ಮದ
ನಾರಿಸಖ ಬುದ್ಧನೇ ಶರಣೆಂಬೆನು

ಮದವೆತ್ತ ರಕ್ಕಸರು ಮಹಿಯೊಳಗೆ ಹೆಚ್ಚಲು
ತ್ರಿದಶಾಂತ ನಡನಡನೆ ನಡುಗುತಿರಲು
ಬೆದರಬೇಡೆನುತ ಅಭಯವನಿತ್ತು ಮುದದಿಂದ
ಸುಧೆಯೊಳಗೆ ಬಂದು ಜನಿಸಿ
ಕುದುರೆವಾಹನನಾಗಿ ಕುಂಭಿನಿಯ ಮೇಲೆ ತನ
ಗಿದಿರಾದ ರಾವುತರನಿರಿದೊರಗಿಸಿ
ಮೊದಲ ಭಾಷೆಯನು ದಿವಿಜರಿಗಿತ್ತೆ ವೇಗದಲಿ
ಚದುರ ಕಲ್ಕ್ಯವತಾರ ಶರಣೆಂಬೆನು

ಇಂತು ಧಶ ಅವತಾರಗಳನೆತ್ತಿ ರಕ್ಕಸರ
ಸಂತತಿಯನೊರಸಿ ಭೂಭಾರವಿಳುಹಿ
ಕಂತುಪಿತ ತಿರುವೆಂಗಳೇಶ ತಿರುಮಲೆಯೊಳಗೆ
ಚಿಂತಿಸುವ ಭಕ್ತರನು ಪಾಲಿಸುತಲಿ
ದಂತಿರಾಜನ ಪೊರೆದು ದಾನನಾಡಿಗೆ ಬಂದು
ನಿಂತಾದಿಕೇಶವನೆ ಶರಣೆಂಬೆನು

14

ಗೋವಿಂದ ಸಲಹೆನ್ನನು ಸದಾನಂದ
ಗೋವಿಂದ ಸಲಹೆನ್ನನು
ಗೋವಿಂದ ಸಲಹೆನ್ನ ಕುಮುದಲೋಚನ ನಿನ್ನ
ಸೇವಕರಡಿಯ ಸೇವಕನಯ್ಯಾ ಹರಿಯೆ

ತಮನ ಸಂಹರಿಸಿ ವೇದವ ತಂದೆ ಗೋವಿಂದ
ಅಮರರಿಗೊಲಿದಮೃತವನಿತ್ತೆ ಗೋವಿಂದ
ರಮಣಿಯ ತಂದೆ ವರಹರೂಪೀ ಗೋವಿಂದ
ಭ್ರಮಿಸಿ ಕಂಬದೊಳು ಉದ್ಭವಿಸಿದೆ ಗೋವಿಂದ
ಸಮರದಲ್ಲಖಿಳ ರಾಜರ ಕೊಂದೆ ಗೋವಿಂದ
ಕಮಲಾಕ್ಷ ಕಡಲ ಕಟ್ಟಿದ ದಿಟ್ಟ ಗೋವಿಂದ
ಮನುತೆಯೊಳಿಳೆಯು ಗೋಗಳ ಕಾಯ್ದೆ ಗೋವಿಂದ
ರಮಣಿಯರಿಗೊಲಿದು ಬತ್ತಲೆ ನಿಂತೆ ಗೋವಿಂದ

15

ನಿನ್ನ ನಾನೇನೆಂದೆನೊ ರಂಗಯ್ಯ ರಂಗ
ನಿನ್ನ ನಾನೇನೆಂದೆನೊ
ನಿನ್ನ ನಾನೇನೆಂದೆ ಚಿನ್ಮಯಮೂರುತಿ
ಪನ್ನಗಶಯನ ಪಾಲ್ಗಡಲೊಡೆಯನೆ ಕೃಷ್ಣ

ಧೀರಸೋಮುಕ ವೇದಚೋರನ ಮಡುಹಿದೆ
ವಾರಿಧಿಗಿಳಿದ ಪರ್ವತವ ಪೊತ್ತೆ
ಧಾರಿಣಿಯನು ತಂದು ದನುಜದಲ್ಲಣನಾದೆ
ನಾರಸಿಂಹ ನಿನಗೆ ನಮೊ ಎಂದೆನಲ್ಲದೆ

ನೀರ ಪೊಕ್ಕವನೆಂದೆನೆ ಬೆನ್ನಿನ ಮೇಲೆ
ಭಾರ ತಾಳ್ದವನೆಂದೆನೆ ಮಣ್ಣನಗಿದು
ಬೇರ ಮೆದ್ದವನೆಂದೆನೆ ರಕ್ಕಸರೊಳು
ಹೋರಾಡಿದವನೆಂದು ಹೊಗಳಿದೆನಲ್ಲದೆ

ಧರೆಯ ದಾನವ ಬೇಡಿ ನೆಲವ ಮೂರಡಿ ಮಾಡಿ
ಪರಶುವಿಡಿದು ಕ್ಷತ್ರಿಯರ ಸವರಿ
ಚರಣದಿ ಪಾಷಾಣ ಹೆಣ್ಣು ಮಾಡಿದ ಪುಣ್ಯ
ಚರಿತ ಯಾದವಪತಿ ಶರಣೆಂದೆನಲ್ಲದೆ

ತಿರುಕ ಹಾರುವನೆಂದೆನೆ ಹೆತ್ತತಾಯ
ಶಿರಕೆ ಮುನಿದವನೆಂದೆನೆ ವನದೇಶದಿ
ಥುರಕೆ ನಿಂದವನೆಂದೆನೆ ಪೂತನಿ ಮೊಲೆಯು
ಹರಿದು ಕೊಂದನೆಂದು ಸ್ತುತಿಸಿದೆನಲ್ಲದೆ

ಚಿತ್ತಜಕೋಟಿ ಲಾವಣ್ಯ ಮುಪ್ಪುರದೊಳು
ಉತ್ತಮ ಸ್ತ್ರೀಯರ ವ್ರತವಳಿದೆ
ಮತ್ತೆ ಕಲ್ಕಿಯಾದೆ ಮಲೆತರ ಮಡುಹಿದೆ
ಉತ್ತಮ ಶ್ರೀರಾಮನೆಂದು ಸ್ತುತಿಸಿದೆನಲ್ಲದೆ
ಬತ್ತಲೆ ನಿಂತವನೆಂದೆನೆ ತೇಜಿಯನೇರಿ
ಒತ್ತಿ ಬಾಹವನೆಂದನೆ ಬಾರಿಬಾರಿಗೆ
ಸತ್ತು ಹುಟ್ಟುವನೆಂದೆನೆ ಆದಿಕೇಶವ
ಹತ್ತವತಾರದ ಹರಿಯೆಂದೆನಲ್ಲದೆ

15

ಇಂದು ನೀ ಕರೆದು ತಾರೆ ಬಾರದೆ ಶ್ರೀ ಗೋ
ವಿಂದ ತಾ ಮುನಿದು ಇರೆ ವಿರಹದಲಿ ನಾ
ನೊಂದು ಸೈರಿಸಲಾರೆ ತಂದು ನೀ ತೋರೆ
ಕಾಲಿಲ್ಲದೆ ಆಡಿದ ವೇದ ತಂದಿತ್ತ
ಕಾಲಿಲ್ಲದವನ ಪೊತ್ತ ಅಮೃತವನಿತ್ತ
ಕಾಲ ತೂಗಿ ನೋಡುತ್ತ ಗಜ ಉನ್ಮತ್ತ
ಕಾಲಿನಿಂದಲಿ ಕೊಲುವ ರೂಪದಿ
ಕಾಲಿನಲಿ ತಾನಳೆದ ಮೇದಿನಿ
ಕಾಲಿನಿಂದಲಿ ಪಡೆದು ಗಂಗೆಯ
ಕಾಲಿನಿಂದಲಿ ನಡೆದ ಭಾರ್ಗವ
ಕಾಲಿನಲಿ ಉದ್ಧರಿಸಿ ಶಿಲೆಯನು
ಕಾಲಿನಲಿ ಕಾಳಿಯನ ಮರ್ದಿಸಿ
ಕಾಲಿನಲಿ ತ್ರಿಪುರವನು ಗೆಲಿದನ
ಕಾಲಿಗೆರಗುವೆ ತೇಜಿರೂಢನ

16

ಸಿಂಗರದ ಸಿರಿಧರನೆ ಸಿತಿಕಂಠಸನ್ನುತನೆ
ಗಂಗೆಯನು ಉಂಗುಟದಿ ಪೆತ್ತ ಮೂರುತಿಯೆ ಕಲುಬಗಿಂ
ರಂಗನೊಲಿದುಪ್ಪವಡಿಸಯ್ಯ ಹರಿಯೆ

ವೇದತಸ್ಕರನೊಡನೆ ಕಾದಿ ವೇದವ ಸೆಳೆದು
ಮೇದಿನಿಯ ನೆಗಹಿ ತಾಮಸನ ಜೀವವನಳಿದು
ವಾದಿಸುವ ಹಿರಣ್ಯಕನ ಕರುಳ ನಖದಲಿ ಬಗಿದು ಪಾದದಲಿ ಧರೆಯನಳೆದು
ಯೋಧಾರ್ಜುನನ ಅರೆದು ಸ್ವಾದು ಅನ್ನವ ತೊರೆದು
ಕ್ರೋಧಿಯಸುವೀಂಟಿ ತ್ರಿಪುರವ ಮುರಿದು ಹಯವೇರು
ಏದರಾಲಸ್ಯಮೇಳೀಳು ಮಾಧವನೇ ಕಲುಬಗಿರಿಯಲ್ಲಿ ಬಳಲಿ ಪವಡಿಸಿದೆ

ಸಾಧು ನರಸಿಂಹ ಕಾಗಿನೆಲೆ ಆದಿಕೇಶವ ಮುಂದೆ
ಕಾರ್ಯಗಳಿವೆ ಭೂಧರನೆ ಒಲಿದುಪ್ಪಡಿಸು ಹರಿಯೆ

17

ಗೋವಿಂದ ಹರಿಗೋವಿಂದ
ಗೋವಿಂದ ಕೇಶವ ಕೃಷ್ಣ ಜನಾರ್ದನ

ಮತ್ಸ್ಯಾವತಾರದೊಳಾಡಿದನೆ ಮಂದ
ರಾಚಲ ಬೆನ್ನೊಳು ತಾಳಿದನೆ
ಅಚ್ಚ ಸೂಕರನಾಗಿ ಬಾಳಿದನೆ ಮದ
ಹೆಚ್ಚೆ ಹಿರಣ್ಯನ ಸೀಳಿದನೆ

ಕುಂಭಿನಿ ದಾನವ ಬೇಡಿದನೆ ಕ್ಷಾತ್ರ
ರೆಂಬವರನು ಹತಮಾಡಿದನೆ
ಅಂಬುಧಿಗೆ ಶರ ಹೂಡಿದನೆ ಕಮ
ಲಾಂಬಕ ಗೊಲ್ಲರೊಳಾಡಿದನೆ

ವಸುದೇವನುದರದಿ ಪುಟ್ಟಿದನೆ ಹಲ್
ಮೊಸೆವ ದನುಜರೊಡೆಗುಟ್ಟಿದನೆ
ಎಸೆವ ಕಾಳಿಂಗನ ಮೆಟ್ಟಿದನೆ ಬಾ
ಧಿಸುವರ ಯಮಪುರಕಟ್ಟಿದನೆ

ಸಾಧಿಸಿ ತ್ರಿಪುರರ ಗೆಲಿದವನೆ ಮ್ಲೇಚ್ಛರ
ಛೇದಿಸಿ ಹಯವೇರಿ ಮೆರೆವವನೆ
ಸಾಧಿಸಿ ಸಕಲವ ತಿಳಿದವನೆ ಬಾಡ
ದಾದಿಕೇಶವ ಭಕ್ತಿಗೊಲಿದವನೆ

ಪದ್ಯಗಳ ಅಕಾರಾದಿ

(ಮೊದಲನೆಯ ಸಂಖ್ಯೆ ಸಂಧಿಯನ್ನೂ ಎರಡನೆಯ ಸಂಖ್ಯೆ ಪದ್ಯವನ್ನೂ ಸೂಚಿಸುತ್ತದೆ)

ಅರ್ಥಕೋಶ

(ಮೊದಲನೆಯ ಸಂಖ್ಯೆ ಆಶ್ವಾಸವನ್ನೂ ಎರಡನೆಯ ಸಂಖ್ಯೆ ಪದ್ಯವನ್ನೂ ಸೂಚಿಸುತ್ತದೆ)

ಅಂಗವಟ್ಟ ೫-೧೮ ಮೈಕಟ್ಟು
ಅಂಚೆವಾಸು ೨-೩೭ ಹಂಸದ ಗರಿಗಳಿಂದ ಮಾಡಿದ ಹಾಸಿಗೆ
ಅಂಡಲೆ ೪-೧೮ವ ಪೀಡಿಸು
ಅಂತಕ ೮-೧೦ ಯಮ
ಅಂತಸ್ಥ ೮-೧೬೪ ಒಳಗಿನ
ಅಂಬರ ೫-೪೨ ಬಟ್ಟೆ
ಅಕ್ಕಾಡು ೩-೩೫ ಭಯದಿಂದ ನಡುಗು
ಅಗೞ ೫-೪೧ ಕಂದಕ
ಅಗ್ಗಡ ೨-೮೫ವ ಅಧಿಕ, ದೊಡ್ಡದು
ಅಘಾಟ ೨-೨೨ ಅದ್ಭುತ
ಅಜಸ್ರಂ ೫-೪೩ ಯಾವಾಗಲೂ
ಅಟ್ಟೆ ೫-೧೫೫ ತಲೆಯಿಲ್ಲದ ದೇಹ
ಅಣುವ ೮-೩೬೮ ಹನುಮಂತ
ಅನಿಮಿಷ ೩-೩ ದೇವತೆ
ಅನೃತ ೬-೮೬ ಸುಳ್ಳು
ಅಭಿಸಾರಿಕೆ ೬-೫೬ವ ಪ್ರಿಯನನ್ನು ಕೂಡಲು ಹೋಗುವ ಹೆಣ್ಣು
ಅಭ್ರ ೫-೧೦೨ ಮೋಡ
ಅರಣಿ ೫-೫೪ವ ಯಾಗಾಗ್ನಿಯನ್ನು ಹುಟ್ಟಿಸಲು ಉಪಯೋಗಿಸುವ ಮರದ ಕೊರಡು
ಅರ್ಬುದ ೮-೩೨೬ ಹತ್ತುಕೋಟಿ
ಅರ್ಭಕ ೫-೯೩ ಎಳೆಯ ಮಗು
ಅಱವಟ್ಟಿಕೆ ೫-೧೭ವ ಪಾನೀಯಗಳನ್ನು ದಾರಿಹೋಕರಿಗೆ ಕೊಡುವ ತಾತ್ಕಾಲಿಕ ಧರ್ಮಶಾಲೆ
ಅಱಿಯಟ್ಟು ೪-೪೨ ಬೆನ್ನಟ್ಟಿ ಹೋಗು
ಅಶ್ರಾಂತ ೧-೬ ದಣಿವಿಲ್ಲದ
ಅಹಿಪ ೭ ೫೪ ಆದಿಶೇಷ
ಅೞಿ ೨-೫೬ ನಾಶ
ಆಚಮನ ೬-೧೦೫ ಆತ್ಮಶುದ್ಧಿಗೋಸ್ಕರ ಅಂಗೈಯಲ್ಲಿ ಶುದ್ಧವಾದ ನೀರನ್ನು ಮಂತ್ರಪೂರ್ವಕವಾಗಿ ಕುಡಿಯುವುದು
ಆಜ್ಯ ೫-೫೪ವ ತುಪ್ಪ
ಆಡುಬೊಲ ೫-೩೪ ಆಶ್ರಯಸ್ಥಾನ
ಆನನ ೫-೬೯ ಮುಖ
ಆಮಯ ೮-೩೯೭ ರೋಗ
ಆರವೆ ೫-೧೪ ಉದ್ಯಾನವನ
ಆಲವಟ್ಟಲು ೬-೩೬ ಬೀಸಣಿಗೆ
ಇಂಗಡಲು ೧-೭ವ ಹಾಲಿನ ಸಮುದ್ರ
ಇಂದ್ರಾವರಜ ೧-೭೩ವ ವಿಷ್ಣು
ಇಚ್ಚಣ ೯-೧೪೧ ಏಣಿ
ಇಟ್ಟೆಡೆ ೮-೬ ಇಕ್ಕಟ್ಟು
ಇಧ್ಮ ೮-೫೪ವ ಸೌದೆ
ಇರವಂತಿ ೫-೫೩ ಮಲ್ಲಿಗೆ ಜಾತಿಯ ಒಂದು ಹೂವು
ಈಡಿಱಿ ೮-೩೨೫ ಕಿಕ್ಕಿರಿ
ಉಂಚೆ ೫-೯೩ ಉತ್ಕೃಷ್ಟ
ಉಜ್ಜುಗ ೭-೭೨ವ ಆರಂಭ
ಉಜ್ಜುಗ ೮-೩೪೫ ಕೆಲಸ
ಉಡು ೭-೧೬ ನಕ್ಷತ್ರ
ಉದಧಿ ೭-೭೬ ಸಮುದ್ರ
ಉದ್ವಾಹ ೫-೮೭ ಮದುವೆ
ಉಪ್ಪವಡ ೬-೮೦ವ ನಿದ್ರೆಯಿಂದ ಏಳುವುದು
ಉಬ್ಬಣ ೫-೧೪೨ವ ಒಂದು ಬಗೆಯ ಚೂಪಾದ ಆಯುಧ
ಉಬ್ಬೆಗ ೪-೭೨ ದುಃಖ
ಉಮ್ಮಹ ೬-೧೦೫ ಉತ್ಸಾಹ
ಉರವಣಿ ೭-೪೦ ರಭಸ
ಉಱುಬೆ ೯-೧೪೦ವ ರಭಸ
ಉಸುರ್ ೧-೭೬ ಗಾಳಿ
ಉೞಿ ೩-೩೮ವ ಬಿಡು
ಎಕ್ಕಟಿ ೮-೩೯೦ವ ಗುಟ್ಟಾಗಿ
ಎಕ್ಕತುಳ ೭-೩೭ ಪರಾಕ್ರಮ
ಎಕ್ಕಲ ೪-೪೨ ಕಾಡುಹಂದಿ


ಎಕ್ಕವಡ ೭–೬೫ ಹಕ್ಕಿಗಳನ್ನು ಹಿಡಿಯುವ ಬಟ್ಟೆ
ಎಕ್ಕಸಕ್ಕ ೧೧–೨೪ ಅಸಂಬದ್ಧ ಮಾತು
ಎಡೆಸಂಜೆ ೫–೧೬೧ ಮೂರು ಸಂಜೆ ಹೊತ್ತು
ಎಱಂಕೆ ೩–೨೩ವ ರೆಕ್ಕೆ
ಎಱೆಯ ೨–೨೦ವ ಒಡೆಯ
ಎಳವೆಱೆ ೪–೪೨ ಬಾಲಚಂದ್ರ
ಒಗುಮಿಗೆ ೬–೫೫ವ ಅಧಿಕವಾಗಿ
ಒಡಹಾಯಿ ೪–೪೪ ಮೇಲೆ ಬೀಳು, ಜೊತೆಯಾಗಿ ನುಗ್ಗು
ಒಡ್ಡಾರ ೫–೧೧೭ ಹಗೆತನ
ಒಬ್ಬುಳಿ ೩–೧೮ ಗುಂಪು
ಕಂಡಲೆ ೨–೨೭ ಚರ್ಮದ ಚೀಲ
ಕಂತುಕ ೫–೭೨ ಚೆಂಡು
ಕಕ್ಷೆ ೪–೩೯ ಕಂಕುಳು
ಕಟಾಹ ೪–೨೫ ಕೊಪ್ಪರಿಗೆ
ಕಡವೆ ೭–೬೫ವ ಸಾರಂಗ
ಕಡ್ಡತನ ೫–೧೧೭ ದಡ್ಡತನ
ಕತಿಪಯ ೯–೧೨೯ವ ಕೆಲವು
ಕದಂಬ ೫–೧೨ ಕಡಹದ ಮರ
ಕದುಬು ೫–೧೪೭ವ ಆವರಿಸು
ಕಪಿತ್ಥ ೫–೨೩ ಬೇಲದ ಮರ
ಕಮಲಜ ೨–೫ ಬ್ರಹ್ಮ
ಕಮ್ಮಟಿಗ ೪–೨೩ ಕೆಲಸಕ್ಕಾಗಿ ಇಟ್ಟುಕೊಂಡ ಆಳು
ಕರಗ ೩–೫೮ ಕೊಡ
ಕರುಮಾಡ ೬–೬೧ ಉಪ್ಪರಿಗೆ
ಕರ್ಣಪೂರ ೬–೪೮ವ ಕಿವಿಯ ಆಭರಣ
ಕಲ್ಪಭೂಜ ೩–೪ ಬೇಡಿದುದನ್ನು ಕೊಡುವ ದೇವಲೋಕದ ಒಂದು ಮರ
ಕವುಂಗು ೫–೨೩ ಅಡಕೆ
ಕಳಮೆ ೫–೩೭ವ ಬತ್ತ
ಕಾ ೬–೬೬ ದುಷ್ಟ
ಕಾಂಚಿ ೧–೩೪ ಡಾಬು
ಕಾರಂಡ ೭–೬೭ ಒಂದು ಜಾತಿ ನೀರುಹಕ್ಕಿ
ಕಾಸಾರ ೬–೨೭ ಕೊಳ
ಕಿಟಿ ೪–೯೩ ಕಾಡುಹಂದಿ
ಕೀಲಣೆ ೨ ೯ವ ಜೋಡಣೆ
ಕುಂಜರ ೫–೧೬೪ ಆನೆ
ಕುಂತ ೪–೪೫ ಈಟಿ
ಕುಂದಣ ೮–೨೧೯ ಚಿನ್ನ
ಕುಚ್ಚಿತ ೩–೧೦ ನೀಚ
ಕುಧರ ೩–೪೧ ಪರ್ವತ
ಕುಬುಬು ೨–೨೭ ಕೂಗಾಟವನ್ನು ಸೂಚಿಸುವ ಒಂದು ಅನುಕರಣ ಶಬ್ದ
ಕುರವಕ ೬–೪೩ ಗೋರಂಟಿ
ಕುಸುಬು ೯–೧೨೧ ಹೊಡೆದು ಕೆಡಹು
ಕೂರ್ಗಣೆ ೭–೬೫ವ ಹರಿತವಾದ ಬಾಣ
ಕೂಳಿ ೨–೨೭ ಮೀನು ಹಿಡಿಯುವ ಬುಟ್ಟಿ
ಕೂಟಿ ೨–೨೭ ಮೂರ್ಖ
ಕೃಶಾನು ೩–೫೩ ಅಗ್ನಿ
ಕೆಕ್ಕರಿಸು ೯–೭೬ ಕ್ರೋಧಗೊಳ್ಳು
ಕೇಣ ೫–೧೫೨ ಅಧೀನಕ್ಕೆ ತೆಗೆದುಕೊಳ್ಳುವುದು
ಕೇಸರಿ ೮–೧೮ವ ಬಕುಳದ ಹೂವು
ಕೈತವ ೩–೭ ಮೋಸ
ಕೈರವ ೬–೫೧ ಬಿಳಿಯ ನೈದಿಲೆ
ಕೈವರ್ತಿಸು ೨–೩೦ವ ಒಪ್ಪಿಸು
ಕೊಂಚೆ ೫–೩೧ ಕ್ರೌಂಚಪಕ್ಷಿ
ಕೊಂತ ೫–೧೪೭ವ ಒಂದು ಬಗೆಯ ಆಯುಧ
ಕೊಟ್ಟ ೧೦–೧೧ ಕೋಟೆ
ಕೊಠಾರ ೩–೭ ಕೊಠಡಿ
ಕೊಳರ್ವಕ್ಕಿ ೭–೬೭ ಒಂದು ಜಾತಿಯ ನೀರು ಹಕ್ಕಿ
ಕೊಳುಗುಳ ೫–೧೫೫ ಯುದ್ಧ
ಕೋಟರ ೬–೫೧ ಮರದ ಪೊಟರೆ
ಕೋಡ ೩–೧೫ ಹಾಸ್ಯ
ಕೋಣ ೪–೨೫ ಚರ್ಮವಾದ್ಯಗಳನ್ನು ಬಾರಿಸುವ ಕೋಲು
ಕೋರಕ ೬–೪೮ವ ಮೊಗ್ಗು
ಕ್ರಮುಕ ೫–೫೩ ಅಡಕೆ
ಕ್ಷತ್ರ ೭–೯೫ ಕಷ್ಟಗಳು ಬಾರದಂತೆ ಕಾಪಾಡುವಿಕೆ
ಖಂಡೆ ೫–೧೪೭ವ ಕತ್ತಿ
ಖರ್ವಡ ೫–೫ ನಗರ ಮತ್ತು ಹಳ್ಳಿಗಳ ಮಧ್ಯಸ್ಥಿತಿಯಲ್ಲಿದ್ದು ಬೆಟ್ಟಗಳಿಂದ ಸುತ್ತಲ್ಪಟ್ಟ ಊರು
ಖೇಡ ೫–೫ ಹಳ್ಳಿ
ಗಂಡೂಷ ೬–೪೦ ಬಾಯಿ ಮುಕ್ಕಳಿಸುವುದು
ಗಜಬಜ ೮–೨೬೦ವ ಗದ್ದಲ
ಗರಳ ೫–೧೩೫ ವಿಷ
ಗಲ ೬–೧೬ ಕೊರಳು

ಗವಸಣಿ ೩-೭ ಮುಸುಕು
ಗಾಣ ೨-೨೭ ಮೀನು ಹಿಡಿಯುವ ಕೊಕ್ಕೆ
ಗುಲ್ಮ ೬-೧೨ ಪೊದರು
ಗೃಧ್ರ ೫-೧೫೫ ಹದ್ದು
ಗೆತ್ತು ೮-೮೪ ಹೋಲಿಕೆ
ಗೇಹಿನಿ ೪-೩ ಗೃಹಿಣಿ
ಗೋರಿ ೭-೮೪ ಹಿಂಸೆ
ಗ್ರೈವೇಯಕ ೬-೪೮ವ ಕೊರಳಿನ ಆಭರಣ
ಘಟ್ಟವಳ್ತಿ ೫-೫೧ ಸುಗಂಧ ದ್ರವ್ಯವನ್ನು ಮಾಡುವವಳು
ಘೂರ್ಮಿಸು ೨-೨೪ ಗರ್ಜಿಸು
ಚಟುಳ ೫-೧೨ ಚಪಲತೆ
ಚಬುಕು ೫-೧೪೭ವ ಚಾವಟಿ
ಚಲ್ಲಣ ೧೦-೨೩ ಚಡ್ಡಿ
ಚವಿ ೬-೪೯ ಹೊಳಪು
ಚಹಡ ೬-೮೪ ಚಾಡಿ
ಚಿಂಚಪತ್ರ ೬-೪೮ವ ಒಂದು ಬಗೆಯ ಆಭರಣ
ಚಿಂತಾಮಣಿ ೩-೧ ಬಯಸಿದುದನ್ನು ಕೊಡಬಲ್ಲ ದೇವಲೋಕದ ಒಂದು ರತ್ನ
ಚಿಪ್ಪಿಗ ೫-೫೯ ಶಿಲ್ಪಿ
ಚಿಲುಕು ೨-೨೭ ಹರಿತವಾದ ಒಂದು ಆಯುಧ
ಚುಬುಕ ೮ ೧೦೧ ತುಟಿಯ ಕೆಳಭಾಗ, ಗದ್ದ
ಚೂತ ೫-೨೩ ಮಾವಿನಮರ
ಚೂರ್ಣ ೫-೫೩ ಸುಣ್ಣ
ಚೆಚ್ಚರ ೯-೧೩೪ ಜಾಗ್ರತೆ
ಚೌರಿಗೆ ೫-೬೬ ನಾಲ್ಕು ಮೂಲೆಗಳುಳ್ಳ ಅಂಗಳ
ಜಂಬೀರ ೫-೨೩ ನಿಂಬೆಯ ಗಿಡ
ಜಂಬು ೧-೩೨ ನೇರಳೆ ಮರ
ಜವ ೮-೧೪ವ ವೇಗ
ಜವನಿಕೆ ೫-೧೪೭ ವ ಪರದೆ
ಜವಾದಿ ೫-೫೦ ಒಂದು ಬಗೆಯ ಸುಗಂಧ
ಜವೋಢ ೫-೯೬ ವೇಗವಾಗಿ
ಜಾಂಬೂನದ ೧-೩೨ ವ ಚಿನ್ನ
ಜಾಲಿಕ ೮-೧೦ ಬೆಸ್ತ
ಜೂಳಿ ೬-೯೭ ವ ಕಮಂಡಲು, ಗಿಂಡಿ ಮುಂತಾದುವುಗಳ ಬಾಯಿ
ಜೇವೊಡೆ ೮-೯೬ ಬಿಲ್ಲಿನ ಹೆದೆಯನ್ನೆಳೆದು ಧ್ವನಿಮಾಡು
ಜೋಹ ೫-೧೪೭ವ ಕಪಟ ವೇಷ
ಝಲ್ಲಿ ೫-೧೪೭ವ ಕುಚ್ಚು
ಝಷಕೇತ ೫-೨೪ ಮನ್ಮಥ
ಟೌಳಿ ೫ ೧೪೭ ವ ಶಿರಸ್ತ್ರಾಣ
ಡಾಕಿನಿ ೫-೧೫೬ ಪಿಶಾಚಿ
ಡಾಮರ ೮-೨೯೩ ಬರಗಾಲ
ಡೆಂಡಣಿಸು ೮-೧೫೯ ಕಂಪಿಸು
ಡಾಡೆ ೫-೧೪೭ ವ ಒಂದು ಬಗೆಯ ಚರ್ಮವಾದ್ಯ
ತಮಂಧ ೫-೧೦೭ ಕತ್ತಲೆ
ತಮುತ್ತು ೮ ೧೭೩ ತಮ್ಮ ತಮ್ಮ
ತರ ೨-೧೩ ಯೋಗ್ಯವಾದುದು
ತರಕ್ಷು ೫-೧೦೭ ಹುಲಿ
ತಱುಬು ೩-೨೨ ಅಡ್ಡಗಟ್ಟು
ತಸ್ಕರಿಸು ೨-೧೬ ಕಳ್ಳತನಮಾಡು
ತಾರ ೨-೧೦ ವ ಸ್ವರಭೇದಗಳಲ್ಲಿ ಒಂದು
ತಿಣ್ಣ ೯-೬ ವ ಕಷ್ಟ
ತಿಲ ೫-೫೪ ವ ಎಳ್ಳು
ತಿವಿವಿಟ್ಟ ೭-೬೫ ವ ಇರಿಯುವ ಈಟಿ
ತಿಸುಳಿ ೮-೧೦ ಶಿವ
ತುಱುಂಬು ೭-೨೨ ಹೂವನ್ನು ಮುಡಿ
ತುಱುಗು ೨-೧೯ ಒತ್ತೊತ್ತಾಗಿರು
ತೂಪಿಱು ೯-೬೫ ದೃಷ್ಟಿದೋಷವನ್ನು ಪರಿಹರಿಸಲು ಬಾಯಿ ಮುಂತಾದುವನ್ನು ಗಾಳಿಗೆ ಊದಿ ಮಂತ್ರ ಹಾಕು
ತೂರ್ಯ ೫-೫೭ ತುತ್ತೂರಿ
ತೂಳ ೩-೭ ಸ್ಥೂಲ
ತೂಳಿಸು ೩-೨೨ ಹಿಮ್ಮೆಟ್ಟಿಸು
ತೆಕ್ಕಾಡು ೨-೨೫ ತೇಲು
ತೋಮರ ೫-೧೫೧ ಒಂದು ಬಗೆಯ ಆಯುಧ
ಥಟ್ಟು ೩-೬ವ ಸೈನ್ಯ
ದಪ್ಪಗ ೫-೩೮ ಮನ್ಮಥ
ದಮುನ ೮-೯೪ ಅಗ್ನಿ
ದಳ ೨-೨೪ ಸೈನ್ಯ
ದಳಿದುಳಿ ೮-೧೪ ವ ಕೊಳ್ಳೆ ಹೊಡೆಯುವುದು
ದಾಡಿಮ ೮-೧೯ ದಾಳಿಂಬೆ
ದಾಡೆ ೪-೪೭ ಕೋರೆಹಲ್ಲು
ದಿಕ್ಕುಂಭಿ ೨-೨೪ ಎಂಟು ದಿಕ್ಕುಗಳಲ್ಲಿಯೂ ಭೂಮಿಯನ್ನು ಹೊತ್ತಿರುವ ಆನೆ
ದಿಡ್ಡಿ ೮-೨೫೪ ಕಿಂಡಿ, ಸಣ್ಣಬಾಗಿಲು
ದಿಮ್ಮಿದ ೫-೯೬ ಶ್ರೇಷ್ಠ ವ್ಯಕ್ತಿ, ಉಪಾಧ್ಯಾಯ
ದೀಧಿತಿ ೧-೩೮ ಬೆಳಕು

ದೀಹ ೬–೬೪ ವ–ಬೇಟೆಯಲ್ಲಿ ಪ್ರಾಣಿಗಳನ್ನು ಹಿಡಿಯಲು ಬಳಸುವ ಸಾಕು ಪ್ರಾಣಿ
ದುಗ್ಧ ೪–೫ ಹಾಲು
ದೂದು ೮–೯ ವ ದೂತ
ದೂವಟ ೫–೪೭ ದುಪ್ಪಟಿ, ಬಟ್ಟೆ
ದೇವಾಂಗ ೫–೪೭ ಒಂದು ಜಾತಿಯ ಬಟ್ಟೆ
ದೇವಾಯತನ ೬–೫೧ವ ದೇವಸ್ಥಾನ
ದೋರ್ದರ್ಪ ೪–೩೬ ಭುಜಬಲ
ದೌವಾರಿಕ ೨–೭ವ ದ್ವಾರಪಾಲಕ
ದ್ರುಘಣ ೧–೩೨ ವ ಬ್ರಹ್ಮ
ಧುರ ೨–೧೬ ಯುದ್ಧ
ನಜು ೫–೫೨ ಸುವಾಸನೆ
ನವಗರ ೫–೧೨ ನವಗ್ರಹ
ನಾರಾಚ ೮–೧೦೧ ಬಾಣ
ನಾರಿ ೮–೧೫೮ ಬಿಲ್ಲಿನ ಹೆದೆ
ನಾಳಿಕೇರ ೫–೨೮ ತೆಂಗಿನಮರ
ನಿಚ್ಚಟ ೩–೧೪ ವ ಕಪಟವಿಲ್ಲದ
ನಿಬ್ಬಣ ೮–೧೮೦ವ ದಿಬ್ಬಣ
ನಿರರ‍್ಋತಿ ೮–೧೦ ನೈರುತ್ಯ
ನಿರುತಿ ೨–೫ ನೈರುತ್ಯ ದಿಕ್ಕಿನ ಒಡೆಯ
ಸುಗ್ಗು ೮–೨೬೮ವ ಚೂರು ಚೂರು
ನೆಗಳು ೨–೫ ಮೊಸಳೆ
ನೆರಕೆ ೬–೨೫ ತಡಿಕೆ
ನೆಲಗಟ್ಟು ೨–೯ವ ಸಮಮಾಡಿದ ನೆಲ
ನೇಜಯ ೮–೧೪೪ ಭರ್ಜಿ
ನೇಣು ೧೦–೨೧ ಹಗ್ಗ
ನೊಜುಜು ೮–೨೭೨ ಸಣ್ಣ ಕಲ್ಲು
ಪಂಚಾಸ್ಯ ೮–೯೮ ಸಿಂಹ
ಪಟ್ಟಾವಳಿ ೫–೪೭ ರೇಷ್ಮೆ ಬಟ್ಟೆ
ಪತ್ತನ ೧–೨೯ ಪಟ್ಟಣ
ಪಥಿಕ ೫–೧೩ವ ಪ್ರಯಾಣಿಕ
ಪನಸ ೫–೨೩ ಹಲಸು
ಪರಪುಟ್ಟ ೫–೭೪ ಕೋಗಿಲೆ
ಪರಭೃತ ೭–೬೭ ಕೋಗಿಲೆ
ಪರುಸ ೧–೩೧ ಚಿನ್ನ
ಪರಿಯಿಸು ೨–೯ಪ ಬೆಳಕುಹರಿಸು
ಪಸರ ೫–೪೭ ಅಂಗಡಿ
ಪಳಂಚು ೩–೧೭ವ ರಭಸದಿಂದ ತಾಗು
ಪಾರಾವಾರ ೧–೨ ಸಮುದ್ರ
ಪಾರಿಪ ೫–೩೧ ಪಾರಿವಾಳ
ಪಾವಕ ೮–೩೭ ಅಗ್ನಿ
ಪಾಸಟಿ ೬–೧೦ ಹೋಲಿಕೆ
ಪಿಶಿತ ೫–೬೨ ಮಾಂಸ
ಪಿಸುಣ ೩–೫೯ ಚಾಡಿಕೋರ
ಪೀಯೂಷ ೧–೨ ಹಾಲು
ಪುಂಡ್ರೇಕ್ಷು ೫–೩೨ ಕಬ್ಬು
ಪುಂಸವನ ೭–೩೬ ಗರ್ಭಿಣಿಸ್ತ್ರೀಗೆ ಮಾಡುವ ಹದಿನಾರು ಸಂಸ್ಕಾರಗಳಲ್ಲಿ ಒಂದು
ಪುಚ್ಛ ೭–೮೫ವ ಬಾಲ
ಪುಣುಂಬು ೬–೬೦ವ ಬಾಣ
ಪುಣುಗು ೫–೫೦ ಒಂದು ಬಗೆಯ ಸುಗಂಧ
ಪುದಿ ೪–೯ ಬಾಗಿಲಿನ ಪಕ್ಕ
ಪೆರ್ಜೊಡರ್ ೧–೪೦ ದೊಡ್ಡದೀಪ
ಪೊಣರ್ವಕ್ಕಿ ೬–೬೫ ಚಕ್ರವಾಕ
ಪೌಜು ೩–೨೧ವ ಸೈನ್ಯ
ಪೌಲೋಮಿ ೩–೩೨ ಇಂದ್ರನ ಪತ್ನಿ
ಪ್ರಪಾ ೫–೧೪ ಅರವಟ್ಟಿಗೆ
ಪ್ರವರ ೫–೫೬ ವಂಶಾವಳಿ ಹೇಳುವುದು
ಪ್ರಸವ ೭–೨೨ ಹೂವು
ಪ್ರಸಾದನ ೬–೬೦ವ ಬಹುಮಾನ
ಪ್ರಿಯಂಗು ೬–೩೯ ಒಂದು ಜಾತಿಯ ಮರ
ಫಣ ೧–೩೮ ಹಾವಿನ ಹೆಡೆ
ಫೇನ ೧–೩೬ ನೊರೆ
ಬಂಡುಗೆ ೬–೨೬ವ ಒಂದು ಜಾತಿಯ ಹೂವು
ಬಂಬಲ್ ೨–೯ವ ಗುಂಪು
ಬದ್ದರ ೯–೧೪೧ ಆನೆ
ಬನ್ನ ೨–೨೯ ತೊಂದರೆ
ಬಬ್ಬೂರ್ರದ್ರುಮ ೧೧–೨೩ವ ಜಾಲಿಮರ
ಬರ್ಹ ೧–೩೨ವ ಬೆಂಕಿ
ಬಾಂಬೊಟ್ಟೆ ೯–೧೭೧ ದೇವಗಂಗೆ
ಬಾಣಸಿಗ ೮–೧೦ ಅಡುಗೆ ಮಾಡುವವನು
ಬಾವನ್ನ ೫–೬೭ ಶ್ರೀಗಂಧ
ಬಾಹತ್ತರ ೬–೧೮ ಎಪ್ಪತ್ತೆರಡು
ಬಾಹುಪೂರ ೬–೪೮ ವ ತೋಳುಬಂದಿ
ಬಿಜ್ಜಣ ೩–೨೩ವ ಬೀಸಣಿಗೆ
ಬಿಡೌಜ ೯–೧೭೭ವ ಇಂದ್ರ
ಬಿನುಗು ೩–೨೧ ನೀಚ
ಬಿಲೋಕ್ತ ೧–೩೭ ಸುಪ್ರತೀಕ (?)
ಬೀರ್ವಗ್ಗ ೭–೮೫ವ. ಬೀರುವ ಹಗ್ಗ
ಬುದ್ಬುದ ೪–೫ ಗುಳ್ಳೆ

ಶ್ಯಾಲಕ ೪-೩ ಭಾವಮೈದುನ
ಶ್ರುತಿ ೨-೨೯ ವೇದ
ಷೋಡಶ ೯-೧೭೮ ಹದಿನಾರು
ಸತ್ತಿಗೆ ೩-೨೩ವ ಕೊಡೆ
ಸಬಳ ೫-೧೪೭ವ ಈಟಿ
ಸಮಿಧಾ ೫-೫೪ವ ಸೌದೆ
ಸರ ೮-೧೦೭ ಕೊಳ
ಸಱಿ ೫-೧೩೦ ಕಲ್ಲು
ಸವಡಿ ೯-೬ವ ಜೋಡಿ
ಸಸಿನೆ ೨-೯ವ ಸರಿಪಡಿಸು
ಸಾಂಗತ್ಯ ೫-೧೦೯ ಹೊಂದಿಕೆ
ಸಾಯಕ ೮-೯೦ ಬಾಣ
ಸಾಲಿ ೫-೪೭ ಸೀರೆ
ಸಿಂಗ ೫-೧೪೭ವ ತುದಿ
ಸಿಂಜಿನಿ ೫-೨೪ ಬಿಲ್ಲಿನ ಹೆದೆ
ಸಿತಕ ಭಾಂಡ ೭-೪೭ವ ಮಣ್ಣನಕೊಡ
ಸಿಱುಂಬು ೭-೮೫ವ ಎರಚು
ಸೀಕರ ೪-೫ ತುಂತುರು ಹನಿ
ಸೀಂತುರು ೭-೮೫ ಕೋಪ
ಸುಮ್ಮಾನ ೪-೩೬ವ ಸಂತೋಷ
ಸುರಪ ೨-೫ ಇಂದ್ರ
ಸುರಭಿ ೩-೪ ದೇವಲೋಕದ ಹಸು

ಸುಸಿಲು ೬-೭೭ ಸಂಭೋಗ
ಸೂಠಿ ೩-೧೮ ವೇಗ
ಸೂಪ ೭-೬೫ ಸಾರು, ತೊವ್ವೆ ಮುಂತಾದ ವ್ಯಂಜನ ಪದಾರ್ಥ
ಸೂಸಲು ೫-೬೨ ಎಳ್ಳು, ಕಡಲೆ ಮುಂತಾದುವುಗಳನ್ನು ಸೇರಿಸಿ ಮಾಡಿದ ತಿಂಡಿ
ಸೆಲ್ಲೆಹ ೫-೧೫೧ ಒಂದು ಬಗೆಯ ಆಯುಧ
ಸೋರ್ಮುಡಿ ೬-೬೩ ಸಡಿಲವಾಗಿ ಕಟ್ಟಿದ ತುರುಬು
ಸೋಹಿ ೫-೬೫ವ ಬೇಟೆಯಲ್ಲಿ ಪ್ರಾಣಿಗಳನ್ನು ಹಿಡಿಯಲು ಬಳಸುವ ಪ್ರಾಣಿ
ಹರಡೆ ೭-೬೭ ಒಂದು ಜಾತಿಯ ನೀರುಹಕ್ಕಿ
ಹರಿಗೆ ೫-೧೪೭ವ ಗುರಾಣಿ
ಹರ್ಮ್ಯ ೫-೪೫ ಭವನ
ಹಸಾದ ೧-೨೪ವ ಅನುಗ್ರಹ
ಹಳಚು ೩-೧೯ ಎದುರಿಸು
ಹಾವುಮೆಕ್ಕೆ ೬-೬೪ವ ಒಂದುಜಾತಿಯ ಗಿಡ
ಹಾಸ ೭-೬೫ವ ಕತ್ತಿಗೆ ಕಟ್ಟಿದ ಹಗ್ಗ
ಹಿಮ ೫-೫೦ ಕರ್ಪೂರ
ಹಿಱಿ ೪-೨೭ ಹಿಸುಕು
ಹುಯ್ಯಲು ೩-೫ ಗದ್ದಲ
ಹೆಕ್ಕಳಿಸು ೯-೧೩೭ ಹೆಚ್ಚಾಗು





From the collection of
Prof. S. Settar

ಕನ್ನಡ ಅಧ್ಯಯನ ಸಂಸ್ಥೆ

ಪ್ರಾಚ್ಯಕಾವ್ಯ ಮಾಲೆಯ ಪ್ರಕಟಣೆಗಳು

೧. ಪದಾರ್ಥಸಾರ (ಭಾಗ ೧)
೨. ದ್ರೋಣಪರ್ವ
೩. ಕರ್ಣಪರ್ವ
೪. ಸೂಪಶಾಸ್ತ್ರ
೫. ಸೊಬಗಿನ ಸೋನೆ
೬. ಬಸವರಾಜ ಚಾರಿತ್ರ (ಸಿಂಗಿರಾಜ ಪುರಾಣ)
೭. ಕೋಲಶಾಂತಯ್ಯ ಮತ್ತು ಮಧುವಯ್ಯಗಳ ವಚನಗಳು
೮. ಸನತ್ಕುಮಾರ ಚರಿತೆ
೯. ಶಲ್ಯಗದಾಪರ್ವಗಳು
೧೦. ಅರಿವಿನ ಮಾರಿತಂದೆಗಳ ವಚನಗಳು
೧೧. ನಳಚಂಪು
೧೨. ಶಿವಲೆಂಕ ಮಂಚಣ್ಣ ಮತ್ತು ಡಕ್ಕೆಯ ಬೊಮ್ಮಣ್ಣಗಳ ವಚನಗಳು
೧೩. ಸಭಾಪರ್ವ
೧೪. ವಿಷ್ಣು ಪುರಾಣ
೧೫. ಬಿಬ್ಬಿಬಾಚಯ್ಯ ಮತ್ತು ಮೆರೆ ಮಿಂಡಯ್ಯಗಳ ವಚನಗಳು
೧೬. ಕಂಠೀರವ ನರಸರಾಜ ವಿಜಯ
೧೭. ಸೌಂದರ್ಯಲಹರಿ
೧೮. ಆದಿಪರ್ವ
೧೯. ರಸರತ್ನಾಕರ
೨೦. ಕರಸ್ಥಲ ನಾಗಲಿಂಗನ ಚರಿತ್ರೆ
೨೧. ಅನಂತನಾಥ ಪುರಾಣ
೨೨. ಮದನಮೋಹಿನಿ ಕಥೆ
೨೩. ಸೂಕ್ತಿಸುಧಾರ್ಣವಂ
೨೪. ದೀಕ್ಷಾಬೋಧೆ
೨೫. ಗುರುಭಕ್ತ ಚಾರಿತ್ರ
೨೬. ಪದಾರ್ಥಸಾರ (ಭಾಗ ೨)
೨೭. ಹರಿಹರನ ಐದು ರಗಳೆಗಳು
೨೮. ಅಬ್ಬಲೂರು ಚರಿತೆ
೨೯. ಕುಮಾರ ಕಾಳಗ
೩೦. ಕೆಳದಿನೃಪ ವಿಜಯಂ
೩೧. ಉದ್ಯೋಗಸಾರ
೩೨. ಗುರುಬೋಧಾಮೃತಂ
೩೩. ವರ್ಧಮಾನ ಪುರಾಣಂ
೩೪. ಹರಿವಂಶಾಭ್ಯುದಯಂ
೩೫. ವಿರಾಟಪರ್ವ
೩೬. ಜನವಶ್ಯ
೩೭. ದ್ವಾದಶಾನುಪ್ರೇಕ್ಷೆ
೩೮. ಹಾಲಾಸ್ಯ ಪುರಾಣಂ
೩೯. ಧರ್ಮನಾಥ ಪುರಾಣಂ
೪೦. ಸಾನಂದ ಚರಿತೆ
೪೧. ಜೀವಂಧರ ಚರಿತ್ರೆ
೪೨. ಯೋಗರತ್ನಾಕರ
೪೩. ಸಾನಂದ ಗಣೇಶ ಸಾಂಗತ್ಯ
೪೪. ಕಲ್ಯಾಣಕೀರ್ತಿಯ ಕೃತಿಗಳು
೪೫. ಪುರಾತನರ ಚರಿತೆ
೪೬. ಅರಣ್ಯಪರ್ವ
೪೭. ಬಸವೇಶ್ವರ ಪುರಾಣದ ಕಥಾಸಾಗರ
೪೮. ಜಗನ್ನಾಥ ವಿಜಯಂ
೪೯. ರುಕ್ಮಾಂಗದ ಚರಿತ್ರೆ
೫೦. ಜಾತಕ ತಿಲಕಂ
೫೧. ಶಬ್ದಮಣಿದರ್ಪಣಂ
೫೨. ಪುಣ್ಯಾಸ್ರವ